ಸಮಗ್ರ ಗದ್ಯ – 1

# ಲಲಿತ ಪ್ರಬಂಧ ಸಂಪುಟ

ವಿ. ಸೀ.

ವಿ. ಸೀ. ಸಂಪದ (ವಿ.ಸೀ. ಸಂಸ್ಮರಣ ವೇದಿಕೆ)
ರಾಜೀವನಗರ, ಬನಶಂಕರಿ 3ನೇ ಸ್ಟೇಜ್, ಬೆಂಗಳೂರು–560 085

SAMAGRA GADYA-1 : Lalitha Prabandha Samputa — Prose Work by V.Si (V. Sitaramiah, 1899–1983) Published by V. Si. Sampada, (V. Si. Samsmarana Vedike), No. 25, 'C' Cross, Rajivnagar, BSK III Stage, IV Phase, Bangalore–560 085.

Pp. 315 + xxxx

Copy Right Reserved

First Impression : 1992

Second Impression : 2007

**Price Rs. 150/–**

ಬೆಲೆ : ನೂರೈವತ್ತು ರೂಪಾಯಿಗಳು

**ವಿ. ಸೀ. ಸಂಪದ** (ವಿ. ಸೀ. ಸಂಸ್ಮರಣ ವೇದಿಕೆ), ನಂ. 25, 'ವಸುಂಧರಾ', 'ಸಿ' ಕ್ರಾಸ್, ರಾಜೀವನಗರ, ಬನಶಂಕರಿ 3ನೇ ಸ್ಟೇಜ್, 4ನೇ ಫೇಸ್, ಬೆಂಗಳೂರು–560 085

ಅಧ್ಯಕ್ಷರು : ಪ್ರೊ. ಎಂ. ಎಚ್. ಕೃಷ್ಣಯ್ಯ
ಉಪಾಧ್ಯಕ್ಷರು : ಪ್ರೊ. ಕೆ. ಎಸ್. ಕಲ್ಲಾಪುರ (ಧಾರವಾಡ)
ಕಾರ್ಯದರ್ಶಿ : ಪ್ರೊ. ಎಂ. ವಿ. ಸತ್ಯನಾರಾಯಣ
ಕೋಶಾಧಿಕಾರಿ : ಕೆ. ಬಿ. ಷಣ್ಮುಖಪ್ಪ
ಸದಸ್ಯರು : ಡಾ. ಮತ್ತೂರು ಕೃಷ್ಣಮೂರ್ತಿ
ವಿ. ಎಸ್. ಕೃಷ್ಣಮೂರ್ತಿ
ಎಚ್. ವಿ. ವೆಂಕಟಸುಬ್ಬಯ್ಯ
ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ
ಪ್ರೊ. ವಿಶ್ವನಾಥ ಶರ್ಮ (ವಾರಾಣಸಿ)
ಪ್ರೊ. ಎಮ್. ರಾಮಚಂದ್ರ (ಕಾರ್ಕಳ)
ಡಾ. ಎನ್. ಎಸ್. ತಾರಾನಾಥ (ಮೈಸೂರು)
ಎಸ್. ಸತ್ಯನಾರಾಯಣ
ಶ್ರೀಮತಿ ಮೀನಾ ವಾಂಗೀಕರ್ (ಪುಣೆ)
ಶ್ರೀಮತಿ ಅಂದನೂರು ಶೋಭ
ಮುನಿಧರ್ಮಯ್ಯ
ಎಂ. ವಿ. ವಿ. ಮೂರ್ತಿ
ವೈ. ಎಂ. ರಾಜು

ಮುದ್ರಣ :
ನೇತ್ರಾ ಪ್ರಿಂಟರ್ಸ್
ಸಮೀರಪುರಂ, ಬೆಂಗಳೂರು–೫೬೦ ೦೧೯

# ಪ್ರಸ್ತಾವನೆ

ಕನ್ನಡದ ನವೋದಯದ ಸಾಹಿತಿಗಳಲ್ಲಿ ವಿ.ಸೀ. ಅವರದು ದೊಡ್ಡ ಹೆಸರು. ಅವರ ಕಾವ್ಯ, ಗದ್ಯಕೃತಿಗಳು, ವಿಮರ್ಶೆ ಮತ್ತು ಅವರ ನಿರರ್ಗಳವಾದ ವಾಗ್ಮಿತೆ ಸಮಕಾಲೀನ ಜೀವನದಲ್ಲಿ ಹೆಸರು ಪಡೆದಿದ್ದವು. ನಾನಿನ್ನೂ ಹಾಯ್‌ಸ್ಕೂಲ ವಿದ್ಯಾರ್ಥಿಯಾಗಿದ್ದಾಗ ಅವರು ಗದುಗಿಗೆ ಒಮ್ಮೆ ನಾಡ ಹಬ್ಬದ ಅತಿಥಿಗಳಾಗಿ ಬಂದಿದ್ದರು. ಆಗ ಅವರು ವಿನಾಯಕ ಕೃಷ್ಣ ಗೋಕಾಕರ 'ಸಮುದ್ರ ಗೀತಗಳು' ಸಂಗ್ರಹವನ್ನು ಕುರಿತು ಮಾತಾಡಿದ್ದರು. ಅವರ ಮಾತಿನ ಆವೇಶ ನನಗಿನ್ನೂ ನೆನಪಿನಲ್ಲಿ ಉಳಿದಿದೆ. ಅವರು ಮಾತಾಡಿದ್ದು ವಿಮರ್ಶೆಯಾಗಿರಲಿಲ್ಲ, ಅಥವಾ ವಿಮರ್ಶೆಯ ನಿರೀಕ್ಷೆ ಶ್ರೋತೃಗಳಿಗೂ ಇರಲಿಲ್ಲ. ಅವರೆಲ್ಲ ವಿನಾಯಕರ ಕಾವ್ಯದ ಮಂದ್ರಘೋಷದಲ್ಲಿ, ವಿ.ಸೀ. ಅವರ ಮಾತಿನ ಪ್ರವಾಹದಲ್ಲಿ ಮುಳುಗಿ ಹೋಗಿದ್ದರು. ಅಲ್ಲಿಂದಾಚೆಗೆ ವಿ.ಸೀ. ಅವರ ಹಲವಾರು ಭಾಷಣಗಳನ್ನು ನಾನು ಕೇಳಿದ್ದೇನೆ. ೧೯೫೦ರಲ್ಲಿ ಧಾರವಾಡದ ಕರ್ನಾಟಕ ಕಾಲೇಜಿನ ಕರ್ನಾಟಕ ಸಂಘದ ಪರವಾಗಿ ಅವರು ರನ್ನನನ್ನು ಕುರಿತು ಇಂಗ್ಲೀಷಿನಲ್ಲಿ ಅಮೋಘವಾಗಿ ಮಾತಾಡಿದರು. ಇನ್ನೂ ಎಷ್ಟೋ ಪ್ರಸಂಗಗಳು ನೆನಪಿಗೆ ಬರುತ್ತವೆ. ತಾತ್ಪರ್ಯವಿಷ್ಟೇ, ನಮಗೆಲ್ಲ ಸಾಹಿತ್ಯದ ಹುಚ್ಚು ಹಿಡಿಸಿದ ಲೇಖಕರಲ್ಲಿ ವಿ.ಸೀ. ಅವರೂ ಒಬ್ಬರು.

ಮುಂದೆ, ನಾನು 'ನಡೆದು ಬಂದ ದಾರಿ'ಯ ಲೇಖನಗಳನ್ನು ಪ್ರಕಟಿಸಿದ ಮೇಲೆ, ವಿ.ಸೀ. ಅವರೊಂದಿಗೆ ಅನೇಕ ಸಲ ಸಂಪರ್ಕ ಕೂಡಿ ಬಂದಿತು. ನನ್ನ ವಿಮರ್ಶೆಯಿಂದ ಅವರಿಗೆ ನೋವಾಗಿತ್ತು. ನಾನು ಅವರ ಬಗ್ಗೆ ಬರೆದಿದ್ದ ವಿಮರ್ಶೆಯಿಂದ ನೋವಾಗಿರಲಿಲ್ಲ. ನನ್ನ ವಿಮರ್ಶೆಯ ಒಟ್ಟು ಧಾಟಿ, ಧೋರಣೆಗಳಿಂದ ಅವರು ನೊಂದುಕೊಂಡಿದ್ದರು. ತಾತ್ವಿಕವಾಗಿ ವಿಮರ್ಶೆ ನಿಷ್ಪಕ್ಷಪಾತವಾಗಿರಬೇಕೆಂಬುದು ಅವರಿಗೂ ಒಪ್ಪಿಗೆಯೇ. ಆದರೆ ಅವರ ಕಣ್ಣೆದುರಿಗೆ ಸಾಹಿತ್ಯವಿರಲಿಲ್ಲ, ಲೇಖಕರಿದ್ದರು. ಪ್ರತಿಯೊಬ್ಬ ಲೇಖಕನ ಸ್ನೇಹದ ಸಂಬಂಧವಿತ್ತು. ಮೈಸೂರು ಬೆಂಗಳೂರುಗಳಲ್ಲಿ, ಉಡುಪಿ ಮಂಗಳೂರುಗಳಲ್ಲಿ, ಧಾರವಾಡದಲ್ಲಿ ಹೀಗೆ ಕರ್ನಾಟಕದಲ್ಲಿ 'ಗೆಳೆಯರ ಗುಂಪು'ಗಳು ಹುಟ್ಟಿಕೊಂಡು ಹೊಸ ಸಾಹಿತ್ಯವನ್ನು ಒಂದು ಹೊಸ ಹುರುಪಿನಲ್ಲಿ ಸೃಷ್ಟಿಸುತ್ತಿದ್ದವು. ಅದು ಒಂದು ರೀತಿಯ ಬೆಳುದಿಂಗಳಿನಂಥ ಹದವಾದ ವಾತಾವರಣ. ಈ ವಾತಾವರಣದಲ್ಲಿ ಅವರೆಲ್ಲ ಎಷ್ಟು ಮಗ್ನರಾಗಿದ್ದರೆಂದರೆ ಮುಂದೆ ಬರಬಹುದಾದ ಬಿಸಿಲಿನ ಅರಿವು ಅವರನ್ನು ಕಾಡುತ್ತಿರಲಿಲ್ಲ. ನನಗೂ ವಿ.ಸೀ. ಅವರಿಗೂ ಸುಮಾರು

ಮೂವತ್ತು ವರ್ಷಗಳ ಅಂತರವಿತ್ತು. ಆದ್ದರಿಂದ ನಾನು ಅವರ ವಾತಾವರಣದ ಹೊರಗಿನವನಾಗಿ ಕಂಡದ್ದರಲ್ಲಿ ಆಶ್ಚರ್ಯವೇನಿಲ್ಲ. ನಾನು ಅವರನ್ನು ಅವರ ಮನೆಗೆ ಹೋಗಿ ಕಂಡಾಗ ಬಹಳ ಭಾವೋದ್ವೇಗದಲ್ಲಿ ಮಾತಾಡಿದರು. 'ಎಷ್ಟು ಜೋರಾಗಿ, ಯಾರ ಹಂಗೂ ಇಲ್ಲದವರಂತೆ ಬರೆದಿದ್ದೀರಪ್ಪ! ನಿಮಗಿಂತ ಹಿರಿಯರು ನಾವು. ನಾವು ಮಾಡಿರಬಹುದಾದ ಮತ್ತು ಮಾಡದಿರಬಹುದಾದ ತಪ್ಪುಗಳನ್ನೆಲ್ಲ ನಿಮ್ಮ ಹತ್ತರ ಹೇಳಿಕೊಳ್ಳಬೇಕೇನಪ್ಪ! ನೀವು ಕೊಡುವ ತರ್ಪಣ ಇದೇ ಎಂದು ಕಾಣುತ್ತದೆ.' ಆದರೆ ಎಷ್ಟು ನೋವಾಗಿದ್ದರೂ ನನ್ನ ಬಗ್ಗೆ ಅವರಿಗೆ ಮೆಚ್ಚಿಗೆ ಇತ್ತೆಂಬುದು ಸ್ಪಷ್ಟವಾಗಿತ್ತು. ಅವರ ಸಂವೇದನೆಗಳು ಸೂಕ್ಷ್ಮವಾಗಿದ್ದವು, ಆದರೆ ಅವರ ಧೀಮಂತಿಕೆಯೂ ಅಷ್ಟೇ ಪ್ರಖರವಾಗಿತ್ತು. ಬೇರೆ ಕೆಲ ಸಾಹಿತಿಗಳಂತೆ ಅವರು ನನ್ನನ್ನು ಉಪೇಕ್ಷೆಯಿಂದ ನೋಡಲಿಲ್ಲ, ಅಂಥ ಸಣ್ಣತನವೂ ಅವರಿಗೆ ಇರಲಿಲ್ಲ. ಪ್ರಾರಂಭಕ್ಕೆ ನನ್ನೊಡನೆ ಜಗಳಾಡಿದರೂ ಕ್ರಮೇಣ ನನ್ನ ಸರಿಸಕ್ಕೆ ನಡೆದುಬಂದರು. ಅವರಿಗೆ ಆ ಶಕ್ತಿಯಿತ್ತು. ಮುಂದೆಲ್ಲ ಅವರೊಡನೆ ಮಾತಾಡಿದಂತೆ ಅವರಿಗೆ ಆಸ್ಥೆಯಿದ್ದ ವಿಷಯಗಳ ವ್ಯಾಪ್ತಿ ಎಷ್ಟು ದೊಡ್ಡದಾಗಿತ್ತೆಂದು ತಿಳಿದುಬಂತು. ನವೋದಯ ಕಾಲದ ಉತ್ಸಾಹದಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಉತ್ಕೃಷ್ಟವಾದದ್ದನ್ನು ಸೃಷ್ಟಿಸುವ, ಮೆಚ್ಚುವ ಮನಸ್ಸು ಅವರಿಗಿತ್ತು. ತಮ್ಮ ಮೊದಲಿನ ಕವನ ಸಂಗ್ರಹಗಳಲ್ಲಿ ಅವರು ದಿ। ವೆಂಕಟಪ್ಪನವರ ಕಲಾಕೃತಿಗಳನ್ನು ಅಚ್ಚು ಮಾಡಿಸಿದರು. ಪ್ರಕಾಶಕರಿಗೆ ಮುದ್ರಣದ ಶಾಸ್ತ್ರವನ್ನೇ ಉಪದೇಶ ಮಾಡುತ್ತ ತಮ್ಮ ಪುಸ್ತಕಗಳು ಚಲುವಾಗಿ ಮುದ್ರಣಗೊಳ್ಳುವಂತೆ ನೋಡಿಕೊಂಡರು.

ವಿ.ಸೀ. ಅವರಿಗೆ ಪಾಶ್ಚಾತ್ಯ ಸಾಹಿತ್ಯ ಮತ್ತು ಕಲೆಗಳ ಬಗ್ಗೆ ಅಪಾರವಾದ ಗೌರವವಿತ್ತು. ಕನ್ನಡದ ಪ್ರಾಚೀನ ಸಾಹಿತ್ಯದ ಬಗ್ಗೆ ಅವರಿಗಿದ್ದ ಗೌರವಕ್ಕೆ ಕಾರಣವೆಂದರೆ ಆ ಸಾಹಿತ್ಯದಲ್ಲಿ ಪಾಶ್ಚಾತ್ಯ ಅಭಿಜಾತ ಸಾಹಿತ್ಯದ ಅಂಶಗಳು ಕಾಣುತ್ತಿದ್ದವು. 'ಹಗಲು ಇರುಳು' ಸಂಕಲನಕ್ಕೆ ಅವರು ಬರೆದ ಮುನ್ನುಡಿಯಲ್ಲಿ ಈ ಮಾತುಗಳಿವೆ. 'ಯಾವ ಅಲಂಕಾರಗಳೂ ಇಲ್ಲದೆ, ಕವಿಸಮಯಗಳಿಗೆ ಅವಕಾಶವಿಲ್ಲದಂತೆ ನೇರವಾಗಿ ನುಡಿದು, ನುಡಿದದ್ದು ಇನ್ನೊಬ್ಬರಿಗೆ ಮಿಡಿತವುಂಟು ಮಾಡುವಂತೆ ಆಗಬಾರದೇ.... ನಮ್ಮ ಕಾಲದ ಸಾಹಿತ್ಯ ಹಾಗೆ ಬೆಳೆದರೆ ಮೇಲು ಅನ್ನಿಸಿತ್ತು. ನಿರಲಂಕಾರದ, ಹೆಚ್ಚು ಲಯತಾಂಡವವಿಲ್ಲದ, ದಿನಬಳಕೆಯ ಮಾತು ಪ್ರಪಂಚಗಳ ಸುಳಿವು ಹೆಚ್ಚಾಗಿರುವ, ದಿನಜೀವನದ ಭಾವಗಳನ್ನು ಹೊರಪಡಿಸೋಣವೆಂಬ ಮನಸ್ಸುಂಟಾಯ್ತು, ಕನ್ನಡಕ್ಕೆ ಆಗ ಎಲ್ಲರ ಮನಸ್ಸನ್ನೂ ಹರಿಸಿ ಒಲಿಸಬೇಕೆಂಬ ಅಗತ್ಯ ಹೆಚ್ಚಾಗಿತ್ತು. ತಮ್ಮ ಕಾವ್ಯವನ್ನು ಸಮರ್ಥಿಸಿಕೊಳ್ಳುವ ಈ ಮಾತುಗಳ ಹಿಂದೆ ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯದ ಪ್ರೇರಣೆ ಇದೆಯೆಂಬುದು ಅವರಿಗೆ ಗೊತ್ತಿತ್ತು. ಅದನ್ನು ಅವರೇ ಹತ್ತಾರು ಕಡೆ ಹೇಳಿದ್ದಾರೆ. ಪ್ರಾಚೀನ ಕಾವ್ಯ ಪದ್ಧತಿಯನ್ನು ನಿರಾಕರಿಸಿ ಹೊಸ ಬದಲಾವಣೆಯನ್ನು ಸ್ವಾಗತಿಸಿದ ಮನಸ್ಸೇ ಮುಂದಿನ ತಾರ್ಕಿಕ ಬದಲಾವಣೆಯನ್ನು ಕಂಡು ಕೋಪದಿಂದ ಕುದಿಯಿತು.

ವಿ.ಸೀ. ಅವರ ಮನಸ್ಸಿನಲ್ಲಿ ನಡೆದ ಸಂಘರ್ಷ ನವೋದಯ ಕಾಲದ ಸಾಹಿತ್ಯದ ಹಿಂದೆ ನಡೆದಿದ್ದ ಸಂಘರ್ಷವನ್ನು ಸರಿಯಾಗಿ ಪ್ರತಿನಿಧಿಸುತ್ತದೆ. ಬಿ.ಎಂ.ಶ್ರೀ. ಮೊದಲಾದ ಹಲವಾರು ವಿದ್ವಾಂಸರು ಪ್ರಾಚೀನ ಸಾಹಿತ್ಯವನ್ನು ಪ್ರಕಟಿಸಿ, ಸಂಪಾದಿಸುವ ಕೆಲಸ ಮಾಡಿದರು. ಪ್ರಾಚೀನ ಸಾಹಿತ್ಯದ ಪರಂಪರೆ ಒಂದು ಐತಿಹಾಸಿಕ ಸತ್ವವಾಗಿ ಒಡ ಮೂಡಿದ್ದು ನವೋದಯ ಕಾಲದಲ್ಲಿಯೇ. ಪಾಶ್ಚಾತ್ಯ ವಿದ್ವಾಂಸರು ಸಂಸ್ಕೃತ ಸಾಹಿತ್ಯವನ್ನು ಪ್ರಕಟಿಸಿ, ಸಂಪಾದಿಸಿದ ರೀತಿಯಲ್ಲಿಯೇ ಈ ಕೆಲಸ ನಡೆಯಿತು. ಮುಂದೆ ಬಹಳ ತಡವಾಗಿ, ಐ.ಬಿ.ಎಚ್. ಪ್ರಕಾಶನದ ಪರವಾಗಿ ವಿ.ಸೀ. ಅವರು 'ಕನ್ನಡ ಕವಿ ಕಾವ್ಯಮಾಲೆ'ಯನ್ನು ಸಂಪಾದಿಸಿದ್ದನ್ನು ಇಲ್ಲಿ ನೆನೆಯಬಹುದಾಗಿದೆ. ಈ ಕೆಲಸವೆಲ್ಲ ಒಂದು ಅಪ್ರತ್ಯಕ್ಷ ರೀತಿಯ ವಿಮರ್ಶೆಯೇ ಆಗಿದೆ. ಹಳೆಯ ಕಾವ್ಯಗಳಲ್ಲಿಯ ಅಲಂಕಾರಗಳ, ಕವಿಸಮಯಗಳ, ದೀರ್ಘ ವರ್ಣನೆಗಳ ನಿರ್ಮಾಲ್ಯವನ್ನು ತೆಗೆದು ಹಾಕಿ ಹೊಸ ರುಚಿಗೆ ಒಪ್ಪುವಂತೆ ನಿರೂಪಿಸಿದರೆ ಅದರಲ್ಲಿ ಅಗತ್ಯವಾದದ್ದು ಯಾವದು, ಅನಗತ್ಯವಾದದ್ದು ಯಾವದು ಎಂದು ಹೇಳಿದಂತಾಯಿತು. Shorter Shakespeare ಓದಿ ಪರೀಕ್ಷೆಯಲ್ಲಿ ಪ್ರಥಮಸ್ಥಾನ ಗಳಿಸಬಹುದು. ಆದರೆ ಅದು ಪಾಂಡಿತ್ಯವಾಗುವುದಿಲ್ಲ. ಹಳೆಯ ಕಾವ್ಯಕೃತಿಗಳು ಮರೆವಿಗೆ ಬೀಳಬಾರದೆಂದು 'ಸಂಗ್ರಹ'ಗಳನ್ನು ಪ್ರಕಟಿದ್ದೇನೋ ಆಯಿತು. ಅದರ ಜೊತೆಗೇ ಇದಿಷ್ಟೇ ಕಾವ್ಯದ 'ರಸಘಟ್ಟಿ', ಉಳಿದದ್ದೆಲ್ಲ ಗೊಳ್ಳು ಎಂದು ಹೇಳಿದಂತೆಯೂ ಆಯಿತು. ಅಂದರೆ ಪರಂಪರೆಯೊಂದಿಗೆ ನಮ್ಮ ಜಗಳವೆಲ್ಲ ಬಿಚ್ಚು ಮನಸ್ಸಿನದಲ್ಲ. ಹಳೆಯ ಕವಿಗಳು ಸಮಕಾಲೀನರಲ್ಲವೆಂದ ಮೇಲೆ ಜಗಳವಾಡಿಯೂ ಪ್ರಯೋಜನವಿಲ್ಲ.

ಆದರೆ ಸಮಕಾಲೀನರ ಜೊತೆಗೆ ಜಗಳವಾಡುವಂತಿರಲಿಲ್ಲ. ಲೇಖಕರೆಲ್ಲ ಒಂದು ಬಳಗಕ್ಕೆ ಸೇರಿದವರಾಗಿದ್ದರು. ಪರಸ್ಪರ ಸ್ನೇಹ ವಿಶ್ವಾಸಗಳ ತಳಹದಿಯ ಮೇಲೆ ಕಟ್ಟಿದ ಅವರ ಸಂಬಂಧಗಳು ಗಟ್ಟಿಮುಟ್ಟಾಗಿದ್ದವು. ಸಾಹಿತ್ಯ ಸೃಷ್ಟಿಗೆ ಅನುಕೂಲವಾದ ವಾತಾವರಣ ಯಾರಿಗೂ ಗೊತ್ತಿಲ್ಲದಂತೆಯೇ ನಿರ್ಮಾಣವಾಗಿತ್ತು. ಸಾಹಿತ್ಯದ ಮಟ್ಟಿಗೆ ಹೇಳುವದಾದರೆ ಕರ್ನಾಟಕದ ಏಕೀಕರಣ ಆಗಲೇ ಆಗಿ ಹೋಗಿತ್ತು. ಏಕೀಕರಣದ ಚಳವಳಿಯ ಮುಂಚೂಣಿಯಲ್ಲಿ ನಿಂತವರೆಲ್ಲ ಸಾಹಿತಿಗಳೇ ಎಂಬ ಮಾತು ಈಗ ಐತಿಹಾಸಿಕ ಸತ್ಯವಾಗಿದೆ. ಸಾಹಿತ್ಯ ಪರಿಷತ್ತು, ಧಾರವಾಡದ ವಿದ್ಯಾವರ್ಧಕ ಸಂಘದಂಥ ಸಂಸ್ಥೆಗಳು ಈ ಸಂಘಟನೆಗೆ ನೆರವಾದವು. ಈ ವಾತಾವರಣದ ಕಾರಣವಾಗಿಯೇ ಪರಸ್ಪರರ ಸಾಹಿತ್ಯ ವಿಮರ್ಶೆಗೆ ಅವಕಾಶವಿರಲಿಲ್ಲ. ಸಾಧ್ಯವಾದರೆ ಉತ್ತೇಜನವನ್ನು ನೀಡಿ ಇನ್ನಷ್ಟು ಸಾಹಿತ್ಯ ಸೃಷ್ಟಿಯಾಗುವಂತೆ ನೋಡಿಕೊಳ್ಳಬೇಕಾಗಿತ್ತು. ಆ ಕಾಲದ 'ಮುನ್ನುಡಿ'ಗಳನ್ನು ನೋಡಿದರೆ ಈ ಸಂಗತಿ ಇನ್ನಷ್ಟು ಸ್ಪಷ್ಟವಾಗುತ್ತದೆ.

ಮುಂದೆ ೧೯೬೦ರ ಸುಮಾರಿಗೆ ನವೋದಯ ಸಾಹಿತ್ಯವೇ ವಿಮರ್ಶೆಗೆ ಈಡಾಗುವ ಕಾಲ ಬಂದಿತು. ಆಗ ಸಾಹಿತ್ಯಿಕ ವಾತಾವರಣ ಒಮ್ಮೆಲೆ ಬದಲಾಯಿತು. ನವೋದಯ ಲೇಖಕರು ತಮ್ಮ ಮುಂದಿನ ತಲೆಮಾರಿನವರೊಂದಿಗೆ ಸಂಘರ್ಷದಲ್ಲಿ

ಬೀಳಬೇಕಾಯಿತು. ಕೆಲವರು ಸ್ಪಷ್ಟವಾಗಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು, ಇನ್ನು ಕೆಲವರು ಸುಮ್ಮನಿದ್ದರು. ಇಲ್ಲಿ ಈ ಸಂಘರ್ಷದ ವಿವರಗಳು ಮುಖ್ಯವಾಗಿಲ್ಲ. ಆದರೆ ನವೋದಯದ ಲೇಖಕರು ತಮ್ಮ ನಿಲುವನ್ನು ಬದಲಿಸಿಕೊಳ್ಳಬೇಕಾಯಿತು. ಇಂಥವರಲ್ಲಿ ವಿ.ಸೀ. ಅವರು ತಮ್ಮ ಅಸಮಾಧಾನವನ್ನು ಸ್ಪಷ್ಟವಾಗಿಯೇ ವ್ಯಕ್ತಪಡಿಸಿದರು. 'ನೆಳಲು ಬೆಳಕು' ಸಂಕಲನದ ಎರಡನೆಯ ಮುದ್ರಣಕ್ಕೆ ವಿ.ಸೀ.ಯವರು ಬರೆದಿರುವ ಮುನ್ನುಡಿಯಲ್ಲಿಯ ಈ ಭಾಗವನ್ನು ನೋಡಬೇಕು. ಯು. ಆರ್. ಅನಂತಮೂರ್ತಿಯವರ ವಿಮರ್ಶೆಗೆ ಇದು ಪ್ರತಿಕ್ರಿಯೆ.

> ನನ್ನಂಥವರಿಗೆ 'ಮಣ್ಣ' ಸಂಪರ್ಕವಿಲ್ಲದ್ದರಿಂದ ನಮ್ಮ ಕವಿತೆ ಸಪ್ಪೆ ಎನ್ನುತ್ತಾರೆ, —ಈ ಬೆಡಗಿನ ವಿದ್ವದ್ ವಿಮರ್ಶಕರು. ಇವರು ಮೆಚ್ಚುವ ಹಲವರಿಗೂ ಅದಿಲ್ಲ. ಅವರ ಬರವಣಿಗೆಯಲ್ಲಿಯೂ ವಿವೇಚನೆಯಲ್ಲಿಯೂ ಬರುವ ಮಾತುಗಳೇ ನಮ್ಮವಲ್ಲ; ನಮ್ಮ ಜನಕ್ಕೆ ಅರ್ಥವಾಗುವವಲ್ಲ. ಎಷ್ಟು ಬಗೆಯ ಪ್ರಶ್ನೆಗಳು ಇವರ ಜಟಿಲತೆಯಲ್ಲಿ! ಎಲ್ಲ ವಿಲಾಯಿತಿಯಿಂದ ಹೊರತಿಣಿಕಿ ತಂದ ಪರಕೀಯತೆಗಳು. ಅಲ್ಲಿಗೆ ಬಂದಿರುವ Alienation ಮುಂತಾದ ಅರ್ಥದ ಮಾತುಗಳನ್ನು ಮನಸ್ಸಿನಲ್ಲಿಯೇ ನುಂಗಿ ವಿಮರ್ಶೆಯ ಶಿಲ್ಪಗಳನ್ನೂ ಹಂದರಗಳನ್ನೂ ಕಟ್ಟಿ ಬೆಲೆಗಳನ್ನು ಹಾಯಿಸುತ್ತಿದ್ದಾರೆ. ಅಲ್ಲಿನ ಸ್ಥಿತಿ, ಗತಿ, ರೀತಿ ನಮ್ಮವಾಗಿದ್ದಿದ್ದರೆ ಆ ಮಾತು ಬೇರೆ. ಇಲ್ಲಿನ ಜೀವನ ಆ ತಲ್ಲಣಗಳನ್ನು ಕಾಣದು. ಇವರ ಬರವಣಿಗೆಗಳಲ್ಲಿಯೂ ಕಾಣದು.

ಈ ಮಾತುಗಳಲ್ಲಿ ಸತ್ಯವಿಲ್ಲವೆಂದು ಹೇಳುವಂತಿಲ್ಲ. ಆದರೆ ಹೊಸ ಲೇಖಕರ ಬಗ್ಗೆ ಇರುವ ಆರೋಪ ತಮ್ಮ ಬಗ್ಗೆಯೂ ಅಷ್ಟೇ ನಿಜ ಎಂದು ವಿ.ಸೀ.ಯವರಿಗೆ ಏಕೆ ಹೊಳೆಯಲಿಲ್ಲ? ಎಲಿಯಟ್, ಪೌಂಡ್, ಆಡೆನ್ ಇವರೆಲ್ಲ ಪರಕೀಯರಿದ್ದಂತೆ ವರ್ಡ್ಸ್‌ವರ್ತ್, ಶೆಲಿ, ಕೀಟ್ಸ ಪರಕೀಯರಲ್ಲವೇ? ಈ ಆಟ ಪ್ರಾರಂಭವಾದದ್ದು ಹೊಸ ಕವಿತೆಯ ಆದ್ಯಗುರುಗಳಾದ ಬಿ.ಎಂ.ಶ್ರೀ.ಯವರಿಂದಲೇ ಅಲ್ಲವೇ? ಸಮಾಧಾನದ ಉತ್ತರ ಹೇಳುವುದು ಬಿಗಿಯಾದ ಮಾತಾಗಬಹುದು. ಅದಕ್ಕಿಂತ ಹೆಚ್ಚಾಗಿ ಈ ಪ್ರತಿಕ್ರಿಯೆಯಲ್ಲಿಯ ರೋಷ ನೋವುಂಟು ಮಾಡುತ್ತದೆ. ನವ್ಯಸಾಹಿತ್ಯವನ್ನು ಕುರಿತು ಏನೇ ವಿರೋಧವಿದ್ದರೂ ಅದನ್ನು ಸಮರ್ಥವಾಗಿ ವಿವೇಚಿಸುವ ಶಕ್ತಿ ಮತ್ತು ಅಧಿಕಾರ ವಿ.ಸೀ.ಯವರಿಗಿತ್ತು. ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯದಿಂದ ಪ್ರಭಾವಿತರಾಗಿದ್ದರೂ ನಮ್ಮ ಹೊಸ ಕಾವ್ಯ ಹೊಸ ರೀತಿಯಲ್ಲಿ ಹೇಗೆ ಪರಿಣತಿಯನ್ನು ಪಡೆಯ ಬಹುದಾಗಿತ್ತೆಂಬುದನ್ನು ಅವರು ಸೋದಾಹರಣವಾಗಿ ಪ್ರತಿಪಾದಿಸಬಹುದಿತ್ತು. 'ಎಲ್ಲ ವಿಲಾಯಿತಿಯಿಂದ ಹೊಸತಿಣಿಕಿ ತಂದ ಪರಕೀಯತೆಗಳು' ಎಂಬ ಮಾತು ತಿರುಗುಬಾಣವಾಗಬಲ್ಲದು.

ವಿ.ಸೀ.ಯವರ ಸಾಹಿತ್ಯಿಕ ವ್ಯಕ್ತಿತ್ವದ ಮುಖ್ಯಲಕ್ಷಣವೆಂದರೆ ಈ ಸಂಘರ್ಷವೆಂದೇ ತೋರುತ್ತದೆ. ಸಮಕಾಲೀನತೆಯಲ್ಲಿಯ ನಂಬಿಕೆಯೇ ಇದಕ್ಕೆ ಕಾರಣವೆಂದರೆ ವಿರೋಧಾಭಾಸವೆಂದು ತಿಳಿಯಬಾರದು. ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಯೌವನದ ಸಮಕಾಲೀನತೆಯೇ ನಿಜವಾದ ಸಮಕಾಲೀನತೆಯೆಂದು ತೋರುತ್ತದೆ. ಕಾಲ ಸರಿದಂತೆಲ್ಲ ಈ ಸಮಕಾಲೀನತೆ ಬದಲಾದಾಗ ಅದನ್ನು ಒಪ್ಪಿಕೊಳ್ಳಲು ಮನಸ್ಸು ಬರುವುದಿಲ್ಲ. ವಿ.ಸೀ.ಯವರು ತಮ್ಮ ಕವನ ಸಂಕಲನಗಳ ಮುನ್ನುಡಿಗಳಲ್ಲಿ, ಮತ್ತೆ ಮತ್ತೆ ಹೇಳುತ್ತಿರುವ ಮಾತೆಂದರೆ 'ನಾನು ಹಳೆಯ ಕಾಲದವನು'. ಇದು ಸಮರ್ಥನೆಯ ಒಂದು ತಂತ್ರ. ಕಲಾವಿದನಾದವನು ತಾನು ಜೀವಿಸಿರುವವರೆಗೆ ಹಳಬನಾಗುವುದಿಲ್ಲ. ವಿ.ಸೀ.ಯವರು ಹಳಬರಾಗಿರಲಿಲ್ಲ. ಆದರೆ ಹಾಗೆ ಹೇಳಿ ಎದುರಾಳಿಯನ್ನು ವಾದದಲ್ಲಿ ಹತಪ್ರಭರನ್ನಾಗಿ ಮಾಡುವ ಒಂದು ಪ್ರಯತ್ನ ಇದು.

ಬಿ.ಎಂ.ಶ್ರೀ., ಡಿ.ವ್ಹಿ. ಗುಂಡಪ್ಪನವರು, ಟಿ. ಎಸ್. ವೆಂಕಣ್ಣಯ್ಯನವರು ಮೊದಲಾದ ಹಿರಿಯರ ಪ್ರಭಾವದಲ್ಲಿ ಬೆಳೆದು ಬಂದ ವಿ.ಸೀ.ಯವರು ತಮ್ಮ ಸ್ವಂತದ ನವೀನ ಪ್ರಜ್ಞೆಯನ್ನು ಅಭಿವ್ಯಕ್ತಿಗೊಳಿಸುವಾಗ ಸಂಕೋಚವನ್ನು ಅನುಭವಿಸಿರಬೇಕು. ಹೊಸತನದ ಅಭಿವ್ಯಕ್ತಿ ಒಂದು ನೈತಿಕ ಸಮಸ್ಯೆಯಾದಾಗಲೆಲ್ಲ ಈ ಬಗೆಯ ಸಂಕೋಚ ಅನಿವಾರ್ಯವೇನೋ? ಚಿರಂಜೀವಿಯಾದ ಅಶ್ವತ್ಥಾಮನನ್ನು ಕೊಂದ ಪಾಪಿ ನಾನು ಎಂದು ಶ್ರೀಯವರು ಹೇಳುವ ಅಗತ್ಯವಿರಲಿಲ್ಲ. ಆದರೂ ಹೇಳಿದರು. ಬಾಣ ಕಾದಂಬರಿಯ ಒಂದು ಪದ್ಯವನ್ನು ಉದಾಹರಿಸಿ ವಿ.ಸೀ.ಯವರು ಅದರ 'ಬರ್ಬರತೆ'ಯನ್ನು ನಿಸ್ಸಂಕೋಚವಾಗಿ ಖಂಡಿಸಿದ್ದಾರೆ. ಆದರೆ ಈ 'ಬರ್ಬರತೆ' ಅವರಿಗೆ ಹೋಮರನಲ್ಲಿ, ಎಲಿಜಬೆತನ್ ಯುಗದ ನಾಟಕಕಾರರಲ್ಲಿ ಯಾಕೆ ಕಾಣಲಿಲ್ಲ? ಸಮಕಾಲೀನತೆಗೆ ನಿಷ್ಠರಾಗಿರುವವರಲ್ಲಿ ಉಳಿದ ಕಾಲದ ಬಗ್ಗೆ ನಿಸ್ಸಂಕೋಚ, ತಮ್ಮ ಕಾಲದ ಬಗ್ಗೆ ಸಂಕೋಚ ವ್ಯಕ್ತವಾಗುತ್ತವೋ ಏನೋ! ವಿ.ಸೀ.ಯವರದು ತಮ್ಮ ಸಮಕಾಲೀನತೆಗೆ—ತಮ್ಮ ಯೌವನದ ಸಮಕಾಲೀನತೆಗೆ—ನಿಷ್ಠವಾದ ಸಾಹಿತ್ಯಿಕ ಜೀವ. ಅವರು ತಮ್ಮ ಸಮಕಾಲೀನ 'ಮಹನೀಯರ' ಪ್ರಭಾವಕ್ಕೆ ತಮ್ಮನ್ನು ತೆರೆದುಕೊಂಡವರು. ಇದೂ ಒಂದು ಮಿತಿಯಾಗಿರಬಹುದು. ಎಲ್ಲ ಬಗೆಯ ವ್ಯಕ್ತಿತ್ವಕ್ಕೆ ಒಂದು ಮಿತಿ ಇದ್ದೇ ಇದೆ. ಅದನ್ನು ಮರೆತು ನೋಡಿದಾಗ ವಿ.ಸೀ.ಯವರ ಧೀಮಂತಿಕೆ ಮತ್ತು ಶ್ರೇಷ್ಠವಾದ ಅಭಿರುಚಿ ಇವು ಇಂದಿಗೂ ಮನಸೆಳೆಯುವಂಥವು. ಇದನ್ನು ಬಿಟ್ಟರೆ ಅವರ ವಾಗ್ಮಿತೆ—ಅವರ ವ್ಯಕ್ತಿತ್ವದ ಅನನ್ಯವಾದ ಲಕ್ಷಣ—ಅವರ ಸಾಹಿತ್ಯದ ಬಗ್ಗೆ ಅನೇಕ ಮಾತುಗಳನ್ನು ಹೇಳಬಲ್ಲದಾಗಿದೆ. ಅದರ ವಿವರಣೆ ಮುಂದಿನ ಪುಟಗಳಲ್ಲಿ ಬರುತ್ತದೆ.

# II

ವಿ.ಸೀ.ಯವರು ಮುಖ್ಯವಾಗಿ ಕವಿಗಳೆಂದು ಹೆಸರಾದವರು. ಅವರು ಒಟ್ಟು ಎಂಟು ಕವನ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಅವೆಲ್ಲ ಕೂಡಿಕೊಂಡು ಈಗ ಒಂದು ದೊಡ್ಡ ಸಂಪುಟದಲ್ಲಿ ಪ್ರಕಟವಾಗಿವೆ. ಶ್ರೀಯವರ ಸಂಪ್ರದಾಯದ ಕವಿಗಳಲ್ಲಿ ಇವರದು ಪ್ರಮುಖವಾದ ಹೆಸರಾಗಿದೆ. ಸಮಗ್ರ ಕಾವ್ಯದ ಸಂಪುಟಕ್ಕೆ ಪ್ರಸಿದ್ಧ ವಿಮರ್ಶಕರಾದ ಶ್ರೀ ಎಲ್. ಎಸ್. ಶೇಷಗಿರಿ ರಾಯರು ಒಂದು ದೀರ್ಘವಾದ ಪ್ರಸ್ತಾವನೆಯನ್ನು ಬರೆದು ವಿ.ಸೀ. ಅವರ ಕಾವ್ಯದ ಬೆಳವಣಿಗೆಯ ಹಂತಗಳನ್ನು ಗುರುತಿಸಿದ್ದಾರೆ. ಅವರ ಮೊದಲ ಸಂಗ್ರಹದಲ್ಲಿ ಕೇವಲ ಗೀತಗಳಿದ್ದು ಕೊನೆಯ ಸಂಕಲನದಲ್ಲಿ ಕಾವ್ಯ ಅನೇಕ ರೂಪಗಳನ್ನು ತಳೆದು ಸಂಕೀರ್ಣವಾದದ್ದನ್ನು ಕಾಣಬಹುದು. ಅವರ ಮೊದಲ ಎರಡು ಸಂಕಲನಗಳ ಹೆಸರುಗಳು 'ಗೀತಗಳು' ಮತ್ತು 'ದೀಪಗಳು' ಎಂದಿವೆ. ಮುಂದೆ ಮಾತ್ರ 'ನೆಳಲು–ಬೆಳಕು', 'ದ್ರಾಕ್ಷಿ ದಾಳಿಂಬೆ', 'ಅರಲು ಬರಲು', 'ಹಗಲು–ಇರುಳು', 'ನೋವು–ನಲಿವು' ಎಂದಿವೆ. ಒಂದೇ ಶಬ್ದದ ಹೆಸರಿನಿಂದ ಕೂಡು ಶಬ್ದಗಳ ಹೆಸರಿಗೆ ಆದ ಈ ಪರಿವರ್ತನೆ ಕುತೂಹಲಕಾರಿಯಾಗಿದೆ. 'ಒಂದೆ ತಂತಿಯ ನೀವಿದೇತಕೆ ಮೀಟುತಿರುವಿರಿ ಸುಮ್ಮನೆ' ಎಂದು ಪ್ರಾರಂಭವಾಗುವ ಒಂದು ಭಾವಗೀತವನ್ನು ಅವರು ಬರೆದಿದ್ದಾರೆ. ಪ್ರಾರಂಭದಲ್ಲಿ ಒಂದೇ ತಂತಿಯ ಏಕತಾನ, ಕೊನೆಯಲ್ಲಿ ಹಲವಾರು ತಂತಿಗಳ ಮಿಡಿತದಿಂದ ಉಂಟಾಗುವ ಸ್ವರಮೇಳವನ್ನು ಅವರ ಕಾವ್ಯದ ಬೆಳವಣಿಗೆಯಲ್ಲಿ ಗುರುತಿಸಬಹುದಾಗಿದೆ.

ಆದರೆ ಅವರ ಕಾವ್ಯದ ಮೌಲ್ಯಮಾಪನದ ಪ್ರಶ್ನೆ ಬಂದಾಗ ಹಲವಾರು ಸಮಸ್ಯೆಗಳೇಳುತ್ತವೆ. ಎಲ್. ಎಸ್. ಶೇಷಗಿರಿ ರಾಯರ ಪ್ರಸ್ತಾವನೆಯಲ್ಲಿ ಸಹೃದಯ–ವಿಮರ್ಶೆ ಇದೆ. ಆದರೆ ಅವರ ಅಭಿಪ್ರಾಯದ ಪ್ರಕಾರ ಕೂಡ ನಾಲ್ಕೈದು ಕವಿತೆಗಳು ಮಾತ್ರ ಶ್ರೇಷ್ಠವಾದವುಗಳು. ಅವುಗಳಿಗಿಂತ ಕಡಿಮೆ ಮಟ್ಟದ ಕವಿತೆಗಳು ಇಪ್ಪತ್ತಾದರೂ ದೊರೆಯುತ್ತವೆ, ಎಂದಿದ್ದಾರೆ. 'ಕಸ್ಮೈ ದೇವಾಯ', 'ಅಭೀಃ', 'ಶಬರಿ', 'ಮನೆ ತುಂಬಿಸುವದು', 'ಉಂಗುರರವ' ಮೊದಲಾದ ಕವಿತೆಗಳ ಶ್ರೇಷ್ಠವಾದ ಕಲೆಗಾರಿಕೆಯ ಬಗ್ಗೆ ಸಂಶಯವೇ ಇಲ್ಲ. ಆದರೆ ಇಂಥ ಕವಿತೆಗಳ ಅಭ್ಯಾಸದಿಂದ ವಿ.ಸೀ. ಅವರ ಕಾವ್ಯದ ಸ್ವರೂಪ ಮತ್ತು ಸ್ವಭಾವಗಳನ್ನು ತಿಳಿಯಬೇಕಾಗಿದೆ. 'ಕಸ್ಮೈ ದೇವಾಯ' ಕವಿತೆಯಲ್ಲಿ ವೇದಕಾಲದ ಪ್ರಶ್ನೆಗಳನ್ನೇ ತೆಗೆದುಕೊಂಡು ಅವುಗಳ ಮೂಲಕವಾಗಿ ಈಗಿನ ಕಾಲದ ಹಲವು ಸಂದೇಹಗಳನ್ನು ಅಭಿವ್ಯಕ್ತಿಸಲಾಗಿದೆ. ವೈಯಕ್ತಿಕವಾಗಿ ವಿ.ಸೀ. ಅವರು ನಾಸ್ತಿಕರಲ್ಲ. ಆದರೆ ಅವರು ಪ್ರಕಟಿಸಿರುವ ಸಂದೇಹಗಳು ಈ ಯುಗದ ಸಂದೇಹಗಳು. ಆ ಸಂದೇಹಗಳು ಪರಿಹಾರಗೊಂಡು ಹೊಸ ಬೆಳಕು ಮೂಡಲಿ ಎಂಬ ಹಾರೈಕೆ ಈ ಕವಿತೆಯ ಮುಖ್ಯ ವಸ್ತುವಾಗಿದೆ. 'ಅಭೀಃ' ಎಂಬ ಕವನ ನಿರ್ಭಯತೆ ಒಂದು ಆಧ್ಯಾತ್ಮಿಕ ಸತ್ತ್ವವಾಗಿ ನಮ್ಮನ್ನು ಕಾಪಾಡಲಿ ಎಂದು ಹಾರೈಸುತ್ತದೆ. ಸಾಕ್ರೆಟೀಸ್, ಜೀಸಸ್ ಮತ್ತು ಅವನ ಶಿಷ್ಯರು, ಯಮನ ಹತ್ತಿರ

ಹೋಗಿ ಧೈರ್ಯದಿಂದ ಪ್ರಶ್ನೆ ಕೇಳಿದ ನಚಿಕೇತ ಮುಂತಾದ ಮಹಾಪುರುಷರ ಪ್ರೇರಣೆ ಈ ಕವನದ ಹಿಂದೆ ಇದೆ. 'ಅಭೀಃ' ಎಂಬ ಶಬ್ದ ಕೂಡ ವಿವೇಕಾನಂದರ ಒಂದು ಲೇಖನದೊಳಗಿನದು, ಅವರ ವೀರವಾಣಿಯ ನೆನಪಿಗಾಗಿ ಈ ಕವನವನ್ನು ಬರೆಯಲಾಯಿತೆಂದು ವಿ.ಸೀ. ಅವರು ತಮ್ಮ ಮುನ್ನುಡಿಯಲ್ಲಿ ಹೇಳಿದ್ದಾರೆ. 'ಶಬರಿ' ಕವನದಲ್ಲಿ ರಾಮನಿಗಾಗಿ ಕಾಯುತ್ತಿರುವ ಶಬರಿಯ ಭಕ್ತಿ ಮತ್ತು ಪ್ರತೀಕ್ಷಾಭಾವದ ಮಹತಿಯನ್ನು ನಿರೂಪಿಸುತ್ತದೆ. ಶಬರಿಯಂತೆಯೇ ಈ ನಾಡಿನ ಬಡವರು ತಮ್ಮ ಉದ್ಧಾರಕನಿಗಾಗಿ ಕಾಯುತ್ತಿದ್ದರೆಂದು ಕವನದ ಉತ್ತರ ಭಾಗ ಹೇಳುತ್ತದೆ. ಇನ್ನು 'ಮನೆ ತುಂಬಿಸುವುದು' ಮತ್ತು 'ಉಂಗುರರವ' ಇವು ಸಾಮಾನ್ಯಜೀವನದಲ್ಲಿಯ ರಸಗಳಿಗೆಗಳನ್ನು ಬಣ್ಣಿಸುತ್ತವೆ. ಅವು ಹೃದಯಸ್ಪರ್ಶಿಯಾಗಿವೆಯಲ್ಲದೆ ನಮ್ಮ ಜಾನಪದ ಕಾವ್ಯದಂತೆ ಬದುಕನ್ನು ಶ್ರೀಮಂತವಾಗಿಸುತ್ತವೆ.

ಮೇಲೆ ಹೇಳಿರುವ ವಿವರಗಳನ್ನು ಕುರಿತು ಇನ್ನಷ್ಟು ಆಳವಾಗಿ ಯೋಚಿಸಬೇಕಾದ ಅವಶ್ಯಕತೆ ಇದೆ. ಹಾರೈಕೆ, ಆಸೆ, ಪ್ರತೀಕ್ಷೆ, ನಿಶ್ಚಯ ಇವು ಮನಸ್ಸಿನ ಭಾವಗಳೇ ಹೊರತು ತಾವಾಗಿ ಪೂರ್ಣವಾದ ಅನುಭವಗಳಲ್ಲ. ಅನುಭವದ ಮಿತಿಯೇ ಅದಕ್ಕೊಂದು ನಿಶ್ಚಿತವಾದ ಸ್ವರೂಪವನ್ನು ತಂದುಕೊಡುತ್ತದೆ. ಒಂದು ಅನುಭವಕ್ಕೆ ಮೊದಲು ಮತ್ತು ಕೊನೆಗಳಿರುವಂತೆ ಅದಕ್ಕೊಂದು ಇತಿಹಾಸವೂ ಇದೆ. ಅನುಭವದ ಈ ದ್ವಿವಿಧ ಸ್ವರೂಪವನ್ನು ಕವಿತೆ ಉಪಯೋಗಿಸಿದಾಗ ಅನುಭವದ ಸಾಮಾನ್ಯ ಮತ್ತು ವಿಶೇಷ ಅರ್ಥಗಳು ತಾನಾಗಿ ಗೋಚರಿಸುತ್ತವೆ. ಕವಿತೆಯ ಮೌಲ್ಯವೆಂದರೆ ಈ ಅರ್ಥಗಳ ಸಂಚಯ ಎಂದು ಹೇಳಿದರೆ ತಪ್ಪೇನಿಲ್ಲ.

ಆಸೆ ಮತ್ತು ಪ್ರತೀಕ್ಷೆಯಂಥ ಭಾವಗಳಿಗೆ ಅನುಭವದ ಮಿತಿ ಇರುವುದಿಲ್ಲ; ಇವುಗಳ ಸ್ವರೂಪ ಅಂಶತಃ ಆಧ್ಯಾತ್ಮಿಕವಾದದ್ದು. ಆಸೆಯ ಕೊನೆ ಅದರ ತೃಪ್ತಿಯಲ್ಲಿ ಮತ್ತು ಪ್ರತೀಕ್ಷೆಯ ಕೊನೆಯೂ ಗುರಿಮುಟ್ಟುವದರಲ್ಲಿ. ಆದರೆ ಆಸೆ ಮತ್ತು ಅದರ ತೃಪ್ತಿ ಇವುಗಳ ನಡುವಿನ ಪ್ರಕ್ರಿಯೆಗೆ ಮಾತ್ರ ನಿಶ್ಚಿತವಾದ ಕಾಲಾವಧಿಯೇನೂ ಇಲ್ಲ. ತೃಪ್ತಿಯೆನ್ನುವುದು ಆಸೆಯ ಮತ್ತು ಗುರಿ ಮುಟ್ಟುವದು ಪ್ರತೀಕ್ಷೆಯ ದೈವ. ಈ ದೈವಸಿದ್ಧಿಯ ಸ್ವರೂಪ ಕೂಡ ನಿಶ್ಚಿತವಾದದ್ದಲ್ಲ. ಯಾಕೆಂದರೆ ಅದು ನಮ್ಮ ಕೈಯಲ್ಲಿಲ್ಲ. 'ದ್ರಾಕ್ಷಿ ದಾಳಿಂಬೆ' ಸಂಗ್ರಹದ 'ಶತಂ ಜೀವೇಮ ಶರದಃ' ಎಂಬ ಕವಿತೆಯಲ್ಲಿ ಮೇಲೆ ಹೇಳಿರುವ ಪ್ರಕ್ರಿಯೆಯ ಒಂದು ಪೂರ್ಣ ಚಿತ್ರವಿದೆ.

ಪ್ರಕೃತಿ ಸಿಂಗರಕೆಲ್ಲ ಕರೆಮೂದಲಿಕೆಗೆಲ್ಲ
ಕನಲೆದ್ದ ವೀರ್ಯಗಳ ಕಿಚ್ಚು ನುಡಿಯೇನು!
ದೇವರಾಶೀರ್ವಚನವೊಂದ ನೆಮ್ಮುತಲೆದ್ದು
ಮಿಗಿಲಾದ ಹೊಸ ಸೃಷ್ಟಿ ನಟ್ಟುದೇನು?
ಜಡವ ಚೇತನಗೊಳಿಸಿ ಅರಳಿಸಿದುದೇನು?

ಇದು ಒಂದು ಕಾಲದ ಸಿದ್ಧಿಯ, ಆದರೆ ಈಗಿನ ಕಾಲದ ಆಸೆಯ ಹಾರೈಕೆಯ ಒಂದು ಚಿತ್ರ. ಇದಕ್ಕೆ ಉತ್ತರವಾಗಿ ಇನ್ನೊಂದು ಚಿತ್ರ.

ಹುಟ್ಟು ವೆತೆ, ಬೆಳೆ ಮಾಯೆ, ಹಿರಿಬದುಕಸತ್ಯವಂತೆ
ನೂರಾರು ಜನುಮಗಳು ಕರ್ಮವಟ್ಟುವದಂತೆ
ಎಲ್ಲ ಹಣೆಯಲಿ ವಿಧಿಯು ಬರೆದಿಡುವದಂತೆ
ತಂದೆ ಚಾಗುರೆಯೆನಲು ಬೆಳೆದಿದ್ದ ಮೂರುತಿಯ
ಕೀರುತಿಯ ಚಾರಿತ್ರದೌನ್ನತ್ಯ ಶೂನ್ಯವಂತೆ!

ಈ ಎರಡು ವಿರುದ್ಧ ಚಿತ್ರಗಳ ಸಂಘರ್ಷ ಪರಿಹಾರವಾಗುವುದು ಹೀಗೆ,

ಮಾನ ಆಯುಃ ಪ್ರಮೋಷೀಃ, ಶತಮಜೀತಾಸ್ಯಾಮ
ಶತಮನಂತಂ ವೀರಂ ಶತಮೈಶ್ವರ್ಯಂ ವರ್ಚಂ
ಎಂದು ಬಾಳ್ ಶ್ರೇಯಕ್ಕೆ ನುಗ್ಗಿ ಮುಂದೋಡುತಿರೆ
ಕಾವ್ಯಶಾಸ್ತ್ರಾಲಾಪ ಓಜ ಕಲೆ ಸೌಂದರ್ಯ
ಶಾಂತಿ ಸೌಹಾರ್ದಗಳು ನೆಲಸಿ ನಿಂತಾವು!

ಈ ಮೂರು ನುಡಿಗಳಲ್ಲಿ ಒಂದು ಕಾಲದ ಸಿದ್ಧಿ, ಅದಕ್ಕೆ ವಿರುದ್ಧವಾದ ಒಂದು ಅಭಿಪ್ರಾಯ ಮತ್ತು ಪರಿಹಾರದ ರೂಪದಲ್ಲಿ ಮತ್ತೊಂದು ಶ್ರೇಯೋಭಿಲಾಷೆ ಇವೆ. ಅಂದರೆ ಎಲ್ಲಿಯೂ ಅನುಭವವಿಲ್ಲ. ಹೀಗೆಂದ ಮಾತ್ರಕ್ಕೆ ಕೇವಲ ಅನುಭವವನ್ನು ಹೇಳುವದಷ್ಟೇ ಒಳ್ಳೆಯ ಕಾವ್ಯವೆಂದು ಅರ್ಥವಲ್ಲ. ಕಾವ್ಯದ ಮಾಧ್ಯಮವಾದ ಭಾಷೆ ಅನುಭವವನ್ನಷ್ಟೇ ಅಲ್ಲದೆ ಅನುಭವವಲ್ಲದ್ದನ್ನೂ ಕುರಿತು ಹೇಳಬಹುದು. ಆದರೆ ಅನುಭವದ ಕಾವ್ಯದ ದೈವ ಬೇರೆ, ಆಸೆಯ ಕಾವ್ಯದ ದೈವ ಬೇರೆಯಾಗಿರುತ್ತದೆ. ಆಸೆಯ ತೃಪ್ತಿಯೇ ಅದರ ದೈವ ಮತ್ತು ಅದರ ಅರ್ಥಪೂರ್ಣತೆಯೂ ತೃಪ್ತಿಯಲ್ಲಿಯೇ ಇರುತ್ತದೆ.

ಆಸೆ ತನ್ನ ತೃಪ್ತಿಯನ್ನು ಪಡೆಯಲೇ ಬೇಕು, ತೃಪ್ತಿ ಅದರ ದೈವ ಅಷ್ಟೇ ಅಲ್ಲ. ಪ್ರತಿಯೊಂದು ಆಸೆ ತನ್ನ ತೃಪ್ತಿಯುನ್ನು ಪಡೆಯುಬೇಕೆಂಬುದು ಒಂದು ಅಪರಿಹಾರ್ಯವಾದ ನೈತಿಕ ನಿಯಮವಾಗಿದೆ. ಇಷ್ಟೇ ತೃಪ್ತಿಯೆನ್ನುವುದು ಸಹಜವಾದ್ದೋ ವಿಕೃತವಾದದ್ದೋ ಎನ್ನುವದು ಆ ಆಸೆಯ ದೈವವನ್ನು ಅವಲಂಬಿಸಿದೆ.

ವಿ.ಸೀ. ಅವರ 'ಹಗಲು–ಇರುಳು' ಸಂಗ್ರಹದಲ್ಲಿಯ ಒಂದು ಕವಿತೆಯನ್ನು ಈ ಮಾತಿಗೆ ಉದಾಹರಣೆಯೆಂದು ನೋಡಬಹುದಾಗಿದೆ. ಕವಿತೆಯ ಹೆಸರು 'ಒಂದೆರಡು ನೋಟ'. ಇಂಗ್ಲಂಡಿಗೆ ಹೋಗಿ ಅಲ್ಲಿ ಕೆಲದಿನ ಇದ್ದು, ಆ ದೇಶದ ಸಂಸ್ಕೃತಿಯನ್ನು ಕಣ್ಣಾರೆ ನೋಡಬೇಕೆಂಬುದು ವಿ.ಸೀ. ಅವರ ಬಹುಕಾಲದ ಕನಸಾಗಿತ್ತು. ಅವರ ಇಳಿವಯಸ್ಸಿನಲ್ಲಿ ಆ ಕನಸು ನನಸಾಯಿತು. ಆದರೆ ದುರ್ದೈವದಿಂದ ಅವರು

ನೋಡಬೇಕೆಂದಿದ್ದು ನೋಡುವದರೊಳಗೆ ಪಾರ್ಶ್ವವಾಯುವಿನ ಆಘಾತವಾಗಿ ಅವರು ಆಸ್ಪತ್ರೆಯಲ್ಲಿರಬೇಕಾಯಿತು. ಈ ಕವಿತೆಯಲ್ಲಿ ಕೊನೆಕೊನೆಯಲ್ಲಿ ಆಸ್ಪತ್ರೆಯ ಚಿತ್ರವಿದೆ.

... ಆಲಸ್ಯ ಆತಂಕವರಿಯದಿಹ
ಉಪಚಾರ, ವೈದ್ಯವೀಕ್ಷಣೆ, ಶುಶ್ರೂಷೆ
We shall see what British Medicine
Can do for you ಎನ್ನಲು ಡಿಕೆನ್‌ಸನ್
ಸೊಕ್ಕಿನಲೆ ಅದನು? ಅಲ್ಲವೆನ್ನಲೇಕೆ? —Given
Most royally Sir ಎಂದೆನೇ; ತೋರಿದನೆ ಮುಖದಲ್ಲಿ ಚಹರೆಯಲ್ಲಿ?
ಒಪ್ಪಿಯೇ ಇರಬೇಕು, ಕೆನ್ನೆ ತುಟಿ ಅಲುಗಿದವೆ?
ಈ ಜನದ ನಡೆ ಹೀಗೆ; ನಾಡಿನ ಹೆಮ್ಮೆ ಆ ನುಡಿ, ಅಭಿಮಾನ
ನಮಗೇಕೆ ಬಾರದೊ—ಎಂದಿಗನ್ನ.

ನಡೆದ ಸಂಗತಿ ಮರ್ಮಸ್ಪರ್ಶಿಯಾಗಿದೆ. ಡಿಕೆನ್‌ಸನ್‌ನ ಮಾತಿನಲ್ಲಿ ಗಂಭೀರವಾದದ್ದೆಷ್ಟು, ಪರಿಹಾಸವೆಷ್ಟು ಎಂದು ಹೇಳುವದು ಕಷ್ಟ. ಬ್ರಿಟಿಶರಿಗೆ under statement ಎಂದರೆ ಅವರ ಮುಖ್ಯವಾದ ಭಾಷೆ. ಇಷ್ಟಾದರೂ ಅವನ ಸಭ್ಯತೆಯನ್ನು, ಆತ್ಮವಿಶ್ವಾಸವನ್ನು ಮೆಚ್ಚತಕ್ಕದ್ದೇ. ಆದರೆ ಸಮಸ್ಯೆ ಇರುವುದು ಆಸೆ ಮತ್ತು ತೃಪ್ತಿ ಇವುಗಳ ವ್ಯಸ್ತಪ್ರಮಾಣದಲ್ಲಿ. ಒಂದು ದೃಷ್ಟಿಯಿಂದ ಆಸೆಯ ದೈವ ಇಲ್ಲಿ ತೆರೆದಿರುವದು. ಇಡೀ ಜೀವಮಾನವೆಲ್ಲ ಹಾತೊರೆದಿದ್ದದ್ದು ಈ ನಾಗರಿಕತೆಯ ದರ್ಶನಕ್ಕಾಗಿಯೆ? ಅಥವಾ ನಾವು ತೀರ ಅನಾಗರಿಕರು ಎಂದು ತಿಳಿಯುವದಕ್ಕಾಗಿಯೆ? ನನಗೆ ನೆನಪಾಗುತ್ತದೆ: ಒಬ್ಬ ಕೆನೆಡಿಯನ್ ಪ್ರೊಫೆಸರ ಒಬ್ಬಳಿಗೆ ಅಕಸ್ಮಾತ್ತಾಗಿ ಹುಬ್ಬಳ್ಳಿಯಲ್ಲಿ ಕಣ್ಣಿನ ಆಪರೇಶನ್ ಮಾಡಿಸಬೇಕಾಗಿ ಬಂತು. ಇಲ್ಲಿಯ ಡಾಕ್ಟರರು ಎಂಥವರೋ ಎಂದು ಅವಳಿಗೆ ಬಹಳ ಆತಂಕವಾಗಿತ್ತು. ಆದರೆ ಆಪರೇಶನ್ ಯಶಸ್ವಿಯಾಯಿತು. ಆಕೆ ಡಾಕ್ಟರರ ಆಭಾರ ಮನ್ನಿಸಿದಳು. ಅದಕ್ಕಿಂತ ಹೆಚ್ಚಾಗಿ ಆಕೆಯನ್ನು ಹಗಲು ರಾತ್ರಿ ನೋಡಲು ಉಪಚರಿಸಲು ಬರುತ್ತಿದ್ದ ನೂರಾರು ಮಿತ್ರರನ್ನು ನೋಡಿ ಆಕೆಯ ಕಣ್ಣು ತುಂಬಿ ಬಂದವು. 'ಇದು ನಮ್ಮ ದೇಶದಲ್ಲಿ ಸಾಧ್ಯವೇ ಇಲ್ಲ' ಎಂದು ತಿರುಗಿ ಹೋಗುವತನಕ ಆಕೆ ಹೇಳುತ್ತಿದ್ದಳು. ವಿ.ಸೀ.ಯವರ ಕೃತಜ್ಞತೆಗೂ ಈ ಕೃತಜ್ಞತೆಗೂ ಹೆಚ್ಚು ಅಂತರವೇನೂ ಇಲ್ಲ. ಅದೇನೇ ಇದ್ದರೂ ಇದು ಆಸೆಯ ಸಫಲತೆಯ, ಕೃತಾರ್ಥತೆಯ ಮಹತ್ವವನ್ನು ತೋರಿಸುವುದಿಲ್ಲ.

# III

ವಿ.ಸೀ. ಅವರ ಕಾವ್ಯದ ಬಗ್ಗೆ ಹೀಗೆ ವಿವರವಾಗಿ ಬರೆದದ್ದಕ್ಕೆ ಕಾರಣವಿದೆ. ಅವರ ಕಾವ್ಯದ ಈ ಗುಣ ಅವರ ಗದ್ಯಸಾಹಿತ್ಯದ ಹಲವಾರು ಮಹತ್ವದ ಅಂಶಗಳನ್ನು ಸೂಚಿಸುತ್ತದೆ. ವಿ.ಸೀ. ಅವರ ಗದ್ಯಸೃಷ್ಟಿ ವಿಪುಲವಾದದ್ದು, ಆದರೆ ಅದರ ಸ್ವರೂಪ ಮಾತ್ರ ಒಂದೇ, ಅದೆಂದರೆ ಪ್ರಬಂಧಸಾಹಿತ್ಯ. ವಿ.ಸೀ. ಅವರು ಸಣ್ಣ ಕತೆಗಳನ್ನಾಗಲಿ, ಕಾದಂಬರಿಗಳನ್ನಾಗಲಿ ಬರೆಯಲಿಲ್ಲ. ಅವರ 'ಪಂಪಾಯಾತ್ರೆ' ಒಂದು ಪ್ರವಾಸ ಕಥನವಾಗಿದ್ದರೂ ಅದರ ಸ್ವರೂಪ ಮಾತ್ರ ಪ್ರಬಂಧದ್ದೇ. ಅದನ್ನು ಬಿಟ್ಟರೆ ಅವರು ಎರಡು ಲಲಿತಪ್ರಬಂಧಗಳ ಸಂಕಲನಗಳನ್ನು ಪ್ರಕಟಿಸಿದರು. ಇನ್ನು ಅವರ ಉಳಿದ ಗದ್ಯವೆಂದರೆ ಸಾಹಿತ್ಯ ವಿಮರ್ಶೆ ಮತ್ತು ಅವರು ತಮ್ಮ ಕವನಸಂಕಲನಗಳಿಗೆ ಬರೆದ ಮುನ್ನುಡಿಗಳು. ಅವರು ಬರೆದ ನಾಟಕಗಳೆಲ್ಲ ಇವೆ. 'ಆಗ್ರಹ' ಮತ್ತು 'ಸೊಹ್ರಾಬ್ ರುಸ್ತುಂ' ಇವು ಸ್ವಲ್ಪ ಮಟ್ಟಿಗೆ ಜನಪ್ರಿಯತೆಯನ್ನು ಗಳಿಸಿದವು. ಇವುಗಳಲ್ಲಿ 'ಆಗ್ರಹ' ಒಂದು ವಿಶಿಷ್ಟ ಸ್ವರೂಪದ ನಾಟಕವಾಗಿದೆ. ಸ್ವಲ್ಪದರಲ್ಲಿ ಹೇಳುವದಾದರೆ ಈ ನಾಟಕದ ಅರ್ಥಪೂರ್ಣತೆಯನ್ನು ಉಳಿದವರ ಕೃತಿಗಳ ಮೂಲಕವಾಗಿ ತಿಳಿಯಬೇಕು. ಶ್ರೀಯವರ 'ಅಶ್ವತ್ಥಾಮನ್', ಸೊಫೊಕ್ಲಿಸನ 'ಅಯಾಸ್' ನಾಟಕಗಳನ್ನು ಓದದಿದ್ದರೆ ಈ ನಾಟಕದ ಮಹತ್ವ ತಿಳಿಯಲಾರದು. ಕನ್ನಡದಲ್ಲಿ ಆಗ ರುದ್ರನಾಟಕಕ್ಕಾಗಿ ಒಂದು ಸಾಹಿತ್ಯದ ಶೋಧ ನಡೆದಿತ್ತು. ರುದ್ರನಾಟಕದ ಸ್ವರೂಪವನ್ನು ಅಂಥ ನಾಟಕವನ್ನು ಬರೆದೇ ತಿಳಿದುಕೊಳ್ಳಬೇಕಾಗಿತ್ತು. ಇದು ನಿಜವಾಗಿದ್ದರೆ 'ಆಗ್ರಹ' ನಾಟಕದ ಸ್ವರೂಪ ಅರ್ಧ–ವಿಮರ್ಶಕವಾಗಿದೆ. ಶ್ರೀಯವರ ನಾಟಕದ ಅಶ್ವತ್ಥಾಮ ಸಾಯುತ್ತಾನೆ; ಆದರೆ ಅವನು ಸಾಯದೆ ಕೂಡ ನಾಟಕ ದುರಂತವಾಗುತ್ತದೆಂಬುದು ವಿ.ಸೀ. ಅವರ ಆಗ್ರಹ.

ಪ್ರಬಂಧ ಲಲಿತವಾಗಿರಲಿ ಅಥವಾ ಗಂಭೀರವಾಗಿರಲಿ, ಅದರ ಸ್ವರೂಪದ ಬಗ್ಗೆ ಇನ್ನೂ ಆಳವಾಗಿ ವಿಚಾರ ಮಾಡುವ ಅಗತ್ಯವಿದೆ. ಲಲಿತ ಪ್ರಬಂಧದ ಬಗ್ಗೆ ವಿ.ಸೀ. ಅವರು ತಮ್ಮ ಮುನ್ನುಡಿಗಳಲ್ಲಿ ಕೆಲ ಮಾತುಗಳನ್ನು ಹೇಳಿದ್ದಾರೆ. ಕತೆ, ಕವಿತೆಗಳ ಜೊತೆಗೆ ಜ್ಞಾತಿ ಬಾಂಧವ್ಯವನ್ನು ಕಟ್ಟಿಕೊಂಡ ಸಾಹಿತ್ಯ ಪ್ರಕಾರವಿದು ಎಂದಿದ್ದಾರೆ. ಲಲಿತ ಪ್ರಬಂಧದಲ್ಲಿ ಮುಖ್ಯವಾಗಿರುವುದು ಲೇಖಕನ ದನಿ, ವಾಣಿ ಎಂದೂ ಹೇಳಿದ್ದಾರೆ. ಇಂಗ್ಲಿಷ್‌ದಲ್ಲಿಯ ಪ್ರಬಂಧಕಾರರು ಮತ್ತು ಹರಟೆಗಾರರು ಇದೇ ಅರ್ಥದ ಕೆಲವು ಬೇರೆ ಮಾತುಗಳನ್ನು ಹೇಳಿದ್ದಾರೆ. ಪ್ರಬಂಧದ ಬಾಹ್ಯರೂಪ ಕಾಲಕಾಲಕ್ಕೆ ಬದಲಾಗುತ್ತ ಬಂದಿದೆ. ಹಾಸ್ಯ, ಕಾವ್ಯಮಯತೆ, ಕನಸುಗಾರಿಕೆ ಮೊದಲಾದ ಬೇರೆ ಬೇರೆ ಅಂಶಗಳು ಇದರಲ್ಲಿ ಸೇರುತ್ತ ಬಂದಿವೆ.

ಆದರೆ ಯಾವ ಬೆಳವಣಿಗೆಯೂ ಪ್ರಬಂಧದ ಅಪೂರ್ಣತೆಯನ್ನು ಇಲ್ಲವಾಗಿಸಲು ಸಮರ್ಥವಾಗಿಲ್ಲ. ಒಂದು ಪ್ರಬಂಧ ಹೀಗೆಯೇ ಬೆಳೆದು ಬರಬೇಕೆಂಬ ಕಟ್ಟು ನಿಟ್ಟು ಇಲ್ಲ. ಅದು ಲೇಖಕನ ಮನಸ್ಸಿಗೆ ತೋರಿದ ರೂಪವನ್ನು ತಳೆಯಬಲ್ಲದು, ಅಥವಾ

ತಳಿಯಬೇಕು. ಎಲ್ಲರಿಗೂ ಒಪ್ಪಿತವಾದ ಅಭಿಪ್ರಾಯದ ವಿರುದ್ಧವಾಗಿ ಪ್ರಬಂಧಕಾರ ಇನ್ನೊಂದು ಅಭಿಪ್ರಾಯವನ್ನು ಮಂಡಿಸಬಹುದು. ಉದಾಹರಣೆಗೆ ಅಪ್ರಾಮಾಣಿಕತೆಯ ಒಳ್ಳೆಯತನವನ್ನು ಅವನು ತನ್ನ ಪ್ರಬಂಧದ ಮೂಲಕವಾಗಿ ಸಾಧಿಸಿ ತೋರಿಸಬಹುದು. ತನ್ನ ಜೀವನದಲ್ಲಿಯ ಅನುಭವಗಳನ್ನು ಉದಾಹರಣೆಯನ್ನಾಗಿ ಉಪಯೋಗಿಸಿ ಪ್ರಬಂಧವನ್ನು ಕಟ್ಟಬಹುದು ಅಥವಾ ಹರಟೆ ಹೊಡೆಯಬಹುದು. ಇದರಿಂದಾಗುವ ಲಾಭಗಳನ್ನು ಅವನು ಬಲ್ಲ. ಅದರಿಂದ ಜೀವನದಲ್ಲಿಯ ನೈತಿಕ ಬಿರುಸುತನ ಕಡಿಮೆಯಾಗಬಹುದು.

ಆದರೆ ಇಂಥ ಬರೆವಣಿಗೆಯ ಹಿಂದಿನ ತತ್ವವೇನೆಂಬುದು ಹೆಚ್ಚು ಕುತೂಹಲಕಾರಿಯಾಗಿದೆ. ಕಾವ್ಯದ ಬಗ್ಗೆ ಹಿಂದೆ ಹೇಳಿದಾಗ ವಿ.ಸೀ.ಯವರಲ್ಲಿಯ ವಾಗ್ಮಿತೆಯ ಮಾತು ಬಂದಿತ್ತು. ವಾಗ್ಮಿತೆಗೂ ಮತ್ತು ಈ ಬಗೆಯ ಬರೆವಣಿಗೆಗೂ ಇರುವ ಸಂಬಂಧ ಮತ್ತು ಸಾಮ್ಯ ಇವನ್ನು ಕುರಿತು ಕೂಡ ಆಲೋಚಿಸಬೇಕು. ವಾಗ್ಮಿತೆಯ ಕೆಲಸವೆಂದರೆ ಮುಖ್ಯವಾಗಿ ಅರ್ಥವಿಸುವದು. ಸಾಹಿತ್ಯ ಕೃತಿಗಳನ್ನು ವಿವೇಚಿಸುವ ವಿಮರ್ಶೆಗೂ ಈ ಮಾತು ಅನ್ವಯಿಸುತ್ತದೆ. ಆದರೆ ಇಲ್ಲಿ ಅರ್ಥ ಸ್ವಂತದ್ದಲ್ಲ. ತನ್ನ ಹೊರಗಿನ ಒಂದು ವಿಷಯ, ತತ್ವ ಅಥವಾ ಕೃತಿಯ ಅರ್ಥವನ್ನು ವಿವರಿಸುವ ಕೆಲಸ. ಪ್ರಬಂಧ ವಿಮರ್ಶೆಯಾದಾಗ ಇದೇ ಕೆಲಸವನ್ನು ಮಾಡುತ್ತದೆ. ಬೇರೆ ವಸ್ತುವಿಗೆ ಸಂಬಂಧಿಸಿದ ಅರ್ಥವನ್ನು ತನ್ನದಾಗಿಸಿಕೊಂಡು ಅದನ್ನು ವಿವರಿಸುವ ಕ್ರಿಯೆಯಲ್ಲಿ ಸೃಜನಶೀಲತೆ ಇರುವುದಿಲ್ಲವೆಂದಲ್ಲ. ವಾಗ್ಮಿಯ ಅಥವಾ ಲೇಖಕನ ಸೃಜನಶೀಲತೆ ಕೃತಿಯ ಅರ್ಥದೊಡನೆ ಸೇರಿಕೊಂಡು ಹೊಸದಾಗುತ್ತದೆ ಮತ್ತು ಸಜೀವವಾಗುತ್ತದೆ.

ವಾಗ್ಮಿತೆಗೂ ಪ್ರಬಂಧದ ಬರೆವಣಿಗೆಗೂ ಇನ್ನೊಂದು ಮಹತ್ವದ ಸಾಮ್ಯವೂ ಇದೆ. ಅದೆಂದರೆ ಅರ್ಥವನ್ನು ಪ್ರಕಟಿಸದೆ, ಅರ್ಥವನ್ನು ಸೃಷ್ಟಿಸುತ್ತ ಹೋಗುವದು. ವಾಗ್ಮಿಯಾದವನು ಯಾವಾಗಲೂ ಹೊರಗಿನ ವಿಷಯ, ತತ್ವ ಹಾಗೂ ಕೃತಿಗಳಿಂದ ಬದ್ಧವಾಗಬೇಕಿಲ್ಲ. ತನ್ನ ಅರ್ಥವನ್ನು ತಾನೇ ಕಟ್ಟಿಕೊಳ್ಳುತ್ತ ಹೋಗಬಹುದು. ಈ ಕ್ರಿಯೆ ಕೂಡ ಒಂದು ಸಾಹಸ, ಇದರಲ್ಲಿ ಸೋತು ಹೋಗುವ ಅಪಾಯವಿದೆ. ಬಹುಶಃ ಈ ಕಲೆಯ ಆಕರ್ಷಕ ಶಕ್ತಿಯೇ ಈ ಅಪಾಯದ ಸಂಭಾವ್ಯತೆಯಾಗಿರಬಹುದು. ಜೀವನವಿಡೀ ವಿಷಯಚಿಂತನ ಮಾಡಿದವನು ಈ ಕೃತಿಯಲ್ಲಿ ಗೆಲ್ಲಬಹುದಾಗಿದೆ. ಆದರೂ ಕಟ್ಟಿಕೊಂಡ ಅರ್ಥ ಯಾವ ರೂಪವನ್ನು ತಳಿಯಬಹುದೆಂದು ಯಾರು ಹೇಳಬಲ್ಲರು? ಕವಿತೆ, ಕಥೆ ಮತ್ತು ನಾಟಕಗಳಲ್ಲಿ ಆಯಾ ಪ್ರಕಾರದ ತಂತ್ರಗಾರಿಕೆ ನೀಡುವ ಸಹಾಯ ಅನುಪಮವಾದದ್ದು. ಉದಾಹರಣೆಗೆ ಕವಿತೆಯಲ್ಲಿ ಪ್ರಾಸ, ನಾಟಕದಲ್ಲಿ ಸಂವಾದ ಇರಬೇಕೆಂಬುದು ಒಂದು ತಾಂತ್ರಿಕ ನಿಯಮವಾಗಿದೆ. ಈ ನಿಯಮ ಕೇವಲ ಆ ಪ್ರಕಾರವನ್ನು ಗುರುತಿಸಲೆಂದು ಇದ್ದರೆ ಅದರ ಪ್ರಯೋಜನ ಪರಿಮಿತವೆಂದೇ ಹೇಳಬೇಕು. ಆದರೆ ಆ ನಿಯಮಕ್ಕೆ ತನ್ನದೇ ಆದ ಅರ್ಥವಿದೆಯೆಂದು ತೋರುತ್ತದೆ. ಕವಿತೆಯಲ್ಲಿಯ ಪ್ರಾಸಗಳು ಕವಿತೆಗೆ ಕಾವ್ಯರೂಪವನ್ನು ಕೊಡಲು ಮಾತ್ರ

ಬಂಧವುಗಳಲ್ಲ. ಸಾದೃಶ್ಯ ಕವಿತೆಯ ಮೂಲತತ್ತ್ವವಾಗಿರುವಾಗ ಉಪಮೆ ಅಲಂಕಾರವಾಗುವಂತೆ ಪ್ರಾಸ ಕೂಡ ಅರ್ಥಹೀನವಾದರೆ ಅದು ಕವಿಯ ಅಸಾಮರ್ಥ್ಯದಿಂದಾಗಿ ಇರಬಹುದಾಗಿದೆ. ಆದರೆ ಒಳ್ಳೆಯ ಕವಿಯಲ್ಲಿ ಇದೆಲ್ಲ ಅರ್ಥಪೂರ್ಣವಾಗಬಲ್ಲದು. ಅವನು ಭಾಷೆಯಿಂದ, ತಂತ್ರದಿಂದ ಏನೇನು ಉಪಯೋಗ ತೆಗೆದುಕೊಳ್ಳಲು ಸಾಧ್ಯವೋ ಅಷ್ಟೆಲ್ಲವನ್ನೂ ಪಡೆಯಬಲ್ಲ. ತಂತ್ರಗಳು ಬಂಧನವಾಗಬಲ್ಲವು, ಅದರಂತೆ ವಿಶೇಷಾರ್ಥಗಳನ್ನು ತೆರೆದು ತೋರಿಸಬಲ್ಲ ಬಾಗಿಲುಗಳೂ ಆಗಬಹುದು. ಕಲೆ ನಿಯತಿಕೃತನಿಯಮರಹಿತವಾಗಬಲ್ಲದು, ಆದರೆ ಸ್ವಂತದ ನಿಯಮಗಳಿಂದ ಅದಕ್ಕೆ ಬಹುತೇಕ ಸ್ವಾತಂತ್ರ್ಯವಿಲ್ಲ.

ಸಾಹಿತ್ಯಪ್ರಕಾರಗಳಲ್ಲಿ ಲಲಿತಪ್ರಬಂಧವೊಂದೇ ಈ ನಿಯಮಗಳ ಹಂಗು ತನಗಿಲ್ಲವೆಂದು ಸಾಧಿಸಹೊರಟಂತಿದೆ. ರೊಮ್ಯಾಂಟಿಕ್ ಯುಗಕ್ಕಿಂತ ಮೊದಲಿನ ಪ್ರಬಂಧಗಳಿಗೂ ಆಮೇಲಿನ ಪ್ರಬಂಧಗಳಿಗೂ ಇರುವ ಅಂತರವನ್ನು ಗಮನಿಸಬಹುದಾಗಿದೆ. ಇಂಗ್ಲೀಷಿನಲ್ಲಿ ೧೮ನೆಯ ಶತಮಾನದ ಹೊತ್ತಿಗೆ ಪ್ರಬಂಧದ ಬರೆವಣಿಗೆಯಲ್ಲಿ ಸಡಿಲು ಹುಟ್ಟತೊಡಗಿತು. ೧೮ನೆಯ ಶತಮಾನದ ಪ್ರಬಂಧಕಾರರು ಪ್ರಬಂಧದ ಮೂಲಕವಾಗಿ ಸಾಮಾಜಿಕ ಕುಂದುಕೊರತೆಗಳನ್ನು ಕುರಿತು ಚಿಂತನೆ ನಡೆಸಿದರು. ರೊಮ್ಯಾಂಟಿಕ್ ಯುಗದ ನಂತರದ ಪ್ರಬಂಧಕಾರರು ಅದನ್ನು ತಮ್ಮ ವೈಯಕ್ತಿಕ ಚಿಂತನೆಗಳ ಅನಿಸಿಕೆಗಳ ಮಾಧ್ಯಮವನ್ನಾಗಿ ಮಾಡಿಕೊಂಡರು. ೨೦ನೆಯ ಶತಮಾನದ ಪ್ರಾರಂಭಕ್ಕೆ ಮತ್ತೊಮ್ಮೆ ಈ ಪ್ರಬಂಧ ಪ್ರಕಾರ ಹೊಸದಾಗಿ ಬೆಳೆದು ಬಂದಿತು. ಪತ್ರಿಕೆಗಳ ಒಡಲಲ್ಲಿ ಹುಟ್ಟಿ ಬರುವ ಈ ಸಾಹಿತ್ಯ ಹಾಸ್ಯ, ವಿಡಂಬನೆ ಮತ್ತು ವೈಯಕ್ತಿಕ ಅನುಭವಗಳನ್ನು ಉಪಯೋಗಿಸುತ್ತ ರಂಜಕವಾದ ಶೈಲಿಯಲ್ಲಿ ಮುಂದುವರಿಯಿತು. ಆದರೂ ಈ ಬರೆವಣಿಗೆ ತನ್ನ ಶಾಸ್ತ್ರವನ್ನು ಹುಟ್ಟಿಸಿಕೊಳ್ಳಲಿಲ್ಲ. ಸಾಹಿತ್ಯದಲ್ಲಿ ಬಹುಶಃ ಇದೊಂದು ಪ್ರಕಾರ ನಿಯಮರಾಹಿತ್ಯವನ್ನು ಪಾಲಿಸಿಕೊಂಡು ಬಂದಿದೆ. ಸ್ವರೂಪದ ಅಪೂರ್ಣತೆಯೇ ಸ್ವರೂಪದ ಲಕ್ಷಣವಾಗಿರುವ ಸಾಹಿತ್ಯಪ್ರಕಾರ ಇದಾಗಿದೆ.

ಹೊಸಗನ್ನಡದ ಪ್ರಬಂಧಕಾರರಲ್ಲಿ ವಿ.ಸೀ. ಅವರ ಹೆಸರು ಮಹತ್ತ್ವದ್ದಾಗಿದೆ. ಕನ್ನಡದಲ್ಲಿ ಬಗೆಬಗೆಯ ಹರಟೆಗಾರರಿಗೆ ಕೊರತೆ ಏನೂ ಇಲ್ಲ. ೧೯೩೪ರಲ್ಲಿ ಪ್ರಕಟವಾದ 'ಸುಳವು–ಹೊಳವು' ಎಂಬ ಪ್ರಬಂಧ ಸಂಕಲನದಲ್ಲಿ ಸುಮಾರು ಇಪ್ಪತ್ತಾರು (೨೬) ಪ್ರಬಂಧಗಳು ಪ್ರಕಟವಾಗಿವೆ. ಮಾಸ್ತಿ, ಸಂಪದ್ಗಿರಿರಾಯರು, ಟಿ. ರೂಬೆನ್, ವ್ಹಿ. ಜಿ. ಕುಲಕರ್ಣಿ ಮೊದಲಾದ ಕೆಲವು ಲೇಖಕರನ್ನು ಹೊರತು ಪಡಿಸಿದರೆ ಉಳಿದವರು ಕಾಲ ಕಾಲಕ್ಕೆ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ. ಆದಾದ ಮೇಲೆ ಕೆಲ ಬೇರೆ ಪ್ರಬಂಧಕಾರರೂ ಹುಟ್ಟಿ ಬಂದಿದ್ದಾರೆ. ಇಂಥ ವಿಪುಲವಾದ ಸಾಹಿತ್ಯದಲ್ಲಿಯೂ ವಿ.ಸೀ. ಅವರ ಪ್ರಬಂಧಗಳು ತಮ್ಮ ಧೀಮಂತಿಕೆಯಿಂದ, ಅಚ್ಚುಕಟ್ಟಾದ ವಿಷಯ ಮಂಡನದಿಂದ, ಎಲ್ಲಕ್ಕಿಂತ ಹೆಚ್ಚಾಗಿ ಅದರ ಅನನ್ಯವಾದ ಗದ್ಯಶೈಲಿಯಿಂದ ಮನಸೆಳೆಯುತ್ತವೆ.

## IV

ವಿ.ಸೀ. ಅವರ 'ಪಂಪಾಯಾತ್ರೆ' ಮೊದಲು ಪ್ರಕಟವಾದದ್ದು 'ಪ್ರಬುದ್ಧ ಕರ್ನಾಟಕ'ವಲ್ಲಿ. ಅದು ಪುಸ್ತಕರೂಪದಲ್ಲಿ ೧೯೨೮ರಲ್ಲಿ ಪ್ರಕಟಗೊಂಡಿತು. ಆಗ ಅದು ಸಾಕಷ್ಟು ಜನಪ್ರಿಯತೆಯನ್ನೂ ಪಡೆಯಿತು. ಈ ಜನಪ್ರಿಯತೆಗೆ ಮುಖ್ಯ ಕಾರಣವೆಂದರೆ ವಿ.ಸೀ. ಅವರ ಗದ್ಯಶೈಲಿ. ೧೯೨೫ರಲ್ಲಿ ವಿ.ಸೀ. ಅವರು ತಮ್ಮ ಹಿರಿಯ ಲೇಖಕ ಮಿತ್ರರೊಂದಿಗೆ ಬೆಳಗಾವಿಯ ಸಾಹಿತ್ಯ ಸಮ್ಮೇಳನದಿಂದ ಹಿಂದಿರುಗಿ ಬರುವಾಗ ಹಂಪೆಯನ್ನು ಸಂದರ್ಶಿಸಿದರು. ವಿ.ಸೀ. ಅವರಿಗೆ ಆಗ ಇನ್ನೂ ಇಪ್ಪತ್ತೇಳು ವರ್ಷ ವಯಸ್ಸು. ವಿಜಯನಗರದ ಆರುನೂರನೆಯ ವರ್ಷದ ಉತ್ಸವ ಹಂಪೆಯಲ್ಲಿ ನಡೆದದ್ದು ೧೯೩೬ರಲ್ಲಿ. ಆದರೆ ಅದಕ್ಕೂ ಮೊದಲೇ ಕನ್ನಡದ ಲೇಖಕರಿಗೆ ಹಂಪೆಯ ಹಾಳು ಪ್ರದೇಶ ನಮ್ಮ ಗತವೈಭವಕ್ಕೆ, ಕಳೆದು ಹೋದ ಒಂದು ಜೀವನ ಪದ್ಧತಿಗೆ ಒಂದು ಭವ್ಯ ಸಂಕೇತವಾಗಿತ್ತು. ವಿಜಯನಗರದ ದೀರ್ಘ ಇತಿಹಾಸದ ಎಲ್ಲ ವಿವರಗಳು ನಮಗಿನ್ನೂ ಗೊತ್ತಾಗಿಲ್ಲ. ಆಗ ಜಗತ್ತಿನಲ್ಲಿಯೇ ಅತ್ಯಂತ ದೊಡ್ಡದಾಗಿದ್ದ ಈ ಸಾಮ್ರಾಜ್ಯ ಯಾವ ಯಾವ ಪಾಪಕೃತ್ಯಗಳಿಂದ ಹಾಳಾಗಿ ಹೋಯಿತು ಎಂಬ ವಾಸ್ತವ ಸಂಗತಿ ನಮಗಿನ್ನೂ ಗೊತ್ತಾಗಬೇಕಾಗಿದೆ. ಆದರೆ ಅದೇ ಕಾರಣಕ್ಕಾಗಿ ಇಂದಿಗೂ ಹಂಪೆ ನಮ್ಮ ಮಟ್ಟಿಗೆ ಒಂದು ಭವ್ಯಪ್ರತೀಕವಾಗಿ ಉಳಿದಿದೆ. ನಮ್ಮ ಮೆಚ್ಚುಗೆಗೆ ಪಾತ್ರವಾಗಿರುವದು ಈ ಪ್ರತೀಕವೇ. ಒಂದು ವಾಸ್ತವ ಸಂಗತಿ ಪ್ರತೀಕವಾದಾಗ ಅದು ಸ್ವತಂತ್ರವಾದ ಅಸ್ತಿತ್ವವನ್ನು ಪಡೆದುಕೊಳ್ಳುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಮಹಾರಾಷ್ಟ್ರದ ಜನರಿಗೆ ಶಿವಾಜಿ ಮತ್ತು ಪೇಶವೆಯುವರ ಇತಿಹಾಸ ಆತ್ಮೀಯ ಮತ್ತು ಸಮೀಪದ್ದೆನಿಸುವಂತೆ ನಮಗೆ ವಿಜಯನಗರದ ಇತಿಹಾಸ ಆಗಲಿಲ್ಲ. ನಮಗೆ ವಿಜಯನಗರದ ಸಾಮ್ರಾಜ್ಯ ಬಹಳ ದೂರದ, ನಮ್ಮದಾದರೂ ನಮ್ಮದಲ್ಲದ ಒಂದು ಅಸಾಧಾರಣವಾದ ಮಾನುಷ ಸಿದ್ಧಿಯಾಗಿದೆ. ನಮ್ಮ ನವೋದಯ ಕಾಲದ ಲೇಖಕರನ್ನು ಆಕರ್ಷಿಸಿದ್ದು ಈ ಮಾನುಷಸಿದ್ಧಿ. ವಿ.ಸೀ. ಅವರ ಮನಸ್ಸು ಈ ವಾತಾವರಣದಿಂದ ಆಕರ್ಷಿತವಾದದ್ದು ಸಹಜವಾಗಿತ್ತು. ಹಂಪೆಯ ಭಗ್ನಾವಶೇಷಗಳನ್ನು ನೋಡಿ ಆ ಕಾಲದ ಇತಿಹಾಸವನ್ನು ಮನಸ್ಸಿನಲ್ಲಿ ಪೂರ್ಣಗೊಳಿಸಿಕೊಳ್ಳುವುದು ಇನ್ನೊಂದು ಬಗೆಯ ಲೀಲೆ. ಇದಕ್ಕಾಗಿ ಮರೆತುಹೋದದ್ದನ್ನು ಪುನಃಸೃಷ್ಟಿಸಿಕೊಳ್ಳುವ ಒಂದು ಪ್ರತಿಭೆ ಬೇಕು.

ವಿ.ಸೀ. ಅವರ ಬರವಣಿಗೆ ಲಲಿತವಾಗಿ, ಹಗುರುಗತ್ತಿನಿಂದ ಪ್ರಾರಂಭವಾಗುತ್ತದೆ. ದಿನವೆಲ್ಲ ಹಂಪೆಯ ಹಾಳುಗುಡಿಗಳನ್ನು ನೋಡಿಕೊಂಡು ಬಂದು ವಿರೂಪಾಕ್ಷನ ದೇವಸ್ಥಾನದಲ್ಲಿ ಈ ಐವರು ಪ್ರವಾಸಿಗರ ಮಲಗುವ ತಯಾರಿ ನಡೆದಿದೆ. ಹಂಪೆಯ ಹಾಳಿನಲ್ಲಿ ಸುಖವಾಗಿ ವಾಸ ಮಾಡುವ ಚೇಳು ಮತ್ತು ಮಂಡರಗಪ್ಪೆಗಳ ದರ್ಶನದಿಂದ ಇವರಿಗೆ ನಿದ್ದೆ ಬರುವಂತಿಲ್ಲ. ಪ್ರವಾಸಕ್ಕೆ ಬಂದಿರುವ ಈ ಐದೂ ಜನ ಸ್ನೇಹಿತರು ಕನ್ನಡ ಸಾಹಿತ್ಯದಲ್ಲಿ ಹೆಸರು ಮಾಡಿದ ನವೋದಯ ಕಾಲದ ಪ್ರಮುಖರೆಂದು

ಗೊತ್ತಾದಾಗ ಈ ಬರೆವಣಿಗೆಯ ರುಚಿ ಇನ್ನೂ ಹೆಚ್ಚಾಗುತ್ತದೆ. ಪಂಪನ 'ವಿಕ್ರಮಾರ್ಜುನ ವಿಜಯ'ವನ್ನು ಸಂಪಾದಿಸಿದ ಬೆಳ್ಳಾವೆ ವೆಂಕಟನಾರಣಪ್ಪನವರು ಅಡಿಗೆ ಮಾಡುತ್ತಿದ್ದರೆಂದು ಗೊತ್ತಾದಾಗ ಅಡಿಗೆಯ ರುಚಿಗಿಂತ ಪಂಪಭಾರತದ ಸಂಪಾದನೆಯಲ್ಲಿ ಮಾನವೀಯ ಮೌಲ್ಯ ಗೋಚರವಾಗುತ್ತದೆ. ಈ ಪ್ರವಾಸದಲ್ಲಿ ಅವರೇ 'ಯಜಮಾನರು', 'ರಾಯರು' ಎಂದು ಹೆಸರುಗೊಂಡ ಡಿ. ವ್ಹಿ. ಗುಂಡಪ್ಪನವರು, 'ವೆಂಕಟೇಶಯ್ಯ' ಎಂಬ ತೆಳ್ಳಗಾದ ಅಭಿಧಾನದ ಮರೆಯಲ್ಲಿರುವ ಟಿ. ಎಸ್. ವೆಂಕಣ್ಣಯ್ಯನವರು, ಮತ್ತು 'ಮೂರ್ತಿ' ಎಂದು ಸಂಕ್ಷಿಪ್ತಗೊಂಡ ಹೆಸರಿನ ಶ್ರೀನಿವಾಸಮೂರ್ತಿಗಳು—ಇವರೂ ನಗುತ್ತ, ಕೆಲೆಯುತ್ತ ಚೇಳು, ಮಂಡರಗಪ್ಪೆಗಳಿಗೆ ಹೆದರುವ ಮನುಷ್ಯರಾಗಿ ಕಾಣುತ್ತಾರೆ. ಡಿ. ವ್ಹಿ. ಗುಂಡಪ್ಪನವರು ತಮ್ಮ 'ವಿದ್ಯಾರಣ್ಯ ವಿಜಯ' ನಾಟಕವನ್ನು ಈ ಮೊದಲೇ ಬರೆದು ಮುಗಿಸಿರಬೇಕು. 'ಪಂಪಾಯಾತ್ರೆ'ಯಲ್ಲಿ ಅವರು 'ವಿದ್ಯಾರಣ್ಯ ಸ್ತೋತ್ರ'ವನ್ನು ವಿದ್ಯಾರಣ್ಯರಿಗೆ ಅರ್ಪಿಸಿದರೆಂದು ವರ್ಣನೆಯಿದೆ. ಶ್ರೀನಿವಾಸಮೂರ್ತಿಯವರು 'ನಾಗರಿಕ' ನಾಟಕ ಈ ಪ್ರವಾಸ ಮುಗಿದ ಮೇಲೆ ಬರೆದರು. ವಿ.ಸೀ. ಅವರು ಮಾತ್ರ ಬರೆದದ್ದು 'ಪಂಪಾಯಾತ್ರೆ'ಯನ್ನು. ಆದರೆ 'ಪಂಪಾಯಾತ್ರೆ'ಯಲ್ಲಿ ಈ ಸಾಹಿತ್ಯೋದ್ದೇಶ ಅಥವಾ ಫಲಶ್ರುತಿಯ ಸೊಗಡು ಕೂಡ ಇಲ್ಲ. ಪಂಪಾಯಾತ್ರೆ ಒಂದು ದೃಷ್ಟಿಯಿಂದ ನಿರುದ್ದಿಶ್ಯವಾದ ಪ್ರವಾಸ. ಈ ಪ್ರವಾಸದಲ್ಲಿದ್ದವರು ವಿಜಯನಗರದ ಇತಿಹಾಸವನ್ನು—ಅದು ಲಭ್ಯವಿದ್ದಷ್ಟು—ಅಕ್ಷರಶಃ ಬಲ್ಲವರು. ಆದ್ದರಿಂದ ಅವರು ವಾತಾವರಣಕ್ಕೆ ಸ್ಪಂದಿಸುವಾಗ ಅದರಲ್ಲಿ ಸಾಹಿತ್ಯಿಕ ಪ್ರತಿಧ್ವನಿಗಳು ಕೇಳಿ ಬಂದರೆ ಆಶ್ಚರ್ಯವೇನಿಲ್ಲ. ಪಂಪಾ ಸರೋವರ, ಕಿಷ್ಕಿಂಧೆ, ವಾಲಿಯ ಭಂಡಾರ, ಮಾನೋಮಿ ದಿಬ್ಬ, ವಿಜಯವಿಠ್ಠಲನ ದೇವಸ್ಥಾನ ಮೊದಲಾದವು ಇವರ ಪೌರಾಣಿಕ ಮತ್ತು ಐತಿಹಾಸಿಕ ಸ್ಮೃತಿಗಳನ್ನು ಜಾಗರಿಸುತ್ತವೆ. ಹಾಳು ಹಂಪೆಯ ಸ್ಮೃತಿಗಳು ಮತ್ತು ಈ ಸುಸಂಸ್ಕೃತರ ಸಾಹಿತ್ಯ ಪ್ರಜ್ಞೆ ಇವುಗಳ ನಡುವೆ ಗ್ರಂಥದ ತುಂಬ ಸಂವಾದ ನಡೆಯುತ್ತದೆ.

ಆದರೆ ನಿಶ್ಶಬ್ದವಾಗಿ ನಡೆದಿರುವ ಈ ಸಂವಾದವನ್ನು ಮುಖರವಾಗಿ ಮಾಡುವ ಪ್ರಯತ್ನವನ್ನು ವಿ.ಸೀ. ಅವರ ಬರೆವಣಿಗೆ ಮಾಡುವುದೇ ಇಲ್ಲ. ಸನ್ಯಾಸಿಯ ದಿಬ್ಬದ ನಿರ್ಜನತೆ ಮತ್ತು ದುರ್ಗಮತೆಗಳಿದ ಆಕರ್ಷಿತರಾದ ರಾಯರು ಆ ದಿಬ್ಬವನ್ನು ಅಂತರ್ಮುಖರಾಗಿ ನೋಡುತ್ತ ನಿಂತರು. ಆದರೆ ಅವರ ಮನಸ್ಸಿನಲ್ಲಿ ನಡೆದಿರಬಹುದಾದ ವಿಚಾರ ಮಥನ ಯಾವದೆಂಬುದು ಗೊತ್ತಾಗುವದಿಲ್ಲ. ವಿ.ಸೀ. ಅವರು 'ಪಂಪಾಯಾತ್ರೆ'ಯ ಲೇಖಕರಾಗಿರುವುದರಿಂದ ತಮ್ಮ ಸ್ವಂತದ ವೈಚಾರಿಕ ಪ್ರತಿಸ್ಪಂದನವನ್ನು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಪಂಪಾಸರೋವರದ ರಮಣೀಯತೆ, ವಿಜಯ ವಿಠ್ಠಲನ ದೇವಸ್ಥಾನದ ವಿಸ್ಮಯಕಾರಿಯಾದ ಶಿಲ್ಪಕಲೆ, ಋಷ್ಯಮೂಕ ಅಂಜನಾದ್ರಿಯ ಸುತ್ತಮುತ್ತಲಿನ ಪ್ರದೇಶದ ಶಕ್ತಿಪೂರ್ಣವಾದ ನದಿಯ ಮೌನ ಇವುಗಳನ್ನು ಚೆನ್ನಾಗಿಯೆ ಸೆರೆಹಿಡಿದಿದ್ದಾರೆ. ಹಾಳು ಹಂಪೆಯ ಸಜೀವ ಸ್ಮೃತಿಗಳ ವಿರುದ್ಧವಾಗಿ ಆನೆಗೊಂದಿಯ ಜೀವನದ ಲವಲವಿಕೆ ಅವರಿಗೆ ಅರ್ಥಹೀನವಾಗಿ,

ಮೃತವಾಗಿ ಕಾಣುತ್ತದೆ. ಅಲ್ಲದೆ ಅವರು ತಮ್ಮ ಪ್ರತಿಸ್ಪಂದನವನ್ನು ಕನಸುಗಳ ಮೂಲಕವಾಗಿಯೂ ವ್ಯಕ್ತಪಡಿಸಿದ್ದಾರೆ. ಈ ಕನಸುಗಳ ಬಣ್ಣ ಮಾತ್ರ ಕೃತಕವಾದದ್ದು. ಈ ಕನಸುಗಳ ಸುಸಂಬದ್ಧತೆಯೇ ಮೊದಲು ಸಂಶಯ ಹುಟ್ಟಿಸುವಂಥದ್ದಾಗಿದೆ. ಇವು ನಿಜವಾದ ಕನಸುಗಳಾಗಿದ್ದರೆ ಬೆಂಗಳೂರಿನ ಸಾಲ್ಮರಗಳ ರಸ್ತೆಯಗುಂಟ ಹೋಗಿ ಮಾನೋಮಿ ದಿಬ್ಬವನ್ನು ಏರಿ ಕೂಡಬೇಕಾಗಿತ್ತು; ರಾಮರಾಯ ವೆಂಕಟೇಶಯ್ಯನವರಂತೆ, ಕೃಷ್ಣದೇವರಾಯ ಬೆಳ್ಳಾವೆ ವೆಂಕಟನಾರಣಪ್ಪನವರಂತೆ ಕಾಣಬೇಕಾಗಿತ್ತು. ವಿಜಯನಗರದ ಇತಿಹಾಸವನ್ನು ನಿರೂಪಿಸುವ ಸಾಕ್ಷಿಚಿತ್ರವಾಗಿ ಕಾಣಬೇಕಾಗಿರಲಿಲ್ಲ.

ಇದೇ ಕಾರಣಕ್ಕಾಗಿ 'ಪಂಪಾಯಾತ್ರೆ'ಯಲ್ಲಿಯ ರಸವತ್ತಾದ ಭಾಗಗಳು ಬೇರೆ ತೆರನಾಗಿವೆ. ಯಜಮಾನರ ಕಟ್ಟುನಿಟ್ಟು, ರಾಯರ ಸ್ವತಂತ್ರ ಮನೋಭಾವಗಳಿಂದ ಸಜೀವವಾಗುವ ಸನ್ನಿವೇಶಗಳು, ಕೊಳಗದಪ್ಪಲೆ ತುಂಬ ಕಾಫಿ ಮಾಡಿ ಕುಡಿಯುವ ಮತ್ತು ಒಲ್ಲದ ಕೆಲಸಗಳನ್ನು ಮಾಡಬೇಕಾಗಿ ಬಂದ ಪ್ರಸಂಗಗಳು, ಸುರಿಯುವ ಮಳೆಯಲ್ಲಿ ಕೊಡೆ ಮತ್ತು ಚಪ್ಪಲಿಗಳು ಕೈ ಕೊಟ್ಟದ್ದು—ಇವೆಲ್ಲ ತಮ್ಮ ಸಾಮಾನ್ಯತೆಯಿಂದಲೇ ಅಸಾಮಾನ್ಯವಾದ ಪರಿಣಾಮವನ್ನು ಬೀರುತ್ತವೆ. ಮಳೆಯಿಂದ ತಪ್ಪಿಸಿಕೊಳ್ಳಲು ಆಲೆಮನೆಯೊಂದನ್ನು ಆಶ್ರಯಿಸಿದಾಗ ಅಲ್ಲಿ ನೆರೆದಿದ್ದ ಅಪರಿಚಿತರ ಗುಂಪು ಮತ್ತು ಅವರ ಚಟುವಟಿಕೆಗಳು—ಇದರ ವರ್ಣನೆ ಅತ್ಯಂತ ಧ್ವನಿಪೂರ್ಣವಾಗಿದೆ. ವಿದ್ಯಾರಣ್ಯರು, ಹುಕ್ಕಬುಕ್ಕರು, ಕೃಷ್ಣದೇವರಾಯ ಮತ್ತು ರಾಮರಾಯ ಇಂಥ ಐತಿಹಾಸಿಕ ವ್ಯಕ್ತಿಗಳ ಅಸಾಮಾನ್ಯವಾದ ಸತ್ವ ಸಾಮರ್ಥ್ಯಗಳನ್ನು ಅಣಕಿಸುವಂಥ ಈ ಸಾಮಾನ್ಯರ ಜೀವನಸತ್ವವೇನೂ ಸಾಮಾನ್ಯವಲ್ಲ. ಜೀವನ ಇತಿಹಾಸವಾಗುವುದು ಯಾವಾಗ, ಹೇಗೆ ಮತ್ತು ಅದರ ಕಾರಣಗಳೇನಿರಬಹುದೆಂದು ಈ ವರ್ಣನೆ ಮೌನವಾಗಿ ಚಿಂತಿಸುವಂತಿದೆ. ಮಳೆ, ಗಾಳಿ, ಕತ್ತಲೆಗಳಲ್ಲಿ ಚನ್ನಯ್ಯನ ಬೀಡಿಯ ಬೆಳಕು ಆಶಾದಾಯಕವಾಗಿರಬೇಕಾದರೆ ಜೀವನದ ಕಿಡಿ ಎಷ್ಟು ಅಮೂಲ್ಯವಾದದ್ದು ಎಂದು ಈ ವರ್ಣನೆ ಸೂಚಿಸುವಂತಿದೆ. ಇತಿಹಾಸವನ್ನು ಪುನಃಸೃಷ್ಟಿಸಿದಾಗ ವಿ.ಸೀ. ಅವರ ಗದ್ಯಶೈಲಿ ಕೃತಕವಾಗಿದೆ; ಪಂಪಾಸರೋವರದ ಸುತ್ತಲಿನ ಪುರಾಣಸ್ಮೃತಿಗಳಲ್ಲಿಯೂ ಜೀವವಿಲ್ಲ. ಆದರೆ ಹಂಪೆಯ ಪರಿಸರದಲ್ಲಿಯ ದಿನನಿತ್ಯದ ಬದುಕನ್ನು ಚಿತ್ರಿಸಿದಾಗ ಅವರ ಗದ್ಯಶೈಲಿ ಸಜೀವವಾಗುತ್ತದೆ.

ಗದ್ಯಶೈಲಿಯಲ್ಲಿಯ ಈ ವಿಷಮತೆಗೆ ಕಾರಣಗಳನ್ನು ಕುರಿತು ಚಿಂತಿಸುವುದು ಕೂಡ ಒಂದು ಪ್ರಯೋಜನಕಾರಿಯಾದ ಮತ್ತು ಕುತೂಹಲವನ್ನು ಹುಟ್ಟಿಸುವ ವಿಷಯವಾಗಿದೆ. ಇದಕ್ಕೆ ಮುಖ್ಯ ಕಾರಣ—ನನಗೆ ತಿಳಿದ ಮಟ್ಟಿಗೆ —ವಿಷಯಗಳನ್ನು ಕುರಿತು ಬರೆಯುವಾಗ ವಿ.ಸೀ. ಅವರು ಅರ್ಥವಿಸತೊಡಗುತ್ತಾರೆ. ಅರ್ಥವಿಸುವ ಕ್ರಿಯೆ—ಅದು ಎಷ್ಟು ಚಾತುರ್ಯದಿಂದ ಕೂಡಿದ್ದರೂ—ಅಪೂರ್ಣವಾದ ಪ್ರಕ್ರಿಯೆಯಾಗಿದೆ. ಇತಿಹಾಸವನ್ನು ತಾತ್ಪೂರ್ವಿಕವಾಗಿ ರೂಢಿಗ್ರಸ್ತವಾದ ಪ್ರತಿಮೆಗಳಿಂದ ಪುನಃಸೃಷ್ಟಿಸಿ ಒಂದು ಸೋದ್ದಿಶ್ಯವಾದ ವಿವರಣೆಯನ್ನು ಕೊಡಲಾಗಿದೆ. ಇಲ್ಲಿ ಹಾಳು

ಹಂಪೆಯ ಐತಿಹಾಸಿಕ ಚಿತ್ರಮಾಲೆಯ ಉದ್ದೇಶವೆಂದರೆ ನಾಡಿನ ಅಭಿಮಾನವನ್ನು ಜಾಗೃತಗೊಳಿಸುವದು. ವಿಜಯ ವಿಠ್ಠಲನ ದೇವಸ್ಥಾನ ಈ ಸಾಮ್ರಾಜ್ಯದ ಒಂದು ಉತ್ಕೃಷ್ಟವಾದ ಸಾಂಸ್ಕೃತಿಕ ಫಲವಾಗಿದ್ದರೆ, ಹಂಪೆಯ ವಿರೂಪಾಕ್ಷ ಹರಿಹರ ರಾಘವಾಂಕರಂಥ ಶ್ರೇಷ್ಠ ಕವಿಗಳ ಉಪಾಸ್ಯದೈವವಾಗಿದ್ದರೆ, ಇದಕ್ಕೆ ವಿಪರೀತವಾಗಿ ಸಾಮ್ರಾಜ್ಯದ ಅವನತಿಗೆ ಬೀಜವಾಗಿದ್ದ ಅಕ್ಷಮ್ಯವಾದ ರಾಜಗರ್ವವೂ ಇನ್ನೊಂದು ಕಡೆಗಿದೆ. ವಿ.ಸೀ. ಅವರ ಬರೆವಣಿಗೆ ಇಂಥ ವಿನಾಶದ ಕಾರಣಮೀಮಾಂಸೆಯನ್ನು ದುರ್ಲಕ್ಷಿಸಿ ಮುಂದುವರಿಯುತ್ತದೆ.

ಆದರೆ ಸಮಕಾಲೀನವಾದ, ದಿನನಿತ್ಯದ ಬದುಕನ್ನು ಕುರಿತು ಬರೆಯುವಾಗ ವೈಚಾರಿಕತೆ ಇಲ್ಲದಿರುವದೇ ಬರೆವಣಿಗೆಯ ಶಕ್ತಿಯಾಗಿದೆ. ಅಕಸ್ಮಾತ್ತಾಗಿ ಸುರಿದ ಮಳೆ, ಗಾಳಿ, ಕತ್ತಲೆ, ಯಾರದೋ ಆಲೆಮನೆಯಲ್ಲಿ ನೆರೆದ ಅಪರಿಚಿತರು, ಚನ್ನಯ್ಯನ ಕಟ್ಟಕಡೆಯ ಬೀಡಿಯ ಬೆಳಕು, ಹಿರಿಯರ ಮೌನ ಇವೆಲ್ಲ ಪ್ರತಿಮೆಗಳೇ ಹೊರತು ವಿಚಾರಗಳಲ್ಲ. ಪ್ರತಿಮೆಗಳು ಯಾವಾಗಲೂ ನಿರ್ವಿವಾದವಾದವುಗಳು. ಪ್ರವಾಸಿಗರನ್ನು ವಿಜಯ ವಿಠ್ಠಲ ದೇವಸ್ಥಾನದಲ್ಲಿ ಬಿಟ್ಟು ಹುಳಿ ಮಾವಿನ ಕಾಯಿಗಳನ್ನು ತಾನು ತಿಂದು ಮಂಗಗಳಿಗೂ ಹಂಚುವ ಮಾರ್ಗದರ್ಶಿ ಚನ್ನಯ್ಯ ವಿಜಯನಗರ ಸಾಮ್ರಾಜ್ಯ ವೈಭವಕ್ಕಿಂತ ಹೆಚ್ಚು ಮಹತ್ವದ ಸಜೀವ ಪ್ರತಿಮೆಯಾಗಿದ್ದಾನೆ. ಪ್ರವಾಸವೆಲ್ಲ ಮುಗಿದು ಹೊಸಪೇಟೆಯ ಸ್ಟೇಷನ್ನಿನಲ್ಲಿ ವಿ.ಸೀ. ಅವರು ಒಂದಾದ ಮೇಲೊಂದು ಕಪ್ಪುಗಳಂತೆ ಟೀ ಕುಡಿಯುತ್ತಾರೆ. ಬಹಳ ಅರ್ಥಪೂರ್ಣವಾದ ಕ್ರಿಯೆ ಇದಾಗಿದೆ. ಸಾಮ್ರಾಜ್ಯದ ನೆನಪಿಗೆ ಒಂದು ನಿಟ್ಟುಸಿರಿನ ಕಾಣಿಕೆಯನ್ನು ಸಲ್ಲಿಸಿ ತೃಪ್ತಿಯಾಗುವಂತೆ ಟೀ ಕುಡಿಯುವದು ಅರ್ಥಪೂರ್ಣವಾದ ಘಟನೆಯಾಗಿದೆ. ಒಂದು ಕನಸಿನ ಪ್ರಪಂಚವನ್ನು ಹೊಕ್ಕು ಅದರಲ್ಲಿಯೇ ತನ್ಮಯವಾಗಿದ್ದಾಗ, ನಿದ್ದೆ ಮುಗಿದು ತಿರುಗಿ ಎಚ್ಚರಕ್ಕೆ ಬಂದಂತೆ ಈ ಸನ್ನಿವೇಶ ರಚನೆಯಿದೆ. ರೇಲಗಾಡಿಯಲ್ಲಿ ಕುಳಿತು ಊರ ಕಡೆಗೆ ಮುಖಮಾಡಿ ಪ್ರಯಾಣ ಮಾಡುವಾಗ ಯಜಮಾನರು 'ಊರ ಕಡೆ ಹೇಗಿದೆಯೋ, ಊರು ಬಿಟ್ಟು ಹತ್ತು ಹನ್ನೆರಡು ದಿನಗಳಾಗುತ್ತ ಬಂತು' ಎಂದು ಉದ್ಗಾರ ತೆಗೆಯುತ್ತಾರೆ. "ಯಾತ್ರೆ ಮುಗಿಯಿತು"—ಇದು ಈ ಗ್ರಂಥದ ಕೊನೆಯ ವಾಕ್ಯವಾಗಿದೆ. ಈ ಐದು ಲೇಖಕರ ಪಂಪಾಯಾತ್ರೆಯು ಮುಗಿತಾಯವೆಂದರೆ ಒಂದು ಕಾಲಕ್ಕೆ ನಡೆದುಹೋದ 'ಪಂಪಾಯಾತ್ರೆ'ಯ ಮುಗಿತಾಯವೂ ಹೌದು ಎಂಬುದರ ಅರಿವಾಗುತ್ತದೆ.

## V

'ಬೆಳುದಿಂಗಳು' ಮತ್ತು 'ಸೀಕರಣೆ' ಇವು ವಿ.ಸೀ. ಅವರ ಎರಡು ಪ್ರಬಂಧ ಸಂಕಲನಗಳು. ಮೊದಲ ಪುಸ್ತಕ 'ಬೆಳುದಿಂಗಳು' ೧೯೫೯ರಲ್ಲಿ ಪ್ರಕಟವಾಗಿದ್ದರೂ ಅದರಲ್ಲಿಯ ಪ್ರಬಂಧಗಳನ್ನು ಅವರು ಇಪ್ಪತ್ತೈದು ಮೂವತ್ತು ವರ್ಷಗಳ ಹಿಂದೆಯೇ

ಬರೆದಿದ್ದರು. 'ಶೀಕರಣೆ' ಪ್ರಕಟವಾದದ್ದು ೧೯೭೦ರಲ್ಲಿ. ಅಂದರೆ ಮೊದಲ ಸಂಗ್ರಹದ ಪ್ರಬಂಧಗಳಿಗೂ ಎರಡನೆಯ ಸಂಗ್ರಹದ ಪ್ರಬಂಧಗಳಿಗೂ ಇರುವ ಅಂತರ ಸುಮಾರು ನಾಲ್ವತ್ತು ವರ್ಷಗಳು. ವಿ.ಸೀ. ಅವರ ಪ್ರಾರಂಭದ ಹರಟೆಗಳಲ್ಲಿ ಇನ್ನೂ ಅಪರಿಪಕ್ವತೆ ಇದೆ. 'ಬೆಳುದಿಂಗಳು' ಎಂಬ ಹರಟೆಯನ್ನೇ ಓದಿದರೆ ಅದರ ಅಪರಿಪೂರ್ಣತೆಯ ಅರಿವಾಗಬಲ್ಲದು. ಚಂದ್ರ, ಬೆಳುದಿಂಗಳು ಮೊದಲಾದ ಕಾವ್ಯವಸ್ತುಗಳನ್ನು ಉಪಯೋಗಿಸಿಕೊಂಡು, ಅಲ್ಲಲ್ಲಿ ಕವಿಸೂಕ್ತಿಗಳನ್ನು ಉದ್ಧರಿಸುತ್ತ ಕಟ್ಟಿದ ಪ್ರಬಂಧ ಅದು. ಅದರ ವಾಚ್ಯಾರ್ಥ ಎಷ್ಟು ತೆಳ್ಳಗಾಗಿದೆಯೆಂದರೆ ವಾಚ್ಯಾರ್ಥದ ಮೂಲಕವಾಗಿ ಅವರ ಹಿಂದೆ ಮತ್ತೇನೂ ಇಲ್ಲವೆಂಬುದು ಸ್ಪಷ್ಟವಾಗುತ್ತದೆ.

ಈ ಸಂಕಲನದ ಮೊದಲ ಪ್ರಬಂಧ 'ಮೈಸೂರು ರುಮಾಲು' ಎಂಬುದು. ಈ ಪ್ರಬಂಧವನ್ನು ವಿ.ಸೀ. ಅವರು ೧೯೨೬ರಲ್ಲಿಯೇ ಬರೆದಿದ್ದರು. ಆದರೂ ಈ ಪ್ರಬಂಧದ ಹೊಸತನ ಇನ್ನೂ ಮಾಸಿಲ್ಲ. ಇದನ್ನು ಬರೆದು ಎಷ್ಟೋ ವರ್ಷಗಳಾದ ಮೇಲೆ ಬರೆದ 'ಬೆಳುದಿಂಗಳು' ಯಾಕೆ ಸಪ್ಪಗಾಗಿ ಕಾಣುತ್ತದೆ? ಮೈಸೂರು ರುಮಾಲು ತಾನಾಗಿಯೇ ಒಂದು ಸಶಕ್ತವಾದ ಪ್ರತೀಕವಾಗಿ ಒಂದು ಜನಾಂಗದ ಸಂಸ್ಕೃತಿಯನ್ನು ಸಮಗ್ರವಾಗಿ ಧ್ವನಿಸುತ್ತದೆ. ಈ ಮೊದಲೇ ಹೇಳಿದಂತೆ ಪ್ರತಿಮೆಗಳು, ಪ್ರತೀಕಗಳು ಯಾವಾಗಲೂ ನಿರ್ವಿವಾದವಾದವುಗಳು. ಮೈಸೂರು ರುಮಾಲು ಇರುವಿಕೆಯ ರೀತಿಯನ್ನು ಪ್ರಕಟಿಸಲು ತವಕಿಸಿದರೆ ಎದುರು ಮಾತಿಲ್ಲ, ಯಾಕೆಂದರೆ ಮೈಸೂರು ರುಮಾಲು ಒಂದು ಅಭಿಪ್ರಾಯವಲ್ಲ, ವಿಚಾರವಲ್ಲ. ಲಲಿತ ಸಾಹಿತ್ಯ ಬೆಳೆಯುವದು ಇಂಥ ಪ್ರತೀಕಗಳಿಂದ.

> ಕಾಲಿಗೆ ಕಾಶಿಯಾತ್ರೆಯ ಜೋಡು; ನಿರಿ ತೀಡಿ ಕಚ್ಚೆ ತಿದ್ದಿ ಕಾಲು ತುಂಬ ಉಟ್ಟ ಬೆಳ್ಳನೆಯ ಅಂಚಿನ ಪಂಚೆ; ಬೆರಳಿಗೆ ಹರಳಿನ ಉಂಗುರ; ಒಂದು ಕೈಯಲ್ಲಿ ರೇಷ್ಮೆಯ ವಸ್ತ್ರ, ನಸ್ಯದ ಡಬ್ಬಿ; ಇನ್ನೊಂದರಲ್ಲಿ ಬೆತ್ತ ಅಥವಾ ಛತ್ರಿ; ತುಂಬು ಕುತ್ತಿಗೆಯ ಅಂಗಿ; ಕಂಕುಳುದೂರಿ ಭುಜವೇರಿ ಹಿಂದೆ ಮುಂದೆ ಮರ್ಯಾದೆಯಿಂದ ಈಸಾಡುವ ಉತ್ತರೀಯ! ಕಿವಿಯ ಕಡುಕು, ತಿರುವು ಮೀಸೆ; ಹಣೆಗೆ ಅಕ್ಷತೆ; ಕೋರು ರುಮಾಲು! ದೇವೇಂದ್ರನಿಗೆ ಕಳೆಕೊಡಬಲ್ಲವುಗಳು.

ಇಂಥ ಬರೆವಣಿಗೆಯ ಯಶಸ್ಸಿಗೆ ಕಾರಣವೆಂದರೆ ಬರೆವಣಿಗೆ ಕಾವ್ಯದ ನಿಯಮಗಳನ್ನು ಅನುಸರಿಸುತ್ತದೆ. ಇಲ್ಲಿಯ ವಿವರಗಳೆಲ್ಲ ಪ್ರತಿಮೆಗಳೇ. ಈ ಪ್ರತಿಮೆಗಳ ಹೊಂದಾಣಿಕೆ ಕೂಡ ಕಾವ್ಯದ ನಿಯಮಕ್ಕೆ ಅನುಗುಣವಾಗಿದೆ. ಕಾವ್ಯದಲ್ಲಿ ಪ್ರತಿಮೆಗಳು ವಿಚಾರಗಳು ತವಕ ಪಡುವದಿಲ್ಲ. ಕೊನೆಯ ವಾಕ್ಯ ಕೂಡ ಒಂದು ನಿರ್ಣಯದಂತೆ ಕಂಡು ಬಂದರೂ ಅದು ನಿರ್ಣಯವಲ್ಲ. ಪ್ರತಿಯೊಂದು ವಿವರದ ಪ್ರತ್ಯೇಕವಾದ ಸೌಂದರ್ಯ ಕೊನೆಯ ವಾಕ್ಯದಲ್ಲಿ ಒಟ್ಟುಗೂಡಿವೆ. ದೇವೇಂದ್ರನ ಪ್ರತಿಮೆ ಈ ಎಲ್ಲ ಸೌಂದರ್ಯವನ್ನು ಒಳಗೊಂಡು ಅದನ್ನು ಮೀರಿ ಹೋಗುವ ಸೌಭಾಗ್ಯವನ್ನು ಪಡೆದಿದೆ.

ಉಪಮೇಯಕ್ಕಿಂತ ಹೆಚ್ಚಿನ ಸತ್ವ ಸೌಂದರ್ಯಗಳನ್ನು ಹೊಂದಬೇಕಾಗುವದು ಉಪಮಾನದ ಸ್ವಭಾವ ಮತ್ತು ಧರ್ಮವಾಗಿದೆ.

ಮೇಲೆ ಉದ್ಧರಿಸಿದ ಗದ್ಯಭಾಗದಲ್ಲಿ ಇನ್ನೊಂದು ವಿಶೇಷತೆ ಇದೆ. ಇಲ್ಲಿಯ ಗದ್ಯ ಬೇರೆ ಬೇರೆ ಗತಿಗಳನ್ನು ಅನುಸರಿಸುತ್ತದೆ. ವಾಕ್ಯ ಭಾಗಗಳು ಮೊದಲು ಸ್ವಲ್ಪ ದೀರ್ಘವಾಗಿದ್ದು ಕ್ರಮವಾಗಿ ಚಿಕ್ಕವಾಗುತ್ತ ಹೇಳಬೇಕಾದದ್ದನ್ನು ಗುರಿ ತಾಗುವಷ್ಟು ಖಚಿತವಾಗಿಸುತ್ತದೆ. ವಿ.ಸೀ. ಅವರ ಕಾವ್ಯರಚನೆಯಲ್ಲಿ ಕೂಡ ವಾಕ್ಯಗಳಿಗೆ ಈ ಗತಿ ವಿನ್ಯಾಸವಿರುವುದಿಲ್ಲ. ಅವರ ಕಾವ್ಯದಲ್ಲಿಯಂತೆ ಇಲ್ಲಿಯೂ ವಾಗ್ಮಿತೆಯಿದೆ. ವಾಗ್ಮಿತೆಯ ಮುಖ್ಯ ಕೆಲಸವೆಂದರೆ ಆಗಿಂದಾಗ ಅರ್ಥವನ್ನು ಸೃಷ್ಟಿಸುವದು. ಇಲ್ಲಿ ಆ ಪ್ರಯತ್ನ ಯಶಸ್ವಿಯಾಗುತ್ತದೆ.

'ಮೈಸೂರು ರುಮಾಲು' ಪ್ರಬಂಧದ ವಸ್ತು ಈಗ ಹಳೆಯದಾಯಿತೆಂದು ವಿ.ಸೀ.ಯವರು ಎರಡನೆಯ ಆವೃತ್ತಿಯ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಸಾಹಿತ್ಯಕೃತಿ ಕೇವಲ ಸಮಕಾಲೀನವಾಗಬೇಕೆಂದು ಹಟವಿದ್ದವರು ಅವರ ಮಾತನ್ನು ಒಪ್ಪಬಹುದು. ಸಾಹಿತ್ಯದ ಬಗ್ಗೆ ನಮ್ಮ ಧೋರಣೆಗಳು ಬದಲಾಗಿವೆಯೆಂಬುದಕ್ಕೆ ಇದೊಂದು ನಿದರ್ಶನ ಅಷ್ಟೇ. ಆದರೆ ಅದಕ್ಕಿಂತ ಹೆಚ್ಚಾಗಿ ವಿ.ಸೀ. ಅವರನ್ನು ಜೀವಮಾನದುದ್ದಕ್ಕೂ ಕಾಡಿದ್ದ ಆತಂಕವೆಂದರೆ ಇದೇ. ಸಾಹಿತಿ ಒಬ್ಬನೇ ಅಲ್ಲ, ಯಾವ ಮನುಷ್ಯನೂ ಸೃಜನಶಕ್ತಿ ನಿಲ್ಲುವ ತನಕ ಹಳಬನಾಗುವದಿಲ್ಲ. ಕೆಲವರು ಇಪ್ಪತ್ತೈದು ವರ್ಷಗಳಿಗೇ ಹಳಬರಾಗಬಹುದು, ಇನ್ನು ಕೆಲವರು ಸಾಯುವವರೆಗೆ ಹಳಬರಾಗುವುದಿಲ್ಲ. ಸೃಜನಶಕ್ತಿ ಯಾವಾಗ ನಿಂತು ಹೋಗುತ್ತದೋ ಹೇಳಬಲ್ಲವರಾರು? ಅದೇನೇ ಇದ್ದರೂ 'ಮೈಸೂರು ರುಮಾಲು' ಒಂದು ಪ್ರಬಂಧವಾಗಿ, ಸಾಹಿತ್ಯಕೃತಿಯಾಗಿ ಇನ್ನೂ ಹೊಸದಾಗಿದೆ. ಅದರಂತೆ ಈ ಸಂಕಲನದಲ್ಲಿಯೂ 'ಮಳೆ' ಎಂಬ ಪ್ರಬಂಧ. ಮಳೆಯ ಅನುಕೂಲತೆ ಅನಾನುಕೂಲತೆಗಳನ್ನು ವಿನೋದಪೂರ್ಣವಾಗಿ ಬಣ್ಣಿಸುತ್ತ ಕೊನೆಕೊನೆಯಲ್ಲಿ ಕಾವ್ಯದ ಮಟ್ಟಕ್ಕೇರುವ ಈ ಬರೆವಣಿಗೆ ಈಗಲೂ ರಸಾನುಭವವನ್ನುಂಟು ಮಾಡಬಲ್ಲದು. 'ಉದರುವ ಹೂ ಉದುರುವದು; ಗಟ್ಟಿ ಹೂ ತೊಳೆದು ಹೊಸದಾಗುವದು' ಎಂದು ಪ್ರಾರಂಭವಾಗುವ ಗದ್ಯಭಾಗವನ್ನು ಪರಿಶೀಲಿಸಬಹುದು. ವಿ.ಸೀ.ಯವರ ಪ್ರಸಿದ್ಧವಾದ ಲಾಲ್‌ಬಾಗಿನ ಮೇಲೆ ಬರೆದ ಕವಿತೆಯಲ್ಲಿ ಕೂಡ ಹೂವುಗಳ ಪ್ರತಿಮಾ ಯೋಜನೆ ಇಷ್ಟು ಅರ್ಥಪೂರ್ಣವಾಗಿಲ್ಲ. ಇಲ್ಲಿಯೂ ಬರೆವಣಿಗೆಯ ಯಶಸ್ವಿತೆಗೆ ಕಾರಣವೆಂದರೆ ಸತ್ವಪೂರ್ಣವಾದ ಪ್ರತಿಮೆಗಳು.

'ಬೆಳುದಿಂಗಳು' ಸಂಕಲನದಲ್ಲಿ 'ನನ್ನ ಜೀವನ ದರ್ಶನ' ಎಂಬ ಪ್ರಬಂಧವೊಂದಿದೆ. ವಿ.ಸೀ. ಅವರು ಈ ಪ್ರಬಂಧದ ಮೂಲಕ ತಮ್ಮ ಜೀವನದ ನಿಲುವನ್ನು ಕುರಿತು ಬರೆದಿದ್ದಾರೆ. ಈ ಪ್ರಬಂಧದ ತುಂಬ ಪ್ರತಿಮೆಗಳ ಬದಲಾಗಿ ವಿಚಾರಗಳಿವೆ. ಅಲ್ಲದೆ ಇಡೀ ಪ್ರಬಂಧ ಯಾರ ಯಾರವೋ ಆಕ್ಷೇಪಣೆಗಳಿಗೆ ಕೊಟ್ಟ ಉತ್ತರದಂತಿದೆ. ಆದರೆ

ಈ ಉತ್ತರದಲ್ಲಿ ವಿ.ಸೀ.ಯವರದೇ ಆದ ಸ್ವಂತ ನಿಲುವೇನೆಂಬುದು ಸ್ಪಷ್ಟವಾಗುವುದಿಲ್ಲ. ಯಾವುದೇ ವಿಷಯದಲ್ಲಿ ಕಡೆಯ ತೀರ್ಮಾನ ತಮಗೆ ಅಗ್ರಾಹ್ಯವೆಂದು ಅವರು ಹೇಳುವದು ಅವರ ಆಧುನಿಕ ಮನೋವೃತ್ತಿಯ ಒಂದು ಲಕ್ಷಣವಾಗಿದ್ದರೆ, ಅದೇ ಉಸಿರಿನಲ್ಲಿ ಯಾವ ಮತವೇ ಆಗಲಿ ನಂಬುವವರನ್ನು ಉದ್ಧಾರ ಮಾಡಬಲ್ಲದು ಎಂದು ಹೇಳುವ ಮಾತು ಇದಕ್ಕೆ ವ್ಯತಿರಿಕ್ತವಾಗುತ್ತದೆ. ಇಂಥ ಹಲವಾರು ಒಂದಕ್ಕೊಂದು ವಿಸಂಗತವಾದ ವಿಚಾರಗಳು, ಧೋರಣೆಗಳು ಈ ಪ್ರಬಂಧದಲ್ಲಿವೆ. ಮನಸ್ಸಿನೊಳಗಿನ ಒಂದು ಸಂಘರ್ಷವನ್ನು ಮುಚ್ಚಿಟ್ಟುಕೊಳ್ಳುವ ಪ್ರಯತ್ನದಲ್ಲಿ ಆ ಸಂಘರ್ಷವನ್ನು ತೆರೆದಿಟ್ಟಂತಾಗಿದೆ. ಸಭ್ಯತೆಯೂ ಇರಬೇಕು, ಜಗಳವೂ ಆಗಬೇಕು ಎಂದರೆ, ಜಗಳ ಅಪ್ರಾಮಾಣಿಕವಾಗುತ್ತದೆ. ನವೋದಯದ ಲೇಖಕರಲ್ಲಿ ಹಳೆ ಮತ್ತು ಹೊಸದು ಇವುಗಳ ಸಂಘರ್ಷ ಇದೇ ಬಗೆಯದಾಗಿದೆ.

ಆದರೆ ಇದಕ್ಕಿಂತ ಹೆಚ್ಚಾಗಿ ಈ ಪ್ರಬಂಧ ಒಂದು ಮಹತ್ವದ ಮಾತನ್ನು ಹೊರಗೆಡವುವಂತಿದೆ. ಅದು ನಮ್ಮ ಆಧುನಿಕ ಮನೋವೃತ್ತಿ ರೂಪುಗೊಂಡದ್ದರ ಬಗ್ಗೆ. ಪಾಶ್ಚಾತ್ಯ ಸಾಹಿತ್ಯದೊಂದಿಗೆ ನಮ್ಮ ಸಂಪರ್ಕ ಏರ್ಪಟ್ಟ ಕೂಡಲೆ ನಮ್ಮಲ್ಲಿ ಆಧುನಿಕತೆ ಬಂದುಬಿಟ್ಟಿತು ಎಂದು ತಿಳಿದರೆ ಅದು ಬಹಳ ಮುಗ್ಧವಾದ ನಂಬಿಕೆಯೆಂದೇ ಹೇಳಬೇಕು. ಆಧುನಿಕತೆ ಎಂದರೆ ಕ್ಷಣದಲ್ಲಿ ಹುಟ್ಟಿ ಬೆಳೆಯುವ ವ್ಯಾಪಾರವಲ್ಲ. ಜಗತ್ತಿನೊಡನೆ ನಮ್ಮ ಸಂಬಂಧ ಸೂತ್ರಗಳು ಒಂದಲ್ಲ ಅನೇಕವಾಗಿರುತ್ತವೆ. ಹಳೆಯ ನಂಬಿಕೆಗಳನ್ನು ತಿರಸ್ಕರಿಸಿ ಸಮಕಾಲೀನತೆಗೆ ಸ್ಪಂದಿಸುವಷ್ಟೇ ಹೊಸತನವಲ್ಲ. ಹಳೆಯದರ ಜೊತೆಗಿನ ನಮ್ಮ ಸಂಬಂಧ ಕೂಡ ಬದಲಾಗಬೇಕು. ಈಗಿನ ಮಟ್ಟಿಗೆ ಈ ಸಮಸ್ಯೆಯನ್ನು ಕುರಿತು ಹೇಳುವುದಾದರೆ ನಾವು ಹಳೆ ಹೊಸದರ ರಾಜಕೀಯದಲ್ಲಿ ಸಿಕ್ಕು ಬಿದ್ದಿದ್ದೇವೆ. ಹಳೆಯದು ಹೊಸದು ಇವುಗಳಲ್ಲಿ ಗೆಲ್ಲುವದು ಯಾವದೆಂದು ಗೊತ್ತಾದಾಗ ನಾವು ಗೆಲ್ಲುವ ಪಕ್ಷವನ್ನು ಸೇರಿಕೊಂಡಿದ್ದೇವೆ. ಹಳೆಯದು ಸ್ವಲ್ಪ ವಿಜೃಂಭಿಸಿದರೆ ಅದನ್ನು ಸೋಲಿಸಲು ಶಸ್ತ್ರಾಸ್ತ್ರಗಳು ನಮ್ಮಲ್ಲಿ ಸಾಕಷ್ಟಿವೆ. ಇದೇನೂ ಸೋಜಿಗದ ಮಾತಲ್ಲ. ಆದರೆ ಹಳೆಯದರ ಬಗ್ಗೆ ನಾವು ತೋರಿಸುವ ಸಹಾನುಭೂತಿ ಭಾವಾವಿಷ್ಟವಾಗುತ್ತದೆ. ಇಲ್ಲದಿದ್ದರೆ ರಾಜಕೀಯ ಕುಟಿಲತೆಯಿಂದ ಕೂಡಿರುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ಪ್ರಾರಂಭವಾದ ಆಟ ಈಗ ನಮ್ಮಲ್ಲಿಯೂ ಬಂದಿದೆ. ಪ್ರಾಮಾಣಿಕವಾಗಿ ಹೊಸದನ್ನು ಒಪ್ಪಿಕೊಂಡು ಮುಂದುವರಿಯುವುದು ಒಂದು ರೀತಿ. ಆದರೆ ನಾವು ಹಳೆಯದನ್ನು ಮರೆತೇ ಇಲ್ಲ. ಭೂತ ನಮ್ಮನ್ನು ಕಾಡುತ್ತಿದೆಯೆಂದು ಆವೇಶದಿಂದ ಹೋರಾಡುತ್ತೇವೆ. ಅದು ಸಾಯುವಂತಾದರೆ ನಮ್ಮ ಸಹಾನುಭೂತಿಯಿಂದ, ಔದಾರ್ಯದಿಂದ ಅದನ್ನು ಚೇತರಿಸಿ ಇನ್ನೊಂದು ಕಾಳಗಕ್ಕೆ ಹುರಿಯಾಗುತ್ತೇವೆ.

ಈ ರಾಜಕೀಯ ನವೋದಯ ಕಾಲದಿಂದಲೇ ಪ್ರಾರಂಭವಾಗಿದೆ. ಸಾಹಿತ್ಯದ ಇತಿಹಾಸವನ್ನು ಹಳೆಯ ಶಾಸ್ತ್ರಗ್ರಂಥಗಳಿಗೆ ಕೈಪಿಡಿಗಳನ್ನು ರಚಿಸಿದವರು ಗೆಲ್ಲುವ ಪಕ್ಷದಲ್ಲಿದ್ದವರು. ಹಳೆಯದರ ಮೇಲೆ ಪ್ರಭುತ್ವನ್ನು ಸ್ಥಾಪಿಸುವಾಗ ಅದನ್ನು

ಗೌರವದಿಂದಲೇ ಕಂಡರು. ಆದರೆ ಈ ಗೌರವ ಕೂಡ ಗೆಲ್ಲುವ ಒಂದು ಉಪಾಯವೇ ಆಗಿದೆ. ಹಳಿಯದೇ ನಮ್ಮ ಮಾತು ಕೇಳುವಂತೆ ಮಾಡಿದ್ದು ಈ ರಾಜಕೀಯದಲ್ಲಿಯ ದೊಡ್ಡ ಸಿದ್ಧಿಯಾಗಿದೆ. ಈ ವಾತಾವರಣದಲ್ಲಿ ವಿ.ಸೀ. ಯವರ ಪ್ರಬಂಧವನ್ನಿಟ್ಟು ನೋಡಿದರೆ ಈ ರಾಜಕೀಯದ ವಿವರಗಳು ಗೊತ್ತಾಗುತ್ತವೆ. ನಮ್ಮ ಬೌದ್ಧಿಕತೆಯ ಒಂದು ದೌರ್ಬಲ್ಯವೆಂದರೆ ಅದು ನಮಗೆ ಸ್ವರಕ್ಷಣೆಯ ಉಪಾಯ ಮಾತ್ರವಾಗಿರುವದು.

ವಿ.ಸೀ.ಯವರ 'ಸೀಕರಣೆ' ಸಂಕಲನದಲ್ಲಿಯ ಪ್ರಬಂಧಗಳು ಸ್ವಲ್ಪ ಬೇರೆ ರೀತಿಯವಾಗಿವೆ. ಆದರೆ ಇಲ್ಲಿ ಕೂಡ 'ಹೆಣ್ಣು', 'ಸಾವು', '—ಇವರಿಗೆ' ಇಂಥ ಹಳೆಯ ಪ್ರಬಂಧಗಳ ಕಿರಿಕಿರಿಯಿಂದ ಕೂಡಿದ ಪ್ರಬಂಧಗಳಿವೆ. 'ಹೆಣ್ಣು' ಎನ್ನುವ ಪ್ರಬಂಧ 'ಬೆಳುದಿಂಗಳು' ಸಂಕಲನದಲ್ಲಿಯ 'ಹೆಣ್ಣು' ಪ್ರಬಂಧದ ಮುಂದಿನ ಭಾಗ. 'ಸಾವು' ಎಂಬ ಪ್ರಬಂಧ ಒಂದು ದೃಷ್ಟಿಕೋನವನ್ನು ಮಾತ್ರ ಪ್ರತಿನಿಧಿಸುವ ಬರೆವಣಿಗೆಯಾಗಿದೆ. '—ಇವರಿಗೆ' ಬಹುಶಃ ಹಳೆಯ 'ಪತ್ರದೂತ'ದೊಂದಿಗೆ ಸಂಬಂಧವಿಟ್ಟುಕೊಂಡಿದೆ. ಉಳಿದ ಪ್ರಬಂಧಗಳಲ್ಲಿ 'ಕೋಳಿ', 'ನೆನಪು' ಇಂಥ ಲೇಖನಗಳಲ್ಲಿ ಹೆಚ್ಚಿನ ತ್ರಾಣವಿಲ್ಲ. ಅವುಗಳಲ್ಲಿ ಹಳೆಯ ಪ್ರಬಂಧಗಳಲ್ಲಿಯ ಅನಗತ್ಯವಾದ ವೇಷಗಾರಿಕೆ ಇಲ್ಲ. ಆದರೆ ಹಾಗೆಂದು ನಿಜವಾದ ಕಳಕಳಿಯೂ ಅಷ್ಟಿಲ್ಲ. ಇವನ್ನು ಬರೆದು ತೆಗೆದರೆ ಮಾತ್ರ ನೋವಿನಿಂದ ಬಿಡುಗಡೆ ಸಿಕ್ಕೀತು ಎಂಬ ಒತ್ತಡವೂ ಇಲ್ಲ. 'ನಿಂಬೆ', 'ಬದನೆಕಾಯಿ', 'ಮಾವು' ಇಂಥ ಬರಹಗಳಲ್ಲಿ ಸ್ವಾನುಭವದ ಪಾಕವಿರುವದರಿಂದ ಮತ್ತು ಬರೆವಣಿಗೆಯಲ್ಲಿಯ ಮೂರ್ತತೆಯಿಂದ ಸತ್ವವನ್ನು ಪಡೆದುಕೊಂಡಿವೆ. ನಿಂಬೆ ಮಾವುಗಳನ್ನು ಲೇಖಕರು ಮನಸಾ ಮೆಚ್ಚಿ ಅವುಗಳ ರುಚಿಯನ್ನು ಓದುಗರಿಗೆ ಉಣ್ಣಿಸಿದರೆ ಬೇಡವೆನ್ನುವಷ್ಟು ಅರಸಿಕತೆ ನಮ್ಮಲ್ಲಿ ಇರಬಾರದು. ನಿಂಬೆಯ ಬಣ್ಣ ಆಕಾರದಿಂದ ಹಿಡಿದು ಅದರ ಉಪಯುಕ್ತತೆಯವರೆಗೆ ಓದುಗರ ಬಾಯಲ್ಲಿ ನೀರು ಬರುವಂತೆ ಬರೆದರೆ ವಿ.ಸೀ. ಅದರ ವರ್ಣನಾಶಕ್ತಿಯನ್ನು ಮೆಚ್ಚಲೇಬೇಕು. ಆದರೆ ಇದೂ ಕೂಡ ಅಷ್ಟು ದೊಡ್ಡ ರೀತಿಯ ಬರೆವಣಿಗೆಯೇನಲ್ಲ. ಅದರ ಬದಲಾಗಿ 'ಮಣ್ಣು' ಎಂಬ ಪ್ರಬಂಧದಲ್ಲಿಯ ಈ ಗದ್ಯಭಾಗವನ್ನು ನೋಡಬೇಕು.

> ಆದರೆ ಇಲ್ಲಿತ್ತು ನಮ್ಮ ಮನೆ. ನಮ್ಮ ತಾತನದು. ಹಿಂದೆ ಸಣ್ಣ ವಯಸ್ಸಿನಲ್ಲಿ ಒಮ್ಮೆ ಬಂದಿದ್ದೆ. ತಾತಂದಿರು ತೀರಿಕೊಂಡು ಅವರ ಕರ್ಮಾಂತರ ನಡೆಯುತ್ತಿದ್ದ ಕಾಲ ಅದು. ಮನೆಯಲ್ಲಿ ಆರೆಂಟು ಹಸು; ನಾಲ್ಕು ಕಪಿಲೆ ಕರೆಯುತ್ತಿದ್ದವು. ತುಂಬಾ ಜನ. ಮಕ್ಕಳ ಆಟ, ಹಟ, ಚೀರು ಹುಯಿಲು;— ದೊಡ್ಡವರದು, ಚಿಕ್ಕವರದು. ಏತೇತಕ್ಕೋ ಸಂತೆಯಂತಿತ್ತು... ನಾನು ಏತಕ್ಕೋ ಮುನಿಸಿಕೊಂಡಿದ್ದ ನೆನಪು. ತಾಯಿ ಸಮಾಧಾನ ಮಾಡುತ್ತಿದ್ದರು. ಅಲ್ಲಿಂದ ಪಕ್ಕದ ಮನೆಯ ಕಮ್ಮಸಂದ್ರದ ಮುನಿಯಕ್ಕನ ಮನೆಗೆ ನನ್ನನ್ನು ಒಯ್ದರು. ಅಯ್ಯೋ

> ನನ್ನಪ್ಪ, ನಮ್ಮ ಎಂಟ್ರಾಮಪ್ಪನ ಮಗನಾ ನೀನು? ಬಾ ಮಗ, ಎಂದವಳೇ ಹಬ್ಬಗೆ ಕಾಯಿಸಿಟ್ಟಿದ್ದ ಕೆನೆಹಾಲನ್ನು ಕಂಚಿನ ತುಂಬಾ ಕೊಟ್ಟ ನೆನಪು ಹಾಯೆನಿಸುತ್ತದೆ. ಅವಳಾರೋ ನಾನ್ಯಾರೋ. ಮಧ್ಯಾಹ್ನ ಮೂರು ಗಂಟೆಗೆ ಊಟ.... ತುಪ್ಪದ, ಬೆಲ್ಲದ, ತುಪ್ಪದಲ್ಲಿ ಬೆಲ್ಲವನ್ನು ಕರಿದ ವಾಸನೆ. ಮಡಿ; ಸಡಗರ. ಚಿತ್ರಗಳು ಮರುಕಳಿಸುತ್ತವೆ.

ಇದು ಕತೆಯಲ್ಲ, ಕಾದಂಬರಿಯಲ್ಲ, ಕಾವ್ಯವೂ ಅಲ್ಲ. ಆದರೆ ಅವುಗಳಷ್ಟೇ ಸೃಜನಶೀಲವಾದ ಬರೆವಣಿಗೆ. ಇಲ್ಲಿ ವರ್ಣಿತವಾದ ಸ್ವಾನುಭವ ಎಷ್ಟು ಸಂಪೂರ್ಣ ಮತ್ತು ಸ್ವಾಯತ್ತವಾಗಿದೆಯೆಂದರೆ ಇದರ ಮುಂದೆ ಮಾತಿಲ್ಲ. ಒಂದು ಕಾಲದ ಜೀವನದ ರೀತಿಯನ್ನು ನಿರೂಪಿಸುವಂತಿದ್ದರೂ ಅದೇ ಈ ಬರವಣಿಗೆಯ ಉದ್ದೇಶವಲ್ಲ. ಹಟಮಾಡಿದ ಕೂಸಿಗೆ ಹಾಲು ತಂದುಕೊಟ್ಟ ಕಮ್ಮಸಂದ್ರದ ಮುನಿಯಕ್ಕ ಕೂಡ ಒಂದು ಮಹತ್ವದ ಪಾತ್ರವಲ್ಲ. ಅವಳೂ ಒಂದು ಪ್ರತಿಮೆ ಅಷ್ಟೇ. ಇಲ್ಲಿಯ ಪ್ರತಿಮಾ ಯೋಜನೆ ಕೂಡ ತರ್ಕಬದ್ಧವಾದದ್ದಲ್ಲ. ಎಂಟ್ರಾಮಪ್ಪನ ಮಗನಾದರೆ ಮುನಿಯಕ್ಕ ಹಾಲು ಯಾಕೆ ಕೊಡಬೇಕು? ಬೌದ್ಧಿಕತೆಯ ಸೋಂಕಿಲ್ಲದೆ, ಸೋಗಿಲ್ಲದೆ, ಜೀವನದ ಆಳದಿಂದ ತಾನಾಗಿ ಎದ್ದು ಬಂದ ಸತ್ಯ ಇದು. ಅದಕ್ಕೆಂದೇ ಇದು ನಿರ್ವಿವಾದ. ಪ್ರೀತಿ, ಮನುಷ್ಯ ಸಂಬಂಧ, ಮಣ್ಣಿನ ಎಳೆತ, ಬದುಕಿನ ಅನೇಕ ವಾಸನೆಗಳು ಬೌದ್ಧಿಕತೆಯ, ವಿವರಣೆಯ, ಸಮರ್ಥನೆಯ ಬೇಲಿಗಳನ್ನೆಲ್ಲ ಮುರಿದು ಬಂದುಬಿಡುತ್ತವೆ. ಇದು ನಿಜವಾಗಿ ಸಾರ್ಥಕವಾದ ಬರೆವಣಿಗೆ.

ಈ ದೃಷ್ಟಿಯಿಂದ ನೋಡಿದಾಗ ಈ ಸಂಕಲನದಲ್ಲಿ ಕೊನೆಯದಾದ 'ನಮ್ಮ ಅಜ್ಜಿಯ ಅಡಿಗೆ' ಕನ್ನಡದ ಅತ್ಯುತ್ತಮ ಪ್ರಬಂಧಗಳಲ್ಲಿ ಒಂದಾಗಿದೆ ಎಂದು ತೋರುತ್ತದೆ. ವಿ.ಸೀ. ಅವರು ಬರೆದದ್ದು ತಮ್ಮ ಅಜ್ಜಿಯ ಬಗ್ಗೆ, ಆಕೆ ಅಟ್ಟ ಅಡಿಗೆಯ ಬಗ್ಗೆ, ಆಕೆಯ ಜೀವನೋತ್ಸಾಹದ ಬಗ್ಗೆ, ಆಕೆಯ ಅಭಿರುಚಿಯ ಬಗ್ಗೆ. ಆದರೆ ಇಲ್ಲಿ ನಿಜವಾಗಿ ವರ್ಣಿತವಾಗಿರುವದು ಜೀವನವನ್ನು ಪೋಷಿಸುವ ತತ್ವ. ಪ್ರಬಂಧದ ತುಂಬ ವಿ.ಸೀ. ಯವರ ಸ್ವಾನುಭವಗಳು ಚಿತ್ರಿತವಾಗಿವೆ. ಅಜ್ಜಿ ಒಂದು ಸಾಮಾನ್ಯವಾದ ಅಡಿಗೆ ಮಾಡಿದರೂ ಅದರಲ್ಲಿ ಒಂದು ವಿಶೇಷಣೆ ಇರುತ್ತಿತ್ತು ಎಂದು ಹೊಗಳುವ ಉದ್ದೇಶ ಇಲ್ಲಿಲ್ಲ. ಸಂಸ್ಕೃತಿಯೆನ್ನುವುದು ಕಲೆ ಮತ್ತು ಸಾಹಿತ್ಯಗಳಲ್ಲಿ ಮಾತ್ರ ಇರಬೇಕಾಗಿಲ್ಲ, ಅದು ದಿನನಿತ್ಯದ ಇರುವಿಕೆಯಲ್ಲಿ ಇರಬಲ್ಲದು, ಅಥವಾ ಅದೇ ನಿಜವಾದ ಸಂಸ್ಕೃತಿ ಎಂಬ ಮಾತನ್ನು ಹೇಳದಿದ್ದರೂ ಈ ಪ್ರಬಂಧದಲ್ಲಿ ಎರಡು ಪ್ರಸಂಗಗಳು ಅವಿಸ್ಮರಣೀಯವಾಗಿವೆ. ಸಾಹುಕಾರ ಅಯ್ಯನವರ ಮನೆಯಲ್ಲಿ ಪಾಠ ಹೇಳುತ್ತಿದ್ದ ಲೇಖಕರು ಅವರ ಮನೆಯಿಂದ ಶ್ರೇಷ್ಠವಾದ ಅಕ್ಕಿಯನ್ನು ಕೊಂಡು ತಂದಾಗ ಅವರ ಅಜ್ಜಿ ಗೋಡಂಬಿಯನ್ನು ತರಿಸಿ ತುಪ್ಪಾನ್ನ ಮಾಡಿ ಹಾಕಿದ ಪ್ರಸಂಗ ಮೊದಲನೆಯದಾಗಿದೆ. ಮಧ್ಯಮ ವರ್ಗದ ಬ್ರಾಹ್ಮಣರ ಮನೆಯಲ್ಲಿಯ ಶ್ರೇಷ್ಠತೆಯ

ಪರಿಕಲ್ಪನೆ ಈ ಪ್ರಸಂಗಕ್ಕೆ ಮೂಲ ಕಾರಣವಾಗಿದೆಯೆಂಬುದನ್ನು ಅಲ್ಲಗಳೆಯುವಂತಿಲ್ಲ. ಆದರೆ ವಿ.ಸೀ. ಯವರಿಗೆ ಶ್ರೇಷ್ಠತೆಯ ಶೋಧ ಒಂದು ಆಂತರಿಕ ಹವ್ಯಾಸವಾಗಿದ್ದರಿಂದ ಈ ಪರಿಕಲ್ಪನೆ ಮಹತ್ವದ್ದಾಗಿದೆ. ಇನ್ನು ಎರಡನೆಯ ಪ್ರಸಂಗವೆಂದರೆ ಅಜ್ಜಿಯ ಸಾವಿನ ಪ್ರಸಂಗ. ಅಜ್ಜಿಯ ಜೀವನ ಎಷ್ಟು ಪರಿಶುದ್ಧವಾಗಿತ್ತೋ ಅವರ ಸಾವು ಕೂಡ ಅಷ್ಟೇ ಪರಿಶುದ್ಧವಾಗಿತ್ತು. ಬದುಕಿನ ವಿವರಗಳೆಲ್ಲ ಸಾವಿನಲ್ಲಿ ಪರ್ಯವಸಾನಗೊಂಡು ಅರ್ಥಪೂರ್ಣವಾಗುತ್ತವೆ. ಅಜ್ಜಿ ತಮ್ಮ ಸಾವು ಹೀಗೇ ಆದೀತೆಂದು ಎಣಿಸಿದವರಲ್ಲ, ಅಥವಾ ಅದಕ್ಕಾಗಿ ಅಪೇಕ್ಷೆ ಪಟ್ಟವರೂ ಅಲ್ಲ. ಆದರೆ ಬದುಕಿನ ಸ್ವಭಾವವೇ ಸಾವಿನ ಸ್ವಭಾವವಾಗುವುದು ಅವರ ದೈವ. ಅವರ ಜೀವನಕ್ರಮವನ್ನು, ಸಾವಿನ ರೀತಿಯನ್ನು ಇದ್ದಕ್ಕಿದ್ದ ಹಾಗೆ ವರ್ಣಿಸುವುದರಿಂದ ಪ್ರಬಂಧಕ್ಕೆ ಈ ಜೀವನದ ಅರ್ಥಕ್ರಮ ಸಿಕ್ಕಿದೆ.

'ನಮ್ಮ ಅಜ್ಜಿಯ ಅಡಿಗೆ' ವಿ.ಸೀ.ಯವರು ತಮ್ಮ ಸಾಹಿತ್ಯಿಕ ಜೀವನದುದ್ದ ಏನೇನನ್ನು ಸಾಧಿಸಬೇಕೆಂದು ಅಪೇಕ್ಷೆ ಪಟ್ಟಿದ್ದರೋ ಅದೆಲ್ಲ ಒಟ್ಟಿಗೆ ಒಂದು ಕಡೆಗೆ ದೊರೆತಂತಾಗಿದೆ. ಜೀವನದ ಅರ್ಥ ಸಿಗುವುದು ಜೀವನದ ಕ್ರಮದಲ್ಲಿಯೇ ಹೊರತು ಆ ಕ್ರಮದ ಹೊರಗಲ್ಲ. ಆದರೆ ಅದು ದೊರೆಯಬೇಕಾದರೆ ಜೀವನಕ್ರಮಕ್ಕೆ ನಮ್ಮನ್ನು ಸಂಪೂರ್ಣವಾಗಿ ಒಪ್ಪಿಸಿಕೊಳ್ಳುವದರಿಂದ. ಈ ಪ್ರಬಂಧದ ಬರೆವಣಿಗೆಯಲ್ಲಿ ಎಲ್ಲಿಯೂ ಮನಸ್ಸನ್ನು ಕದ್ದಾಡಿದ ಸಂಶಯ ಕೂಡ ಬರುವದಿಲ್ಲ. ಉಳಿದ ಎಷ್ಟೋ ಪ್ರಬಂಧಗಳಲ್ಲಿ ಕಾಣುವ ಯುಕ್ತಿ, ವಾದ, ಒಪ್ಪಿಕೊಂಡಂತೆ ಮಾಡಿ ನಿರಾಕರಿಸುವ ಗತ್ತು, ತನಗೆ ವಿರುದ್ಧವಾದದ್ದು ಕೂಡ ಸತ್ಯದ ಇನ್ನೊಂದು ಮುಖವಿರಬಹುದೆಂಬ ಭ್ರಮೆ ಇವಾವುವೂ ಇಲ್ಲಿ ಇಲ್ಲ. ಇದು ಬಿಚ್ಚು ಮನಸ್ಸಿನ ಬರೆವಣಿಗೆ. ನಂಬಿಕೆಯ ಬರೆವಣಿಗೆ.

ವಿ.ಸೀ. ಅವರ ಪ್ರಬಂಧ ಸಾಹಿತ್ಯ ಒಂದು ದೃಷ್ಟಿಯಿಂದ ಮಹತ್ವದ್ದಾಗಿದೆ. ಅವರು ಗದ್ಯದಲ್ಲಿ ಬರೆದದ್ದೆಲ್ಲ ಲಲಿತ ಪ್ರಬಂಧ, ಪ್ರವಾಸ ಕಥನ, ವ್ಯಕ್ತಿಚಿತ್ರಗಳು ಮತ್ತು ವಿಮರ್ಶೆ. ಈ ಎಲ್ಲ ಪ್ರಕಾರಗಳ ಮೂಲರೂಪವೆಂದರೆ ಪ್ರಬಂಧ. ಪ್ರವಾಸ ಕಥನ ಒಂದು ನಿಜವಾದ ಪ್ರವಾಸವನ್ನು, ವ್ಯಕ್ತಿಚಿತ್ರ ಒಬ್ಬ ಐತಿಹಾಸಿಕ ವ್ಯಕ್ತಿಯನ್ನು ಮತ್ತು ವಿಮರ್ಶೆ ಒಂದು ಕೃತಿಯನ್ನು ಅವಲಂಬಿಸಿರುತ್ತವೆ. ಲಲಿತ ಪ್ರಬಂಧವೊಂದೇ ಲೇಖಕನ ಸ್ವಾನುಭವವನ್ನೋ ಲೋಕಾನುಭವವನ್ನೋ ಆಶ್ರಯಿಸುತ್ತದೆ. ಅದಕ್ಕಾಗಿ ಲಲಿತ ಪ್ರಬಂಧದಲ್ಲಿ ಮಾತ್ರ ಸೃಜನಶೀಲತೆಗೆ ಅವಕಾಶವಿರುತ್ತದೆ. ಈ ಅವಕಾಶವನ್ನು ಎಲ್ಲ ಲೇಖಕರೂ ಉಪಯೋಗಿಸುತ್ತಾರೆಂದಲ್ಲ. ಪ್ರತಿಯೊಬ್ಬ ಪ್ರಬಂಧಕಾರನಲ್ಲಿ ಒಂದು ಅದಮ್ಯವಾದ ಆಸೆಯೆಂದರೆ ಬೌದ್ಧಿಕತೆಯನ್ನು ವ್ಯಕ್ತಪಡಿಸುವದು. ಸಾಹಿತ್ಯದಲ್ಲಿ ಬೌದ್ಧಿಕತೆ ಬೌದ್ಧಿಕತೆಯ ರೂಪದಲ್ಲಿ ಬರುವದೇ ಇಲ್ಲ. ಕವಿ ಬೌದ್ಧಿಕನಾಗಿದ್ದಷ್ಟೂ ಒಳ್ಳೆಯದೇ. ಆದರೆ ಅದು ವ್ಯಕ್ತವಾಗುವದು ಅಪ್ರತ್ಯಕ್ಷವಾಗಿ—ಅವನ ಪ್ರತಿಮಾಯೋಜನೆ, ವ್ಯಂಜಕಶಕ್ತಿ ಮೊದಲಾದವುಗಳ ಮೂಲಕವಾಗಿ. ಆದರೆ ಗದ್ಯದಲ್ಲಿ ಅಭಿವ್ಯಕ್ತಿಸುವ ಪ್ರಬಂಧಕಾರ ತನ್ನ ಬೌದ್ಧಿಕತೆಯನ್ನು ಪ್ರತ್ಯಕ್ಷವಾಗಿ ಪ್ರಕಟಪಡಿಸಲು ಹಾತೊರೆಯುತ್ತಾನೆ. ಈ ಮಾತಿಗೆ ವಿ.ಸೀ. ಅವರ ಪ್ರಬಂಧಗಳೂ ಹೊರತಾಗಿಲ್ಲ. ಪ್ರಬಂಧಗಳಷ್ಟೇ ಅಲ್ಲ

ಅವರ ಕವಿತೆಗಳೂ ಹೊರತಾಗಿಲ್ಲ. ಇದೇ ಕಾರಣಕ್ಕಾಗಿ ವಿಮರ್ಶೆಯಲ್ಲಿ ವಿಮರ್ಶೆಗೆ ಒಳಗಾದ ಕೃತಿ ವಿವಾದಗಳಿಂದ ಹೊರಗೆ ಬಂದು ವಿಮರ್ಶಕನನ್ನು ವಿವಾದದ ಸುಳಿಗೆ ಕೆಡವುತ್ತದೆ. ವಿವಾದದ ಹಣೆಯ ಬರೆಹವೆಂದರೆ ಇನ್ನೊಂದು ವಾದದಿಂದ ಪದಚ್ಯುತವಾಗುವದು. ವಿ.ಸೀ.ಯವರ ವಿಮರ್ಶೆಯಲ್ಲಿ ಈ ಆತಂಕ ಸ್ಪಷ್ಟವಾಗಿ ಕಾಣುತ್ತದೆ. ಅವರ ಮುನ್ನುಡಿಗಳಲ್ಲಿ ತಮ್ಮ ವಿಚಾರಗಳೆಲ್ಲ ಹಳೆಯ ಕಾಲಕ್ಕೆ ಸೇರಿದ್ದೆಂಬ ಆತಂಕ ಅವರನ್ನು ಕಾಡುತ್ತದೆ. ವಿಮರ್ಶೆಯಲ್ಲಿ ಹಳೆಯದರ ಬಗ್ಗೆ ಅವರ ತಿರಸ್ಕಾರ ಸ್ಪಷ್ಟವಾಗಿದೆ, ಅದರ ಜೊತೆಗೆ ತಮ್ಮ ಬರವಣಿಗೆಯೂ ಹಳೆಯದಾಯಿತೆಂಬ ಹೆದರಿಕೆಯೂ ಇದೆ. ಆದರೆ ಲಲಿತ ಪ್ರಬಂಧಗಳಲ್ಲಿ ಮಾತ್ರ ಅವರು ಹಳೆಯದನ್ನು ಕೆಲವು ಕಡೆಗಾದರೂ ಒಪ್ಪಿದರು, ಅದರ ಜೊತೆಗೆ ಸಲಿಗೆ ಬೆಳೆಸಿದರು, ಅದರ ಪೂರ್ಣತೆಯನ್ನು ಅನುಭವಿಸಿ ಅದನ್ನು ರಸವನ್ನಾಗಿ ಮಾರ್ಪಡಿಸಿದರು. 'ನಮ್ಮ ಅಜ್ಜಿಯ ಅಡಿಗೆ' ಈ ದೃಷ್ಟಿಯಿಂದ ಮಹತ್ವದ ಲಲಿತ ಪ್ರಬಂಧವಾಗಿದೆಯೆಂದು ನನ್ನ ಅನಿಸಿಕೆಯಾಗಿದೆ.

ವಿ.ಸೀ. ಅವರ ಗದ್ಯಸಾಹಿತ್ಯಕ್ಕೊಂದು ಮುನ್ನುಡಿ ಬರೆಯಬೇಕೆಂದು ಸ್ನೇಹಿತರು ಒತ್ತಾಯಪಡಿಸಿದಾಗ ಒಲ್ಲೆನ್ನಲಾಗಲಿಲ್ಲ. ಅವರ ನಿರೀಕ್ಷೆಯನ್ನು ನಾನು ದುರುಪಯೋಗ ಮಾಡಿಕೊಂಡೆನೇ ಎಂಬ ಸಂಶಯ ನನ್ನನ್ನು ಕಾಡುತ್ತಿದೆ. ವಿ.ಸೀ. ಅವರು ನಮ್ಮ ಮಹತ್ವದ ಲೇಖಕರಲ್ಲಿ ಒಬ್ಬರು. ಕನ್ನಡ ಸಾಹಿತ್ಯ ಒಳ್ಳೆಯದಾಗಿರಬೇಕು, ಅಷ್ಟೇ ಅಲ್ಲ ಶ್ರೇಷ್ಠವಾಗಿರಬೇಕೆಂದು ಅವರ ಅಭೀಪ್ಸೆಯಾಗಿತ್ತು. ಅದಕ್ಕಾಗಿ ಅವರು ಶಕ್ತಿ ಮೀರಿ ದುಡಿದರು. ಅವರ ಬರೆವಣಿಗೆಯಲ್ಲಿ ಅವರ ಕಾಲದ ಅಭಿಲಾಷೆಗಳಿವೆ, ತುಡಿತಗಳಿವೆ, ಆತಂಕಗಳೂ ಇವೆ. ಅವನ್ನೆಲ್ಲ ಕುರಿತು ಎರಡು ಮಾತು ಹೇಳಿದ್ದೇನೆ. ಸಹೃದಯರು ಒಪ್ಪಿಸಿಕೊಳ್ಳಬೇಕು.

ಕೀರ್ತಿನಾಥ ಕುರ್ತಕೋಟಿ

ಧಾರವಾಡ
ದೇಸಾಯಿ ಕಾಲನಿ
೧೩-೯-೧೯೯೧

# ಮೊದಲ ಮಾತು

ಎರಡು ವರ್ಷ ಹಿಂದೆ ಕೆಲವು ಮಿತ್ರರು ಸೇರಿ 'ವಿ.ಸೀ. ಸಂಪದ' ವೇದಿಕೆಯನ್ನು ಕಲ್ಪಿಸಿಕೊಂಡು ಕಾರ್ಯಪ್ರವೃತ್ತರಾದಾಗ ಅನೇಕ ಉದ್ದೇಶಗಳನ್ನು ನಮ್ಮ ಮನವಿಯಲ್ಲಿ ಪ್ರಕಟಿಸಿದ್ದೆವು. ಅದರಂತೆ ಮೊದಲನೆಯ ವರ್ಷದ ಕೊನೆಗೆ ವಿ.ಸೀ. ಅವರ ಭಾವಗೀತಗಳ ಸಮಗ್ರ ಸಂಕಲನವನ್ನು 'ಸ್ನೇಹ–ವಿಶ್ವಾಸ' ಎಂಬ ಹೆಸರಿನಿಂದ ಪ್ರಕಟಿಸಿದೆವು. ಕವಿತೆಗಳ ಮಾರಾಟದ ನಿರೀಕ್ಷೆ ಎಲ್ಲ ಓದುಗರಿಗೂ ತಿಳಿದ ವಿಷಯವೇ. ಆದಾಗ್ಯೂ ಆ ಪ್ರಕಟನೆಯನ್ನು ಮೆಚ್ಚಿಕೊಂಡ ಕೆಲವೇ ಅಭಿಮಾನಿಗಳ ಮತ್ತು ಸಂಘಸಂಸ್ಥೆಗಳ ಔದಾರ್ಯದ ಫಲವಾಗಿ 'ಸಂಪದ'ವು ಮತ್ತೊಂದು ವರ್ಷವೂ ಕಾರ್ಯನಿರತವಾಗಿರುವುದು ಸಾಧ್ಯವಾಗಿದೆ. ಎರಡನೆಯ ವರ್ಷದಲ್ಲಿ ಮೂರು ಸ್ಮಾರಕ ಉಪನ್ಯಾಸಗಳನ್ನು ಏರ್ಪಡಿಸಿದ್ದಲ್ಲದೆ ನಾಲ್ಕು ಕಿರುಹೊತ್ತಿಗೆಗಳನ್ನೂ ಪ್ರಕಟಿಸಿದ್ದಾಗಿದೆ. ಈಗ ಇನ್ನೊಂದು ದೊಡ್ಡ ಪ್ರಕಟನೆಯನ್ನು ಅಭಿಮಾನಿಗಳ ಮುಂದೆ ಇಡಲು ಶಕ್ಯವಾಗುತ್ತಿರುವುದಕ್ಕಾಗಿ ಸಂತೋಷಿಸುತ್ತೇವೆ. ಇಲ್ಲಿ ವಿ.ಸೀ. ಅವರ ಎಲ್ಲ ಲಲಿತ ಪ್ರಬಂಧಗಳೂ 'ಪಂಪಾಯಾತ್ರೆ' ಪ್ರವಾಸಕಥನವೂ ಸಂಗ್ರಹೀತವಾಗಿವೆ. ಇದು ಕವಿತೆಯಲ್ಲವಾದ್ದರಿಂದ ಹೆಚ್ಚಿನ ಸಂಖ್ಯೆಯ ವಾಚಕವೃಂದಕ್ಕೆ ಪ್ರಿಯವಾದೀತೆಂದು ನಿರೀಕ್ಷಿಸುತ್ತೇವೆ.

ಕವಿತೆಗಳ ಸಮಗ್ರ ಸಂಪುಟದ ಮೊದಲ ಮಾತಿನಲ್ಲಿ ನಾನೊಂದು ಶಂಕೆಯನ್ನು ವ್ಯಕ್ತಪಡಿಸಿದ್ದೆ. ಕವಿಯ ಭಾವಯಿತ್ರೀ ಪ್ರತಿಭೆ ಸಂಗ್ರಹಿಸಿದ ವಿಪುಲವಾದ ಕಾವ್ಯದ್ರವ್ಯವನ್ನು ಅವರ ಕಾರಯಿತ್ರೀ ಪ್ರತಿಭೆ ರೂಪಿಸುವುದಕ್ಕೆ ಸಾಲದಾಯಿತೇನೊ ಎಂದು. ಪದ್ಯಗಳ ಆಕೃತಿಗೆ ಶಬ್ದಗಳನ್ನು ಹೊಂದಿಸುವ ಕಷ್ಟ ಗದ್ಯಕೃತಿಗಳಲ್ಲಿ ಇರಲಾರದು. ಲೇಖಕನ ಮನೋವಿಲಾಸಕ್ಕೆ ಅದರದೇ ಒಂದು ವಿಶಿಷ್ಟವಾದ ಗತಿಯಿರುತ್ತದೆ. ವಿ.ಸೀ. ಅವರ ಮಾತುಗಾರಿಕೆಯನ್ನು ಕೇಳುತ್ತಿರುವಾಗ ಕೇಳುವವರು ಮಂತ್ರಮುಗ್ಧರಾಗುತ್ತಿದ್ದುದಕ್ಕೆ ಕಾರಣ ಅವರ ಮಾತಿನ ಈ ವಿಶಿಷ್ಟವಾದ ಲಯವೇ. ಆ ಮಾತಿನ ಸೊಬಗನ್ನು ಮುಖತಃ ಅನುಭವಿಸುವ ಭಾಗ್ಯವಿಲ್ಲದವರು ಅದರ ಒಂದು ಛಾಯೆಯನ್ನು ಈ ಲಲಿತ ಪ್ರಬಂಧಗಳಲ್ಲಿ ಕಾಣಬಹುದು. ತಮ್ಮ ವಿಶಿಷ್ಟ ಮಾತಿನ ಧಾಟಿಯನ್ನು ಸೂಚಿಸುವುದಕ್ಕೆ ಅವಶ್ಯವಿರುವ ವಿರಾಮಚಿಹ್ನೆಗಳೂ ಅವತರಣಿಕೆ ಪ್ರಾಸಂಗಿಕ ಅಪವಾರಿತ ಇತ್ಯಾದಿಯನ್ನು ಸೂಚಿಸುವ ಚಿಹ್ನೆಗಳೂ ನಮ್ಮ ಮುದ್ರಣಾಲಯಗಳಲ್ಲಿ ಬಳಕೆಯಲ್ಲಿಯೇ ಇಲ್ಲವೆಂಬುದೂ ಇದ್ದಷ್ಟನ್ನೇ ನಮ್ಮ ಮುದ್ರಕರು ಸರಿಯಾಗಿ ಬಳಸುವದಿಲ್ಲವೆಂಬುದೂ ಅವರ ನಿತ್ಯದ

ತಕರಾರು ಆಗಿರುತ್ತಿತ್ತು. ಆ ತೊಡಕಿಗೆ ನಾನು ಕಂಡುಕೊಂಡ ಪರಿಹಾರವೆಂದರೆ ಆ ಗದ್ಯವನ್ನು ಗಟ್ಟಿಯಾಗಿ ಓದುವುದು, ನಮ್ಮಷ್ಟಕ್ಕೆ ನಾವೇ ಮಾತನಾಡಿಕೊಂಡಂತೆ ಓದುವುದು. ಇದರಿಂದ ಆ ಗದ್ಯದ ವಿಶಿಷ್ಟ ಲಯದ ಸುಭಗತೆ ಕೆಲಮಟ್ಟಿಗಾದರೂ ಕಂಡೀತೆಂದು ತೋರುತ್ತದೆ.

ವಿ.ಸೀ. ಅವರ ಗದ್ಯದಲ್ಲಿ ಕಾಣುವ ಈ ಸುಭಗತೆ ಅವರ ಪದ್ಯದಲ್ಲಿ ಕಾಣದಿರುವದಕ್ಕೆ ಕಾರಣ ನಾನು ಕಂಡಂತೆ ಅವರ ಮನೋಧರ್ಮ. ಅವರಿಗೆ ಭಾವ ತೀವ್ರತೆಗಿಂತ ಭಾವವಿಲಾಸ ಪ್ರಿಯವಾದ್ದು. ಪದ್ಯದ ರಚನೆಯ ಕಟ್ಟು ಪಾಡುಗಳು ಅಭಿವ್ಯಕ್ತಿಯನ್ನು ಸಾಂದ್ರವಾಗಿಸಿ ಭಾವತೀವ್ರತೆಯನ್ನು ಹೆಚ್ಚಿಸುವುದಕ್ಕೆ ಅನುಕೂಲವೆಂದು ತೋರುತ್ತದೆ. ಕಾಲಿದಾಸನ ಅಜವಿಲಾಪದಂತಹ ಕಾವ್ಯಖಂಡವನ್ನು ಗದ್ಯದಲ್ಲಿ ಊಹಿಸುವುದೂ ಸಾಧ್ಯವಿಲ್ಲ. ಆದರೆ ಅದೇ ಕವಿ 'ಋತುಸಂಹಾರ'ದಂತಹ ಪದ್ಯಗಳಲ್ಲಿ ಸ್ವಚ್ಛಂದವಾಗಿ ಭಾವವಿಲಾಸವನ್ನೂ ಮೆರೆದಿದ್ದಾನಲ್ಲವೆ ಎನ್ನಬಹುದು. ಅದಕ್ಕೆ ಉತ್ತರ ಇಷ್ಟೇ : ಕಾಲಿದಾಸನಂತಹ ಮಹಾಕವಿಯ ಸಾಮರ್ಥ್ಯ ಎಲ್ಲ ಕವಿಗಳಿಗೂ ನಿಲುಕುವಂತಹದಲ್ಲ. ಸಾಮಾನ್ಯವಾಗಿ ಶೆಲ್ಲಿ ಕವಿಯಲ್ಲಿ ಕಾಣುವುದು ಭಾವತೀವ್ರತೆ, ವರ್ಡ್ಸ್‌ವರ್ತ್ ಕವಿಯಲ್ಲಿ ಕಾಣುವುದು ಭಾವವಿಲಾಸ ಎಂದು ಸ್ಥೂಲವಾಗಿ ವಿಂಗಡಿಸಬಹುದು. ಇವುಗಳಲ್ಲಿ ವಿ.ಸೀ. ಅವರಿಗೆ ಪ್ರಿಯವಾದದ್ದು ಭಾವವಿಲಾಸ. ಅದಕ್ಕೆ ಪದ್ಯರಚನೆಯ ಕಟ್ಟುಪಾಡುಗಳು ಅವರಿಗೆ ತೊಡಕಾಗುತ್ತಿದ್ದವೆಂದು ತೋರುತ್ತದೆ. ಅಪರೂಪಕ್ಕೆ ಎಲ್ಲಿಯೋ "ಮನೆ ತುಂಬಿಸುವದು" ಎಂಬಂತಹ ಗೀತದಲ್ಲಿ ಭಾವತೀವ್ರತೆ ಕಾಣಿಸಿದಾಗ ಅದು ಅವರಿಗೇ ಅಸುಖವನ್ನು ಉಂಟುಮಾಡುತ್ತಿತ್ತು. ಒಂದು ಕಾಲಕ್ಕೆ ಆ ಗೀತವನ್ನು ಹೆಣ್ಣುಮಕ್ಕಳು ಹಾಡದೇ ಇದ್ದ ಮದುವೆಯ ಸಮಾರಂಭವೇ ಕನ್ನಡ ನಾಡಿನಲ್ಲಿ ಇರಲಿಲ್ಲ. ಅಷ್ಟು ಆ ಗೀತ ಜನಪ್ರಿಯವಾಗಿತ್ತು. ಆದರೆ ವಿ.ಸೀ. ಅವರು ಉಪಸ್ಥಿತರಿದ್ದಲ್ಲಿ ಆ ಹಾಡು ಕೇಳಿಬಂದರೆ ಅದನ್ನವರು ಬೇಡವೆಂದು ನಿಲ್ಲಿಸಿದ ಸಂದರ್ಭಗಳೂ ಇದ್ದವು. ಅದರ ಭಾವ ತೀವ್ರತೆ ಅವರಿಗೆ ಅಸಹನೀಯವಾಗಿತ್ತು. ಆ ಮನೋಧರ್ಮಕ್ಕೆ ಪದ್ಯಕ್ಕಿಂತ ಗದ್ಯವೇ ತಮ್ಮ ಭಾವಾಭಿವ್ಯಕ್ತಿಗೆ ಅನುಕೂಲವೆಂದು ತೋರಿದ್ದರೆ ಆಶ್ಚರ್ಯವಿಲ್ಲ. 'ಮೈಸೂರು ರುಮಾಲು', 'ಮಳೆ' ಮುಂತಾದ ಕೆಲವು ಪ್ರಬಂಧಗಳಲ್ಲಿನ ಭಾವವಿಲಾಸ ಕವಿತೆಯ ಶಕ್ತಿಗೆ ಯಾವ ರೀತಿಯಿಂದಲೂ ಊನವಲ್ಲ. ಹಾಗೆಯೇ ಒಂದೊಂದು ಪ್ರಬಂಧದಲ್ಲಿಯೂ ಆಯಾ ವಿಷಯವನ್ನು ಎತ್ತಿಕೊಳ್ಳುವ ರೀತಿ, ಅದರಲ್ಲಿ ಒಡೆದ ಕವಲುಗಳನ್ನು ವಿಸ್ತರಿಸುವ ರೀತಿ, ತಾವು ಗಮನಿಸಿದ ತಮಗೆ ತೋಚಿದ ಯಾವ ಅಂಶವನ್ನೂ ಬಿಡದೆ ಹೇಳಬೇಕೆನ್ನುವ ಆತುರವೂ ಅವರಿಗೇ ವಿಶಿಷ್ಟವಾದ್ದು. ಪಂಪಾಯಾತ್ರೆ, ಕಾಲೆಜ್ ದಿನಗಳು, ಮುಂಬಯಿವಾಸ ನೆನಪುಗಳು ಮೊದಲಾದ ದೀರ್ಘಪ್ರಬಂಧಗಳಲ್ಲಿಯೂ ಈ ಭಾವವಿಲಾಸ ಸ್ವಚ್ಛಂದವಾಗಿ ವಿಹರಿಸುತ್ತದೆ ('ಪಂಪಾಯಾತ್ರೆ'ಯನ್ನು ಇಲ್ಲಿ ಸಂಕಲಿಸಿದೆ. ಉಳಿದ ಎರಡನ್ನೂ ಗಾತ್ರದೃಷ್ಟಿಯಿಂದ ಈ ಸಂಪುಟದಲ್ಲಿ ಸೇರಿಸಿಲ್ಲ. ಬೇರೆಯಾಗಿಯೇ ಅವನ್ನು ಮುದ್ರಿಸುವ

ಉದ್ದೇಶವಿದೆ). ಇಂತಹ ಪ್ರಬಂಧಗಳನ್ನು ಓದುತ್ತಿದ್ದಾಗ ವಿ.ಸೀ. ಅವರು ಇನ್ನೂ ಹೆಚ್ಚಾಗಿ ಇಂತಹವನ್ನೇ ಏಕೆ ಬರೆಯಲಿಲ್ಲ ಎನ್ನಿಸುತ್ತದೆ. ಬಹುಶಃ ಅವರ ಅನನ್ಯ ಮಾತುಗಾರಿಕೆಗೆ ಲುಬ್ಧರಾದ ಜನ ಯಾವಾಗಲೂ ಅವರನ್ನು ಸುತ್ತಿಕೊಂಡು ಇರದಿದ್ದರೆ ಅವರ ಅಭಿವ್ಯಕ್ತಿಯ ಒತ್ತಡ ಇಂತಹ ಪ್ರಬಂಧಗಳಲ್ಲಿ ಹೆಚ್ಚಾಗಿ ಬರಬಹುದಿತ್ತೆಂದು ತೋರುತ್ತದೆ. ಮನುಷ್ಯರಾದವರಿಗೆ ಒಳ್ಳೆಯದೆನ್ನುವುದು ಎಷ್ಟಾದರೆ ಸಾಕು? ದೊರೆತಷ್ಟೇ ನಮ್ಮ ಭಾಗ್ಯ ಎಂದು ಸಂತೋಷಿಸೋಣ.

ಇಂತಹ ಸುಂದರವಾದ ಪ್ರಬಂಧ ಮಾಲಿಕೆಗೆ ಪದಕದಂತಹ ಪ್ರಸ್ತಾವನೆಯನ್ನು ನಮ್ಮ ತಲೆಮಾರಿನ ಶ್ರೇಷ್ಠ ವಿಮರ್ಶಕರಾದ ಪ್ರೊ. ಕೀರ್ತಿನಾಥ ಕುರ್ತಕೋಟಿಯವರು ದಯಮಾಡಿ ಒದಗಿಸಿದ್ದಾರೆ. ಅವರು ಎತ್ತಿ ತೋರಿಸುವ ಸೂಕ್ಷ್ಮಾಂಶಗಳು—ಹಳೆಯ ಕಾವ್ಯಗಳಲ್ಲಿಯೇ ಆಗಲಿ, ಹೊಸಕಾಲದ ಬರಹಗಳಲ್ಲಿಯೇ ಆಗಲಿ—ಸುಲಭವಾದ ಬರವಣಿಗೆಯೆಂದು ಹಗುರವಾಗಿ ಓದಿಕೊಂಡು ಹೋಗುವವರಿಗೆ ಹೊಳೆಯುವಂತಹವಲ್ಲ. ಒಮ್ಮೆ ಅವರು ಎತ್ತಿ ತೋರಿಸಿದರೆ ಆ ಬರಹಗಳನ್ನು ಮತ್ತೆ ಮತ್ತೆ ಓದುವದಕ್ಕೆ ಹಾತೊರೆಯುತ್ತೇವೆ. ಸಾಹಿತ್ಯದಲ್ಲಿ ಇಂತಹ ಆಸ್ಥೆಯನ್ನು ಹುಟ್ಟಿಸುವದು ವಿಮರ್ಶಕರ ದೊಡ್ಡ ಗುಣ. ಇಂತಹ ಪ್ರಸ್ತಾವನೆಯನ್ನು ಒದಗಿಸಿದ ಪ್ರೊ. ಕುರ್ತಕೋಟಿಯವರಿಗೆ 'ಸಂಪದ'ದ ಬಳಗ ತುಂಬಾ ಕೃತಜ್ಞವಾಗಿದೆ.

– ಪಿ. ವಿ. ಜೋಶಿ

ಅಧ್ಯಕ್ಷ, ವಿ.ಸೀ. ಸಂಪದ

# ಅರಿಕೆ

'ವಿ.ಸೀ.' ಎಂಬ ಎರಡು ಅಕ್ಷರಗಳಿಂದ ಖ್ಯಾತರಾಗಿದ್ದ ಡಾ. ವಿ. ಸೀತಾರಾಮಯ್ಯ (೧೮೯೯-೧೯೮೩)ನವರು ಕವಿಯಾಗಿ, ಗದ್ಯಶಿಲ್ಪಿಯಾಗಿ, ವಿದ್ವಾಂಸರಾಗಿ ಹೊಸಗನ್ನಡ ಸಾಹಿತ್ಯದಲ್ಲಿ ದೊಡ್ಡ ಹೆಸರಾದ ಹಿರಿಯರಲ್ಲಿ ಒಬ್ಬರು. ಕವಿತೆ, ನಾಟಕ, ಲಲಿತ ಪ್ರಬಂಧ, ಪ್ರವಾಸ ಕಥನ, ಸ್ಮೃತಿಚಿತ್ರ, ವ್ಯಕ್ತಿಚಿತ್ರ, ವಿಮರ್ಶೆ ಇತ್ಯಾದಿ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಮಾದರಿಯಾಗಬಲ್ಲ ಕೃತಿರಚನೆ ಮಾಡಿದವರು. ಕನ್ನಡದಲ್ಲಿ—ಏಕೆ, ನಮ್ಮ ದೇಶ ಭಾಷೆಗಳಲ್ಲಿಯೇ—ಮೊದಲಿಗೆ 'ಹಣ ಪ್ರಪಂಚ'ದಂತಹ ಶಾಸ್ತ್ರೀಯ ಕೃತಿರಚನೆ ಮಾಡಿದ ಅರ್ಥಶಾಸ್ತ್ರ ವಿಶಾರದರು. ನಾಡಿನ ಸಾಂಸ್ಕೃತಿಕ ಏಕೀಕರಣಕ್ಕಾಗಿ ದುಡಿದವರು. ಅನೇಕ ಮಹಾನುಭಾವರು ಕಟ್ಟಿದ ಸಾಹಿತ್ಯ ಪರಿಷತ್ತನ್ನು ಬೆಳಸಿದ ಚೇತನಗಳಲ್ಲಿ ಒಬ್ಬರು. ಸಹಸ್ರಾರು ಸಂಖ್ಯೆಯ ವಿದ್ಯಾರ್ಥಿಗಳಿಗೆ ಸುಮಾರು ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಕನ್ನಡ ಭಾಷೆ ಸಾಹಿತ್ಯಗಳಲ್ಲಿ ಒಲವು ಪ್ರವೃತ್ತಿ ಉತ್ಸಾಹ ಇಲ್ಲದಿದ್ದ ಕಾಲದಲ್ಲಿ ತಮ್ಮ ನಡೆನುಡಿ ಬೋಧನಾಸಾಮರ್ಥ್ಯದಿಂದ ಅವನ್ನು ಮೂಡಿಸಿದ ಆದರ್ಶ ಉಪಾಧ್ಯಾಯರು. ನಮ್ಮ ಧೀಮಂತ ವಾಗ್ಮಿಗಳಲ್ಲಿ – ಇಂಗ್ಲಿಷ್, ಕನ್ನಡ ಎರಡರಲ್ಲಿಯೂ—ಒಬ್ಬರು. ಎಲ್ಲಕ್ಕಿಂತ ಮಿಗಿಲಾಗಿ ಸಜ್ಜನರು, ಸದಭಿರುಚಿಯ ಪ್ರತೀಕವಾಗಿದ್ದವರು, ಸುಸಂಸ್ಕೃತರು, ಪ್ರಾತಃಸ್ಮರಣೀಯರು.

ಅಂಥ ಮಹನೀಯರ ನೆನಪಿನಲ್ಲಿ ಅವರ ಹತ್ತಿರದ ಸ್ನೇಹಿತರು, ಅಭಿಮಾನಿಗಳು 'ವಿ.ಸೀ. ಸಂಪದ' ಎಂಬ ಸಂಸ್ಮರಣ ವೇದಿಕೆಯನ್ನು ನೆಲೆಗೊಳಿಸಿದ್ದಾರೆ (೧೯೯೦). ವೇದಿಕೆಯು ತನ್ನ ಮೊದಲ ಕಾರ್ಯಕ್ರಮವಾಗಿ ವಿ.ಸೀ. ಅವರ ಸಮಗ್ರ ಕವಿತೆಗಳ ಸಂಕಲನವನ್ನು ಪ್ರಕಟಿಸುವ ಯೋಜನೆಯನ್ನು ಹಮ್ಮಿಕೊಂಡು ಯಶಸ್ವಿಯಾಗಿ ನಿರ್ವಹಿಸಿದೆ. ವಿ.ಸೀ. ಯವರ ನಿಡುಗಾಲದ ಮಿತ್ರರೂ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿಗಳೂ ಆದ ಡಾ. ಶಿವರಾಮ ಕಾರಂತರಿಂದ ೬-೧-೯೧ರಂದು ಬಿಡುಗಡೆಗೊಂಡು 'ಸ್ನೇಹ–ವಿಶ್ವಾಸ' ಎಂಬ ಶೀರ್ಷಿಕೆಯಲ್ಲಿ ಆ ಕಾವ್ಯಸಂಪುಟ ಸಹೃದಯರ ಕೈಸೇರಿತು. ಆ ಸಾಹಸದಲ್ಲಿ ನಮಗೆ ದೊರೆತ ಸಹಾಯ, ಸಹಕಾರಗಳಿಂದ ಉತ್ತೇಜಿತರಾಗಿ ಶಕ್ಯವಾದ ಮಟ್ಟಿಗೂ ಪ್ರಯತ್ನಿಸಿ ವಿ.ಸೀ. ಸಾಹಿತ್ಯ ಎಲ್ಲವನ್ನೂ ಹತ್ತು ಸಂಪುಟಗಳಲ್ಲಿ ಕನ್ನಡಿಗರಿಗೆ ದೊರಕಿಸಿಕೊಡಬೇಕೆಂದು ವೇದಿಕೆಯು ಸಂಕಲ್ಪಿಸಿದೆ. ಆ ದಿಕ್ಕಿನಲ್ಲಿ ಮೊದಲನೆಯದಾಗಿ ಕಾವ್ಯಸಂಪುಟ ಈಗಾಗಲೇ ಪ್ರಕಟಗೊಂಡಿದೆ. ಎರಡನೆಯ ಸಂಪುಟವಾಗಿ—ಆದರೆ 'ಸಮಗ್ರ ಗದ್ಯ'ದ ಮೊದಲನೆಯ ಸಂಪುಟವಾಗಿ—ಈ "ಲಲಿತ

ಪ್ರಬಂಧ ಸಂಪುಟ"ವನ್ನು ಸಾಹಿತ್ಯಾಭಿಮಾನಿಗಳ ಮುಂದಿರಿಸಲು ವೇದಿಕೆ ಅತೀವವಾಗಿ ಹರ್ಷಿಸುತ್ತದೆ.

* * *

ಪ್ರಸ್ತುತ ಸಂಪುಟದಲ್ಲಿ 'ಪಂಪಾಯಾತ್ರೆ' ಪ್ರವಾಸಕಥನವನ್ನೂ 'ಬೆಳುದಿಂಗಳು' ಮತ್ತು 'ಸೀಕರಣೆ' ಪ್ರಬಂಧಸಂಕಲನಗಳಲ್ಲಿನ ಎಲ್ಲ ಪ್ರಬಂಧಗಳನ್ನೂ ಸಂಕಲಿಸಲಾಗಿದೆ. ವಿ.ಸೀ. ಅವರ ಚೊಚ್ಚಿಲು ಗದ್ಯಕೃತಿಯಾದ 'ಪಂಪಾಯಾತ್ರೆ' 'ಪ್ರಬುದ್ಧ ಕರ್ಣಾಟಕ'ದ ನಾಲ್ಕು ಸಂಚಿಕೆಗಳಲ್ಲಿ ಅಚ್ಚಾಗಿ (ಸಂ.೯, ಸಂ.೧-೪), ೧೯೨೮ರಲ್ಲಿ ಪ್ರತ್ಯೇಕ ಹೊತ್ತಿಗೆಯಾಗಿ ಪ್ರಕಟಗೊಂಡಿತು. ಪೂಜ್ಯ ಮಾಸ್ತಿಯವರ ನೀಳ್ಗತೆ "ಸುಬ್ಬಣ್ಣ" ಮತ್ತು "ಪಂಪಾಯಾತ್ರೆ" ಜೊತೆಜೊತೆಯಲ್ಲಿ ಅಚ್ಚಾದ್ದು ತಮಗೆ ಅತಿಶಯ ಸಂತೋಷ ಕಾರಣವಾಯಿತೆಂದು ವಿ.ಸೀ.ಯವರೇ ಮುನ್ನುಡಿಯಲ್ಲಿ ಹೇಳಿದ್ದಾರೆ. ಆ ಯಾತ್ರೆಯಲ್ಲಿ ಅವರ ಸಹಯಾತ್ರಿಕರು ಕನ್ನಡವನ್ನು ಬೆಳಸಿ ಒಂದು ಶಕ್ತಿಯಾಗಿ ಕಟ್ಟಿನಿಲ್ಲಿಸಿದ ಬೆಳ್ಳಾವೆ ವೆಂಕಟನಾರಾಯಣಪ್ಪ, ಟಿ. ಎಸ್. ವೆಂಕಣ್ಣಯ್ಯ, ಡಿ. ವಿ. ಗುಂಡಪ್ಪ ಮತ್ತು ಎಂ. ಆರ್. ಶ್ರೀನಿವಾಸಮೂರ್ತಿಯವರಂಥ ಪುಣ್ಯಶ್ಲೋಕರು. ವಿ.ಸೀ. ವಾಕ್ಯವನ್ನೇ ಉದ್ಧರಿಸುವುದಾದರೆ ಈ "ಒಬ್ಬೊಬ್ಬರೂ ಜೀವನತತ್ತ್ವ ಸಾಧನೆಯಲ್ಲಿ, ಚಾರಿತ್ರದಲ್ಲಿ ತಮ್ಮ ತಮ್ಮ ರೀತಿಯಲ್ಲಿ ಮೇಲ್ಮಟ್ಟವನ್ನು ಸಾಧಿಸಿದ್ದವರು." ಅಂಥವರೊಡನೆ ಯಾತ್ರೆಯನ್ನು ಕೈಕೊಂಡ ತರುಣರು ವಿ.ಸೀ. ಅದನ್ನು ಅವರು ಬರೆದಾಗ "ವರ್ಣನೆಯೊಂದಿಗೆ ನಮ್ಮ ಭಾವನೆಗಳನ್ನು ಬೆರೆಸಿ, ಮನಸ್ಸನ್ನು ಅದರೊಳಗೆ ಹೊಗಿಸಿ ಸ್ವಚ್ಛಂದವಾಗಿ ಬರೆದಿರುವವರು ಕನ್ನಡದಲ್ಲಿ ಕಮ್ಮಿ" ಎಂಬ ವಿಶೇಷ ಸಂಗತಿಯು ಅವರನ್ನು ಪಂಪಾಯಾತ್ರೆಯ ಅನುಭವವಿವರಣೆಯನ್ನು ಕುರಿತು ಬರೆಯಲು ಪ್ರೇರೇಪಿಸಿತೆಂದೂ ತಿಳಿಸಿದ್ದಾರೆ. ಸಾಹಿತಿಯಾಗಿ ನಾಡಿನಲ್ಲೆಲ್ಲ ಅವರಿಗೆ ಮನ್ನಣೆಯನ್ನೂ ಹೆಚ್ಚಿನ ಸಂಖ್ಯೆಯ ಸ್ನೇಹವರ್ಗವನ್ನೂ ದೊರಕಿಸಿಕೊಟ್ಟ ಕೃತಿ ಇದು. "ಕನ್ನಡದಲ್ಲಿಯೇ ಮೊತ್ತಮೊದಲ ಯಶಸ್ವೀ ಪ್ರವಾಸಕಥನವಾಗಿರುವುದಷ್ಟೇ" ಅಲ್ಲದೆ 'ಪಂಪಾಯಾತ್ರೆ'ಯು "ಹಿತಮಿತವಚನನೂ ಪ್ರತಿಭಾಸಂಪನ್ನನೂ ಆದ ತರುಣಕವಿ ಕಟ್ಟಿದ ಭಾವಗೀತೆ.... ಅದರ ಮಟ್ಟಿಗೆ ಓದುಗ ಓದುಗನಾಗಿಯೇ ಉಳಿಯುವುದಿಲ್ಲ; ಕವಿಯೊಂದಿಗೆ, ಪ್ರವಾಸ ಮಾಡಿದ ಮಹಾನುಭಾವರೊಂದಿಗೆ ಸೇರಿಕೊಂಡು ಅವರು ನೋಡಿದ ನೋಟ, ಕಂಡ ಕನಸುಗಳಲ್ಲಿ ಭಾಗಿಯಾಗುತ್ತಾನೆ; ಸೌಂದರ್ಯಪ್ರೇಕ್ಷಿತವಾದ ಸತ್ಯವನ್ನು ಕಾಣುತ್ತಾನೆ; ಇವರ ಜೊತೆ ಪಂಪಾಯಾತ್ರೆ ಮಾಡಿದ್ದು ತನ್ನ ಬಾಳಿನ ಮಹಾಭಾಗ್ಯವೆಂದು ತಿಳಿಯುತ್ತಾನೆ...." ಎಂದಿರುವ ಡಾ. ಕೆ. ಎಸ್.ನ. ಅವರ ನುಡಿತ 'ಪಂಪಾಯಾತ್ರೆ'ಯ ಬಗೆಗೆ ಹೇಳಬಹುದಾದ್ದನ್ನೆಲ್ಲ ಉಚಿತವಾಗಿ ಅತ್ಯಂತ ಸೊಗಸಾಗಿ ಸಂಗ್ರಹಿಸಿದೆ. ಅಲ್ಲಿ ಹಾಳಿಗೂ ಬಾಳನ್ನು ಮೌನಕ್ಕೂ ಮಾತನ್ನು ಕೊಟ್ಟಿರುವುದರಿಂದಲೇ ರಚಿಸಿ ಆರು ದಶಕಗಳು ಕಳೆದಿದ್ದರೂ ಕನ್ನಡದ ಮಹತ್ವದ ಕೃತಿಗಳಲ್ಲಿ ಅದು ಇಂದಿಗೂ ಒಂದಾಗಿ ಉಳಿದಿರುವುದು.

ಪ್ರವಾಸಕಥನದಂತೆಯೇ ಲಲಿತಪ್ರಬಂಧಪ್ರಕಾರದಲ್ಲಿಯೂ ಹೆಚ್ಚಿನ ಕೃಷಿಯೇ ನಡೆಯಿರದಿದ್ದ ಕಾಲದಲ್ಲಿ ಅದರ ರಚನೆಗೆ ಕೈಹಾಕಿದವರು ವಿ.ಸೀ. ಕನ್ನಡನಾಡಿನ ಈ ಭಾಗದಲ್ಲಿ, ಎಂದರೆ ಹಳೆಯ ಮೈಸೂರಿನ ಪ್ರದೇಶಗಳಲ್ಲಿ, ಲಲಿತಪ್ರಬಂಧವನ್ನು ಆಗ್ಗೆ ಬರೆದಿದ್ದವರ ಸಂಖ್ಯೆ ವಿರಳವೇ ಎನ್ನಬೇಕು. ಆ ಸಂದರ್ಭದಲ್ಲಿ ಬರೆಯತೊಡಗಿದವರಲ್ಲಿ ವಿಶೇಷವಾಗಿ ವಿ.ಸೀ. ಮತ್ತು ಪ್ರೊ. ಎ. ಎನ್. ಮೂರ್ತಿರಾಯರು ಲಲಿತಪ್ರಬಂಧ ಸಾಹಿತ್ಯದ ಕಣಜವನ್ನು ತಮ್ಮ ಸಂಪದ್ಭರಿತ ರಚನೆಗಳಿಂದ ಶ್ರೀಮಂತಗೊಳಿಸಿ, ಆ ಪ್ರಕಾರವನ್ನು ಬೆಳಸಲು ಸಮರ್ಥ ಅಸ್ತಿಭಾರವನ್ನು ಹಾಕಿಕೊಟ್ಟರೆನ್ನಬೇಕು. ಬೆಂಗಳೂರಿನ "ದೇಶೀಯ ವಿದ್ಯಾಶಾಲಾ ಪತ್ರಿಕೆ"ಯ ೧೯೨೬ರ ಸಂಚಿಕೆಯಲ್ಲಿ ಅಚ್ಚಾಗಿರುವ "ಮೈಸೂರು ರುಮಾಲು" ವಿ.ಸೀ. ಅವರ ಮೊದಲ ಪ್ರಕಟಿತ ಪ್ರಬಂಧವಾದರೆ, "ಪ್ರಬುದ್ಧ ಕರ್ಣಾಟಕ"ದ ಚಿನ್ನದ ಸಂಚಿಕೆಗಾಗಿ (೧೯೬೯) ಬರೆದು ಅಲ್ಲಿ ಅಚ್ಚಾಗಿರುವ "ನಮ್ಮ ಅಜ್ಜಿಯ ಅಡಿಗೆ" ಅವರ ಕೊನೆಯ ಪ್ರಬಂಧ. ನಡುವಣ ನಾಲ್ಕೂವರೆ ಸುಮಾರು ದಶಕದ ದೀರ್ಘಾವಧಿಯಲ್ಲಿ ಆಗಾಗ್ಗೆ ಅವರು ಬರೆದ ಪ್ರಬಂಧಗಳು ಎರಡು ಸಂಕಲನಗಳಲ್ಲಿ ಸಂಗ್ರಹಗೊಂಡಿವೆ (ಮೊದಲನೆಯ 'ಬೆಳುದಿಂಗಳು' ೧೯೫೯ರಲ್ಲಿ, ಎರಡನೆಯ 'ಸೀಕರಣೆ' ೧೯೭೦ರಲ್ಲಿ ಪ್ರಕಟಗೊಂಡಿದೆ)ಯಾದರೂ ಇಲ್ಲಿ ಉಲ್ಲೇಖಿಸಿರುವ ಎರಡೂ ಪ್ರಬಂಧಗಳು ವಿ.ಸೀ. ಅವರ ಅತ್ಯುತ್ತಮ ಹಾಗೂ ಮಹತ್ವದ ಪ್ರಬಂಧಗಳೆಂದು ಪರಿಗಣಿಸಲ್ಪಟ್ಟಿದೆ. ವಸ್ತುವೈವಿಧ್ಯ, ಉತ್ತಮ ರಚನಾಬಂಧ, ವಿಶಿಷ್ಟ ವಿಷಯ ಮಂಡನ ಕ್ರಮ, ನವುರಾದ ಶುಚಿಯಾದ ರುಚಿಯಾದ ತಿಳಿಹಾಸ್ಯ ವ್ಯಂಗ್ಯಗಳಿಗೆ ಹೆಸರಾಗಿರುವಂತೆಯೇ ಆಕರ್ಷಕ ಶೈಲಿ ಮತ್ತು ಕಲೆಗಾರಿಕೆಯ ನಯಚಾತುರ್ಯಗಳಿಗೂ ಅವರ ಪ್ರಬಂಧಗಳು ಸಾಕ್ಷಿಯಾಗಿವೆ. ಕನ್ನಡ ಲಲಿತಪ್ರಬಂಧಗಳನ್ನು ಅಭ್ಯಾಸ ಮಾಡುವವರು ವಿ.ಸೀ.ಯವರ ಕೊಡುಗೆಯನ್ನು ಉಲ್ಲೇಖಿಸದೆ ಮುಂದುವರಿಯುವಂತಿಲ್ಲವೆಂದಷ್ಟೇ ಹೇಳಿದರೆ ಸಾಕು. ಈ ಪ್ರಬಂಧಗಳೇ ಓದುಗರ ಮುಂದಿವೆಯಾಗಿ ಹೆಚ್ಚು ಲಂಬಿಸುವುದು ಅನಗತ್ಯ.

* * *

ವಿ.ಸೀ. ಅವರ ಕಾವ್ಯಸಂಪುಟವನ್ನಂತೂ ಅಂತೇ ಈ ಪ್ರಬಂಧಸಂಪುಟವನ್ನೂ ಮುದ್ರಿಸಿ ಪ್ರಕಟಿಸಲು ಅನುಮತಿಯಿತ್ತು ನಮ್ಮ ಯೋಜನೆಯಲ್ಲಿ ಒತ್ತಾಸೆಯಾಗಿ ನಿಂತು ನಮ್ಮನ್ನು ಉತ್ತೇಜಿಸುತ್ತಿರುವ ವಿ.ಸೀ. ಸುಪುತ್ರರು ಶ್ರೀಯುತರು ಕೃಷ್ಣಮೂರ್ತಿ, ರಾಮಮೂರ್ತಿ, ಸತ್ಯನಾರಾಯಣ ಮತ್ತು ಮುರಳೀಧರ ಸೋದರರಿಗೆ, ಅವರ ಬಂಧು ವರ್ಗಕ್ಕೆ ನಮ್ಮ ಕೃತಜ್ಞತೆಗಳು. ನಮ್ಮ ಕೋರಿಕೆಯನ್ನು ವಿಶ್ವಾಸದಲ್ಲಿ ಮನ್ನಿಸಿ ವಿ.ಸೀ. ಸಾಹಿತ್ಯವನ್ನು— ವಿಶೇಷವಾಗಿ ಇಲ್ಲಿ ಸಂಕಲಿಸಿರುವ ಕೃತಿಗಳನ್ನು— ಕುರಿತು ವಿಮರ್ಶನ ಪ್ರಸ್ತಾವನೆಯನ್ನು ಬರೆದುಕೊಟ್ಟು ಉಪಕರಿಸಿರುವ ಕನ್ನಡದ ಶ್ರೇಷ್ಠ ವಿಮರ್ಶಕರಾದ ಪ್ರೊ. ಕೀರ್ತಿನಾಥ ಕುರ್ತಕೋಟಿ ಅವರಿಗೆ ನಾವು ತುಂಬಾ ಋಣಿಯಾಗಿದ್ದೇವೆ. ಅವರ

ಪ್ರಸ್ತಾವನೆ ನಿಸ್ಸಂದೇಹವಾಗಿ ಸಂಪುಟದ ಮೌಲ್ಯವನ್ನು ಹೆಚ್ಚಿಸಿದೆ. ಪ್ರೊ. ಕುರ್ತಕೋಟಿಯವರಿಗೆ ನಮ್ಮ ವಂದನೆಗಳು.

ಇದನ್ನು ಪ್ರಕಟಿಸಲು ವೇದಿಕೆ ನಿರ್ಧರಿಸಿದಂದು ಆರ್ಥಿಕ ಉಪಪತ್ತಿಯ ಕೊರತೆಯಿಂದಾಗಿ ತಲೆದೋರಿದ್ದ ಹಿಂಜರಿಕೆಯು ತಕ್ಕಮಟ್ಟಿಗೆ ನಿವಾರಣೆಯಾಗುವಂತೆ ಈ ಸಂಪುಟಕ್ಕೂ, ಈ ಮೊದಲು ವೇದಿಕೆ ಪ್ರಕಟಿಸಿರುವ ವಿ.ಸೀ. ಸಮಗ್ರ ಕಾವ್ಯ ಸಂಪುಟ "ಸ್ನೇಹ–ವಿಶ್ವಾಸ"ಕ್ಕೂ ಉದಾರ ಸಹಾಯಧನದ ನೆರವನ್ನು ದಯಮಾಡಿ ನೀಡಲು ಒಪ್ಪಿರುವ "ಮಾಸ್ತಿ ಕನ್ನಡ ಸೇವಾನಿಧಿ ಟ್ರಸ್ಟ್"ನ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ನಿಟ್ಟೂರು ಶ್ರೀನಿವಾಸರಾಯರಿಗೂ ಟ್ರಸ್ಟ್ ಸಮಿತಿಯ ಎಲ್ಲ ಮಾನ್ಯ ಸದಸ್ಯರಿಗೂ ಡಾ. ಕೆ. ಲಕ್ಷ್ಮಣ್ ಮತ್ತು ಮಾಸ್ತಿಯವರ ಪರಿವಾರದವರಿಗೂ ನಮ್ಮ ಅನಂತ ಕೃತಜ್ಞತೆಗಳು. ಪೂಜ್ಯ ಮಾಸ್ತಿಯವರ "ಸುಬ್ಬಣ್ಣ" ನೀಳ್ಗತೆಯ ಜೊತೆಜೊತೆಗೆ "ಪಂಪಾಯಾತ್ರೆ" ಅಚ್ಚಾದ್ದು ಹಿಂದೆ ವಿ.ಸೀ.ಯವರ ಅತಿಶಯ ಸಂತೋಷಕ್ಕೆ ಕಾರಣವಾದಂತೆಯೇ ಈ ಸಂಪುಟದ ಪ್ರಕಟಣೆಗೆ ಮಾಸ್ತಿ ಟ್ರಸ್ಟ್‌ನ ಸಹಾಯಧನದ ನೆರವು ದೊರಕುತ್ತಿರುವುದು ಪೂಜ್ಯ ಮಾಸ್ತಿಯವರ ಆಶೀರ್ವಾದವು ನಮ್ಮ ಮೇಲಿದೆಯೆಂಬ ಅತಿಶಯಹಿಗ್ಗಿಗೆ ಕಾರಣವಾಗಿದೆ.

ವೇದಿಕೆಯ ಸದಸ್ಯರೆಲ್ಲರ ನೆರವು ಸಹಕಾರ ಎಂದಿನಂತೆಯೇ ನಮಗೆ ದೊರೆತಿದೆಯಾದಾಗ್ಯೂ ವಿಶೇಷವಾಗಿ ಕೆಲವರನ್ನು ಇಲ್ಲಿ ಸ್ಮರಿಸಬೇಕು : ವಿ.ಸೀ.ಯವರ ಕಿರಿಯ ಮಿತ್ರರೂ ಅಮೇರಿಕೆಯಲ್ಲಿ ನೆಲಸಿರುವವರೂ ಆದ ಡಾ. ವೈ. ಎಸ್. ಮೂರ್ತಿ, ವಿ.ಸೀ. ಅವರಲ್ಲಿ ಗೌರವಾದರಗಳನ್ನಿಟ್ಟುಕೊಂಡಿರುವ ಖ್ಯಾತ ನೃತ್ಯ ಕಲಾವಿದೆ ಶ್ರೀಮತಿ ಚಂದ್ರಭಾಗಾದೇವಿ ಮತ್ತು ಅವರ ಸೋದರ ಶ್ರೀ ಪ್ರಭಾಶಂಕರರಾವ್, ಪದ್ಮಶ್ರೀ ಡಾ. ಬಿ. ಪಿ. ರಾಧಾಕೃಷ್ಣ, ವಿ.ಸೀ. ಮಿತ್ರವರ್ಗಕ್ಕೆ ಸೇರಿದ ದೆಹಲಿಯ ಶ್ರೀ ಶಾ. ಬಾಲೂರಾವ್ ಮತ್ತು ಶ್ರೀ ಎಚ್. ವೈ. ಶಾರದಾಪ್ರಸಾದ್, ಮುಂಬಯಿಯ ಶ್ರೀ ಅಣ್ಣಪ್ಪಯ್ಯ, ಮತ್ತು ಬೆಂಗಳೂರಿನ ಡಾ. ಬಿ. ಸಿ. ರಾಮಚಂದ್ರಶರ್ಮ, ಶ್ರೀಮತಿ ರಾಗಿಣಿ ಮತ್ತು ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾದ ಪದಾಧಿಕಾರಿಗಳು— ಈ ಮಾನ್ಯರೆಲ್ಲರೂ ದೊರಕಿಸಿಕೊಟ್ಟಿರುವ ನೆರವಿಗಾಗಿ ಅವರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇವೆ.

ಕಾವ್ಯ ಸಂಪುಟವನ್ನು ಮುದ್ರಿಸಿಕೊಟ್ಟಂತೆಯೇ ಪ್ರೀತಿಯಿಂದ ಈ ಸಂಪುಟದ ಮುದ್ರಣಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿಕೊಟ್ಟಿರುವ ಶ್ರೀ ಮುನಿಧರ್ಮಯ್ಯ ಮತ್ತು ಶ್ರೀ ರಾಜು ಬಂಧುಗಳಿಗೆ ಹಾಗೂ ಅವರ 'ನೇತ್ರಾ ಪ್ರಿಂಟರ್ಸ್'ನ ತರುಣ ಮಿತ್ರರಿಗೆ ನಮ್ಮ ವಿಶೇಷ ವಂದನೆಗಳು. ಆಕರ್ಷಕ ರಕ್ಷಾಪುಟದಲ್ಲಿಯ ಸುಂದರ ಅಕ್ಷರ ಸಂಯೋಜನೆ, ವರ್ಣವಿನ್ಯಾಸ ಶ್ರೀ ನಾಗೇಂದ್ರಕುಮಾರ್ ಅವರದು; ಅವರಿಗೆ ವೇದಿಕೆ ಕೃತಜ್ಞವಾಗಿದೆ.

ವೇದಿಕೆಯ ಅಧ್ಯಕ್ಷರಾದ ಶ್ರೀ ಪಿ. ವಿ. ಜೋಶಿಯವರ ಬೆಂಬಲ, ಉತ್ತೇಜನ, ಮಾರ್ಗದರ್ಶನಗಳಿಲ್ಲದಿದ್ದರೆ ಈ ಕಾರ್ಯ ನೆರವೇರುತ್ತಲೇ ಇರಲಿಲ್ಲ; ಅವರಿಗೆ ನಮ್ಮ ನಮನಗಳು.

ಸೋದರ ಪ್ರೊ. ಎಂ. ವಿ. ಸತ್ಯನಾರಾಯಣನ ಸಹಕಾರವನ್ನಂತೂ ನೆನೆಯಲೇಬೇಕು.

* * *

ವಿ.ಸೀ. ಅವರಿಗೆ 'ಪಂಪಾಯಾತ್ರೆ' ನಾಡಿನುದ್ದಕ್ಕೂ ದೊರಕಿಸಿಕೊಟ್ಟ ಸ್ನೇಹವರ್ಗಕ್ಕೆ ಮತ್ತು ಸುಸಂಸ್ಕೃತ ಜೀವನದರ್ಶನವನ್ನೊದಗಿಸಿ ವಿ.ಸೀ.ಯವರನ್ನು ತಿದ್ದಿ ಬೆಳಸಿ ರೂಪಿಸಿದ ರೂವಾರಿಗಳಲ್ಲೊಬ್ಬರಾದ ಅವರ ಅಜ್ಜಿಯವರ ನೆನಪಿಗೆ ಈ ಸಂಪುಟ ಅರ್ಪಿತ. ವಿ.ಸೀ.ಯವರ ಆತ್ಮಕ್ಕೂ ಇದು ಮೆಚ್ಚಿಕೆಯಾಗುವುದೆಂದು ನಮ್ಮ ನಂಬಿಕೆ.

ನಾಡಿನ ಸಾಹಿತ್ಯಾಭಿಮಾನಿಗಳು ಈ ಸಂಪುಟವನ್ನು ಸ್ವಾಗತಿಸುವರೆಂದು ಆಶಿಸುತ್ತೇವೆ.

ಬೆಂಗಳೂರು / ೨೮-೨-೯೨ ಎಂ. ವಿ. ವೆಂಕಟೇಶಮೂರ್ತಿ 'ಸುಮನಾ'

# ಅರಿಕೆ

(ದ್ವಿತೀಯ ಮುದ್ರಣಕ್ಕೆ)

ವಿ. ಸೀ. ಅವರ 'ಲಲಿತ ಪ್ರಬಂಧ ಸಂಪುಟ' ೧೯೯೨ರಲ್ಲಿ 'ಸಂಪದ'ದಿಂದ ಪ್ರಕಟವಾಯಿತು. ಅತ್ಯಲ್ಪ ಅವಧಿಯಲ್ಲಿಯೇ ಪ್ರತಿಗಳೆಲ್ಲ ಮಾರಾಟವಾಗಿ ಓದುಗರಿಂದ ಬೇಡಿಕೆಯಿದ್ದರೂ ಈವರೆಗೆ ಅದನ್ನು ಪುನರ್ಮುದ್ರಿಸಲಾಗಿರಲಿಲ್ಲ. ಹದಿನೈದು ವರ್ಷಗಳ ಬಳಿಕ ಇದೀಗ ಈ ಕೃತಿಯ ಎರಡನೆಯ ಆವೃತ್ತಿಯನ್ನು ಹೊರತರಲಾಗಿದೆ. ಇದನ್ನು ಪುನರ್ಮುದ್ರಿಸಲು ಅನುಮತಿಯಿತ್ತ ವಿ.ಸೀ. ಅವರ ಸುಪುತ್ರರಿಗೆ ನಾವು ಕೃತಜ್ಞರಾಗಿದ್ದೇವೆ. ಹಿಂದೆ ಇದನ್ನು ಮುದ್ರಿಸಿಕೊಟ್ಟಿದ್ದ ನೇತ್ರಾ ಪ್ರಿಂಟರ್ಸ್‌ನ ಗೆಳೆಯರೇ ಈಗಲೂ ಇದನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ; ಅವರಿಗೆ ನಮ್ಮ ವಂದನೆಗಳು.

ಸಾಹಿತ್ಯಾಸಕ್ತರಿಗೆ ಈ ಸಂಪುಟ ಮೆಚ್ಚಿಕೆಯಾಗುವುದೆಂದು ನಂಬಿದ್ದೇವೆ.

ಎಂ. ವಿ. ವೆಂಕಟೇಶಮೂರ್ತಿ
ವಿ.ಸೀ. ಸಂಪದ, ಬೆಂಗಳೂರು - ೮೫

# ಸಮಗ್ರ ಗದ್ಯ–1

# ಲಲಿತ ಪ್ರಬಂಧ ಸಂಪುಟ

# ಪರಿವಿಡಿ


ಪಂಪಾಯಾತ್ರೆ 1

**ಬೆಳುದಿಂಗಳು**

ಮೈಸೂರು ರುಮಾಲು 55
ಕಾಯಿಲೆಗಳು 64
ಬೆಳುದಿಂಗಳು 72
ಮಳೆ 81
ಹೆಣ್ಣು 92
ದೋಸೆ 106
ಯಾವಾಗಲೂ ಓದೇನೆ 119
ನನ್ನ ಜೀವನ ದರ್ಶನ 126
ಶಿಸ್ತು 133
ಪತ್ರದೂತ 144

**ಸೀಕರಣೆ**

ಕೋಳಿ 157
ನೆನಪು 174
ನಿಂಬೆ 184
ಮದುವೆ 191
ಬದನೆಕಾಯಿ 203
ಕಡಲಕರೆ 208
ಹೊನ್ನು 222
ಹೆಣ್ಣು (ಮುಂದುವರೆದುದು) 233
ಮಣ್ಣು 244
ಸಾವು 251
ಮಾವು 262
ಇವರಿಗೆ 274
ನಮ್ಮ ಅಜ್ಜಿಯ ಅಡಿಗೆ 282

**ಅನುಬಂಧ** 297

# ಪಂಪಾಯಾತ್ರೆ

೧

ಹಂಪೆ ಪುಣ್ಯಕ್ಷೇತ್ರ; ಇಂಥಾ ಪುಣ್ಯಸ್ಥಳದಲ್ಲಿ ಇಷ್ಟು ಚೇಳು ಮೊಂಡರಕಪ್ಪೆಗಳು ಏಕಿವೆಯೊ ಆ ಪಂಪಾಪತಿಗೇ ಗೊತ್ತು. ಮೊಳದುದ್ದ ಮೊಂಡರಕಪ್ಪೆ, ಗೇಣುದ್ದ ಚೇಳುಗಳೆ? ಈ ಜನರಿಗೆ ಭಯವೇ ಇಲ್ಲವೇನೊ? ಅವರಿಗಂತೂ ಅದು ಸಾಮಾನ್ಯವಾಗಿ ಹೋಗಿದೆ. ಹೊಸದಾಗಿ ಅಲ್ಲಿಗೆ ಆ ದಿನ ತಾನೆ ಹೋಗಿದ್ದ ನಮಗೆ ಮೈಯೆಲ್ಲ ಬೈರಿಗೆ ಹಿಡಿದಂತೆ ಆಗಿತ್ತು. ಏಕಪ್ಪ ಇಲ್ಲಿಗೆ ಬಂದೆವು? ಕಾಮಲಾಪುರದ ಬಂಗಲೆಯಲ್ಲಿ ಇಳಿದುಕೊಂಡಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು? ಅನಿಷ್ಟವೇನಾದರೂ ಸಂಭವಿಸಿದರೆ ಗತಿಯೇನು? ಇವನನ್ನು ಬೇರೆ ಜೊತೆಯಲ್ಲಿ ಕರೆದುಕೊಂಡು ಬಂದೆವಲ್ಲ— ಎಂದು ನನ್ನ ಜೊತೆಯವರು ಪಶ್ಚಾತ್ತಾಪ ಪಡುವುದಕ್ಕೆ ಆರಂಭಿಸಿದ್ದರು. ಅಲ್ಲಿದ್ದವರು, 'ಭಯವಿಲ್ಲ ಸ್ವಾಮಿ; ಒಂದೇ ಮನಸ್ಸಿನಲ್ಲಿ ಮಲಗಿಕೊಳ್ಳಿ; ಪಂಪಪ್ಪನ್ನ ನಂಬಿ ನಿದ್ದೆ ಹೋಗಿ; ಅವು ಏನು ಮಾಡುತಾವೆ?' ಎಂದರು. ನಮಗೆ ಧೈರ್ಯವಿಲ್ಲ, ಜೀವದಲ್ಲಿ ಜೀವವಿಲ್ಲ. ಇಳಿದುಕೊಂಡಿದ್ದ ಚಿಕ್ಕ ಮನೆಯಿಂದ ಹಾಸುಗೆ ಬಟ್ಟೆಗಳನ್ನೆಲ್ಲ ಹೊರಗೆ ತೆಗೆದುಹಾಕಿ, ಬಟ್ಟೆಬಟ್ಟೆಯನ್ನೂ ಕೋಟುಗಳ ಜೇಬುಗಳನ್ನೂ ರುಮಾಲುಗಳ ಸಂದಿಪದರಗಳನ್ನೂ ಮಡಿಪೆಟ್ಟಿಗೆ ಪಾರಾಯಣ ಪುಸ್ತಕಗಳ ಚೀಲವನ್ನೂ ಒಂದೊಂದನ್ನಾಗಿ ಕೊಡವಿ, ಒದರಿ, ಚೇಳು ಹಾವುಗಳಾವುವೂ ಇಲ್ಲವೆಂದು ನಿಶ್ಚಯಮಾಡಿಕೊಂಡು, ಎಲ್ಲವನ್ನೂ ಹೊತ್ತುಕೊಂಡು ದೇವಸ್ಥಾನದ ಒಳಮಂಟಪಕ್ಕೆ ತೆಗೆದುಕೊಂಡು ಹೋಗಿ, ದೊಡ್ಡದೊಂದು ದೀಪದ ಬೆಳಕಿನಲ್ಲಿ ಒಬ್ಬರು ಕಾವಲು ಕುಳಿತೆವು. ಎದೆಯಲ್ಲಿ ಪುಕ ಪುಕ ಭಯ. ದೀಪವಿದೆ; ಪಂಪಾಪತಿಯ ಅತಿ ನಿಕಟ ಸಾನ್ನಿಧ್ಯದಲ್ಲಿದ್ದೇವೆ; ಅವನು ನಡಸಿದಂತಾಗಲಿ ಎಂದು ಸಮಾಧಾನವನ್ನೂ ಧೈರ್ಯವನ್ನೂ ಹೇಳಿಕೊಂಡು ಮಲಗಬಾರದೆ? ಉಹುಂ, ಬಾಯಿ ಧೈರ್ಯ ಹೇಳುತ್ತಿದ್ದರೂ—ಮನಸ್ಸು ಕೇಳಬೇಕಲ್ಲ. ಎಲ್ಲರೂ ಊಟಮಾಡಿ ಹಾಸುಗೆಗಳನ್ನು ಒಬ್ಬರ ಪಕ್ಕದಲ್ಲಿ ಒಬ್ಬರು ಒತ್ತಾಗಿ ಹಾಸಿ ಮಲಗಿಕೊಂಡೆವು. ನಡುನಡುವೆ ಹೆಚ್ಚಾಗಿ ಜಾಗ ಬಿಡಕೂಡದೆಂದು ಕರಾರು ನಡೆಯಿತು. ಒಪ್ಪಂದದ ಮೇರೆಗೆ ಒತ್ತೊತ್ತಾಗಿ ಮಲಗಿದೆವು. ನಮ್ಮ ಐವರ ತಲೆ ಭಾಗಗಳಿಗೆ ನಡುವೆ ದೀಪವೊಂದು ಉರಿಯುತ್ತಿತ್ತು. ಅದು ಹಾಗೆಯೇ ರಾತ್ರಿಯೆಲ್ಲ ಉರಿಯುತ್ತಿರ ಬೇಕೆಂದು ನಿರ್ಣಯವಾಗಿತ್ತು. ಪಂಪಾಪತಿ ವಿರೂಪಾಕ್ಷೇಶ್ವರನ ದಿವ್ಯ ಸನ್ನಿಧಿಯಲ್ಲಿ ಕೂಡ ಅಷ್ಟು ಪ್ರಕಾಶಮಾನವಾದ 'ಅಖಂಡ' ದೀಪವಿತ್ತೋ ಇಲ್ಲವೊ ತಿಳಿಯದು.

ಮೊದಲೆ ಎಚ್ಚರದಿಂದ ಇರಬೇಕೆಂದೂ ನಾವಂತೂ ಷರತ್ತುಗಳನ್ನು ಮಾಡಿಕೊಂಡೇ ಇದ್ದೆವಲ್ಲ. ಸ್ವಲ್ಪ ಹೊತ್ತು ಯಾರೂ ಮಾತನಾಡಲಿಲ್ಲ. ಕದಲು ಮೆದಲದೆ, ಮುತ್ತಿ ಬರುವ ವಿಷಪ್ರಾಣಿಗಳ ಯೋಚನೆಯನ್ನು ಮನಸ್ಸಿನಿಂದ ಸರ್ವ ಪ್ರಯತ್ನದಿಂದಲೂ ದೂರಮಾಡುತ್ತ, ಸುಮಾರು ಕಾಲು ಗಂಟೆಯ ಕಾಲ ಹಾಗೆಯೇ ಕಳೆದೆವು. ತಟ್ಟನೆ ಮೂರ್ತಿಗಳು ಅಂಬಿನಂತೆ ಮೇಲಕ್ಕೆಗರಿ ನಿಂತು ಷರಟು ಪಂಚೆಗಳನ್ನು ಕೊಡವಿಕೊಂಡರು. ಹಾಸುಗೆ ಬಟ್ಟೆಗಳನ್ನು ಕಾಲಿನಿಂದ ಒದ್ದು, ಚೆಲ್ಲಾಡಿ, ನಮ್ಮ ಕಡೆ ಬಂದು ಎಲ್ಲರನ್ನೂ ಎಬ್ಬಿಸಿ ಬಿಟ್ಟರು. "ಏಕ್ರಿ, ಏನೋ ಮೇಲೆ ಬಿತ್ತು; ಹರಿದು ಹೋಯಿತು; ಮೈಯೆಲ್ಲ ತಣ್ಣಗಾದಂತಾಯಿತು" ಎಂದರು. ಅಧಿಕಾರಿಯ ಜೋಡಿನ ಸಪ್ಪಳವನ್ನು ಕೇಳಿ ತೂಕಡಿಸುವ ಗುಮಾಸ್ತರು ಬೆಚ್ಚಿ ಬಿದ್ದು ಏಳುವಂತೆ ಎಲ್ಲರೂ ಎದ್ದು, ಬಟ್ಟೆಗಳಿಂದ ದೂರ ಸರಿದು ನಿಂತೆವು. ದೀಪವನ್ನು ಮೇಲೆತ್ತಿ ಒಬ್ಬರು ಹಿಡಿದುಕೊಂಡರು. ನಾವು ಮೂವರು ಸುಮ್ಮನೆ ಕಕ್ಕಾಬಿಕ್ಕಿಯಾಗಿ ನೋಡುತ್ತ ಕಿಂಕರ್ತವ್ಯ ಮೂಢರಾಗಿ ನಿಂತೆವು; ನನ್ನ ಮೈ ಗೂದಲು ನಿಮಿರಿನಿಂತವು; ಯಜಮಾನರು ಹತ್ತಿರವಿದ್ದ ಒಂದು ಗುಜ್ಜು ಗೋಲನ್ನು ಹಿಡಿದುಕೊಂಡು ಬಂದರು. ಅದೇನೊ ಎಲ್ಲಿ ಹೋಯಿತೊ ಎಂದು ನಾಲ್ಕೂ ಕಡೆ ಹುಡುಕುವುದಕ್ಕೆ ಮೊದಲಾಯಿತು. ಯಾರಿಗೂ ಹಾಸುಗೆಗಳ ಹತ್ತಿರ ಹೋಗಿ ಅವನ್ನು ಮುಟ್ಟುವುದಕ್ಕೆ ಮಾತ್ರ ಧೈರ್ಯ ಇಲ್ಲ. ಯಜಮಾನರೇ ಮುಂದೆ ಬಂದರು. "ಬೇಡಿ ಸಾರ್, ಸ್ವಲ್ಪ ತಾಳಿ, ಏನೊ–ಹೇಗೊ" ಎಂದು ನಾವು ನಾಲ್ವರೂ ಹೇಳಲು ಅವರು ಹಿಂದೆ ಸರಿದು ನಿಲ್ಲಬೇಕಾಯಿತು. ನಮ್ಮ ಈ ದುಃಸ್ಥಿತಿಯ ಹುಚ್ಚು ಸಂಭ್ರಮವನ್ನು ದೂರದಿಂದ ನೋಡಿದ ಬೈರಾಗಿ ಚೆನ್ನಯ್ಯನು ಅಲ್ಲಿಗೆ ಬಂದು ಎಲ್ಲವನ್ನೂ ಹುಡುಕಿದನು. ಎಲ್ಲಿಯೂ ಯಾವುದೂ ಕಾಣಲಿಲ್ಲ. ಹಾಸುಗೆಗಳನ್ನೆಲ್ಲ ಪುನಃ ಕೊಡವಲು, ಕತ್ತಲೆಯಲ್ಲಿ ಜಾಗ್ರತೆ ಜಾಗ್ರತೆಯಾಗಿ ನನ್ನ ಕಡೆಗೇ ಹರಿದು ಕಪ್ಪಗೆ ಬರುತ್ತಿರುವ ಪ್ರಾಣಿಯೊಂದು ಕಾಣಿಸಿತು. ಚೆನ್ನಯ್ಯನು ನೋಡಿದನು. ಚೇಳೂ ಅಲ್ಲ, ಹಾವೂ ಅಲ್ಲ: "ಏನು ಸ್ವಾಮಿ, ನಿಮಗೇಕೆ ಇಷ್ಟು ಗಾಬರಿ? ಜೇಡರ ಹುಳ ಬಂದರೆ ಹೀಗೆ ಹುಚ್ಚು ಕುಣಿತ ಷುರುಮಾಡಿದ್ದೀರಲ್ಲ" ಎಂದು ಚಪ್ಪಾಳೆ ಹೊಡೆದುಕೊಂಡು ಮೊಳಕಾಲು ಬಡಿದುಕೊಂಡು ನಗುವುದಕ್ಕೆ ಪ್ರಾರಂಭಿಸಿದನು. ಬೇರೊಂದು ಸಮಯದಲ್ಲಿ ಯಾರಾದರೂ ಈ ರೀತಿ ಮಾತನಾಡಿದ್ದರೆ ಅವರಿಗೆ ಗ್ರಹಚಾರ ಬಿಡಿಸುತ್ತಿದ್ದೆವು. ಇತರರಿಗೆ ಗ್ರಹಚಾರ ಬಿಡಿಸುವ ವಿಷಯದಲ್ಲಿ ನಮ್ಮಲ್ಲಿ ಯಾರಿಗೆ ಯಾರೂ ಕಡಮೆಯಾದವರಲ್ಲ. ಬಂದ ಕೋಪವನ್ನು ನುಂಗಿಕೊಂಡು ಅವನ ಜೊತೆಯಲ್ಲಿ – ವೀರಾಳುಗಳು – ನಾವು ನಗುತ್ತ ನಿಂತೆವು. ರಾಯರು ಇದ್ದವರು, 'ಮೂರ್ತಿ, ಒಳ್ಳೆಯ ಕೆಲಸ ಕೊಟ್ಟಿರಿ ಕಾಣ್ರೆ; ಎಂಥ ದಿಗಲು ಹಚ್ಚಿ ಬಿಟ್ಟಿರಿ' ಎಂದರು. ಮೂರ್ತಿಗಳು 'ನಾನೇನು ಸಾರ್ ಮಾಡಲಿ; ಏನೋ ಮೇಲೆಬಿತ್ತು; ಎಷ್ಟೋ ಹೊತ್ತು ನೋಡೋಣ ಎಂದು ಸುಮ್ಮನೆ ಇದ್ದೆ; ಮುಲ ಮುಲ ಎಂದು ಮೈ ಮೇಲೆ ಹರಿಯಿತು. ಆಮೇಲೆ ಇದೇನು ಬಂತಪ್ಪ ಗ್ರಹಚಾರ ಇಲ್ಲಿ ಮಲಗಿದ್ದರೂ ಎಂದುಕೊಂಡವನು ಎದ್ದುಬಿಟ್ಟೆ. ಜೇಡರ ಹುಳು

ಆಗೋ ಹೊತ್ತಿಗೆ ಸರಿಹೋಯಿತು! ಇನ್ನೇನಾದರೂ ಆಗಿದ್ದಿದ್ದರೆ? ಈ ಹುಳು ತಾನೆ ನೋಡಿ ಸಾರ್, ಅಷ್ಟು ದೊಡ್ಡದನ್ನು ಎಲ್ಲಿಯೂ ನೋಡಿಲ್ಲ ನಾನು' ಎಂದರು. ಯಜಮಾನರು 'ಎಲ್ಲರೂ ಸರಿಯೆ ಬಿಡಿ, ಅಸಹಾಯಶೂರರು. ನಮಗೆಲ್ಲ ಇಷ್ಟು ಧೈರ್ಯ ಇರುವ ಹೊತ್ತಿಗೇ ನಮ್ಮ ದೇಶೋದ್ಧಾರ ಕಾರ್ಯ ಈ ಗತಿಗೆ ಬಂದದ್ದು' ಇತ್ಯಾದಿಯಾಗಿ ಒಂದು ದೊಡ್ಡ ಉಪನ್ಯಾಸವನ್ನು ಕೊಟ್ಟರು. ಇಷ್ಟಾದ ಮೇಲೂ ನಮ್ಮ ಕಷ್ಟನಿವಾರಣೆಯಾಗಲಿಲ್ಲ; ನಮ್ಮ ಪಿರಿಕಿತನ ದೂರವಾಗಲಿಲ್ಲ.

'ಹಾಸುಗೆ ಗೀಸುಗೆ ಹಾಗೇ ಇರಲಿ, ಸಾರ್; ನೀವು ಯಾರು ಏನು ಬೇಕಾದರೂ ಮಾಡಿಕೊಳ್ಳಿ, ನಾನಂತೂ ಮಲಗಿಕೊಳ್ಳುವುದಿಲ್ಲ' ಎಂದು ವೆಂಕಟೇಶಯ್ಯನವರು ಹೇಳಿದರು.

ಯಜ – ಇನ್ನೇನು ಮಾಡುತ್ತೀರಿ, ಆದರೆ?

ವೆಂ – ಹೀಗೇ ಕೂತುಕೊಂಡೊ ನಿಂತುಕೊಂಡೊ ರಾತ್ರಿ ದಬ್ಬುತ್ತೇನೆ.

ರಾಯರು – ನನಗೂ ಹಾಗೇ ತೋರುತ್ತೆ, ಸಾರ್; ದೇವರು ಗೀವರು ಎಲ್ಲ ಸಾಕು. ಚೇಳಿನ ಕೊಂಡಿಯ ದರುಶನದಿಂದಲೇ ಮುಕ್ತಿ ಬಂದಿತು. ಬೆಳಗಾಗುತ್ತಲು ಇಲ್ಲಿಂದ ಹೊರಟು, ಊರಿಗೆ ಹೋಗಿ ಸೇರಿಕೊಳ್ಳೋಣ; ಇಲ್ಲಿರುವುದಕ್ಕೆ ನನ್ನ ಕೈಲಿ ಸುತರಾಂ ಆಗುವುದಿಲ್ಲ; ಮಧ್ಯಾಹ್ನ ನೋಡಿದ್ದೇ ಸಾಕು. ಈಗಲೇ ಮೂಟೆ ಕಟ್ಟಿ ಹೊರಡು ಅಂದರೂ ನಾನು ಸಿದ್ಧ.

ಆಗ ಸುಮಾರು ನಮ್ಮಲ್ಲಿ ಎಲ್ಲರಿಗೂ, ವಿಶೇಷವಾಗಿ ಐವರಲ್ಲಿ ಮೂವರಿಗೆ, ಅದೇ ಭಾವನೆ–ಒಳಗೆ ಮನಸ್ಸಿನಲ್ಲಿ; ಆದರೆ 'ಇಷ್ಟು ದೂರ ಬಂದು ಪಂಪಾ ಸರೋವರ, ವಿಟ್ಠಲಸ್ವಾಮಿ ಗುಡಿ, ಇವನ್ನು ನೋಡಿಕೊಂಡು ಹೋಗದಿದ್ದರೆ ಏನಪ್ಪ' ಎಂದು ಮುಂತಾಗಿ ಮಾತು ಬೆಳೆಯಲು, 'ಬೆಳಗಾಗಲಿ; ಯಾವುದೊಂದೂ ತೀರ್ಮಾನ ಮಾಡೋಣ, ಈಗ ಸಮಯ ಚೆನ್ನಾಗಿಲ್ಲ' ಎಂದು ಎಲ್ಲರೂ ಮನಸ್ಸು ಬಿಗಿ ಹಿಡಿದು ಪುನಃ ಹಾಗೂ ಹೀಗೂ ಧೈರ್ಯಮಾಡಿ ಮಲಗಿಕೊಂಡೆವು. ಭಯದ ತೀವ್ರತೆ ಕಡಮೆಯಾಗಿ, ಅದು ಮರೆತು ಹೋಗುವಂತೆ ಏನೇನೊ ಬೇರೆ ಪ್ರಸ್ತಾಪಗಳನ್ನೆತ್ತಿ ಮಾತನಾಡುತ್ತ ಒಬ್ಬೊಬ್ಬರಾಗಿ ನಿದ್ರಾವಶರಾದೆವು. ನಾನು ಕೋಳಾಲಮ್ಮನಿಗೆ ಹರಸಿಕೊಂಡು ನಿರ್ಭಯದಿಂದ ನಿದ್ದೆ ಮಾಡಿದೆ. ಮಧ್ಯಾಹ್ನದ ಸುತ್ತುವಿಕೆಯಿಂದ ಆಯಾಸವಾಗಿದ್ದುದರಿಂದ ಎಲ್ಲರಿಗೂ ಚೆನ್ನಾಗಿಯೇ ನಿದ್ದೆ ಹತ್ತಿತೆಂದು ಹೇಳಬೇಕು. ಪಂಪಾಪತಿಯ ಅನುಗ್ರಹ; ಯಾರಿಗೂ ವಿಷದ ಬಾಲ ಕುಟುಕಲಿಲ್ಲ!

ಬೆಳಗ್ಗೆ ಏಳುವ ಹೊತ್ತಿಗೆ ಏಳು ಗಂಟೆಯ ಮೇಲಾಗಿತ್ತು. ರಾತ್ರೆಯೆಲ್ಲ ಬಲವಾಗಿ ಮಳೆ ಬಂದಿದ್ದುದರ ಪ್ರಜ್ಞೆಯೇ ನಮ್ಮಲ್ಲಿ ಯಾರಿಗೂ ಇಲ್ಲ. ಎದ್ದವರು ಸ್ನಾನಾದಿಗಳನ್ನು

ತೀರಿಸಿಕೊಂಡು ಬರೋಣವೆಂದು ನದಿಯ ಕಡೆ ಹೋಗಿ ನೋಡಿದರೆ ನದಿ ಐದಾರು ಅಡಿಗಳಷ್ಟು ಮೇಲೆ ಬಂದಿತ್ತು. ಪ್ರವಾಹ ಇನ್ನೂ ಹೆಚ್ಚುತ್ತಲೇ, ನದಿಯ ದಡ ಇನ್ನೂ ಕುಸಿದು ಬೀಳುತ್ತಲೇ ಇತ್ತು. ಪ್ರವಾಹದ ಜೋರು ಜಾಸ್ತಿಯಾಗಿದ್ದುದರಿಂದ ಯಾರೂ ಅಲ್ಲಿ ಸ್ನಾನಮಾಡದೆ, ದೇವಸ್ಥಾನದ ಒಳಗಣ ಬಾವಿಯಲ್ಲಿಯೇ ಸ್ನಾನಾಚಮನಗಳನ್ನು ತೀರಿಸಿಕೊಂಡೆವು. ಆ ನೀರು ಎಷ್ಟು ಸೊಗಸಾಗಿ ಎಷ್ಟು ಪವಿತ್ರವಾಗಿ ಇತ್ತೋ ! ನಮಗೆ ನೀರು ಸೇದುವ ಕಷ್ಟ ತಪ್ಪಲೆಂದು ನಾಲ್ಕು ಐದು ಆಳುದ್ದ ಆಳದ ಬಾವಿ ನಮ್ಮ ಕೈಗೆ ಎಟಕುವಂತೆ ಮೇಲೆ ಬಂದಿತ್ತು. ಹಂಡೆಯಿಂದ ನೀರು ತುಂಬಿಕೊಂಡು ಸ್ನಾನ ಮಾಡುವಂತೆ ನೀರನ್ನು ತುಂಬಿಕೊಂಡು ಸ್ನಾನ ಮಾಡಿದೆವು. ನಮ್ಮ ವಿಷಯದಲ್ಲಿ ನಿರ್ಜೀವ ವಸ್ತುಗಳಿಗೂ ಅಷ್ಟು ಮಮತೆ, ಕರುಣೆ!

ಯಜಮಾನರು ಬಹು ನಿಷ್ಠುರು; ಅವರಿಗೆ ಕಾಫೀ ಟೀಗಳ ಅಭ್ಯಾಸವಿಲ್ಲ, ನಾನು ಬಹಳ ಕಷ್ಟಪಟ್ಟು ಉರಿಯುವ ಬಿಸಿಲಿನಲ್ಲಿ ಅಂಗಡಿಗೆ ಓಡಿಹೋಗಿ ಹೊಸಪೇಟೆಯಿಂದ ಒಂದು ಪೌಂಡು ಪುಡಿಯನ್ನು ತಂದಿದ್ದೆ. ಹಿಂದಿನ ದಿನದ ಅವಸರದಲ್ಲಿ ಕಾಫೀ ಮಾಡಿ ಕುಡಿದು ಹೋಗುವುದಕ್ಕೆ ಆಗಿರಲಿಲ್ಲ. ಅದರ ದುಷ್ಫಲಗಳು ಎಷ್ಟು ಮಹತ್ತರವಾದುವೆಂಬುದು ಯಜಮಾನರಿಗೆ ಆ ಮಧ್ಯಾಹ್ನ ತಿಳಿದುಬಂದಿತ್ತು. ಬಿಸಿಲು ಬಾಯಾರಿಕೆಗಳಿಂದ ದಣಿದು ಕಂಗೆಟ್ಟು, ಎಳೆಯ ಅಶ್ವತ್ಥಪತ್ರಗಳಂತೆ ಬಾಡಿ, ಹಜಾರ ರಾಮಸ್ವಾಮಿ ದೇವಸ್ಥಾನದ ಹೊರಹಜಾರದಲ್ಲಿ ತಂಪಾಗಿ ಮಲಗಿ ಮೂರು ಗಂಟೆಗಳ ಕಾಲ ನಿದ್ರೆ ಮಾಡಿದ್ದುದು ಅವರ ನೆನಪಿನಲ್ಲಿದ್ದಿತು. 'ನಿಮಗೆ ಬೇಕಾದಷ್ಟು ಕಾಫೀ ಮಾಡಿ ಕುಡಿಯಿರಪ್ಪ. ಆಮೇಲೆ ಮುಖಗಳನ್ನು ಪಿಟೀಲು ಕಮಾನುಗಳಂತೆ ಉದ್ದ ಎಳೆದು ಜೋಲುಹಾಕಬೇಡಿ' ಎಂದು ಅವರು ಹೇಳಿದರು. ವಸಂತಕುಸುಮಗಳ ಹಾಗೆ ನಮ್ಮ ಮುಖಕುಸುಮಗಳು ಅರಳಿ ಹಿಗ್ಗಿದವು. ಹಂಪೆಯ ಕಾಫಿ ಎಷ್ಟು ರುಚಿಯಾಗಿತ್ತೋ! ದೇವತೆಗಳು ಕುಡಿವ ಅಮೃತ ಅತಿ ಮಧುರವಾದುದೆಂದು ಹೇಳುತ್ತಾರೆ. ಅವರಾರಾದರೂ ಹಂಪೆಗೆ ನಾವಿರುವಲ್ಲಿಗೆ ಇಳಿದು ಬಂದಿದ್ದು ನಾವು ಕುಡಿದ ಕಾಫಿಯಲ್ಲಿ ಒಂದು 'ಅರ್ಧ ಕಪ್' ಕುಡಿದಿದ್ದರೆ, ಅವರು ಅಮೃತಪಾತ್ರೆಗಳನ್ನು ಅಧೋಲೋಕದ ಅತಲಜಲದೊಳಕ್ಕೆ ಬೀಸಾಡಿ ಕಾಫಿಯ ಅಭ್ಯಾಸವನ್ನು ಖಂಡಿತವಾಗಿ ಮಾಡಿಕೊಳ್ಳುತ್ತಿದ್ದರೆಂದು ನಾನು ಶಪಥಮಾಡಿ ಹೇಳಬಲ್ಲೆ.

ಹಂಪೆಯ ಯಾತ್ರೆಯಲ್ಲಿ ದಾರಿಯುದ್ದಕ್ಕೂ ಯಜಮಾನರೇ ನಮಗೆ ಅನ್ನದಾತರು. ಪರಸ್ಥಳಗಳಲ್ಲಿ ಅವರು ಇತರರ ಕೈಯಲ್ಲಿ ಊಟ ಮಾಡುವವರಲ್ಲ. ಅಡಿಗೆಗೆ ಬೇಕಾದ ಸಮಸ್ತ ಸಂಭಾರದ ಸಾಮಾನುಗಳನ್ನೂ ಉಪ್ಪು ಉಪ್ಪಿನಕಾಯಿ ಊಟದೆಲೆ ಚಿಕ್ಕಸೌದೆ ಮೊದಲುಗೊಂಡು ಎಲ್ಲವನ್ನೂ ತಂದಿದ್ದರು. ಇಲ್ಲದ 'ಕಾಷ್ಠವ್ಯಸನ'ಗಳನ್ನು ಇವರು ಏಕೆ ಇಟ್ಟುಕೊಳ್ಳುವರೊ! ಎಲ್ಲಿ ಹೋದರೂ ಈ ಹಾಳು ಸಂಸಾರ ಹೊತ್ತುಕೊಂಡು ಹೋಗುತ್ತಾರಲ್ಲ; ಹೋಗುವ ಕಡೆ ಹೇಗೊ ಹಾಗೆ ಸುಲಭವಾಗಿ ತಿಂಡಿತೀರ್ಥಗಳಿಗೆ

ಸರಿ ನೋಡಿಕೊಂಡು ಹೋಗಬಾರದೇ? – ಎಂದು ಅಂದುಕೊಳ್ಳುತ್ತಿದ್ದೆವು. ನಾವು ಈಗಿನ ಕಾಲದವರು. ಹೇಗೆ ಬೇಕೆಂದರೆ ಹಾಗೆ ಹೊಂದಿಕೊಂಡು ಹೋಗಲು ಬಲ್ಲವರು; ನಮಗೆ ವ್ರತವಿಲ್ಲ, ನಿಷ್ಠೆಯಿಲ್ಲ, ಆಚಾರವಿಲ್ಲ; ಊಟ ಉಪಚಾರಗಳಲ್ಲಿ ಯಗ್ಗಿಲ್ಲ. ಹೋಟೆಲುಗಳಿರುವ ಕಡೆ ಹೋಗಿ ಊಟಮಾಡುವೆವು. ತಿಂಡಿ ಗಿಂಡಿ – ಅವು ಹೇಗಾದರೂ ಇರಲಿ – ಮಾಡುವವರು ಬ್ರಾಹ್ಮಣರಾಗಿದ್ದರೆ ಸರಿ – ಹೋಗಿ ತಿಂದುಬಿಡುವೆವು. ಆನಂದ ಭವನಗಳಲ್ಲಿ ತಿನ್ನುವ ನಮಗೆ ಎಲ್ಲಾದರೇನು? ಬೊಂಬಾಯಾದರೂ ಸರಿ, ಇಂಗ್ಲೆಂಡಾದರೂ ಆಯಿತು – ನಿಕರಾಗುವ ಆಗಲೇಳಿ – ಎಲ್ಲಾದರೂ ಯೋಚನೆ ಇಲ್ಲ. ಅವರಿಗೆ ಹಾಗಲ್ಲ. ಆದರೆ ಹಂಪೆಯಲ್ಲಿ ಹೋಟೆಲನ್ನೆಲ್ಲಿಂದ ತರಬೇಕು? ಯಜಮಾನರಂಥವರು ಕೃಪೆತೋರಿ ಅನ್ನ ಮಾಡಿ ಹಾಕದಿದ್ದರೆ ನಮಗೆ ಎಡಮಗ್ಗುಲೆ! ನಾವು ಮಾಡಿಕೊಂಡು ತಿನ್ನುವ ಸಂಭವವುಂಟೆ? ನಮ್ಮಲ್ಲಿ ಎಲ್ಲರೂ ಧೀರರೇ – ಎಲ್ಲರೂ ಪಾಕಶಾಸ್ತ್ರ ಪ್ರವೀಣರೇಯೆ. ಆದರೆ ಮೈ ಬಗ್ಗಿಸಿ ಅಡಿಗೆ ಮಾಡುವುದಕ್ಕೆ ಕೂಡುವುದು ಯಾರ ಕೈಯಲ್ಲೂ ಆಗುತ್ತಿರಲಿಲ್ಲ. ನಾವು ನಾವೇ ಆಗಿದ್ದರೆ ಅಲ್ಲೇ ವಾಸವಾಗಿದ್ದ ಮುದುಕಿಯೊಬ್ಬರಿಗೆ ಹೇಳಿ, ಬೇಕಾದ ಸಾಮಾನುಗಳನ್ನು ತಂದು ಹಾಕಿ ಅಡಿಗೆ ಮಾಡಿಸಿ ತಿಂದು ಮುಗಿಸುತ್ತಿದ್ದೆವು. ವಿಚಾರಿಸಿದುದರಲ್ಲಿ ನನಗೆ ಅವರು ನಾಲ್ಕೈದು ತಲೆ ಹಿಂದಿನ ಸಂಬಂಧವೆಂದೂ ತಿಳಿಯಿತು. ಈಗಿನ ಕಾಲದವರು ಧೀಮರು; ನಮಗೆ ಯಾವ ವಿಧವಾದ ಗಾಸಿ, ನಿರ್ಬಂಧ ಸಹಿಸವು. ನಾವು ಸುಖಪಡಬೇಕೆನ್ನುವ ರೀತಿ ಬೇರೆ; ವಿಧ ಬೇರೆ; ಪೂರ್ವಕಾಲದ ಹಿರಿಯರ ರೀತಿ ನಡೆವಳಿಗಳೇ ಬೇರೆ.

ಆ ದಿನ ವಿದ್ಯಾರಣ್ಯರಿಗೆ ಅಭಿಷೇಕ ಮಾಡುವುದೆಂದು ನಿರ್ಣಯಿಸಿ ಎಲ್ಲರೂ ನದಿಯಲ್ಲಿ ಸ್ನಾನ ಮಾಡಿಕೊಂಡು ನೇಮದಿಂದ ಅಭಿಷೇಕ, ಪೂಜೆ, ಆರಾಧನೆ ನಡೆಯಿತು. ರಾಯರು ಬರೆದ "ವಿದ್ಯಾರಣ್ಯ ಸ್ತೋತ್ರ"ವನ್ನು ಓದಿ ಯತಿಗಳಿಗೆ ಒಪ್ಪಿಸಿಯಾಯಿತು. ದೇವರ ನೈವೇದ್ಯಕ್ಕೆ ಅಲ್ಲಿ ಸಿಕ್ಕಿದ ಬಾಳೆ, ತೆಂಗು ಇಟ್ಟರು. ಯಜಮಾನರು ಹೆಸರುಬೇಳೆ ಪಾಯಸ ಮಾಡಿದ್ದರು. ಆಗ ಅದರ ಬಟವಾಡೆ ಸಂದಾಯವಾಗುವ ಹಾಗಿರಲಿಲ್ಲವಾದುದರಿಂದ ತೆಂಗಿನ ಕರಟ ಜಜ್ಜಿ ಕೊಬ್ಬರಿಯನ್ನು ಹಂಚಿದರು; ಎರಡೆರಡು ಬಾಳೆಹಣ್ಣು, ಅಷ್ಟು ಕೊಬ್ಬರಿ, ನೈವೇದ್ಯಕ್ಕಿದ್ದ ಒಣದ್ರಾಕ್ಷಿ ಕಲ್ಲುಸಕ್ಕರೆ ಈ ನಾಲುವರು ಚಿಲ್ಲರೆ ದೇವರಿಗೆ ಅರ್ಪಿತವಾದವು.

ಆಮೇಲೆ ಯಜಮಾನರು ಊಟಕ್ಕೆ ಬಡಿಸಿದರು; ವಿದ್ಯಾರಣ್ಯರ ಪೂಜೆಯಲ್ಲವೆ? ತೊವ್ವೆ, ಪಲ್ಯ, ಉಪ್ಪಿನಕಾಯಿ, ಸಾರು ಎಲ್ಲ ಆಯಿತು. ಪಾಯಸ ಗಂ ಎಂದಿತ್ತು. ಹುರಿದ ಹೆಸರುಬೇಳೆಯದು. ಒಣಕೊಬ್ಬರಿ, ಏಲಕ್ಕಿ, ಕೇಸರಿ ಹಾಕಿದ್ದರು. ಯಜಮಾನರ ಅಚ್ಚುಕಟ್ಟುತನ ಅವರ ಕೈಗೇ ಸಂದದ್ದು. ಬಹು ರುಚಿಯಾಗಿತ್ತು. ರಾಯರಿಗೆ ಸಂತೋಷ ತಡೆಯಲಾಗಲಿಲ್ಲ. 'ಪಾಯಸ, class ಪಾಯಸ ಸಾರ್; ನೀವು ನಮ್ಮೊಡನೆ ಕುಳಿತಿದ್ದರೆ

ನಿಮಗೆ ಆ ರುಚಿ ಗೊತ್ತಾಗುತ್ತಿತ್ತು. ಇದಕ್ಕೆ ಏನು ಕೊಟ್ಟೇವು ಸಾರ್ ನಿಮಗೆ?' ಎಂದರು.

ಯಜ – ನೆಮ್ಮದಿಯಾಗಿ ಕೂತು ಊಟ ಮಾಡಿ. ಸಾಕಷ್ಟು ಮಾಡಿದ್ದೇನೆ. ಸಂಕೋಚ ಬೇಡ – ಎಂದರು.

ರಾ – ನಿಮಗೆ ನಮ್ಮಂಥ ಮಕ್ಕಳು ಇನ್ನೂ ಆರು ಮಂದಿ ಆಗಲಿ ಎಂದು ಹರಸುವುದು ಅಧಿಕಪ್ರಸಂಗ; ಹಾರೈಸುತ್ತೇನೆ. ಇಂಥ ಉಪಕಾರವನ್ನು ಮಾಡುತ್ತ ನಿಮ್ಮ ವಂಶವನ್ನು ಬೆಳಗಲಿ.

ಯಜ – ಆರೂ ಆಗಬಹುದು; ಹತ್ತೂ ಆಗಬಹುದು. ವಯಸ್ಸು ನನ್ನನ್ನು ಹುಡುಗನಾಗಿಸುತ್ತದೆಯೇ. ಆದರೆ ನೋಡಿ. ನಿಮ್ಮಂಥವರು ಬೇಡ: ನೀವು ನಾನು ಹೇಳಿದ ಮಾತು ಕೇಳುವವರಲ್ಲ. ಇಂಥವರನ್ನು ನಡೆಸುವ ಕಷ್ಟ ನನಗೆ ಬಾರದಿರಲಿ; ನಿಮ್ಮಂಥ ಯೋಗ್ಯತೆಯವರಾದರೆ ಚಿಂತೆಯಿಲ್ಲ.

ರಾಯರಿಗೆ ಆ ಮಾತು ಸತ್ಯವೆನ್ನಿಸಿತಾಗಿ ಬೇರೇನೂ ನುಡಿಯಲು ಆಗದೆ "ಏನೋ ಸಾರ್, ನನ್ನ ತೃಪ್ತಿಯನ್ನು ನಿವೇದಿಸಬೇಕೆಂದು ಮಾತ್ರ ತೋರಿತು. ತಾಳಿಕೊಳ್ಳುವುದಕ್ಕಾಗದೆ ಹೇಳಿದೆ. ಅನ್ಯಾಯ ಮನ್ನಿಸಿರಿ" ಎಂದರು.

ಯಜ – ಮನ್ನಿಸದೆ ಮತ್ತೇನು ಮಾಡಲಿ?

ಇದು ಆಚೈರು ಮಾತು.

ಅದು ಹಾಗಿರಲಿ. ಯಜಮಾನರೇನೊ ಶುಚಿಯಾಗಿ, ರುಚಿಯಾಗಿ ಎಲ್ಲರಿಗೂ ಅಡಿಗೆ ಮಾಡಿ ಹಾಕುತ್ತಿದ್ದರು. ನಮಗೆ ಬೇಸರವೆಂದು ತೋರಿದರೆ ಮಿಕ್ಕ ಎಲ್ಲ ಕೆಲಸಗಳನ್ನೂ ತಾವೇ ಮಾಡುವರು. ಆದರೆ ಎಲ್ಲ ಕೆಲಸಗಳನ್ನೂ ಅವರಿಂದಲೇ ಮಾಡಿಸುವುದು ಧರ್ಮವೆ? ಮರ್ಯಾದೆಯೆ? – ಎಂದುಕೊಂಡವರು ಚಿಲ್ಲರೆ ಕೆಲಸಗಳೊಂದೊಂದನ್ನೂ ನಾವು ಒಬ್ಬೊಬ್ಬರು ಮಾಡುತ್ತಿದ್ದೆವು. ಕಸ ಗುಡಿಸುವುದು, ನೆಲ ಸಾರಿಸುವುದು, ಹುಳಿಹಚ್ಚಿ ದಿನಕ್ಕೆ ಎಂಟು ಸಲ ಪಾತ್ರೆ ತೊಳೆಯುವುದು, ಬೂದಿ ಇಟ್ಟಿಗೆ ಪುಡಿಗಳಿಂದ ಮುಸುರೆ ತಿಕ್ಕುವುದು. ಇಂಥ ಕೆಲಸಗಳು ಮಾಡಿದಷ್ಟೂ ಇರಲೇ ಇರುತ್ತಿದ್ದವಾದುದರಿಂದ ಒಬ್ಬರಲ್ಲದಿದ್ದರೆ ಒಬ್ಬರು ಇವುಗಳಲ್ಲಿ ಇರುತ್ತಲೇ ಇದ್ದೆವು. ಏನು ಕೆಲಸಗಳಪ್ಪ ಇವು, ಎಂದು ಗುಡಿಸುತ್ತ ಗುಡಿಸುತ್ತ ಸೊಂಟದ ಮೇಲೆ ಕೈಯಿಟ್ಟು ಕೊಂಡು ಒಬ್ಬರ ಮುಖವನ್ನೊಬ್ಬರು ನಿಸ್ತೇಜರಾಗಿ ನೋಡುತ್ತ, ಅರ್ಧ ಆರಿ ಹೋಗುವಂತಿರುವ ದೀಪದಂತೆ ನಗುತ್ತ, ಭಗವಂತನ ವಿಚಿತ್ರ ಸೃಷ್ಟಿಯಲ್ಲಿನ ಈ ದಿನಚರಿಯ ಕರ್ಮಗಳನ್ನು ಕುರಿತು ಚಿಂತಿಸುತ್ತಲೂ ವಿಧಿ ತಮ್ಮನ್ನು ಆ ಸ್ಥಿತಿಗೆ ತಂದುದಕ್ಕೆ ತಮ್ಮನ್ನೂ ವಿಧಿಯನ್ನೂ ಒಟ್ಟಿಗೆ ದೂಷಿಸಿಕೊಳ್ಳುತ್ತಲೂ ಇರುವುದನ್ನು ನೋಡಿದ್ದರೆ

ಯಾರೂ ಕಣ್ಣೀರು ಹಾಕುತ್ತಿದ್ದರು. ಆದರೆ ಮಾಡುವುದೇನು? ಪ್ರಾಪಂಚಿಕ ಜೀವನದಲ್ಲಿ ಈ ತೆರದ ಕರ್ಮಗಳೇ ಹೆಚ್ಚು. ಅದೂ ಅಲ್ಲದೆ ನಮಗೋಸ್ಕರವಾಗಿ ಅಷ್ಟು ದುಡಿಯುತ್ತಿರುವ ಅರವತ್ತು ವರುಷ ವಯಸ್ಸಿನ ಸಾತ್ವಿಕ ಯಜಮಾನರಿಗೆ ಅಸಮಾಧಾನವಾಗದಿದ್ದರೆ ಸಾಕು ಎಂಬುದೊಂದು ಆಶಯ. ಹಂಪೆಯಲ್ಲಿ ಇತರ ಕಡೆ ಊಟ ಉಪಚಾರ ಅಪಾಯಕರವೆಂದೂ ಕೇಳಿದ್ದೆವು. ಆ ಭಯದಿಂದ ನಮ್ಮ ಕರ್ತವ್ಯ ನಿಷ್ಠೆ ಬಲವತ್ತರವಾಗುತ್ತಿತ್ತು. ಮನೆಗಳಲ್ಲಿ ಹೆಣ್ಣು ಮಕ್ಕಳು ಬದುಕುವ ಸಮಸ್ತ ಕಾಲವೂ ಇದರಲ್ಲಿಯೇ ಉಳಿಯಬೇಕು ಎಂಬೆಣಿಕೆ ನಮಗೆ ಅವರಲ್ಲಿ ಗೌರವವುಂಟುಮಾಡಿತು. ಒಂದೊಂದು ಸಲ ಮಾತ್ರ ಆ ಕೆಲಸಗಳನ್ನು ಮುಗಿಸಿಕೊಂಡು ಹೊರಗೆ ಬಂದರೆ ಪ್ರತಿಯೊಬ್ಬರೂ ಹಣೆ ಹಣೆ ಬಡಿದುಕೊಳ್ಳುತ್ತ ವಿಕಟವಾಗಿ ನಗುತ್ತಿದ್ದುದನ್ನು ನೆನೆದುಕೊಂಡರೆ ಈಗಲೂ ಅಳು ಬರುವಂತಾಗುತ್ತದೆ. ಅವಶ್ಯ ಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ.

ಕಾಫೀಗೆ ಅನುಕೂಲ ಮಾಡಿಕೊಟ್ಟು ಯಜಮಾನರು ನಮ್ಮನ್ನು ಸುಪ್ರಸನ್ನರನ್ನಾಗಿ ಮಾಡಿದ್ದುದರಿಂದ ಆ ದಿನ ಪಂಪಾಸರೋವರವನ್ನು ನೋಡಿ ಬಂದು ಸಾಯಂಕಾಲ ಬಂಗಲೆಗೆ ಹೋಗುವುದೆಂದು ನಿಷ್ಕರ್ಷೆಯಾಯಿತು. "ಅದೆಷ್ಟು ದೂರವಿದೆಯೊ? ಅಲ್ಲಿಂದ ಹಿಂದಿರುಗಿ ಬರುವುದಕ್ಕೆ ಎಷ್ಟು ಹೊತ್ತು ಹಿಡಿಯುವುದೊ? ಆಮೇಲೆ ಎಲ್ಲಿಯ ಅಡಿಗೆ? ತುಂಬಾ ಅನನುಕೂಲವಾಗುವುದು" ಎಂದು ಯೋಚಿಸಿದವರು ಅಡಿಗೆ ಮಾಡಿಟ್ಟೇ ಹೊರಡುವುದೆಂದು ನಿರ್ಧರವಾಯಿತು. ಅವೆಲ್ಲ ಮುಗಿಯುವ ಹೊತ್ತಿಗೆ ಹನ್ನೊಂದು ಗಂಟೆ ಬೇಸಗೆಯ ಬಿಸಿಲು; ಅದರಲ್ಲಿಯೂ ಹಂಪೆಯಲ್ಲಿ. ಆ ಮಟಮಟ ಮಧ್ಯಾಹ್ನದಲ್ಲಿ ಹೊರಡುವುದಕ್ಕೆ ಮುಂಚೆಯೇ ಮುಸುರೆಯ ಪಾತ್ರೆಗಳನ್ನು ತೊಳೆದು ಸಾಯಂಕಾಲ ಬಂಗಲೆಗೆ ಹೊರಡುವುದಕ್ಕೆ ಎಲ್ಲವನ್ನೂ ಅಣಿಮಾಡಿಟ್ಟು ಹೋಗಬೇಕೆಂದು ಯಜಮಾನರು ಸ್ವಲ್ಪ ಒತ್ತಿಯೇ ಹೇಳಿದರು. ಬೇರೆ ಏನು ಕೆಲಸವನ್ನಾದರೂ ಮಾಡಬಹುದು ನೋಡಿ : ಎಷ್ಟಾದರೂ ತಿನ್ನಬಹುದು, ನಿದ್ದೆಹೋಗಬಹುದು, ಬಟ್ಟೆ ಒಗೆಯಬಹುದು, ಸೌದೆ ಸೀಳಬಹುದು; ನಮಗೆ ಬೇಕಿಲ್ಲದಾಗಲೂ ಊಟ ಮಾಡಿದ ಕೂಡಲೆಯೂ ಯಾರಾದರೂ ಕೆಲಸ ಹೇಳಿದರೆ ಮೈ ಕಿಡಿಕಿಡಿಯಾಗುವುದು. ಮುಸುರೆ ಪಾತ್ರೆಗಳಿಗೆ ಏನು ಮದುವೆ, ಏನು ಮಡಿ – ಹೇಳಿ. ಆಮೇಲೆ ತೊಳೆದುಕೊಂಡರೆ ಆಗುವುದಿಲ್ಲವೆ? ಯಾರಿಗಾದರೂ ಹೇಳಿ ಆ ಕೆಲಸ ಮಾಡಿಸಿದರೆ ಆಗದೆ?.... ನೀವೂ ನಾವೂ ಆದರೆ ಆಗುತ್ತೆ. ಯಜಮಾನರಿಗೆ ಹಾಗಲ್ಲ. ಕ್ರಮವಾಗಿ ಒಂದು ಕೆಲಸವನ್ನು ಮಾಡಿ – ಅದು ಎಷ್ಟು ಅಲ್ಪವಾದುದಾಗಿರಲಿ – ಅದನ್ನು ಆಗಲೇ ಪೂರೈಸಬೇಕೆಂಬುದು ಅವರ ಜೀವನದ ತತ್ವ. ಭಗವಂತನ ಅನುಗ್ರಹದಿಂದ ಈವರೆಗೂ ಅವರಿಗೆ ಹಾಗೆಯೇ ನಡೆದುಬಂದಿದೆ. ವಿಶೇಷ ಹೇಳಲೇನು? ಆ ಕೆಲಸವನ್ನು ಮಾಡಿ ಮುಗಿಸಲು ಅಂಗಳದ ಕಾಲುವೆಗೆ ಹೋದೆವು. ಅವರೂ ನಮ್ಮೆಲ್ಲರ ಅಸಮಾಧಾನವನ್ನು ಕಂಡಿದ್ದರು. ಆಗ ಒಂದು ಚಮತ್ಕಾರವನ್ನು ಮಾಡಿ ನಮ್ಮನ್ನು ಒಲಿಸಿಕೊಂಡರು. ಲಂಚ ಸ್ವಾಮಿ, ಲಂಚ.

ಅಷ್ಟರ ಮತ್ತೇನು? ಸ್ಟೌ ಹತ್ತಿಸಿದವರು ಒಂದು ಕೊಳಗ ನೀರು ಮರಳಿಸಿ 'ಮೂರ್ತಿ, ಇಲ್ಲಿ ಬಾರಯ್ಯ ಸ್ವಲ್ಪ' ಎಂದರು. ಮೂರ್ತಿ ಒಳಗೆ ಹೋಗಲು 'ಆ ಪುಡಿ ಇನ್ನಷ್ಟು ಇದೆಯೋ ಏನೋ ಹಾಕಿ ಮುಗಿಸಿಬಿಡು; ಆ ಅನಿಷ್ಟವನ್ನು ಇನ್ನೆಲ್ಲಿ ಹಿಂದಕ್ಕೆ ಹೊತ್ತುಕೊಂಡು ಹೋಗುವುದು' ಎಂದರು. ಬಾವಿಯ ಹತ್ತಿರವಿದ್ದ ನನಗೆ ಕಿವಿ ನೆಟ್ಟಗಾಯಿತು. ನಾವು ಪಾತ್ರೆಗಳನ್ನು ಸಂಭ್ರಮದಿಂದ ಒಳಕ್ಕೆ ಎತ್ತಿಕೊಂಡು ಹೋದೆವು. ಆ ಒಳಗಾಗಿ ಕಾಫಿ ಸಿದ್ಧವಾಗಿತ್ತು. ಮೂವರೂ ನೋಡಿದೆವು. ಉದ್ದಕ್ಕೆ ಹೋಗಿ ಯಜಮಾನರಿಗೆ ನಮಸ್ಕಾರ ಮಾಡೋಣವೇ ಎಂಬಷ್ಟು ಭಕ್ತಿ ಬಂದು ಅವರಲ್ಲಿಯೂ ದೇವರಲ್ಲಿಯೂ ನಮ್ಮ ನಂಬಿಕೆ ಬಲವಾಗಿ ಹುರಿಗೊಂಡಿತು. ಆದರೆ ನಮ್ಮ ಕಿರುಚಾಪಲ್ಯಗಳನ್ನು ದೊಡ್ಡವರಿಗೆ ನಾಚಿಕೆಯಿಲ್ಲದೆ, ಹಾಗೆ – ಅಂಥ ಸಮಯದಲ್ಲಿ – ತೋರಿಸುವುದು ಸರಿಯಲ್ಲವೆಂದು ತಿಳಿದು 'ಏಳಿ ಸಾರ್, ಹೊರಡೋಣ, ಇನ್ನು ಹೊತ್ತಾಗುತ್ತೆ, ಇವತ್ತು ಇಪ್ಪತ್ತು ಮೈಲಿ ಆದರೂ ನಡೆಯುವಷ್ಟು ಶಕ್ತಿ ಬಂದು ಬಿಟ್ಟಿದೆ' ಎಂದರು ವೆಂಕಟೇಶಯ್ಯನವರು. ಉಳಿದವರು ಒಬ್ಬರ ಮುಖವನ್ನೊಬ್ಬರು ನೋಡಿ 'ಭೇಷ್' ಎಂದು ತಮತಮಗೂ ಯಜಮಾನರಿಗೂ ಕಣ್ಣು ಸಂಜ್ಞೆಯಿಂದಲೇ ಧನ್ಯವಾದಗಳನ್ನು ಸಮರ್ಪಿಸುವಂತೆ ಮನೋಭಾವವನ್ನು ಮುಖದಲ್ಲಿ ವ್ಯಕ್ತಗೊಳಿಸಿದೆವು.

'ಅದು ನನ್ನ ಪ್ರಭಾವವೂ ಅಲ್ಲ, ನಿಮ್ಮದೂ ಅಲ್ಲಪ್ಪ; ಅಗೋ ಎದುರಿಗೆ ಆ ಕೊಳಗದಪ್ಪಲೆ ಇದೆಯೇ ಅದರ ಪ್ರಭಾವ' – ಅಂದರು ಯಜಮಾನರು.

ಅವರು ಎಂದಿಗೂ ಸುಳ್ಳಾಡುವವರೇ ಅಲ್ಲ. ಇತರರಿಗೆ ಸಹಿಸಲಿ ಸಹಿಸದೆ ಇರಲಿ, ತಮಗೆ ನಿಜವೆಂದು ತೋರಿದುದನ್ನು ಹಿಂದು ಮುಂದು ಯೋಚಿಸದೆ ಹೇಳಿಯೇ ತೀರುವರು. ಆದುದರಿಂದ ಅನೇಕರಿಗೆ ಅವರಲ್ಲಿ ಸಹನೆಯಿಲ್ಲ. ನಿಷ್ಠುರ ನೇಮವು ದುರ್ಬಲರಿಗೆ ಅನನುಕೂಲ; ಕಷ್ಟ.

ಮುಂದೆ ಒಂದು ಭಾರಿ ಚರ್ಚೆಗೆ ಆರಂಭವಾಯಿತು. ಯಜಮಾನರ ದೃಷ್ಟಿಯಲ್ಲಿ ಅದೇನೂ ಆಗ ಫೈಸಲ್ ಆಗುವಂತೆ ತೋರಲಿಲ್ಲ. ಆಗ ತಾನೇ 'ಪೃಷ್ಠೋಷ್ಣ'ವಾಗಿ ಊಟ ಮಾಡಿ ಹೊಟ್ಟೆಗಳು ಪೀಪಾಯಿಗಳಂತೆ ಆಗಿದ್ದುವು. ಆ ಬಿಸಿಲಿನಲ್ಲಿ, ಅದೇ ಕ್ಷಣವೇ ಒಂದು ಕೊಳಗ ಬಿಸಿಬಿಸಿ ಕಾಫಿ ಕುಡಿಯುವುದು ಎಂದರೇನು? – ಎಂದು ನೀವು ನಗಬಹುದು. ನೀವೆಲ್ಲ ವಿರಕ್ತರು, ಸಂಯಮಿಗಳು. ನಮಗೆ ಅಷ್ಟು ಸಂಯಮವಿಲ್ಲ. ಹುಡುಗತನದಿಂದಲೂ ಹೀಗೇ – 'ನಿನ್ನ ಆಶೆಗೆ ಬೆಂಕಿ ಇಟ್ಟರು; ತಪ್ಪಲೆಯಲ್ಲಿರುವುದು ಹೊಟ್ಟೆಯಲ್ಲಿ ಇರಲಿ ಎನ್ನುತ್ತಿರುವೆಯೇ ಹೊರತು' ಎಂದು ಮುಂತಾಗಿ ನಮ್ಮ ತಾಯಿ ನನ್ನನ್ನು ಅನೇಕ ವೇಳೆ ಬೈದಿದ್ದಾರೆ; ನೀವೂ ಬೇಕಾದರೆ ನಮ್ಮನ್ನು ಬಯ್ಯಿರಿ. ಸ್ವಭಾವೋ ದುರತಿಕ್ರಮಃ ಎಂದು ರಾವಣಾಸುರನಂಥವನೇ ಹೇಳಿಲ್ಲವೆ? ದೇವರು ನಮ್ಮನ್ನು ಸೃಷ್ಟಿಸಿರುವುದು ಹೀಗೆ. ಅವನ ಇಚ್ಛೆಯ ಮೇಲೆ ನಮ್ಮ ಪ್ರಯತ್ನವೇನು ನಡೆಯುತ್ತದೆ? ಹೀಗೆ ನಮ್ಮನ್ನು ಏಕೆ ಸೃಷ್ಟಿಸಿದೆಯೋ ಪಾಪಿ ಎಂದು ಮೂದಲಿಸಿ ಅವನ ಕೈಲಿ

ಜಗಳವಾಡುವುದಕ್ಕಾಗುತ್ತದೆಯೆ? ನಾವು ಆಡಿದರೂ ಆಡಬಹುದು; ಅವನೂ ಜಗಳಕ್ಕೆ ನಿಲ್ಲಬಹುದು. ಆದರೆ ಮಠಮುದ್ರೆಯವರು ನಮಗೆ ಬಹಿಷ್ಕಾರ ಹಾಕಿಬಿಡುತ್ತಾರೆ. ಆಮೇಲೆ ಅವನ ಶಿಕ್ಷೆಯ ಭಯಕ್ಕಿಂತಲೂ ಇವರ ಬಹಿಷ್ಕಾರದ ಭಯವೇ ಹೆಚ್ಚು ಭೀಕರವಾದುದು. ನಾನು ಹೇಳುವುದು ಸುಳ್ಳೆ?.... ಹೆಣ್ಣು ಮಕ್ಕಳಿರುವವರು ನಾವು; ಹೆದರಿಕೆ.

ಕೊನೆಗೆ ನಾನು ವೆಂಕಟೇಶಯ್ಯನವರಿಗೆ "ನಿನ್ನೆ ನೀರನ್ನು ಹೊತ್ತುಕೊಂಡು ಹೋದ ಹಾಗೆ ಇವೊತ್ತು ಕಾಫೀ ತೆಗೆದುಕೊಂಡು ಹೋದರಾಯಿತು; ದಾರಿಯಲ್ಲಿ ಬಾಯಾರಿಕೆಯಾದಾಗ ಕುಡಿಯೋಣ" ಎಂದೆ, – ನೋಡೋಣ ಅವರ ಮನಸ್ಸಿನಲ್ಲಿ ಹೇಗಿದೆಯೊ ತಿಳಿದುಕೊಳ್ಳೋಣ ಎಂದು.

"ನೀವು ಹೊತ್ತುಕೊಂಡು ಬರುವ ಹಾಗಿದ್ದರೆ ನೋಡಿ, ಎರಡು ತಂಬಿಗೆ ಇದೆ".

"ಎಲ್ಲರೂ ಸ್ವಲ್ಪ ಸ್ವಲ್ಪ ದೂರ ತಕ್ಕೊಂಡು ಹೋಗೋಣ."

ಯಥಾರ್ಥವನ್ನು ಹೇಳಲೇನು? ನಮ್ಮೊಬ್ಬರಿಗೂ ಅದನ್ನು ಹೊತ್ತುಕೊಂಡು ಹೋಗುವುದು ಇಷ್ಟವಿಲ್ಲ. ನಾನು ಹೇಳಿದುದು ಲೋಕಮರ್ಯಾದೆಗಾಗಿ. ನಾನು ಎಸೆದ ಹಗ್ಗ ನನ್ನ ಕುತ್ತಿಗೆಗೇ ಬೀಳುವಂತಾದರೆ! ಮೂರ್ತಿ ಅಂದರು – "ಇಲ್ಲಿ ಸ್ವಲ್ಪ ಕುಡಿದು, ಸ್ವಲ್ಪ ತೆಗೆದುಕೊಂಡು ಹೋಗೋಣ" ಎಂದು.

ಯಜ – ನಿಮಗೆಲ್ಲ ಕಷ್ಟವಾದರೆ ನಡೆಯಿರಪ್ಪ, ನಾನು ಹೊತ್ತುಕೊಂಡು ಬರುತ್ತೇನೆ.

ರಾ – ಸರಿ ಸಾರ್, ಚೆನ್ನಾಯಿತು ! ಇಷ್ಟು ಹೊತ್ತೂ ಚೆನ್ನಾಗಿರಲಿಲ್ಲ. ಎಲ್ರೀ ವೆಂಕಟೇಶಯ್ಯ, ಲೋಟ ತಕ್ಕೊಳ್ರೀ.

ಚರ್ಚಾ ವಿಷಯವು ಸ್ವಲ್ಪ ಮಟ್ಟಿಗೆ ಹತೋಟಿಗೆ ಬಂದ ಹಾಗಾಯಿತು. ಒಳಗೆ ಎಲ್ಲರಿಗೂ ಉಕ್ಕಿ ಉಕ್ಕಿ ಬರುತ್ತಿರುವ ನಗು. ಯಜಮಾನರು ಹೋಯೆಂದು ನಕ್ಕರು. ಅವರು ಹಾಗೆ ನಗುತ್ತಿದ್ದರೆ ನಮಗೆ ಶ್ರೇಯಸ್ಕರ ಎಂದುಕೊಂಡವರು ಒಬ್ಬೊಬ್ಬರಾಗಿ ಲೋಟಗಳಲ್ಲಿ ಅಮೃತವನ್ನು ತುಂಬಿದೆವು – ತುಂಬಿ, ಪಾನಮಾಡಿ ಆತ್ಮಶಾಂತಿ ಮಾಡಿಕೊಂಡೆವು. ಒಬ್ಬೊಬ್ಬರಿಗೆ ಎರಡು ಲೋಟಗಳಾದುವು.

ವೆಂ – ಇನ್ನು ಉಳಿದಿರುವ ಈ ಇಷ್ಟನ್ನೇನು ಹೊತ್ತುಕೊಂಡು ಹೋಗುವುದು? ಹಿಡೀರ್ರೀ ಲೋಟಾನ, ಕಾಫೀ ಆರಿಹೋದರೆ ಚೆನ್ನಾಗಿರುವುದಿಲ್ಲ.

"ನನಗೆ ಜಾಸ್ತಿ ಆಯಿತುರೀ" ಎಂದೆ; ದೇವರಿಗೆ ಹೇಳುವಂತೆ ಹೇಳಿದೆ. ಅವರು ಕೇಳಬೇಕಲ್ಲ.

'ಈ ಆಮಟ ಬಿಡಿ, ಕಂಡಿದ್ದೇನೆ. ನೀವು ಕಾಫೀ ಸಾಕು ಎಂದರೆ ನಾನು ನಂಬಿಯೇನೆ?'

ಎಷ್ಟು ವಿಧವಾಗಿ ಹೇಳಿದರೂ ಕೇಳದೆ ಇನ್ನೂ ಒಂದು ಲೋಟದ ತುಂಬ ಹಾಕಿದರು. ಇನ್ನೇನು ಮಾಡುವುದು? 'ವೈದ್ಯೋ ನಾರಾಯಣೋ ಹರಿಃ' ಎಂದು ಕಣ್ಣು ಮುಚ್ಚಿಕೊಂಡು ಕುಡಿದು ಬಿಟ್ಟೆ. ಉಳಿದ ಮೂವರು ಸ್ನೇಹಿತರೂ ಹಾಗೆಯೇ ಮಾಡಿದರು. ಎಲ್ಲರಿಗೂ ನಾನು ಚಿರಂಜೀವಿ. ನನಗೆ ತೃಪ್ತಿಯಾದ ಮೇಲೆ ತಮಗೆ. ಹಿರಿಯರ ರೀತಿಯೇ ಹೀಗೆ.

೨

'ಇನ್ನು ಹೊರಡಬಹುದು ತಾನೇಪ್ಪ' ಎಂದರು ಯಜಮಾನರು. ಓಹೋ ಎಂದು ಹೊರಟೆವು. ನಮ್ಮಲ್ಲಿ ಇಬ್ಬರು, ಮೇಲೆ ಸಾದಾ ಷರಟು ಬನಿಯನ್ನುಗಳನ್ನು ಹಾಕಿಕೊಂಡು ಉತ್ತರೀಯವನ್ನು ಹೊದ್ದಿದ್ದೆವು. ಮೂರ್ತಿಗಳು ಮಾತ್ರ ಕೋಟು ಹಾಕಿಕೊಂಡಿದ್ದರು. ಎಲ್ಲರ ಬಂಡವಾಳವೂ ಅವರ ಕೈಯಲ್ಲಿತ್ತು. ಆದುದರಿಂದ ಅವರಿಗೆ ಆ ಉರಿ ಬಿಸಿಲಿನಲ್ಲಿಯೂ ಕೋಟು ಹಾಕಿಕೊಂಡೇ ಇರಬೇಕಾದ ಸುಖ ನಿರ್ಬಂಧವಾಗಿ ಬಂದಿತ್ತು. ಇನ್ನಿಬ್ಬರು ಕೇವಲ ಒಂದೊಂದು ಉತ್ತರೀಯವನ್ನು ಹೊದ್ದಿದ್ದರು. ಐವರಿಗೆ ಮೂರು ಛತ್ರಿ. ಮೂವರ ಕಾಲುಗಳಿಗೆ ಮಾತ್ರ ಜೋಡು. ಇನ್ನಿಬ್ಬರು ಈವರೆಗೂ ಛತ್ರಿ ಹಿಡಿಯುವ ಪದ್ಧತಿಯನ್ನೇ ಇಟ್ಟುಕೊಂಡಿಲ್ಲ. ಕಾಲಿಗೆ ಹಾಕಿದ್ದ ಜೋಡುಗಳನ್ನು ಒಬ್ಬರು ಬೆಳಗಾವಿಯಲ್ಲಿಯೂ ಇನ್ನೊಬ್ಬರು ಗದಗಿನಲ್ಲಿಯೂ ಮರೆತು ಬಂದು ಈಗ ಬರಿಯ ಕಾಲಿನಲ್ಲಿ ನಡೆದು ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಿದ್ದರು. ಭೂಮಾತೆ ಸಂಪರ್ಕದಿಂದ ಪವಿತ್ರರಾಗಿ ಸುಖಿಸದೆ, ಅಖಿಲ ಲೋಕ ಜೀವನಾಧಿಕಾರಿಗಳಾದ ಸೂರ್ಯ ವಾಯುದೇವರುಗಳಿಂದ ತಲೆಯನ್ನು ಮುಚ್ಚಿಕೊಂಡು ಬಾಳುವ ಜೀವನ ಹೇಯವಾದುದು! – ಎಂಬುದು ಅವರ ಅಭಿಪ್ರಾಯ. ಆ ದೇವತೆಗಳ ಅನುಗ್ರಹ ಅಂದು ಅವರಿಗೆ ಸಂಪೂರ್ಣವಾಗಿ ಆಯಿತೆಂದೇ ಹೇಳಬೇಕು.

ಕೊಠಡಿಯಿಂದ ಹೊರಗೆ ಬಂದವರು 'ಚೆನ್ನಯ್ಯ' ಎಂದು ಕೂಗಿದೆವು. ವೆಂಕಟೇಶಯ್ಯನವರು, 'ಅವನು ಹಿಂದಿರುಗಿ ಬಂದ ಹಾಗೆಯೇ ಇಲ್ಲ. ಧಾರವಾಡ ದವರು ಯಾರನ್ನೊ ನೋಟಕ್ಕೆ ಕರೆದುಕೊಂಡು ಹೋಗಿ ಬರುತ್ತೇನೆಂದು ಬೆಳಿಗ್ಗೆಯೇ ಹೇಳಿ ಹೋಗಿದ್ದ' ಎಂದರು. ಅವನೇ ನಮಗೆ ಅಲ್ಲಿ ಮಾರ್ಗದರ್ಶಕನು; ಪರಮಾಪ್ತ ಸ್ನೇಹಿತನು. ಆದರೆ ಅವನಿಗೆ ಕಾಯುತ್ತ ಕುಳಿತರೆ ಕೆಲಸ ಕೆಡುತ್ತದೆಂದು ತಿಳಿದು ಹಂಪೆಯ ಹಾಳುಗಳ ಪುಸ್ತಕವೊಂದನ್ನು ಕೈಲಿ ಹಿಡಿದುಕೊಂಡು ಹೊರಟೆವು. 'ದಾರಿಯಲ್ಲಿ ಯಾರಾದರೂ ಸಿಕ್ಕದೆ ಹೋಗುತ್ತಾರೆಯೆ? ಕಾಲು ಕುರುಡೇನು? ಬಾಯಿ ಕುರುಡೊ? ಕೇಳಿಕೊಂಡು ಕೇಳಿಕೊಂಡು ಹೋಗೋಣ ನಡೆಯಿರಿ' ಎಂದು ಮುಂದೆ ನಡೆದೆವು.

ಇಷ್ಟು ಹೊತ್ತಿಗೆ ಆಗಲೆ ಒಂದು ಗಂಟೆಯ ಸುಮಾರಿಗೆ ಬಂದಿತ್ತು. ಹತ್ತು ಹತ್ತು ಮಾರಿಗೂ 'ಚೆನ್ನಯ್ಯನು ಜೊತೆಯಲ್ಲಿ ಇದ್ದಿದ್ದರೆ ಚೆನ್ನಾಗಿತ್ತು' ಎಂದುಕೊಳ್ಳುತ್ತ ಹೊರಟೆವು. ಒಂದೊಂದು ಸಲ 'ಹೋಗಲಿ, ಅವನ ದಂಡೆ ಹರಿಯಿತು; ಬರುವ ರೂಪಾಯಿ ಕಳೆದುಕೊಂಡ; ಯಾರಿಗೆ ನಷ್ಟ?' ಎಂದುಕೊಳ್ಳುತ್ತ ಸಮಾಧಾನ ಮಾಡಿಕೊಳ್ಳುತ್ತಿದ್ದೆವು. ಆದರೂ ಒಂದು ವಿಷಯ ಮಾತ್ರ ಖಂಡಿತ! ಅವನಿಲ್ಲದುದರಿಂದ ಕೊರತೆ ಕಾಣುತ್ತಿತ್ತು.

ವಿರೂಪಾಕ್ಷ ದೇವಸ್ಥಾನದ ಮುಂದೆ ಸುಮಾರು ನೂರು ಇನ್ನೂರು ಗಜಗಳ ದೂರ ಅಗಲವಾದ ತೇರುಬೀದಿ; ಮೈಸೂರು ನೂರಡಿಗಿಂತಲೂ ವಿಶಾಲವಾಗಿಯೂ, ತುಂಬಾ ಜನಪೂರ್ಣವಾಗಿಯೂ ಪೂರ್ವದಲ್ಲಿ ಅದು ಇದ್ದಿರಬೇಕು. ಇಕ್ಕೆಡೆಗಳಲ್ಲಿಯೂ ಕಲ್ಲುಮಂಟಪಗಳು; ರಸ್ತೆಯ ಕೊನೆಯಲ್ಲಿ ನಮ್ಮ ದಾರಿಯ ಎಡಗಡೆ ಬೃಹದಾಕಾರದ ಕಲ್ಲುಬಸವನ ವಿಗ್ರಹ. ಆಗಿನ ಕಾಲದವರಿಗೆ ಮಾಡುವುದಕ್ಕೆ ಬೇರೆ ಏನೂ ಕೆಲಸ ವಿರಲಿಲ್ಲವೆಂದು ಕಾಣುತ್ತದೆ; ಎಲ್ಲಿ ದೊಡ್ಡ ಬಂಡೆಯೊಂದು ಸಿಕ್ಕಿದರೆ ಅಲ್ಲಿ ಬಸವ – ಗಣೇಶ, ಹನುಮಂತ, ನರಸಿಂಹ ವಿಗ್ರಹಗಳನ್ನು ಕೆತ್ತುತ್ತಿದ್ದರು. ಕೆಲಸದ ಶ್ರಮವೂ ಅಗಾಧತೆಯೂ ಅವರಿಗೆ ತೋರುತ್ತಲೇ ಇರಲಿಲ್ಲವೇನೊ? ಇಲ್ಲವಾದರೆ ಹತ್ತು ಹದಿನೈದು ಅಡಿ ಅಗಲದ ಪಾಣಿಪೀಠದ ಮೇಲೆ ಆರು ಏಳು ಅಡಿಗಳ ಉದ್ದದ ಶಿವಲಿಂಗ ಮಾಡಿಡುತ್ತಿದ್ದರೆ? ಹದಿನೈದು ಇಪ್ಪತ್ತು ಅಡಿ ಎತ್ತರದ ನರಸಿಂಹಸ್ವಾಮಿ! ಹದಿನೈದು ಅಡಿಯ ಗಣೇಶ!! ಅವರಿಗೆ ಹುಚ್ಚು ಹಿಡಿದಿರಬೇಕು! ಅಂಥ ಅವುಗಳ ಹೆಸರು ಬಲ್ಲಿರೇನು? ಒಂದು ಸಾಸುವೆ ಕಾಳಿನ ಗಣೇಶವಂತೆ; ಇನ್ನೊಂದು ಕಡಲೆಕಾಳಿನ ಗಣೇಶವಂತೆ; ಹೀಗೆಯೇ ಹಲಸಿನಕಾಯಿ ಗಣೇಶನೆಂದು ಒಂದನ್ನು ಮಾಡಿದ್ದಿದ್ದರೆ ಅದು ಹೇಗಿರುತ್ತಿದ್ದಿತೊ! ನಾನು ಊಹಿಸಲಾರೆ.

ಮುಂದೆ ಹೋಗುತ್ತ ಹೋಗುತ್ತ ರಸ್ತೆ ಚಿಕ್ಕದಾಯಿತು; ಅಲ್ಲಿ ಕ್ರೈಸ್ತರಾರಾದರೂ ಇದ್ದಿದ್ದರೆ ಸ್ವರ್ಗದ ದಾರಿಯಂತೆ ಎಂದು ಹೇಳುತ್ತಿದ್ದರು. ಉದ್ದಕ್ಕೂ ಬೆಟ್ಟಗಳು. ಮಾರ್ಗ ಸಾಧ್ಯವಾದಷ್ಟು ಸುಲಭವಾಗಲೆಂದು ಹಿಂದಿನವರು ಕಲ್ಲು ಕಡಿದು ಮೆಟ್ಟಿಲುಗಳನ್ನು ಮಾಡಿದ್ದಾರೆ. ದಾರಿಯ ಉದ್ದಕ್ಕೂ ಇರುವ ಮುಳ್ಳುಗಿಡ ಮುಳ್ಳುಕೊಂಟುಗಳನ್ನು ಬಿಟ್ಟರೆ ಕಣ್ಣು ಹರಿಯುವವರೆಗೂ ಸುತ್ತಲೂ ಏನು ಸುಂದರ ದೃಶ್ಯಗಳು! ನೂರಾರು ವರುಷಗಳಿಂದ ಸುಮಾರು ಒಂದೇ ಸಮನಾಗಿ ತಮ್ಮ ಸ್ಥಿತಿಯನ್ನು ಕಾಪಾಡಿಕೊಂಡು ಪ್ರಪಂಚದ ಕಷ್ಟ ಸುಖಗಳನ್ನೂ ಮಂಗಳಾಮಂಗಳಗಳನ್ನೂ ಅವಿಚಲಿತ ದೃಷ್ಟಿಯಿಂದ ನೋಡುತ್ತ ದೃಢವಾಗಿ ಪಟುವಾಗಿ ನಿಂದಿರುವ ಪರ್ವತಗಳು; ಪರ್ವತ ಶಿಖರಗಳ ಮೇಲೆ ಆಕಾಶದ ಬಿಳಿ ಮೋಡಗಳಿಂದ ಸುತ್ತುವರಿಯಲ್ಪಟ್ಟು ಸೇವೆಗೊಳ್ಳುತ್ತ ಸಿಡಿಲು ಬಳ್ಳಿಗಳೊಡನೆ ಸರಸವಾಡುತ್ತ ಉಚ್ಚಪೀಠಗಳ ಮೇಲಿರುವ ದೇವಾಲಯ, ತಪೋಗ್ರಹ, ಆಶ್ರಮಗಳು; ಬೆಟ್ಟಗಳ ನಡು ನಡುವೆ ದೂರದಲ್ಲಿ ಒಂದರ ಹಿಂದೆ ಒಂದು, ಒಂದಕ್ಕಿಂತ ಒಂದು ಹೆಚ್ಚು ಎತ್ತರವಾಗಿ ಶಿಖರಗಳ ಹಂತದಂತೆ ದೂರದ ಆಕಾಶಕ್ಕೆ ಏರಿ ಕಾಣುತ್ತಿರುವ

ದೇವಾಲಯಗಳ ಮಹಾದ್ವಾರ ಗೋಪುರಗಳು; ಎಡಗಡೆ ಹತ್ತಿರದಲ್ಲಿಯೆ ಕಲ್ಲುಬಂಡೆಗಳ ಹಿಂದೆ ಕಲಕಲನಾದದಿಂದ ಹರಿಯುತ್ತಿರುವ ತರಂಗಿಣೀ ತುಂಗಭದ್ರೆಯ ಕೋಲಾಹಲ; ನದಿಗೂ ನಮಗೂ ಮಧ್ಯೆ ಅಲ್ಲಲ್ಲಿ ಹೊಸದಾಗಿ ಪೂರ್ಣ ಕುಸುಮಿತವಾದ ಕಾಡುಮಲ್ಲಿಗೆ ಗಿಡಗಳು; ಸ್ವಲ್ಪ ದೂರ ನೇರವಾಗಿ ಹೋಗಿ, ಉತ್ತರಕ್ಷಣದಲ್ಲಿಯೇ ಎಲ್ಲಿಯೊ ಹೊಕ್ಕು, ಹೇಗೊ ತಿರುಗಿ, ಮರೆಯಾಗಿ, ಮುಖವನ್ನು ಮುಚ್ಚಿಕೊಂಡು, ಪುನಃ ಮೈಲಿಗಳ ದೂರದಲ್ಲಿ ಪರ್ವತಸಾನುವೊಂದರಲ್ಲಿ ಕಣ್ಣಿಗೆ ಬೀಳುತ್ತ ನಮ್ಮೊಡನೆ ಹುಡುಗಾಟವಾಡಲೆಳಸುವಂತೆ ಮುಂದುವರಿದಿರುವ ಮೆಟ್ಟಿಲುದಾರಿ. ಬಹುದೂರ ಹೀಗೆಯೇ ಪ್ರಕೃತಿಯ ಈ ತೆರದ ವಿಚಿತ್ರ ರಮಣೀಯತೆಯನ್ನು ನೋಡುತ್ತ, ಅಲ್ಲಿ ಹೊರ ಹೊಮ್ಮುತ್ತಿರುವ ಸೌಂದರ್ಯವನ್ನು ಅನುಭವಿಸುತ್ತ, ಖಗಮೃಗಕೀಟ ಧ್ವನಿಗಳಿಂದ ತುಂಬಿ ನಿಬಿಡವಾಗಿ ಹೃದಯ ರಂಜಕವಾಗಿರುವ ಪ್ರಕೃತಿಯ ಏಕಾಂತವನ್ನು ನೋಡಿ ಆನಂದಿಸುವ ನಾವೇ ಪುಣ್ಯಶಾಲಿಗಳೆಂದು ಅಂದುಕೊಳ್ಳುತ್ತ ಮುಂದೆ ಮುಂದೆ ಹೊರಟೆವು. ಹೀಗೆ ಮೈಮರೆತು ಹೋಗುತ್ತಿರುವ ನಮಗೆ ಅಲ್ಲಲ್ಲಿ ಒಡೆದು ಬೇರೆಯಾಗುತ್ತಿರುವ ದಾರಿಗಳ ಯೋಚನೆ ಬರಲಿಲ್ಲ.

ಸ್ವಲ್ಪವೂ ಶ್ರಮವಿಲ್ಲದೆ ಅಚ್ಯುತರಾಯರ ದೇವಸ್ಥಾನದವರೆಗೂ ಹೋದೆವು. ಅಲ್ಲಿಯೇ ನರಸಿಂಹಸ್ವಾಮಿಯ ದೇವಸ್ಥಾನವೊಂದಿದೆ. ಬ್ರಿಟಿಷ್ ಸರಕಾರದವರು ತಮ್ಮ ಕೈಯಲ್ಲಾದ ಮಟ್ಟಿಗೆ ಇಲ್ಲಿಯೂ ಜೀರ್ಣೋದ್ಧಾರ ಕಾರ್ಯವನ್ನು ಮಾಡಿದ್ದಾರೆ. ಒಳಗೆ ಹೋಗಿ ನೋಡಿದುದಾಯಿತು. ಅಲ್ಲಿ ಹೆಚ್ಚು ಹೊತ್ತು ನಿಲ್ಲಲು ಅವಕಾಶವಿಲ್ಲ. ಮುಂದೆ ನೋಡಬೇಕಾದುದೆಷ್ಟನ್ನೊ ಇಟ್ಟುಕೊಂಡು ಇಲ್ಲಿ ಬಹುಕಾಲ ಕಳೆವುದು ಹೇಗೆ? ಅಲ್ಲಿಂದ ಮುಂದೆ ನಾಲ್ಕಾರು ದಾರಿ ಕವಲೊಡೆದಿದ್ದವು. ಕೈಯಲ್ಲಿದ್ದ ಪುಸ್ತಕದ ಪ್ರಯೋಜನ ಅಲ್ಲಿಗೆ ಮುಗಿಯಿತು. ಉತ್ತರ ದಿಕ್ಕಿನ ಕಲ್ಲು ಮಂಟಪಗಳ ಸಾಲಲ್ಲಿಯೇ ಹೊರಟುಹೋಗಿದ್ದರೆ ಸುಲಭವಾಗಿ ಕೋದಂಡರಾಮಸ್ವಾಮಿಯ ದೇವಸ್ಥಾನಕ್ಕೆ ಹೋಗಿ ಸೇರಬಹುದಾಗಿತ್ತು. ಆದರೆ ನಮ್ಮ ಐವರ ಅಭಿಪ್ರಾಯಗಳು ಐದು ತೆರನಾಗಿದ್ದುದರಿಂದ ಒಬ್ಬರು ಹೇಳಿದುದು ಒಬ್ಬರಿಗೆ ಸರಿ ತೋರದಾಯಿತು. ದೇವರು ಜನರಿಗೆ ಸ್ವಲ್ಪ ಬುದ್ಧಿಯನ್ನು ಕೊಟ್ಟರೆ ಸಾಕು, ಒಬ್ಬರಿಗೆ ಒಪ್ಪಿದುದು ಇನ್ನೊಬ್ಬರಿಗೆ ಸರಿಹೋಗದು. ಸ್ವತಂತ್ರವಾಗಿ ಯೋಚನೆ ಮಾಡಲಲ್ಲದಿದ್ದರೆ ಬುದ್ಧಿಶಕ್ತಿ ಏತಕ್ಕೆ? ಎಲ್ಲರೂ ಒಂದೇ ರೀತಿ ಯೋಚನೆ ಮಾಡದಿರುವುದಕ್ಕೆಂದೆ ಸೃಷ್ಟಿಕರ್ತನು ಅದನ್ನು ಹಾಗೆ ಮಾಡಿರುವುದು. ಒಬ್ಬರ ತೀರ್ಮಾನಗಳು ಇನ್ನೊಬ್ಬರ ರಬ್ಬರ್‌ಸ್ಟಾಂಪ್ ಆಗಿರಬೇಕೆಂದೇ ಸ್ವಾತಂತ್ರ್ಯ ಕೊಟ್ಟಿದ್ದು? ಕೊನೆಗೆ ಯಜಮಾನರೂ ರಾಯರೂ ತಮ್ಮ ಕಾಲಲ್ಲಿ ಜೋಡುಗಳಿವೆಯೆಂದೂ ತಾವು ಮುಂದೆ ಹೋಗಿ ಆ ದಾರಿ ಸರಿಯೊ ಅಲ್ಲವೊ ಎಂಬುದನ್ನು ಪರೀಕ್ಷೆ ಮಾಡಿ ನಮಗೆ ಕೂಗಿ ಹೇಳುವೆವೆಂದೂ ಹೇಳಿ ಮುಂದೆ ನಡೆದರು. ಮೂವರು ಹಿಂದುಳಿದೆವು. ಮೂರ್ತಿ ಕಾಲಿಗೆ ಮುಳ್ಳು ಚುಚ್ಚಿ ರಕ್ತ ಹರಿಯುವಂತಾಗಿತ್ತು. ಸರಿಯಾದ ದಾರಿ ಸಿಕ್ಕದಿದ್ದರೆ ಒಂದು ಹೆಜ್ಜೆ ಕೂಡ

ಮುಂದಕ್ಕಿಡಲು ಅವರಿಗೆ ಸಾಧ್ಯವಾಗುವಂತಿರಲಿಲ್ಲ. ಪುನಃ ಅಂದುಕೊಂಡೆವು – 'ಹಾಳಾದವನು ಆ ಚೆನ್ನಯ್ಯ ನಮ್ಮ ಸಂಗಡ ಇದ್ದಿದ್ದರೆ?' ಎಂದು. ಮುಂದೆ ಹೊರಟಿದ್ದವರು ಹಾಗೂ ಹೀಗೂ ಸುತ್ತಿಕೊಂಡು ಒಂದು ಸೀಳು ದಾರಿ ಹಿಡಿದು ನಮ್ಮನ್ನು ಕರೆದು ಕೂಗಿದರು. ನಾವು ಆ ಮುಳ್ಳುಕಲ್ಲುಗಳ ದಾರಿಯನ್ನೇ ಹಿಡಿಯಬೇಕಾಯಿತು. ಚೆನ್ನಯ್ಯನಿದ್ದಿದ್ದರೆ! ಅವನು ದಾರಿಗಳನ್ನು ಬಲ್ಲವನು. ಸುಲಭವಾಗಿ, ನೇರವಾಗಿ ನಮ್ಮನ್ನು ಕರೆದುಕೊಂಡು ಹೋಗುತ್ತಿದ್ದನು. ನಮ್ಮ ಸ್ವಂತ ಅನುಭವ ಪರೀಕ್ಷೆಗಳಿಂದಲೇ ಎಲ್ಲವನ್ನೂ ಕಂಡು ತಿಳಿದುಕೊಳ್ಳುವೆವೆಂದು ಯಾವ ಕೆಲಸ ಮಾಡಿದರೂ ಹೀಗೆಯೇ ಎಂದು ತೋರುತ್ತದೆ : ಪರಿಣಾಮದಲ್ಲಿ ಫಲವೇನೊ ದೊರಕಬಹುದು; ಆದರೆ ಮಾರ್ಗ ತಪ್ಪುವ ಸಂಭವವುಂಟು. ಮಾರ್ಗ ಕಷ್ಟವಾಗುವುದಂತೂ ಖಂಡಿತ. ಗುರು ಮುಖೇನ ಕಲಿತ ಪಾಠ ಸುಲಭವಾಗಿ ಉತ್ತಮ ಶಿಕ್ಷಣವನ್ನು ಕೊಡುವಂತೆ.

ಹತ್ತು ನಿಮಿಷಗಳಲ್ಲಿ ದೊಡ್ಡ ದಾರಿಗೆ ಬಂದೆವು. ಅಲ್ಲಿಗೆ ಸೇರುವಷ್ಟರೊಳಗೆ ಮೂರ್ತಿಗಳಿಗೂ ವೆಂಕಟೇಶಯ್ಯನವರಿಗೂ ಸಾಕುಸಾಕಾಗಿ ಹೋಗಿತ್ತು. ಸಂಸಾರದಲ್ಲಿ ಒದಗುವ ಅಲ್ಪ ಕಷ್ಟಗಳೂ ವೇದನೆಗಳೂ ಮನಸ್ಸನ್ನು ಕೆಡಿಸಿ ನಿರಾಶೆಯನ್ನುಂಟು ಮಾಡಿ ಪ್ರಪಂಚದ ಸರ್ವ ಸತ್ಕರ್ಮಗಳಿಗೂ ಉತ್ತಮ ಭಾವನಾ ಸಂತೋಷಗಳಿಗೂ ಅಡ್ಡ ಬರುವಂತೆ ಈ ಹಾಳು ಮುಳ್ಳುಗಳು ನಮ್ಮ ಮನಸ್ಸನ್ನು ಬಲವಂತದಿಂದ ತಮ್ಮತ್ತ ಸೆಳೆದು ಹಿಂಸೆ ಕೊಟ್ಟಿದ್ದವು. ಬದುಕು ಕೇವಲ ಸುಖಮಯವಾದುದೇ ಅಲ್ಲ; ಅದರಲ್ಲಿ ದಾರುಣ ದುಃಖವಿದೆ. ಈ ತತ್ತ್ವವನ್ನು ಜನ ಮರೆತು ಸರ್ವದಾ ಲೋಲುಪರಾಗದೆ ಇರಲಿ ಎಂದು ಭಗವಂತನು ಈ ವಿಧವಾಗಿ ಪ್ರಪಂಚವನ್ನು ಸೃಷ್ಟಿಸಿದನೊ ಏನೊ! ಅದು ಹೇಗಾದರೂ ಇರಲಿ, ಭೂಸಂಪರ್ಕದಿಂದ ಪವಿತ್ರರಾಗುವೆವೆಂದು ತಿಳಿದಿದ್ದ ನಮ್ಮ ಸ್ನೇಹಿತರಿಬ್ಬರಿಗೂ ಭೂಮಾತೆ ನಿಷ್ಕಪಟವಾದ ಪ್ರೇಮವನ್ನೇ ತೋರಿದಳೆಂದು ಹೇಳಬೇಕು. ಬೆಳ್ಳನ ಮೂರ್ತಿಯ ಹೆಜ್ಜೆಯಿಂದ ಹರಿಯುತ್ತಿದ್ದ ರಕ್ತವನ್ನು ನೋಡಬೇಕಿತ್ತು, ಪಾಪ.

ಇನ್ನೆರಡು ಮಾರುಗಳ ದೂರದಲ್ಲಿ ಎರಡು ದೇವಸ್ಥಾನಗಳು; ಒಂದು ಕೋದಂಡರಾಮಸ್ವಾಮಿಯ ದೇವಸ್ಥಾನ; – ನದಿಯ ದಂಡೆಯಲ್ಲಿಯೇ. ಇನ್ನೊಂದು ಈಚೆ, ಬೆಟ್ಟದ ಕಿಬ್ಬಿಯಲ್ಲಿ, ಲಕ್ಷ್ಮೀನಾರಾಯಣಸ್ವಾಮಿಯ ದೇವಸ್ಥಾನ. ನಮ್ಮಲ್ಲಿ ಕೆಲವರು "ಅದನ್ನೇನು ನೋಡುವುದು? ಅಂಥಾದ್ದು ಇಲ್ಲಿ ಒಂದು ಸಾವಿರವಿದೆ ಬನ್ನಿ; ಕೋದಂಡರಾಮರ ದರ್ಶನ ತೆಗೆದುಕೊಂಡು ಮುಂದೆ ಹೋಗೋಣ; ಅಲ್ಲಿ ಪೂಜೆ ನಡೆಯುತ್ತಿರುವಂತೆ ಕಾಣುತ್ತದೆ" ಎಂದರು. ಆದರೂ ನನಗೆ ಸ್ವಲ್ಪ ಚಪಲ. ರಾಯರು ದೊಡ್ಡ ಮನಸ್ಸು ಮಾಡಿ ನನ್ನಂತೆಯೇ, "ನೋಡಿಕೊಂಡು ಹೋಗೋಣವೇಳಿ" ಎಂದರು. ಅವರ ಸಹಕಾರದಿಂದ ನನ್ನಾಸೆ ನೆರವೇರಿತು.

ಆ ದೇವಸ್ಥಾನ ದೊಡ್ಡದಲ್ಲ. ಹೊರಗಡೆ ಕೆತ್ತನೆಯ ಕೆಲಸವೊಂದೂ ಇಲ್ಲ. ಯಾವ ಜಕಣಾಚಾರ್ಯನ ಶಿಲ್ಪವೂ ಅಲ್ಲಿ ಇಲ್ಲ. ಒಂದೇ ಬಂಡೆಯಲ್ಲಿ ದೇವಸ್ಥಾನವನ್ನು ಕೊರೆದು ಅದನ್ನು ಸಾಮಾನ್ಯವಾಗಿ ಕಟ್ಟಿದ್ದಾರೆ. ಪ್ರಾಕ್ತನ ವಿಚಾರಕರ ಅಥವಾ ಯಾತ್ರಿಕರ ಗಮನ ಈ ದೇವಸ್ಥಾನದ ಕಡೆ ಹೆಚ್ಚಾಗಿ ತಿರುಗಿಲ್ಲ. ಒಳಗೆ ಮೂರು ವಿಗ್ರಹಗಳಿವೆ; ತೆಳ್ಳಗೆ ಉದ್ದವಾಗಿ ಒಂದರ ಪಕ್ಕದಲ್ಲಿ ಒಂದು ಅತ್ಯುತ್ತಮವಾಗಿ ಕಡೆದು ಮಾಡಿದವು. ಒಂದು ಶ್ರೀಮನ್ನಾರಾಯಣ ವಿಗ್ರಹ; ಅದರ ಎರಡು ಪಕ್ಕಗಳಲ್ಲಿಯೂ ಶ್ರೀದೇವೀ ಭೂದೇವೀ ಮೂರ್ತಿಗಳು – ನಿಜವಾದ ದೇವತಾವಿಗ್ರಹಗಳಿವು. ಹೀಗಿದ್ದರಲ್ಲವೆ, ಜನರಿಗೆ ಅವುಗಳಲ್ಲಿ ಭಕ್ತಿಯೂ ಪ್ರೀತಿಯೂ ಹುಟ್ಟುವುದು? ಆದರೆ ನಾವು ಹತಭಾಗ್ಯರು. ಆ ದೇವತಾಮೂರ್ತಿಗಳನ್ನು ಕಣ್ಣಾರೆ ನೋಡಿ ಸಂತೋಷಪಡುವ ಪುಣ್ಯವು ನಮಗೆ ಎಲ್ಲಿ ಬಂದೀತು? ಯಾರೊ ಕ್ರೂರಕರ್ಮಿಗಳು–ಘಾತಕರು–ಈ ಸೌಂದರ್ಯವನ್ನೇ ದೂರದಿಂದ ಹುಡುಕಿಕೊಂಡು ಬಂದು ವಿಗ್ರಹಗಳ ಚೆಂದವನ್ನೂ ಚೆಲುವನ್ನೂ ನೋಡಿ ಸಹಿಸಲಾರದೆ ಅವನ್ನು ಭಿನ್ನ ಮಾಡಿದ್ದಾರೆ. ಅನ್ಯಮತೀಯರೇ ಅದನ್ನು ಮಾಡಿರಬೇಕೆನ್ನಲಾರೆ, ನಾಶಕ್ರಿಯೆಯಲ್ಲಿ ನಮ್ಮವರ ವ್ಯಾಪಾರ ಸಣ್ಣದೇನಲ್ಲ. ದೇವನ ಅಖಂಡಮೂರ್ತಿಯನ್ನು ಈ ಕರ್ಮ ಭೂಮಿಯಲ್ಲಿ ನೋಡುವುದು ಅಸಾಧ್ಯವೆಂದು ಕಾಲಕಾಲದಲ್ಲಿಯೂ ಯಾವುದೊ ಅದೃಷ್ಟ ವ್ಯಕ್ತಿಯೊಂದು ಸಾರಿ ಸಾರಿ ಹೇಳುವುದು ಎನ್ನುವಂತೆ, ಈ ದೇವಮೂರ್ತಿಗಳ ಪಾದ ಭಾಗವೊಂದು ಮಾತ್ರವುಳಿದು ಉಳಿದ ಶ್ರೀತನುವೆಲ್ಲವೂ ಈಗ ಕಾಣದಂತಾಗಿದೆ. ಸಾಧಾರಣದವರಿಗೆ ಕಾಣಿಸದ ಕಡೆ ಎಲ್ಲಿಯೊ ಒಂದು ಮೂಲೆಯಲ್ಲಿ, ಶ್ರದ್ಧಾಳುಗಳಾಗಿ ಅರಸುವವರಿಗೆ ಮಾತ್ರ ಭಗವಂತನ ಪಾದ ದರ್ಶನವಾಗುವುದೆಂದು ಹಿರಿಯರು ಹೇಳುವುದನ್ನು ಕೇಳಿದ್ದೇವೆ. ಆದರೆ ಆ ಪಾದದರ್ಶನ ಮಾತ್ರದಿಂದ – ಅವು ಇಂಥ ದಿವ್ಯ ಪಾದಗಳೇ ಆಗಿದ್ದಾಗ್ಯೂ – ನಮಗೆ ಸಂತೋಷ ದೊರೆಯದೆಂದೂ ಈ ರೀತಿ ಅವನ್ನು ಕಂಡರೆ ಸಂತೋಷಕ್ಕಿಂತಲೂ ಹೆಚ್ಚಾಗಿ ದುಃಖವೇ ಆಗುವುದೆಂದೂ ವಿಶದವಾಗಿ ಹೇಳಬೇಕಾದುದೇನಿದೆ? ಇಲ್ಲವಾಗಿದ್ದರೆ ದೇವ ಸಂದರ್ಶನವಂತೂ ಇರಲಿ ಈ ಶಿಲಾದೈವ ಸಂದರ್ಶನವೂ ಸಂಪೂರ್ಣವಾಗಿ ಆಗದಿರುತ್ತಿತ್ತೆ? ಮೇಲ್ಗಡೆ ಸಪ್ತಫಣಗಳಿಂದ ದೇವನಿಗೆ ಛತ್ರಿ ಹಿಡಿದಂತೆ ನಿಂತಿರುವ ಫಣಿರಾಜನಿಗೂ ದುರ್ಗತಿ ತಪ್ಪಿಲ್ಲ. ಫಣಿರಾಜನ ಕಂಠವು ಕತ್ತರಿಸಿ ಹೋಗಿದೆ. ಎಲ್ಲಿಯೊ ನಡುವೆ ಹರಿದುಹೋಗಿರುವ ಫಣಭಾಗದಿಂದ ಒಂದೆರಡು ಜೊತೆ ನಾಲಗೆಗಳು ಒಡೆಯನಿಗೆ ಏನೊ ಹೇಳುವುದಕ್ಕೆಂದು ಹೊರಟು ಹೇಳಿ ಮುಗಿಸುವಷ್ಟರಲ್ಲೇ ಜೀವರಸಪ್ರವಾಹವು ನಿಂತುಹೋಗಲು ನಿಶ್ಚೇಷ್ಟವಾಗಿ ನಿಂತು ಬಿಟ್ಟಂತೆ ಕಾಣುತ್ತಿದೆ. ಈಗಲೂ ಇಷ್ಟು ದಿನಗಳ ಮೇಲೆ ಈ ಮುನ್ನೂರು ಮೈಲಿಗಳ ದೂರದಿಂದ ಒಮ್ಮೆ ಆ ದೃಶ್ಯವನ್ನು ನೋಡಿದರೆ, ದುಶ್ಶಮಿತವಾದ ತೀವ್ರ ವೇದನೆಯೊಂದು ಮನಸ್ಸಿನಲ್ಲಿ ಉಂಟಾಗಿ ಶೂಲದ ಇರಿತದಂತೆ ನೋಯಿಸುತ್ತದೆ. ಆದರೂ ಅದೇ ದೃಷ್ಟಿ ಪುನಃಪುನಃ ಪ್ರೀತಿಯಿಂದ, ಭಕ್ತಿಯಿಂದ, ನಯದಿಂದ, ನಿರ್ಮಲಾಂತಃಕರಣದಿಂದ,

ಅಶ್ರುಜಲಾಂಜಲಿಗಳಿಂದ ಆ ಪವಿತ್ರ ಪಾದಗಳ ಬಳಿಗೆ ಹೋಗಿ ಅದನ್ನು ತೊಳೆದು ಕುಸುಮ ಪರಿಮಳಗಳಿಂದ ಪೂಜಿಸಲೆಳಸಿ ಸರ್ವದಾ ಅಲ್ಲಿಯೇ ಇರಲು ಆತುರಾತುರವಾಗಿಯೂ ಇರುತ್ತದೆ. ಕವಿಯೊಬ್ಬನು ಹೇಳಿರುವಂತೆ ಇಹದಲ್ಲಿ ಅಸಮಗ್ರವಾಗಿ ಅಸಂಪೂರ್ಣವಾಗಿ ಮುರಿದು ಬೇರೆ ಬೇರೆಯಾಗಿರುವುದೆಲ್ಲ ಪರದಲ್ಲಿ ಸಮಗ್ರವಾಗಿ ಸಂಪೂರ್ಣವಾಗಿ ರೂಪುಗೊಂಡು ರಂಜಿಸುವುದೇನೊ! ಈಗ ಉಳಿದಿರುವ ಈ ಪಾದಪದ್ಮಗಳ ನೆನಪಾದರೂ ಸರ್ವದಾ ನಮಗೆ ಇರುವಂತೆ ಆ ದೇವನೇ ನಮ್ಮನ್ನು ಆಶೀರ್ವದಿಸಕೂಡದೇಕೆ?

ಮುಂದೆ ಕೋದಂಡರಾಮಸ್ವಾಮಿಯ ಗುಡಿ. ಅಲ್ಲಿ ಜನರ ಗದ್ದಲ ಬಹಳ; ಸಮಾರಾಧನೆಯ ಸಂಭ್ರಮದ ಓಡಾಟ ಬೇರೆ. ಅಷ್ಟು ಜನರ ಗದ್ದಲವಿರುವ ಕಡೆಯೂ ಅರ್ಚಕರ ಆರಾಧನೆ ಪೂಜೆಗಳು ನಡೆಯುತ್ತಿರುವ ಕಡೆಯೂ ವಾಸಿಸಿಕೊಂಡಿರುವುದಕ್ಕೆ ದೇವನು ಹಿಂಜರಿಯುತ್ತಾನಂತೆ. ಅವನಿಗೆ ಜನ ಭಯ ಬಹಳ. ಅಲ್ಲಿಂದ ಮುಂದೆ ನೋಡುವಲ್ಲಿ ಅತಿಶಯ ಸಂತೋಷದಾಯಕವಾದ ವಿಷಯ! ನಮ್ಮ ಭಾಗ್ಯದೇವತೆಯ ಹಾಗೆ ಚೆನ್ನಯ್ಯನು ಬರುತ್ತಿದ್ದನು!! ಇನ್ನೇನು ನಮಗೆ ಭಯ?

"ನೋಡಿ ಸಾರ್, ಇಲ್ಲಿ ಬರುತ್ತಿದ್ದಾನೆ. ಅಲ್ಲೆಲ್ಲ ಹುಡುಕಿದರೆ ಸಿಕ್ಕುತ್ತಾನೆಯೆ?"

"ಇಷ್ಟು ಹೊತ್ತು ಎಲ್ಲಿ ಹೋಗಿದ್ದೆಯೊ – ಗಂಡ?" ಎಂದರು ಯಜಮಾನರು – "ನಿನಗೆ ಕಾದು ಕಾದು ಈ ಹೊತ್ತಿನ ಕೆಲಸವೆಲ್ಲ ನಾಶವಾಗಿ ಹೋಯಿತು."

ಚೆನ್ನಯ್ಯ – ಅವರು ಒಯ್ದುಕೊಂಡೋಗಿಬಿಟ್ರು. ಎಷ್ಟು ಹೇಳಿದರೂ ಬಿಡಲಿಲ್ಲ. ಈಗ ಬರೋದು ಕೂಡ ಕಷ್ಟವಾಗಿ ಹೋಯ್ತು.

ಯಜ – ಹೋಗಲಿ. ಈಗ ನಮ್ಮ ಜೊತೆಯಲ್ಲಿ ನೀನು ಬರಬೇಕು.

ಚೆ – ಒಂದು ಸಲ ನಾನಲ್ಲಿಗಾಗಲೇ ಅವರನ್ನು ಕರೆದುಕೊಂಡು ಹೋಗಿ ಬಂದೆ ಸ್ವಾಮಿ. ಇಲ್ಲಿಗೆ ಬಲುದೂರ ಇದೆ. ನಡೆದು ನಡೆದು ಕಾಲು ಬಿದ್ದು ಹೋಗಿದೆ. ನೋಯುತ್ತೆ ಸ್ವಾಮಿ!

ನಾವು – ನೋವು ಏನು ಮಾಡುತ್ತೆ ನಡೆಯೊ! ನಾಳೆ ನಿನ್ನ ನಾವು ಬಾಯೆಂದು ಕರೆಯುತ್ತೇವೆಯೆ?... ಇಲ್ಲಿಂದ ಅಲ್ಲಿಗೆ ಎಷ್ಟು ದೂರವಾಗುತ್ತೆ?

ಮನುಷ್ಯರ ಸ್ವಾರ್ಥಪರತೆಗೆ ಮೇರೆಯೇ ಇಲ್ಲ. ನಮ್ಮ ಕೆಲಸವಾದರೆ ಆಯಿತು. ಇತರರ ಚಿಂತೆ ನಮಗೇನು?

ಚೆ – ನಾಲ್ಕೈದು ಮೈಲಿ ಆಗುತ್ತೆ ಸ್ವಾಮಿ. ಬರೋದಕ್ಕೆ ತುಂಬಾ ಹೊತ್ತಾಗುತ್ತೆ.

ನಾವು – ದೂರದ ನೆಪಹಾಕಿ ತಪ್ಪಿಸಿಕೊಳ್ಳಬೇಕು ಅಂತಿದ್ದೀಯೊ? ನಿನಗೇನು ಎಷ್ಟು ತಪ್ಪಿದರೆ ಅಷ್ಟೇ ಸಾಕು. ಈವೊತ್ತು ಎಷ್ಟೇ ಹೊತ್ತಾದರೂ ಅಲ್ಲಿ ಹೋಗಿಯೇ ಬರಬೇಕು.

ಚೆ – ಅದಕ್ಕಲ್ಲ ಸ್ವಾಮಿ – ನಡೀರಿ ಬರ್ತೇನೆ. ದೂರವೇನೊ ಕಡಮೆ ಇಲ್ಲ, – ಇತ್ಯಾದಿ.

ಅಂತು ಚೆನ್ನಯ್ಯ ನಮ್ಮ ಜೊತೆಯಲ್ಲಿ ಬರುವುದಕ್ಕೆ ಒಪ್ಪಿ ಮುಂದೆ ನಡೆದನು. ಅವನು ಮುಂದೆ, ನಾವು ಹಿಂದೆ. ಅವನು ಹಾಗೆಯೇ ನಮ್ಮ ಕಡೆ ತಿರುಗಿ ಅಲ್ಲಿನ ಒಂದು ಪ್ರದೇಶವನ್ನು ಕೈಬೆರಳಿಂದ ನಿರ್ದೇಶಿಸಿ, "ಅಲ್ಲಿ ನೀರು ಬಲು ಆಳ ಇದೆ ಸ್ವಾಮಿ. 'ಮೊನ್ನೆ ಇಬ್ಬರು ಮುಳುಗಿ ಹೋದರು" ಎಂದನು.

"ಎಲ್ಲೊ?"

ಕೋದಂಡರಾಮಸ್ವಾಮಿ ದೇವಸ್ಥಾನದ ಎದುರಿನಲ್ಲಿ ನದಿಯ ಪಾತ್ರ ಬಹು ಅಗಲವಾಗಿದೆ. ನೀರಿನ ಪ್ರವಾಹ ಬಂದು ಬಂದು ಇಲ್ಲಿ ಸುಮಾರು ಒಂದು ಸಣ್ಣ ಕೆರೆಯಷ್ಟು ಅಂಗಳವನ್ನು ಮಾಡಿಕೊಂಡಿದೆ. ಎದುರಿಗಿರುವ ದೇವರು ದೇವಸ್ಥಾನಗಳ ಸಮ್ಮುಖದಲ್ಲಿ ತುಂಗಭದ್ರೆ ನಮ್ರಳಾಗಿ ಪ್ರಣಾಮಗೈಯಲೆಳಸಿ ಪ್ರದಕ್ಷಿಣೆ ಮಾಡಿ ಮುಂದೆ ಹೋಗುವಂತಿದೆ. ಅಲ್ಲಿಗೆ ಕೈಬೆರಳು ತೋರಿಸಿ ಚೆನ್ನಯ್ಯ 'ಅಲ್ಲಿ' ಎಂದನು. ನದಿಯ ಆಚೆಕಡೆಯ ದಂಡೆಯಲ್ಲಿ ಶ್ರೀರಾಮದೂತನು ಹುಟ್ಟಿದನೆಂಬ ಅಂಜನಾ ಪರ್ವತ. ನಮಗೆ ಎಡಗಡೆ ಬೆಟ್ಟಗಳ ನಡುವೆ ಜಾಗಮಾಡಿಕೊಂಡು ಹರಿದು ಬರುತ್ತಿರುವ ನದಿ. ವಿಶಾಲವಾದ ನಮ್ಮ ಮುಂದಿನ ಜಲಾಂಗಣ; ತುಂಗಭದ್ರೆ ಅಲ್ಲಿಂದ ಮುಂದೆ ಅತಿ ಸಂಭ್ರಮದಿಂದ ಪ್ರಯಾಣ ಮಾಡುತ್ತ ಎದುರಿಗೆ ಸಿಕ್ಕಿದ ಕಲ್ಲು ಬಂಡೆಗಳನ್ನು ಅಪ್ಪಳಿಸಿಕೊಂಡು, ಸೀರ್ಪನಿಗಳನ್ನು ಚೆಲ್ಲಿಕೊಂಡು, ಅವುಗಳ ಮೇಲೆ ಝುಲ್ಲನೆ ಹರಿದು, ಸುಳಿದು ಸಗರ್ವದಿಂದ ಹೋಗುತ್ತಿರುವ ದೃಶ್ಯ. ಅವನ್ನು ನೋಡಿದರೆ ಯಾರ ಮನಸ್ಸಿನಲ್ಲಿ ತಾನೆ ಗಂಭೀರ ಭಾವತರಂಗಗಳು ಉದಯಿಸವು! ರಾಯರು ಕೇಳಿದರು – "ಇಲ್ಲೆಲ್ಲೋ, ಚೆನ್ನಯ್ಯ, ಸಂನ್ಯಾಸಿ ದಿಬ್ಬವೆಂಬ ಜಾಗವಿದೆ ಅಂತಾರಲ್ಲ?" ಎಂದು.

ಚೆ – ಅಗೊಳ್ಳಿ ಸ್ವಾಮಿ, ಅದು; ಆ ಕಲ್ಲುಮಂಟಪ, ನದಿಯ ಆಚೆಕಡೆ?

ಮಂಟಪವನ್ನು ಆಗಲೆ ನಾವೆಲ್ಲ ನೋಡಿದ್ದೆವು. ಇತರ ಕಲ್ಲುಮಂಟಪಗಳಂತೆಯೇ – ಹೊರಗಣ ಆಕಾರದಲ್ಲಿ – ಅದೂ ಅತಿ ಸಾಮಾನ್ಯವಾದುದು. ಆದರೆ ಬೆಟ್ಟದ ಆ ಕಡಿದಾದ ತಪ್ಪಲಿನಲ್ಲಿ, ಆ ದುರ್ಗಮಪ್ರದೇಶದಲ್ಲಿ, ಪ್ರಾಣಿಸಂಬಂಧವಿಲ್ಲದ ಆ ನಿವಾಸವನ್ನು ಮಾಡಿಕೊಂಡು ಇರುತ್ತಿದ್ದವರು ಎಂಥವರಾಗಿರಬೇಕು? – ಎಂದುಕೊಂಡಿದ್ದೆವು. ಈಗ ಅದೇ ಮಂಟಪವೇ ಸಂನ್ಯಾಸಿ ದಿಬ್ಬವೆಂದು ತಿಳಿಯುತ್ತಲೆ ರಾಯರ ಮನಸ್ಸು ಸಂಪೂರ್ಣವಾಗಿ ಆ ಕಡೆ ಹೊರಟು ಹೋಯಿತು. ಅದನ್ನು

ಅವರು ಹಾಗೇ ಧ್ಯಾನಿಸುತ್ತ ನಿಂತರು. ಐತಿಹಾಸಿಕ ಸಂಬಂಧಗಳಿಂದ, ಅವರ ಕಣ್ಣಿಗೆ – ನಮ್ಮೆಲ್ಲರ ಕಣ್ಣಿಗೆ – ಆ ನಿರ್ಜೀವ ಮಂಟಪ ವಿದ್ಯಾರಣ್ಯರ ತಪಸ್ಸ್ಥಾನವಾಗಿ ಎದುರಿಗೆ ಚಿತ್ರಿತವಾಗಿ ನಿಂತಿತು. ವಿದ್ಯಾರಣ್ಯರ ವಿಷಯದಲ್ಲಿ ಅನಂತ ಭಕ್ತಿಭಾವಗಳಿದ್ದ ರಾಯರಿಗಂತೂ ಕಾಲದೇಶಗಳ ಅರಿವು ಅಳಿಸಿಹೋಗಿ ಮನಸ್ಸು ಧ್ಯಾನದಲ್ಲಿ ಮುಳುಗಿತು. ಸ್ವಲ್ಪ ಹೊತ್ತಿನ ಬಳಿಕ "ಅಲ್ಲಿಗೆ ಹೋಗುವುದಕ್ಕೆ ದಾರಿಯಿಲ್ಲವೇನಯ್ಯ?" ಎಂದರು.

ಚಿ – ಇಲ್ಲ ಸ್ವಾಮಿ. ಆನೆಗೊಂದಿಯ ಕಡೆಯಿಂದ ಬೆಟ್ಟ ಹತ್ತಿ ಇಳಿದು ಬಂದರೆ ಆಗಬಹುದು. ಬಲು ಕಷ್ಟ.

ರಾ – ನೀರು ದಾಟಿ ಯಾರೂ ಆ ಕಡೆ ಈಗ ಹೋಗುವುದೇ ಇಲ್ಲವೇನು?

ಚಿ – ನಾನು ಯಾರನ್ನೂ ನೋಡಿಲ್ಲ ಗುರುವೆ. ನೀರು ಬಹಳ ಇದೆ. ಅಂಥಾದ್ದು ಈ ಸುತ್ತಮುತ್ತಲೂ ಎಷ್ಟೋ ಇವೆ. ಅಲ್ಲಿ ಹೋಗಿ ಇರೋ ಅಂಥಾವ್ರೋರು ಈಗ ಯಾರೂ ಇಲ್ಲ.

ನಿಜವಾಗಿಯೂ ಅದು ನಿರ್ಗಮ ಪ್ರದೇಶವೇ. ಇಲ್ಲದಿದ್ದರೆ ವಿದ್ಯಾರಣ್ಯರು ಆ ಸ್ಥಳದಲ್ಲಿ ತಮ್ಮ ಆಶ್ರಮವನ್ನು ನಿರ್ಮಾಣ ಮಾಡಿಕೊಳ್ಳುತ್ತಿದ್ದರೆ ? ಜನರ ಸುಳಿವಿಲ್ಲದೆ, ಅದರ ಗದ್ದಲಕ್ಕೆ ದೂರವಾದ ಆ ಏಕಾಂತ ಸ್ಥಾನ ಎಷ್ಟು ರಮಣೀಯವಾಗಿದೆ ! ವಿಶ್ವ ವ್ಯಾಪಾರ ತತ್ತ್ವಗಳನ್ನು ಕುರಿತು ಚಿಂತಿಸುತ್ತ, ಶಮದಮಯೋಗಾದಿ ತಪಶ್ಚರ್ಯೆಗಳಿಂದ ಆತ್ಮಶಕ್ತಿಯನ್ನು ವೃದ್ಧಿಪಡಿಸಿಕೊಂಡು, ಮನಸ್ಸನ್ನು ಸ್ತಿಮಿತಕ್ಕೆ ತಂದುಕೊಂಡು ನಿಶ್ಚಿಂತರಾಗಿರಲು ಕಲಿಯಲು ಈ ಶಾಂತಿನಿಕೇತನವು ಎಷ್ಟು ತಕ್ಕುದಾಗಿ ಮನೋಹರವಾಗಿರುವುದೆಂಬುದನ್ನು ವರ್ಣಿಸಿ ಹೇಳುವುದು ಸಾಧ್ಯವಿಲ್ಲ. ಇಲ್ಲಿ ಕುಳಿತು ತಾನೇ ಆ ವೀರತಪಸ್ವಿಗಳು ಹಿಂದೂಧರ್ಮವನ್ನು ಉದ್ಧಾರ ಮಾಡುವ ಯೋಚನೆಗಳನ್ನು ಪಕ್ವಮಾಡಿಕೊಂಡುದು ! ಹಿಂದೂ ಸಾಮ್ರಾಜ್ಯ ಸ್ಥಾಪನೆಯ ಉದ್ದೇಶಗಳನ್ನು ಹುರಿಮಾಡಿಕೊಂಡುದು !

ಹಂಪೆಯ ಆಕೃತಿಯನ್ನೂ, ಅಲ್ಲಿನ ಭೂಕಟ್ಟನ್ನೂ, ಪ್ರಕೃತಿರಮಣೀಯತೆಯನ್ನೂ ನೋಡಿದರೆ ಸಾಮಾನ್ಯರಾದವರ ಮನಸ್ಸಿನ ಉತ್ಸಾಹವೇ ಮೇರೆ ತಪ್ಪಿದಂತಾಗುವುದು. ಅವರಂಥ ತಪಸ್ವಿಗಳಿಗೂ ದೇಶಬಾಂಧವರಿಗೂ ಸ್ಮಾರ್ತ ಸಾಮ್ರಾಜ್ಯ ಸಂಸ್ಥಾಪನೆಯ ಯೋಚನೆ ಬಂದುದು ಹೆಚ್ಚೇನು ? ಬ್ರಾಹ್ಮಣನ ಸತ್ವತೇಜಸ್ಸಂಪಾದನೆಗೂ ಕ್ಷತ್ರಿಯನ ಕ್ಷಾತ್ರ ರಾಷ್ಟ್ರ ಪ್ರತಿಷ್ಠಾಪನೆಗೂ ಭೂಮಿಯ ಈ ಭಾಗ ಪಡೆದಿರುವಷ್ಟು ಅನುಕೂಲ್ಯ ಇನ್ನಾವ ಭಾಗವೂ ಪಡೆದಿಲ್ಲವೆಂದು ಹೇಳಬಹುದು. ಮುಂದೆ ಮುಂದೆ ಹೊರಟೆವು. ರಾಯರು ಇನ್ನೂ ಧ್ಯಾನತತ್ಪರರಾಗಿಯೇ ಇದ್ದರು. ನಾವು ಯಾರೂ ಅವರನ್ನು ಮಾತನಾಡಿಸಲಿಲ್ಲ ; "ಅವರನ್ನು ನಾಸ್ತಿಕರೆಂದು ಕರೆಯುವರಾರು?" ಎಂದು ನನಗೆ ಅನ್ನಿಸಿತು.

ಮುಂದೆ ಅನತಿ ದೂರದಲ್ಲಿಯೇ ಎತ್ತರವಾದ ತುಲಾಪುರುಷ ದಾನಸ್ತಂಭಗಳು; ವಿಜಯನಗರದ ಅರಸರು ಪರ್ವ ಗ್ರಹಣ ಇತ್ಯಾದಿ ಪುಣ್ಯಕಾಲಗಳಲ್ಲಿ ತುಲಾಭಾರ ಮಾಡಿಸಿಕೊಂಡು ರತ್ನಕನಕಾದಿ ದ್ರವ್ಯಗಳನ್ನು ಯಥೇಚ್ಛವಾಗಿ ದಾನ ಮಾಡುತ್ತಿದ್ದ ಸ್ಥಳವಂತೆ. ಸಾಮ್ರಾಜ್ಯೇಶ್ವರ ಕೃಷ್ಣದೇವರಾಯನೂ ಅವನ ತರುವಾಯ ಬಂದ ಅಚ್ಯುತರಾಯನೂ ಇಲ್ಲಿ ಈ ತೆರನಾದ ಸುವರ್ಣ ದಾನಗಳನ್ನು ಅನೇಕವಾಗಿ ಮಾಡಿದರಂತೆ. ಅದು ಶಾಂತಿಕರ್ಮವೊ ಶಾಸ್ತ್ರವಿಧಿಯೊ ತಮ್ಮ ವೈಭವ ದರ್ಪಗಳ ಉದ್ದಂಡ ಘೋರಣೆಯನ್ನು ಲೋಕಕ್ಕೆ ಪ್ರಕಟಿಸಿ ಖ್ಯಾತಿಗೊಳ್ಳಲು ಹಿಂದಿನವರು ನಡೆಸುತ್ತಿದ್ದ ದಂಭವೃತ್ತಿಯೊ ಇವೆಲ್ಲವೂನೊ ಹೇಳುವರಾರು? ನಮ್ಮದು ಅತಿವೃಷ್ಟಿ ಅನಾವೃಷ್ಟಿಯ ಖಂಡ. ಇಲ್ಲಿ ಯಾವ ವಿಷಯದಲ್ಲಿಯೂ ಜನರಲ್ಲಿ ಸಮತೆಯಾಗಲಿ ಸ್ತಿಮಿತಗತಿಯಾಗಲಿ ಮಧ್ಯವೃತ್ತಿಯಾಗಲಿ ಇರದು. ಈ ಸ್ವಭಾವ ಉಷ್ಣದೇಶಗಳವರಾದ ನಮಗೆ ಸೃಷ್ಟಿಕರ್ತನು ಕೊಟ್ಟ ಅಖಂಡ ಶಾಪವೆಂದು ತೋರುವುದು.

ಅಲ್ಲಿ ಒಂದನ್ನೂ ಬಿಡದೆ ಎಲ್ಲವನ್ನೂ ಸಾವಕಾಶದಿಂದ ನೋಡಲು ನಮಗೆ ಕಾಲವಿಲ್ಲದಿದ್ದುದರಿಂದ ಶೀಘ್ರವಾಗಿ ನಡೆದೆವು. ಸ್ವಲ್ಪ ದೂರದಲ್ಲಿಯೇ ಒಂದು ದೊಡ್ಡ ದೇವಸ್ಥಾನ. ಅದೇ ವಿಠ್ಠಲಸ್ವಾಮಿಯ ಗುಡಿಯೆಂದು ತಿಳಿಯಿತು. ಹೊರಗಡೆ ಎತ್ತರವಾದ ಪೌಳಿಗೋಡೆಯ ಪ್ರಾಕಾರ; ಅದನ್ನು ಕಟ್ಟಲು ಉಪಯೋಗಿಸಿರುವ ೨೦–೩೦ ಅಡಿ ಉದ್ದ, ೪-೫ ಅಡಿ ದಪ್ಪ ನಯವಾದ ಕಲ್ಲುಚಪ್ಪಡಿಗಳನ್ನು ಬಿಟ್ಟರೆ, ಹಂಪೆಗೆ ಅತಿ ಸಾಮಾನ್ಯವಾದ ಗೋಡೆ. ನನಗೆ ದೇವಸ್ಥಾನದ ವಿಚಾರ ಹೆಚ್ಚಾಗಿ ತಿಳಿಯದು. ಎಲ್ಲರೂ "ವಿಟ್ಠಲಸ್ವಾಮಿ ಗುಡಿ, ವಿಟ್ಠಲಸ್ವಾಮಿ ಗುಡಿ" ಎಂದು ಹೇಳುತ್ತಿದ್ದುದನ್ನು ಮಾತ್ರ ಕೇಳಿದ್ದೆ. ಹೊರಪ್ರಾಕಾರವನ್ನು ನೋಡಿದವನು, 'ಇಷ್ಟೆಯೆ? ಇಲಿಯನ್ನು ಹುಲಿಯೆಂದು ಕರೆದು ಹೋ ಎನ್ನುವುದೇ ನಮ್ಮ ಜನರ ಸ್ವಭಾವ. ಅಸ್ತಿಭಾರವಿಲ್ಲದ ಅತ್ಯುಕ್ತಿ–ನಮ್ಮ ರಾಷ್ಟ್ರಕ್ಕೇ ಬಂದುದು' ಎಂದುಕೊಂಡೆ. ಆದರೆ ಒಳಗಡೆ ಹೋದ ಮೇಲೆ ನನ್ನ ಈ ಭಾವನೆ ತಪ್ಪೆಂದು ಮನಗಂಡೆನು. ನಾವು ಹೊರಟ ದಾರಿಯಿಂದ ಗುಡಿಗೆ ಪ್ರವೇಶ ತೆಂಕಣದ್ವಾರದಿಂದ. ಚೆನ್ನಯ್ಯನು ಬಾಗಿಲಲ್ಲಿ ಜಗುಲಿಯ ಮೇಲೆ ಹುಳಿಮಾವಿನ ಕಾಯಿಗಳನ್ನು ತಿನ್ನುತ್ತ ಕುಳಿತುಕೊಂಡನು. ನಾವು ದೇವಸ್ಥಾನದ ಒಳಪ್ರಾಂಗಣವನ್ನು ಹೊಕ್ಕೊಡನೆಯೆ ಹೆಗಲ ಮೇಲಿದ್ದ ಜಂಖಾನವನ್ನು ಹಾಸಿ ಮಲಗಿದನು. ಅವನು ತಿಂದು ಉಳಿಸಿದ್ದುದನ್ನು ತಿನ್ನಲು ಒಂದು ತಂಡ ಕಪಿಗಳು ಬಂದು ಅವನ ಸುತ್ತಲೂ ಕೀಚುಗುಟ್ಟುತ್ತ, ಗೊರ್ರೆನ್ನುತ್ತ, ಹಲ್ಲು ಮಸೆಯುತ್ತ, ಕಾದಾಡುತ್ತ ಕುಳಿತವು. ಅವನೂ ಅವುಗಳಿಗೆ ಒಂದೊಂದು ಚೂರನ್ನು ಎಸೆಯುತ್ತ, ಅತಿ ಹತ್ತಿರ ಬಂದಾಗ ಕೈಯಿಂದಲೂ ಕೋಲಿಂದಲೂ ಆಗಾಗ ಬೆದರಿಸುತ್ತ, ಚೆದರಿಸುತ್ತ ಅವುಗಳೊಡನೆ ಆಟವಾಡುತ್ತ ಕುಳಿತನು. ಅವನಿಗೇನು? ಎಲ್ಲಿದ್ದರೆ ಅದೇ ಮನೆ- ಅವನ ಆಯುಧ ಆ ದೊಣ್ಣೆ, ಆ ಹರಕು ಜಂಖಾನವೇ ಸರ್ವಸ್ವ ಆಸ್ತಿ. ಅವನ್ನು ಬಿಟ್ಟರೆ, ಪ್ರಪಂಚದಲ್ಲಿ ತನ್ನದೆನ್ನುವ ಬೇರೊಂದು ವಸ್ತು ಇಲ್ಲ. "ಪಾಪ! ತುಂಬ ಆಯಾಸಪಟ್ಟಿದ್ದಾನೆ. ಹಾಗೇ ಸ್ವಲ್ಪ ಹೊತ್ತು

ಉರುಟಿಕೊಂಡಿರಲಿ" ಎಂದರು ಯಜಮಾನರು. ನಮಗೂ ಹಾಗೆಯೇ ಅನ್ನಿಸಿತು. ಆ ದೇವಸ್ಥಾನದಲ್ಲಿ ನೋಡಬೇಕಾದುದು ಮುಖ್ಯವಾಗಿ ಮೂರು: ಮುಖದ ಮಹಾಮಂಟಪ ; ಪಕ್ಕದಲ್ಲಿನ ದೇವರ ಕಲ್ಯಾಣ ಮಂಟಪ; ಎದುರಿನಲ್ಲಿ ಸಣ್ಣ ಕಲ್ಲುರಥ. ಪ್ರಾಕಾರದ ಒಳಗಡೆ ಅನೇಕ ಶಿಲಾಶಾಸನಗಳಿವೆ. ಪ್ರಾಕ್ತನ ವಿಚಾರಕರು ಈ ಶಾಸನಗಳನ್ನು ಓದಿ ಚಾರಿತ್ರಿಕ ವಿಷಯಗಳನ್ನು ವಿಮರ್ಶೆಮಾಡಿ ತಿಳಿದುಕೊಳ್ಳಬಹುದು.

ದೇವಸ್ಥಾನವನ್ನು ಪ್ರದಕ್ಷಿಣೆ ಮಾಡಿಕೊಂಡು ಮುಖ ಭಾಗಕ್ಕೆ ಬಂದು ನಿಂತರೆ ಅದೇನು ಚಿತ್ರಕೃತಿಯ ಸಂವಿಧಾನ! ಏನು ಶಿಲ್ಪಕಲಾಕೌಶಲ್ಯ! ದ್ರಾವಿಡ ಶೈಲಿಯ ವಾಸ್ತುರಚನೆಯಲ್ಲಿ ಈ ತೆರನಾದ ಇನ್ನೊಂದು ಶಿಲ್ಪ ಕೃತಿಯಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗದು. ಮಹಾಮಂಟಪಕ್ಕೆ ಹತ್ತಿಹೋಗಲು ಮಾಡಿರುವ ಮೆಟ್ಟಿಲುಗಳ ಎರಡು ಕಡೆಗಳಲ್ಲೂ ಸುಂದರವಾಗಿ ಕೆತ್ತಿ ಮಾಡಿದ, ಸರ್ವಾಲಂಕಾರಭೂಷಿತಗಳಾಗಿ ಮುಂಗಾಲುಗಳೆತ್ತಿ ನಿಂತಿರುವ ಮದಗಜಗಳು. ಹಂಪೆಯಲ್ಲಿನ ಸರ್ವತ್ರ ಶಿಥಿಲಸ್ಥಿತಿ ಈ ಆನೆಗಳಿಗೂ ಬಂದಿದೆ. ಅವುಗಳ ಮುಖದಿಂದ ಸೊಂಡಿಲು ಕತ್ತರಿಸಿಹೋಗಿವೆ. ಮೇಲೆ ಹತ್ತಿ ಹೋಗಿ ನೋಡಿದರೆ ಸುತ್ತಲೂ ಸಾಲುಗಂಬಗಳು ; ಎಲ್ಲವೂ ಒಂದೇ ಸಮನಾಗಿ ಸೌಂದರ್ಯೈಕ ದೃಷ್ಟಿಯಿಂದ ಮಾಡಿದವು. ಗರ್ಭಗುಡಿಯ ಬಾಗಿಲವರೆಗೆ ವಿಶಾಲವಾದ ಸ್ತಂಭಮಾರ್ಗ, ಅವುಗಳ ಆಚೆಯಲ್ಲಿ ಉಪ-ಕಂಬಸಾಲುಗಳು ; ಮಧ್ಯೆ ಉಪರಂಗ. ಪ್ರತಿಯೊಂದು ಕಂಬದಲ್ಲಿಯೂ ಶರಭ ಸಾಳ್ವಗಳ ಮೇಲೆ ಕುಳಿತ ಪಹರೆಯವರು. ಮೇಲ್ಗಡೆ ಪಟ್ಟಿಕೆಗಳಲ್ಲಿ ಸುತ್ತಲೂ ಚಿತ್ರಕೆಲಸ. ರಾಮಾಯಣ ಮಹಾಭಾರತಗಳಲ್ಲಿನ ಘಟನಾವಳಿಗೆ ಸಂಬಂಧಪಟ್ಟವು. ನಾನು ಈವರೆಗೆ ನೋಡಿದ ನಾಟಕಶಾಲೆಗಳಲ್ಲಿನ ಯಾವ ಓಲಗದ ಘರದೆಯೂ ಇಷ್ಟು ಮನೋಹರವಾಗಿ, ಹೃದಯಾಪಹಾರಕವಾಗಿ ಇದ್ದುದನ್ನು ನೋಡಿರಲಿಲ್ಲ. ಅಲ್ಲಿಯೇ ಒಂದು ಕಡೆಯಿಂದ ಇನ್ನೊಂದು ಕಡೆಗೆ, ಒಂದು ಮೂಲೆಯಿಂದ ಇನ್ನೊಂದಕ್ಕೆ ಹೋಗಿ ಆ ಸೊಬಗನ್ನೇ ಅನುಭವಿಸುತ್ತಿರಬೇಕೆಂದು ಆಸೆ. ಉಳಿದವರು ಕಲ್ಯಾಣಮಂಟಪದ ಕಡೆ ಹೊರಟರು. 'ಸಾಕಪ್ಪ ಬನ್ನಿ' ಎಂದು ಕೂಗಿದರು. 'ಬಂದೆ' ಎಂದು ಹೇಳಿ ಕಳ್ಳತಪ್ಪಿಸಿಕೊಂಡು ಅವರಿಂದ ಮರೆಯಾಗಿ ಅಲ್ಲಿ ಇನ್ನೂ ಸ್ವಲ್ಪ ಹೊತ್ತು ಸುಳಿದಾಡಿದೆ.

ಇಲ್ಲಿ ಇಷ್ಟು ಶೃಂಗಾರವೇತಕ್ಕೆ? – ಎಂದು ಒಂದು ಸಲ ಪ್ರಶ್ನೆ ಬಂತು. ದೇವರು ಇಷ್ಟು ಸೌಂದರ್ಯವನ್ನು ಒಂದೇ ಕಡೆ ರಾಶಿಹಾಕಿ ಮಿಕ್ಕ ಭಾಗಗಳಿಗೆ ಬಡತನವನ್ನೇಕೆ ಕೊಟ್ಟನೊ! ಅವನಿಗೂ ಹೀಗೆ ಪಕ್ಷಪಾತ ಬುದ್ಧಿ ಬಂದ ಮೇಲೆ ಸಾಮಾನ್ಯರು ನಿಷ್ಪಕ್ಷಪಾತಿಗಳಲ್ಲವೆಂದು ಅವರನ್ನು ಏಕೆ ಆಕ್ಷೇಪಿಸಬೇಕು? – ಎಂದುಕೊಂಡೆ. ಇಷ್ಟು ಸುಂದರವಾದ ಕಟ್ಟಡಕ್ಕೆ ಈ ದುಃಸ್ಥಿತಿ ಏಕೆ ಬರಬೇಕು, ಏನು ವಿಧಿಲೇಖವೊ! – ಎಂದು ಇನ್ನೊಂದು ಸಲ ತೋರಿತು. ಈ ಸೌಂದರ್ಯಕ್ಕೆ ಸಾಫಲ್ಯವೇ ಇಲ್ಲವೇನು? ಇಲ್ಲಿ ದೇವತಾವಿಗ್ರಹವಿಲ್ಲ. ಇಷ್ಟು ಸೊಗಸಾದ ಕಟ್ಟಡವು ತನ್ನಂಥವನಿಗೆ ತಕ್ಕುದಲ್ಲವೆಂದೂ, ಇಂಥ ಶೃಂಗಾರದ ನೆಲೆ ತನ್ನ ಯೋಗ್ಯತೆಗೆ ತಡೆಯದೆಂದೂ,

ಮೀರಿದುದೆಂದೂ ಹೇಳಿ ವಿಟ್ಠಲಸ್ವಾಮಿಯು ಹಂಪೆಗೆ ಬಾರದೆ ಪಂಢರಪುರದ ತನ್ನ ಹಳೆಯ ಬಡಮಂದಿರದಲ್ಲೆ ನಿಂತು ಬಿಟ್ಟಿರುವಲ್ಲಿ, ಈ ಸೌಂದರ್ಯಕ್ಕೆ ಪವಿತ್ರತೆ ಹೇಗೆ ಬರಬೇಕು? ದೇವರ ವಾಸವಿಲ್ಲದ ದೇವಸ್ಥಾನ ಮಂಗಳಸ್ಥಾನವೆಂತಾದೀತು? – ಎಂದು ತೋರಿತು. ಉತ್ತರಕ್ಷಣದಲ್ಲಿಯೇ, ಛೆ! ಸೌಂದರ್ಯವೇ ಭಗವಂತನ ಪ್ರತಿರೂಪ; ಅದಕ್ಕೆ, ಇತರ ಕರಣಗಳಿಂದ ಸಿದ್ಧಿ ಬರಬೇಕಾದ ಅವಶ್ಯಕತೆಯೇನಿದೆ? – ಎಂದೂ ವಿಧವಿಧವಾಗಿ ಮನಸ್ಸು ಭ್ರಮಿಸತೊಡಗಿತು. ಅಥವಾ ತಮ್ಮ ಕುಶಲತೆಯ ವಿಷಯದಲ್ಲಿ ಅಹಂಕಾರಪಟ್ಟು, ಹೆಮ್ಮೆ ಬುದ್ಧಿಯಿಂದಿರುವ ಈ ವಿಜಯನಗರದ ಅರಸರ ಸಮೀಪದಲ್ಲಿ ನಾನೇಕೆ ವಾಸಮಾಡಬೇಕು? ಅವರ ಉಚ್ಛ್ರಾಯದ ಉಪ್ಪರಿಗೆಗೆ ನಾನೇಕೆ ಸೋಪಾನ ಕಟ್ಟಿಕೊಡಬೇಕು? ಇದು ನನ್ನವರ ಸ್ಮಾರ್ತಸಾಮ್ರಾಜ್ಯ, ನಿಜ. ಆದರೆ ನಮ್ಮವರೆಂದು ಮಲೆತವರನ್ನು ಶಿಕ್ಷಿಸದೆ ಬಿಡುವುದು ಯೋಗ್ಯವೇ? – ಎಂದು, ದೂರದಿಂದ ಅವರ ಕರ್ಮಗಳನ್ನು ಸುಮಾರು ಅರ್ಧಶತಮಾನದವರೆಗೆ ನೋಡಿ ತಡೆಯಲಾರದ ಕೋಪದಿಂದ ತಾನಾಗಿ ಕರುಣೆಯಿಂದಿತ್ತ ಆ ಸಾಮ್ರಾಜ್ಯವನ್ನು ನಾಶಮಾಡಿದನೇನೊ! – ಎಂದು ಭಾವನೆ ಬಂದಿತು. ಭಾವನೆಗಳು ಹಾಗಿರಲಿ, ಆ ಸೌಂದರ್ಯವನ್ನು ನೋಡಿದರೆ – ಶಾಂತಂ ಪಾಪಂ – ಅಮಂಗಳವನ್ನು ನುಡಿಯಬಾರದು – ಅದು ಸಾಧ್ವಿಯ ಸಾತ್ವಿಕ ಸೌಂದರ್ಯದಂತೆ ಕಳೆಗೊಂಡಿರಲಿಲ್ಲ. ಅತುಳ ಲಾವಣ್ಯಮಯಿಯಾಗಿ, ಹಾವಭಾವವಿಲಾಸಗಳಿಂದ ಲೋಕವನ್ನು ಬೆರಗುಮಾಡಿ ಸೋಲಿಸುವ ನಾರಿಯ ಅಥವಾ ಚಿರವೈಧವ್ಯ ಪರಿಣತವಾಗಿ ವ್ಯರ್ಥವಾದ ಸೌಂದರ್ಯದಂತೆ ತೋರತೊಡಗಿತು. ಇನ್ನು ಒಬ್ಬನೇ ಅಲ್ಲಿರಲು ಸಾಧ್ಯವಾಗದೆ ಹೋಯಿತು. ಅಪವಿತ್ರ ಭಾವನೆಗಳನ್ನು ದೂರಮಾಡಲು ಸಂಗಡಿಗರಿದ್ದಲ್ಲಿಗೆ ಹೊರಟೆನು.

ಅವರೆಲ್ಲರೂ ಕಲ್ಯಾಣಮಂಟಪವನ್ನು ಸೇರಿ ಅದನ್ನು ಪ್ರಶಂಸೆಮಾಡುತ್ತ ಮಂಟಪದ ಮಧ್ಯದಲ್ಲಿ ಕುಳಿತಿದ್ದರು. ಆ ಮಂಟಪವನ್ನು ನೋಡಿದೆ. ಮನಸ್ಸು ಪರವಶವಾದಂತಾಯಿತು. ಅದರ ಚಂದ ದೇವಸ್ಥಾನದ ಮಹಾಮಂಟಪದ ಮೋಹನತೆಯನ್ನು ಕೀಳುಮಾಡಿ ಲಜ್ಜೆಗೊಳಿಸುವಂತಹುದು. ಅಲ್ಲಿಯೂ ಹೀಗೇ. ಕಂಬಸಾಲುಗಳು; ವಿಶಾಲವಾದ ಮಧ್ಯರಂಗ, ಅಕ್ಕಪಕ್ಕಗಳಲ್ಲಿ ನಾಲ್ಕು ಕಡೆ ಉಪರಂಗಗಳು; ಒಂದೊಂದು ಕಂಬವೂ ಒಂದೊಂದೇ ಕಲ್ಲಿನಿಂದ ಕಡೆದು ಕೆತ್ತಿ ಮಾಡಿದಂತಹುದು. ನಿಲುಗಂಬದ ಅಡಿಯ ಭಾಗದಲ್ಲಿ ಒಳಮುಖವಾಗಿ ಸಿಂಹಜಾತಿಯ ಮೃಗಗಳು; ಮಧ್ಯದಲ್ಲಿ ಪೀಠದ ಮೇಲೆ ಹೊರಮುಖನಾಗಿ ನಾಲ್ಕೈದು ಶಿಲಾದಂಡಗಳು; ಒಳಭಾಗದಲ್ಲಿ ಶರಭಾರೂಢರಾದ ಸವಾರರು. ಮಂಟಪದ ನಾಲ್ಕೂ ಕಡೆಯೂ ಹೀಗೆಯೇ. ವಿಧವಿಧವಾದ ನಯಗೆಲಸಗಳಿಂದ, ಶಿಲ್ಪಾಭರಣಚಮತ್ಕೃತಿಗಳಿಂದ ಕೆತ್ತಿ ಸಿಂಗರಿಸಲ್ಪಟ್ಟಿರುವ ಕಂಬ, ವೇದಿಕೆ. ಮೇಲ್ಗಡೆ ಮಾಳಿಗೆಯ ಮೂಲೆವಾಟಗಳಲ್ಲಿ ಲೋವೆಕಲ್ಲುಗಳ ಮೇಲೆ ಪಕ್ಷಿಯ ರೆಕ್ಕೆಗಳಂತೆ ಶಿಲ್ಪ ಕೆಲಸ; ಲೋವೆಯ ಕೆಳಗೆ ಲಾಂದರಗಳನ್ನು ತಗುಲಿಹಾಕುವುದಕ್ಕಾಗಿ ಮಾಡಿದ ಕಲ್ಲ ಉಂಗುರಗಳು. ಉತ್ತಮವಾದ

ಸಹಜ ಸೌಂದರ್ಯವನ್ನು ವೃದ್ಧಿ ಮಾಡಲು ಅಂಗಾಂಗಗಳಿಗನುಗುಣವಾದ ಉಡುಗೆತೊಡುಗೆಗಳನ್ನು ಹಾಕಿ ಅಲಂಕರಿಸುವಂತೆ ಮಂಟಪದ ಒಳಮಾಳಿಗೆಯ ಪ್ರತಿಭಾಗವೂ ಸ್ಫುಟವಾಗಿ ಕಂಡು ಶೋಭಿಸುವಂತೆ – ಹಸುರು, ನೀಲಿ, ಗುಲಾಬಿ, ಕೆಂಪು ಮುಂತಾದ ಬಣ್ಣಗಳಿಂದ ಅವನ್ನು ಹೆಚ್ಚು ಉಜ್ವಲವಾಗಿ ಕಾಂತಿಯುತವಾಗಿ ಮಾಡಿದ್ದಾರೆ. ಭವ್ಯಗಾನವೊಂದು ಘನೀಭೂತವಾಗಿ ಶಿಲ್ಪಾಕೃತಿಯಾಗಿ ಪರಿಣಮಿಸಿದಂತೆ ಇಲ್ಲಿನ ನೋಟ. ಆ ರಾಜನ ಕಲಾಭಿರುಚಿ, ಅಲಂಕಾರದೃಷ್ಟಿ, ರಸಿಕತೆ ಇವುಗಳನ್ನು ಏನೆಂದು ಹೇಳೋಣ! ಆ ಚಿತ್ರಗಾರರು ಶಿಲ್ಪಿಗಳು ತಾನೇ ಎಂಥವರು! ಯಾವ ಚಕ್ರವರ್ತಿಯ ವಿವಾಹಮಂಟಪ ಈ ತೆರನಾದ ಶಿಲ್ಪ ಕೌಶಲವನ್ನು ತೋರಿಸಬಲ್ಲುದು! ಕಲ್ಯಾಣಮಂಟಪವೆಂದರೆ ಇದಕ್ಕಲ್ಲವೆ ಆ ಹೆಸರು ಸಲ್ಲತಕ್ಕದ್ದು? ಎಂದುಕೊಂಡೆ. ಆ ಅರಸರ ವೈಭವವೂ ಮೈಯುಬ್ಬೂ ಎಂಥವಾಗಿದ್ದಿರಬೇಕು? ಪಂಪಾಪತಿಯ ದೇವಸ್ಥಾನದ ಮೇಲೆ ಬೆಳ್ಳಿಚಿನ್ನಗಳ ತಗಡುಗಳಿಂದ ಹೊದ್ದಿಕೆಗಳನ್ನು ಮಾಡಿಸಿ ಅದನ್ನು ಕಾಪಾಡುತ್ತಿದ್ದರಂತಲ್ಲ! ತಾವು ಮಾಡಿದ ಪ್ರತಿಯೊಂದು ಕೆಲಸವೂ ಚಿರಯಶಸ್ವಿಯಾಗಿ, ಆಚಂದ್ರಾರ್ಕವಾಗಿ ನಿಲ್ಲಲೆಂದು ಜಗತ್ತನ್ನು ಅಚ್ಚರಿಗೊಳಿಸಲು ಮಾಡಿದಂತಹುದು; ಎಷ್ಟು ಅಲ್ಪ ಅವಧಿಯಲ್ಲಿ ಎಷ್ಟು ಮಹತ್ಕಾರ್ಯ ಸಾಧನೆಗಳು! ಯಶೋಹೀನರಾಗಿ ಅನಾಮಧೇಯರಾಗಿ ಒಂದು ಶತಮಾನ ಕಾಲ ಬದುಕಿ ಕ್ರಿಮಿಗಳಂತೆ ಜೀವಿಸಿದ್ದು ತಾವು ದೀರ್ಘಜೀವಿಗಳೆನ್ನಿಸಿಕೊಳ್ಳುವುದಕ್ಕಿಂತ ಪ್ರಚಂಡ ಸತ್ವಶಾಲಿಗಳಾಗಿ, ಕೀರ್ತಿಮಹಿಮಾನ್ವಿತರಾಗಿ ನಾಲ್ಕು ದಿನ ಬಾಳಿಹೋಗುವುದು ಘನತರವಾದ್ದಲ್ಲವೆ?– ಎನ್ನಿಸಿತು. ಬರಿಯ ಆಯುಷ್ಯಕ್ಕೆ ಮಡ್ಡಿ ಜನರು ಏಕೆ ಆಶೆಪಡುವರೊ! ಆಯುಷ್ಯ ವಿಷಯದಲ್ಲಿ ನಮ್ಮ ಭಾವನೆ ಹಾಗಾಗಿಹೋದರೆ ನಮಗಿಂತಲೂ ಶತಾಧಿಕವಾಗಿ– ಶತಸಹಸ್ರಾಧಿಕವಾಗಿ – ಇರುವ ಆ ಕಲ್ಲುಬಂಡೆಗಳು ಶ್ರೇಷ್ಠವಾದುವಲ್ಲವೆ?

ಅದು ಹೋಗಲಿ – ಯಾವ ಚಿತ್ರಗಾರನು ತನ್ನ ಚಿತ್ರಗಳನ್ನು ಇಷ್ಟು ಉಜ್ವಲವಾಗಿ, ಸುಂದರವಾಗಿ, ಸಜೀವವಾಗಿ ಚಿತ್ರಿಸಬಲ್ಲನೊ ನಾನರಿಯೆ. ಸಂಧ್ಯಾರುಣರಾಗಗಳಿಂದ ಬಣ್ಣಗೊಂಡು ವಿಧವಿಧವಾಗಿ ಕಾಂತಿ ಪಡೆದು ಕ್ಷಣಕ್ಷಣಕ್ಕೂ ಹೊಸ ಶೃಂಗಾರಗಳನ್ನು ತೋರಿಸಿ ಮೋಹಿಸುವ ಮುಗಿಲಿನ ಶ್ರೇಣಿಗಳು ಒಂದೊಂದೂ ತಮ್ಮಷ್ಟಕ್ಕೆ ತಾವೇ ಕೂಡಿ ಬಂದು ಈ ರೀತಿಯಲ್ಲಿ ಆಕಾರ ತಾಳಿ, ಘನಿಷ್ಠವಾಗಿ ಇಲ್ಲಿ ಊರಿ ನಿಂತು ಬಿಟ್ಟಿರುವಂತೆ ಈ ಮಂಟಪ ಶೋಭಿಸುವುದಲ್ಲ! ಒರಟಾದ, ಜಡವಾದ ಕಲ್ಲಿಗೆ ಹೀಗೆ ಜೀವಕಳೆ ತುಂಬುವವನು ಸೃಷ್ಟಿಕರ್ತನಿಗೆ ಸಮಾನನಲ್ಲವೇ! ಇಹದಲ್ಲಿ ಸೃಷ್ಟಿ ಕರ್ತನೆಂಬುವವನಾರಾದರೂ ಇರುವನಾದರೆ, ಅಂಥವನು ಕಲಾನಿಪುಣನೆಂದೂ, ಆ ಕೆಲಸವು ಕವಿ, ಚಿತ್ರಕ, ಶಿಲ್ಪಿ, ಗಾಯಕ ಇವರುಗಳಿಗಲ್ಲದೆ ಇತರರಿಗೆ ಸಾಧ್ಯವಾಗದೆಂದೂ ತಮ್ಮ ತಮ್ಮ ಇಲಾಖೆಗಳಲ್ಲಿ ಅವರು ಸರ್ವನಿಯಾಮಕರೆಂದೂ ಅವರು ಶ್ರೇಷ್ಠರಾದರೆ ನಿಜವಾಗಿಯೂ ಬ್ರಹ್ಮರೇ ಎಂದೂ ಎನ್ನಿಸಿತು.

ಯಜಮಾನರೂ ರಾಯರೂ ಗಡಿಯಾರ ತೆಗೆದು ನೋಡಿದರು. ನಾಲ್ಕೂಕಾಲು ಗಂಟೆಯಾಗಿತ್ತು. "ಹಿಂದಿರುಗಿ ಬರುವುದು ಬಹಳ ಹೊತ್ತಾಗಿ, ಕತ್ತಲಾಗಿ ಹೋಗುತ್ತೆ; ನಡೆಯಿರಪ್ಪ, ಹೆಜ್ಜೆಹಾಕಿ" ಎಂದರು. ಚೆನ್ನಯ್ಯನೂ 'ಹೊರಡೋಣ ಸ್ವಾಮಿ' ಎಂದ. ಮೂರ್ತಿಸ್ವರೂಪದಲ್ಲಿ ಅಲ್ಲಿ ವಾಸಮಾಡಿಕೊಂಡಿರದಿದ್ದರೂ ಅಲ್ಲೇ ಎಲ್ಲೆಲ್ಲಿಯೂ ಅಡಗಿ ಆ ಕಲ್ಲು ಕಟ್ಟಡಕ್ಕೆ ಜೀವವನ್ನಿತ್ತಿರುವ ಆ ಸೌಂದರ್ಯಮೂರ್ತಿಯಿಂದ ಅಪ್ಪಣೆ ಪಡೆದು ಮುಂದೆ ಹೊರಟೆವು.

ಇತರ ದೇವಸ್ಥಾನಗಳ ಮುಂಭಾಗದಲ್ಲಿರುವಂತೆಯೇ ಇಲ್ಲಿಯೂ ತೇರು ಬೀದಿ; ನಾಲ್ಕೂ ಕಡೆ ದೇವಸ್ಥಾನಗಳು; ಈಗ ಅವೆಲ್ಲ ಭೂಶಾಯಿತವಾಗಿವೆ. ಅಲ್ಲಿನ ದೇವರುಗಳ ಕೈ ಒಂದು ಕಡೆ, ಕಾಲೊಂದು ಕಡೆ, ರುಂಡಮುಂಡಗಳು ಬೇರೆ ಬೇರೆ ಕಡೆ; ಕಣ್ಣೊಂದು ಕಡೆ, ಕಣ್ಣಿನ ಹೊಳಪೊಂದು ಕಡೆ; ಹೀಗೆ ತಮ್ಮ ಅವಯವ ಭಾಗಗಳನ್ನೂ ಕಳೆಗಳನ್ನೂ ಕಳೆದುಕೊಂಡು ವಿಗ್ರಹಗಳು ಭಿನ್ನವಾಗಿ ಎಲ್ಲೆಲ್ಲಿಯೂ ಬಿದ್ದಿವೆ. ಅವುಗಳ ಮೇಲ್ಗಡೆ ಪೊದೆಗಳೂ ಮುಳ್ಳುಗಿಡಗಳೂ ಕ್ರೂರವಾಗಿ ಹಬ್ಬಿವೆ. ಕ್ರೂರತರವಾದ ಮುಳ್ಳು ಹಂದಿಗಳು ಯಥೇಷ್ಟವಾಗಿ ಅವುಗಳೊಳಗೆ ವಾಸಮಾಡಿಕೊಂಡಿರಬೇಕು. ಅವುಗಳ ಹಂದಿಮೂತಿಯೂ ಕಿಸುಗಣ್ಣೂ ಪರಕೆಮ್ಮೈಯೂ ಭಯಂಕರವಾದ ತಮ್ಮ ರೂಪವನ್ನು ಆಗಿಂದಾಗ್ಗೆ ಹೊರದೋರಿಸಿಕೊಳ್ಳುತ್ತ ಆ ಸ್ಥಾನದಲ್ಲಿ ಶಾಶ್ವತವಾಗಿ ತಾವು ವಸತಿ ಕಲ್ಪಿಸಿಕೊಂಡಿರುವೆವೆಂದು ಸಾರುವಂತೆ ಕಾಣುವುವು; 'ಈ ಪ್ರದೇಶವೆಲ್ಲ ಈಗ ನಮಗೆ ಸೇರಿದುದು; ಇಲ್ಲಿಗೆ ಬರುವ ಜನರು ನೀವು ಜೋಕೆಯಿಂದಿರಬೇಕು' ಎಂದು ಹೇಳುವಂತೆ – ತಮ್ಮ ಪ್ರಾಬಲ್ಯದ ಗಡಿಗಳನ್ನು ಸೂಚಿಸಲೊ ಎಂಬಂತೆ – ನಾಲ್ಕಾರು ಮಾರುಗಳ ದೂರ ಮೊನಚಾದ ತಮ್ಮ ಮುಳ್ಗರಿಗಳನ್ನು ಎಸೆದಿವೆ. ಕ್ರೂರತಮವಾಗಿ, ಪಾಳುದೇವತೆ ಎಲ್ಲೆಲ್ಲಿಯೂ ವಿಕಟಹಾಸದಿಂದ ತನ್ನ ಪ್ರಭಾವವೆಂಥದೆಂಬುದನ್ನು ಬಿರ್‍ರನೆ ಬೀಸುವ ಉರಿಗಾಳಿಗೆ ಚೀರಿಹೇಳಿ ಆ ಪ್ರದೇಶವನ್ನು ಶ್ಮಶಾನವನ್ನಾಗಿ ಮಾಡಿದೆ. ಶ್ಮಶಾನವಲ್ಲದೆ ಮತ್ತೇನು? ರಕ್ತ, ಮಾಂಸ, ರಸ, ರಾಗ, ಬಣ್ಣ, ಕಾಂತಿಗಳಿಂದ ಪರಿಪುಷ್ಟರಾದ ಯುವಕ ಯುವತಿಯರು ನಗುನಗುತ್ತ ಸರಸವಾಡುತ್ತಿದ್ದ ಸುಖಭೂಮಿಯಲ್ಲಿ ಈಗ ವಿಷಧರಸರ್ಪಗಳು, ಮುಳ್ಳುಹಂದಿಗಳು, ಕಳ್ಳಕಾಕರು; ಎಲ್ಲಿ ಹೂದೋಟಗಳ ಪರಿಮಳವನ್ನು ಹೊತ್ತುಕೊಂಡು ತಣ್ಣಗೆ ತಂಗಾಳಿ ಬೀಸುತ್ತಿತ್ತೊ ಅಲ್ಲಿ ಈಗ ದಾರುಣ ಉರಿಗಾಳಿ. ಪ್ರಪಂಚದ ಚಕ್ರಾಧಿಪತಿಗಳ ಸಂದಣಿಯಲ್ಲಿ ಎಲ್ಲ ಅಂಶಗಳಲ್ಲಿಯೂ ಸಮತೂಗಲು ಅರ್ಹರಾಗಿದ್ದ ಸಾಮ್ರಾಟರು ಆಳುತ್ತಿದ್ದ ಆ ಪ್ರದೇಶದಲ್ಲಿ ಮುಳ್ಳುಪೊದೆ; ಅವರ ದರ್ಪಪೌರುಷಗಳು ಪ್ರತಿಧ್ವನಿತವಾಗುತ್ತಿದ್ದ ಅರಮನೆಗಳಲ್ಲಿ ನರಿಗೂಗೆಗಳ ಕರ್ಕಶಧ್ವನಿ; ಪಾಳುದೇವತೆಯ ಕುಹಕದ ಅಟ್ಟಹಾಸ. ಅತ್ಯುತ್ತಮ ಸೌಂದರ್ಯ ಕಾಂತಿಯಿಂದ ಬೆಳಗುತ್ತಿದ್ದ ಮಂಟಪ, ಗುಡಿ, ಪ್ರಾಸಾದ, ಅರಮನೆ ಇವುಗಳಿದ್ದ ಕಡೆ ಪದಚ್ಯುತವಾದ ದೇವತಾವಿಗ್ರಹಗಳು; ಒಡೆದುಬಿದ್ದಿರುವ, ಇನ್ನೂ ಬೀಳುತ್ತಲೇ ಇರುವ

ಕಟ್ಟಡಗಳು; ತಮಗೆ ಬಂದಿರುವ ದುರ್ಗತಿಯಾದರೂ ಎಂಥದೆಂಬುದನ್ನು ನೋಡಿ ಜನರು ನೀತಿಗೊಳ್ಳಲೆಂದು ರಾಶಿರಾಶಿಯಾಗಿ ಭೂಕ್ಷಿಪ್ತವಾದ ಬರಿಯ ಕಲ್ಲುಗುಪ್ಪೆಗಳಂತಿರುವ ಕಂಬ, ವೇದಿಕೆ, ಸೂರುಗಲ್ಲು. ವಿಜಯನಗರ ಧ್ವಂಸವಾದುದಂತೂ ಹಾಗಿರಲಿ; ಆ ರಾಜರ ಇಂದ್ರಸದೃಶವಾದ ವೈಭವಗಳೂ ಉಚ್ಛ್ರಾಯಾಭಿಲಾಷೆಗಳೂ ಮಹಾಸನ್ನಾಹಗಳೂ ಕಾರ್ಯಮುಖೇನ ಅಮರತ್ವವನ್ನು ಪಡೆಯಬೇಕೆಂದು ಅವರು ಮಾಡಿದ ಅದ್ಭುತ ಪ್ರಯತ್ನಗಳೂ ಒಟ್ಟಿಗೆ ಇಲ್ಲಿ ನಾಶಪಡೆದು, ಅವರ ವೈಭವರಂಗವನ್ನು ಈಗ ಮಹಾಶ್ಮಶಾನವನ್ನಾಗಿ ಮಾಡಿದೆ.

ಹೆಜ್ಜೆ ಬೇಗಬೇಗನೆ ಹಾಕಬೇಕೆಂದು ಅಪ್ಪಣೆಯಾಯಿತು – ಹಾಕಿದೆವು. ಸ್ವಲ್ಪ ಕಾಲದಲ್ಲೇ ಕಾಮಲಾಪುರದಿಂದ ಆನೆಗೊಂದಿಗೆ ಹೋಗುವ ರಸ್ತೆ. ಇನ್ನು ಅದನ್ನು ಹಿಡಿದು ಎಡಕ್ಕೆ ಹೋಗಬೇಕು. ಆನೆಗೊಂದಿಗೆ ನದಿಯ ಆಚೆಯ ಭಾಗದಲ್ಲಿ; ನಮ್ಮ ಕಡೆಯಿಂದ ಆಚೆಗೆ ಹರಿಗೋಲುಗಳಲ್ಲಿ ದಾಟಿಹೋಗಬೇಕು. ಹರಿಗೋಲೂ ಅಂಬಿಗರೂ ಸಿದ್ಧವಾಗಿದ್ದರು. ಅವುಗಳಲ್ಲಿ ಒಂದನ್ನು ಹತ್ತಿ ಒಳಗೆ ಸುತ್ತಲೂ ಕುಳಿತೆವು. ಅಂಬಿಗನು ಹುಟ್ಟು ಹಾಕಲು ಜಲ್ಲೆ ಹಿಡಿದುಕೊಂಡು ಮೆಲ್ಲಮೆಲ್ಲನೆ ಅದನ್ನು ನಡೆಸುತ್ತ ಬಂದನು. ನಮ್ಮಂತೆಯೇ ಬಲಗುಂದುತ್ತ ಸೂರ್ಯದೇವನೂ ಅಸ್ತಮಾನಕ್ಕೆ ಪ್ರಯಾಣ ಮಾಡುತ್ತಿದ್ದನು. ಮಧ್ಯಾಹ್ನದ ಪ್ರಕಾಶವಿಲ್ಲ; ಉರಿತೇಜವಿಲ್ಲ. ಅವನ ಬೆಳಕು ನಿಡಿದಾಗಿ ಬೀಳುತ್ತಿರುವ ಪ್ರದೇಶವನ್ನು ಬಿಟ್ಟರೆ ಉಳಿದ ಕಡೆಗಳಲ್ಲೆಲ್ಲ ಬೆಟ್ಟಗಳೂ ಬೆಟ್ಟಸಾಲುಗಳೂ ತಿಳಿನೆಳಲಿನ ಜವನಿಕೆಯೊಂದರಿಂದ ಸ್ವಲ್ಪಸ್ವಲ್ಪವಾಗಿ ಮುಚ್ಚಿಹೋಗುತ್ತಿದ್ದುವೊ ಎನ್ನುವ ಹಾಗಿತ್ತು. ಎರಡೂ ಕಡೆಯ ಬೆಟ್ಟಗಳಲ್ಲಿ ದಾರಿಮಾಡಿಕೊಂಡು ತೆಳ್ಳಗೆ ಬೆಳ್ಳಗೆ ಎಷ್ಟು ಯುಗಗಳಿಂದಲೊ ಇದೇ ರೀತಿ ಹರಿದುಬರುತ್ತ, ಎಲ್ಲಿಯೋ ಹುಟ್ಟಿ ಹೇಗೆ ಹೇಗೋ ಹರಿದು, ಎಲ್ಲಿನ ಯಾವುದನ್ನೋ ಅರಸಿಕೊಂಡು ಹೋಗುತ್ತಿರುವ ಮಂದಗಾಮಿನೀ ನದಿ; ಅದರ ಸಮಕಾಲೀನರಾಗಿ, ಇಲ್ಲವೆ ಇನ್ನೂ ಪುರಾತನರಾಗಿ ಒಂದೇ ವಿಧವಾದ ವೃತ್ತಿ ಪ್ರವೃತ್ತಿ, ಮೋಹ, ದ್ವೇಷ, ಅಸೂಯೆ ಮೊದಲಾದ ಮೂಲಸ್ವಭಾವಗಳನ್ನು ವ್ಯಕ್ತಗೊಳಿಸುತ್ತ ಜೀವನ ಪ್ರಯಾಣಮಾಡುತ್ತಿರುವ ಮನುಷ್ಯರಾದ ನಾವು; ನಮ್ಮ ಸ್ವಭಾವ ಅನುಕೂಲ ಉಪಯೋಗಗಳಿಗೆ ತೋರಿದಂತೆ ನಾವೇ ನಿರ್ಮಾಣ ಮಾಡಿಕೊಂಡು, ಹತ್ತಾರು ಶತಮಾನಗಳಿಂದ ನಡೆಸಿಕೊಂಡು ಬರುತ್ತಿರುವ, ಹರಿಗೋಲುಗಳ ಮೇಲೆ ನದಿ ದಾಟುವ ಪದ್ಧತಿ; – ಇವೆಲ್ಲವನ್ನೂ ನೋಡಿ ನದಿ ಸಂಸಾರವಾಹಿನಿಯೆಂದೂ, ನಾವೆಲ್ಲ ಸಣ್ಣ ಸಣ್ಣ ಕೆಲಸಗಳಿಗಾಗಿ ಆ ಕಡೆಯಿಂದ ಈ ಕಡೆಗೆ, ಈ ಕಡೆಯಿಂದ ಆ ಕಡೆಗೆ, ಯಾವುವೊ ದೋಣಿಗಳ ಸಹಾಯದಿಂದ ಪ್ರತಿನಿಮಿಷವೂ ಹಾಯುತ್ತಿರುವೆವೆಂದೂ, ನೇರವಾಗಿ ಸಮುದ್ರದತ್ತ ಹೋಗದೆ ಪ್ರಯಾಣ ಮುಂದೆ ಸಾಗದೆ, ಪ್ರಯಾಣದ ಚಿಂತೆ ಕೂಡ ಇಲ್ಲದೆ, ಅಲ್ಲಿ ಇಲ್ಲಿ ಕಾಲಕಳೆಯುತ್ತ, ಅನುಕೂಲವಿದ್ದ ಕಡೆ ಮಾತ್ರ ಬಾಗುತ್ತ ಸುಳಿಯುತ್ತಿರುವೆವೆಂದೂ ತೋರಿಬಂತು.

ಇದನ್ನು ಓದುವ ನೀವು ನಗಬಹುದು; ಇವನ ತಲೆಯ ಕೀಲುಗಳು ಸಡಿಲ ಬಿದ್ದಿರುವುವೆಂದೂ ಅನುಮಾನಿಸಬಹುದು; ನಿಮ್ಮನ್ನು ಆಕ್ಷೇಪಿಸುವ ಅಧಿಕಾರ ನನಗಿಲ್ಲ. ಆದರೂ ಆ ಸ್ಥಳಕ್ಕೆ ಹೋಗಿ ನಿಂತು ನೀವೂ ನನ್ನ ಹಾಗೆಯೇ ಮನಸೋತು ದಗ್ಧಚಿತ್ತರಾಗಿ ನೋಡುತ್ತಿದ್ದರೆ ನಿಮ್ಮ ಮೆದುಳ ಕೀಲುಗಳ ಬಿಗಿಗೂ ಹೀಗೆಯೇ ಊನ ಬರುತ್ತೆಂದೇ ನನ್ನ ಅಭಿಪ್ರಾಯ. ಅಲ್ಲಿ ಸುತ್ತಲೂ ಎಲ್ಲಿಯಾದರೂ ಯಾವ ವಸ್ತುವನ್ನಾದರೂ ನೋಡಿ. ಒಂದು ದೃಷ್ಟಿಯಿಂದಲ್ಲದಿದ್ದರೆ ಇನ್ನೊಂದು ವಿಧದಲ್ಲಿ ಅನನ್ಯಸಾಮಾನ್ಯವಾಗಿ ಮಹತ್ತರವಾಗಿರುವುದೇ ಹೊರತು ಸಾಧಾರಣವಾಗಿ ಕಾಣಲೇ ಕಾಣವು. ಕೋಟೆಕೊತ್ತಲ, ಶಿಥಿಲವಾದ ಅರಮನೆ ಶಿಬಿರ, ವಿಗ್ರಹ ದೇವಸ್ಥಾನ, ಲಾಯ ಉಗ್ರಾಣ, ಕಟ್ಟೆ ತೊಟ್ಟಿ, ವಿಹಾರ ಓಲಗಸ್ಥಾನ ಇವುಗಳ ದೃಶ್ಯವನ್ನು ನೋಡಿದ ಕೂಡಲೆ ಪೂರ್ವದ ಮಹತ್ವವನ್ನು ಕಳೆದುಕೊಂಡು ಈಗ ವೈಧವ್ಯವನ್ನು – ಅದೇ ಮಾತು ಪುನಃ – ಅನುಭವಿಸುತ್ತಿರುವ ಶ್ರೀಮಂತ ರಮಣಿಯೊಬ್ಬಳಂತೆ ಕಾಣುವುವೇ ಹೊರತಾಗಿ ನಾಡಾಡಿಯಾಗಿ ಕಾಣವು. ಖಿನ್ನಳಾಗಿ, ಅಧೋಮುಖಿಯಾಗಿ, ಉದಾಸೀನತೆಯಿಂದ ಮಲಿನಳಾಗಿ, ಕಾಂತಿ ಹೀನಳಾಗಿ – ಆದರೂ ದೀನತಾಲೇಶವಿಲ್ಲದೆ – ಒಬ್ಬರ ಅವಲಂಬನ ಸಹಾಯಗಳನ್ನು ಬೇಡದೆ, ಸಗರ್ವದಿಂದ ತನ್ನ ಕರ್ಮಫಲವನ್ನು ಅನುಭವಿಸುತ್ತಿರುವಂತೆ ಇರುವುದನ್ನು ಈ ದೂರದಿಂದ, ನಾನ್ನೂರು ವರ್ಷಗಳು ಕಳೆದುಹೋದ ಮೇಲೆ, ಒಂದೆರಡು ದಿನ ಮಾತ್ರ ಅಲ್ಲಿ ನೋಡುವುದಕ್ಕೆ ಹೋಗಿದ್ದ ನಮಗೇ ಕಣ್ಣೀರು ಉಕ್ಕಿ ಹರಿದುಬಂದು, ದುಃಖಾಗ್ನಿಯಿಂದ ಹೃದಯ ಸುಟ್ಟು ಹೀರಿ ಹೋಗುತ್ತಿರುವಲ್ಲಿ ಅದನ್ನು ದಿನದಿನವೂ ಸ್ವಂತದೇಹದಲ್ಲಿ ಅನುಭವಿಸುತ್ತಿರುವ ವಿಜಯನಗರಗದ ಸಾಮ್ರಾಜ್ಯಲಕ್ಷ್ಮಿಯ ಅಪಾವಸ್ಥೆಯನ್ನು ಏನೆಂದು ಹೇಳೋಣ! ಕಾಲದ ಚಕ್ರಪರಿವರ್ತನದಲ್ಲಿ ಆಕೆಯ ಅದೃಷ್ಟಪಂಕ್ತಿಯ ಅರಗಳು ಯಾವ ರೀತಿಯಲ್ಲಿ ಪರಿಭ್ರಮಿಸಿ ಕಳಚಿ ಹೊರಗೆ ಬಿದ್ದವೋ ಓದಿ ತಿಳಿದುಕೊಂಡಿರುವ ನಮಗೆ, ಈ ದೃಶ್ಯವನ್ನು ನೋಡುತ್ತಲೆ ಯಾವ ವಿಧವಾದ ಮಾನಸಿಕ ಪರಿಣಾಮಗಳು ಉಂಟಾಗುವುವೊ ಅದರ ವಾಸ್ತವತೆಯನ್ನು ಇತರರಿಗೆ ಹೇಗೆ ವ್ಯಕ್ತಪಡಿಸುವುದು? ಗತವೈಭವದ ನೆನಪು ದುಸ್ಸಹವಾದ ವಿಷದುರಿಯಂತೆ ಆಕೆಯ ದೇಹವನ್ನು ಸುತ್ತಿ, ಅದನ್ನು ಒಂದೇ ಬಾರಿಗೆ ಭಸ್ಮಮಾಡಿಬಿಡದೆ ಸಂತತವಾಗಿ ಉರಿಸುತ್ತಿದೆಯೆಂದರೆ ಅದನ್ನು ಬಾಯರಿಯದ ಸಾಮಾನ್ಯೋಕ್ತಿಯೆಂದು ಹೇಳಬಹುದು.

ನದಿಯ ಹೊರದಡವನ್ನು ಸೇರಿದುದಾಯಿತು. ಉದ್ದಕ್ಕೆ ಹೊರಟೆವು. ಆನೆಗೊಂದಿ ಸಂಸ್ಥಾನವನ್ನು ಹೊಕ್ಕು ಮುಂದೆ ನಡೆದೆವು. ನಾವು ಹಿಂದೆ ಬಿಟ್ಟು ಬಂದ ಆ ಹಾಳು ಸಾಮ್ರಾಜ್ಯಕ್ಕೂ ಈ ಜೀವಂತ ಸಂಸ್ಥಾನಕ್ಕೂ ಎಲ್ಲಿನ ಹೋಲಿಕೆ? ಇಲ್ಲಿ ಜನರು ವಾಸವಾಗಿದ್ದಾರೆ; ಮನೆ, ಬೀದಿ, ದೇವಸ್ಥಾನ, ಅಂಗಡಿ, ಹೊಲ, ಗದ್ದೆ ಎಲ್ಲ ಇವೆ. ಇದೂ ಒಂದು ರಾಜನಗರ. ರಾಜನೊಬ್ಬನು ಇಲ್ಲಿ ಅಧಿಕಾರಿ. ಆದರೆ ಆವೂರನ್ನು ದಾಟಿ ಹೋಗುತ್ತಿರುವಲ್ಲಿ ನಮಗೆ ಇವಾವುದೂ ಜೀವಂತವಾಗಿರುವಂತೆ ಕಾಣಬರಲಿಲ್ಲ.

ಸ್ವಪ್ನ ಪ್ರವಾಹದಲ್ಲಿ ಹರಿದುಹೋಗುತ್ತಿರುವ ಜಲವಾಹಿನಿಯಂತೆ ನಮ್ಮ ಅಂತರಂಗವೂ ಅದರ ಭಾವನೆಗಳೂ ಬೇರೆ ಕಡೆಗೆ ಹರಿದುಹೋಗುತ್ತಿದ್ದುವು. ಹೊರಗಣ ಜಗತ್ತಿನ ವ್ಯಾಪಾರಗಳಲ್ಲಿ ನಮ್ಮ ಮನಸ್ಸು ಆಸಕ್ತಿ ತೋರಿಸಲಿಲ್ಲ. ಒಟ್ಟಿಗೆ ನಮ್ಮ ಪಾಲಿಗೆ ಪ್ರಪಂಚವೆಲ್ಲ ಶೂನ್ಯವಾಗಿ ಭಗ್ನವಾಗಿ ವಿಜಯನಗರದಂತೆ ಆಗಿ ಮುರಿದಿತ್ತು. ಕೂಲಿಹೋದ ಆ ಸೌಂದರ್ಯ ಸಾಮ್ರಾಜ್ಯದ ಪಾಳೇ ಸತ್ಯ, ಈ ಜೀವಂತ ಸಂಸ್ಥಾನ ಮಿಥ್ಯ-ನಾವೂ ಆ ಶೂನ್ಯ ಜಗತ್ತೂ ಪರಸ್ಪರ ಪ್ರೇಮಾಭಿಲಾಷಿಗಳು; ಇತರ ವಿಶ್ವಾಸ ಬಂಧನಗಳಿಗೆ ಸಿಕ್ಕದೆ ಅನುರಕ್ತರಾಗಿ ಆ ಪ್ರೇಮಸಾಧನೆಯಲ್ಲೇ ಮಗ್ನರಾಗಿರುವವರು ಎಂಬುದು ಸ್ಥಿರಪಡುವಂತೆ ನಮ್ಮ ಮನಸ್ಸಿನಿದಿರಿಗೆ ಶಿಥಿಲ ಸೌಂದರ್ಯದ ಚಿತ್ರವೊಂದು ಮಾತ್ರ ಕಾಣುತ್ತಿತ್ತು. ಊರನ್ನು ಬಿಟ್ಟು ಮುಂದೆ ಮುಂದೆ ಜಾಗ್ರತೆಯಾಗಿ ಹೊರಟೆವು. ರಾಜಪಥ ಕೃಶವಾಯಿತು. ಎರಡು ಕಡೆಗಳಲ್ಲೂ ಎತ್ತರವಾದ ಬೆಟ್ಟಗಳು; ಒಂದು ಬೆಟ್ಟದ ಮೇಲೂ ಹೆಚ್ಚಾಗಿ ಹಸುರಿಲ್ಲ; ಕೇವಲ ಸಣ್ಣ ದೊಡ್ಡ ಕಲ್ಲುಗುಂಡುಗಳು. ಅಪರೂಪವಾಗಿ ದೂರ ದೂರದಲ್ಲಿ ಅಲ್ಲೊಂದು ಇಲ್ಲೊಂದು ಸಣ್ಣ ಮರ. ದುಂಡುಕಬ್ಬಿನ ತೋಟಗಳು. ತಪ್ಪಲುಗಳಲ್ಲಿ ಎಲ್ಲಿಂದಲೊ ಭೂಮಿಯೊಳಗಿನಿಂದಲೇ ಸದ್ದಿಲ್ಲದೆ ಹರಿದುಬಂದು ತೋಟಗಳ ಪಕ್ಕದಲ್ಲಿ ಕಾಲುವೆ ಹರಿಯುತ್ತಿರುವ ತುಂಗಭದ್ರೆಯ ನೀರು. ಅಂಗುಳು ಒಣಗಿ ಹೋಗುತ್ತಿದ್ದರೂ ಆ ನೀರನ್ನು ಕುಡಿಯಕೂಡದೆಂದು ಮನಸ್ಸು. ಪಂಪಾಸರಸ್ಸಿನ 'ಪಾವನ ಸ್ಫಟಿಕೋದಕವು' ಅನತಿದೂರದಲ್ಲಿಯೇ ಇರುತ್ತಿರುವಲ್ಲಿ ಈ ನೀರನ್ನು ಕುಡಿಯಲು ಮನಸ್ಸು ಹೇಗೆ ತಾನೆ ಬಂದೀತು ? ಉತ್ತಮ ವಸ್ತುಗಳು ದೊರಕುವುವೆಂದು ನಿರ್ಧರವಾಗಿ ಮನಸ್ಸಿಗೆ ತಿಳಿದಿದ್ದರೆ ಸಾಮಾನ್ಯ ವಸ್ತುಗಳನ್ನು ಕಂಡರೆ ನಮಗೆ ಅಲಕ್ಷ್ಯ, ತಿರಸ್ಕಾರ. ಪ್ರಪಂಚವೇ ಹೀಗೆ.

ಇಲ್ಲಿಯೇ ಎಲ್ಲಿಯೊ ರಾಮದರುಶನ ಸುಧಾರಸ ಪಾನಕ್ಕಾಗಿ ಚಕೋರಿಯಂತೆ ಕಾದಿದ್ದ ಪೂಜ್ಯಳಾದ ಶಬರಿಯ ಆಶ್ರಮ. ಆಕೆ ಗುರು ಮತಂಗರ ಆಜ್ಞೆಯಂತೆ ರಾಮನು ಬರುವವರೆಗೂ ಕಾದಿದ್ದು ಆತನ ಪರಿಚಾರಿಕೆಯಾಗಿ ಶ್ರಮಿಸಿ ಚಿರಜೀವಿಸಿದಳು. ಆತನ ಸಂದರುಶನಕ್ಕಾಗಿ ವರ್ಷಾಂತರಗಳು ಕಾದುಕೊಂಡಿದ್ದು, ಹೃದಯದಲ್ಲಿ ಆತನ ಮೂರ್ತಿಯನ್ನು ಕಲ್ಪಿಸಿ, ಕಣ್ಣಿಂದ ಸರ್ವದಾ ಅವನನ್ನೇ ನೋಡುತ್ತ, ಕೈಗೆಟುಕಿದ ಪ್ರತಿಯೊಂದು ತನಿವಣ್ಣನ್ನೂ ಕಿತ್ತು ಶೇಖರಿಸಿಟ್ಟು, ಕೈಗೆ ಸಿಕ್ಕಿದ ಪ್ರತಿಯೊಂದು ಹೂವರಳನ್ನೂ ಪೂಜೆಗೆಂದು ಅಣಿಮಾಡಿಟ್ಟು, ನಿಮಿನಿಮಿಷವೂ ಅವನು ಬರುವನೆಂದು ನಿರೀಕ್ಷಿಸಿಕೊಂಡು, ಗಾಳಿಯ ಪ್ರಭಾವದಿಂದ ತರಗೆಲೆಯೊಂದು ಮೆಲ್ಲನೆ ಮರಮರ ಶಬ್ದ ಮಾಡಿದರೆ ಅದು ತನ್ನ ಉಪಾಸದೇವನ ಕಾಲಸಪ್ಪಳವೆಂದು ಭ್ರಮಿಸಿ ಹೊರಗೆ ನೋಡುತ್ತ ಕಾದು ವೃದ್ಧೆಯಾಗಿದ್ದ ಸ್ಥಾನ. ಮುಂದೆ ವಾಲಿಸುಗ್ರೀವರು ಕಿಷ್ಕಿಂಧೆಗಾಗಿ ಹೋರಾಡಿದ ಪ್ರದೇಶಗಳು. ಈ ಗುಂಡುಗಳೇ ಅವರ ಶಿಲಾಯುಧಗಳು. ಎಡದಲ್ಲಿನ ಈ ಬೆಟ್ಟದ ಡೊಗರೇ ವಾಲಿಯ ಭಂಡಾರ. ತನ್ನ ನಾಲ್ವರು ನಚ್ಚಿನ ಗೆಳೆಯರೊಡನೆ

ಸುರಕ್ಷಿತವಾಗಿದ್ದ ಋಶ್ಯಮೂಕದ ಮರೆ; ಇವು ಅವರು ಆಗಾಗ್ಗೆ ಹೊರಕ್ಕೆ ಬಂದು ಕೂಡುತ್ತಿದ್ದ ಸ್ಥಳಗಳು. ಇಲ್ಲಿಯೇ ಎಲ್ಲಿಯೋ ಸೀತಾದೇವಿ ತನ್ನ ಒಡವೆಗಳನ್ನು ಗಂಟು ಕಟ್ಟಿ ಬೀಳುಹಾಕಿದ್ದು; – ಈ ದಾರಿಯಲ್ಲಿ ತಾನು ಹೋದೆನೆಂಬ ಗುರುತು ರಾಮನಿಗೆ ತಿಳಿದುಬರಲೆಂದು. ಆಗೋ ಅದು ಸುಗ್ರೀವನ ರಾಜಕಾರ್ಯಸ್ಥಾನ, ಮುಂದೆ ಇಲ್ಲಿಯೆ ಅಣ್ಣ ತಮ್ಮಂದಿರು ಘೋರವಾದ ಯುದ್ಧಮಾಡಿ ಕಪಿರಕ್ತದ ಕಾಲುವೆಗಳನ್ನು ಸುರಿಸಿದುದು. ಹೀಗೇ ರಾಮಲಕ್ಷ್ಮಣರು ಸೀತಾವಿಯೋಗದಿಂದ ಬಾಡಿ ಬಳಲಿ ಪಂಪಾಸರಸ್ಸಿಗೆ ನಡೆದುಹೋಗಿದ್ದುದು. ಎದುರಿಗೆ ಈಚಲ ಮರಗಳು, ತಾಳೆಯ ಮರಗಳು, ಕಬ್ಬಿನ ತೋಟಗಳು; ದಟ್ಟವಾಗಿ ಬೆಳೆದಿರುವ ಹೊಂಗೆಯ ಮರಗಳು. ಬಿಸಿಲು ಕಡಮೆಯಾದ ಹಾಗೆಲ್ಲ ಸುತ್ತಣ ಆವರಣದಲ್ಲಿನ ನಿರಾರ್ದ್ರತೆ ಹೋಗಿ ಸಣ್ಣಗೆ ಮೆಲ್ಲಗೆ ಎಳಗಾಳಿ ಮೊದಮೊದಲು ಸುಳಿದಾಡುತ್ತ ಬಂದಿತು. ಆಮೇಲೆ ಇನ್ನೂ ಸ್ವಲ್ಪ ವೇಗವಾಗಿ ಸಂಚರಿಸುತ್ತ ಹೊಂಗೆಯ ಎಲೆಗಳನ್ನು ಹೊಕ್ಕು, ಹೂಗಳ ಜೊಂಪೆಗಳನ್ನು ತೊನೆಯಿಸಿ, ಅವುಗಳ ಪರಾಗವನ್ನು ಸೂರೆಗೊಂಡು ಸುವಾಸಿತವಾಗಿ ಅಪ್ಯಾಯಕರವಾಗಿ ಬಂದಿತು. ನಾಲ್ಕಾರು ಹೆಂಡದ ಗಾಡಿಗಳು, ಕಬ್ಬಿನ ಕಂತೆಗಳು; ಅರ್ಧಮತ್ತವಾದ ಕಣ್ಗೆಂಪಿನಿಂದಲೂ ಅಸ್ತಿಮಿತ ಪದಗತಿಯಿಂದಲೂ ನಡೆದುಬರುತ್ತಿರುವ ಮನುಷ್ಯಮೂರ್ತಿಗಳು. ಕಬ್ಬಿನ ತುಂಡುಗಳನ್ನು ಹಲ್ಲಿನಿಂದ ಸೀಳಿ ಸವಿಯುವುದಕ್ಕೆ ಹೊರಟು ಆ ರಸ ನಾಲಗೆಗೆ ಇಳಿಯುವುದಕ್ಕೆ ಮುಂಚೆಯೇ ಬಾಯಿಚಪ್ಪರಿಸಿ ಹಾಡುಗಳನ್ನು ಹೇಳಿಕೊಳ್ಳುತ್ತ, ಕೇಕೆ ಹಾಕುತ್ತ, ಒಬ್ಬರ ತಲೆಯನ್ನು ಇನ್ನೊಬ್ಬರ ತಲೆಯ ಕಡೆಗೆ ತೂಗಿ ಓರೆ ನೋಡುತ್ತ ಬರುತ್ತಿರುವ ನರನಾರಿಯರು. ಅವರಂತೆಯೇ ಅರ್ಧಪ್ರಮತ್ತವಾಗಿ, ಹೃದಯದಲ್ಲಿ ಉಕ್ಕಿ ಬರುವ ಯಾವುದೊ ಒಂದು ಭಾವವನ್ನು ಇಂಚರದಿಂದ ವ್ಯಕ್ತಪಡಿಸುತ್ತ ಸಂಗಡಿಗರನ್ನು ಕೂಗುತ್ತ ಪ್ರತ್ಯುತ್ತರ ಹೇಳುತ್ತಿರುವ ಕೋಗಿಲೆಗಳು; ಸಮೀಪದ ಶೀತಲ ಜಲಾಶಯದಿಂದ ಹೊರಟು, ಬಂಧುಮಿತ್ರರೆಲ್ಲರೂ ಒಟ್ಟುಗೂಡಿ, ನಿಜನಿವಾಸವಾವುದಕ್ಕೊ ವಿಶ್ರಾಂತಿಗಾಗಿ ಹೊರಟು, ಕ್ಷಣಕ್ಷಣಕ್ಕೂ ಬೇರೆ ಬೇರೆ ಸಾಲ್ಗಟ್ಟಿಕೊಂಡು, ಮೇಲಿನ ನೀಲಾಕಾಶವನ್ನು ಚಿಮ್ಮಿಕೊಂಡು ಸಪ್ಪಳವಿಲ್ಲದೆ ನಿದ್ರಿಸುವಂತಿರುವ ರೆಕ್ಕೆಗಳನ್ನು ಹಾರಿಸುತ್ತ ಮುಗಿಲು ಯಾನಮಾಡುತ್ತಿರುವ ಕ್ರೌಂಚ, ಬಲಾಕ ಪಂಕ್ತಿಗಳು – ಇವೇ ಮೊದಲಾದುವನ್ನು ನೋಡಿ ಹೃದಯದಲ್ಲಿ ಉಕ್ತಿ ಶಕ್ತಿಗೆ ಮೀರಿದ ಸಂತೋಷ ಉದಯಿಸಿತು. ಪಕ್ಷಿಪರಮೆಗಳ ನುಣ್ಚರದಿಂದ ನಿಬಿಡವಾದ ಈ ತೆರನಾದ ಪ್ರಕೃತಿಯ ಏಕಾಂತ ನಮ್ಮನ್ನು ಜಯಿಸಿ ವಶಮಾಡಿಕೊಂಡಿತು. ಮುಂದೆ ಒಂದು ಸಣ್ಣ ಕಲ್ಲು ಸೇತುವೆ; ಎಡಕ್ಕೆ ಸ್ವಲ್ಪ ತಿರುಗಿದರೆ ಅಲ್ಲಿಯೇ ಎದುರಿಗೆ, ಅಂಜನಾಪರ್ವತದ ತಪ್ಪಲಲ್ಲಿ, ತಿಳಿ ಹಸಿರಿನ ಮೃದು ಚೌಕಟ್ಟಿನಲ್ಲಿ ನೆಲಸಿರುವ ಪ್ರಶಾಂತ ಪಂಪಾಸರಸ್ಸು!

ಆ ದಿವ್ಯ ಸರಸ್ಸನ್ನು ಕಂಡಕೂಡಲೆ ಮನಸ್ಸಿನ ಎಲ್ಲ ಅಲ್ಪ ಭಾವನೆಗಳೂ ದೇಹದ ಎಲ್ಲ ತಾಪಗಳೂ ಮಾಯವಾದುವು. ಪೂರ್ಣವಾಹಿನೀ ನದಿಯನ್ನು ನೋಡಿದರೆ

ಒಂದು ವಿಧವಾದ ಗಾಂಭೀರ್ಯ ತೋರುವುದು. ಪ್ರಕಾಂಡ ಸಮುದ್ರವನ್ನು ನೋಡಿದರೆ ಅನಂತ ವಿಸ್ತಾರವಾಗಿ, ವೈಭವದಿಂದ ಮೆರೆಯುವ ಸ್ವಾತಂತ್ರ್ಯ ಮಹಾಮೂರ್ತಿಯೊಂದನ್ನು ಕಂಡಂತಾಗುವುದು. ಅಗಾಧವಾಗಿ, ಆನೆಗಳಂತೆ ಮೇಲೆದ್ದು ಬರುವ ಅದರ ಮಾಲೆಯಲೆಗಳನ್ನೂ ಕಬಂಧನು ವರ್ಣಿಸಿದ್ದುದು ಏನೂ ಅತಿಶಯವಲ್ಲ; ಅವು ಉರುಳಿ ಹೊರಳಿ ಒಂದರೊಡನೊಂದು ಹೋರಾಡುತ್ತ ನೊರೆಯ ಸೀರೆಗಳನ್ನೆತ್ತಿ ಎಸೆಯುತ್ತ ಬರುವುದನ್ನು ನೋಡಿದರೆ ಉನ್ಮಾದ ಕೋಲಾಹಲವೊಂದರ ಅನುಭವವಾಗುವುದು. ನೂರಾರು ಅಡಿಗಳ ಮೇಲಿನಿಂದ ಕೆಳಕ್ಕೆ ದುಮ್ಮಿಕ್ಕುತ್ತಿರುವ ಜಲಪಾತಗಳನ್ನು ನೋಡಿದರೆ, ಪ್ರಕೃತಿಯ ರೌದ್ರದ ಒಂದು ಮುಖ ಕಣ್ಣಾಗುವುದು. ಇಲ್ಲಿ ಈ ಸರಸ್ಸನ್ನು ನೋಡಿದರೆ ಆ ವಿಧವಾದ ಭಾವಗಳಾವುವೂ ಬಾರವು. ಇಲ್ಲಿ ವಿಶೇಷ ವೈಶಾಲ್ಯವಿಲ್ಲ. ಯಾವೊಂದು ವಿಧವಾದ ತಳಮಳವೂ ಇಲ್ಲ.

ಪದ್ಮಗಂಧಿ ಶಿವಂ ವಾರಿ ಸ್ವಾದು ಶೀತಂ ಅನಾಮಯಂ।
ಉದ್ಧೃತ್ಯ ಸತತಾಕ್ಲಿಷ್ಟಂ ರೌಪ್ಯಸ್ಫಾಟಿಕ ಸನ್ನಭಂ॥

ನೀರು ತುಂಬಿದಾಗ ಇದರ ಸುತ್ತಳತೆ ಒಂದೆರಡು ಮೈಲಿಗೆ ಮೇಲಿರದು. ಮೂರು ಕಡೆ ಯಾರೊ ಪುಣ್ಯಾತ್ಮರು ಸೋಪಾನ ಕಟ್ಟಿದ್ದಾರೆ. ದಂಡೆಯ ಮೇಲೆ ಸಾಲಿಗೆ ಹೂ ಗಿಡಗಳು : ಗೋರಂಟಿ, ಮಲ್ಲಿಗೆ, ಪಾರಿಜಾತ ಮುಂತಾದುವು. ಪಕ್ಕದಲ್ಲಿ ಸೀತಾದೇವಿಯ ದೇವಾಲಯವೊಂದು. ಉತ್ತರಪ್ರದೇಶದಿಂದ ಯಾತ್ರೆ ಬಂದು ಈ ದೇವಾಲಯದಲ್ಲಿ ವಾಸಮಾಡಿಕೊಂಡು ಇಲ್ಲಿಯ ರಾಜನ ಆಶ್ರಯದಲ್ಲಿ, ದೇವಿಯ ಸನ್ನಿಧಿಯಲ್ಲಿ ನೆಲಸಿರುವ ನಾಲ್ಕು ಐದು ಜನ ಬೈರಾಗಿಗಳು. ಅವರೇ ಸರಸ್ಸಿನ ರಕ್ಷಸುಗಳು – ಅದಕ್ಕೆ ಕಾವಲಾಗಿ ಅಲ್ಲಿ ಕೊಳೆಯಾಗದಿರುವಂತೆ ಅದನ್ನು ನೋಡಿಕೊಂಡಿರುವವರು. ಸರೋವರದ ಸುತ್ತಲೂ ಹೊರಗೆ ಬೆಟ್ಟಗಳು. ಉತ್ತರಕ್ಕೆ ಅಂಜನಾಪರ್ವತ. ಇನ್ನು ಮೂರು ಕಡೆಯೂ ಬೇರೆ ಪರ್ವತಗಳ ಸಾನು ಪ್ರದೇಶ ಈ ಸರಸ್ಸಿನವರೆಗೂ ಇಳಿದುಬಂದಿದೆ. ಕಾಲದ ಆದಿಯಿಂದಲೂ ಇಲ್ಲೇ ಹೀಗೇ ಒಂದರ ಸಖ್ಯದಲ್ಲೊಂದು ಬೆಳೆದು ಏಕಾಂತರಂಗದಿಂದ ಕಾಲಕಳೆಯುತ್ತಿರುವ ಚಿರಂಜೀವಿಗಳು ಇವು. ಯುಗಗಳೂ ಮನ್ವಂತರಗಳೂ ಕಳೆದುಹೋದಾಗ್ಗೂ ತಮ್ಮ ಸ್ಥಿತಿಯನ್ನು ಸ್ವಲ್ಪವೂ ಬದಲಾಯಿಸದೆ, ಚಪಲರಾಗಿ, ಚಂಚಲರಾಗಿ ಇಲ್ಲದುದಕ್ಕೂ ಆಗದುದಕ್ಕೂ ಕೊರಗಿ ಕ್ಲೇಶಪಡುತ್ತಿರುವ ಅಲ್ಪಾಯು ಮನುಷ್ಯರನ್ನು ಗಣನೆಗೆ ತಾರದೆ, ಸರ್ವಥಾ ಅವರಿಗೆ ಅಸದೃಶವಾಗಿವೆ.

ಎಲ್ಲೆಲ್ಲಿಯೂ ನಿಶ್ಶಬ್ದ. ಆದರೆ ಆ ನಿಶ್ಶಬ್ದತೆಯು ಯಾವ ನಿರ್ಜೀವ ವಸ್ತುವಿನ ನಿಶ್ಶಬ್ದತೆಯಂತೆ ಇಲ್ಲ ; ಮೂಢನ ಅಥವಾ ಗರ್ವಿಯ ಮೌನದಂತೆಯೂ ಇಲ್ಲ. ಶಬ್ದಕ್ಕೆ ಇಲ್ಲಿ ಸ್ಥಳವಿಲ್ಲ, ಅವಕಾಶವಿಲ್ಲ ಅಷ್ಟೇ. ವ್ಯವಹಾರ ಪ್ರಪಂಚ ಈ ಭೂಭಾಗದ ಹೊರ ಎಲ್ಲಿಗೆ ಬಹುದೂರದಲ್ಲಿ ಎಲ್ಲಿಯೊ ಕೊನೆಗೊಂಡಂತಿದೆ. ಅದಕ್ಕೂ ಇದಕ್ಕೂ ಯಾವ ವಿಧವಾದ ಸಂಪರ್ಕವೂ ಇಲ್ಲ. ಬೆಟ್ಟಗಳು ಕೂಡ ಇಲ್ಲಿ ನಮ್ರತೆಯಿಂದ ಉಚ್ಚ

ಮನೋಭಾವದಿಂದ ನಿರ್ಮಲಚಿತ್ತದಿಂದ ಸರಸ್ಸಿಗೆ ಮರ್ಯಾದೆಯಿತ್ತು ಅದರ ಶಾಂತಿಯನ್ನು ಕಾಪಾಡಿಕೊಂಡು ಬಂದಿವೆ. ಸರಸ್ಸಿನ ಅಧಿದೇವತೆಗೆ ಎಲ್ಲ ಪ್ರಕಾರದಿಂದಲೂ ನೆರವು ಕಾಣಿಕೆಗಳನ್ನರ್ಪಿಸಿವೆ. ಆ ದೇವತೆಯ ಪ್ರತಿನಿಧಿಯಾಗಿ ತಡಿಯ ದೇವಾಲಯದ ಗಹ್ವರ ಪ್ರದೇಶದಿಂದ ಸೀತಾದೇವಿ ತನ್ನ ಪ್ರೇಮಾಧಿಕಾರವನ್ನು ಹೂಡಿ, ಬಾಹ್ಯಾಚರಣೆಗಳೆಲ್ಲವನ್ನೂ ವ್ಯವಸ್ಥೆ ಮಾಡಿ, ತನ್ನ ಸೇವಕರ ಮೂಲಕ, ಕಾರ್ಯಭಾರ ನಡಸುತ್ತಿದ್ದಾಳೆ. ಅವರೂ ಅಮಾನುಷವಾದ, ಸಾಮಾನ್ಯ ಲಭ್ಯವಲ್ಲದ ಆ ಆವರಣದಲ್ಲಿ ಕಲೆತು ಒಂದಾಗಿ ಹೋಗಿದ್ದಾರೆ. ಆ ಗೋಸಾಯಿಗಳು ಸಾಕಿಕೊಂಡಿರುವ ಬೊಗಸೆಗಣ್ಣಿನ ಹರಿಣಿಯೊಂದು ಅಲ್ಲಿನ ಸಾತ್ವಿಕ ಸೌಂದರ್ಯಕ್ಕೆ ಅನುರೂಪವಾಗಿ ರಾರಾಜಿಸುತ್ತಿದೆ. ಅನೇಕ ಶತಮಾನಗಳ ಪರ್ಯಂತ ಯೋಗನಿರತನಾಗಿ ತಪಶ್ಚರ್ಯೆಯಿಂದ ಶಾಂತಾತ್ಮವನ್ನೂ ಸಿದ್ಧಿಯನ್ನೂ ಪಡೆದು, ಎಲ್ಲ ವ್ಯಾಮೋಹ ಮಮತೆಗಳನ್ನೂ ತೊರೆದು ಮಲಿನವಾಗದ ತೇಜಸ್ಸಿನಿಂದ ಪ್ರಪಂಚವನ್ನು ಬೆಳಗಿ, ಏಕಾಗ್ರತೆಯಿಂದ ಸದಾನಂದವನ್ನು ಅನುಭವಿಸುತ್ತಿರುವ ಯೋಗಿವರ್ಯನಂತೆ ಸರಸ್ಸು ಕಾಣುತ್ತದೆ.

ಇಲ್ಲಿನದು ತಿಳಿಯಾಗಿ ಹೊಳೆವ ಪುಣ್ಯೋದಕ. ಶ್ರೀರಾಮಪಾನದಿಂದ ಪವಿತ್ರವಾದದ್ದು. ಕನ್ನಡಿಯಂತೆ ಶುಭ್ರತೇಜಸ್ಸಿನಿಂದ ಹೊಳೆವ ಅದರ ವಕ್ಷದಲ್ಲಿ ಅಲ್ಲಲ್ಲಿ ತಾವರೆ ನೈದಿಲೆ ಹೂಗಳು ಹಗಲೆಲ್ಲ ಅರಳಿದ್ದು ಈಗ ಅರ್ಧಅರ್ಧವಾಗಿ ಅವಗುಂಠಿತವಾಗುತ್ತಿರುವಂತಿವೆ. ಸುತ್ತಣ ಹೂಗಿಡಗಳೂ ಪರ್ವತಪಂಕ್ತಿಗಳೂ ತಮ್ಮ ಪ್ರತಿಬಿಂಬಗಳನ್ನು ಅದರೊಳಗೆ ಕಾಣುತ್ತ ಕೃತಕೃತ್ಯತೆಯನ್ನು ಪಡೆವಂತಿವೆ. ಉಗ್ರವಾಗಿ ಬೀಸುವ ಮಾರುತ ಕೂಡ, ಭಕ್ತಿಯಿಂದ ಮೃದುವಾಗಿ ಚಲಿಸಿ, ಸರಸ್ಸಿನ ಗೋಜಿಗೆ ಹೋಗದೆ ತನ್ನ ಸ್ವಾಚ್ಛಂದ್ಯವನ್ನು ಮರೆತು, ಮೆಲ್ಲನೆ ಸುಳಿದುಹೋಗುತ್ತಿದೆ. ಪಕ್ಕದ ಪರ್ವತ ಶಿಖರಗಳೊಂದಿಗೆ ಎಷ್ಟೋ ಬಾರಿ ಸರಸದಿಂದ ಕ್ರೀಡಿಸಿದ್ದ ಸಿಡಿಲುಗಳೂ ದರ್ಪಾಹತವಾಗಿ ಈ ಶಾಂತಿಯಲ್ಲಿ ಲಯವಾಗಿ ಹೋಗಿರಬೇಕು. ದಿಕ್ಕುಗಳನ್ನು ತಿವಿದಳಿಸಿ ಉರಿಸಿಕೊಂಡು ಕ್ಷಣಮಾತ್ರದಲ್ಲಿ ಭೂವಲಯವನ್ನೇಳು ಸುತ್ತು ಸುತ್ತಿ ಭೂಮ್ಯಾಕಾಶಗಳನ್ನು ಒಂದು ಮಾಡಿ ಹೊಳೆದು ಹೋಗುವ ಮಿಂಚೂ ಈ ಸರಸ್ಸಿಗೆ ತನ್ನ ಕಾಂತಿಯನ್ನು ಕಾಣಿಕೆ ಕೊಟ್ಟು ಪರಾಜಯವನ್ನು ಒಪ್ಪಿಕೊಂಡು ಶಿಷ್ಯವೃತ್ತಿ ಯಾಚರಿಸಿರಬೇಕು. ಡೊಳ್ಳು ಡೋಳಿನ ಆಡಂಬರವನ್ನು ನೂರ್ಮಡಿ ಮಾಡಿ ಅಬ್ಬರಿಸುವ ಗುಡುಗುಗಳಂತೂ ಇಲ್ಲಿನವರೆಗೂ ಬರಲು ಕೂಡ ಧೈರ್ಯವಿಲ್ಲದೆ ಸದ್ದಿಲ್ಲದೆ ಕಣ್ಣಿಗೆ ಕಾಣದೆ, ಹೇಗೋ ಎತ್ತಲೋ ಅಡಗಿಹೋಗಿರಬೇಕು. ಇತ್ತಲಾಗಿ ಇವೆಲ್ಲವನ್ನೂ ನೋಡುತ್ತ, ಪುರಾತನದಿಂದ ಈವರೆಗಿನ ಎಲ್ಲ ವಿಧವಾದ ಕಾರ್ಯಕ್ರಮಗಳನ್ನೂ ಕಣ್ಣಾರ ಕಂಡು ಎಲ್ಲವನ್ನೂ ತಿಳಿದುಕೊಂಡಿದ್ದರೂ ಏನೂ ತಿಳಿಯದೆ ತನ್ನ ಒಳ ಆನಂದದಲ್ಲಿ ತಾನು ಮಗ್ನನಾಗಿರುವ ಸಿದ್ಧನಂತೆ ಈ ಸರಸ್ಸು ಕಾಣುತ್ತದೆ.

ದಾರಿಯಲ್ಲಿ ಆನೆಗೊಂದಿಯಲ್ಲಿ ಕಬ್ಬುಗಳನ್ನೂ ಬಾಳೆಹಣ್ಣುಗಳನ್ನೂ ಕೊಂಡು ಹೋಗಿದ್ದೆವು. ಸರಸ್ಸಿನಲ್ಲಿ ಮುಖವನ್ನು ತೊಳೆದು ಅವನ್ನು ತಿಂದು ಮನಸ್ಸಿನ ದಾಹವಡಗುವಂತೆ ನೀರು ಕುಡಿದು ಆಯಾಸವನ್ನು ಪರಿಹರಿಸಿಕೊಂಡೆವು. ಆಗಲೇ ಸಂಜೆಯಾಗಿತ್ತು. ದೂರದ ಪಶ್ಚಿಮಾಂತದಲ್ಲಿ ಕಿತ್ತಿಳೆ ಬಣ್ಣದ ಸೂರ್ಯನು ಮುಳುಗುವುದರಲ್ಲಿದ್ದನು. ಅವನ ಕೆಂಪುಮಿಶ್ರವಾದ ಹೊಂಬಣ್ಣದ ಕಾಂತಿ ಬೆಟ್ಟದ ಸಾನುಗಳನ್ನು ದಾಟಿಕೊಂಡು ಗಿಡದೆಲೆಪ್ರಾಗಳನ್ನು ದೂರಿಕೊಂಡು ಸುತ್ತಣ ಪ್ರದೇಶವನ್ನು ಬೆಳಗುತ್ತಿತ್ತು. ಮೇಲಿನ ಮೋಡಗಳನ್ನು ಹೊಕ್ಕು ಅವನ್ನು ವಿಧವಿಧ ವರ್ಣಗಳಿಂದ ಸಿಂಗರಿಸಿತ್ತು. ಮೇಲೆ ಆಕಾಶ; ಸಂಧ್ಯಾರಾಗರಂಜಿತವಾದ ಮೋಡಗಳು ; ಕೆಳಗೆ ಸರಸ್ಸು. ದೂರದ ಆಳದಲ್ಲಿ, ಅದರ ಹೃದಯದಂತರಾಂತರದಲ್ಲಿ ಆಕಾಶದ ಪೇಲವವಾದ ಆದರೂ ಸುಸ್ಪಷ್ಟ ಪ್ರತಿಬಿಂಬ; ಸುತ್ತಣ ಪ್ರಶಾಂತ ನೀರವತೆ; ಅಮಾನುಷವಾದ ಲೋಕಾತೀತವಾದ ಶಾಂತಮೂರ್ತಿ ಸರಸ್ಸು; ಇವುಗಳಲ್ಲಿ ನಟ್ಟ ಮನಸ್ಸು ಪ್ರಪಂಚವನ್ನು ಮರೆತುದೇನಾಶ್ಚರ್ಯ? ಎಷ್ಟು ಹೊತ್ತು ಅಲ್ಲಿ ಕುಳಿತಿದ್ದರೂ ಅದನ್ನು ಬಿಟ್ಟು ಏಳಲು ಮನಸ್ಸೇ ಬಾರದು. ಏಳದಿದ್ದರೆ? ಮಳೆ ಬರುವುದರೊಳಗಾಗಿ ಗೂಡು ಸೇರಿಕೊಳ್ಳಬೇಕು. ಏನು ಗೂಡೋ – ಏನು ಬಾಳೋ! ಗೋಸಾಯಿಗಳು ದೇವಸ್ಥಾನದೊಳಕ್ಕೆ ನಮ್ಮನ್ನು ಬರಹೇಳಿದರು. ಒಳಗೆ ಹೋಗಲು ವ್ಯವಧಾನವಿಲ್ಲ; ಅಲ್ಲದೆ ಅಲ್ಲಿ ಸೀತಾದೇವಿಯ ದರ್ಶನಮಾಡಲು ನನಗೇನೊ ಮನಸ್ಸು ಬರಲಿಲ್ಲ; ರಾವಣನು ಮೋಸದಿಂದ ಕೊಂಡೊಯ್ಯುತ್ತಿರುವಾಗ ಭೀತಿಗೊಂಡು, ನಿಡುಸುಯ್ಯುತ್ತ ಆಕೆ ಕಣ್ಣೀರ ಮಳೆಯನ್ನು ಸುರಿಸಿಕೊಂಡು ಹೋಗಿದ್ದ ಪ್ರದೇಶವಿದು! ದೇವಿಯ ವಿರಹದಿಂದ ಶ್ರೀರಾಮನು ಬಾಡಿ ಉನ್ಮತ್ತನಂತಾಗಿ ದುಃಖಪಟ್ಟ ಸ್ಥಳವಿದು! ಚಿರದುಃಖಿನಿಯಾದ ದೇವಿ ಪುನಃ ಈ ಜಾಗಕ್ಕೇ ಬಂದು ಪತಿಯಿಂದ ದೂರಳಾಗಿ ನೆಲಸಿ ಕಾಲಕಳೆಯುತ್ತಿದ್ದರೆ ಅದು ಆಕೆಗೆ ಹರುಷವನ್ನೆತು ತಂದೀತು? ಫುಲ್ಲಹಾಸ ಹೋಗಿ ಆಕೆಯ ಮೊಗದ ಮೇಲೆ ಕತ್ತಲೆ ಕವಿದಂತಿರುವ ಈ ಪ್ರದೇಶದಲ್ಲಿ ಆಕೆಯನ್ನು ಕಂಡು ಆನಂದಿಸುವುದು ಹೇಗೆ? ದರ್ಶನದ ಯಾತನೆಯನ್ನು ಸಹಿಸುವುದು ಹೇಗೆ? ನಾವು ಒಳಗೆ ಹೋಗಲಿಲ್ಲ. ಅವರ ಕೈಯಲ್ಲಿ ನಾಲ್ಕಾಣೆ ನಾಣ್ಯ ಹಾಕಿ ಹೊರಗಿಂದಲೇ ನಮಸ್ಕಾರ ಮಾಡಿ ಹೊರಟು ಹೋದೆವು. ಗೋಸಾಯಿಗಳು ನಮ್ಮನ್ನು ಬೈದುಕೊಂಡಿರಬೇಕು. ಬೈದುಕೊಳ್ಳಲೇಳಿ. ನಮ್ಮ ಮನಸ್ಸನ್ನು ಅವರು ಹೇಗೆ ಅರಿಯಬಲ್ಲರು?

ಬಂದ ದಾರಿ ಹಿಡಿದು ಹಿಂತಿರುಗಿದೆವು. ಆರು ಗಂಟೆಗೆ ಮೀರಿಹೋಗಿತ್ತು. ಮೇಲೆ ಆಕಾಶದಲ್ಲಿ ಕಾರ್ಮೋಡಗಳು ಹಾಕಿ ಸುತ್ತಲೂ ಕತ್ತಲು ಕವಿದಿತ್ತು. ಮರಗಿಡಗಳು ಅಲ್ಲಾಡಲು ಆರಂಭಿಸಿದವು. ನಮಗೆ ಜಾಗ್ರತೆ 'ಮನೆ'ಗೆ ಹೋಗಿ ಸೇರಿಕೊಳ್ಳಬೇಕೆಂಬ ಆತುರ. ಅಂಬಿನ ವೇಗದಲ್ಲಿ ಹೊರಟಿದ್ದೆವು. ಚಳಿಗಾಳಿಯೊಂದಿಗೆ ಮಳೆಯ ವಾಸನೆ ಬಂದಿತು. ಸೂಚನೆಗಳು ಭಯವನ್ನುಂಟುಮಾಡತೊಡಗಿದವು. ರಾತ್ರಿಯೆಲ್ಲ ಮಳೆ ನಿಲ್ಲದೆಯೆ ಇದ್ದರೆ ಎಲ್ಲಿ ತಂಗುವುದು? ಏನು ಮಾಡುವುದು? ಊಟ ನಿದ್ರೆಗಳಿಗೆ

ಹೇಗೆ? ಹಸಿವಾದಾಗ ಮಾತ್ರವೇ ಊಟ ಮಾಡಬೇಕೆಂಬ ನಿಯಮವಿಲ್ಲದೆ ಹಸಿವೆಂಬುದನ್ನೇ ಅರಿಯದೆ ಇದ್ದ ನನ್ನಲ್ಲಿ ಕೂಡ ಕ್ಷುಧಾಗ್ನಿ ಪ್ರಜ್ವಲಿಸುತ್ತಿತ್ತು. ಭಯವನ್ನು ಮತ್ತಷ್ಟು ಹೆಚ್ಚಿಸಿ ಮಿಂಚು ಮಿಂಚಿತು; ಗುಡುಗು ಗುಡುಗಿತು. ಅವುಗಳ ಹಾವಳಿ ಅಷ್ಟಿಷ್ಟೆಂದು ಹೇಳಲು ಸಾಧ್ಯವಿಲ್ಲ. ಇನ್ನೆರಡು ಹೆಜ್ಜೆ ಮುಂದಿಡುವುದರೊಳಗಾಗಿ ಮಳೆ ಬಂದೇ ಬಿಟ್ಟಿತು. ಒಂದೊಂದು ಹನಿ ಒಂದೊಂದು ನೆಲ್ಲಿಯಕಾಯಿನಷ್ಟು ಗಾತ್ರ; ತಡೆಯಲಾರದಷ್ಟು ರಭಸದಲ್ಲಿ, ತೀವ್ರಧಾರೆಯಲ್ಲಿ ಬಂದಿತು. ಮಳೆಯ ಜೊತೆಗೆ ಗಾಳಿ; ಗಾಳಿಯ ಜೊತೆಗೆ ಮಳೆ. ಈ ಕೋಲಾಹಲದ ಜೊತೆಗೆ ನಮ್ಮ ಛತ್ರಿಗಳು ದುರ್ದಮನೀಯವಾಗಿ ಸ್ವತಂತ್ರ ವೃತ್ತಿಯನ್ನವಲಂಬಿಸಿದುವು. ಅವುಗಳ ಮೇಲೆ ನಮಗಿದ್ದ ಇಷ್ಟು ದಿನದ ಅಧಿಕಾರವೂ ಈಗೊಂದು ನಿಮಿಷದಲ್ಲಿ ಹಾರಿಹೋಯಿತು. ಬಹುದಿನ ಪರತಂತ್ರದಲ್ಲಿದ್ದ ಜನರು ಹೊರಗಣ ಬಲವತ್ಸಹಾಯದಿಂದ ದಂಗೆಯೆದ್ದು ಸ್ವತಂತ್ರ ಸಂಪಾದನೆಗೆ ಹೊರಟರೆ ಯಾವ ಯಾವ ವಕ್ರವೃತ್ತಿ ಚೇಷ್ಟೆಗಳನ್ನು ಮಾಡುವರೊ ಅದಕ್ಕಿಂತಲೂ ಹೆಚ್ಚಿನ ಚೇಷ್ಟೆ ಮಾಡಲಾರಂಭಿಸಿದವು. ನನ್ನ ಛತ್ರಿಯಂತೂ ಕೀಲುಗಳನ್ನು ಮೇಲಕ್ಕೆತ್ತಿ ತಲೆಕೆಳಕಾಗಿ ನಿಂತಿತು. ಸುರಿಯುವ ಮಳೆಯಲ್ಲಿ ಈ ಉತ್ಸವ ಬೇರೆ. ಸ್ನೇಹಿತರ ಲೇವಡಿ. ನಗಿ; ಬೇಕಾದಷ್ಟು ನಗಿ! – ಎಂದುಕೊಂಡೆ. ಆದರೂ ಸನ್ನಿವೇಶವನ್ನು ನೋಡಿದರೆ ಯಾರು ತಾನೆ ಬೇರೆ ರೀತಿ ಆಚರಿಸಿಯಾರು? ನಾನು ನನ್ನ ಆಗಿನ ಸ್ಥಿತಿಯನ್ನೂ ಅವರನ್ನೂ ಛತ್ರಿಯನ್ನೂ ನೋಡಿ ಸೂಕ್ಷ್ಮ ತಿಳಿದುಕೊಂಡೆ. ಅವರಿಗಿಂತಲೂ ಹೆಚ್ಚಾಗಿ ನಕ್ಕೆ. ಅಂಥ ಸಮಯದಲ್ಲಿ ಇತರರ ನಗು ಅಪಹಾಸ್ಯಗಳನ್ನು ಅಡಗಿಸುವುದಕ್ಕೆ ಅದೇ ಉತ್ತಮೋತ್ತಮ ಉಪಾಯ. ಚೆನ್ನಯ್ಯನೂ ಅವರೊಡನೆ ಸೇರಿಕೊಂಡು 'ಹ್ಯೋ' ಎಂದು ಷುರು ಮಾಡಿದನು. ಅದನ್ನು ನೋಡಿ ಮಾತ್ರ ನನಗೆ ರೇಗಿತು.

'ಏಕೋ, ನೀನೇಕೊ ನಗೋದು?' ಎಂದು ಸ್ವಲ್ಪ ಗದರಿಸಿಕೊಂಡೇ ಕೇಳಿದೆ. ನನ್ನ ಆ ಗಂಭೀರ ಭೀಷಣಧ್ವನಿ ಅವನನ್ನು ಅಡಗಿಸಲಿಲ್ಲ. ಅವನಂಥವರ ಸಹವಾಸ ಬಲುಕಷ್ಟ. 'ನಗು ಬಂದಿತು ಸ್ವಾಮಿ, ಏನು ಮಾಡೋದು?' ಎಂದ. ಅವನಿಗೆ ಯಾರ ಯಾವ ಆತಂಕವೂ ಇಲ್ಲ. ಆಮೇಲೆ? ಆಮೇಲೆ ಮಾಡುವುದೇನು? 'ಅಯ್ಯೊ ರ್‍ಯಾಸ್ಕಲ್' ಎಂದು ಮನಸ್ಸಿನಲ್ಲಿ ಅಂದುಕೊಂಡು ಸುಮ್ಮನಾದೆ.

ಹತ್ತಿರದಲ್ಲಿಯೇ ಒಂದು ಹಳೆಯ ಆಲೆಯಮನೆ. ಅಲ್ಲಿ ನಮ್ಮಂಥವರು ಇನ್ನೂ ಅನೇಕರು ಸೇರಿದ್ದರು. ಎಲ್ಲರ ಮೈಮೇಲಿನ ಬಟ್ಟೆಗಳಿಂದಲೂ ನೀರು ಕೋಡಿ ಹರಿಯುತ್ತಿತ್ತು. ತೆಳುವಾದ ಬಟ್ಟೆಗಳನ್ನು ಹಾಕಿಕೊಂಡಿದ್ದ ನಮ್ಮವರ ಬಟ್ಟೆಗಳು ಮೈಗಳಿಗಂಟಿಕೊಂಡಿದ್ದುವು. ರೈತರ ದುಪ್ಪಟಿಗಳೂ ಯಥಾಶಕ್ತಿ ಗಂಭೀರವಾಗಿ ಶ್ರೀಮಂತ ವೃತ್ತಿಯನ್ನೇ ಅವಲಂಬಿಸಿದ್ದವು. ಕರಿಯ ಬಟ್ಟೆಗಳನ್ನು ಉಟ್ಟಿದ್ದವರ ಬಟ್ಟೆಗಳು ಮೈಗೆ ಅಂಟಿಕೊಂಡು ಮಿಂಚಿನಲ್ಲಿ ಮಿನುಗತೊಡಗಿದವು. ಅಲ್ಲಲ್ಲೆ ಮೂಲೆಗಳನ್ನು

ಸೇರಿಕೊಂಡಿದ್ದ ಮುದುಕರು ಮೊಳಕಾಲುಗಳ ಮೇಲೆ ತಲೆಯಿಟ್ಟು ಗಡಗಡ ನಡುಗುತ್ತಿದ್ದರು. ಕುದಿಪ್ರಾಯದವರಾದ ನಮ್ಮ ಹಲ್ಲುಗಳೂ ಚಳಿಯಿಂದ ಒಂದೊಂದು ಸಲ ಎಷ್ಟು ಹೇಳಿದರೂ ಕೇಳದೆ ಬಡಿದುಕೊಂಡು ಶಬ್ದ ಮಾಡುತ್ತಿದ್ದವು. ಎರಡು ಕೋಳಿ, ನಾಲ್ಕು ಕುರಿ, ಹತ್ತು ಕಬ್ಬಿನ ಜಲ್ಲೆಗಳು, ನಮ್ಮಂಥ ಜನರು – ಅಲ್ಲಿ ಸೇರಿದ್ದವರು; ಒಟ್ಟು ದೊಡ್ಡವರು ಚಿಕ್ಕವರು, ಹೆಂಗಸರು ಗಂಡಸರು, ಹಿಂದೂ ಮುಸಲ್ಮಾನರು ಎಲ್ಲರೂ ಸೇರಿ ಹದಿನಾರು ಜನ; ಎಲ್ಲ ಕೋಮಿನವರೂ ಎಲ್ಲರ ಪ್ರತಿನಿಧಿಗಳೂ ಸೇರಿದ್ದಂತೆಯೇ ಆಯಿತು. ಒಟ್ಟು ಹದಿನಾರು ಜನರಿಗೆ ಅಲ್ಲಿನವರಲ್ಲದ ಏತಕ್ಕೂ ಸ್ಪರ್ಧಿಸದ ಬ್ರಾಹ್ಮಣರು ಐವರೇ ಇದ್ದುದರಿಂದ ನಮ್ಮ ಸಂಖ್ಯೆ ಹೆಚ್ಚೆಂದು ಮೂದಲಿಸುವವರು ಯಾರೂ ಇರಲಿಲ್ಲ. ಭಗವದನುಗ್ರಹ.

ಒಂದು ಮಣ್ಣು ಗದ್ದಿಗೆಯ ಮೇಲೆ ಇಬ್ಬರು ಮೂವರು ಕಂಬಳಿ ದುಪ್ಪಟಿಗಳನ್ನು ಹತ್ತಿರವಿಟ್ಟುಕೊಂಡು ಕುಳಿತಿದ್ದರು. ಅವರಲ್ಲಿ ಇಬ್ಬರು ರೆಡ್ಡಿಗಳು. ಹೊಗೆ ಕಡ್ಡಿಯನ್ನು ತೀಡುತ್ತ ಒಬ್ಬನು, ಹೊಗೆಸೊಪ್ಪನ್ನು ಅಗಿಯುತ್ತ ಇನ್ನೊಬ್ಬನು, ಜಡಭರತರಂತೆ ಕುಳಿತಿದ್ದರು. ಇನ್ನೊಬ್ಬನು ಸಾಬಿ. ಅವನೇ ಆ ಸಭೆಗೆ ನಾಯಕ. ಬಾಯಿತುಂಬ ಅಡಿಕೆ ಎಲೆಗಳನ್ನು ಹಾಕಿಕೊಂಡು ಅಗಿಯುತ್ತ ಆಗಾಗ್ಗೆ ಕಡ್ಡಿಪುಡಿಯನ್ನೂ, ಸುಣ್ಣಕಾಯಿಂದ ಸುಣ್ಣವನ್ನೂ ತೆಗೆದು ಸೇವಿಸುತ್ತ, ತನುಗಾಂತಿಗಿಂತಲೂ ಹೆಚ್ಚು ಕರಾಳವಾದ ದೀರ್ಘವಾದ ದಾಡಿಯನ್ನು ನೀವಿಕೊಳ್ಳುತ್ತ, ಒಂದೊಂದು ಸಲ ಅದನ್ನು ಮೇಲೆತ್ತಿ ಚಪ್ಪರಿಸುತ್ತ, ಹಲ್ಲಿಗೆ ಕೈಯಿಟ್ಟು ಕಸ ತೆಗೆಯುತ್ತ, ಆಗಾಗ ಅಲ್ಲೇ ಉಗುಳುತ್ತ, ವಿಚಿತ್ರ ವಿಚಿತ್ರ ತಮಾಷೆಗಳನ್ನು ಮಾಡಿಕೊಂಡು ಕುಳಿತಿದ್ದನು. ಅವನು ಬುದ್ಧಿವಂತ; ಮಳೆಗೆ ಸಿಕ್ಕಿರಲಿಲ್ಲ. ಆ ಮಾತು ಈ ಮಾತುಗಳನ್ನು ಆಡಿಯಾದ ಮೇಲೆ ಯಾರೊ ತಿಪ್ಪಾರೆಡ್ಡಿಯೆಂಬವನನ್ನು ಆ ಹಿಂದಿನ ದಿನ ಅಲ್ಲಿ ಹೇಗೆ 'ನರಿಕಿ' ಹಾಕಿದರೆಂಬ ಪ್ರಸಂಗಕ್ಕೆ ಮೊದಲಾಗುವುದರೊಳಗಾಗಿ ಮಳೆಯ ಜೋರು ಸ್ವಲ್ಪ ಕಡಮೆಯಾಯಿತು. ನಾವು ಅಲ್ಲಿಂದ ಹೊರಗೆ ಹೊರಟು ದಾರಿಗೆ ಬಂದೆವು. ಹನಿಯುತ್ತ ಬಸಿಯುತ್ತ ನಡೆದೆವು. ಮುಸ್ಸಂಜೆಯ ಮಬ್ಬೂ ಮೋಡಗಳ ಮೇಲ್ಗಪ್ಪೂ ಸೇರಿ ಎಲ್ಲವೂ ಅಂಧಕಾರಮಯವಾಯಿತು. 'ಇಷ್ಟು ಹೊತ್ತಿನ ಮೇಲೆ ಈ ಕತ್ತಲಿನಲ್ಲಿ ಇನ್ನು ಆರು ಮೈಲಿ ಯಾರಪ್ಪ ಆ ದಾರಿಯಲ್ಲಿ ನಡೆಯುವರು. ಇಲ್ಲಿಯೇ ರಾತ್ರಿಯನ್ನು ಕಳೆದು ಬೆಳಗಾಗುತ್ತಲೆ ಹೊರಡೋಣ ಬೇಕಾದರೆ' ಎಂದರು ರಾಯರು. ಅವರಿಗೆ ದೂರ ನಡೆಯುವ ಅಭ್ಯಾಸವಿಲ್ಲ. ಬಹು ನಿಧಾನವಾಗಿ ನಡೆದು ಅಭ್ಯಾಸ. ದಾರಿಯೂ ಸ್ವಲ್ಪ ಕಷ್ಟವೇ. ಭೀತಿ ಬೇರೆ. ಆದರೆ ಒಬ್ಬರ ಮೇಲೂ ಒಂದು ಬಿಟ್ಟರೆ ಮತ್ತೊಂದು ಬಟ್ಟೆ ಇಲ್ಲ. ಇರುವುದೂ ಒದ್ದೆ. ಹೊಟ್ಟೆಯಲ್ಲಿ 'ಅಸಾಧ್ಯ' ಹಸಿವು. ಎಷ್ಟೇ ಹೊತ್ತಾಗಲಿ ಗೂಡು ಸೇರಿಕೊಂಡರೆ ಊಟ ಮಾಡಿ ಬೆಚ್ಚಗೆ ಅವರವರ ಹಾಸುಗೆಗಳಲ್ಲಿ ಮಲಗಬಹುದು. ರಾಯರ ಮಾತು ನಡೆಯಲಿಲ್ಲ. ಬಹುಜನಮತಕ್ಕೆ ಅವರೂ ತಲೆಬಾಗಿಸಬೇಕಾಯಿತು. ಸಂಸ್ಥಾನದ ರಾಜಬೀದಿಯಲ್ಲಿದ್ದ ಮೂರು ದೊಡ್ಡ ಅಂಗಡಿಗಳಿಗೂ ಹೋಗಿ ವಿಚಾರಿಸಿದೆವು.

ಒಂದೊಂದಕ್ಕೆ ನಾಲ್ಕಾಣೆ ಕೊಡುವೆವೆಂದೆವು; ಒಂದು ಮೇಣದ ಬತ್ತಿ ಕೂಡ ದೊರೆಯಲಿಲ್ಲ. 'ಇನ್ನೇನು ಮಾಡುವುದು ನಡೆಯಿರಿ, ಜಾಗ್ರತೆ ಹೋಗೋಣ. ಸದಿಯ ದಂಡೆಯಿಂದ ಅಂಬಿಗರೂ ಹೊರಟು ಹೋದಾರು' ಎಂದರು ಯಜಮಾನರು. ಹತ್ತು ಮಾರು ಹೋಗುವುದರೊಳಗಾಗಿ ಆನೆಗೊಂದಿ ರಾಜ್ಯದ ಸುಂಕದ ಅಧಿಕಾರಿಗಳು ತಮ್ಮ ದುಡ್ಡಿನ ಪೆಟ್ಟಿಗೆಯನ್ನು ಎತ್ತಿಕೊಂಡು ಎದುರಿಗೆ ಬರುತ್ತಿರುವುದು ಕಂಡಿತು. ಅವರನ್ನು ನಾನಾ ವಿಧವಾಗಿ ವಿನಯದಿಂದ ಬೇಡಿಕೊಂಡು ಉಪಶಾಂತಿಯನ್ನು ಮಾಡಲೊಪ್ಪಿದೆವು. ಹತ್ತು ನಿಮಿಷಗಳಲ್ಲಿ ಬರುವೆವು ನಡೆಯಿರೆಂದು ಅವರು ಊರೊಳಕ್ಕೆ ಹೋದರು. ಆದರೆ ಪಾಪ! ಏನು ತೊಂದರೆ ಸಂಭವಿಸಿತೊ ಪುನಃ ಬರಲಿಲ್ಲ. ಆದರೂ ನಮ್ಮ ಪ್ರಯಾಣದ ವಿಚಾರವನ್ನು ಅಧಿಕಾರಿಗಳ ತಿಳಿವಳಿಕೆಗೆ ತಂದು ಅವರ ಅನುಮತಿ ಪಡೆದಿರುವೆವಲ್ಲ ಎಂದು ಮನಸ್ಸು ನಿರ್ಮಲ ಮಾಡಿಕೊಂಡು ದಡಕ್ಕೆ ಹೋಗಿ ಸೇರಿದೆವು. ಪ್ರಯಾಣಕ್ಕೆ ಅವರಿಂದ ತೊಂದರೆಯೇನೂ ಬರುವ ಸಂಭವವಿರಲಿಲ್ಲ. ಆದರೆ ಅಂಬಿಗರಾರೂ ಅಲ್ಲಿ ಇರಲಿಲ್ಲ. ಎಲ್ಲರೂ ಆಚೆ ದಡಕ್ಕೆ ಹೊರಟುಹೋಗಿದ್ದರು. ಆಚೆ, ದೂರದಲ್ಲಿ, ಅವರ ಮನೆ. ಕೆಲವರು ಬೆಂಕಿ ಹೊತ್ತಿಸಿಕೊಂಡು ತಮಟೆ ಬಡಿದುಕೊಂಡು ಕುಣಿಯುವುದಕ್ಕೆ ಆರಂಭಮಾಡಿದ್ದಂತೆ ಕಂಡು ಬಂದಿತು. ಗಟ್ಟಿಯಾಗಿ ಕೂಗಿದೆವು. ಮೊದಲು ಒಬ್ಬೊಬ್ಬರಾಗಿ, ಆಮೇಲೆ ಎಲ್ಲರೂ ಒಟ್ಟಿಗೆ ಕೂಗಿದೆವು. ಗಂಟಲು ಶಕ್ತಿಯನ್ನೆಲ್ಲ ವೆಚ್ಚ ಮಾಡಿದೆವು. ಇನಾಮು ಕೊಡುತ್ತೇವಯ್ಯ ಬನ್ನಿ ಎಂದು ಕೂಗಿದೆವು. ಆ ಮೋಹಿನೀ ಮಂತ್ರದ ಉಚ್ಚಾರ ಮಾತ್ರದಿಂದಲೇ ಕೊನೆಗೆ ಹರಿಗೋಲಿನವನು ಒಬ್ಬನು ನಮ್ಮತ್ತ ಹರಿಗೋಲನ್ನು ನಡಸಿಕೊಂಡು ಬಂದು ನಮ್ಮನ್ನು ಆ ದಡಕ್ಕೆ ಸಾಗಿಸಿಕೊಂಡು ಹೋದನು. ಅಂಬಿಗನು ಆಗ ಮಾಡಿದುದು ಮಹದುಪಕಾರವೆಂದೇ ಭಾವಿಸಬೇಕು. ಆರೂವರೆ ಗಂಟೆಯಾಗಿ ಸುಂಕದ ಅಧಿಕಾರಿಗಳು ಹೊರಟು ಹೋದ ಮೇಲೆ ಅಂಬಿಗರು ಹರಿಗೋಲು ನಡಸಕೂಡದೆಂಬುದು ಸಂಸ್ಥಾನದವರ ಕಟ್ಟಾಜ್ಞೆ. ಅವನಂತೂ ಇನಾಮಿನ ಹೆಸರು ಕೇಳಿ ಧೈರ್ಯ ಮಾಡಿದ್ದನು.

ಹರಿಗೋಲಿಳಿದು 'ಚೆನ್ನಯ್ಯ, ಮುಂದೆ ನಡೆಯಪ್ಪ, ದಾರಿ ತೋರಿಸು' ಎಂದು ಹೇಳಿ ಅವನನ್ನು ಹಿಂಬಾಲಿಸಿದೆವು. ಕತ್ತಲಿನಲ್ಲಿ, ಒಂದೊಂದು ಸಲ ಮುಂದೆ ಹೋಗುತ್ತಿರುವ ಅವನಿಗೂ ದಾರಿ ಕಾಣಿಸದಾಗುತ್ತಿತ್ತು. ಆಗ ಅವನು ಸೇದುತ್ತಿದ್ದ ಬೀಡಿಯ ಬೆಳಕೇ ನಮಗೆ ಮಾರ್ಗದರ್ಶಿ. ಮನೆ ಸೇರುವ ಆತುರ; ದಾರಿಯ ಹೆದರಿಕೆ; ಭೀರು ಮನಸ್ಸು; ಮಳೆ, ಕತ್ತಲು; ಭಯಗಳ ಉದ್ವೇಗ ಮನಸ್ಸಿನಲ್ಲಿ ಪ್ರಬಲವಾದ ಅಧಿಕಾರ ಹೂಡಿತ್ತು. ಅದೇ ದಾರಿಯಲ್ಲಿ ಎರಡು ಮೂರು ಗಂಟೆಗಳಿಗೆ ಹಿಂದೆ ತಾನೇ ಅನೇಕ ಸೌಂದರ್ಯಗಳನ್ನು ನೋಡಿಕೊಂಡು ಶ್ಲಾಘಿಸುತ್ತ, ಆನಂದಪಡುತ್ತ ಹೋಗಿದ್ದೆವು. ಐತಿಹಾಸಿಕ ಸಂಗತಿಗಳನ್ನು ನೆನಪಿಗೆ ತಂದುಕೊಳ್ಳುತ್ತ, ಅನೇಕ ಹಳೆಯ ಸನ್ನಿವೇಶಗಳನ್ನು ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುತ್ತ, ಹೆಜ್ಜೆ ಹೆಜ್ಜೆಗೂ ಹೊಸ ನೋಟಗಳನ್ನು ನೋಡುತ್ತ, ವ್ಯಾಖ್ಯಾನ ಮಾಡುತ್ತ, ಹೋದವರ ಸುತ್ತಲೂ ಹೊರಗೂ ಒಳಗೂ ಈಗ ಭಯ

ಅಂಧಕಾರ ಇವು ಮಾತ್ರವೇ ತುಂಬಿಕೊಂಡು ಇತರ ಭಾವನೆ ಕಲ್ಪನೆಗಳೆಲ್ಲ ಎಲ್ಲಿಯೊ ಮಾಯವಾಗಿದ್ದವು. ಚೆನ್ನಯ್ಯನು ಎಷ್ಟು ಧೈರ್ಯ ಹೇಳಿದರೆ ತಾನೆ ಏನು? ಕಣ್ಣು ಕಾಣದ ದೇಶ; ಕಣ್ಣು, ಮನಸ್ಸು ಓಡದ ಸಮಯ; ಕಳ್ಳಕಾಕರ ಭೀತಿ. ಸ್ವಲ್ಪ ಆಚೆ ಈಚೆ ಸುಳಿದರೆ ಎಡವಿಬೀಳುವ, ಮೈತರಚಿ ಹೋಗುವ, ಕೈಕಾಲು ಮುರಿಯುವ ಸಂಭವ. ಮಿಂಚಿನ ಬೆಳಕು ಬೆಳಗಿದರೆ ಮಾತ್ರ ದಿಕ್ಕು ದೆಸೆ ಕಾಣುವುವು. ಆ ಬೆಳಕೋ ಎಷ್ಟು ಭಯಂಕರ! ಅಕ್ಕಪಕ್ಕದಲ್ಲಿದ್ದು ಮಿಂಚಿನಲ್ಲಿ ಬೆಳಗಿದ ಕೋಡುಗಲ್ಲುಗಳು ಕಟಬಾಯ್ಗಳನ್ನು ತೆರೆದುಕೊಂಡಿರುವ ಮೊಸಳೆಗಳಂತೆ ಕಾಣುವುವು. ಒಣಗಿ ನಿಂತಿದ್ದ ಬೋಳುಮರಗಳನ್ನು ನೋಡಿದರೆ ತೋಳುಗಳನ್ನು ಹೊರಚಾಚಿ ನಿಂತಿರುವ ಭೂತಗಳಂತೆ ಇರುವುವು.

'ಇಂಥ ಸಮಯಗಳಲ್ಲಿ ಒಂದೊಂದು ಪಿಸ್ತೂಲು ಹತ್ತಿರವಿದ್ದರೆ ಎಷ್ಟೋ ಅನುಕೂಲ' ಎಂದರು ಯಜಮಾನರು. ನಿಶ್ಚಯ; ನಮಗೆ ಪಿಸ್ತೂಲುಗಳ ಜ್ಞಾಪಕ ಬರತಕ್ಕದ್ದು ಕೂಡ ಇಂಥ ಸಮಯಗಳಲ್ಲಿಯೇ. ಆದರೆ ಪಿಸ್ತೂಲುಗಳನ್ನು ಇಟ್ಟು ಕೊಳ್ಳುವುದು ಹೇಗೆ? ಇವಕ್ಕೆ ಹತ್ತಾರು ರೂಪಾಯಿಗಳನ್ನು ಖರ್ಚುಮಾಡಿ ಮೇಲೆ ಮೇಲೆ ತೋಟೆಗಳನ್ನು ಕೊಳ್ಳುತ್ತಲೇ ಇರಬೇಕು. ಅವನ್ನು ಹಿಡಿದು ಉಪಯೋಗಿಸುವ ಯೋಗ್ಯತೆ ತಾನೆ ನಮಗೆಲ್ಲರಿಗೂ ಎಲ್ಲಿಂದ ಬರಬೇಕು? ಎಲ್ಲರಿಗೂ ಲೈಸೆನ್ಸ್ ಯಾರು ಕೊಡುವವರು? ದೇವರು ದೊಡ್ಡ ಮನಸ್ಸು ಮಾಡಿ ನಮಗೆ ಬ್ರಿಟಿಷ್ ಸರಕಾರದವರ ಆಶ್ರಯವನ್ನು ಕರುಣಿಸಿರುವುದರಿಂದ ನಮ್ಮ ದೇಶದಲ್ಲಿ ಸುಖಶಾಂತಿಗಳು ನೆಲಸಿ ನಮ್ಮ ದೇಹ ರಕ್ಷಣಾ ಕಾರ್ಯವಾದರೂ ಸರಿಯಾಗಿಯೋ ತಪ್ಪಾಗಿಯೋ ಇಷ್ಟು ಮಟ್ಟಿಗಾದರೂ ನಡೆಯುತ್ತಿದೆ. ಇಲ್ಲದಿದ್ದರೆ ನಮ್ಮ ಗತಿ ಏನು? ನಮ್ಮನ್ನು ರಕ್ಷಿಸುವ ಕಾರ್ಯವು ಅವರ ತಲೆಯ ಮೇಲೆ ಬಿದ್ದಿರುವ ಭಾರ; ಅವರ ತಲೆಬುರುಡೆಗಳು ಗಟ್ಟಿಯಾಗಿರುವತನಕ ನಮಗೆ ಸುತರಾಂ ಭಯವಿಲ್ಲ. ಎಲ್ಲಿದ್ದರೂ ಎಲ್ಲಿ ಹೋದರೂ ಭಯವಿಲ್ಲ. 'ಭಯವಿಲ್ಲ ನಡೆಯಿರಿ ಸಾರ್, ಏನು ಹೆದರಿಕೆ ಬಂದದ್ದು, ನಾವು ಆರು ಜನ ಒಟ್ಟಿಗೆ ಇದ್ದೇವೆ' ಎಂದೆ ನಾನು.

'ಆರು ಜನ ಇದ್ದರೂ ಒಂದೇ, ಅರುವತ್ತು ಜನ ಇದ್ದರೂ ಒಂದೆ. ನಿನ್ನೆ ರಾತ್ರಿ ನೋಡಿದಿರೊ ಇಲ್ಲವೊ!' – ಎಂದು ಉತ್ತರ ಬಂದಿತು. ನನ್ನ ಶೌರ್ಯದ ಪ್ರತಾಪ ಅಡಗಿಹೋಯಿತು. ದೊಡ್ಡವರು ಆರುವತ್ತು ವರುಷಗಳ ಅನುಭವದಿಂದ ಹೇಳುವ ಮಾತು ಅಸತ್ಯವಲ್ಲವೆಂದು ಬೇರೆ ನಮಗೆ ಸಿದ್ಧಾಂತ. ಅವರು ಹೇಳಿದ್ದೂ ನಿಶ್ಚಯವೇ.

ಮೂರ್ತಿ – 'ಓಹೋ ಶ್ರೀಕಂಠಯ್ಯನವರೂ ನಾನು ಇರುವಾಗ ನಿಮಗೆಲ್ಲ ಭಯವೇಕೆ ? ನನಗೆ ದೊಣ್ಣೆ, ಪಿಸ್ತೂಲ್, ಜುಜಿಟ್ಸು ಎಲ್ಲ ಅಭ್ಯಾಸವಿದೆ. ಹುಳ ಹುಪ್ಪಟೆ ಏನು ಮಾಡ್ಯಾವು? ತಂಟೆಖೋರರು ಬಂದರೆ ಶ್ರೀಕಂಠಯ್ಯ ಒಬ್ಬರು ಸಾಲದೆ? ಅವತ್ತು ದೇವರಾಯನ ದುರ್ಗದ ದಾರಿಯಲ್ಲಿ ಎಲ್ಲರೂ ಕೈಚಪ್ಪಾಳೆ ಹೊಡೆದುಕೊಂಡು

ಆ ರಾತ್ರಿ ಹೋದ ಹಾಗೆ ಈಗಲೂ ಹೋಗೋಣ ನಡೀರಿ' ಎಂದು ಕೈ ಚಪ್ಪಾಳೆ ಹೊಡೆಯುವುದಕ್ಕೆ ಮೊದಲು ಮಾಡಿದರು.

ನನಗೆ ರೇಗಿತು; ಮೂರ್ತಿ ನನ್ನನ್ನು ಹೀಗೆ ಅಲ್ಲಗಳೆದದ್ದು ನನಗೆ ಸಹಿಸಲಿಲ್ಲ. ಧೈರ್ಯಕ್ಕೂ ಶಕ್ತಿಗೂ ಆಳು ದಪ್ಪ ದಪ್ಪಗೆ ಉದ್ದುದಕ್ಕೆ ಆಕಾರ ಇದ್ದು ನೂರ ಐವತ್ತು ಪೌಂಡು ತೂಕ ಇದ್ದುಬಿಟ್ಟ ಮಾತ್ರಕ್ಕೆ ಸಾಕೆ? ನಿಸ್ಸಾರವಾಗಿ ತೂಕವಿಲ್ಲದೆ ಹೊರಗೆ ಕಂಡ ಮಾತ್ರಕ್ಕೇ ನಮ್ಮಲ್ಲಿ ಧೈರ್ಯವೂ ಶಕ್ತಿಯೂ ಇರಕೂಡದೆ? ಲೇವಡಿ ಮಾಡುವುದಕ್ಕೆ ಏನು ಖರ್ಚಾಗಬೇಕು ಹೇಳಿ. ಯಾರು ಮಾಡುವುದಕ್ಕಾಗುವುದಿಲ್ಲ? ನಾಳೆ ವೈಕುಂಠದಿಂದ ವಿಷ್ಣುವೇ ಎದುರಿಗೆ ಬಂದು ನಿಂತರೂ ಅರ್ಧಗಂಟೆಯ ಕಾಲದಲ್ಲಿ ಅವನನ್ನು ಲೇವಡಿ ಮಾಡಿ ಪುನಃ ಸ್ವಸ್ಥಾನಕ್ಕೇ ಓಡಿಸಿಬಿಡುವುದು ಕಷ್ಟವೇನೊ ಮಹಾ; ನಾನು ಲೇವಡಿ ಮಾಡಲಾರೆನೊ! – ಅಂದುಕೊಂಡೆ. ಒಂದು ಸಂಗತಿ ಮಾತ್ರ ಹೇಳಿಕೊಳ್ಳಲೇಬೇಕು. ಆದರೆ, ನನ್ನಲ್ಲಿ ಶಕ್ತಿ ಧೈರ್ಯಗಳಿಗೇನೂ ಕಡಮೆಯಿಲ್ಲವಾದರೂ ಅವಕ್ಕಿಂತಲೂ ಸ್ವಾಭಿಮಾನ ಹೆಚ್ಚು. ಪ್ರಪಂಚದಲ್ಲಿ ಸುಮಾರು ಎಲ್ಲರೂ ಹಾಗೆಯೇ ಎಂದು ನನ್ನ ಭಾವನೆ. ಕೆಲವರು ಅದನ್ನು ಹೊರಗೆ ತೋರಿಸಿಕೊಳ್ಳುತ್ತಾರೆ. ಮತ್ತೆ ಕೆಲವರು ಒಳಗೇ ದಮನ ಮಾಡಿಟ್ಟುಕೊಂಡಿರುತ್ತಾರೆ. ಇಷ್ಟೇ ಜನರಲ್ಲಿ ವ್ಯತ್ಯಾಸ. 'ನೀನು ಹೇಡಿ' ಎಂದು ಹೇಳಿದರೆ ಕೋಪಿಸಿಕೊಳ್ಳದ ನರಾಧಮನೂ 'ನೀನು ಧೀರ'ನೆಂದರೆ ಹಿಗ್ಗದ ನರನೂ ಈ ಪ್ರಪಂಚದಲ್ಲಿ ಇಲ್ಲವೆಂದೇ ನನ್ನ ಅಭಿಪ್ರಾಯ. ಅಂತು ನಾನೇನೊ ಬಹಳ ಹುರುಡಿನಿಂದ ಮುಂದೆ ಮುಂದೆ ನಡೆಯತೊಡಗಿದೆ. ಸ್ವಲ್ಪ ಹೊತ್ತು ಹಾಗೆಯೇ ನಡೆದದ್ದಾಯಿತು. ಹೆಜ್ಜೆ ಮಾತ್ರ ನಿಸ್ಸಂಕೋಚವಾಗಿ ಹೆಚ್ಚು ಹೆಚ್ಚು ಭಾರವಾಯಿತು. ಕ್ರಮವಾಗಿ ಹಿಂದೇಟು ಹಾಕತೊಡಗಿತು. ಎಷ್ಟೋ ವಿಧವಾಗಿ ಪಾದಗಳಿಗೆ ನಾನು ಬುದ್ಧಿ ಹೇಳಿಕೊಟ್ಟೆ. ಸಮಯಾಸಮಯ ಪರಿಜ್ಞಾನವಿಲ್ಲದೆ ನನ್ನನ್ನು ಅಪಮಾನಕ್ಕೆ ಗುರಿ ಮಾಡಿಸಬೇಕೆಂಬ ಅಭಿಲಾಷೆ ಅವಕ್ಕಿದ್ದರೆ ನಾನು ಏನನ್ನು ತಾನೆ ಮಾಡುವುದಕ್ಕಾದೀತು? ಸಾಂದ್ರವಾಗಿ ಕವಿದ ಕತ್ತಲು ಸುತ್ತಲೂ ಮುತ್ತಿದ್ದುದರಿಂದ ನನ್ನ ಆಗಿನ ದುರವಸ್ಥೆಯನ್ನು ನೋಡಿ ಯಾರೂ ನಗುವ ಹಾಗಿರಲಿಲ್ಲ. ಮೂರ್ತಿ ನನ್ನ ವಿಷಯಗಳಲ್ಲಿ ಬಾಯಿಗೆ ಬೀಗ ಹಾಕಿ ಅದನ್ನು ಬಿಗಿ ಹಿಡಿಯುವ ಅಭ್ಯಾಸವನ್ನೇ ಮಾಡಿದವರಲ್ಲ. ಪಾಪ, ಈ ಮನುಷ್ಯನ ಮನಸ್ಸನ್ನು ಏಕೆ ನೋಯಿಸಬೇಕೆಂದು ಲೆಕ್ಕವಿಲ್ಲ, ಕನಿಕರವಿಲ್ಲ. 'ಎಲ್ಲರ ಜೊತೇಲೆ ಬನ್ರಿ, ಮಹರಾಯರಾ, ಸುರಕ್ಷಿತವಾಗಿ ಊರು ಸೇರಿಕೊಳ್ಳೋಣ. ಎಲ್ಲಾದರೂ ಬಿದ್ದು ಕಾಲುಗೀಲು ಮುರಿದುಕೊಂಡು ಲಂಗಡೇ ಆಗೀರಿ!' ಎಂದರು. ಅದೇ ಸಮಯ!.... ಆದರೂ ಅವರ ಉದ್ಯಮಕಂಟಕತನದ ವಿಚಾರವಾಗಿ ಅವರಿಗೆ ಕೇಳಿಸುವಂತೆ ಗೊಣಗಾಡಿಕೊಳ್ಳುತ್ತ ಎಲ್ಲರ ಜೊತೆಗೇ ನಡೆಯತೊಡಗಿದೆ. ನಮ್ಮಲ್ಲಿ ಯಾರಿಗೂ ಮಾತನಾಡಬೇಕು ಎಂದು ಕೂಡ ಅನ್ನಿಸಲಿಲ್ಲ. ಮಾತೂ ಭಾವಗಳೂ ತಾಮಸೀ ವೃತ್ತಿಯ ಮನಸ್ಸಿನ ಅರೆಮಬ್ಬಿನಲ್ಲಿ ಎಲ್ಲಿಯೊ ಅಡಗಿಹೋಗಿದ್ದುವು. ಕಣ್ಣಿಗೆ ಕಾಣದೆ, ಸುಲಭವಾಗಿ ಮನಸ್ಸಿನ ವಿಭಜನ ವಿಶ್ಲೇಷಗಳಿಗೆ ಸಿಕ್ಕದ ಯಾವುದೊ ಒಂದು

ಶಕ್ತಿ ಹೃದಯವನ್ನೂ ಮನಸ್ಸನ್ನೂ ದುಸ್ಸ್ವಪ್ನ ಸಮಯಗಳಲ್ಲಾಗುವಂತೆ, ಮೇಲೆ ಮೇಲೆ ಅದುಮುತ್ತಿತ್ತು.

'ಈಗ ಎಲ್ಲಿದ್ದೇವಯ್ಯ, ಚಿನ್ನಯ್ಯ?' ಎಂದರು ರಾಯರು. ಅವನು, 'ಆಗ ತೋರಿಸಿದೆನಲ್ಲ ಸ್ವಾಮಿ, ಸೀತಾಮ್ಮನೋರು ಒಡವೆ ಬಿಸಾಕಿದ ಸ್ಥಳ ಎಂದು, ಅಲ್ಲಿಗೆ ಬಂದಿದ್ದೇವೆ' ಎಂದನು. ತಲೆಯ ಮೇಲೆ ಮೋಡ ಗುಡುಗು ಮಿಂಚು ಇವು ತಮಗೆ ಬೇಕಾದಂತೆ ಸಂಚರಿಸುತ್ತ ಭಯಂಕರವಾಗಿದ್ದುವೆಂದು ಹಿಂದೆಯೇ ಹೇಳಿರುವೆನಷ್ಟೆ. ಈಗ ಹೃದಯವಿದ್ರಾವಕವಾಗಿ ದೇಹಪಂಜರದ ಕೀಲುಗಳು ಕಳಚಿ ಪುಡಿಪುಡಿಯಾಗುವುವು ಎಂಬಂತೆ ಎದುರಿನಿಂದ ಆರ್ಭಟಿಸಿ ಒಂದು ಸಿಡಿಲು ಸಿಡಿಯಿತು. ಮೇಲೆ ನಾವು ನಡೆದು ಹೋಗುತ್ತಿರುವಾಗ, ಕಾಲ್ಕೆಳಗಿನ ಭೂಮಿ ಕಂಪಿಸಿ ಆ ಕಂಪನ ರಭಸ ನಮ್ಮೆಲ್ಲರನ್ನೂ ಐವತ್ತು ಅಡಿ ಮೇಲಕ್ಕೆ ಎತ್ತಿಹಾಕಿಬಿಟ್ಟಿದ್ದರೆ ನಮ್ಮ ಆತ್ಮ ಹೇಗೆ ತಲ್ಲಣಿಸಿ ಹೋಗಬಹುದಿತ್ತೊ ಅದಕ್ಕಿಂತಲೂ ಹತ್ತರಷ್ಟು ಪ್ರಬಲವಾದ ತಲ್ಲಣ ಉಂಟಾಯಿತು. ಅದು ಸುತ್ತಲ ಪ್ರದೇಶವನ್ನು ಹತ್ತಿಸಿ ಉರಿಸಿ ತನ್ನ ವಿದ್ಯುನ್ಮೊನೆ ರೌದ್ರಗಳಿಂದ ತಿವಿದುಕೊಂಡು ಹೋಗುವುದನ್ನು ಆ ಸನ್ನಿವೇಶದಲ್ಲಿ ಅನುಭವಿಸಬೇಕು! ಅದು ಎಂಥುದೆಂಬುದು ತಿಳಿಯುವುದು. ಅದರ ಚಿತ್ರವನ್ನಾಗಲಿ ಆಗಿನ ನಮ್ಮ ಮನೋಭಾವವನ್ನಾಗಲಿ ಲೇಖನಿಯ ವರ್ಣನೆಯಿಂದ ವರ್ಣಿಸುವುದು ಹೇಗೆ ಸಾಧ್ಯ? ತಕ್ಷಣದಲ್ಲಿಯೇ ನಾಲ್ಕಾರು ಹಸಿಹಸಿರು ತಾಳೆಮರಗಳು ಭಗ್ಗನೆ ಹತ್ತಿಕೊಂಡು ಬೆಳ್ಳಗೆ ಸೂರ್ಯಕಾಂತಿಯಂತಿರುವ ಕಾಂತಿಯಿಂದ ಬೆಳಗಿ ಉರಿದುವು. ಒಂದು ನೂರು ವಾಷಿಂಗ್‌ಟನ್ ದೀಪಗಳ ಕಾಂತಿ ಒಂದೇ ದೀಪದಲ್ಲಿ ಒಮ್ಮೊನೆಯಲ್ಲಿ ಉರಿಯುತ್ತಿದ್ದರೆ ಬೆಳ್ಳುರಿ ಯಾವ ರೀತಿ ಇರಬಹುದೊ ಆ ರೀತಿ ಇತ್ತು. ಬೆಳ್ಳುರಿ ನಿಂತು, ಮೇಲಿಂದ ಕಿಡಿಗಳುದುರಿ, ಉರಿ ಕೆಂಪು ತಿರುಗುವುದಕ್ಕೆ ಹತ್ತು ನಿಮಿಷ ಕಾಲ ಹಿಡಿಯಿತು. ಅಬ್ಬಾ! ಏನು ದೃಶ್ಯ ಅದು! ಆಗ ಉಂಟಾದ ನರಗಳ ಕಂಪನ ಆಮೇಲೆ ಸುಮಾರು ಅರ್ಧಗಂಟೆಯವರೆಗೂ ನಾಳನಾಳದಲ್ಲಿಯೂ ಚರ್ಮಕೂಪಗಳಲ್ಲಿಯೂ ಸೇರಿಕೊಂಡು ಮೈಯನ್ನು ನಡುಗಿಸಿತು. ಅಂಥುದನ್ನು ಹಿಂದೆ ಅನುಭವಿಸಿರಲಿಲ್ಲ.

ದಾರಿ ಹೋಗುಹೋಗುತ್ತ ಭಾರಿಯಾದ ಎರಡು ಕಲ್ಲುಬಂಡೆಗಳ ನಡುವೆ ಹೊರಟಿತು. ಸುಮಾರು ಹತ್ತು ಹದಿನೈದು ಗಜಗಳ ದೂರದವರೆಗೂ ಸುರಂಗದಂತಿರುವ ದಾರಿ. ನಮ್ಮ ಹತ್ತಿರ ದೀಪವಿಲ್ಲ. ಮುಂದೆ ಕಣ್ಣು ಕಾಣಿಸದು; ಬೆಂಕಿಯ ಪೆಟ್ಟಿಗೆಯಲ್ಲಿದ್ದ ಕಡ್ಡಿಗಳನ್ನೆಲ್ಲ ಗೀಚಿಯಾಯಿತು. ಅವು ಹೇಳಿ, ನಿರ್ಭಾಗ್ಯರಾದ ನಮ್ಮ ಕಾಲದ ದೀಪದ ಕಡ್ಡಿಗಳು. ಏನು ಮಾಡಿದರೂ ಹೊತ್ತಿಕೊಳ್ಳವು. ಕತ್ತಲನ್ನು ಓಡಿಸಿಕೊಂಡು ಮುಖವನ್ನು ಅಪ್ಪಳಿಸಿಕೊಂಡು ಮೇಲೆ ಬರುತ್ತಿರುವ ಚಂಡವಾಯು ಬೇರು. ಬಹಳ ಹೊತ್ತು, ಡವಡವನೆಂದು ನಿಮಿಷಕ್ಕೆ ನೂರೈವತ್ತಕ್ಕೆ ಮೀರಿದಂತೆ ಧ್ವನಿಮಾಡಿ, ಹರಿಕಥೆ ದಾಸರ ತಾಳದಂತೆ ಹೊಡೆದುಕೊಳ್ಳುತ್ತಿದ್ದ ಎದೆಯ ಸ್ಥಿತಿ; ಒದ್ದೆ ಚಳಿಗಳಿಂದ ಮೈನಡುಕ; ಹಲ್ಲುಗಳ

ಕಟಕಟ ಶಬ್ದ; ಅವುಗಳನ್ನು ಈ ಜೀವವಿರುವವರೆಗೂ ಮರೆಯುವ ಹಾಗಿಲ್ಲ. ಚೆನ್ನಯ್ಯನು ಕಿವಿಯ ಮೇಲೆ ಸಿಕ್ಕಿಸಿಕೊಂಡಿದ್ದ ಕೊನೆಯ ಬೀಡಿಯನ್ನು ತೆಗೆದು ಹೊತ್ತಿಸಿದನು. ಅವನ ಬೀಡಿಗಳು ನಮಗೆ ಮಾಡಿದ ಉಪಕಾರವನ್ನು ಮಾತಿನಲ್ಲಿ ಹೇಳಲು ಅಳವಲ್ಲ. ಅವಕ್ಕೆ – ವಿಶೇಷವಾಗಿ ತಾರಕವಾದ ಆ ಕೊನೆಯ ಬೀಡಿಗೆ – ಎಷ್ಟು ಧನ್ಯವಾದಗಳನ್ನು ಸಮರ್ಪಿಸಿದರೂ ಸಾಲದು. ಯಜಮಾನರ ಮನಸ್ಸಿಗೆ ಕೂಡ ಅವುಗಳ ವಿಷಯದಲ್ಲಿ ಗೌರವ ಹುಟ್ಟಿತೆಂದರೆ ಅದಕ್ಕೆ ಮೇಲಾಗಿ ನಾವ್ಯಾರು ಏನನ್ನು ತಾನೇ ಹೇಳಬಹುದು? ಒಬ್ಬರಿಗಿಂತ ಹೆಚ್ಚು ಜನ ಅಡ್ಡಡ್ಡಲಾಗಿ ಅಲ್ಲಿ ಹೋಗಲು ಆಗದು. ಒಬ್ಬರ ಹಿಂದೊಬ್ಬರು ಜೀವದಲ್ಲಿ ಜೀವವಿಲ್ಲದೆ ಮಾರ್ಗತಾರಕವಾದ ಆ ಬೀಡಿಯ ಬೆಳಕನ್ನನುಸರಿಸಿ ಕ್ಯೂ ಹೊರಟು ಅದನ್ನು ದಾಟಿ ಪುನಃ ದೊಡ್ಡ ರಸ್ತೆಯನ್ನು ಸೇರಿಕೊಂಡೆವು. ಎದೆಯ ಮೇಲೆ ಹೇರಿದ್ದ ಬಹು ದೊಡ್ಡ ಭಾರವೊಂದು ಕೆಳಕ್ಕೆ ಇಳಿದು ಸುಲಭವಾಗಿ ಉಸಿರಾಡುವಂತಾಯಿತು.

ಇನ್ನೊಂದು ಕಾಲುಗಂಟೆಯ ಹೊತ್ತಿಗೆ ಮಳೆಯು ನಿಂತಿತು. ದಾರಿಯಲ್ಲಿ ಉದ್ದಕ್ಕೂ ವಿಚಿತ್ರವಾದ ಸಂಗೀತವೊಂದು ಮೊದಲಾಯಿತು. ಬಂಡೆಗಳ ಮಧ್ಯದಲ್ಲಿಯೂ ದಾರಿಯ ನೀರ್ಗಾಲುವೆಗಳಲ್ಲಿಯೂ ತಮಗೆ ಮನಸ್ಸು ಬಂದೆಡೆಯಿಂದ ಸಪ್ತಸಹಸ್ರ ಸ್ವರಗಳಿಂದ ಕ್ರಮಲಕ್ಷ್ಯವಿಲ್ಲದೆ ಸ್ವಚ್ಛಂದವಾಗಿ ಭೇಕಗಳು ಗಾನಮಾಡಲು ಉಪಕ್ರಮಿಸಿದುವು. ಗಾನದ ಜೊತೆಗೆ ಕ್ರಿಮಿಕೀಟಗಳ ಧ್ವನಿಯ ಸೇರುವೆ ಬೇರೆ. ನನಗೆ ಈವರೆಗೂ ಇದರ ಒಳತತ್ತ್ವ ಗೊತ್ತಾಗಿಲ್ಲ. ನೀರಿನಲ್ಲಿಯೇ ಜೀವನ ಮಾಡಬೇಕಾಗಿರುವ ಈ ಭೇಕಾದಿಗಳು ಬಿಸಿಲಿನ ಉರಿತಾಪದಿಂದ ಉರಿದು ಬೆಂದುಹೋಗಿರುವ ನೆಲದಲ್ಲಿ ಮಳೆ ಬಂದ ತಕ್ಷಣ ಹೇಗೆ ಬರುವುವೊ ಹೇಗೆ ಜೀವಂತವಾಗುವುವೊ, ಅವು ಎಲ್ಲಿ ಹೇಗೆ ಯಾವ ಸೂಕ್ಷ್ಮ ರೂಪದಲ್ಲಿ ಮಳೆ ಬರುವವರೆಗೂ ವಾಸಮಾಡಿರುವುವೊ ನನಗೆ ಇನ್ನೂ ಚೆನ್ನಾಗಿ ಅರ್ಥವಾಗಿಲ್ಲ. ಹುಡುಗನಾಗಿದ್ದಾಗ ಈ ವಿಚಾರವಾಗಿ ಒಬ್ಬರಿಗೆ ಪ್ರಶ್ನೆ ಹಾಕಿದ್ದೆ. ಅವರು ಸರಿಯಾದ ಉತ್ತರ ಕೊಡದೆ, ಕೇಳಿದ್ದಕ್ಕೆ ಏನೋ ಒಂದು ಹೇಳಿಬಿಡಬೇಕು, ತಮಗೆ ತಿಳಿದಿಲ್ಲವೆಂದು ಹೇಳಿಕೊಳ್ಳುವುದು ಮರ್ಯಾದೆಗೆ ಕಮ್ಮಿ ಎಂದು ಬಾಯಿಗೆ ಬಂದುದನ್ನು ಹೇಳಿದ್ದರು. ಆಮೇಲೆ ಬಹುಕಾಲದವರೆಗೂ ಮಳೆಯ ಜೊತೆಯಲ್ಲಿಯೇ ಅವೂ ಮೋಡಗಳಿಂದ ಭೂಮಿಗೆ ಬೀಳುವುದೆಂದು ಅಂದುಕೊಂಡಿದ್ದೆ. ಈಗಲೂ ನನಗೆ ಈ ವಿಷಯ ಚೆನ್ನಾಗಿ ಗೊತ್ತಿದೆಯೊ ಇಲ್ಲವೊ ತಿಳಿಯದು. ಎದೆ ಮುಟ್ಟಿ ಪ್ರಮಾಣ ಮಾಡೆಂದರೆ ನಾನು ಮಾಡುವುದಿಲ್ಲ. ತತ್ತ್ವ ಹೇಗಾದರೂ ಇರಲಿ, ಜೀವಲೇಶದ ಸುಳಿವಿಲ್ಲದಂತೆ ಇದುವರೆಗೂ ನಿಶ್ಶಬ್ದವಾಗಿದ್ದ ಆ ಪ್ರದೇಶವೆಲ್ಲವೂ ಈಗ ಅನಂತಾನಂತ ಜೀವಸಮೂಹದ ಶಬ್ದದಿಂದ ತುಂಬಿ ಹೋಯಿತು. ಒಳಗೆ ನಮ್ಮ ಮನಸ್ಸನ್ನು ಅದುಮಿಕೊಂಡು ಮೇಲೆ ಏರಿ ಊರಿ ಕೂತಿದ್ದ ಭಯಂಕರ ಭಾವವು ಹೊರಟುಹೋಗಿ ಸುತ್ತಣ ಪ್ರಪಂಚದ ಅರಿವು ಪುನಃ ಬಂದಿತು. ಇಷ್ಟು ಸಹಚರ ಜಂತುಗಳು ಈ ಬೆಗ್ಗಾಡು ಪ್ರದೇಶದಲ್ಲಿ ಹೀಗೆ ಅಸಂಖ್ಯಾತವಾಗಿ ವಾಸಮಾಡಿ

ಕೊಂಡಿರುವುದನ್ನು ನೋಡಿ ಆಶ್ಚರ್ಯವಾಯಿತು. ನಡು ನಡುವೆ ಮಾತ್ರ ಈ ಪಕ್ಕದಿಂದ ಆ ಪಕ್ಕಕ್ಕೊ ಆ ಕಡೆಯಿಂದ ಈ ಕಡೆಗೊ ಒಂದು ಮುಂಗುಸಿಯೊ ಕಾಡುಬೆಕ್ಕೊ ಓಡಿಹೋಗುವುದು. ಬೆಕ್ಕಿನ ಹೊಂಗಣ್ಣಿನ ಕಾಂತಿ ರಾತ್ರಿಯ ಕತ್ತಲಲ್ಲಿ ಕೆಂಡದಂತೆ ಉರಿದು ಅದರ ಕ್ರೂರ ಮುಖವನ್ನೂ ನಿಮಿರಿನಿಂತ ಅದರ ಮೀಸೆಯನ್ನೂ ಬೆಳಗುವುದು. ಇಲ್ಲವಾದರೆ ಯಜಮಾನರ ಕಾಲಿಗೊ ರಾಯರ ಕಾಲಿಗೊ ದೊಡ್ಡದೊಂದು ಭೇಕ ಸಿಕ್ಕಿ ಅವರು ಛಂಗನೆ ಬೇರೆ ಕಡೆಗೆ ಹಾರಿ ಹೋಗುವರು. ಪುನಃ ನೆಲದ ಮೇಲೆ ಹೆಜ್ಜೆಯಿಟ್ಟರೆ ಕಾಲಿನ ಕೆಳಕ್ಕೆ ಇನ್ನೊಂದು ಸಿಕ್ಕುವುದು. 'ಥು! ಹಾಳು ಮುಂಡೇದೆ' ಎನ್ನುತ್ತ ಅವನ್ನು ಶಿಕ್ಷಿಸುವಂತೆ ತಮ್ಮ ಕೊಡೆಯನ್ನು ಮೇಲಿಂದ ಕೆಳಕ್ಕೆ ಅವರು ಬೀಸುವರು. ಈ ಹಾರಾಟದಿಂದ ಅವಕ್ಕೆ ಭಯವಾಗಿ ಅವು ದಾರಿ ಬಿಟ್ಟು ಕೊಡುವುವು.

ಈ ಮಧ್ಯದಲ್ಲಿ ಒಂದು ಭಾರಿ ಅಸಂಗತ ನಡೆದು ನನ್ನ ಮನಸ್ಸನ್ನು ಸ್ವಲ್ಪ ಹೊತ್ತು ತಳಮಳಗುಟ್ಟಿಸಿತು : ನನ್ನ ಕಾಲಿನ ಒಂದು ಎಕ್ಕಡಕ್ಕೆ ಕೋಪ ಬಂದು ಬಲ ಹೆಬ್ಬೆರಳಿನಿಂದ ಉಂಗುಷ್ಟ ಕಳಚಿಕೊಂಡಿತು. ಆ ಕಷ್ಟ, ನಮ್ಮ ಶತ್ರುಗಳಿಗೂ ಬೇಡ. ಮೊದಲೇ ಆ ಮಳೆ ಕೆಸರುಗಳಲ್ಲಿ ಒಂದೊಂದು ಎಕ್ಕಡವೂ ಒಂದೊಂದು ಧಡಿಯ ಸೀಸವನ್ನು ಕಾಲಿಗೆ ತಗುಲಿ ಹಾಕಿದಂತಾಗಿತ್ತು. ಆಗಿನ ಸ್ಥಿತಿಯ ವೈಕೃತಿಯನ್ನು ಬಣ್ಣಿಸಲು ಆದಿಶೇಷನಿಗೂ ಕಷ್ಟವಾಗಬಹುದು. ಆದಿಶೇಷ ಯಾರೋ, ಅವನಿಗೆ ವರ್ಣನೆ ಕಷ್ಟವೋ ಸುಲಭವೋ ಯಾರು ಬಲ್ಲರು, ಹೇಳುವುದು ಹೇಗೆ? ಕಾಲನ್ನೂ ಎಕ್ಕಡವನ್ನೂ ಹಾಗೇ ಈಜಿಕೊಂಡು ಈಜಿಕೊಂಡು ಮುಂದೆ ನಡೆಯಬೇಕೆಂದು ಎಷ್ಟು ಹೆಚ್ಚಾಗಿ ಪ್ರಯತ್ನಪಟ್ಟರೆ, ಅವು ಅಷ್ಟು ಅಷ್ಟೂ ಹಿಂದುಹಿಂದಕ್ಕೆ ಎಳೆಯಲು ಪ್ರಾರಂಭಮಾಡುವುವು. ನಾನು ಮುಂದಕ್ಕೆ ಎಳೆಯುವುದು – ಅವು ಹಿಂದಕ್ಕೆಳೆಯು ವುದು....ಉಂಹ್! ಮೂರ್ತಿ ಕಣ್ಣಿಗೆ ಇದೂ ಬಿದ್ದಿತು. ಅವರು ನನ್ನ ಗೋಳು ಹೊಯ್ದುಕೊಳ್ಳುವುದಕ್ಕೇ ಹುಟ್ಟಿದ್ದಾರೆ. ನಿಮಗೆ ಮರ್ಯಾದೆ ಇರುವ ಯಾವ ಜಾಗಕ್ಕಾದರೂ ಅವರನ್ನು ಕರೆದುಕೊಂಡು ಹೋದರೆ, – ಅವರು ದೊಡ್ಡವರು, ನಾನು ಅವರನ್ನು ಕರೆದುಕೊಂಡು ಹೋಗುವುದು ಎಂದರೇನು? ನಾವಿಬ್ಬರೂ ಜೊತೆಯಲ್ಲಿರುವ ಕಡೆ ಎನ್ನುತ್ತೇನೆ – ನೀವು ಬಹಳ ಹುಷಾರಾಗಿರಬೇಕು. ಇಲ್ಲವಾದರೆ ಬಹುಕಷ್ಟ, ಬಹುಕಷ್ಟ. ಅವರ ಬಾಯಿ ಮುಚ್ಚಿಸುವುದು ನಾಲ್ಕು ಮುಖದ ಬ್ರಹ್ಮನಿಗೂ ಸಾಧ್ಯವಿಲ್ಲ.

'ಏನ್ರಿ, ನಿಮ್ಮವಸ್ಥೆ ; ಹಿಂದಕ್ಕೆ ಹಿಂದಕ್ಕೇ ಹೋಗುತ್ತಿದ್ದೀರಿ' ಎಂದರು.

ನಾನು – ನೀವು ನಡೀರಿ ಮುಂದೆ. ನಿಧಾನವಾಗಿ ಬರುತ್ತೇನೆ. ಇನ್ನೇನು ಗುಡಿ ಮುಂದಿನ ರಸ್ತೆಗೆ ಬಂದೆವಲ್ಲ.

ಮೂರ್ತಿ – ಏನಾಯಿತು ಹೇಳಬಾರದೆ?

ನಾನು ಅವರ ಭುಜ ಹಿಡಿದುಕೊಂಡು (ಅವರು ನನಗಿಂತಲೂ ಬಹಳ ಎತ್ತರವಾದವರು) ಮೆಲ್ಲಗೆ 'ಚಪ್ಪಲಿ ಉಂಗುಷ್ಟ ಕಿತ್ತು ಹೋಯಿತುರೀ ತಕರಾರು ಮಾಡುತ್ತಾ ಇದೆ' ಎಂದೆ.

ಮೂರ್ತಿ – ಏನು ಮಹಾಪ್ರಮಾದ, ಕೈಗೆ ತಕ್ಕೊಳ್ಳಿ. ಹೊತ್ತುಕೊಂಡು ನಡೀರಿ. ಕಿವಿಗೆ ತಗುಲಿ ಹಾಕಿಕೊಳ್ಳಿ. ನಿಮಗೆ ಹಾಗೆ ಆಗಬೇಕು. ಅವರು ಕಪ್ಪೆ ತುಳಿದಾಗ ನೀವೇಕೆ ಹಾಗೆ ನಗಬೇಕು?

ನನಗೂ ಹಾಗೆಯೇ ಅನ್ನಿಸಿತು. ದೊಡ್ಡವರೆಂದು ಸುಮ್ಮನೆ ಮರ್ಯಾದೆಯಿಂದ ನಡೆದುಕೊಳ್ಳದೆ ಆಗ ಅವರನ್ನು ನೋಡಿ ನಕ್ಕದ್ದಕ್ಕಾಗಿ ದೇವರು ಅಲ್ಲೇ ಧರ್ಮ ತೋರಿಸಿ ತಕ್ಕ ಶಾಸ್ತಿ ಮಾಡಿಸಿದ – ಎಲ್ಲ ತಕ್ಷಣ ಫಲಗಳು.

ನಾನು – ನಿಮ್ಮ ದಮ್ಮಯ್ಯ ಸುಮ್ಮನೆ ಇರಿ ಅಪ್ಪ ; ಯಜಮಾನರಿಗೆ ಕೇಳಿಸೀತು. ಇನ್ನೆಲ್ಲಾ ಹಾಸ್ಯ ಮಾಡುತ್ತಾರೆ.

ಹೇಳಿದ ಮಾತು ಅವರು ಇಷ್ಟಾದರೂ ಕೇಳುತ್ತಾರೆಯೆ? ನಿಮಗೆ ಭ್ರಾಂತಿ .... ಕಾಲಿನದನ್ನು ಕೈಗೆ ತೆಗೆದುಕೊಂಡದ್ದಾಯಿತು.

ಮೂರ್ತಿ – ಇನ್ನಾದರೂ ಬೇಗ ಬೇಗ ಬನ್ನಿ.

ನಾನು – ತಾಳ್ರಿ ಸ್ವಲ್ಪ; ಅಲ್ಲೇನು ಕೊಳ್ಳೆ ಹೋಗೋದು, ಹೋಗೋಣ.

ಮೂರ್ತಿ – ನಿಮ್ಮ ಸಂಕೋಚ ನಿರ್ವಾಹವಿಲ್ಲ ; ಪ್ರಪಂಚಕ್ಕಿಲ್ಲದ ಮರ್ಯಾದೆ ನಿಮಗೆ ಬಂದಿದೆಯೆ? ರೀ, ವೆಂಕಟೇಶಯ್ಯ ಇವರ ಅವಸ್ಥೆ ನೋಡಿ. ಎಕ್ಕಡ ಕೈಯಲ್ಲಿ ಹಿಡಿದುಕೊಂಡು ಬರೋದಕ್ಕೆ ಅವಮಾನವಂತೆ – ಇನ್ನು ಮೇಲೆ, ಆ ತಲೆ ದಪ್ಪವಾಗಿದೆ ಅಂತ ಹೊರಕ್ಕೆ ಬರುವಾಗ ಎಲ್ಲಾದರೂ ಅದನ್ನು ಎತ್ತಿಟ್ಟು ಬನ್ನಿ, ಹಾಗಾದರೆ – ಈ ಕತ್ತಲಿನಲ್ಲಿ ಎಕ್ಕಡವನ್ನು ತಲೇ ಮೇಲೆ ಇಟ್ಟುಕೊಂಡರೆ ತಾನೆ ಯಾರು ನೋಡಿ ನಗುವವರು?

ಯಾವುದು ಸಂಭವಿಸಕೂಡದೆಂದು ಅಷ್ಟು ಪ್ರಯತ್ನ ಮಾಡಿದ್ದೆನೊ ಅದು ನಡೆದೇ ಹೋಯಿತು. ಮುಖ ಜೋಲುಬಿತ್ತು. ಯಾವುದು ಆಗಬೇಕೊ ಅದು ಆಗಿಯೇ ತೀರಿತು.

ಯಾರು ಇದ್ದರೇನು? ಯಾರು ಇಲ್ಲದಿದ್ದರೇನು? ಕೆಲವು ಕೆಲಸಗಳನ್ನು ಮಾಡಲು ನಮ್ಮ ಮನಸ್ಸು ಸಂಸ್ಕಾರವಶಾತ್ ಯಾವಾಗಲೂ ಹಿಂಜರಿಯುತ್ತದೆ. ಏನು ಮಾಡುವುದು ಎಂದು ಯೋಚನೆ ಮಾಡಿ ನೋಡಿದೆ. ಎಕ್ಕಡವೂ ತುಂಬಾ

ಹಳೆಯದಾಗಿತ್ತು. ಆ ದಿನದ ಪ್ರಯಾಣದಿಂದ ಕೆಸರಿನಿಂದ ಇನ್ನೂ ಕೆಟ್ಟುಹೋಗಿತ್ತು. ಎರಡು ಮೂರು ದಿನಗಳವರೆಗೂ ಅದನ್ನು ಬಿಸಿಲಿನಲ್ಲಿ ಒಣಗಿಸಿ, ಎಣ್ಣೆ ಗಿಣ್ಣೆ ಹಾಕಿ ಮಾಲಿಸು ಮಾಡಿದ ಹೊರತು ಅದು ದಾರಿಗೆ ಬರುವ ಹಾಗೆ ಇರಲಿಲ್ಲ. ಮರುದಿನವೆಲ್ಲ ಕಾಗದವಲ್ಲಿಯೊ, ಬಟ್ಟೆಯಲ್ಲಿಯೊ ಸುತ್ತಿಟ್ಟು, ಕೈಲಿ ಹಿಡಿದುಕೊಂಡು ಬೆಂಗಳೂರಿಗೆ ಹೋಗಿ ಮನೆ ಸೇರಿದ ಮೇಲೆ ತಾನೆ ಅದಕ್ಕೆ ಆ ಉಪಚಾರಗಳನ್ನೆಲ್ಲ ನಡಸಬೇಕಾದರೆ! ನಮ್ಮನ್ನೇ ಸರಿಯಾಗಿ ನೋಡಿಕೊಳ್ಳುವವರಿಲ್ಲ; ಇನ್ನು ಆ ಹಳೆಯ ಎಕ್ಕಡವನ್ನು ನೋಡಿಕೊಳ್ಳುವರು ಯಾರು? – ಎಂದು ಯೋಚಿಸಿದೆ. ಮನಸ್ಸಿನಲ್ಲಿ ಆಗ ನಡೆದ ಚರ್ಚಾ ವಿವಾದಗಳನ್ನೂ ಯುಕ್ತಿಯ ದ್ವಂದ್ವಯುದ್ಧವನ್ನೂ ಯಾರಾದರೂ ಹೊರಗಿನವರ ಇದಿರಿಗೆ ನಡಸಿ ತೋರಿಸಿದ್ದರೆ ನನಗೆ ತರ್ಕಶಾಸ್ತ್ರದಲ್ಲಿ ಮಹಾಮಹೋಪಾಧ್ಯಾಯ ಪದವಿ ದೊರಕುತ್ತಿದ್ದಿತು. 'ಛೆ! ಎರಡು ರೂಪಾಯಿ ಕೊಟ್ಟು ಸರಿಮಾಡಿಸಿದರಾಯಿತು; ಬೇಡ, ಬೀಸಾಡಬೇಡ' ಎಂದು ಮನಸ್ಸು ಒಂದು ಸಲ ಬುದ್ಧಿ ಹೇಳುವುದು. 'ಇನ್ಯಾರಪ್ಪ, ಅದನ್ನು ಬೆಂಗಳೂರವರೆಗೂ ಹೊತ್ತುಕೊಂಡು ಹೋಗಿ ರಿಪೇರಿ ಮಾಡಿಸುವವರು! ಅದೂ ನಾಲ್ಕು ತಿಂಗಳು ಸೇವೆ ಮಾಡಿದೆ. ಅದರ ಸಾರವಯಸ್ಸೂ ಕಳೆದುಹೋಗುತ್ತ ಬಂದಿದೆ. ಹಳೆ ಎಕ್ಕಡಗಳ ಸಂರಕ್ಷಣೆಗೆ ಇನ್ನೂ ಯಾರೂ ಪಿಂಜರಾಪೋಲು ಏರ್ಪಡಿಸಿಲ್ಲ. ಹೋಗಲೇಳು. ಯಾವ ಯಾವುದಕ್ಕೆ ಎಷ್ಟೆಷ್ಟು ಋಣವೊ ಅಷ್ಟು ತೀರಿಸಿಕೊಂಡು ಹೋಗಲಿ' ಎಂದು ಇನ್ನೊಂದು ಸಲ ದುರ್ಮಂತ್ರ ಹೇಳುವುದು. ಕೊನೆಗೂ ದುರ್ಮಂತ್ರಿಗೇ ಜಯವಾಯಿತು. ಸ್ವಾಭಾವಿಕ ತಾನೆ! ಕೈ ಬೀಸಿಕೊಂಡು ಪಕ್ಕದಲ್ಲೇ ಬರುತ್ತಿದ್ದ ಮೂರ್ತಿ ಇದನ್ನೂ ಇನ್ನೊಂದು ದೊಡ್ಡ ಪ್ರಮಾದವಾಗಿ ಮಾಡುವರೆಂದು ತಿಳಿದು ಮೆಲ್ಲಗೆ ನನ್ನ ಬೆನ್ನುಕಡೆ ದಾರಿಯಲ್ಲಿ ಸಿಕ್ಕಿದ ಒಂದು ಕಲ್ಲುಬಂಡೆಯ ತುದಿಯಿಂದ ಎಕ್ಕಡಗಳನ್ನು ಆ ಕಡೆಗೆ ಜಾರಿಸಿಬಿಟ್ಟು ಮುಂದೆ ಧಾರಾಳವಾಗಿ ನಡೆದುಹೋದೆ. ಜಾಗ್ರತೆಯಲ್ಲಿಯೇ ದೇವಸ್ಥಾನವನ್ನು ಸೇರಿದೆವು.

ಮೊದಲು ಬಟ್ಟೆಗಳನ್ನು ಬದಲಾಯಿಸಿ ಸ್ವಲ್ಪ ವಿಶ್ರಮಿಸಿಕೊಂಡಾದ ಮೇಲೆ ಕೈಲಾದಷ್ಟು ಊಟ ಮಾಡಿ ಎಲ್ಲರೂ ಮಲಗಹೋದೆವು. ಮಧ್ಯಾಹ್ನ ಯಾತ್ರೆ ಹೊರಡುವುದಕ್ಕೆ ಮುಂಚೆಯೇ ವೆಂಕಟೇಶಯ್ಯನವರು ಮುದುಕಮ್ಮನವರಿಗೆ ಹೇಳಿ ಹೊರಟಿದ್ದರಂತೆ. ಇನ್ನೇನು ಮಲಗಬೇಕು. ಆಗ ಆಕೆ, ಐದು ಲೋಟಗಳ ತುಂಬ ಕೆಂಪಗೆ ಕಾಸಿ ಕೇಸರಿ, ಸಕ್ಕರೆ, ಬಾದಾಮಿ ಹಾಕಿ ಹದವಾಗಿದ್ದ ಹಾಲನ್ನು ತಂದು ಕೊಟ್ಟರು. 'ಭೇಷ್!' ಎಂದರು ರಾಯರು. 'ಶಹಬಾಸ್, ನಿಮಗೆ ಎಂಟು ಜನ ಸುಪುತ್ರರಾಗಲಿ, ವೆಂಕಟೇಶಯ್ಯ' ಎಂದರು ಯಜಮಾನರು. 'ಭಲೆ' ಎಂದುಕೊಂಡು ನಾನು ಮೂರ್ತಿ ಕಡೆ ನೋಡಿದೆ. ಅವರು ಲೋಟ ಕೈಲಿ ಹಿಡಿದುಕೊಂಡು ಕಣ್ಣು ಅರ್ಧ ಮುಚ್ಚಿಕೊಂಡು ಓರೆನೋಡುತ್ತ ಮೂತಿಯನ್ನೂ ಮೀಸೆಯನ್ನೂ ಸಂಕುಚಿಸಿ ಕೊಂಡು, ಈ ಯೋಚನೆ ಹೊಳೆದು ಹಾಗೆ ಏರ್ಪಾಡು ಮಾಡಿಸಿದವರಿಗೆ ಒಂದು ಜಹಗೀರಿ ಕೊಡಬಹುದು ಕಾಣ್ರಿ! – ಎಂದರು. ನಮ್ಮ ಕಾಲ ಪಾಪಿಷ್ಠರ ಕಾಲ.

ಐವತ್ತು ವರ್ಷಕ್ಕೆ ಹಿಂದೆ ಆಸ್ಥಾನಗಳಲ್ಲಿದ್ದವರು ಮಹಾಸ್ವಾಮಿಯವರಿಗೆ ಎಲ್ಲನ್ನ ಹೀಗೆ ಯಾರಾದರೂ ಮಾಡಿರೋರೆ ಒಂದು ಜಹಗೀರಿ ದೊರೆಯುವುದಕ್ಕೆ ಬೇತಾಡ ಬೇಕಾಗಿತ್ತೆ?

'ಎಲ್ಲ ಸರಿಯೆ. ಸ್ವಲ್ಪ ಕೇಸರಿ, ಸ್ವಲ್ಪ ಸಕ್ಕರೆ ಕಡಮೆ ಹಾಕಿ ಕಾಸಿರೋರೆ ಹಾಲು ಇನ್ನೂ ಎಷ್ಟು ರುಚಿಯಾಗಿರುತ್ತಿತ್ತೊ' ಎಂದು ವೆಂಕಟೇಶಯ್ಯನವರು ಹೇಳಿದರು.

"ನಾಲಗೇನ ಅಷ್ಟು ಸೂಕ್ಷ್ಮ ಮಾಡಿಕೊಂಡರೆ ಬದುಕೋದು ಹೇಗಪ್ಪ; ನೀವು ಬಿಡಿ, ಎಂಥ ಪದಾರ್ಥವನ್ನು ತಂದುಕೊಟ್ಟರೂ 'ತೊಂಗು, ತೊಸಗು' ಎಂದು ಹೇಳುತ್ತೀರಿ. ಇದು ನೋಡಿ, ಸಾರ್, ಒಳ್ಳೆ ಖೋವಾಕ್ಕೆ ಕಾಸೋ ಹಾಗೆ ಕಾಸಿ ಮಸಾಲೆ ಹಾಕಿದ್ದಾರೆ; ಇದನ್ನೇ ಇವರು ಹೀಗೆನ್ನುತ್ತಿದ್ದಾರೆ" ಎಂದರು ರಾಯರು.

ವೆಂ – ಹಾಗಾದರೆ, ಈಗ ನಾನು ಹೇಳಿದ್ದು ಸುಳ್ಳೊ?

ರಾ – ನೀವು ಸುಳ್ಳಾಡೀರ? ನಿಶ್ಚಯವೇ ಅನ್ನಿ. ಹೋಗಲಿ ಬಿಡಿ. ಇನ್ನು ಕುಡಿವ ಹಾಲನ್ನು ಖೋವಾಗೆ ಕಾಸುವ ಹಾಗೆ ಕಾಸಬಾರದು. ಕೆದಕಿ ಪ್ರಯೋಜನವಿಲ್ಲ.

ಸತ್ಯದ ಮೇಲೆ ಬೇರೆ ಪ್ರಮಾಣವೆಲ್ಲಿಯದು ? ಇದ್ದರೂ ನಿಲ್ಲುವುದೊ? ಎಲ್ಲರೂ ಅವರು ಹೇಳಿದುದನ್ನು ಒಪ್ಪಿಕೊಳ್ಳಬೇಕಾಯಿತು. ವೆಂಕಟೇಶಯ್ಯನವರ ಕೆಲಸವೆಲ್ಲ ಹೀಗೇ. ಅವರು ಹೆಚ್ಚು ಮಾತಿನವರಲ್ಲ. ಒಂದು ಮಾತಿನಲ್ಲಿ ಕೆಲಸವಾಗುವುದಾದರೆ ಇನ್ನರ್ಧಮಾತು ಹೆಚ್ಚಾಗಿ ಆಡರು. ಬರೆವಣಿಗೆಯಲ್ಲಿಯೂ ಹಾಗೆಯೆ. ಯೂಬರ್ಟಿನ ಹಾಗೆ: ಒಂದು ಪುಸ್ತಕದ ಸಾರವನ್ನೆಲ್ಲ ಒಂದು ಪುಟ ಪ್ರಮಾಣಕ್ಕಿಳಿಸಬೇಕು. ಒಂದು ಪುಟದ ವಿಷಯವನ್ನೆಲ್ಲ ಒಂದು ವಾಕ್ಯದಲ್ಲಿ, ಒಂದು ವಾಕ್ಯದಲ್ಲಿ ಅಡಗಿರುವ ಅರ್ಥವನ್ನೆಲ್ಲ ಒಂದು ಮಾತಿನಲ್ಲಿ ಹೇಳಿ ಮುಗಿಸಿಬಿಡಬೇಕು. ಅವರ ಶೈಲಿ ಅಷ್ಟು ಅಡಕ. ವಿಸ್ತಾರಮಾಡುವುದೆಂದರೆ ಅವರಿಗೆ ಬೇಸರ. ಅವರು ಮಾಡಿದ ಕೆಲಸದಲ್ಲಿ ಒಂದು ಚೂರು ದೋಷವಿರದಂತೆ ಮಾಡುವರು. ಇಲ್ಲ, ಮಾಡಿಸುವರು. ಅವರ ಬಲಗೈ ಮಾಡಿದುದು ಅವರ ಎಡಗೈಗೆ ತಿಳಿಯದಾಗುವುದು. ನಾವಂತೂ ಬಾಯಿ ಚಪ್ಪರಿಸುತ್ತ, ತುಟಿಗಳನ್ನು ಸವರಿಕೊಳ್ಳುತ್ತ ಅಂದಿನ ಕಷ್ಟಗಳಿಂದ ನಮ್ಮನ್ನು ಪಾರುಮಾಡಿಸಿದುದಕ್ಕೂ ಈ ಸುಖ ತಂದುಕೊಟ್ಟದ್ದಕ್ಕೂ ದೇವರಿಗೆ ಅನೇಕಾನೇಕ ವಂದನೆಗಳನ್ನು ಸಮರ್ಪಿಸಿ, ಅವನ ಮಹಿಮೆಯನ್ನು ಶ್ಲಾಘಿಸುತ್ತ ಪಂಪಾಪತಿಯ ಸನ್ನಿಧಾನದಲ್ಲಿ ಪವಳಿಸಿ ನಿದ್ರಾವಶರಾದೆವು. ಅವತ್ತು ನನಗೆ ತಿಳಿಯಿತು, – 'ಕಷ್ಟಪಟ್ಟರೆ ಸುಖವುಂಟು' ಎಂದು. ಕೆಸರಿನಲ್ಲಿಯೂ ಮಳೆಯಲ್ಲಿಯೂ ನಡೆದು ಹಸಿದು ಬಂದವರಿಗೆ ಕೇಸರಿ ಹಾಲು ಸಿಕ್ಕುತ್ತದೆ ಎಂದು ಆ ದಿನ ಸಿದ್ಧಾಂತವಾಯಿತು.

೩

ರಾತ್ರಿಯೆಲ್ಲ ಕನಸುಗಳು : ಸೂರ್ಯಾಸ್ತಮಯ ಸಮಯ. ಮೇಳ ತಾಳ ದೀವಟಿಗೆಯವರು ಬೆಳ್ಳಿಯ ಕೋಲಿನವರು ಮುಂದೆ ಹೋಗುತ್ತಿದ್ದಾರೆ. ಕೊಡೆಗಳನ್ನು ಹೊತ್ತು ನಡುವಿಗೆ ಧೋತ್ರ ಸುತ್ತಿ ಸಡಿಲವಾದ ಕೂದಲ ಗಂಟನ್ನು ತಲೆಯ ಮೇಲೆ ಹಾಕಿಕೊಂಡು ಭುಜದ ಮೇಲೆ ಒದ್ದೆಯ ಚೌಕವನ್ನು ಹಾಕಿಕೊಂಡು ವೈದಿಕರು ಒಟ್ಟಿಗೆ ಹೊರಟಿದ್ದಾರೆ. ಒಂದು ಬಂಗಾರದ ಕೊಡ, ಎರಡು ಬೆಳ್ಳಿಯವು ; ಚೊಕ್ಕಟವಾಗಿ ತೊಳೆದು ಮಿರುಗುತ್ತಿರುವ ತಾಮ್ರದವು ನಾಲ್ಕು. ದೀವಟಿಗೆಯವನ ಪಕ್ಕದಲ್ಲಿ ಬಲಗಡೆ ದಾಸರಿಯೊಬ್ಬನು ಹಳದಿ ನಾಮವೊಂದನ್ನಿಟ್ಟು ಕೈಯಲ್ಲಿ ಜಾಗಟೆ ಬಡಿಯುತ್ತ ಆಗಾಗ್ಗೆ ಶಂಖವೂದುತ್ತ ಹೋಗುತ್ತಿದ್ದಾನೆ. ಬ್ರಾಹ್ಮಣರು ಬಾಯಿಂದ ವೇದಗಳನ್ನು ಹೇಳುತ್ತ ಗುಡಿಯ ಉತ್ತರದ್ವಾರದಿಂದ ಹೊರಟು ನದಿಗೆ ಹೋಗುತ್ತಿದ್ದಾರೆ. ಸ್ವಲ್ಪ ಮುಂದೆ ಹಾಗೇ ಹೋದರೆ ಅಲ್ಲಿ ಶಾಂತವಾಗಿ ಹರಿಯುತ್ತಿರುವ ನದಿ. ಸೋಪಾನದಿಂದ ಕೆಳಗಿಳಿದು ಬಂಡೆಯ ಬಸವನಿರುವ ಸ್ಥಾನದವರೆಗೂ ಒಬ್ಬರಿಬ್ಬರು ಮುಂದುವರಿದಿದ್ದಾರೆ. ಎಡಬಲಕ್ಕೆ ಎರಡು ಫರ್ಲಾಂಗು ದೂರದವರೆಗೂ ನದಿಯ ಪ್ರಸರವೂ ಪ್ರವಾಹವೂ ಕಾಣುತ್ತಿವೆ. ನದಿಯ ಎರಡೂ ಕಡೆ ಬೆಟ್ಟಗಳಾದುದರಿಂದ ಇಳಿಸೂರ್ಯನ ಕಿರಣಗಳು ಪೇಲವವಾಗಿವೆ. ನದಿಯ ವಕ್ಷ ಮಾತ್ರ ದೀಪ್ತ. ಸಂಧ್ಯಾರಾಗ ಮೂಡಲಾಕಾಶಕ್ಕೆ ಹರಡಿ ಎಲ್ಲರ ಮೈಕೈಗಳನ್ನೂ ಪಾತ್ರೆ ಪದಾರ್ಥಗಳನ್ನೂ ಗರ್ಭಗುಡಿಯ ಚಿನ್ನದ ಗೋಪುರವನ್ನೂ ಮಂಟಪಗಳ ಬೆಳ್ಳಿಯ ಮೇಲುಹೊದಿಕೆಯನ್ನೂ ನದಿಯ ನೀರನ್ನೂ ನಾನಾ ಬಣ್ಣಗಳಿಂದ ಅಲಂಕರಿಸಿದೆ. ಬ್ರಾಹ್ಮಣರು ನೀರಿಗೆ ಪೂಜೆ ಮಾಡಿ, ತುಂಗಭದ್ರೆಯ ಜೊತೆಗೆ ಸಂಧ್ಯಾರಾಗವನ್ನೂ ತುಂಬಿಕೊಂಡು ದಡಕ್ಕೆ ಬಂದು, ಬಂದ ಕ್ರಮದಲ್ಲಿಯೇ ಹೊರಡಲುದ್ಯುಕ್ತರಾಗಿದ್ದಾರೆ. ದಾಸರಿ ಭುಜಕ್ಕೆ ತಗುಲಿಹಾಕಿಕೊಂಡಿದ್ದ ಭಾಂಕಿ ತುತೂರಿಗಳನ್ನು ಊದುತ್ತಿದ್ದಾನೆ. ಇನ್ನೊಬ್ಬನು ಗರುಡಗಂಬ ಒಂದು ಕೈಯಲ್ಲಿ ಹಿಡಿದು ಇನ್ನೊಬ್ಬನು ಗಂಟೆ ಜಾಗಟೆ ಹೊಡೆಯುತ್ತಿದ್ದಾನೆ. ನಾಗಸ್ವರದವರೂ ಡೋಲಿನವರೂ ಬಹು ಉಲ್ಲಾಸದಿಂದ ವಾದ್ಯಗಳನ್ನು ಬಾಜಿಸುತ್ತಿದ್ದಾರೆ. ಮೆರವಣಿಗೆಯು ಕ್ರಮವಾಗಿ ದೇವಸ್ಥಾನಕ್ಕೆ ಬರುವುದು. ಒಳಗೆ ದೇವರ ಸಾನ್ನಿಧ್ಯದಲ್ಲಿ ತೇಜಸ್ವಿಯಾದ ವೃದ್ಧ ಅರ್ಚಕನೊಬ್ಬನು 'ಬೇಗ ಬನ್ನಿರಪ್ಪ ; ಸವಾರಿ ಈ ದಿನ ಜಾಗ್ರತೆಯಾಗಿ ಬರುವುದೆಂದು ಅರಮನೆಯಿಂದ ಹೇಳಿಕಳುಹಿಸಿದ್ದಾರೆ' ಎನ್ನುತ್ತಾನೆ.

ಈ ದೃಶ್ಯ ಇಲ್ಲಿಗೇ ನಿಂತುಹೋಯಿತು. ಪುನಃ ಸಹಸ್ರಾರು ಪುರಜನರು ಹೊರ ಮಂಟಪದಲ್ಲಿ ಮಡಿಯುಟ್ಟು ನಿಂತಿದ್ದಾರೆ. ಎಲ್ಲೆಲ್ಲಿಯೂ ಹಿತ್ತಾಳೆಯ ಹಣತೆಗಳಲ್ಲಿ ದೀಪಗಳು ಉರಿಯುತ್ತಿವೆ. ಹೊರಬಾಗಿಲಲ್ಲಿ ನಿಂತಿರುವವರಿಗೂ ದೇವರ ದರ್ಶನವಾಗುವಂತೆ, ನೇರವಾಗಿ ನಡುವೆ ದಾರಿ ಬಿಟ್ಟಿದೆ. ಗರ್ಭಗುಡಿಯಿಂದ ಹೂ, ಹಣ್ಣು, ನೈವೇದ್ಯ, ದಶಾಂಗ, ಗುಗ್ಗುಳ, ಸಾಂಬ್ರಾಣಿಗಳ ವಾಸನೆ ಬರುತ್ತಿದೆ. ದೇವರಿಗೆ

ಅಭಿಷೇಕ ಮುಗಿದು ಎಲ್ಲರೂ ಎದುರೆದುರು ನೋಡುತ್ತಿದ್ದಾರೆ. ಇಷ್ಟರಲ್ಲಿ ದೂರದಿಂದ ಶಂಖ ತುತೂರಿಗಳ ಬಾಜನ ಕೇಳಿಸಿತು. ಉತ್ತರಕ್ಷಣದಲ್ಲಿ ಮಹಾಸ್ವಾಮಿಯವರ ಸವಾರಿಯೂ ಚಿತ್ತೈಸಿತು. ಗಂಡಾನೆಯೆರಡು ಸೊಂಡಿಲಲ್ಲಿ ಎರಡೂ ಕಡೆ ಚಾಮರ ಹಿಡಿದು ಬೀಸಿ ಹಿಂದೆ ಹಿಂದೆ ಸರಿಯುತ್ತಿವೆ. ಬಂಗಾರದ ಪಲ್ಲಕ್ಕಿಯಲ್ಲಿ, ಮಗುಟವನ್ನುಟ್ಟು ಕಿಂಕಾಪಿನ ಮೇಲುದನ್ನು ಹೊದ್ದು ರತ್ನಕುಂಡಲ ಧರಿಸಿದ್ದ ಆಜಾನುಬಾಹು ಸಾರ್ವಭೌಮ ಶ್ರೀಕೃಷ್ಣದೇವರಾಯನು ದೇವರ ದರುಶನಕ್ಕಾಗಿ ಬರುತ್ತಿದ್ದಾನೆ. ಪಕ್ಕದಲ್ಲಿ ಬಂಗಾರದ ಕಟ್ಟಿಗೆಯವರೂ ಶ್ವೇತಛತ್ರಿಯವರೂ ನಡೆದು ಬರುತ್ತಿದ್ದಾರೆ. ವಂದಿಮಾಗಧರು ಬಿರುದಾವಳಿಗಳನ್ನು ಹೊಗಳುತ್ತ ಬನಾತಿನ ವಸ್ತ್ರ ಬೀಸುತ್ತ ದೇವಸಾನ್ನಿಧ್ಯಕ್ಕೆ ಪ್ರಭುವನ್ನು ಕರೆದುಕೊಂಡು ಹೋಗುತ್ತಿದ್ದಾರೆ. ವಾದ್ಯಗಳು ಮೊಳಗುತ್ತಿವೆ ; ವೇದ ಘೋಷಿಸುತ್ತಿದೆ; ಗಂಟೆಗಳು ಧ್ವನಿಗೈಯುತ್ತಿವೆ; ಗಾಯಕರು ಗಾಯನಮಾಡುತ್ತಿದ್ದಾರೆ. ಈಗ ತಾನೇ ಅಭ್ಯಂಜನ ಮಾಡಿಕೊಂಡು ಬಂದಿರುವಂತಿರುವ ಜೇನುತುಪ್ಪದಲ್ಲಿ ನೆನೆಸಿಟ್ಟು ಹೊಸದಾಗಿ ಹೊರಗೆ ತೆಗೆದಂತಿರುವ ಮಹಾರಾಯನ ಮುಖದ ಮೇಲೆ ದೀಪಗಳ ಕಾಂತಿ ಬಿದ್ದು ಬೆಳಗುತ್ತಿದೆ. ವಿರೂಪಾಕ್ಷನಿಗೆ ಮಹಾಮಂಗಳಾರತಿ ಬಹುವಿಜೃಂಭಣೆಯಿಂದ ನಡೆಯುತ್ತದೆ. ಮುಂದೆ ಮಂತ್ರಪುಷ್ಪ; ರಾಜಾಶೀರ್ವಾದ; ಪ್ರಸಾದ ವಿನಿಯೋಗ. ಎಲ್ಲಿಯೂ ಸದ್ದುಗದ್ದಲವಿಲ್ಲ. ಹತ್ತಾರು ಜನ ಹತ್ತಾರು ಕಡೆಯಿಂದ ಪ್ರಸಾದಗಳನ್ನು ಹಂಚುತ್ತಿದ್ದಾರೆ. ಒಂದು ಕೂದಲೆಳೆ ಕೆಳಗೆ ಬಿದ್ದರೆ ಆ ಶಬ್ದವನ್ನು ಕೂಡ ಅಲ್ಲಿ ಕೇಳಲು ಸಾಧ್ಯ. ಯಥಾಕ್ರಮದಲ್ಲಿ ಮೊದಲು ಪ್ರಭು, ತರುವಾಯ ಮಂತ್ರಿಪ್ರಮುಖರು, ಉಳಿದವರು – ಹೀಗೆ ಮನೆಗಳ ಕಡೆ ಹೊರಟುಹೋಗುವರು. ದೇವಸ್ಥಾನದಲ್ಲಿ ದೇವರಿಗೆ ಉತ್ತರಪೂಜೆ ಉಪಚಾರ ಶಯನೋತ್ಸವಗಳು ನಡೆದು ಗುಡಿಯ ಬಾಗಿಲನ್ನೂ ಹಾಕುವರು.....

ರಾತ್ರಿಯೆಲ್ಲ ಹೀಗೆಯೇ – ಕನಸು ನಿಲ್ಲಲೇ ನಿಲ್ಲವು; ಪರಂಪರೆಯಾಗಿ ಬರುವುವು. ಅಷ್ಟು ದಣಿವಾಗಿದ್ದ ಆ ದಿನ ಕೂಡ ನಿದ್ರೆ ಬರಬಾರದೆ! ಒಂದು ಕಳೆದ ಮೇಲೆ ಸ್ವಲ್ಪ ಎಚ್ಚರವಾಗಿ ಪುನಃ ಜೊಂಪುಹತ್ತಿ ಕಣ್ಣು ಮುಚ್ಚುವುದು. ಉತ್ತರಕ್ಷಣದಲ್ಲಿಯೇ ಇನ್ನೊಂದು ಕನಸಾಗುವುದು. ದೇವಸ್ಥಾನದಿಂದ ಹೊರಟ ರಾಜ ರಾಣಿಯರ ಸವಾರಿ ಊರಿನೊಳಕ್ಕೆ, ಅರಮನೆಯೊಳಕ್ಕೆ ಹೋಗುವುದು. ಈ ಕನಸುಗಳಿಗೆ ಸಂಗತ, ಸಂಬದ್ಧತೆಗಳ ಚಿಂತೆಯೇ ಇಲ್ಲ; ಕಾಲದೇಶಗಳ ನಿಯಮ ಇಲ್ಲ. ಹಗಲು ನಾಲ್ಕು ಗಂಟೆಯ ಸಮಯ. ಈಗ ರಾಣಿಯರ ಅಂತಃಪುರದ ಚಿತ್ರಗಳು. ಅಲ್ಲಿ ಅವರ ವಿಹಾರ ವಿಲಾಸ, ದರ್ಪ ಅಹಂಕಾರ, ಅಸೂಯೆ ಕೃತ್ರಿಮ, ವಾದ ವಿವಾದ, ಅವಹೇಳನ ತಿರಸ್ಕಾರ. ಇಲ್ಲವಾದರೆ ಪಗಡೆ, ಅಥವಾ ಚದುರಂಗದ ಆಟ. ಅದೂ ಇಲ್ಲವೆ, ಜಂತ್ರದ ಬೊಂಬೆಗಳೊಡನೆ ಗೃಹಜೀವನದಾಟ. ವೀಣೆ, ರುದ್ರವೀಣೆ, ಸಾರಂಗಿ, ಕೊಳಲು ನುಡಿಸುತ್ತಿರುವ ಸತಿಯರು. ಎಲ್ಲರೂ ರಾಜೋದ್ಯಾನ ಕುಸುಮಗಳು-ಅಪ್ಸರೆಯರು ; ಪ್ರತಿಯೊಬ್ಬಳೂ ಒಬ್ಬ ಚಕ್ರವರ್ತಿಯನ್ನು ಒಲಿಸಿ ಆಳಬಲ್ಲ ರಾಣಿ. ಕಂಠವೆತ್ತಿ ಸರಸವಾಗಿ, ಮೃದುವಾಗಿ

ತಾನ ಲಯ ಸಮನ್ವಿತವಾಗಿ ಅವರು ಹಾಡುವ ಹಾಡುಗಳು : ಪ್ರಿಯೆ ಪ್ರಿಯನನ್ನು ಕುರಿತು ಇಲ್ಲಿ ಉತ್ಕಂಠಿತೆಯಾಗಿ ಹಾಡುತ್ತಿರುವಳು : ವಿರಹದಾಗ ಒಂದು ಸಲ, ವಿಭವದಾಗ ಒಂದು ಸಲ. ಅಲ್ಲಿ ಆ ಕಡೆ ಸಂತೋಷದ ಸಂಭ್ರಮದಲ್ಲಿ ಮೈಮರೆತು ಹಾಡುವ ಗೀತೆ ಉದ್ಗೀತೆಗಳು; ಹಾಡುಹಾಡುತ್ತ ಎದುರಿಗಿದ್ದ ಯಾರನ್ನೊ ಓರೆನೋಟದಿಂದ ನೋಡಿದಂತೆ ನೋಡಿ, ಅವರನ್ನು ಒಲಿಸಿಕೊಳ್ಳಲು ಹಾಡುವ ಹಾಡು. ಇರುವವರನ್ನು ನೋಡಿಯೂ ನೋಡದಂತೆ ನಟಿಸಿ, ತಲೆಬಾಗಿಸಿ, ಕೊರಳ ಸರ ಕಂಠೀಹಾರವನ್ನು ಸರಿಮಾಡಿಕೊಳ್ಳುತ್ತ ಹಾಡಿನ ಚರಣಗಳಿಗೆ ಸ್ವಕಪೋಲಕಲ್ಪಿತ ಸ್ವರಮೇಳ ಸಾಹಿತ್ಯಗಳನ್ನು ಸೇರಿಸಿ ಹಾಡುವರು; ತೊಡೆಗಳ ಮೇಲೆ ಮೊಳಕೈ ಊರಿ, ಪೂರ್ಣಿಮಾಚಂದ್ರನಂತೆ – ವಸಂತ ಪಾತ್ರದಲ್ಲಿ ಬಿರಿದು ಅರಳುತ್ತಿರುವ ಗುಲಾಬಿಯಂತೆ – ಇರುವ ಮುಖಗಳನ್ನು ಬಾಗಿಸಿ ಊರೆ ನಿಲ್ಲಿಸಿಕೊಂಡು ನಿಡುಸುಯ್ಯುವವರು; ಎಷ್ಟು ವಿಧವಾಗಿ ದೂರ ತಳ್ಳಿದರೂ ಮೇಲೆ ಮೇಲೆ ಉರುಳಿಬಿದ್ದು ಹಣೆ ಕಪೋಲಗಳ ಮೇಲೆ ಹರಿದು ಸುಳಿದಾಡಿ ಹಾರಾಡಿ ಹಾವಳಿಮಾಡುತ್ತಿರುವ ಚಿಕುರದಾಮವನ್ನು ಕೈ ಬೆರಳಿನಿಂದ ನೇವರಿಸಿ ತಿದ್ದಿ, ಪುನಃ ನಿಡುಸುಯ್ಯುತ್ತ ಕುಳ್ಳಿರುವ ಕಾಂತೆಯರು; ಹಾಗೇ ಬೆಚ್ಚಿಬಿದ್ದು ಮುಖವೆತ್ತಿ ನೋಡಿ ಏನೂ ಕಾಣದಿದ್ದರೂ ಏನನ್ನೊ ಕಂಡಂತೆ ಸಂತೋಷ ವನ್ನನುಭವಿಸುತ್ತ ತಮ್ಮ ಸುಲಿಪಲ್ ಸಾಲುಗಳ ಸೌಂದರ್ಯವೂ ಕೆಂದುಟಿಗಳ ಕುಂದಣದಲ್ಲಿ ಖಚಿತವಾಗಿರುವ ಬಾಯ್ ಚೆಲುವೂ ಹೊರದೋರುವಂತೆ, ಆದರೆ ಅರೆಕ್ಷಣದಲ್ಲೆ ಆರಿ ಮಾಯವಾಗುವಂತೆ – ನಗುವ ಮುಗುಳ್‌ನಗೆ. ಇನ್ನೊಂದೆಡೆ ಸುಪ್ಪತ್ತಿಗೆಗಳ ಮೇಲೆ ಅರ್ಧಶಾಯಿತರಾಗಿ, ದಿಂಬಿಗೆ ತೋಳ್ಗಳನ್ನು ಅನುವಡಿಸಿ, ತಾಂಬೂಲರಾಗದಿಂದ ರಂಜಿತವಾದ ಅಧರವನ್ನೂ ನಾಲ್ಕೂ ಕಡೆಯ ನಿಲುಗನ್ನಡಿಗಳ ಕಡೆ ಹಿಡಿದು ನೋಡಿ ನೋಡಿ ವಿನೋದಪಡುತ್ತಿರುವ ಸುಂದರಿಯರು. ಇಲ್ಲಿ ಕಾಣುವ ಈಕೆ ಮಹಾರಾಜ್ಞಿಯಿರಬೇಕು. ಚೈತ್ರೋದ್ಯಾನದಲ್ಲಿ ತೆಳ್ಳನೆ ಎತ್ತರವಾಗಿ ಬೆಳೆದು, ಹಸುರು ಕೆಂಪು ಚಿಗುರುಗಳಿಂದ ಅಲಂಕೃತವಾಗಿ ಸರ್ವಾಂಗಸುಂದರವಾಗಿರುವ ವೃಕ್ಷವನ್ನು ಕುಸುಮಚಯ ಸಿಂಗರಿಸುವಂತೆ ಈಕೆಯ ಸಹಜ ಲಾವಣ್ಯವನ್ನು ರತ್ನಾಭರಣ ರಾಜಿ ರಂಜಿಸಿದೆ. ನಾನಾ ವಿಧದ ಪರಿಮಳಗಳಿಂದ ತುಂಬಿದ ಈ ಮಂದಿರ. ಆ ಕಡೆ ಈ ಕಡೆ, ತಲೆಯ ಹಿಂಭಾಗದಲ್ಲಿ ಬೀಸಣಿಗೆಯ ದಾಸಿಯರು. ಪಿಲ್ಲಿ, ಕಾಲುಂಗುರ ಸರಿಮಾಡುತ್ತ ಕಾಲ್ದೆಸೆಯಲ್ಲಿ ಕುಳಿತಿರುವ ನಳಿತೋಳ ಸುಂದರಿ ದಾಸಿಯೊಬ್ಬಳು. ಇತ್ತ ಮನ್ಮಥ – ರತಿಯರ ಪಟ; ಅತ್ತ ಕೃಷ್ಣ ಲೀಲಾವಿಲಾಸ. ಎಲ್ಲೆಲ್ಲಿಯೂ ತನ್ನ, ತನ್ನಿನಿಯ ಮಹಾರಾಜನ ತೈಲಚಿತ್ರಗಳು. ಕನಸು ಬೇರೆ ಮಹಲಿಗೆ ಹೋಗುವುದು.

ಅಲ್ಲಿ ಕೆಲವರು ವಸ್ತ್ರಾಭರಣಗಳನ್ನು ಧರಿಸುತ್ತಲೂ, ಮತ್ತೆ ಕೆಲವರು ಸುಗಂಧ ತೈಲಗಳಿಂದ ತಲೆಬಾಚಿಸಿಕೊಂಡು ಹೆರಳು ಹಾಕಿಸಿಕೊಳ್ಳುತ್ತಲೂ ವಿಧವಿಧವಾಗಿ ಸಲ್ಲಾಪ ಮಾಡುತ್ತ ಒಬ್ಬರನ್ನೊಬ್ಬರು ಹಾಸ್ಯಮಾಡಿಕೊಳ್ಳುತ್ತಿರುವರು. ಆ ಸಮಯದಲ್ಲಿ ಇನ್ನೊಬ್ಬಳು ಗಿಳಿಯ ಹತ್ತಿರಕ್ಕೆ ಹೋಗಿಯೊ ಶಾರಿಕೆಯನ್ನು ಕರೆದೊ, 'ನಮ್ಮ ಸಖಿಯ

ಮನಸ್ಸಿನಲ್ಲಿ ಇರುವುದನ್ನು ಹೇಳಿ ಬಿಡು ಮತ್ತೆ! ನಿನಗೆ ಮುತ್ತಿನ ಸರ ಹಾಕುತ್ತೇನೆ – ಹಣ್ಣು ಕೊಡುತ್ತೇನೆ – ಮುತ್ತು ಕೊಡುತ್ತೇನೆ' ಎನ್ನುವಳು. 'ಸಾಕು ಸುಮ್ಮನಿರೆ, ನಿನಗೆ ಯಾವಾಗಲೂ ಒಂದೆ' ಎಂದು ತುರುಬಿಗೆ ಹೂ ಮುಡಿಸಿಕೊಳ್ಳುತ್ತಿರುವ ಸುಂದರಿ ಹುಸಿ ಮುನಿಸಿನಿಂದ ಅವಳನ್ನು ಗದರಿಕೊಳ್ಳುವಳು. ಆ ಸಮಯಕ್ಕೆ ಸರಿಯಾಗಿ ಗಿಳಿ ಆಕೆಯ ಮಡಿಲಿನೊಳಕ್ಕೆ ಇಳಿದು ಬಂದು ಕುಳಿತು ಭುಜದ ಮೇಲಕ್ಕೆ ಹಾರಿನಿಂತು, ಆಕೆಯ ಕಪೋಲಕ್ಕೆ ತನ್ನೊಡಲನ್ನು ಒಡ್ಡಿ ಮುಖದಲ್ಲಿ ಮುಖವಿಟ್ಟು ಆಡುವುದು..... ಅಂತಃಪುರದ ಪಾರ್ಶ್ವದಲ್ಲಿಯೇ ತುಂಗಭದ್ರೆ ಹರಿಯುತ್ತಿದೆ. ರಾತ್ರಿ ಎಂಟು ಗಂಟೆಯ ಸಮಯ. ನದಿಯಲ್ಲಿ ಇಳಿಯಲು ಅಮೃತ ಶಿಲೆಯ ಸೋಪಾನವಿದೆ. ಸೋಪಾನವನ್ನೂ ನದಿಯನ್ನೂ ಸುತ್ತಣ ಜಗತ್ತನ್ನೂ ಬೆಳಗುವ ಶರತ್‌ಚಂದ್ರ ಮೇಲೆ ಓಲೈಸಿದ್ದಾನೆ. ನದಿಯ ಸಣ್ಣ ಸಣ್ಣ ಅಲೆಗಳಿಂದ ತಾಡಿತವಾದ ನೀರಿನಲ್ಲಿ ಅವನ ಬಿಂಬ ಚೆದರಿ, ಖಂಡಿಸಿ, ಸಾವಿರಾರಾಗಿ ಹೋಗುತ್ತಿದೆ. ಗಾಳಿ ಬೀಸುವುದು ನಿಂತ ಮೇಲೆ ಮತ್ತೆ ಶಾಂತವಾಗಿ ನೀರು ನಿಶ್ಚಲವಾಗಿ ನಿಲ್ಲುವುದು. ಈಗ ಚಂದ್ರತಾರಾಮಂಡಲ ಭೂರಂಗಕ್ಕೆ ಇಳಿದು ಬಂದು ಎಲ್ಲಿ ನೋಡಿದರಲ್ಲಿ ಆ ತಿಳಿನೀರಿನಲ್ಲಿ ಬಿಂಬಗೊಂಡು ಮೇಲಿನ ನೀಲಾಕಾಶವನ್ನು ನದಿಯ ತಳದಲ್ಲಿ ಹಾಸಿದಂತಿದೆ. ಚಂದ್ರಕಾಂತಿಯನ್ನು ಅನುಭವಿಸಲು ರಮಣಿಯರು ಕೆಳದಿಯರೊಡಗೂಡಿ ಮೆಲ್ಲಮೆಲ್ಲನೆ ಬರುತ್ತಿದ್ದಾರೆ. ಅವರ ಕಾಲುಂಗುರಗಳು ಘಲ್ ಘಲ್ ಎಂದು ಶಬ್ದಮಾಡುತ್ತಿವೆ; ಅದರ ತಾನಕ್ಕೆ ಸರಿಯಾಗಿ ಹಾಡುತ್ತ ಅವರು ಸೋಪಾನದ ಮೆಟ್ಟಿಲನ್ನು ಇಳಿಯುತ್ತ, ಸುತ್ತಲೂ ನೋಡಿಕೊಂಡು, ಸೆರಗು ಸರಿಮಾಡಿಕೊಳ್ಳುತ್ತ ತುರುಬಿಂದ ಜಾರಿಬೀಳುತ್ತಿರುವ ಹೂಗಳ ಸರವನ್ನು ಸರಿಯಾಗಿ ಮುಡಿದುಕೊಳ್ಳುತ್ತ, ಒಬ್ಬರ ಕಡೆ ಒಬ್ಬರು ನೋಡಿ ವಿನೋದದಿಂದ ನಗುತ್ತ, ಹಾಡಿನ ಪಲ್ಲವಿಗಳಿಗೆ ತಮ್ಮ ಮನಸ್ಸಿಗೆ ತೋರಿದ ಪದಗಳನ್ನು ಸೇರಿಸಿ ಹಾಡುತ್ತ, ಒಬ್ಬರ ಮುಖಕ್ಕೆ ಇನ್ನೊಬ್ಬರು ಆರತಿ ಬೆಳಗಿ ಅಕ್ಷತೆ ಚೆಲ್ಲುವಂತೆ ನಟಿಸುತ್ತ ಹೋಗಿ ನೀರಿನೆಡೆಯಲ್ಲಿ ಕಾಲುಚಾಚಿಕೊಂಡು ಕುಳಿತುಕೊಳ್ಳುತ್ತಿದ್ದಾರೆ. ಏನು ಚಿತ್ರಗಳು! ಪ್ರಪಂಚದ ಅನುಭವವೆಲ್ಲ ಈ ರಮಣಿಯರಿಗೆ ಈ ತೆರನಾದ ಭೋಗಭಾಗ್ಯವಿಲಾಸಗಳಲ್ಲಿಯೆ ಅಡಕವಾಗಿರುವಂತಿದೆ. ಶಾಶ್ವತವಾಗಿ ತಾವು ಹೀಗೇ ಇರುವೆವೆಂದೂ ಎಲ್ಲವೂ ತಮಗೆ ಹೀಗೇ ನಡೆದುಬರುವುದೆಂದೂ ಅವರ ಭಾವನೆ, ಪಾಪ !

ಈ ಸ್ವಪ್ನಗಳು ಮುಗಿಯಲೇ ಮುಗಿಯವೆ ? ಎಚ್ಚರಗೊಂಡು ಸ್ವಲ್ಪ ಹೊತ್ತು ಬೇರೆ ಯೋಚನೆ ಮಾಡೋಣವೆಂದು ಕುಳಿತರೆ ಕಣ್ಣು ತೆರೆದಿದ್ದ ಹಾಗೆಯೆ ಬೇರೊಂದು ಸ್ವಪ್ನ. ಈಗ ಅಂತಃಪುರವಲ್ಲ ; ರಮಣಿಯರ ಲಲಿತ ವಿಲಾಸಗಳಿಲ್ಲ ; ನಗುವಿಲ್ಲ ; ಇದು ವಿಜಯದಶಮಿಯ ಸಂಭ್ರಮ–ರಾಮರಾಜನ ಒಡ್ಡೋಲಗ. ದಟ್ಟವಾಗಿ ಎಲ್ಲೆಲ್ಲಿಯೂ ನೆರೆದಿರುವ ಜನರ ಸಂದಣಿ; ಸಡಗರದಿಂದ ಓಡಾಡುತ್ತಿರುವ ಓಲೆಕಾರರು; ರಾಜಪಥಗಳಲ್ಲಿ ಕಣ್ಣು ಹರಿಯುವವರೆಗೂ ಜನ; ಉದ್ದಕ್ಕೂ ಉತ್ಸವ ಸ್ತಂಭವೇದಿಕೆಗಳು, ತೋರಣಗಳು. ರಾಜಪಥದ ಮಧ್ಯೆ ಸುಸಜ್ಜಿತರಾಗಿ ನಾಲ್ವರು ನಾಲ್ವರಂತೆ ಕಾಳಾಶ್ವಗಳ

ಮೇಲೆ ಹಿಂದೂ ಸವಾರರು ಕುಳಿತಿದ್ದಾರೆ. ಕುದುರೆಗಳು ಅರಬ್ಬಿಸ್ತಾನ್, ಬರ್ಮ, ಪರ್ಷ್ಯಾ ದೇಶಗಳ ಉತ್ತಮ ಜಾತಿಯವು; ವಿಜಯನಗರದವರ ಕುದುರೆಗಳೆಂದರೆ ಮುಸಲ್ಮಾನ್ ಚಕ್ರವರ್ತಿಗಳಿಗೂ ಅಸೂಯೆ. ಎಲ್ಲವೂ ಹಂಸಗತಿಯಲ್ಲಿ ನಡೆಯುತ್ತಿವೆ. ರಾವುತರೂ ಸುಶಸ್ತ್ರಯುತರಾಗಿದ್ದಾರೆ. ಒರೆಗಳಚಿದ ಖಡ್ಗವನ್ನು ಒಂದು ಕೈಯಲ್ಲಿಯೂ ಕುದುರೆಯ ಲಗಾಮನ್ನು ಇನ್ನೊಂದರಲ್ಲಿಯೂ ಹಿಡಿದು ಕೊಸರೊದಲಿಲ್ಲದೆ, ಮುಂಗಾರು ಮಳೆಗೆ ಮುಂಚೆ ಸಾಲ್ಗೂಡಿ ಹೊರಡುವ ಕಟ್ಟಿರುವೆಗಳ ದಳದಂತೆ ಸಭಾಮಂಟಪದ ಕಡೆ ಹೋಗುತ್ತಿದ್ದಾರೆ. ತೆರೆದು ಸಾಗುವ ಕತ್ತಿಗಳ ಹೊಳಪು ಮಿಂಚಿನ ಅಲೆಗಳಂತೆ ಮುಂದುವರಿಯುತ್ತಿವೆ. ಮೇಲ್ಗಡೆ ವಿಜಯದಶಮೀ ದಿಬ್ಬದಲ್ಲಿ ಮಹಾರಾಜನ ಆಗಮನವನ್ನು ನಿರೀಕ್ಷಿಸುತ್ತ ಕಿಕ್ಕಿರಿದು, ಪಿಸುಪಿಸು ಮಾತನ್ನಾಡುತ್ತಿರುವ ಮಾನವ ಮಹಾಸಾಗರದಲ್ಲಿನ ಅಲೆಮಾಲೆಗಳ ಗಜಿಬಿಜಿ. ನಡುನಡುವೆ, ಅಧಿಕಾರ ದರ್ಪದಿಂದ ಉತ್ಪನ್ನವಾದ ಉಚ್ಚಗಂಭೀರಸ್ವರದ 'ಸದ್ದು!' ಎಂಬ ಕೂಗು. ಸ್ವಲ್ಪ ಹೊತ್ತು ಎಲ್ಲವೂ ನೀರವ. ಕರಿಯ ಕಲ್ಲು ಕೆತ್ತನೆಗಳಿಂದ ಮಾಡಿದ ದಿಬ್ಬದ ಮೇಲಿನ ಸಭಾಮಂದಿರದಲ್ಲಿ ಒಂದು ಕೊನೆಯಲ್ಲಿ ಪೂರ್ವಾಭಿಮುಖವಾಗಿ ರಾಯನ ರತ್ನಸಿಂಹಾಸನ. ಸ್ವಲ್ಪ ಸರಿದು ಎಡಕ್ಕೆ ಬಲಕ್ಕೆ ಹಿಂದೆ ನಿಮ್ನಾಸನಗಳು. ಅಮೃತಶಿಲೆಯ ಸಾಲ್ಗಂಬಗಳಲ್ಲಿ ಕೆತ್ತನೆಯ ಗಜಸಿಂಹಗಳು. ಆನೆಗಳ ಎತ್ತುಸೊಂಡಿಲುಗಳಲ್ಲಿ ಮುತ್ತಿನ ಸರ, ಹೂವಿನ ಹಾರ, ರೇಷ್ಮೆಯ ಕುಚ್ಚುಗಳು. ರಾಯನ ಸಿಂಹಾಸನಕ್ಕೆ ಹೋಗುವ ದಾರಿಯ ಉದ್ದಕ್ಕೂ ಪರ್ಷ್ಯಾ ದೇಶದ ರತ್ನಗಂಬಳಿ; ಅದರ ಮೇಲೆ ಕೆಂಪು ಮೊಖಮಲ್ಲಿನ ನಿಡುಹಾಸು. ಉತ್ತರಕ್ಷಣದಲ್ಲಿಯೆ ನೂರಾರು ವಾದ್ಯಗಳೂ ಶಂಖಭೇರಿಗಳೂ ಮೊಳಗುವುವು. ಲಕ್ಷಾಂತರ ಜನರ ಜಯಘೋಷ; ಹೊಗಳು ಭಟ್ಟರ ಬಿರುದಾವಳಿ ಪ್ರಶಂಸೆ. ವೈದಿಕರ ಮಂತ್ರಪೂತ ಸ್ವಾಗತ ವಚನ. ಪುನಃ ಐದು ನಿಮಿಷ ಪರ್ಯಂತ ಎಲ್ಲವೂ ನಿಶ್ಶಬ್ದ. ಈವರೆಗೆ ರಾಯನೂ, ಮಂತ್ರಿ ಪ್ರಧಾನರೂ ತಮ್ಮ ಆಸನಗಳ ಮೇಲೆ ಕುಳಿತುಕೊಳ್ಳುವರು. ಪಟ್ಟದ ಆನೆ ಕುದುರೆ ಹಸು – ಇವು ಮರ್ಯಾದೆಯಂತೆ ಮುಂದೆ ಬಂದು ದೂರದಲ್ಲಿ ಬಾಗಿ ನಮಸ್ಕರಿಸುವುವು. ಮಲ್ಲರ ದ್ವಂದ್ವಯುದ್ಧ, ಇತರರ ಸಾಹಸಕಾರ್ಯ ಪ್ರದರ್ಶನ ನಡೆಯುವುವು.

ಆಮೇಲೆ ಮೇಳತಾಳದಿಂದೊಡಗೂಡಿ ಪಲ್ಲಕ್ಕಿಯಲ್ಲಿ ಚಂದ್ರಾಯುಧ ಬರುವುದು. ಪುರೋಹಿತರೂ ಜಗುಲಿಯ ಮೇಲಿದ್ದ ಮುಖ್ಯ ಸಭಿಕರೂ, ರಾಯನೂ ಎದ್ದು ನಿಲ್ಲುವರು; ವೈದಿಕರು ಮಂತ್ರೋಚ್ಚಾರಣೆ ಮಾಡುತ್ತಿರಲು ರಾಯನು ಭಕ್ತಿಯಿಂದ ಅದಕ್ಕೆ ಪೂಜೆ ಮಾಡಿ, ಮೊಳಕಾಲೂರಿ, ಅದನ್ನು ಎರಡೂ ಕೈಗಳಿಂದ ಎತ್ತಿ ಹಿಡಿದು, ಹಣೆಗೆ ಮುಟ್ಟಿಸಿ, ತಲೆಯ ಮೇಲೆ ಇಟ್ಟುಕೊಂಡು ಎದ್ದುನಿಂತು ಅದನ್ನು ಬಲಹಿಡಿಯಿಂದ ಮೇಲೆತ್ತಿ ಝಳಪಿಸುವನು; 'ಜಯ ಜಯ ಮಹಾರಾಜ!' 'ಜಯ ವಿಜಯ ನಗರಾಧೀಶ' 'ಜಯ ಶ್ರೀರಾಮರಾಜ!' ಎಂಬ ಜನರ ಕೂಗು – ಇವೆಲ್ಲವೂ ಮುಗಿದು ಮಹಾರಾಜನು ಸನ್ನೆ ಮಾಡಲು ಪ್ರಧಾನಿ ಮುಂದೆ ಬಂದು ನಿಂತು ಒಂದು ಲೇಖನವನ್ನೋದುವನು.

ಈ ತೊಂಬತ್ತು ವರ್ಷದ ವಯಸ್ಸಿನಲ್ಲಿಯೂ ಸುಲಕ್ಷಣವಾಗಿ ಸುಕ್ಕುಗಳಿಲ್ಲದೆ ಗುಲಾಬಿ ರಂಗಿನಿಂದ ರಾಜಿಸುತ್ತಿದ್ದ ರಾಮರಾಜನ ಮುಖ ವೀರಗಂಭೀರವಾಗಿದೆ. ಆದರ ಮೇಲೆ ತೆಳ್ಳನೆಯ ನೆಳಲು ಮುಸುಕಿದಂತಿದೆ. ಸ್ಥಿರ ಪ್ರತಿಜ್ಞೆಯ ಮುದ್ರೆಯಿದು ಎಂಬಂತಿರುವ ಆ ದವಡೆಯ ಮಾಟ. ವಿಶಾಲವಾದ ಹಣೆ. ಹುಬ್ಬು ನಿಷ್ಠುರವಾಗಿವೆ. ಹುಬ್ಬುಗಳ ನಡುವೆ ಕುಂಕುಮ; ಕಣ್ಣುಗಳು ಕಿಡಿಕಾರುವಂತಿವೆ; ನಿಮಿರಿನಿಂತ ಶ್ಮಶ್ರು; ಅಂಬಿನ ಅಲಗಿನಂತೆ ನೇರವಾದ ಕಾಯಭಂಗಿ; ಉತ್ಸವಕಾಲವಾಗಿದ್ದರೂ ಬಹುಮಟ್ಟಿಗೆ ರಣಸಜ್ಜು ವೇಷ; ಕಾಠಿನ್ಯದ ಕಠಿನತೆಯನ್ನೇ ಕೀಳುಮಾಡುವಂತಿದ್ದ ಮುಖದ ಅಚ್ಚು; ಪ್ರಧಾನಿಯ ತೀಕ್ಷ್ಣತಾಪೂರ್ಣವಾದ, ಉಕ್ಕಿನ ಮೊನೆಯಂತಿದ್ದ ವಾಕ್ಯ ಸರಣಿ; ಇವುಗಳನ್ನು ನೋಡಿದವರ ವಿಸ್ಮಯ. ಇದೇನಿರಬಹುದೆಂದು ಒಬ್ಬರ ಮುಖವನ್ನೊಬ್ಬರು ನೋಡುವರು.

ಬಿಜಾಪುರದ ಸುಲ್ತಾನ್ ಅದಿಲ್‌ಷಾಹ ಬರಸಿರುವ ಕೆಚ್ಚಿನ ಧೋರಣೆಯ ಪತ್ರವನ್ನು ಪ್ರಧಾನಿ ಓದುತ್ತಿರುವನು. ಮಧ್ಯೆ ಮಧ್ಯೆ ಮಹಾರಾಜನು ತನ್ನ ಕಣ್ಣಿನ ಜ್ವಾಲೆಯನ್ನು ಸೈನಿಕರತ್ತ ತಿರುಗಿಸಿ ಖಡ್ಗದ ಹಿಡಿಯನ್ನು ಪ್ರಬಲತರವಾದ ಮುಷ್ಟಿಯಿಂದ ಹಿಡಿ ಹಿಡಿಯುವ ಆವೇಶವೃತ್ತಿ. ಮದಗಜಗಳಂತಿರುವ ಮುಂಗಾರು ಮೋಡಗಳು ಸಾಂದ್ರವಾಗಿ, ತಂಡತಂಡವಾಗಿ ಆಕಾಶದಲ್ಲಿ ಹೋಗುತ್ತಿರುವಾಗ ಸೂರ್ಯನೇ ಅವುಗಳ ಹಿಂದೆ ಮರೆಯಾಗಿ ಹೋಗಿ ಅವನ ಕಿರಣಗಳ ಬೆಳ್ಳುರಿ ಆ ಕಾರ್ಮೋಡಗಳ ನಡುವೆ ಕೆಂಪುಗೊಂಡು, ಅವುಗಳ ಕರಾಳತೆಯೊಡನೆ ತಾನೂ ಸೇರಿ, ಕೃಷ್ಣಾರುಣವಾಗಿ, ಅವನ್ನು ಕಾದ ತಾಮ್ರದಂತೆ ಮಾಡಿ, ಭೀಕರ ರೌದ್ರರೂಪವನ್ನು ತಾಳುವಂತೆ ಈಗಾಗಲೇ ನೆಳಲಿಂದ ಮುಸುಕಿದಂತಿದ್ದ ರಾಯನ ಮುಖವನ್ನು ನವಾಬನ ಪತ್ರ ಹೆಚ್ಚು ಹೆಚ್ಚು ಕರಾಳವಾಗಿ, ರೌದ್ರವಾಗಿ ಹೆಚ್ಚು ಭೀಕರವಾಗಿ ಮಾಡಿದೆ.

ಎಡಗಡೆ ಓರೆಯಲ್ಲಿ ಪಠಾಣ ಸರದಾರನ ಅರ್ಧದ್ವೇಷದ ಅರ್ಧವ್ಯಂಗ್ಯದ ಹುಸಿನಗೆ – ಅರ್ಧಕೋಪದಿಂದ ಅರ್ಧವಾತ್ಸಲ್ಯದಿಂದ ತನ್ನೆಡೆಗೆ ನೋಡುತ್ತಿರುವ ರಾಯನ ದೃಷ್ಟಿಗೆ ಪ್ರತ್ಯುತ್ತರವಾಗಿ ಅವನೂ ತನ್ನ ಖಡ್ಗದ ಹಿಡಿಯನ್ನು ಹಿಡಿಯುತ್ತಿದ್ದಾನೆ. ನವುರು ಕಾಗದದಂತಿರುವ ಅವನ ಕೆಳತುಟಿಯ ವಕ್ರತಿರುವಿನಲ್ಲಿ ತಿರಸ್ಕಾರದ ಅಂಕಿತವಿದೆ. ಪತ್ರಪಠನ ಮುಗಿಯಿತು. ಕೂಡಲೆ ಕ್ರುದ್ಧನಾದ ಮಹಾರಾಜನು ವಜ್ರಕಂಪಿತಸ್ವರದಿಂದ, 'ಕೇಳಿದಿರಾ, ಸರದಾರರೆ, ಪೌರರೆ, ಈ ವಾಕ್ಯಗಳನ್ನು! ವಿಜಯನಗರದ ದರ್ಪವೂ ಗೌರವವೂ ನಷ್ಟವಾಗಿ ಹೋಗಿರುವುವೇನು? ನಮ್ಮ ತೋಳುಗಳಲ್ಲಿ ಬಲವಿಲ್ಲವೇನು? ಅಬ್ಬಾ, ಏನು ದುರಹಂಕಾರ! ಕಾಲ್ಕೆಳಗೆ ಹರಿದು ಹೋಗುವ ಹುಳುಗಳು ಪ್ರಭು ಕೇಸರಿಯನ್ನು ಧಿಕ್ಕರಿಸಿ ಮದೋನ್ಮತ್ತವಾಗಿರುವುವೆ? ವಿಜಯನಗರದ ಪಾದತಳದಲ್ಲಿ ಸಿಕ್ಕಿ ನಾಲ್ಕಾರು ಬಾರಿ ಚೂರ್ಣೀಕೃತರಾಗಿ ಹೋಗಿರುವುದನ್ನು ಅವರು ಮರೆತಂತಿದೆ. ಆಗಲಿ. ಈ ಖಳಾಧಮರ ಸೊಕ್ಕು ಮುರಿವುದಕ್ಕೆ ರಾಮರಾಜನಿದ್ದಾನೆ. ವೀರಾಳುಗಳೆ,

ಸೈನಿಕರೆ, ನಿಮ್ಮ ಪೌರುಷವನ್ನು ಇಂದು ರಣರಂಗದಲ್ಲಿ ತೋರಬೇಕಾಗಿರುವುದು. ಸ್ಮಾರ್ತ ಸಾಮ್ರಾಜ್ಯದ ಗೌರವವನ್ನು ಕಾಪಾಡಲು ಸಮಯವೊದಗಿರುವುದು. ಐದು ಜನರೂ ಸೇರಿರುವರಂತೆ! – ಐದು ಜನ ಬಹಮ್ಮನಿಯವರು! ಸೇರಲೇಳಿ; ಇನ್ನೂ ನಾಲ್ವರನ್ನು ಜೊತೆಗೆ ಸೇರಿಸಿಕೊಳ್ಳಲಿ – ಕೂಡಿಬರಲಿ. ಬಿರುಗಾಳಿಯ ರಭಸದಲ್ಲಿ ಶುಷ್ಕ ಪತ್ರಗಳೆಷ್ಟಿದ್ದರೇನು ಮಾಡಬಲ್ಲುವು? ಯವನ ಸೈನ್ಯವನ್ನು ತಂದು ನಮ್ಮ ರಾಜ್ಯವನ್ನು ದಾಳಿಟ್ಟು ನಮ್ಮನ್ನು ಚ್ಯುತಿಗೊಳಿಸಿ ಈ ಸಾಮ್ರಾಜ್ಯವನ್ನು ನಾಶ ಮಾಡುವರಂತೆ! ಸೈನ್ಯವೊಂದನ್ನು ಆಗಲೇ ಗಡಿನಾಡಿನ – ಕೋಟೆಯ ಕಡೆ ಕಳುಹಿಸಿರುವರಂತೆ. ಪ್ರಜೆಗಳೆ, ಇವರಿಗೆ ನಮ್ಮ ಮೇಲೆ ಎಷ್ಟು ದ್ವೇಷಾಸೂಯೆಗಳಿವೆಯೊ ನಿಮಗೆ ತಿಳಿದೇ ಇದೆ. ಪವಿತ್ರ ಮಂದಿರಗಳನ್ನು ಒಡೆಯುವುದು; ಧರ್ಮವನ್ನು ಕಲುಷಿತ ಮಾಡುವುದು; ಗೋವಧೆ ಮಾಡುವುದು; ಅಬಲೆಯರಾದ ನಿಮ್ಮ ಸಂತತಿಸತಿಯರ ಮಾನಕ್ಕೂ ನಿಮ್ಮ ಧರ್ಮಕ್ಕೂ ನಿಮ್ಮ ರಾಷ್ಟ್ರಕೀರ್ತಿಯ ಸ್ಥೈರ್ಯಕ್ಕೂ ಬದ್ಧವೈರಿಗಳಿವರು. ಕೆಣಕಿ ಬಂದಿರುವರು. ಅವನ್ನು ಉಗ್ಘಡಿಸಿ ನುಗ್ಗುತ್ತಾರೆ. ಅದು ಅವರ ಯುದ್ಧಘೋಷ. ನೂಕಿನ ಉದ್ಗಾರ. ಇವರ ಸೊಕ್ಕನ್ನು ಈಗಲೇ ಮುರಿಯಬೇಕು. ಸುಮ್ಮನಿರಲಾಗದು. ನಿಮ್ಮಲ್ಲೊಬ್ಬನೂ ಜೀವಗಳ್ಳನಲ್ಲವೆಂದು ನಾನು ಬಲ್ಲೆ. ದೇಶಭಕ್ತಾಗ್ರಣಿಗಳೆ! ಎಲ್ಲಿ, ನಾವು ಹೇಡಿಗಳಲ್ಲವೆಂದೂ ಎಂದಿಗೂ ಹಿಂದೆ ನಿಲ್ಲೆವೆಂದೂ ಶಪಥಮಾಡಿ ಹೇಳಿ; ವೈದಿಕರು ಶಾಂತಿಕರ್ಮಗಳನ್ನೂ ಅರ್ಚಕರು ಪೂಜೆಗಳನ್ನೂ ಮಾಡಿ ಹೋಗಿ; ನಿಮ್ಮ ಧ್ವನಿಗಳನ್ನು ಕೇಳಿಯೇ ಈ ಕ್ಷುದ್ರ ಜಂತುಗಳು ಪಲಾಯನ ಗೈಯುವುವು' ಎನ್ನುತ್ತಿರುವನು. ಆವೇಶದಿಂದೆದ್ದ ಸೈನಿಕರೆಲ್ಲರೂ ಖಡ್ಗಗಳನ್ನೊರೆಯಿಂದ ಹಿರಿದು ಮಹಾರಾಜನ ಪಾದದತ್ತ ನಿರ್ದೇಶಿಸಿ ತಲೆಬಾಗುತ್ತಿದ್ದಾರೆ. ಪ್ರಜೆಗಳಲ್ಲಿ ಯುವಕ ವೃದ್ಧರೆಲ್ಲರೂ ಏಕಕಂಠರಾಗಿ 'ನಾವೆಂದಿಗೂ ಹೇಡಿಗಳಾಗೆವು, ಮಹಾಸ್ವಾಮಿ, ಧಮನಿಯಲ್ಲಿ ಒಂದು ತೊಟ್ಟು ರಕ್ತ ಉಳಿದಿರುವವರೆಗೂ, ಜೀವನದಲ್ಲಿ ಕಡೆಯ ಉಸಿರಿರುವವರೆಗೂ ತಮ್ಮ ಅನುಗಾಮಿಗಳಾಗಿದ್ದು ಜಯ ಸಾಧಿಸುವೆವು' ಎನ್ನುತ್ತಿರುವರು.

ಸಭೆ ಮುಕ್ತಾಯವಾಯಿತು. ಸಭಾಮಂದಿರ ಸ್ವಲ್ಪ ಹೊತ್ತಿನಲ್ಲಿಯೇ ಬರಿದಾಯಿತು. ರಾತ್ರಿಯ ಕಗ್ಗತ್ತಲಲ್ಲಿ ದೂರದ ಅಂತರಾಳದೆಲ್ಲಿಂದಲೊ ಹೊರಟು ಬರುವಂತಿರುವ ಪಿಶಾಚಿಯೊಂದರ ಅಪಹಾಸ್ಯದ ಕೀಚುನಗುವೊಂದು ಮಾತ್ರ ಕೇಳಿಸಿದಂತೆ ಕೇಳಿಸಿ ಅದೂ ನಿಲ್ಲುತ್ತದೆ. ನಗುವಿನ ಧ್ವನಿ ಆ ಯುವಕ ಪಠಾಣನ ಧ್ವನಿ. ಆ ಮುಖ, ಆ ಕೇಕೆ ಅವನವೇ, ಅವೇ.

ತತ್ಕ್ಷಣದಲ್ಲಿ ಎಲ್ಲೆಲ್ಲಿಯೂ ಹಾಹಾಕಾರ ; ಹೆಂಗಸರು ಮಕ್ಕಳ ರೋದನ; ಗುಂಡುಗಳ ಮಳೆ; ಖಡ್ಗ ಕಠಾರಿಗಳ ಇರಿತ ಕೊರೆತ. ಸಾವಿರಾರು ಜನರು ಒಬ್ಬರನ್ನೊಬ್ಬರು ಶಪಿಸುತ್ತ ಹೋರಾಡುತ್ತಿದ್ದಾರೆ; ನೀರು! ನೀರು! ಎಂಬ ಕೂಗು ; ನೆಲದ ಮೇಲುರುಳಿ ಗಾಯಗಳಿಂದ ಮುಲುಗುತ್ತಿರುವವರ ಶಬ್ದ; ಕುದುರೆ ಆನೆಗಳ

ಹೇಷಾರವ. ಭಿನ್ನ ಮಸ್ತಕಗಳು; ಭಿನ್ನ ಮೈ ಕೈಕಾಲುಗಳು; ರಕ್ತದ ಕಾಲುವೆಗಳು; ಎಲ್ಲೆಲ್ಲಿಯೂ ಭಯಂಕರ ರಣಕೋಲಾಹಲ; ಮನುಷ್ಯರು ಪಿಶಾಚಿಗಳಾಗಿ ವಿಗಡರಾಗಿ ಲಯಕಾರ್ಯದೀಕ್ಷಿತರಾಗಿರುವ ದೃಶ್ಯ ; ಉರಿವ ಮನೆಮಠಗಳು; ಉರುಳಿ ಬೀಳುತ್ತಿರುವ ಗೋಡೆ, ಕಂಬ, ಗುಡಿ, ಗೋಪುರ; ದಿಕ್ಕಾಪಾಲು ಓಡುತ್ತಿರುವ ಕುದುರೆ, ಆನೆ; ಭೇರಿಗಳ ಚೀರು ಹುಯಿಲು; ಭಲ್ಲೆಯದ ತುದಿಗೇರಿಸಿ ನೆಗಹಿ ಕಾಣುತ್ತಿರುವ ರಾಮರಾಜನ ತಲೆಯೋಡು; ಹಿಂದೆ ವಿಜೃಂಭಿಸಿ ಬರುವ ರಾವುತ ದಳ. ಇನ್ನೊಂದು ಕ್ಷಣದಲ್ಲಿ ವಿದ್ಯಾನಗರದ ಪತಾಕೆಯೂ ದುರ್ಗದ ಹೊಂಗಳಸವೂ ಕೆಳಗೆ ಬಿದ್ದು, ಅಖಂಡ ಸೌಭಾಗ್ಯದ, ಅವಿಶ್ರಾಂತ ಸಾಹಸದ ನೆಲೆಬೀಡಾಗಿದ್ದ ಲಕ್ಷ್ಮೀವಲಯವು ಶ್ಮಶಾನವಾದ ದುಃಖಮಯ ನೋಟ. ಹಾ! ಹಾ! ಎಂದೆದ್ದೆ.

'ಏನ್ರೀ ಆಯಿತು? ಯಾಕೆ ಹಾಗೆ ಕೂಗುತೀರಿ? ಕನಸು ಗಿನಸು ಆಯಿತೇನು? ಏಳಿ' ಎಂದು ಮೂರ್ತಿಗಳು ನನ್ನನ್ನು ಎಚ್ಚರಿಸಿದಂತೆ ಆಯಿತು. ನನಗೆ ಅದಕ್ಕಿಂತಲೂ ಎದುರಿನ ನೋಟದ್ದೇ ಇನ್ನೂ ಪ್ರಜ್ಞೆ.

'ಹೇ ದೂರ ಇರು, ಜೋಕೆ' –

'ಹೋ ಹೊ, ಏನು ಬಂತಪ್ಪ ಗ್ರಹಚಾರ, ಶ್ರೀಕಂಠಯ್ಯ, ಇದೇನು ಈ ಹುಚ್ಚು!' ಎಂದು ನನ್ನನ್ನು ಉರುಳಿಸಿ ಎಬ್ಬಿಸಿದರು.

'ಮೂರ್ತೀ, ಹೀಗಾಯಿತು, ಕಾಣ್ರಿ' ಎಂದೆ.

'ಇವೊತ್ತಾಯಿತೇನು? ಆಗಿ ನಾನ್ನೂರು ವರ್ಷಗಳಾಗಿ ಹೋದುವು, ಸುಮ್ಮನೆ ಮಲಗಿಕೊಂಡು ಸುಖವಾಗಿ ನಿದ್ರೆ ಮಾಡಿ, ಮಹರಾಯರಾ!' ಎಂದು ಹೇಳಿದರು. ಗಡಿಯಾರ ತೆಗೆದು ನೋಡಿದೆ. ಇನ್ನೂ ಎರಡೂವರೆ ಗಂಟೆ ಮಾತ್ರ.

ಆ ರಾತ್ರಿ ನಿದ್ರೆ ನನ್ನ ಹಣೆಯಲ್ಲಿ ಬರೆದಿರಲಿಲ್ಲ. ಮುಂದಕ್ಕೆ, ಘೋರ ಸ್ವಪ್ನಗಳಾವುವೂ ಇಲ್ಲ; ಇತರ ಕನಸುಗಳು ಬಂದುವು. ಈಗ ಎಲ್ಲವೂ ರಾಮಾಯಣದ ಕನಸುಗಳು; ಒಂದು ಸಲ ಕಪಿಸೈನ್ಯ; ವಾಲಿಸುಗ್ರೀವರ ಯುದ್ಧ; ಒಂದು ಸಲ ರಾವಣನ ರಥ ಸೀತಾದೇವಿಯನ್ನು ಎತ್ತಿಕೊಂಡು ಹೋಗುತ್ತಿರುವಾಗ ದೇವಿ ಆಭರಣಗಳನ್ನು ಬೀಸಾಡುತ್ತಿರುವಂತಿರುವುದು; ಇನ್ನೊಂದು ಸಲ ಶಬರಿಯ ಆಶ್ರಮ; ಆಕೆ ರಾಮನಿಗಾಗಿ ಮಾಡುತ್ತಿದ್ದ ನಿರೀಕ್ಷಣೆ; ಇನ್ನೊಂದು ಸಲ ರಾಮ ವಿಲಾಪ ಕೇಳಿಸುವುದು; ಲಕ್ಷ್ಮಣ ಅಣ್ಣನನ್ನು ಸಂತೈಸುತ್ತಿರುವನು. ಹೀಗೆಯೇ ನೂರಾರು ಪುರಾಣ ಚರಿತ್ರೆ ಕನಸಿನಲ್ಲಿ ಕಲ್ಪಿಸಿಕೊಳ್ಳುತ್ತಿವೆ. ಇವಕ್ಕೆ ಯಾತರ ನಂಟೋ ಯಾವ ಗಂಟೋ ಇವು ಏಕೆ ಹಾಗೋ ಆಗ ಹೇಳುವಂತಿರಲಿಲ್ಲ.

ರಾತ್ರಿ ಕಳೆದು ಬೆಳಗಾಗುತ್ತಲೆ ಬಂದ ದಾರಿ ಹಿಡಿದು ಊರಿಗೆ ಪ್ರಯಾಣ ಮಾಡುವ ಪ್ರಯತ್ನ ನಡೆಯಿತು. ನಾವು ಎಲ್ಲವನ್ನೂ ಸಿದ್ಧಮಾಡಿಕೊಂಡು ನಿಲ್ಲುವ

ಹೊತ್ತಿಗೆ ಹೊಸಪೇಟೆಗೆ ಹೇಳಿಕಳುಹಿಸಿದ್ದ ಗಾಡಿಗಳು ಬಂದುವು. ಸಾಮಾನುಗಳನ್ನು ಗಾಡಿಗಳಿಗೆ ಸಾಗಿಸಿಯಾಯಿತು. ಕೊನೆಯ ಸಲ ದೇವಸ್ಥಾನದೊಳಗೆ ಹೋಗಿ ದೇವರಿಗೆ ಮಂಗಳಾರತಿ ಮಾಡಿಸಿ, ದರುಶನ ಮಾಡಿಕೊಂಡು ಬಂದುದಾಯಿತು. ಗಾಡಿಯಲ್ಲಿ ಕುಳಿತುಕೊಳ್ಳುವ ಮುಂಚೆ ಚೆನ್ನಯ್ಯನಿಗೆ ಮರ್ಯಾದೆ ಮಾಡಿ ಅವನ ಪ್ರಣಾಮ ಸ್ವೀಕರಿಸಿ ಅವನಿಗೊಂದು ಯೋಗ್ಯತಾಪತ್ರವನ್ನು ಕೊಟ್ಟುದಾಯಿತು! ಚೆನ್ನಯ್ಯನಿಗೆ ನಾವು ಯೋಗ್ಯತಾ ಪತ್ರ ಕೊಡುವ ಅಂಶದಲ್ಲಿ ಮೊದಲು ಯುಕ್ತಾಯುಕ್ತ ವಿಚಾರ ನಡೆಯಿತು. ಅವನ ಸ್ವಭಾವಸೌಜನ್ಯವೂ ದಿನಚರಿಯ ಕರ್ಮವೂ ಅವನಿಗೆ ಸಾಕಾದಷ್ಟು ಶಿಫಾರಸು ಮಾಡಲಾರವೆ ? ಅವನಂಥ ಹಸನ್ಮುಖಿ, ನಿರಾಳ ಮನಸ್ಸಿನ ವಿರಾಗಿಗೆ ಶೀಲಪತ್ರ ಕೊಡುವವರು ನಾವೆ ? ಬೇಡವೊ ಚೆನ್ನಯ್ಯ, ಎಂದರು ರಾಯರು. 'ಇಲ್ಲ, ಸ್ವಾಮಿ, ತಮ್ಮ ಹಾಗೆ ಇನ್ನ್ಯಾರಾದರೂ ಬಂದೋರಿಗೆ ನನ್ನಲ್ಲಿ ನಂಬಿಕೆ ಇರುತ್ತೆ. ನೀವು ಕೊಡೊ ದುಡ್ಡಿನ ಮೇಲೆ ಅಷ್ಟು ಆಶೆ ಇಲ್ಲ. ಬಂದೋರಿಗೆ ಇಲ್ಲಿರೋದನ್ನೆಲ್ಲ ತೋರಿಸಿಕೊಂಡು ಅವರ ಮನಸ್ಸಿಗೆ ತೃಪ್ತಿ ಉಂಟುಮಾಡಬೇಕು ಅಂತ ಅಷ್ಟೆ. ಅಷ್ಟು ದೂರದಿಂದ ನೀವೆಲ್ಲ ಇಲ್ಲಿಗೆ ಇನ್ನೇತಕ್ಕೆ ಮಾಸ್ವಾಮಿ ಬರ್ತೀರಿ? ಇಲ್ಲಿ ಇನ್ನೂ ಎರಡು ಮೂರು ಜನ ಇದ್ದಾರೆ. ಆದರೆ ಅವರನ್ನು ನಂಬೋದು ಮಹಾಕಷ್ಟ. ನಾನು ಹೇಳಬಾರದು. ಬೇಕಾದರೆ ಒಳಗೆ ನೀವೇ ವಿಚಾರಿಸಿ ನೋಡಿ' ಎಂದ. 'ಏನಾಶ್ಚರ್ಯವಿಲ್ಲ. ನಿಜವೇ ಇರಬಹುದಪ್ಪ. ಆಗಲೇಳು, ಏನು ಖರ್ಚಾಗಬೇಕು? ಎಲ್ರೀ, ವೆಂಕಟೇಶಯ್ಯ ಫೌಂಟೆನ್‌ಪೆನ್ ಕೊಡಿರಿ' ಎಂದರು. ರಾಯರನ್ನು ಬರೆಯಹೇಳಿದರು. ಬರೆವಣಿಗೆಯಲ್ಲಿ ರಾಯರು ನಿಸ್ಸೀಮರು. ಅವರ ಬರೆವಣಿಗೆಯೆಂದರೆ ಎಂಥ ಪ್ರಬಲರಿಗೂ ಭಯ ; ಜಂಘಾಬಲ ಉಡುಗಿ ಹೋಗುತ್ತೆ. ಅವರು ಬರೆದು ಓದಿದರು. 'ಸರಿಯೇನಯ್ಯ, ಇನ್ನೇನಾದರೂ ಬರೆಯಬೇಕೊ?' – ಎಂದರು. 'ಇನ್ನೇನು ಸ್ವಾಮಿ, ಬೇಕು? ಹೀಗೆ ಶಿಫಾರಸು ಬರೆದುಕೊಟ್ಟರೆ ದಗಾಖೋರನಿಗೆ ಖುಲಾಸೆ ಆಗಿಬಿಡುತ್ತೆ' ಎಂದ ಚೆನ್ನಯ್ಯ. ಅವನಿಂದ ಬೀಳ್ಕೊಂಡು ಗಾಡಿಯಲ್ಲಿ ಕುಳಿತು ಹೊರಟೆವು.

ಎರಡು ದಿನಗಳ ಅಲ್ಪಾವಧಿಯಲ್ಲಿ ಇನ್ನೂರ ಐವತ್ತು ವರುಷಗಳ ಚರಿತ್ರೆಯನ್ನು ಸತ್ವತಃ ಅನುಭವಮಾಡಿಸಿಕೊಟ್ಟು, ಒಂದೇ ಕಾಲದಲ್ಲಿ ಸುಖದುಃಖ ಉಂಟುಮಾಡಿದ ಆ ಸೌಂದರ್ಯದ ಪಾಳನ್ನೂ ಪಾಳೆಯವನ್ನೂ ಬಿಟ್ಟು ಹೊರಟೆವು. ಏರಿನಲ್ಲಿಯೂ ತಗ್ಗಿನಲ್ಲಿಯೂ ಆ ಶಾಂತಿಯು ರುದ್ರಭೂಮಿಯಲ್ಲಿ ಗಾಡಿ ಹೊರಟಿತು. ದೇಹಪಂಜರದಲ್ಲಿನ ಕೀಲು ಹಾಡತೊಡಗಿದವು. ತಂಬಿಗೆಯ ನೀರು ಕುಲುಕುವುದು. ಕುಳಿತ ಕಡೆ ತಳ ಶೀತಳವಾಗುವುದು. ಯಾವುದೋ ಒಂದು ಕಥೆ ಜ್ಞಾಪಿಸಿಕೊಂಡು ಭಯವಾಯಿತು. ಆದರಾಯಿತು. ವಿಜಯನಗರದ ವೈಭವರಂಗವನ್ನು ಕಣ್ಣಾರೆ ನೋಡಿದೆವಲ್ಲ. ಆ ಪುಣ್ಯಕ್ಷೇತ್ರದಲ್ಲಿ ಸ್ವಲ್ಪ ಕಾಲವಿದ್ದೆವಲ್ಲ. ಅಷ್ಟು ಸಾಲದು, ನಿಜ. ಆದರೆ ಎಲ್ಲಿಗೆ ಪಾರ? ತೃಪ್ತಿಯೇನೊ ಆಗಿರಲಿಲ್ಲ. ಆ ಪ್ರದೇಶವನ್ನು ನೋಡುವುದಕ್ಕೆ ಕೀಳೆಣಿಕೆಯಲ್ಲಿ ಒಂದು ವಾರವಾದರೂ ಬೇಕು. ಆ ಪಾಳುಗಳಲ್ಲಿ ಸ್ವಚ್ಛಂದವಾಗಿ

ತಿರುಗಾಡಬೇಕು. ಅಲ್ಲಿನ ಚಮತ್ಕೃತಿಗಳನ್ನು ಪರಿಶೀಲಿಸಬೇಕು. ಅಲ್ಲಿನ ವಸ್ತುಚಯವನ್ನು ಮೇಲಿಂದ ಮೇಲೆ, ಒಂದು ಪರ್ವತದ ಮೇಲಿಂದ ಇನ್ನೊಂದಕ್ಕೆ ಹೋಗಿ ನಿಂತು ನದಿ ಕಾಲುವೆ ಗುಡಿ ಗೋಪುರ ಕೊತ್ತಲ ಮುಂತಾದವುಗಳ ನೆಲಸು ಬೆಡಗುಗಳನ್ನು ನೋಡಬೇಕು. ಸೂರ್ಯೋದಯ ಸೂರ್ಯಾಸ್ತಗಳ ಕೋಟಿ ಕಳೆಕಾಂತಿಗಳನ್ನು ಕಣ್ಣಿನಿಂದ ನೋಡಿ, ಅದರಲ್ಲಿ ಮನಸ್ಸನ್ನು ಜಾಲಿಸಿತೊಳೆದು, ಹೃದಯವನ್ನು ತೆರೆದು ವಿಶಾಲಗೊಳಿಸಿ ಆನಂದಿಸಬೇಕು. ಎಲ್ಲ ಪ್ರದೇಶಗಳನ್ನೂ ಗುರುತಿಸಿ ಅಲ್ಲಲ್ಲಿ ಕುಳಿತು ಆಯಾ ಸ್ಥಳಗಳಿಗೆ ಸಂಬಂಧಪಟ್ಟ ವ್ಯಕ್ತಿಗಳನ್ನೂ ಘಟನೆಗಳನ್ನೂ ಸನ್ನಿವೇಶಗಳನ್ನೂ ಕಲ್ಪಿಸಿಕೊಂಡು ಅವುಗಳಲ್ಲಿ ಪ್ರಾಣಪ್ರತಿಷ್ಠಾಪನೆ ಮಾಡಿ, ಅವುಗಳೊಡನೆ ಕಲೆತು ಪುನಃ ನಮ್ಮೆದುರಿಗೆ ಅವು ಜೀವಿಸುವಂತೆ ಮಾಡಿಕೊಳ್ಳಬೇಕು. ಪೆನುಗೊಂಡೆಯನ್ನು ನಮ್ಮ ಗೆಳೆಯರ ಅಣ್ಣಂದಿರು ವರ್ಣಿಸಿರುವಂತೆ 'ತೆನುಗು ಕತ್ತುಲು ಸಾನಬೆಟ್ಟಿನ ಪಚ್ಚಿ ನೆತ್ತರು ಕಂಡ ಮಾ ಪೆನುಗೊಂಡ ಕೊಂಡ' ಎಂದರಲ್ಲವೆ? ಅಂದಿನವರಂತೆಯೇ ಉಕ್ಕಿನ ಅಲಗುಗಳನ್ನು ಸಾಣೆಯಕಲ್ಲಿನ ಬಂಡೆಗಳ ಮೇಲೆ ಹರಿತ ಮಾಡಿಕೊಳ್ಳಬೇಕು. ಅವರೊಡನೆ ಸೇರಿ ಹೋರಾಡಬೇಕು. ಹೊಸ ಜೀವನ ಸಂಗ್ರಾಮಕ್ಕೆ ಸಿದ್ಧರಾಗಬೇಕು. ತಾನು ಆಗ ಮಾಡಿದ ಕಾರ್ಯ ಹೀಗಾಯಿತಲ್ಲ! ಮುಂದೆ ಯಾವುದನ್ನು ಹೇಗೆ ಮಾಡೋಣ ಎಂದು ಗುಣಿಸುತ್ತ, ಚಿಂತಾಮಗ್ನರಾಗಿ ಅಲ್ಲೆ ಎಲ್ಲೆಲ್ಲಿಯೂ ಹಗಲೆನ್ನದೆ ಇರುಳೆನ್ನದೆ, ಒಂಟಿಯಾಗಿ ತಿರುಗಾಡುತ್ತಿರುವ ವಿದ್ಯಾರಣ್ಯರ ದರ್ಶನವನ್ನು ಮಾಡಿಕೊಳ್ಳಬೇಕು. ನಮಗೆ ಇವು ಸಾಧ್ಯವಾಗದುದಕ್ಕೆ ಮಾತ್ರ ಪಶ್ಚಾತ್ತಾಪ. ಹೋಗಲಿ, ಪಂಪಾ ದರುಶನವಾದರೂ ಆಯಿತಲ್ಲ! ಅಲ್ಲಿನ ಮನೋಹರತೆಯನ್ನು ಸವಿದುದಾಯಿತಲ್ಲ. ಅಷ್ಟೇ ಪುಣ್ಯ.

ಗಾಡಿಯ ರಸ್ತೆಯ ಎರಡು ಪಕ್ಕಗಳಲ್ಲಿಯೂ ಮಸೀದಿಗಳು, ಮುರುಕು ದೇವಾಲಯಗಳು; ಹಸುರು ಹಚ್ಚೆ ಹೆಚ್ಚಾಗಿ ಕಾಣದ ಸುಡುಗಾಡು ದೇಶ. ಸುತ್ತಲೂ ಎಲ್ಲೆಲ್ಲಿಯೂ ಬೆಟ್ಟಗಳ ಸಾನುಪಂಕ್ತಿಯಲ್ಲಿ ಹಿಂದಿನ ಕೋಟೆಗಳ ಪೌಳಿಗೋಡೆಗಳು. ಇವನ್ನು ದಾಟಿ ಹೊರಟು ಮಧ್ಯಾಹ್ನ ಮೂರು ಗಂಟೆಯ ಹೊತ್ತಿಗೆ ಹೊಸಪೇಟೆ ಸೇರಿದೆವು.

ರೈಲು ಬರುವುದಕ್ಕೆ ಮುಂಚೆಯೇ ಅಲ್ಲಿನ ಫಲಾಹಾರ ಮಂದಿರಕ್ಕೆ ಹೋಗಿ ನಾನು ಟೀ ಕುಡಿಯ ಕುಳಿತೆ. ಟೀ ಕುಡಿದು ಐದಾರು ದಿನಗಳ ಮೇಲೆ ಆಗಿತ್ತು. ನಮ್ಮ ದೇಶದಲ್ಲಿ ಟೀ ಕುಡಿಯುವವರೂ ಕಾಫಿ ಕುಡಿಯುವವರೂ ಅನೇಕ ವೇಳೆ ಶತ್ರುಗಳು. ಯಾವಾಗಲೂ ವಾದಿ ಪ್ರತಿವಾದಿಗಳು. ಕಾಫಿಯವರ ಸಂಖ್ಯೆ ಜಾಸ್ತಿ. ಆದುದರಿಂದ ಅವರದೇ ಪ್ರಾಬಲ್ಯ. ಟೀಯವರ ವಿಷಯದಲ್ಲಿ ಅವರಿಗೆ ಸಹನೆಯೇ ಇಲ್ಲ. ನನ್ನಂಥವರು ನಮ್ಮ ದೇಶದಲ್ಲಿ ಬಹು ಕಡಮೆ. ಆದುದರಿಂದಲೇ ನಮ್ಮ ದೇಶ ಹೀಗೆ ಅಧೋಗತಿಗೆ ಬಂದಿರುವುದು. ಬೆಳಿಗ್ಗೆ ಕಾಫೀ, ಅಪರಾಹ್ನದಲ್ಲಿ ಟೀ, ಸಾಯಂಕಾಲ ಕೋಕೊ, ರಾತ್ರಿ ಮಲಗುವುದಕ್ಕೆ ಮುಂಚೆ ಬೇಕಾದಷ್ಟು ಹಾಲು ಎಲ್ಲವನ್ನೂ ಒಂದೇ ಸಂತೋಷದಿಂದ, ಅವೊಂದಕ್ಕೂ ಮನಸ್ಸಿಗೆ ಅಸಮಾಧಾನವಾಗದಂತೆ ಕುಡಿಯಬಲ್ಲವರು ಎಲ್ಲೊ ಸ್ವಲ್ಪ

ಮಂದಿ ಮಾತ್ರ. ಸಜ್ಜನ ವರ್ಗದ ಹಾಗೆ. ನಮ್ಮಿಂದಲೇ ಈ ದೇಶದ ಕೀರ್ತಿ ಇನ್ನೂ ಉಳಿದಿರುವುದು; ನಮ್ಮ ಸಾಂಪತ್ತಿಕ ಸ್ಥಿತಿಯೂ ಉತ್ತಮಗೊಳ್ಳುತ್ತಿರುವುದು.

ಮೊಗಲ್ ಸುಲ್ತಾನರಿಗೆ ತಮ್ಮ ಅನಂತ ಮಹಿಷೀ ವರ್ಗದಲ್ಲಿ – ಅವರು ಪಟ್ಟ ಮಹಿಷಿಗಳಲ್ಲವೇ – ಎಷ್ಟು ಸರ್ವಸಮನಾದ ಪ್ರೀತಿಯಿದ್ದಿತೊ ಆ ಪಾನೀಯಗಳ ವಿಚಾರದಲ್ಲಿ ನನಗೆ ಹಾಗೆ. ಅಂಥವರನ್ನು ಕಂಡರೆ ನನಗೆ ಮೆಚ್ಚುಗೆ ಬಹಳ. ನಮಗೆ ದ್ವೇಷಾಸೂಯೆಗಳಿಲ್ಲ. ಕೇವಲ ಕಾಫೀ ಉಪಾಸಕರಂಥ ಕಠಿಣರು, ಅಸಹನೆಯವರು ಪ್ರಪಂಚದಲ್ಲಿ ಬೇರೆ ಯಾರೂ ಇಲ್ಲವೆಂದು ಹೇಳಬಲ್ಲೆ, ನನಗೆ ಅವರ ಅನುಭವವಿದೆ.... ಮಹರಾಯರು!....

ಇತ್ತ, ಒಂದು ಬಟ್ಟಲಾಯಿತು. ಎರಡು, ಮೂರು. ಸಾಕಲ್ಲವೆ? – ಎಂದು ಮನಸ್ಸನ್ನು ಕೇಳಿದೆ; ಅದು ನನಗೇನೂ ಉತ್ತರ ಕೊಡಲಿಲ್ಲ; ಅಡ್ಡ ಗೋಡೆಯ ಮೇಲೆ ದೀಪವಿಟ್ಟಂತೆ, ಹಾಗೂ ಹೀಗೂ ಎರಡು ವಿಧವಾಗಿಯೂ ಹೇಳಿತು. ರೈಲ್ವೆ ಹೋಟಲಿನ ಲಭ್ಯ ಕಡೆಗೆ ಎಷ್ಟಿದ್ದೀತು. ನೀವೇ ಹೇಳಿ. ಇಷ್ಟರಲ್ಲಿ ನನ್ನನ್ನು ಹುಡುಕಿಕೊಂಡು ರೈಲಿಗೆ ಹೊತ್ತಾಗಿ ಹೋಗುತ್ತದೆಂದು ಹೇಳುವುದಕ್ಕೆ ಮೂರ್ತಿ, ವೆಂಕಟೇಶಯ್ಯ ಬಂದರು. ಇವರ ಗುಟ್ಟನ್ನು ನಾನರಿಯೆನೆ? ಜೊತೆಗೆ ಸೇರಿಕೊಂಡರು. ಇನ್ನೂ ಎರಡು ಬಟ್ಟಲುಗಳಾದವು. 'ನಾನೇನ್ರಿ ಪಾಪಮಾಡಿದ್ದು, ನನ್ನನ್ನು ಕುಲದಿಂದ ಹೊರಗೆ ಹಾಕಿದ್ದೀರಿ. ಸರಿಯಪ್ಪ, ನಿಮ್ಮನ್ನು ನಂಬಿದವರ ತಲೆಯ ಮೇಲೆ ಕಲ್ಲೇ ಎಳಿ' ಎಂದು ಹಿಂದಿನಿಂದ ಯಾರೊ ಅಂದ ಹಾಗಾಯಿತು. ಹಿಂದಿರುಗಿ ನೋಡಿದೆ, ರಾಯರು. ಕ್ಲಬ್ಬಿನವನು ನನ್ನ ಮುಖ ನೋಡಿದ; ಇವರೂ ನೋಡಿದರು. ನನಗೆ ಅರ್ಥವಾಗಲಿಲ್ಲ. ಮುಖಗಳನ್ನು ವಿಸ್ಮಯಚಿಹ್ನೆಗಳಂತೆ ಮಾಡಿಕೊಂಡು ನಿರಪರಾಧಿಯೊಬ್ಬನ ಕಡೆ ಹೀಗೆ ಯಾರಾದರೂ ನೋಡಿದರೆ ಅವನೇನು ಮಾಡಬೇಕು? ವಿಜಯನಗರವನ್ನು ನೋಡಿ ವಿಜೇತರಾಗಿ ಬಂದ ಮೇಲೆ ಐದು ಬಟ್ಟಲು ಟೀ ಜಾಸ್ತಿಯೆ? ಇವರಿಗೇನು ತಿಳಿಯುವುದಿಲ್ಲ! – ಅಂದುಕೊಂಡೆ. ಇಷ್ಟರಲ್ಲಿಯೇ ರೈಲಿನ ಗಾರ್ಡು ಸಿಳ್ಳೆ ಊದಿದ ಶಬ್ದ ಕೇಳಿಸಿತು. ತ್ವರೆಯಿಂದ ಗಾಡಿಗೆ ಹೋಗಿ ಕುಳಿತೆವು.

ರೈಲು ಹೊರಟಿತು. 'ಇದೇನು, ಮುಖ ಒರಸಿಕೊಳ್ರಿ, ಸುರಿಯುತ್ತ ಇದೆಯಲ್ಲ' ಎಂದರು ವೆಂಕಟೇಶಯ್ಯನವರು. 'ಇನ್ನೇನು ಆಗುತ್ತೆ, ಸುರಿಯದೆ? ಇವರೇನು ಹಿಂದೆ ಅಗಸ್ತ್ಯರಾಗಿದ್ದರೊ ಏನೋಪ್ಪ. ಹಾಗೆ ಟೀ ಕುಡಿದರೆ! ನೀವು ಹೀಗೇ ಮಾಡಿ – ಇನ್ನು ಮೈಯಲ್ಲಿ ಇರೊ ಒಂದೆರಡು ಮೂಳೆ ಕೂಡ ಕರಗಿಹೋಗುತ್ತವೆ, ಆಮೇಲೆ' ಎಂದರು ಮೂರ್ತಿ. ನಾನು ದುರದುರ ನೋಡಿದೆ ಅವರ ಕಡೆ. ಆದರೂ ತಲೆಬಾಗಿಸಿಕೊಂಡೆ; ಉಹುಂ–ಕಿಟಕಿ ಕಡೆ ತಿರುಗಿಸಿದೆ. ಅವರ ಕಡೆ ನೋಡಿದರೆ ತಾನೆ ಅವರೇನಾದರೂ ಅನ್ನುವುದು? ನೋಡದೆಯೇ ಇದ್ದರೆ? ಬೇಕಾದವರು ಬೇಕಾದುದನ್ನು ಅಂದುಕೊಳ್ಳಲಿ. ಅಲ್ಪಾಪರಾಧಗಳಿಗೆ ನರಕವಾಸ ಮಾಡೆನ್ನುವರು ಯಾರು?

ಎಲ್ಲರೂ ಕಿಟಕಿಗಳಿಂದ ಹಿಂದೆ ಮುಂದೆ ನೋಡಲುಪಕ್ರಮಿಸಿದರು. ಆ ದೃಶ್ಯಗಳು, ದೂರದ ಬಿಸಿಲಿನ ಝಳ ಮಸುಕುಗಳಲ್ಲಿ, ಬಿಸಿಲು ಕುದುರೆಗಳ ಓಟದಲ್ಲಿ ಮುಚ್ಚಿ ಹೋದವು. ವಸ್ತುಪ್ರಪಂಚದ ಇತರ ದೃಶ್ಯಗಳೂ ಶಬ್ದಗಳೂ ಜೀವ ವ್ಯಾಪಾರಗಳೂ ಸಹವಾಸಗಳೂ ಕರ್ತವ್ಯ ಚಿಂತೆಗಳೂ ಮನಸ್ಸಿಗೆ ಬಂದುವು. ಕ್ಷಣಕ್ಷಣಕ್ಕೂ ಬದಲಾಯಿಸಿದವು. ಯಾವ ಯಾವುವೊ ಬೇರೆ ದೃಶ್ಯಗಳು ರೈಲು ಓಡಿದ ಹಾಗೆ; ಅದರ ನಡೆಗೆ, ಚಾಲನೆಗೆ, ಓಟಕ್ಕೆ ತೂಗಿ: ಮರ, ಗುಡ್ಡ, ಹುಲ್ಲುಮೆದೆ, ಮನೆ, ಗೋಡೆ, ಕೆರೆ, ತಾಳೆ, ಕತ್ತಾಳೆ ಸಾಲು ಓಡಿಬಂದವು; ಓಡಿಹೋದವು. ತಾತ್ಕಾಲಿಕ ವ್ಯವಹಾರ, ಮಾತುಕಥೆ, ನೋಟಗಳಲ್ಲಿ ಹಂಪೆ ಪಂಪಾ ವಿಜಯನಗರಗಳ ವಿಚಾರ ಕ್ರಮಕ್ರಮವಾಗಿ ನಿಂತು ಹೋಯಿತು. ಇನ್ನೊಂದು ಸಲ ಆ ಕಡೆ ನೋಡಿ ಕೈಮುಗಿಯಬೇಕೆನ್ನಿಸಿತು. ಆದರೆ ಯಾರಾದರೂ ನೋಡಿ ನಕ್ಕರೆ? ಏ! – ಎಂದುಕೊಂಡು ಮುಗಿಸುವುದರಲ್ಲಿ ವೆಂಕಟೇಶಯ್ಯನವರೂ ರಾಯರೂ ನಿಟ್ಟುಸಿರು ಬಿಟ್ಟಂತೆ ಕೇಳಿಸಿತು. ನನ್ನ ಭ್ರಮೆಯಿರಬಹುದೆ? – ಎಂದುಕೊಂಡೆ. ಅವರ ಮುಖದಲ್ಲಿ ಮತ್ತಾವ ವಿಶೇಷ ಭಾವಸಂಚಾರದ ಸುಳಿವೂ ಈ ಮುಂಚೆ ಕಾಣುತ್ತಿರಲಿಲ್ಲ. ಆದರೂ ಮೂವರೂ ಥಟ್ಟನೆ ಪರಸ್ಪರ ಮುಖಗಳನ್ನು ನೋಡಿಕೊಂಡೆವು – ಎಲ್ಲರ ಮುಖಗಳಲ್ಲೂ ಏಕಮನೋಭಾವದ ಸಂಚಾರವಿತ್ತು. ಸುಮ್ಮನಾದೆವು. ಮೂರ್ತಿ ಕಿಟಕಿಯ ಹೊರಗೆ ತಲೆಹಾಕಿ ಹೊರಗಿನ ದೂರವನ್ನೇ ನೋಡುತ್ತಿದ್ದರು.

'ಪಂಪಾಯಾತ್ರೆ ಮುಗಿಯಿತಪ್ಪ' ಎಂದರು ರಾಯರು.

'ಇನ್ನೊಂದು ಸಲ ನಾವು ಬರುವ ಹೊತ್ತಿಗೆ ಅಲ್ಲಿನ ಬೆಟ್ಟಗಳೆಲ್ಲ ಉರುಳಿ ಪುಡಿಪುಡಿಯಾಗಿ ಹೋಗಿರುವುವೇನೊ' ಎಂದರು, – ವೆಂಕಟೇಶಯ್ಯನವರು; – ಒಂದು ಚಿಟಿಕಿ – ಚಿಟಿಕಿ ಏನು ಬಂತು ಎರಡರಷ್ಟನ್ನು – ಹಿಡಿದು.

'ನಾಳೆ ಊರು ಸೇರಿಕೊಳ್ಳುವೆವು. ಅಲ್ಲಿ ಯಾವ ಯಾವುದು ಏನೇನು ಗತಿಯಾಗಿ ಹೋಗಿದೆಯೊ? ಊರು ಬಿಟ್ಟು ಆಗಲೆ ಹತ್ತು ಹನ್ನೆರಡು ದಿನಗಳಾಗಿ ಹೋಯಿತು' ಎಂದರು, ಯಜಮಾನರು.

ಯಾತ್ರೆ ಮುಗಿಯಿತು.

# ಬೆಳುದಿಂಗಳು

# ಮೈಸೂರು ರುಮಾಲು

ಹೆಂಗಸಿನ ಮನಸ್ಸನ್ನಳಿಯಬಹುದು; ನೀರಿನಲ್ಲಿರುವ ಮೀನಿನ ಕಾಲನ್ನು ಕಾಣಬಹುದು; ಅದೃಷ್ಟದಲ್ಲಿ ಏನು ಬರೆದಿದೆಯೆಂದು ಗುಣಿಸಬಹುದು; ಮೃತ್ಯುವಿನ ಬಸಿರನ್ನೇ ಬಗಿದು ಬದುಕಿ ಹೊರಕ್ಕೆ ಬರಬಹುದು. ಆದರೆ ರುಮಾಲನ್ನು ಕೆಡಿಸದೆ ಯಾವಾಗಲೂ ಸರಿಯಾಗಿಯೇ ಕಟ್ಟುತ್ತೇನೆನ್ನುವುದು ಒಂದು ಮಾತ್ರ ಅಸಾಧ್ಯ. ಹಾಗೆ ಕಟ್ಟುತ್ತೇನೆಂದು ಹೇಳಬಲ್ಲ ಗಂಡನ್ನು ನಾನು ಈವರೆಗೂ ನೋಡಿಲ್ಲ. ನಾನು ಎಷ್ಟೋ ಜನ ಸೊಗಸುಗಾರರನ್ನು ನೋಡಿದ್ದೇನೆ. ಕದೀಮರನ್ನು ಕಂಡಿದ್ದೇನೆ. ಅವರ ರುಮಾಲು ಚೆನ್ನಾಗಿರುವಾಗ ಪ್ರಶಂಸೆ ಮಾಡಿದ್ದೇನೆ. ಅಳೆದು ಕಟ್ಟಿದಂತೆ ಒಂದೇ ಸಮನಾಗಿ ರುಮಾಲು ಕಟ್ಟಬಲ್ಲ ಅವರ ಕೌಶಲವನ್ನು ಬಹುವಾಗಿ ಶ್ಲಾಘಿಸಿದ್ದೇನೆ. ಅಂಥ ಶಕ್ತಿಯನ್ನು ನನಗೂ ಕೊಡಬಾರದೆ, ದೇವರೆ, ಏನು ಈ ಪಕ್ಷಪಾತ, ಎಂದು ಮೊರೆಯಿಟ್ಟಿದ್ದೇನೆ. ಅಂಥವರೂ ಎಷ್ಟೋ ಬಾರಿ 'ಗಸ್ತು' ತಿನ್ನುವರಂತೆ! ಮುಗಿವವರೆಗೂ ಅದು ಸರಿಯಾಗುತ್ತದೆಂದು ಖಂಡಿತವಾಗಿ ಹೇಳಿ ಪಂದ್ಯ ಹಾಕಿ ಗೆಲ್ಲಬಲ್ಲವನು ಈ ಹೊತ್ತಿನವರೆಗೂ ಹುಟ್ಟಿಲ್ಲ. ಇನ್ನು ಮುಂದೆಯೂ ಹುಟ್ಟಬಾರದೆಂದು ದೇವರ ಇಚ್ಛೆ. ನಮ್ಮ ರುಮಾಲಿನ ಮಹತ್ವದ ಮುಖ್ಯ ಲಕ್ಷಣ ಅದಕ್ಕೆ ಮನಸ್ಸು ಬರಬೇಕು, ಅದು ಸರಿಹೋಗಬೇಕು. ಅದನ್ನು ನಾವು ಅನುಸರಿಸಬೇಕೇ ಹೊರತು ಜೋರುಮಾಡಿದರೆ ಏನೇನೂ ನಡೆಯುವುದಿಲ್ಲ. ಪೌರುಷದ ಪ್ರಯೋಗ ಪ್ರಯೋಜನಕಾರಿಯಾಗುವುದಿಲ್ಲ.

ನಾನು ಆಡುತ್ತಿರುವುದು ಮೈಸೂರು ರುಮಾಲಿನ ಮಾತು. ಆಮೇಲೆ ಸುಳ್ಳು ಹೇಳಿದನೆಂದು ವಾದಿಸೀರಿ. ಧಾರವಾಡದ್ದಾದರೆ ಕಟ್ಟಬಹುದು. ಪಂಜಾಬಿನದಾದರೆ ಕಟ್ಟಬಹುದು. ಕೊನೆಗೆ ಗುಜರಾತಿ, ಮಾರವಾಡಿ ರುಮಾಲುಗಳನ್ನಾದರೂ ಕಟ್ಟಬಹುದು. ಮದ್ರಾಸಿನವರು ಈ ಲೆಕ್ಕಕ್ಕೆ ಬರುವುದಿಲ್ಲವಲ್ಲ! ಹುಟ್ಟಿದವರು ಹುಟ್ಟಿದ ಹಾಗೆಯೇ ಇದ್ದು ಹೋಗುವ ಮಹಾನುಭಾವರು ಅವರು. ಮೈಮುಚ್ಚುವ ಅಗತ್ಯವೇ ಇಲ್ಲದಂತೆ ದೇವರು ಅವರಿಗೆ ಅನುಕೂಲಪಡಿಸಿ ಕೊಟ್ಟಿದ್ದಾನೆ. ಅಂಥ ಮುಕ್ತರ ಮಾತು ನಮಗೇಕೆ? ಮಿಕ್ಕ ಪ್ರಾಂತಗಳವರ ರುಮಾಲುಗಳು ಚೆನ್ನಾಗಿ ಕೈಗೆ ಹಬ್ಬುತ್ತವೆ. ಹೇಗೆ ಸುತ್ತಿದರೂ ಸರಿಬರುತ್ತವೆ. ಸರಿಬರಲೇಬೇಕು. ಅವಕ್ಕೆ ನಿಯಮವಿಲ್ಲ; ಕಟ್ಟಲು ಹೆಚ್ಚು ಕಷ್ಟವಿಲ್ಲ. ವಕ್ರವಾಗಿದ್ದಷ್ಟೂ ವಿಶೇಷ. ಮೈಸೂರು ರುಮಾಲೊ? ಎಲ್ಲಿಂದೆಲ್ಲಿಗೆ ಹೋಲಿಕೆ? ಬದುಕಿದರೆ ಬಂತೆ ಭಾಗ್ಯ?

ಸುಮ್ಮನೆ ನಮ್ಮನ್ನು ಸೊಗಸುಗಾರರು, ಬಯಲು ಡಂಬದವರು ಎಂದು ತಿಳಿಯದವರು ಆಕ್ಷೇಪಣೆ ಮಾಡುತ್ತಾರೆ. ಒರಟು ಜನ. ಗುಣಾವಗುಣ ವಿವೇಚನೆ ಮಾಡತಕ್ಕ ಶಕ್ತಿಯಿಲ್ಲದವರು. ಈ ಸುಖ, ಈ ನಯ, ಈ ಸುಖದ ಈ ನಯ, ಈ ನಯದ ಈ ಸುಖ, ಇವು ಅನುಭವಿಸಿದವರಿಗೆ ಮಾತ್ರ ಗೊತ್ತು. ಇತರರಿಗೆ ಹೇಗೆ ಗೊತ್ತಾದೀತು? ಈ ಹೊರ ಜಂಭವನ್ನೇ ಆಗಲಿ ಎಷ್ಟು ಜನ ಹೀಗೆ ಮನೋಹರವಾಗಿ ಮಾಡಿಯಾರು? ಎಲ್ಲರಿಗೂ ಸಾಧ್ಯವೊ? ಮಾಡುತ್ತಿರುವ ನಮಗೆ, ಮಾಡಲು ಪ್ರಯತ್ನಪಟ್ಟು ಕೈಲಿ ಹರಿಯದೆ ಬಿಟ್ಟುಬಿಟ್ಟಿರುವವರಿಗೆ – ಈ ಇಬ್ಬರಿಗೆ ಮಾತ್ರ ಅದರ ಕಷ್ಟಸುಖಗಳು ಗೊತ್ತು. ನಮ್ಮವರು ರಂಗಕ್ಕಿಳಿದರೆ ಎದುರು ನಿಲ್ಲುವ ಧೀರನು ಯಾರು! ಮೈಸೂರು ನಯ ನಾಜೂಕು, ವಿತರಣೆ, ಐಟಕ್ಕು – ಇವು ಸುಮ್ಮನೆ ಬಂದಾವೆ? ದೇವರಲ್ಲಿ ವರವನ್ನು ಪಡೆದು ಇಲ್ಲಿ ಹುಟ್ಟಿ ಅವುಗಳನ್ನು ಅನುಭವಿಸಬೇಕು. ಈ ಜನ್ಮದಲ್ಲಿ ಅವು ದೊರೆಯವಾದರೆ ಮುಂದಿನ ಜನ್ಮಕ್ಕಾದರೂ ದೊರೆಯಲೆಂದು ಹಗಲೂ ರಾತ್ರಿಯೂ ತಪಸ್ಸು ಮಾಡಬೇಕು.

ಮೈಸೂರು ರುಮಾಲಿನ ವಿಶೇಷವೇನು, ಎನ್ನುವಿರೊ? ಅದು ಎಂಥವರಿಗಾದರೂ ದಾಕ್ಷಿಣ್ಯವಿಲ್ಲದೆ 'ಗಸ್ತು' ಕೊಡುವುದು. ಅದರ ವಿಷಯವಾಗಿ ಉದಾಸೀನ ತೋರಿಸಿದರೂ ಸರಿಯೆ, ಧೋರಣೆ ಮಾಡಿದರೂ ಸರಿಯೆ, ಹಾಗೆ ಮಾಡುವವರು ಖಂಡಿತ ಬೇಸ್ತು ಬೀಳುತ್ತಾರೆ. ಆದುದರಿಂದ ಅದನ್ನು ತಾತ್ಸಾರ ಮಾಡಬೇಡಿ. ನೀವು ಆಲಸ್ಯ ತೋರಿಸಿದರೆ ನೀವು ಬೇಹುಷಾರಾಗಿರುವ ಸಮಯ ಕಾದುಕೊಂಡಿದ್ದು ಮೆಲ್ಲಗೆ, ಮೆಲ್ಲಗೆ ಬಾಲಬಿಚ್ಚಿ ನಿಮಗೆ ಕೆಲಸ ಕೊಡುತ್ತದೆ. ಅದು ಮಾಡಬಲ್ಲ ಅವಮಾನ ಸಾಧಾರಣವಾದುದಲ್ಲ. ನೀವು ಸ್ಕೂಲು ಮೇಷ್ಟರಾಗಿದ್ದರಂತೂ ನಿಮ್ಮ ಪಾಡು ನಾಯಿಪಾಡು. ಎಲ್ಲರ ಅನುಭವದ ಮಾತನ್ನೇ ನಾನು ಹೇಳುತ್ತಿರುವುದು. ಯಾರನ್ನು ಬೇಕಾದರೂ ಕೇಳಿಕೊಳ್ಳಿ, ನಾನು ಹೇಳುವುದು ನಿಜವೊ ಸುಳ್ಳೊ ಗೊತ್ತಾಗುವುದು. ಅದರ ಅಂದ ಅದರ ಇನ್ನೊಂದು ಮುಖ್ಯ ವಿಶೇಷ. ಬೇರೆ ಯಾವ ರುಮಾಲೂ ತೂಕ, ಬಣ್ಣ, ಗಾತ್ರ, ನಯಗಳಲ್ಲಿ ಇದಕ್ಕೆ ಜೋಡಲ್ಲ. ಎಷ್ಟು ಕಮ್ಮಿಯೆಂದರೂ ೨೦–೨೫ ರೂಪಾಯಿಗಳಿಗೆ ಕಡಮೆಯ ಬೆಲೆಗೆ ದೊರಕದಿರುವುದು ಎರಡನೆಯ ವಿಶೇಷ. ಕೋರು ರುಮಾಲು ಬೇಕಾದರೆ ಖರ್ಚು ಮಾಡಬೇಕು. ಅದೇನು ಪೋಸ್ಟಾಫೀಸು ಬೆಂಡು ರುಮಾಲು ಕೆಟ್ಟು ಹೋಯಿತೆ? ಒಳ್ಳೆಯ ವಸ್ತುಗಳಿಗೆ ಯಾವಾಗಲೂ ಬೆಲೆ ಹೆಚ್ಚೇ. ಎಷ್ಟೇ ಚೆನ್ನಾಗಿ ಇಸ್ತ್ರಿ ಮಾಡಿದರೂ ಮುರುಗು ಚೆನ್ನಾಗಿ ಬಾರದೆ ಹೋಗುವುದು; ಸರಿಗೆಯ ಬಣ್ಣ ಕಪ್ಪಾಗುವುದು; ಸರಿಗೆ ಮುದುರಿಕೊಳ್ಳುವುದು; ಅಗಸನಿಗೆ ಅಪಕೀರ್ತಿಯನ್ನೂ ಯಜಮಾನನಿಗೆ ಅಸಮಾಧಾನವನ್ನೂ ತರುವುದು; ಆರ್ಯಭಟ್ಟನೇ ಲೆಕ್ಕಹಾಕಲಿ, ಅಳತೆಯ ಸುತ್ತು ಹೆಚ್ಚು ಕಡಮೆಯಾಗಿ ಆರು ಸಲ ಕಟ್ಟಿ, ನೂರು ಸಲ ಬಿಚ್ಚಿ, ಕಟ್ಟುತ್ತ ಬಿಚ್ಚುತ್ತ ಬೇಸರವಾಗುವುದು; ತಲೆಗೆ ಉರಿ ಬಂದು ಕಪ್ಪು ಮುಖವೂ ಕೆಂಪಾಗಿ, ಮೈ ಬೆವರಿ, ಆವೇಶವೇರಿ, ಕೊನೆಗೆ ರುಮಾಲು ಕೊಳೆಯಾಗಿ ಅಂಟಾಗಿ, ಕಾಲಿಂದ 'ಹೈಕಿಕ್'

ಹೊಡೆದುಬಿಡೋಣವೇ ಎನ್ನಿಸುವಷ್ಟು ರೋಷ ತರುವುದು – ಮೂರನೆಯ ವಿಶೇಷ. ಇವೆಲ್ಲಕ್ಕೂ ಮೀರಿ, ಸಮಯ, ಸಂದರ್ಭ, ಉತ್ಸವ, ಮುಂತಾದ ಕಾಲಗಳಲ್ಲೇ ಬೇಕೆಂದು ಕೆಟ್ಟುಹೋಗುವುದು ಮಹಾ ವಿಶೇಷ. ನಾಲ್ಕುಜನ ದೊಡ್ಡವರು ಸೇರುವ ಕಡೆ ಹೋಗಬೇಕು, ರೈಲಿಗೆ ಹೊತ್ತಾಯಿತು, ಕಚೇರಿಗೆ ಕಾಲ ಮೀರಿತು, ಸಾಹೇಬರನ್ನು ನೋಡಬೇಕು, ಫೋಟೋಗೆ ಕುಳಿತುಕೊಳ್ಳಬೇಕು, ದರ್ಬಾರಿಗೆ ದಯಮಾಡಿಸಬೇಕು, ಹಲವೇನು – ಈ ಹೊತ್ತು ರುಮಾಲು ಬೇಗ ಚೆನ್ನಾಗಿ ಕಟ್ಟಿಕೊಳ್ಳಬೇಕು ಎಂದು ಯಾವಾಗ ಅಂದುಕೊಳ್ಳುವೆವೊ ಆಗಲೇ ಕೆಟ್ಟೀತು! ಹೀಗೆ ಅನಂತಗುಣ ವಿಶೇಷಗಳಿಂದ ವಿಶೇಷಿತವಾಗಿರುವ ಮಹಾವಸ್ತುವಿಗೆ ಇದೇ ವಿಶೇಷ, ಅದೇ ವಿಶೇಷವೆಂದು ಸುಲಭವಾಗಿ ಹೇಳಿ ಮುಗಿಸುವುದು ಹೇಗೆ? ಹಾಗಲ್ಲ ಹೀಗಲ್ಲ ಎಂದು ಶಂಕರಾಚಾರ್ಯರು ಪರಬ್ರಹ್ಮ ವಸ್ತುವಿಗೆ ಹೇಳಿದಂತೆ ನಮ್ಮ ರುಮಾಲಿಗೂ 'ನೇತಿ ನೇತಿ' ಎಂದು ಹೇಳಿದರೆ ಸುಮಾರು ನಿಜಕ್ಕೆ ಹತ್ತಿರ ಬರಬಹುದು. ಇದೇ ಪರಮ ವಿಶೇಷ.

ರುಮಾಲು ಎಂದ ಮಾತ್ರಕ್ಕೇ ಅದರೊಳಗೆ ಪೇಟಾ ಸೇರುವುದಿಲ್ಲವೆಂದುಕೊಳ್ಳ ಬೇಡಿ. ರುಮಾಲು, ಪೇಟಾ ಎರಡೂ ಒಂದೇ. ಏಕೆಂದರೆ ಯಾವುದು ರುಮಾಲು, ಯಾವುದು ಪೇಟಾ ಎಂಬುದು ನನಗೆ ಗೊತ್ತಿಲ್ಲ. ಬಾಲಂಗೋಸಿಯ ಹಾಗೆ ಕತ್ತರಿಸಿರುವುದು ಪೇಟವೊ ರುಮಾಲೊ? ಕತ್ತರಿಸದೆ ಒಂದೇ ಕಡೆ ಜರಿಯಿರುವುದು? ಇವರೆಡರಲ್ಲಿ ಒಂದಕ್ಕೆ ಈ ಹೆಸರು, ಒಂದಕ್ಕೆ ಆ ಹೆಸರು ಎಂದು ಮಾತ್ರ ಗೊತ್ತಿದೆ. ಎರಡರಿಂದಲೂ ಪ್ರಯೋಜನ ಒಂದೇ – ಮುದ್ದಾಗಿ ಮೈಸೂರಿನ ಜರ್ಬು ರುಮಾಲು ಕಟ್ಟಬಹುದು. ಇನ್ನು ಅವುಗಳಲ್ಲಿ ಭೇದವನ್ನೇಕೆ ಎಣಿಸಬೇಕು? ಆದುದರಿಂದಲೇ ನಾನೂ ನಿತಾಂತವಾಗಿ ಇದು ಹೀಗೆ ಎಂದು ತಿಳಿದು ದೃಢಪಡಿಸಿಕೊಳ್ಳಲು ಅಷ್ಟಾಗಿ ಪ್ರಯತ್ನ ಪಡಲಿಲ್ಲ. ಇತರರು ಒಂದೆರಡು ಸಲ ಅವುಗಳ ವ್ಯತ್ಯಾಸವನ್ನು ನನಗೆ ತಿಳಿಯಹೇಳಿದ್ದಾರೆ. ಆದರೇನು: ಮುಖ್ಯವಾದ ವಿಷಯಗಳಾಗಿದ್ದರೆ ತಾನೆ ಮನಸ್ಸಿನಲ್ಲಿ ನಿಂತಾವು? ಕ್ಷೇಮಕಾಲದಲ್ಲಿ ಇದು ರೂಪಾಯಿ, ಇದು ನೋಟು ಎಂದು ಜನರು ಹೇಗೆ ಭೇದವೆಣಿಸರೊ ಹಾಗೆ ಸತ್ಯಸ್ವರೂಪ ತಿಳಿದವರು ಇದು ರುಮಾಲು, ಇದು ಪೇಟಾ ಎಂಬ ಭೇದ ಎಣಿಸರು. ನಾನು ಎಣಿಸುವುದಿಲ್ಲ. ನೀವೂ ನನ್ನ ಹಾಗೆಯೇ ಮಾಡಿ.

ಮೈಸೂರಿನವರು ನಾವು ರಸಿಕರು. ಈ ವಿಚಾರವನ್ನು ಪ್ರಪಂಚವೇ ಬಲ್ಲುದೆಂದೂ ನಮಗೆ ಗೊತ್ತಿರುವುದು. ರಸಿಕತೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಏನನ್ನು ಬೇಕಾದರೂ ಮಾಡಲು ನಾವು ಸಿದ್ಧವಾಗಿರುವವರು. ಅದರಲ್ಲಿನ ಆಸಕ್ತಿಯಿಂದ ಬಡತನ ಬಂದೀತೆಂದು ಅಂಜೆವು. ಇತರರು ಹಳಿದಾರೆಂದು ಲೆಕ್ಕಿಸೆವು. ಕಾಯಿಲೆ ಬಿದ್ದೇವೆಂದು ಹೆದರೆವು. ಅದಕ್ಕಾಗಿ ಸರ್ವಸ್ವವನ್ನೂ ವೆಚ್ಚ ಮಾಡಲು ಹಿಂಜರಿಯೆವು. ಅದೂ ಒಂದು ಪುಣ್ಯ. ನಾಳೆಗೆ ಹೇಗಪ್ಪ ಎಂದು ಚಿಂತಿಸಿ ಕಂದಿ ಬೀಳೆವು. ಬೀಳುವ ಅಂಥವರು ಏನು ಮನುಷ್ಯರು, ಹೇಳಿ! ಇರುವಷ್ಟು ಕಾಲವೂ ಸುಖವಾಗಿ ಕಲೆಗಳ ವ್ಯವಸಾಯದಲ್ಲಿಯೊ

ಸುಂದರ ವಿಷಯಗಳಲ್ಲಿ ಅನುರಕ್ತಿಯನ್ನು ಹೆಚ್ಚಿಸುವ ಕಾರ್ಯಗಳಲ್ಲಿಯೊ ಮಗ್ನರಾಗಿರುವೆವು.... ಮೈಸೂರಿನಲ್ಲಿ ಯಾವುದೂ ಅತಿಯಲ್ಲ, ಉಡುಗೆ ತೊಡುಗೆ, ಊಟ ಉಪಚಾರ, ಮಾತುಕತೆ, ಧನಧಾನ್ಯ, ಧೈರ್ಯ ಸಾಹಸ ಎಲ್ಲವೂ ಮಿತ. ಸಮಧಾತು. ಅರಿಸ್ಟೋಟಲು ಹೇಳಿರುವ The High–minded Man ಅಂತಹ ಉದಾತ್ತ ಸ್ವಭಾವದವರು.

ಭೋಗಸಂಪತ್ತಿಯನ್ನು ದೇವರು ನಮಗೆ ಬೇಕಾದಷ್ಟು ಒದಗಿಸಿದ್ದಾನೆ. ಎಂಥವರಿಗೂ ಇಲ್ಲಿ ಸುಖಾಪೇಕ್ಷೆ ಬರುವುದು. ವಿರಾಮ ಹೆಚ್ಚಾಗಿ ದೊರಕುವುದು. ಸ್ವಲ್ಪ ಶ್ರಮ ಪಟ್ಟರೆ ಅತಿಯಾದ ಪ್ರಯೋಜನ ದೊರಕುವುದು. ಎಂಥ ತತ್ತ್ವ ಶೋಧಕರಿಗಾಗಲಿ ಎಂಜನಿಯರುಗಳಾಗಲಿ ಸ್ವದೇಶದವರಿಗಾಗಲಿ ವಿದೇಶದವರಿಗಾಗಲಿ ಸ್ಥೋಮವಾಗಿ ಮೈ ಬೆಳೆಯುವುದು. ಕಣ್ಣು ತುಂಬ ನಿದ್ರೆ ಬರುವುದು. ಕೆಲಸಗಳನ್ನು ತಾನೆ ಏತಕ್ಕೆ ಮಾಡಬೇಕು? ಅವಶ್ಯಕತೆಯೇನಿದೆ ? ನಮ್ಮದು ರಾಮರಾಜ್ಯ, ಭೋಗರಾಜ್ಯ, ಶೃಂಗಾರ ರಾಜ್ಯ. ಮೈಸೂರಿನ ಚೆಲುವು ಬೆಡಗುಗಳ ಧ್ಯಾನವೊಂದೇ ಸಾಲದೆ ? ಹದವಾದ ಇಲ್ಲಿನ ವಾಯುಗುಣವೊಂದೇ ಸಾಲದೆ? ನಮ್ಮ ಶ್ರೀಗಂಧದ ಸೌಗಂಧ ಒಂದು ಸಾಲದೆ? ನಮ್ಮ ಮಲ್ಲಿಗೆ ಹೂ, ವೀಳೆಯದೆಲೆ, ಬದನೆಕಾಯಿಗಳ ಪರಿಮಳ ಸವಿ ಸೌಕುಮಾರ್ಯಗಳೇ ಸಾಲವೆ? ಆದುದರಿಂದಲೇ ಇತರರು ನಮ್ಮನ್ನು ಎಷ್ಟು ಆಕ್ಷೇಪಿಸಿದರೂ ನಮ್ಮಲ್ಲಿಗೆ ಬೀದಿಯ ಬಾಗಿಲಿನ ಕಡೆಯಿಂದಲ್ಲದಿದ್ದರೆ ಹಿತ್ತಿಲ ಬಾಗಿಲಿಂದಾದರೂ, ಕದ್ದಾದರೂ ತಂಡ ತಂಡವಾಗಿ ಬಂದು ನೆಲಸಿ, ತಾವೂ ಮೈಸೂರಿನವರೆನಿಸಿಕೊಂಡು ನಮ್ಮ ಭೋಗ ಭಾಗ್ಯಗಳಲ್ಲಿ ದಿನೇ ದಿನೇ ಹೆಚ್ಚು ಹೆಚ್ಚು ಭಾಗಿಗಳಾಗಲು ಹಾರೈಸುತ್ತಿರುವುದು. ನಮಗೇ ಉಳಿಯದಂತೆ ಅವುಗಳನ್ನು ಭೋಗಿಸುತ್ತಿರುವುದು.

ಇನ್ನು ನಮ್ಮ ರಾಜಧಾನಿಯೊ! ಎಲ್ಲಿ ನೋಡಿದರಲ್ಲಿ ಕಣ್ಣನ್ನು ಮೋಹಿಸಿ, ಬಗೆಯನ್ನು ಬಂದಿಹಿಡಿಯುವ ಉಪವನಗಳು, ರಾಜಬೀದಿಗಳು, ಸೌಧಗಳು, ಮೇಳ ತಾಳಗಳು, ಸಂಗೀತ, ಶಿಲ್ಪಕಲಾಚಾತುರಿ, ಚಿತ್ರಸೌಂದರ್ಯ ದೃಶ್ಯಗಳು! ಇವು ಯಾರಿಗೆ ಉಂಟು ಯಾರಿಗೆ ಇಲ್ಲ? ಕೊನೆಗೆ ಅಲ್ಲಿನ ಮಡಿವಾಳಿಗಳಂಥ ಬಟ್ಟೆ ಮಡಿಮಾಡುವವರಾರು? ಅಲ್ಲಿನ ಆಯುಷ್ಕರ್ಮದವರಂತೆ ಕಲೆಗಾರರಾರು? ಸಣ್ಣವರಿಂದ ಹಿಡಿದು ದೊಡ್ಡವರವರೆಗೂ ಎಲ್ಲರೂ ಕಲೆಗಾರರೇ.

ಇಂಥ ಊರಿನ, ಇಂಥ ದೇಶದ, ಮರ್ಯಾದೆಗೆ ತಕ್ಕಹಾಗಿರಬೇಕಲ್ಲವೆ ರುಮಾಲು? ರುಮಾಲು ಶಿರಸ್ಸಿಗೆ ಭೂಷಣ. ಆದುದರಿಂದಲೇ ನಮ್ಮ ರುಮಾಲು ಅಷ್ಟು ಮನೋಹರವಾಗಿರುವುದು. ದಕ್ಷಿಣದವರ ದಿಗಂಬರತೆಯೆಲ್ಲಿ ? ಉತ್ತರದವರ ಪರಕೀಯ ವಕ್ರತೆಗಳೆಲ್ಲಿ? ಮೈಸೂರಿನವರ ಶುದ್ಧ ಸೌಂದರ್ಯ ಸಂಪ್ರದಾಯವೆಲ್ಲಿ? ಉತ್ತರದವರಲ್ಲಿ ಕೆಲವರ ರುಮಾಲು ನಮ್ಮೂರ ಕರಗದಂತೆ ಇರುತ್ತದೆ. ಇನ್ನು ಕೆಲವರದು

ಸೇದುವ ಹಗ್ಗದಿಂದ ಹಣೆಗೆ ಮಂಕರಿ ಹೆಣೆದಂತೆ ಇರುತ್ತದೆ. ಇನ್ನು ಕೆಲವು ನಾಟಕದ ವೇಷಗಳಂತಿರುತ್ತದೆ. ಇನ್ನು ಕೆಲವು ನಾನಾ ರಂಗಿನವು. ನಮ್ಮದೋ : ಬಹು ಉದ್ದವಲ್ಲ, ಬಲು ಚಿಕ್ಕದಲ್ಲ. ಬೆಳ್ಳಗೆ ಬಲ್ಲಿಯ ಪರೆಯಂತೆ ಇರುವುದು. ಸಾತ್ವಿಕ ಸ್ವಭಾವದ್ದು. ತಲೆಗೆ ಅಲಂಕಾರ, ಮುಖಕ್ಕೆ ಕಾಂತಿ. ಯಾವ ಬಗೆಯ ಮೈ ಬಣ್ಣಕ್ಕಾಗಲಿ ಹೊಂದಿಕೊಂಡು ಎಲ್ಲರ ಪ್ರೀತಿಗೂ ಮರ್ಯಾದೆಗೂ ಪಾತ್ರವಾಗುವುದು. ಆದುದರಿಂದಲೇ ಅದಕ್ಕೂ ನಮಗೂ ಕೀರ್ತಿ. ಯಾರು ಶ್ರದ್ಧೆಯಿಂದ ಭಕ್ತಿಯಿಂದ ಅದಕ್ಕಾಗಿ ಶ್ರಮಪಡುವರೊ ಅಂಥವರಿಗೆ ಅದು ಒಲಿಯತಕ್ಕದ್ದು. ಯಾರು ಸಂತತವಾಗಿ ಅದನ್ನು ಉತ್ತಮಗೊಳಿಸುವ ಪ್ರಯತ್ನದಲ್ಲಿರುವರೊ ಅಂಥವರಿಗೆ ವರವನ್ನು ಕೊಡತಕ್ಕದ್ದು. ಯಾರು ಆ ಪ್ರಯತ್ನ ನಿಲ್ಲಿಸುವರೊ ಅಂಥವರು ಪುನಃ ನೆಗೆದಾಡಿದರೂ ಅದನ್ನು ಬೇರೆ ರೀತಿ ರೂಪುಗೊಳಿಸಲು ಅಸಾಧ್ಯವಾಗುವಂತೆ ಮಾಡಬಲ್ಲದ್ದು. ಅವರ ಅಭಿವೃದ್ಧಿಯನ್ನು ಅಲ್ಲಿಗೇ ನಿಲ್ಲಿಸುವಂಥಾದ್ದು. ಯಾರು ಧೋರಣೆ ಮಾಡುವರೊ ಔದ್ಧತ್ಯದಿಂದ ವರ್ತಿಸುವರೊ ಅವರ ಸೊಕ್ಕು ಮುರಿಯುವುದು. ನಾನು ಹೀಗೆ ಮಾಡುತ್ತೇನೆ, ಹಾಗೆ ಸುತ್ತುತ್ತೇನೆ, ನೋಡಿ ಎಂದು ಜಂಬ ಹೊಡೆದರೆ ಆಯಿತು ಶಾಸ್ತಿ! ಮುದ್ದಾಗಿ ಬರೆಯಬೇಕೆಂದು ಕುಳಿತ ದಿನವೇ ಅಕ್ಷರವೂ ಬರವಣಿಗೆಯೂ ಕೆಟ್ಟು ಹಾಳಾಗುವಂತೆ!....ಹೀಗೆ ನಮ್ಮ ರುಮಾಲು ನಮ್ಮ ಜನರ ಶೀಲಸಂಸ್ಕಾರಕ್ಕೂ ಮನಸ್ಸಿನ ಶಿಕ್ಷಣಕ್ಕೂ ಬಹು ಅಮೂಲ್ಯವಾದ ಸಹಕಾರಿಯಾಗಿದೆ.

ಮೈಸೂರು, ರುಮಾಲು, ರಸಿಕತೆ ಇವು ಮೂರು ಸಮಾನಧರ್ಮ ಸೂಚಕಗಳು. ರುಮಾಲನ್ನು ಚೆನ್ನಾಗಿ ಸುತ್ತುವುದು ಸುಲಭವಲ್ಲವೆಂದು ಇದುವರೆಗೇ ತಿಳಿದುಬಂದಿದೆ ಯಷ್ಟೆ? ಅದನ್ನು ಚೆನ್ನಾಗಿ ಸುತ್ತಬೇಕಾದರೆ ಅನೇಕ ರುಮಾಲಿನ ರಚನೆಗಳನ್ನು ನೋಡಿರಬೇಕು. ಕಟ್ಟುವ ರೀತಿಯನ್ನು ಗುರುವಿನ ಮೂಲಕವೊ ಹತ್ತಾರು ಕಡೆ ಧ್ಯಾನಪೂರ್ವಕವಾಗಿ ಅನುಸಂಧಾನ ಮಾಡಿಯೊ ತಿಳಿದು ಬಹುಕಾಲದ ಅಭ್ಯಾಸದಿಂದ ಕೈ ಹತೋಟಿಗೆ ತಂದುಕೊಂಡಿರಬೇಕು. ಕಟ್ಟಿ ಕಟ್ಟಿ ಕೈ ಪಳಗಿಸಿಕೊಂಡಿರಬೇಕು. ಮೇಲಾಗಿ ವಿನಯವನ್ನಾಚರಿಸಬೇಕು. ಒಂದಂಗಡಿಯಲ್ಲಲ್ಲದಿದ್ದರೆ ಹತ್ತಂಗಡಿಗಳಿಗೆ ಹೋಗಿ ಒಂದೂರಲ್ಲಲ್ಲದಿದ್ದರೆ ಎರಡು ಊರು ತಿರುಗಿ ಬಟ್ಟೆ ಜರತಾರಿ ಎರಡೂ ಚೆನ್ನಾಗಿರುವ ಪದಾರ್ಥವನ್ನು ಮೊದಲು ಕೊಂಡು ತರಬೇಕು. ಜರತಾರಿಯ ಪರೀಕ್ಷೆ ನಿಜವಾಗಿ ವರಪರೀಕ್ಷೆ. ಐ.ಸಿ.ಎಸ್. ಪರೀಕ್ಷೆಯಲ್ಲಾದರೂ ತೇರ್ಗಡೆ ಹೊಂದಬಹುದು. ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರೆ ಅದರಲ್ಲಿ ಖಂಡಿತವಾಗಿ ಮೊದಲಿಗರಾಗಿ ಪ್ಯಾಸಾಗಬಹುದು. ಅಂಗಡಿಯಿಂದ ಮನೆಗೆ ತಂದ ಮೇಲೆ ಮನೆಯ ಹೆಣ್ಣು ಮಗಳಂತೆ ಅದನ್ನು ನೋಡಿಕೊಳ್ಳಬೇಕು. ಆರೈಕೆ ಮಾಡಬೇಕು. ಅಷ್ಟಾದರೂ ನಿಮ್ಮ ಮರ್ಯಾದೆಯೆಲ್ಲ, ನಿಮ್ಮ ಸೌಖ್ಯವೆಲ್ಲ ನಿಮ್ಮ ಅಗಸನ ಕೈಯಲ್ಲಿದೆ. ಅವನ ಮೇಲೆ ರೇಗಾಡೀರಿ. ಅವನು ಒಗೆ ಕೆಡಿಸಿದರೆ ಪುನಃ ಬ್ರಹ್ಮದೇವರೇ ಬಂದರೂ ಅವನು ಕೆಡಿಸಿದ ಕೆಲಸ ಸರಿಹೋಗುವುದಿಲ್ಲ. ಈ ಸಂಗತಿಯನ್ನು ಎಷ್ಟು ಒತ್ತಿ ಹೇಳಿದರೂ

ಕಮ್ಮಿಯೇ. ಚೆನ್ನಾಗಿ ರುಮಾಲು ಸುತ್ತಬಲ್ಲವನು ಮೂರು ಲೋಕಗಳನ್ನು ಗೆಲ್ಲಬಲ್ಲನು. ಆರು ಲೋಕಗಳನ್ನು ಆಳಬಲ್ಲನು. ಪ್ರಪಂಚವನ್ನೇ ಒಲಿಸಬಲ್ಲನು. ಅನಂತ ವಿಶ್ರಾಂತವಾದ ಕೀರ್ತಿಯನ್ನು ಪಡೆಯಬಲ್ಲನು. ನೀವು ರಸಿಕರು ಹೌದೊ ಅಲ್ಲವೊ ಎಂದು ಯಾವಾಗಲಾದರೂ ನಿಮಗೆ ಸಂಶಯ ಬಂದರೆ ನಿಮ್ಮ ರುಮಾಲನ್ನು ನೋಡಿಕೊಳ್ಳಿ. ನಾನು ಹೇಳಿರುವ ಲಕ್ಷಣಗಳು ಅಲ್ಲಿದ್ದು ನಾನು ಮುಂದೆ ಸೂಚಿಸುವ ಅವಲಕ್ಷಣಗಳು ಇಲ್ಲದಿದ್ದರೆ ನೀವು ರಸಿಕರು ನಿಜವೆಂದು ನಂಬಿ. ಇಲ್ಲವಾದರೆ ರಸಿಕರಲ್ಲ.

ಚೆನ್ನಾಗಿ ರುಮಾಲು ಕಟ್ಟುವುದು ಹೇಗೆ ? ಯಾವುದಾದರೂ ನಿಯಮಗಳಿವೆಯೆ? ಇದ್ದರೆ ಅವು ಯಾವುವು? – ಎಂದು ಯಾರಾದರೂ ನಿಮ್ಮನ್ನು ಕೇಳಿದರೆ ಮೌನವಾಗಿರಿ. ಮೌನವೇ ಅದಕ್ಕೆ ಉತ್ತರ. ಬ್ರಹ್ಮ ಸ್ವರೂಪವನ್ನು ಕೇಳಿದಾಗ ಉಪನಿಷತ್ತಿನಲ್ಲಿ ಗುರುವಿನ ಉತ್ತರವೇನು? ಮೌನ. ಇಲ್ಲಿಯೂ ಹಾಗೆಯೇ. ಇದರ ಸ್ವರೂಪವೂ ಅತಿ ಗಹನವಾದುದು; ಅತಿ ಗಂಭೀರವಾದುದು. ಆದರೂ ತಿಳಿದಿರಬೇಕಾದ ಅಂಶಗಳು ಮಾತ್ರ ಒಂದೆರಡಿವೆ. ಒಬ್ಬೊಬ್ಬರ ತಲೆಗೆ ಒಂದೊಂದು ಅಳತೆ ಬೇಕಾಗುತ್ತದೆ. ಅವರವರ ತಲೆ ಪಾಡು ಅದು. ತಲೆಯೂ ರುಮಾಲೂ ಆಧಾರಾಧೇಯಗಳು. ಅವರವರಿಗೆ ಬೇಕಾಗಿರುವ ಪ್ರಮಾಣಗಳನ್ನು ಅವರವರೇ ನಿರ್ಧರಿಸಿಕೊಳ್ಳಬೇಕು. ದೇವರು ಕೊಟ್ಟ ಬುದ್ಧಿ ಬೇಕು. ಸೌಂದರ್ಯ ಕಾಣುವ ಕಣ್ಣು ಬೇಕು. ಹೊಸ ನಿಯಮ ಶಾಸನಗಳಿಂದ ಇದು ನಡೆಯುವ ಕೆಲಸವಲ್ಲ. ಹೀಗೆ ಬರೆದರೆಯೇ ಕಾವ್ಯ ಸುಂದರವಾಗುವುದು ಎಂದು ಹಟ ಮಾಡುವುದು ಎಷ್ಟರ ಮುಠ್ಠಾಳತನವೊ ತಲೆ ಹೇಗೇ ಇರಲಿ ಈ ಅಳತೆ ಈ ಪ್ರಮಾಣಗಳನ್ನು ಅನುಸರಿಸಿದರೆಯೇ ರುಮಾಲು ಚೆನ್ನಾಗಬೇಕಾದರೆ ಎಂದು ವಾದಿಸುವುದೂ ಅಷ್ಟೇ ದೊಡ್ಡ ಮುಠ್ಠಾಳತನ. ಅದರ ಸಾಮಾನ್ಯ ಲಕ್ಷಣಗಳು, ಮಾಟ ಇವು ಇಂಥವು ; ನಿಮಗೂ ಕಣ್ಣಿದೆ; ನಾಲ್ಕು ಕಡೆ ನೋಡಿ ಕಂಡುಕೊಳ್ಳಿ, ತಿದ್ದಿಕೊಳ್ಳಿ; ಇನ್ನೇನೂ ಹೆಚ್ಚು ಹೇಳುವುದಕ್ಕಾಗುವುದಿಲ್ಲ; ಕಟ್ಟಿಕೊಂಡು ನಮ್ಮ ಹತ್ತಿರ ಬನ್ನಿ; ಸರಿಯಾಗಿದೆಯೊ ಇಲ್ಲವೊ ಆಗ ಹೇಳುತ್ತೇವೆ ಎಂದು ಮುಂತಾಗಿ ಹೇಳಿ ಕಳಿಸಿಬಿಡಿ. ಆಮೇಲೆ ಅವರ ಪಾಡು ಅವರದು. ಜಿಲೇಬಿಯ ಪಾಕಕ್ಕೆ ಹೇಗೆ ಒಂದು ಹದವಿದೆಯೊ ಪಕ್ವಾನ್ನಕ್ಕೆ ಹೇಗೆ ಒಂದು ಪಾಕವಿದೆಯೊ ಹಾಗೆಯೇ ಮೈಸೂರು ರುಮಾಲು ಕಟ್ಟುವುದಕ್ಕೂ ಒಂದು ಹದವಿದೆ. ಅಟ್ಟ ಪದಾರ್ಥವನ್ನು ನೋಡಿದ ಮೇಲೆ ತಾನೆ ಸರಿಯಾದ ಹದ ಬಂದಿದೆಯೇ ಇಲ್ಲವೆ ಎಂಬುದು ಗೊತ್ತಾಗಬೇಕಾದರೆ?

ಸತ್ಕಾವ್ಯ ಕೈಗೆ ಸಿಕ್ಕಿದರೆ ಭೇಷ್, ಇದು ರಸವತ್ಕಾವ್ಯ ಎಂದು ಅದರ ಸವಿಯನ್ನು ಅನುಭವಿಸಿ ಹೇಗೆ ಆನಂದಿಸುವೆವೊ ಒಳ್ಳೆಯ ರುಮಾಲನ್ನು ಕಂಡಾಗಲೂ ಹಾಗೆಯೇ ಮೆಚ್ಚಿ ಅದಕ್ಕೆ ಕೈ ಮುಗಿಯುತ್ತೇವೆ. ಆದರೂ ಅನುಭವಸ್ಥರಾದ ನನ್ನಂಥವರು ಹೀಗೆ ಮಾಡಬೇಡಿ, ಹಾಗೆ ಮಾಡಬೇಡಿ ಎಂದು ಒಂದೆರಡು ನಿಷೇಧ ಸೂಚನೆಗಳನ್ನು ಮಾತ್ರ ಕೊಡಬಹುದು. ಕಣ್ಣಿನಲ್ಲಿ ನೀರು ಸುರಿಸಿ – ನೀರು ಸುರಿವ ಕಣ್ಣಲ್ಲಿ ರಕ್ತ

ಸುರಿಸಿ, ನೊಂದು ಬಳಲಿ ಪಡೆದುಕೊಂಡಿದ್ದರೇನೆ ಅನುಭವಕ್ಕೆ ಅನುಭವವೆಂಬ ಹೆಸರು ಸಲ್ಲಬೇಕಾದರೆ! ಎಷ್ಟು ನೊಂದಿದ್ದರೆ ಅಷ್ಟೂ ಅಷ್ಟು ಆ ಅನುಭವಕ್ಕೆ ಗೌರವ ಹೆಚ್ಚು. ನನ್ನ ಸೂಚನೆಗಳು ಯಾವುವೆಂದರೆ : ಬಟ್ಲರುಗಳಂತೆ ರುಮಾಲು ಸುತ್ತಬೇಡಿ. ರುಮಾಲಿಗೆ ಅಂಡಾಕಾರ ಬಾರದಂತೆ ನೋಡಿಕೊಳ್ಳಿ. ರುಮಾಲಿನೊಳಗೆ ಸೇರಿರುವ ಕೂದಲ ಗಂಟು ಹೆಚ್ಚಾಗದೆ ಇರಲಿ. ನಿಮ್ಮ ಬೋಳು ತಲೆಯೊ ಕೂದಲೊ ಹೊರಗೆ ಕಾಣದಂತೆ ವ್ಯವಸ್ಥೆ ಮಾಡಿಕೊಳ್ಳಿ. ರುಮಾಲನ್ನು ಪೂರ್ತಿ ಪಟ್ಟೆ ಮಡಿಸಿ ಕಟ್ಟಬೇಡಿ. ತಿಗಳರ ಮುನಿಶಾಮಿಯಂತೆ ಕಾಣುವಿರಿ; ಸೆಕ್ರೆಟೇರಿಯಟ್ ಜವಾನರಂತೆ ಕಾಣುವಿರಿ. ರುಮಾಲಿನ ಜರಿ ಅತಿ ಕಮ್ಮಿಯಾಗಿ ಆಗಲಿ, ಅತಿ ಹೆಚ್ಚಾಗಿಯಾಗಲಿ ಇರಬಾರದು. ಅತಿ ಕಮ್ಮಿಯಾಗಿ ಕಡ್ಡಿ ಅಂಚಾದರೆ ಓಹೊ? ಇವರ್ಯಾರೊ ಗುಮಾಸ್ತರಪ್ಪ – ಎಂದುಕೊಳ್ಳುತ್ತಾರೆ. ಅತಿ ದೊಡ್ಡದಾಯಿತು ಅನ್ನಿ. ಓಹೊ ಇವರು ತಿಪ್ಪಟ್ಟೂರು ಸಾಹುಕಾರ್ ಬುದ್ಧಯ್ಯನವರು ಅನ್ನುತ್ತಾರೆ. ನನ್ನನ್ನು ಕೇಳಿದರೆ ಜರಿ ಒಂದು ಹೆಬ್ಬೆರಳು ಅಥವಾ ಮುಕ್ಕಾಲಂಗುಲಕ್ಕೆ ಎಂದಿಗೂ ಮೀರಿರಕೂಡದು. ಬಲೆ ಜರತಾರಿ ಇದ್ದರೆ ಅದನ್ನು ಬಾಬಯ್ಯನ ಹಬ್ಬದ ಉಪಯೋಗಕ್ಕೆ ಇರಿಸಿಕೊಳ್ಳಿ. ಅದರ ಬಯಕೆ ಹೆಚ್ಚಾದರೆ ಒಂದು ತೆರೆದ ಒತ್ತೆಳೆಗಳ ಕಂಬಿಯಂಚು ಇರುವುದನ್ನು ಕಟ್ಟಿ ಬೇನೆ ಇಳಿಸಿಕೊಳ್ಳಿ. ಜರಿ ಅಂತೂ ಏನೇ ಆಗಲಿ ಮಿರು ಮಿರು ಚಿನ್ನದಂತೆ ಹೊಳೆಯುತ್ತಿರಬೇಕು. ಸಾಧ್ಯವಾದರೆ ಇಷ್ಟು ಮಾಡಿ, ಸಾಕು. ಸ್ವಲ್ಪ ತಾಳಿ. ಇನ್ನೊಂದು ಹೇಳುವುದು ಮರೆತುಬಿಟ್ಟಿದ್ದೆ: ದಾಡಿಗೂ ಮೈಸೂರು ರುಮಾಲಿಗೂ ಹೊಂದಿಕೆ ಇಲ್ಲ. ರಸಿಕರಿಗೂ ದಾಡಿಗೂ ದೂರ. ಆದುದರಿಂದಲೇ ಹದಿನಾರಾಣೆ ಮೈಸೂರಿನವರಾರೂ ದಾಡಿ ಬೆಳಸುವುದಿಲ್ಲ.

ರುಮಾಲಿಂದ ಮಂಗಳ. ಮದುವೆಯ ಮನೆಯಲ್ಲಾಗಲಿ, ಅರಮನೆಯಲ್ಲಾಗಲಿ ಕೇಳಿ, ಹೇಳುತ್ತಾರೆ. ಮೇಲಿನವರಿಗೆ ನೀವು ಮರ್ಯಾದೆ ಮಾಡಬೇಕಾದರೆ ನಿಮ್ಮ ತಲೆಯ ಮೇಲೆ ರುಮಾಲು ಇರಬೇಕು. ನಿಮಗೆ ಇತರರು ಮರ್ಯಾದೆ ಮಾಡಬೇಕಾದರೆ ನಿಮ್ಮ ತಲೆಯ ಮೇಲೆ ರುಮಾಲು ಇರಬೇಕು. ಚೆನ್ನಾಗಿ ರುಮಾಲು ಕಟ್ಟಿ ಠಾಕುಠೀಕಾಗಿರುವವರನ್ನು ಕಂಡರೆ ಎಲ್ಲರೂ ಹತ್ತಿರ ಬನ್ನಿ ಎನ್ನುತ್ತಾರೆ. ಯಾವ ಅಂಗಡಿಯಲ್ಲೇ ಆಗಲಿ, ಬ್ಯಾಂಕಿನಲ್ಲಾಗಲಿ ಸಾಲ ಹುಟ್ಟುತ್ತದೆ. ಸಾಲ ತೀರಿಸದಿದ್ದರೂ ಪರವಾ ಇಲ್ಲ. ಕೋರು ರುಮಾಲು ನಂಬಿಕೆ ಉಳಿಸುತ್ತದೆ. ಬೀದಿಯಲ್ಲಿ, ಲಾಲ್‌ಬಾಗ್ ಗೇಟ್‌ನಲ್ಲಿ ಪೋಲೀಸಿನವನು ನಿಮಿರಿ ಸಲಾಮು ಮಾಡುತ್ತಾನೆ. ಸಭೆಗಳಲ್ಲಿ ಮೇಲಕ್ಕೆ ಬನ್ನಿರೆಂದು ಕರೆದು ಕೂಡಿಸಿಕೊಳ್ಳುತ್ತಾರೆ. ಅರಮನೆಯಲ್ಲಿ ಖಾಸಾ ಹಾರ ಸಿಕ್ಕುತ್ತದೆ. ಕಂಡ ಕಂಡವರು ಕೈ ಮುಗಿದು ಮುಗುಳ್ನಗೆ ನಕ್ಕು ಸ್ವಾಗತ ಕೊಡುತ್ತಾರೆ. ಕ್ಷೇಮ ಸಮಾಚಾರ ವಿಚಾರಿಸುತ್ತಾರೆ. ಕರೆಯದೆ ಹೋದರೂ ಉತ್ಸವಗಳಲ್ಲಿ ಅಗ್ರ ತಾಂಬೂಲ ದೊರಕುತ್ತದೆ. ಲಂಚರುಷುವತ್ತುಗಳಿಲ್ಲದೆ ಕೆಲಸವಾಗುತ್ತದೆ. ತಾಲ್ಲೂಕು ಅಮಲ್ದಾರರು ಪಕ್ಕದಲ್ಲಿ ಕುರ್ಚಿಯ ಮೇಲೆ ಕೂಡಿಸಿಕೊಂಡು ಮಾತನಾಡುತ್ತಾರೆ. ಕೊನೆಗೆ ಟಿಕೆಟ್ ಕಲೆಕ್ಟರ್ ಕೂಡ ನಿಮ್ಮ ಗೊಡವೆಗೆ ಬಾರದೆ ನೀವು ಮೂರನೆಯ ಕ್ಲಾಸ್ ತೆಗೆದುಕೊಂಡು

ಮೊದಲನೆಯ ಕ್ಲಾಸ್ ಗಾಡಿಯಲ್ಲಿ ಮಲಗಿ ನಿದ್ರೆ ಮಾಡುತ್ತ ಪ್ರಯಾಣ ಮಾಡಿದರೂ ನಿಮಗೆ ತೊಂದರೆ ಕೊಡದೆ ಹೊರಟು ಹೋಗುತ್ತಾನೆ. ಕೆಟ್ಟದ್ದಾಗಲಿ, ಒಳ್ಳೆಯದಾಗಲಿ ಏನು ಮಾಡುವುದಕ್ಕಾದರೂ ಧೈರ್ಯ ಬರುತ್ತದೆ. ಹೀಗೆ ಮಂಗಳಕ್ಕೆ ಮಂಗಳ, ಅಲಂಕಾರಕ್ಕೆ ಅಲಂಕಾರ – ಈ ಬಗೆಯ ಅನುಕೂಲಗಳು ಬೇರೆ ಯಾವುದರಿಂದ ದೊರೆಯುತ್ತವೆ?

ಇಂತಹ ರುಮಾಲಿನ ವ್ಯವಸಾಯ ಇತ್ತೀಚೆಗೆ ಕಡಮೆಯಾಗಿ ದೇಶದಲ್ಲಿ ಕ್ಷಾಮ ಡಾಮರಗಳು ಪ್ರಬಲಿಸುತ್ತಿವೆ. ದೇಶದ ಸಂಪತ್ತು, ವ್ಯಾಪಾರ, ಅಧಿಕಾರ ಎಲ್ಲವೂ ಪರಕೀಯರ ವಶವಾಗುತ್ತಿವೆ. ಶಿಷ್ಟ ಸಂಪ್ರದಾಯಗಳು ಚೆನ್ನಾಗಿಲ್ಲದಿದ್ದರೆ ಆಯಾ ಅಧಿದೇವತೆಗಳಿಗೆ ಕೋಪವಿಲ್ಲ. ಅವು ಅತ್ಯುತ್ತಮವಾಗಿರುವಾಗ ಜನರು ಅವುಗಳನ್ನು ಮಾರಿ 'ಪರದೇಸಿ' ಸಂಪ್ರದಾಯಗಳಿಗೆ ಒಳಗಾದರೆ ಅವು ಸಹಿಸಿಕೊಂಡು ಸುಮ್ಮನಿದ್ದಾವೆ? ದೇಶದ ಅತ್ಯುನ್ನತ ಅಧಿಕಾರಿಗಳಿಂದ ಕೂಡ ಈ ದೇವತೆಗಳು ಅವಿಧೇಯತೆಯನ್ನು ಸಹಿಸವು. ಈ ವಿಷಯಕ್ಕೆ ನಾವು ತ್ವರೆಯಿಂದ ಗಮನ ಕೊಡದಿದ್ದರೆ ದೇಶ ಪೂರ್ತಿಯಾಗಿ ಅನ್ಯರ ಪಾಲಾಗಿ ನಮ್ಮ ನಾಡಿನಲ್ಲಿ ನಾವೇ ಪರರಾಗಿ ಹೋಗುತ್ತೇವೆ. ಪರರ ಭೋಜನಭೂಮಿಯಾಗಿ ಅದು ನಮ್ಮ ಕೈತಪ್ಪಿ ಹೋಗುವುದು ಖಂಡಿತ. ಪ್ಲೇಟೊ, ಮೋರ್, ಬೇಕನ್, ವೆಲ್ಸ್ ಪ್ರಭೃತಿಗಳು ಆದರ್ಶ ರಾಜ, ಆದರ್ಶ ಜೀವನ ರೀತಿಗಳನ್ನು ಕಲ್ಪಿಸಿ, ತಮ್ಮ ವಿಚಾರದ ಫಲಿತಾಂಶಗಳನ್ನು ಪ್ರಕಟಿಸಿದ್ದಾರೆ. ಅಂಥ ರಾಜ್ಯದಲ್ಲಿ ಜನರ ಶಿರೋಭೂಷಣ ಹೇಗಿರಬೇಕೆಂಬ ವಿಚಾರ ಮಾಡಿದ್ದಾರೆ. ಪ್ರಪಂಚದಲ್ಲಿ ಎಲ್ಲ ಕಡೆಗಳಲ್ಲಿಯೂ ಹುಡುಕಿದರೆ ಮೈಸೂರು ರುಮಾಲೇ ಅಂಥಾ ಭೂಷಣ ಎಂದು ಅವರು ತೀರ್ಮಾನಿಸುತ್ತಿದ್ದರು. ಅದರಲ್ಲಿ ಆದರ್ಶತ್ವವಿದೆ. ಕಾಲಕ್ರಮದಲ್ಲಿ ನಮಗೆ ಬಂದಿರುವ ಶುದ್ಧ ಮೈಸೂರು ಸಂಪ್ರದಾಯವನ್ನು ನೋಡಿದರೆ ಇದು ಸತ್ಯ, ಏಕೆ, ಸತ್ಯದ ತಿರುಳು ಎಂದು ಗೊತ್ತಾಗುವುದು. ಅದೂ ಇದ್ದಂತೆಯೇ ಇಲ್ಲ. ಪ್ರತಿಕಾಲದಲ್ಲಿಯೂ ಪ್ರತಿ ಸಂವತ್ಸರದಲ್ಲಿಯೂ ದೊರೆತ ಸೂಚನೆಗಳನ್ನು ತೆಗೆದುಕೊಂಡು ನಮ್ಮ ಉಡುಪನ್ನು ಸರ್ವಾಂಗಸುಂದರವಾಗಿ ಮಾಡಿದೆ.

ನಮಗೆ ಗುಣ ಪ್ರಧಾನ. ಎಲ್ಲಿ ಗುಣವನ್ನು ಕಂಡರೂ ಅದನ್ನು ಆದರದಿಂದ ಸ್ವೀಕರಿಸುವೆವು. ಸ್ವೀಕರಿಸಿದುದನ್ನು ನಮ್ಮ ಸಹಜಗುಣವಾಗಿ ಮಾಡಿಕೊಂಡು ಸುಖ ಪಡುವೆವು. ಶತಮಾನಗಳು ಕಳೆದುಹೋದರೂ ಅನೇಕ ರಾಜರು ನಮ್ಮ ಮೇಲೆ ದಾಳಿ ಬಂದು ಇಲ್ಲಿ ತಮ್ಮ ಆಳಿಕೆಯನ್ನು ಹೂಡಿದ್ದರೂ ನಾವು ನಮ್ಮ ವ್ಯಕ್ತಿತ್ವವನ್ನು ಕಳೆದುಕೊಂಡಿಲ್ಲ. ನಮ್ಮ ಉಡುಪು ಅಲಂಕಾರಗಳು ಎಷ್ಟು ಸುಂದರವಾದವು! ಒಂದಕ್ಕೊಂದು ಹೇಗೆ ಒಪ್ಪುವುವು! ಕಾಲಿಗೆ ಕಾಶಿಯಾತ್ರೆಯ ಜೋಡು; ನಿರಿ ತೀಡಿ ಕಚ್ಚೆ ತಿದ್ದಿ ಕಾಲು ತುಂಬ ಉಟ್ಟ ಬೆಳ್ಳನೆಯ ಅಂಚಿನ ಪಂಚೆ; ಬೆರಳಿಗೆ ಹರಳಿನ ಉಂಗುರ; ಒಂದು ಕೈಯಲ್ಲಿ ರೇಷ್ಮೆಯ ವಸ್ತ್ರ, ನಸ್ಯದ ಡಬ್ಬಿ ; ಇನ್ನೊಂದರಲ್ಲಿ ಬೆತ್ತ

ಅಥವಾ ಛತ್ರಿ; ತುಂಬು ಕುತ್ತಿಗೆಯ ಅಂಗಿ; ಕಂಕುಳುದೂರಿ ಭುಜವೇರಿ ಹಿಂದೆ ಮುಂದೆ ಮರ್ಯಾದೆಯಿಂದ ಈಲಾಡುವ ಉತ್ತರೀಯ! ಕಿವಿಯ ಕಡುಕು; ತಿರುವು ಮೀಸೆ; ಹಣೆಗೆ ಅಕ್ಷತೆ; ಕೋರು ರುಮಾಲು! ದೇವೇಂದ್ರನಿಗೆ ಕಳೆಕೊಡಬಲ್ಲವುಗಳು. ಹಾಗೆಯೇ ಯೋಚನೆ ಮಾಡಿ. ಉಳಿದವರೆಲ್ಲರೂ ಸುಮಾರು ಮುಸಲ್ಮಾನ ಪದ್ಧತಿಗೆ ಶರಣುಹೋದರು. ಮೈಸೂರಿನ ಉಡುಗೆ, ರುಮಾಲು, ರಸಿಕತೆ ಮಾತ್ರ ಶರಣು ಬೀಳಲಿಲ್ಲ. ಮೈಸೂರಿನ ಉಡುಗೆ, ರುಮಾಲು ಸಹಜಗುಣವನ್ನೂ ಮಾನವನ್ನೂ ಈವರೆಗೂ ಕಾಪಾಡಿಕೊಂಡವು. ಎಲ್ಲ ಕಷ್ಟಗಳಿಂದಲೂ ಪಾರಾಗಿ ಉಳಿದುಕೊಳ್ಳುವ ಜೀವಶಕ್ತಿ ನಮ್ಮ ರುಮಾಲಿಗಿಲ್ಲದಿದ್ದರೆ ಹೀಗಾಗುತ್ತಿದ್ದಿತೆ?(೧೯೨೬).

# ಕಾಯಿಲೆಗಳು

ಕಾಯಿಲೆ ಎಂದರೆ ಸಾಮಾನ್ಯವಾಗಿ ಜನರಿಗೆ ಹೆದರಿಕೆ, ಯೋಚನೆ. ನನ್ನಂಥವರಿಗೆ ಹಾಗಲ್ಲ. ಕಾಯಿಲೆಯೆಂದರೆ ನಮಗೆ ಸಂತೋಷ. ಏಕೆಂದರೆ ನಾವು ಅದರಲ್ಲಿಯೇ ಹುಟ್ಟಿ ಬೆಳೆದವರು. ಕಾಯಿಲೆಗಳೂ ನಾವು ಬಾಲ್ಯಸ್ನೇಹಿತರು, ಒಡನಾಡಿಗಳು. ಅವುಗಳ ಸ್ವಭಾವ ನಮಗೆ ಚೆನ್ನಾಗಿ ಗೊತ್ತು. ನಮ್ಮ ಸ್ವಭಾವವು ಅವಕ್ಕೆ ಸಂಪೂರ್ಣವಾಗಿ ತಿಳಿದಿದೆ. ಕೆಲವರ ಜೊತೆಯಲ್ಲಿ ನಮಗೆ ಭಯವೇ ಇಲ್ಲ. ನಾವು ಅವರನ್ನು ಸಡ್ಡೆ ಮಾಡೆವು. ನಮ್ಮ ಮನೆಯಲ್ಲಿಯೇ ಇರುವ ಜನರಂತೆ ಅವರು : ಬಂದಾಗ ಬರುವರು, ಹೋದಾಗ ಹೋಗುವರು. ಯಾವಾಗ ಬರುವರು, ಯಾವಾಗ ಹೋಗುವರು ಎಂಬ ಲೆಕ್ಕವಿಲ್ಲ. ಇನ್ನು ಕೆಲವರು ನಮಗೆ ಪೂಜ್ಯರು, ಹಿರಿಯರು. ಅವರನ್ನು ಸ್ವಲ್ಪ ಮರ್ಯಾದೆಯಿಂದ ವಿಚಾರಿಸಿಕೊಳ್ಳುತ್ತೇವೆ. ಅವರ ಯೋಗ್ಯತೆಗೆ ತಕ್ಕಂತೆ ನಡೆಯುತ್ತ ಅವರ ಕೋಪ ಕೆರಳದಂತೆ ಧಾತೂಪಶಮನಮಾಡಿಕೊಂಡು ಹೋಗುತ್ತೇವೆ. ಅವರು ಏಕೆ ಕೆರಳಿರುವರೆಂಬುದು ಬಹುದಿನದ  ಅನುಭವದಿಂದ ನಮಗೆ ಗೊತ್ತು. ನಾವು ಯಾವ ರೀತಿ ನಡೆದುಕೊಂಡರೆ ಅವರಿಗೆ ಸಮಾಧಾನವಾದೀತು ಎಂಬುದೂ ಗೊತ್ತು. ಇನ್ನು ಕೆಲವರ ಸ್ವಭಾವ ಹೀಗಲ್ಲ. ಅವರು ಆಗಾಗ ಬಂದು, ನಾಲ್ಕು ದಿನ, ನಾಲ್ಕು ವಾರ ಇದ್ದು, ಇರುವಷ್ಟು ದಿನವೂ ಗದ್ದಲಮಾಡಿ, ಹಟಮಾಡಿ, ಮನೆಯವರೆಲ್ಲರ ಗಮನವನ್ನೂ ಆಕರ್ಷಿಸಿ, ಎಲ್ಲರಿಗೂ ಕಿರುಕುಳ ಕೊಟ್ಟು ಸಂಪೂರ್ಣಾಧಿಪತ್ಯ ಮಾಡಿ ಕಡೆಗೂ ನಮ್ಮ ಮೇಲೇ ಸೊಡ್ಡು ಹೊರಿಸಿಹೋಗುತ್ತಾರೆ. ಅಂಥವರು ಮನೆಗೆ ಬಂದರೆಂದರೆ ಮನೆಯ ಯಜಮಾನರ ಪ್ರಾಧಾನ್ಯ ಸೊನ್ನೆ. ಮೊದಲು ಅವರು, ಉಳಿದವರು ಆಮೇಲೆ. ಮನೆಯಲ್ಲಿನ ಎಲ್ಲರೂ ಅವರಿಗೆ ಊಳಿಗದವರು. ಅಂಥವರ ಆತಿಥ್ಯ ಬಲು ನಯವಾಗಿ ಬಹು ಶ್ರದ್ಧೆಯಿಂದ ನಡೆಯಬೇಕು. ಇಲ್ಲವಾದರೆ ಬಂತು ಕಷ್ಟ, ಹಿಂಸೆ; ಪ್ರಾಣಕ್ಕೇ ಅಪಾಯ. ಪ್ಲೇಗು, ಇನ್‌ಫ್ಲುಎನ್‌ಸಾ, ಟೈಫಾಯಿಡ್ ಜಾತಿಗಳಿಗೆ ಸೇರಿದವರು ಅವರು.

ಕಾಯಿಲೆಗಳಲ್ಲಿ ನಾನಾ ವಿಧಗಳುಂಟು ಎಂದು ಈವರೆಗೆ ಸೂಚಿಸಿಯಾಯಿತೇ ಹೊರತು ಇದರಿಂದ ಸಂತೋಷವೇನು ಎಂದು ಹೇಳಿದ ಹಾಗಾಗಲಿಲ್ಲವಲ್ಲವೆ. ನನಗೆ ಇದೇ ಒಗ್ಗಿಹೋಗಿದೆ, ಬಹು ದಿನದ ಅಭ್ಯಾಸದಿಂದ. ಎಷ್ಟರ ಮಟ್ಟಿಗೆಂದರೆ – ಒಂದು ವೇಳೆ ಅಕಸ್ಮಾತ್ತಾಗಿ ಆರೋಗ್ಯದೆಸೆಯಿದ್ದರೆ, ಮುಂದೇನು ಬರುವುದೊ ಎಂಬ ಚಿಂತೆ. ಕಾಯಿಲೆ ಬರದಂತೆ ನೋಡಿಕೊಳ್ಳಬೇಕು ಎಂಬ ಚಿಂತೆ. ಊಟ ಉಡುಗೆ, ಹಾಸಿಗೆ ಹೊದಿಕೆ ಯಾವುದಿರಬೇಕೆಂಬ ಚಿಂತೆ. ವೈದ್ಯರಲ್ಲಿಗೆ ಹೋಗಬೇಕು, ಅವರನ್ನು ಈ

ವಿಚಾರ ಆ ವಿಚಾರ ಕೇಳಬೇಕು ಎಂಬ ಚಿಂತೆ. ವೈದ್ಯದ ಪುಸ್ತಕಗಳನ್ನು ನೋಡುವುದು, ಔಷಧಿಗಳ ಪ್ರಕಟನೆಯನ್ನು ಓದುವುದು, ತಿಂದಿ ಸ್ವಲ್ಪ ಹೆಚ್ಚಾದರೆ ಕಳವಳಗೊಳ್ಳುವುದು, ಹೊಟ್ಟೆ ನುಲಿಯುತ್ತೊ ಏನೊ, ಗಂಟಲು ಕೆರೆಯುತ್ತಿಲ್ಲವೆ, ಕೈಯಲ್ಲಿ ಐದೇ ಬೆರಳಿವೆಯಲ್ಲ ಏನು ಗತಿ, ಇವನ್ನು ಹೀಗೆಯೇ ಬಿಟ್ಟರೆ ಯಾವುದು ಹೇಗೆ ಪ್ರಕೋಪಿತವಾಗುತ್ತೊ ಎಂದುಕೊಳ್ಳುವುದು. ಇಲ್ಲವಾದರೆ ವೈದ್ಯದ ಪುಸ್ತಕದಲ್ಲಿ ವರ್ಣಿತವಾದ ಎಲ್ಲ ರೋಗಗಳೂ ನನ್ನಲ್ಲಿಯೇ ಇವೆ ಎಂದುಕೊಳ್ಳುವುದು. ಈ ರೀತಿಯಾಗಿ ಮನಸ್ಸು ಭ್ರಮಿಸಿ ಬಹು ತೊಂದರೆಪಡುತ್ತದೆ. ರೋಗಕ್ಕಿಂತ ರೋಗದ ಭಯ ಹೆಚ್ಚು ಭಯಂಕರ. ಭಯದಿಂದಲೇ ಅನೇಕ ವೇಳೆ ರೋಗ ಬಂದೂ ಇದೆ. ಅದೇಕೆ ಹೀಗಾಗುವುದು ಎಂಬುದರ ವಿಚಾರವನ್ನು ಯಾರಾದರೂ ಮನಃಶಾಸ್ತ್ರಜ್ಞರನ್ನು ಕೇಳಿ, ಹೇಳುವರು. ಅವರಾರೂ ಹೇಳದಾದರೆ ನಾನೇ ಬೇರೊಂದು ಅವಕಾಶದಲ್ಲಿ ತಿಳಿಸುತ್ತೇನೆ. ಈಗ ಇಷ್ಟು ಮಾತ್ರ ಹೇಳುತ್ತೇನೆ : ರೋಗದಿಂದ ಭಯ, ಭಯದಿಂದ ರೋಗ, ಹೀಗಾಗುವುದು ಸರ್ವಸಾಮಾನ್ಯವಾಗಿದೆ. ನನ್ನ ಆರೋಗ್ಯ ಸ್ಥಿತಿಯು ಭಯಸ್ಥಿತಿ. ಯಾವುದು ಏನೊ ಹೇಗೊ ಎಂದು ಮನಸ್ಸು ಅಲೆಯುವುದಕ್ಕಿಂತ ಯಾವುದಾದರೂ ಒಂದು ಕಾಯಿಲೆ ಬಂದು ಬಿಟ್ಟರೆ ನಿರ್ಭಯ. ಅದು ಬಂದ ದಿನ ಸುದಿನ. ಮನಸ್ಸಿನಲ್ಲಿ ಯಾವ ಸಂದೇಹವೂ ಅನಿಶ್ಚಯವೂ ಉಳಿಯದೆ ಇದು ಹೀಗೇ ಸರಿ ಎಂಬ ನಂಬಿಕೆಯೂ ದೃಢವೂ ಬಂದುಬಿಡುತ್ತವೆ. ನಮ್ಮ ಸ್ಥಿತಿಯಲ್ಲಿ ಇದಕ್ಕಿಂತಲೂ ಹೆಚ್ಚಿನ ಶುಭವಿನ್ನೇನನ್ನು ಕೋರಲಾದೀತು?

ಕಾಯಿಲೆ ಬಂದಿತು : ಇರುವಷ್ಟು ದಿನವೂ ಅದನ್ನು ಅನುಭವಿಸಿಬಿಡುವುದು..... ಕಾಯಿಲೆಯ ಭಯವಿಲ್ಲದುದರಿಂದ ನನಗೆ ಸಾವಿನ ಭಯವೂ ಇಲ್ಲವೆನ್ನಬಹುದು. ನಾನೂ ಸಾವೂ ದಿನದಿನಕ್ಕೆ ಹೆಚ್ಚು ಪರಿಚಿತರಾಗುತ್ತ ಬಂದಿದ್ದೇವೆ. ಸರ್ವದಾ ಸಮೀಪವರ್ತಿಗಳಾಗುತ್ತಿದ್ದೇವೆ. ಪ್ರಪಂಚದಲ್ಲಿ ಸಾವಿಗೆ ಅಂಜುವವರಷ್ಟು ಹೇಡಿಗಳು ಮತ್ತಾರೂ ಇಲ್ಲ. ಈ ಅಂಶದಲ್ಲಿ ನನಗೆ ಇಷ್ಟು ಧೈರ್ಯತಂದು ನನ್ನ ಮನಸ್ಸಿಗೆ ಶಿಕ್ಷಣ ಕೊಟ್ಟಿರುವ ಕಾಯಿಲೆಗಳಿಗೆ ನಾನು ಎಷ್ಟು ಕೃತಜ್ಞನಾಗಿದ್ದರೆ ತೀರೀತು?

ಎರಡನೆಯದು : ಅವುಗಳ ಮೂಲಕ ಲೋಕಾನುಭವ ವಿಶೇಷವಾಗಿ ದೊರೆತಿದೆ. ಓದಿನಿಂದ, ದೇಶಸಂಚಾರದಿಂದ, ಸಜ್ಜನ ಸಹವಾಸದಿಂದ, ಸ್ವಂತ ಅನುಭವ ಪರೀಕ್ಷೆಗಳಿಂದ, ಚರ್ಚೆವಾದಗಳಿಂದ ಕಲಿಯಬೇಕಾಗಿರುವ ಲೋಕದ ಸ್ವಭಾವವೂ ಮಾನವ ಹೃದಯದ ರಹಸ್ಯವೂ ಜನರ ನಿಜವಾದ ಪ್ರೀತಿವಿಶ್ವಾಸಗಳ ಆಳವೂ ಆಸೆ ಆಶಯಗಳ ಆಕಾಂಕ್ಷೆಯೂ ನನಗೆ ಕಾಯಿಲೆ ಕಾಲದಲ್ಲಿ ತಿಳಿದು ಬಂದಿರುವಷ್ಟು ಬೇರಾವ ಸಮಯದಲ್ಲಿಯೂ ತಿಳಿದು ಬಂದಿಲ್ಲ.

ನಮ್ಮ ಕಾಯಿಲೆಯಿಂದ ಕೆಲವರಿಗೆ ಅಸಮಾಧಾನ ; ಕೆಲವರಿಗೆ ತೊಂದರೆ; ಕೆಲವರಿಗೆ ವ್ಯಾಕುಲ; ಕೆಲವರಿಗೆ ನಷ್ಟ; ಕೆಲವರಿಗೆ ಇದೇನು ಬಂತಪ್ಪ ಪ್ರಾರಬ್ಧ ಎಂಬ ಜುಗುಪ್ಸೆ; ಕೆಲವರಿಗೆ ಇದೆಲ್ಲೋ ರೋಗದ 'ಗ್ಯಾಬೆ' ಎಂಬ ತಿರಸ್ಕಾರ; ಕೆಲವರಿಗೆ

ಮುಂದೇನು ಗತಿಯೆಂಬ ಯೋಚನೆ; ಕೆಲವರಿಗೆ ಅಯ್ಯೋ ಪಾಪ ಎಂಬ ಕರುಣೆ; ಕೆಲವರಿಗೆ ಮಾಡಿ ಮಾಡಿ ಆಯಾಸ ; ಕೆಲವರಿಗೆ ಸೋಂಕು ತಟ್ಟೀತೆಂಬ ಭೀತಿ. ಹೀಗೆ ನೂರಾರು ರೀತಿ ಜನರ ವೃತ್ತಿ ಪ್ರವೃತ್ತಿಗಳು, ಅವು ಕಾರ್ಯಕ್ಕೆ ತಿರುಗುವ ಬಗೆ, – ಇವು ಸಂತತವಾಗಿ ಮನಗಾಣುವುವು. ಇವೆಲ್ಲವನ್ನೂ ನೋಡಿ, ಅಯ್ಯೋ ಪಾಪ, ಅವರು ತಾನೆ ಏನು ಮಾಡಿಯಾರು? ನಾನು ಸತ್ತ ಹೆಣವಲ್ಲ, ಬದುಕಿರುವ ಜೀವವಲ್ಲ ಎಂದು ಮನಸ್ಸಿನಲ್ಲಿ ಅಂದುಕೊಂಡು ಅವರ ಸಲುವಾಗಿ ಕನಿಕರ ಪಟ್ಟಿದ್ದೇನೆ. ಮನಸ್ಸಿಗೆ ಈ ಹದ ತಂದಿರುವ ಪ್ರಭಾವ ಕಮ್ಮಿಯದೆ ? ಇಷ್ಟು ಉಪಕಾರ ಸಾಲದೆ?

ಮೂರನೆಯದು : ನನ್ನ ಸುತ್ತ ಮುತ್ತಲವರೆಲ್ಲರಿಗೂ ನನ್ನಲ್ಲಿ ಎಷ್ಟರ ಮಟ್ಟಿನ ಪ್ರೀತಿಯಿದೆ ಎಂಬುದನ್ನು ನನ್ನ ಕಾಯಿಲೆಗಳು ತೋರಿಸಿಕೊಡುವುವು. ನನಗೆ ಕಾಯಿಲೆ ಬಂದಾಗ ಅವರು ತೋರುವ ವಿಶ್ವಾಸ ಬೆಂಕಿಗೆ ಹಾಕಿದ ಶ್ರೀಗಂಧದಂತೆ ಪರಿಮಳಿಸುವುದು. ಅವರಿಗೆಲ್ಲ ನನ್ನಲ್ಲಿ ತುಂಬಾ ಪ್ರೀತಿ. ಮನೆ ಕೆಲಸಗಳನ್ನು ಬೇಗ ಬೇಗ ಮುಗಿಸಿಕೊಂಡು ಒಬ್ಬರಾದ ಮೇಲೊಬ್ಬರು, ಒಟ್ಟಿಗೆ ಇಬ್ಬರು ಮೂವರು, ಹೆಚ್ಚು ಆವಶ್ಯಕ ಬಿದ್ದಾಗ ಒಟ್ಟಿಗೆ ಎಲ್ಲರೂ ಸುತ್ತಲೂ ಕುಳಿತು ವಿಚಾರಿಸಿಕೊಳ್ಳುವರು. ಜ್ವರವಿಳಿದಿದೆಯೊ ಇಲ್ಲವೊ, ತಲೆನೋವು ನಿಂತಿದೆಯೊ ಹೆಚ್ಚಾಗಿದೆಯೊ, ನಿದ್ರೆ ಸ್ವಲ್ಪವಾದರೂ ಬಂದಿತೆ, ಹಸಿವು ಬಾಯಾರಿಕೆಗಳಾಗುವುವೇನು, ಮೈ ಕೈ ನೋವು ಹೇಗಿದೆ? ಕಮ್ಮಿ? – ಎಂದು ಕೇಳಿ ತಕ್ಕ ಚಿಕಿತ್ಸೆ ಮಾಡಿಸುತ್ತಾರೆ. ಪಥ್ಯ ನಡೆಯಿಸುತ್ತಾರೆ. ಯಾರು ಯಾವ ಉಪಾಯವನ್ನು ಹೇಳಿದರೂ ಎಲ್ಲವನ್ನೂ ಮಾಡುತ್ತಾರೆ. ಯಂತ್ರ ಕಟ್ಟಿಸುವುದು, ಮಂತ್ರ ಹಾಕಿಸುವುದು, ಕಂಡ ದೇವರಿಗೆಲ್ಲ ಕೈ ಮುಗಿದು ಹರಸಿಕೊಳ್ಳುವುದು, ಮೀಸಲು ತೆಗೆದಿಡುವುದು, – ಇದೇ ಕೆಲಸ ಅವರಿಗೆ. ಸಾಮಾನ್ಯ ಕಾಲಗಳಲ್ಲಿ ಯಾರಿಗೂ ನಡೆಯದ ಉಪಚಾರಗಳು ನಡೆಯುತ್ತವೆ. ಯಾರೂ ಗಟ್ಟಿಯಾಗಿ ಮಾತನಾಡರು; ಒಳಕ್ಕೆ ಬರುವವರು ನನ್ನ ನಿದ್ರೆಗೆ ಎಲ್ಲಿ ಭಂಗ ಬಂದೀತೊ ಎಂದು ಮೆಲ್ಲಗೆ ಬಾಗಿಲು ತೆಗೆದು ನೆಲಕ್ಕೆ ಕಾಲು ಸೋಕಿತೊ ಇಲ್ಲವೊ ಎಂಬಂತೆ ನಡೆದು ಬಂದು ಕೊಠಡಿಯನ್ನು ಅಣಿ ಮಾಡಿ ಹೋಗುವರು. ಹೊರಗೆ ಒಳಗೆ, ಅಡಿಗೆ ಮನೆ, ಹಿತ್ತಿಲು, ಎಲ್ಲೆಡೆಯಲ್ಲಿಯೂ ಅವರಿಗೆ ನನ್ನ ಮಾತೇ; ನನ್ನ ಯೋಚನೆಯೇ. ಬೇರೊಂದು ಚಿಂತೆಗೆ ಎಳ್ಳಷ್ಟೂ ಎಡೆಗೊಡದೆ ಇರುತ್ತಾರೆ. ಕೆಲವರು ನನಗೆ ಸ್ವಲ್ಪ ಜೊಂಪು ಹತ್ತುವವರೆಗೂ ಬಳಿಯಲ್ಲಿಯೇ ಕುಳಿತಿದ್ದು ಹಾಗೆಯೇ ಏನೊ ಚಿಂತಿಸಿ ಹನಿಗೂಡುತ್ತಿರುವ ಕಣ್ಣಿಂದ ನನ್ನ ಕಡೆ ನೋಡುತ್ತಿದ್ದು ಮೆಲ್ಲಗೆ ಬಿಡುವ ನಿಟ್ಟುಸಿರನ್ನು ತಡೆಯುತ್ತಾರೆ. ನನಗೆ ಎಚ್ಚರವಾಯಿತೆಂದು ತೋರಿದರೆ ಯಾರನ್ನಾದರೂ ಕೂಗಿದಂತೆ ಕೂಗಿ ತಾವೇ ಆ ಕೆಲಸಕ್ಕೆ ಎದ್ದು ಹೋಗುತ್ತಾರೆ. ಹೆಚ್ಚು ಸದ್ದಾಗದಂತೆ ಏರ್ಪಾಡುಮಾಡುವುದು, ಹೊಸ ಬಟ್ಟೆಗಳನ್ನು ಹಾಸಿಡುವುದು, ಕೈಗೆಟುಕುವಂತೆ ನೀರಿನ ಪಾತ್ರೆಯನ್ನಿಡುವುದು, ದೀಪವನ್ನು ಸಣ್ಣಗೆಮಾಡಿ ಮರೆಯಲ್ಲಿಡುವುದು ಮುಂತಾದ

ಹತ್ತಾರು ಸಣ್ಣ ಪುಟ್ಟ ಕೆಲಸಗಳನ್ನು ಮಾಡುತ್ತ ಇಷ್ಟು ಪ್ರೀತಿ ಸಾಧ್ಯವೆ ಎನ್ನಿಸುವಷ್ಟು ಪ್ರೀತಿ ತೋರಿಸುತ್ತಾರೆ.

ಮನೆಯವರಿಗೆ ನಿಮ್ಮಲ್ಲಿ ಪ್ರೀತಿಯಿದೆಯೆ ಇಲ್ಲವೆ ಎಂದು ನಿಮಗೆ ತಿಳಿಯಬೇಕಾದರೆ ಕಾಯಿಲೆ ಮಲಗಿಕೊಳ್ಳಿ; ತಿಳಿಯುತ್ತದೆ. ಯಾರ ಯೋಗ್ಯತೆ ಎಷ್ಟು ಎಂಬುದು ಪತ್ತೆಯಾಗುವುದು. ಮನೆಗೆ ಬರುವವರು ಹಣ್ಣು ಹಂಪಲ ತಂದು ಕೊಡುತ್ತಾರೆ; ನಮ್ಮಜ್ಜಿ ಹೇಳುವಂತೆ ತಲೆಯ ಕೆಳಗೆ ಒಂದು ರಾಶಿ ಹಣ್ಣು ಬಿದ್ದಿರುತ್ತದೆ. ನಮ್ಮ ದೇಶದಲ್ಲಿ ಶೇಕಡ ಎಷ್ಟು ಜನಕ್ಕೆ ಈ ಭಾಗ್ಯವುಂಟು? ಹತ್ತಿರದ ಸ್ನೇಹಿತರು ದಿನಕ್ಕೊಂದಾವರ್ತಿ ಎರಡಾವರ್ತಿ ಬಂದು ವಿಚಾರಿಸಿಕೊಳ್ಳುವರು. ಹತ್ತಿರ ಕುಳಿತು ಮಾತನಾಡಿ ಹೋಗುವರು. ಕೊನೆಗೆ ನಮ್ಮೊಡನೆ ಪೈಪೋಟಿ ನಡಸುತ್ತಿದ್ದವರೂ ವೈರಿಗಳೂ ತೀರಿಹೋದನೊ ಇಲ್ಲವೊ ನೋಡಿ ಬರೋಣ ಎಂದು, ಮನಸ್ಸಿಲ್ಲದಿದ್ದರೂ ಎದುರಿಗೆ ಬಂದಾಗ ಎಷ್ಟು ಮೃದುವಾಗಿ ಎಷ್ಟು ಪ್ರೀತಿಯಿಂದ ಮಾತನಾಡಿಸುವರು! ಅವರ ಮನಸ್ಸಿನಲ್ಲಿ ಸಾವಿರವಿರಲೇಳಿ – ನಮಗೂ ಅದಕ್ಕೂ ಏನು ಸಂಬಂಧ? ಅವರುಂಟು, ಅವರ ಕರ್ಮವುಂಟು. ಅವರ ಭಾಗದ ದೇವರುಂಟು. ನಮ್ಮ ಪರವಾಗಿ ಅವರ ನಡತೆ ಚೆನ್ನಾಗಿದ್ದರೆ ನಮಗಷ್ಟೇ ಬೇಕಾದುದು. ಅಲ್ಲದ ಸಲ್ಲದ ಅರ್ಥಗಳನ್ನು ಮಾಡಿ, ಅವರ ಉದ್ದೇಶಗಳನ್ನು ಅಳೆಯುವುದಕ್ಕೇಕೆ ಹೋಗಬೇಕು?

ನಾಲ್ಕು : ನನ್ನ ಮನಸ್ಸು ಗಟ್ಟಿಯಾಗಿ ನನಗೆ ಶಾಂತಿಯಿರುವುದರಿಂದ ಎಂಥ ಉಪದ್ರವದಲ್ಲಿಯೂ ನನಗೆ ನಗುತ್ತಿರುವುದು ಅಭ್ಯಾಸವಾಗಿದೆ. ಇತರರು ಯಾರಾದರೂ ರೋಗಿಗಳು ಬಂದರೆ ಅವರಿಗೆ ಸಮಾಧಾನ ಹೇಳುವುದಕ್ಕೆ ಅಧಿಕಾರ ಬಂದಿದೆ. ತಮ್ಮ ಸ್ಥಿತಿಯನ್ನು ನನ್ನದರೊಡನೆ ಹೋಲಿಸಿಕೊಂಡು ಸಮಾಧಾನಪಟ್ಟು ಅವರು ಭರವಸೆ ಹೊಂದುತ್ತಾರೆ. ದುಃಖೀ ದುಃಖಾಧಿಕಾನ್ ಪಶ್ಯೇತ್ ಎಂಬ ವಾಕ್ಯದಲ್ಲಿ ನಿಜವಿದ್ದರೆ ರೋಗೀ ರೋಗಾಧಿಕಾನ್ ಪಶ್ಯೇತ್ ಎಂಬುದರಲ್ಲಿಯೂ ಅತಿ ಕಡಮೆಯೆಂದರೆ ಅಷ್ಟೇ ಸತ್ಯವಾದರೂ ಇದೆಯೆಂದು ನಾನು ಹೇಳಬಲ್ಲೆ.

ಈವರೆಗೆ ಕಾಯಿಲೆಗಳ ಒಂದು ಮುಖದರ್ಶನವಾಯಿತು. ಅವಕ್ಕೆ ಇನ್ನೂ ಒಂದು ಮುಖವಿದೆ. ದೈವನಿರ್ಮಿತವಾದ ಈ ಪ್ರಪಂಚದಲ್ಲಿ ದುಃಖೋಪಶಮನ ವಸ್ತುಗಳೂ ಉಪಾಯ ಸಹಾಯಗಳೂ ಎಷ್ಟಿವೆಯೆಂಬುದೂ ದೇವರ ಕರುಣೆ ಎಷ್ಟೆಂಬುದೂ ನಮಗೆ ಇಂಥ ಕಾಲಗಳಲ್ಲಿ ಗೊತ್ತಾಗುತ್ತದೆ. ಜನರಿಗೆ ತಿಳಿವಳಿಕೆ ಕಡಮೆ. ತಮಗೇ ಅತಿಯಾದ ದುಃಖ, ಬಾಧೆ ಎಂದೂ ತಮ್ಮಷ್ಟು ನೋವು ಇನ್ನಾರಿಗೂ ಇಲ್ಲವೆಂದೂ ಮೊದಲಿಸಿ ಕೊರಗಿ ಇತರರನ್ನೂ ಕೊರಗುವಂತೆ ಮಾಡುತ್ತಾರೆ. ಅತಿಯಾದ ಯಾತನೆಗಳು ತೋರದಂತೆ ದೇವರು ಮನುಷ್ಯನಿಗೆ ಅಂಥ ಸಮಯಗಳಲ್ಲಿ ತಿಳಿವು ತಪ್ಪಿಸುತ್ತಾನೆ. ಯಾತನೆಯನ್ನು ಮರೆಯಿಸುತ್ತಾನೆ. ಅಥವಾ ಕೊನೆಗಾಣಿಸುತ್ತಾನೆ.

ಮಿತಿಮೀರುವ ಸ್ಥಿತಿಗೆ ಅವು ಬಂದಾಗ ನರಳುವವನಿಗೆ ತಿಳಿಯದಂತೆ ಕಾಪಾಡುತ್ತಾನೆ. ಸಣ್ಣ ನೋವುಗಳನ್ನೇ ನಾವು ಕಾಣುವುದು. ದೊಡ್ಡವು ನಮಗೆ ಕಾಣದಂತೆಯೇ ನಾವು ಅವನ್ನು ಕಡೆಹಾಯುವೆವು. ಜ್ವರ ನೂರ ಎರಡು, ನೂರ ನಾಲ್ಕು, ನೂರ ಆರು ಡಿಗ್ರಿಗಳಿಗೇರುತ್ತ ಏರುತ್ತ ನಮ್ಮ ಪ್ರಜ್ಞೆ ಹೋಗುವುದು. ನೀವು ಬುದ್ಧಿವಂತರಾಗಿ ಶಾಂತರಾಗಿದ್ದರೆ, ಅದು ಏರುತ್ತಿರುವ ಹಾಗೆಲ್ಲ ಕಣ್ಣೆದುರಿನ ವಸ್ತುಗಳು ಸ್ವಲ್ಪ ಸ್ವಲ್ಪವಾಗಿ ಮಸುಕಾಗುವುದನ್ನೂ ಆಗುತ್ತಾಗುತ್ತ ರೆಪ್ಪೆ, ಕಣ್ಣು ಮುಚ್ಚುವುದನ್ನೂ ವಸ್ತುಗಳೂ ಮನಸ್ಸಿನ ಕಲ್ಪನೆಗಳೂ ಮಂಕಾದ ಹಾಗೆಲ್ಲ ವಿಧವಿಧವಾದ ಆಕಾರಗಳನ್ನು ತಾಳಿ ಹೊಸ ರೀತಿಗಳಲ್ಲಿ ಸೇರಿಕೊಂಡು ಚಿತ್ತಮೋಹಕವಾದ ರೂಪಗಳನ್ನು ತಾಳುವುದನ್ನೂ ಅನುಭವಿಸಬಹುದು. ಅವುಗಳಿಗೆ ಸ್ವಭಾವವಾಗಿ ಇರುವ ಸ್ಥೂಲತೆಯನ್ನೂ ದೇಹವನ್ನೂ ಉಳಿದು ಶುದ್ಧವಾದ ಆಕಾರವನ್ನೂ ಆತ್ಮವನ್ನೂ ಅವು ತೋರತೊಡಗುವುವು. ಆಕಾಶದ ಮೋಡಗಳಂತೆ ನಿಮಿಷ ನಿಮಿಷಕ್ಕೂ ಹೊಸ ಚಿತ್ರಗಳನ್ನೂ ಸೌಂದರ್ಯಗಳನ್ನೂ ನೇಯುವುವು. ನೋವಿನ ಬೇನೆಯನ್ನು ಮರಸುವ ಪ್ರಯತ್ನ ಮಾಡುವುವು.

ಜ್ವರದ ಕಾವು ಇಳಿಯಿತೆನ್ನಿ ; ದೇಹವೆಷ್ಟು ಲಘುವಾಗುವುದು ಬಲ್ಲಿರ? ನಿಶ್ಶಕ್ತಿ ಸ್ವಲ್ಪ ತೋರುವುದು ನಿಜ. ಆದರೆ ಮನಸ್ಸು ಬಹು ತಿಳಿಯಾಗಿರುತ್ತದೆ. ಅದನ್ನು ಅನುಭವಿಸಿರುವವರೇ ಬಲ್ಲರು. ಹಿಂದೆ ಹೊಳೆಯದಿದ್ದ ಎಷ್ಟೋ ಸಂಗತಿಗಳು ಹೊಳೆಯುವುವು. ಪ್ರತಿಭೆ ಜಾಗ್ರತವಾಗಿ ಅದರ ಓಟ ಹೆಚ್ಚುವುದು. ಬುದ್ಧಿ ವೈದ್ಯನ ಶಸ್ತ್ರದಂತೆ ಹರಿತವಾಗುವುದು. ಅನೇಕರು ನಿಗೂಢ ತತ್ವಗಳನ್ನು ಈ ಸ್ಥಿತಿಯಲ್ಲಿಯೇ ಅರಿತಿದ್ದಾರೆ. ಜ್ವರ ಏರಿರುವಾಗ ಬಂದ ಕವನದ ಉಕ್ಕು ಜ್ವರವಿಳಿದಾಗ ಇಳಿದ ಮನಸ್ಸಿನ ತಿಳಿಯೊಡನೆ ಸೇರಿಕೊಂಡು ಇಂಪಾದ ಗೀತಿಕೆ ಆಗುತ್ತದೆ. ಕವಿಗಳನ್ನು ಕೇಳಿ, ಹೇಳುತ್ತಾರೆ. ಡಾಂಟೆ, ಷೇಕ್ಸ್‌ಪಿಯರ್, ಷೆಲ್ಲಿ, ಸೊಫೊಕ್ಲೀಸ್ ಇವರು ಮಹಾಕಾವ್ಯಗಳನ್ನು ಇಂಥ ಸ್ಥಿತಿಯಲ್ಲಿಯೇ ಬರೆದಿರಬೇಕು. ಹೊಟ್ಟೆಯಲ್ಲಿ ಏನೂ ಇಲ್ಲದಿರುವ ಹಸಿವಿನ ಸ್ಥಿತಿಯಲ್ಲಿಯೂ ಜ್ವರದ ಕಾವಿನಲ್ಲಿಯೂ ಚಿಮ್ಮಿ ಎದ್ದೆದ್ದು ಬರುವ ಕವಿತೆಯ ತೀವ್ರತೆಯೂ ತಿಳಿಯೂ ಅಲೌಕಿಕವಾದವು. ಭಕ್ತಿ, ಕವನ ಇವುಗಳ ಪರಮಪದಕ್ಕೇರ ಬೇಕಾದರೆ ಜ್ವರಸ್ಥಿತಿಯಲ್ಲಿಯೇ. ಯೂರೋಪಿನಲ್ಲಿ ಮಧ್ಯಯುಗದ ಕಾಲದಲ್ಲಿ ಸಂನ್ಯಾಸಿ ಸಂನ್ಯಾಸಿನಿಯರು ಉಪವಾಸಗಳನ್ನು ಮಾಡಿ ಈ ತೆರನಾದ ಭಕ್ತಿಯ ಜ್ವರವನ್ನು ತಂದುಕೊಳ್ಳುತ್ತಿದ್ದರೆಂಬುದು ಪ್ರಖ್ಯಾತ ವಿಷಯವಲ್ಲವೆ! ಕವಿಗಳೂ ಹೀಗೆಯೇ. ಪ್ರತಿಭೆಯ ಆವೇಶ ಬಾರದಿರುವ ಕೆಲವರು ಕಾವ್ಯ ರಚಿಸಬೇಕೆಂಬ ಉನ್ಮಾದದಲ್ಲಿ ಒಂದು ತೆರದ ಕೃತ್ರಿಮ ಜ್ವರವನ್ನು ಕೂಡ ಬರಿಸಿಕೊಳ್ಳುತ್ತಾರಂತೆ.

ಕಾಯಿಲೆಗಳಲ್ಲಿ ನರಳುವವರಿಗೆ ಇನ್ನೊಂದು ತೆರನಾದ ಧೈರ್ಯ! ಅರೋಗ ದೃಢಕಾಯರಾದವರಿಗೆ ಇರುವಂತೆ ಇವರಿಗೂ ಒಂದು ಕೆಚ್ಚು. ಏನನ್ನು ತಿಂದಾದರೂ ಅವರು ಜೀರ್ಣಿಸಿಕೊಳ್ಳಬಲ್ಲರು. ಏನನ್ನಾದರೂ ತಿಂದುಬಿಡಲು ಇವರು ಹಿಂದೆಗೆಯರು.

ನಿತ್ಯವೂ ಸಾಯುವವರಿಗೆ ಅಳುವವರು ಯಾರು? ಯೋಚನೆ ಮಾಡಬೇಡಿ, ತಂದುಕೊಡಿ, ತಿಂದುಬಿಡೋಣ ಎಂದು ಬೇಕುಬೇಕಾದುದನ್ನು ತಿಂದುಬಿಡುತ್ತಾರೆ. ಯಾರೂ ಕೊಡಲಿಲ್ಲ, ಮನೆಯವರು ಕಾಣದಂತೆ ಕದ್ದಾದರೂ ತಿನ್ನುವರು. ನಾನು ಇನ್ನೊಂದು ಉಪಾಯ ಕಂಡುಹಿಡಿದಿದ್ದೇನೆ. ವೈದ್ಯರ ಮನೆಗೆ ಹೋಗುವುದು; ಅವರು ಕೊಡುವ ಔಷಧವನ್ನು ತಂದು ಸ್ವಲ್ಪವೂ ಅಸಹ್ಯಮಾಡಿಕೊಳ್ಳದೆ ಸೇವಿಸುವುದು; ಇದರಿಂದ ನಮ್ಮ ವರ್ತನೆಯಲ್ಲಿ ಮನೆಯವರಿಗೆ ನಂಬಿಕೆ ಬರುವುದಲ್ಲ! ಆಮೇಲೆ ವೈದ್ಯರು ಏನೇ ಪಥ್ಯಮಾಡೆಂದು ವಿಧಿಸಿದ್ದರೂ ಈ ದಿನ ಇದನ್ನು ತಿನ್ನು ಎಂದರು, ಆ ದಿನ ಅದಾಗಬಹುದು, ವಿರೋಧವಿಲ್ಲ ಎಂದರು – ಎಂದು ಹೇಳುತ್ತ ದಿನಕ್ಕೆ ಒಂದೊಂದು ಹೊಸ ಪದಾರ್ಥವನ್ನು ಹೇಳಿ ನನಗೆ ಬೇಕುಬೇಕಾದುದನ್ನು ತರಿಸಿಕೊಂಡು, ಮಾಡಿಸಿಕೊಂಡು ತಿಂದು ಬಿಡುವುದು. ನಿಮಗೆ ತಂಟೆಯಿಲ್ಲ, ಅವರಿಗೆ ಅನುಮಾನವಿಲ್ಲ. ಔಷಧಕ್ಕೂ ಅಪಥ್ಯಕ್ಕೂ ಕೋಟಲೆ ಬಂದು ಒಂದರ ಸತ್ವವನ್ನು ಇನ್ನೊಂದು ಮುರಿದರೆ ರೋಗ ಉಳಿಯುವುದು ತಾನೇ. ಮತ್ತೂ ಅನುಕೂಲ. ಮೇಲೇ ಆಯಿತು. ಬೇಕಾದುದೇ ಅದು.

ಹಿಂದಿನ ಇನ್‌ಫ್ಲುಏನ್‌ಸಾ ಜ್ವರಗಳ ನೆನಪು ನಿಮ್ಮಲ್ಲಿ ಕೆಲವರಿಗಾದರೂ ಇರಬಹುದು. ದಿನವೊಂದಕ್ಕೆ ಐವತ್ತರಂತೆ ನೂರರಂತೆ ಸಣ್ಣ ಪಟ್ಟಣಗಳಲ್ಲಿ ಜನ ಸತ್ತರು. ದೇಶದಲ್ಲಿ ಒಟ್ಟು ಅರುವತ್ತು ಲಕ್ಷ ಜನ. ಯೂರೋಪಿನ ಘೋರ ಯುದ್ಧದಲ್ಲಿ ಸತ್ತವರ ಸಂಖ್ಯೆಗೆ ಒಂದೂವರೆಯಷ್ಟು ಜನ – ಸತ್ತರಲ್ಲ! ಸಾವುಗಳನ್ನು ನೋಡದವರಿಗೆ ಅದು ಎದೆಯೊಡೆಯುವ ಸಮಾಚಾರ. ಸಾಯುವವರಿಗೆ? ಅತಿಯಾದ ಜ್ವರ ಬಂದಿದ್ದವರಿಗೆ? ಯೋಚನೆಯೇ ಇಲ್ಲ. ಹೊರಗಿನವರು ಬಳಿಗೆ ಬಂದು ಸಾವುಗಳ ಸುದ್ದಿ ಹೇಳಿ ಇಲ್ಲದ ಭಯಗಳನ್ನು ಅವರ ಎದೆಯಲ್ಲಿ ಬಿತ್ತಿ ತೊಂದರೆಗೊಳಿಸಿದರೆ ಹೊರತಾಗಿ ಇಲ್ಲದಿದ್ದರೆ ಪ್ರಪಂಚದ ಗತಿ ಏನಾಗಿದೆ ಎಂದು ಕುತೂಹಲವಿಲ್ಲದೆ ನಿರ್ಲಕ್ಷ್ಯವಾಗಿ, ನಿರ್ಲಿಪ್ತರಾಗಿ ತಮ್ಮ ಜ್ವರವನ್ನು ತಾವು ಅನುಭವಿಸಿದರು. ಕೆಲವರು ತಮ್ಮಂತೆ ಸಾವಿರಾರು ಜನರಿದ್ದಾರೆಂದು ಸಮಾಧಾನ ಹೊಂದಿ ಯಾವ ಗತಿ ಬರಲಿ ಅನುಭವಿಸೋಣ ಎಂದು ಧೈರ್ಯಗೊಂಡರು. ಧೈರ್ಯ ಹೇಳುವ ವೇದಾಂತಕ್ಕೆಲ್ಲ, ಅನೇಕ ವೇಳೆ, ಇಂಥ ಕಾಯಿಲೆಗಳೇ ಮೂಲ. ಜಿಪುಣರು ತಮ್ಮ ಲೋಭವನ್ನು ಬಿಟ್ಟು ಯಾವ ಸಮಯದಲ್ಲಿ ತೀರಿ ಹೋಗುವೆವೊ ಎಂದು ಧಾರಾಳವಾಗಿ ಖರ್ಚುಮಾಡಿ ಸುಖಪಟ್ಟರು. ಸುಖವಿಲ್ಲದೆ ಒಣಗಿ ಬಾಡಿಹೋಗಿದ್ದ ಅವರ ಮೈಗಳು ನಾಲ್ಕು ದಿನ ಕಾಲ ಹೊಸ ರಕ್ತವಿಟ್ಟವು. ಯುವಕರು ಯಾವಾಗ ತಲೆ ಕೆಳಗಿಡಬೇಕಾಗುವುದೊ ಎಂದು ಬೇಕಾದ ಬಟ್ಟೆಬರೆ ನಗನಾಣ್ಯ ಹಾಕಿಕೊಂಡು ಮೆರೆದರು. ಕೆಮ್ಮು ವಿಶೇಷವಾಗಿ ಬಂದಿತೆನ್ನಿ: ಮನೆಯಲ್ಲಿ ನಾಲ್ಕು ಹಾಸಿಗೆಗಳಿದ್ದರೆ ಎಲ್ಲರಿಗೂ ಸಮವಾಗಿ ಬರುತ್ತಿತ್ತು. ಒಬ್ಬರು ನಿಲ್ಲಿಸಿದರೆ ಇನ್ನೊಬ್ಬರಿಗೆ ಸರದಿ ನಡೆಯುವುದು. ಕ್ರಮಬಿಡದೆ ನಾಲ್ವರೂ ಕೆಮ್ಮನ್ನು ಹಂಚಿಕೊಂಡು ಪರಸ್ಪರ ಧೈರ್ಯಗೊಳ್ಳುತ್ತಿದ್ದರು. ಕಾಯಿಲೆ ಬೀಳದಿದ್ದವರದೇ ಕಾಟ.

ಯಾವುದರ ಗುಣವನ್ನೇ ಆಗಲಿ ಅತ್ಯಂತ ವಿಷಮಕಾಲಗಳಲ್ಲಿ ಪರೀಕ್ಷಿಸಬೇಕು ಎಂದು ತಿಳಿದವರು ಹೇಳಿರುವರು. ಇನ್‌ಫ್ಲುಎನ್‌ಸಾ ಕಾಲದಲ್ಲಿ ಇಂಥ ಪರೀಕ್ಷೆ ನಡೆದು ಸಂಪೂರ್ಣವಾಗಿ ಕಾಯಿಲೆಗಳು ತೇರ್ಗಡೆ ಹೊಂದಿದುವೆಂದು ಧಾರಾಳವಾಗಿ ಹೇಳಬಹುದು.

ಹಸಿವು ಬಾಯಾರಿಕೆ ನಿದ್ರೆ ಮುಂತಾದವನ್ನು ದೇವರು ಹೇಗೆ ನಿರ್ಮಿಸಿದ್ದಾನೆಯೊ ಹಾಗೆಯೇ ಕಾಯಿಲೆಗಳನ್ನೂ ಅವೇ ಉದ್ದೇಶಗಳಿಂದಲೇ ನಿರ್ಮಿಸಿದ್ದಾನೆ. ದೇಹದ ಆರೋಗ್ಯಕ್ಕೆ ಅವೆಲ್ಲ ಎಷ್ಟು ಅವಶ್ಯಕವೊ ಇವೂ ಅಷ್ಟೇ ಅವಶ್ಯಕ. ಕಾಯಿಲೆ ಬಂದು ಅನಾರೋಗ್ಯವನ್ನು ಜೀವದಿಂದ ಅಟ್ಟಿಬಿಡುತ್ತದೆ. ದೇಹವನ್ನು ಪುನಃ ಆರೋಗ್ಯಕ್ಕೆ ತಂದಿರಿಸುತ್ತದೆ. ನೀವು ಆರೋಗ್ಯವಾಗಿರಬೇಕೆಂಬುದೇ ದೇವರ ಪರಮೇಚ್ಛೆ ಯಾದುದರಿಂದ ನಿಮಗೆ ಇವನ್ನು ತಂದೊಡ್ಡಿ ಜ್ಞಾನೋದಯವನ್ನು ಉಂಟು ಮಾಡಿಸುತ್ತಾನೆ. ನಿಮ್ಮ ನಡವಳಿಕೆಗಳನ್ನು ಮಾರ್ಪುಗೊಳಿಸುತ್ತಾನೆ. ನಿಮ್ಮ ಜವಾಬ್ದಾರಿಗಳನ್ನು ನಿಮಗೆ ತಿಳಿಸುತ್ತಾನೆ. ಒಬ್ಬರಿಗೊಂದು ಇನ್ನೊಬ್ಬರಿಗಿನ್ನೊಂದು ರೀತಿಯಲ್ಲ. ಎಲ್ಲರಿಗೆ ಬರುವುದೂ ಒಂದೇ ತೆರನಾಗಿಯೇ. ಸಾಹುಕಾರರಿಗೆ ಹೆಚ್ಚು ಜ್ವರ ಬಂದೀತು, ಬಡವರಿಗೆ ಕಡಮೆ ಬಂದೀತು. ಅವರ ಐಶ್ವರ್ಯಕ್ಕೆ ತಕ್ಕಂತೆ ಹೆಚ್ಚು ಕಾಯಿಲೆಗಳು ಹೆಚ್ಚು ಸಲ ಬಂದಾವು. ನಿಮ್ಮ ಬಡತನಕ್ಕೆ ತಕ್ಕಂತೆ ಕಡಮೆಯವು ಅಪರೂಪಕ್ಕೆ ಆಗೊಂದು ಸಲ ಈಗೊಂದು ಸಲ ಬಂದಾವು. ಆದರೆ ಇಬ್ಬರ ಕಾಯಿಲೆಗಳೂ ಒಂದೇ ಸ್ವಭಾವದವು. ಹೀಗೆ ಕಾಯಿಲೆಗಳಿಗೆ ದೇವರಿಗಿರುವಂತೆ ಸರ್ವಸಮ ದೃಷ್ಟಿ. ದೇವರ ವಿಚಾರ ನಮಗೇನು ಗೊತ್ತು ಎಂದು ನೀವೆನ್ನುವಿರಾದರೆ ಸರ್ಕಾರಕ್ಕೆ ಪ್ರಜೆಗಳ ಮೇಲಿರುವ ದೃಷ್ಟಿಯಂತೆ ಎನ್ನೋಣವೆ ? ಪ್ರಜೆಗಳ ವರಮಾನಕ್ಕೆ ತಕ್ಕಂತೆ ಅವರು ತೆರಿಗೆಯನ್ನು ಹಾಕುವಂತೆ ನ್ಯಾಯೈಕ ದೃಷ್ಟಿ ಎಂದು ಬೇಕಾದರೂ ಇಟ್ಟುಕೊಳ್ಳಿ. ದೇವರ ಪ್ರತಿನಿಧಿಯಾಗಿರುವುದು ಈಗ್ಗೆ ಜಗತ್ತಿನಲ್ಲಿ ಸರಕಾರ ಒಂದೇ. ಒಂದು ಸಂದರ್ಭದಲ್ಲಿ ಮಾತ್ರ ಕಷ್ಟ ತೋರೀತು. ಬಡವರಾದರೇನು ಸಿರಿವಂತರಾದರೇನು, ದೇವರಂತೆ ನಾವು ಸಮದೃಷ್ಟಿಯ ಜನರೆಂದು ಡಾಕ್ಟರು ಎಲ್ಲರಿಗೂ ಕೊಳ್ಳಲಾಗದ ಬೆಲೆಯ ಔಷಧಿ ಪಥ್ಯ ವಿಧಿಸಿದರೆ ಕಾಯಿಲೆಯ ಸುಖ ಮುರಿಯುತ್ತದೆ.

ಎಲ್ಲಕ್ಕೂ ಮೇಲಾದ ಉಪಕಾರ ಕಾಯಿಲೆಯದು ಏನೆಂದರೆ : ನಿಮಗೆ ಸಂಸಾರದ ತಾಪತ್ರಯಗಳೂ ತೊಡಕುಗಳೂ ತಪ್ಪಿಹೋಗುತ್ತವೆ. ನೀವು ಹಾಸಿಗೆ ಹಿಡಿದು ಮಲಗಿದ್ದರೆ ನಿಮ್ಮನ್ನು ಆಕ್ಷೇಪಣೆ ಮಾಡುವವರು ಯಾರು ? ಮಾಡಿ ಏನು ಪ್ರಯೋಜನ ? ಮಾಡುವುದು ಅನ್ಯಾಯವೆಂದು ಎಲ್ಲರೂ ಬಲ್ಲರು. ದುಡ್ಡು ಸಾಲದು - ಸಾಲವಾಯಿತು– ಉಪ್ಪಿಲ್ಲ, ಟೀ ಸೊಪ್ಪಿಲ್ಲ, ಅಕ್ಕಿಯಿಲ್ಲ, ಸೌದೆಯಿಲ್ಲ, ತುಪ್ಪವಿಲ್ಲ, ಸಕ್ಕರೆಯಿಲ್ಲ ಎಂಬ ಯೋಚನೆ ನಿಮಗೆ ತಪ್ಪುತ್ತದೆ. ಈ ಕಾಷ್ಠವ್ಯಸನಗಳನ್ನು ಅನುಭವಿಸಲಾರದ ಹೇಡಿಗಳು ಊರು ಬಿಟ್ಟು ಓಡಿ ಹೋಗುವರು. ಕಾಡಿಗೋಡುವರು. ಸಂನ್ಯಾಸ ಹಿಡಿಯುವರು. ಧೀರರಾಗಿ ಕಾಯಿಲೆ ಮಲಗಿ ಎರಡು ದಿವಸ ಅನುಭವಿಸಬಾರದೆ? ನಿಧಾನವಾಗಿ

ಎದ್ದು ಸುಧಾರಿಸಿಕೊಳ್ಳಬಾರದೆ? ದುಡುಕಿ ಯಾವ ಪುರುಷಾರ್ಥವನ್ನು ಸಾಧಿಸಿದಂತಾಯಿತು? ಕೈಯಲ್ಲಿರುವ ಹಣ ಸಾಲದಿರುವಾಗ ಸ್ವಾರ್ಥಪರತೆಯೂ ಕಲಹ ವೈಮನಸ್ಯಗಳೂ ಹೆಚ್ಚುವುವು. ಈ ಕ್ಲೇಶಗಳಿಂದ ರೋಗಿಗೆ ಸಂಪೂರ್ಣವಾದ ಬಿಡುಗಡೆ ಇರುತ್ತದೆ. ಕಾಯಿಲೆಗಳು ಹೀಗೆ ನಮ್ಮ ಸೌಜನ್ಯವನ್ನು ರಕ್ಷಿಸುವುವು. ಕಚೇರಿಗೆ ಹೋಗಿಯೊ ಕೂಲಿ ಮಾಡಿಯೊ ದುಡಿದು ಸಂಬಳ ತರುವ ಕಷ್ಟ ತಪ್ಪುವುದು. ಮನೆಯವರು ಹೊಟ್ಟೆಬಟ್ಟೆಗಳನ್ನು ಕಟ್ಟಿ ತಾವು ಎಷ್ಟೇ ಕಷ್ಟ ಪಡುತ್ತಿರಲಿ ನಾಲ್ಕು ದಿನ ಕಾಯಿಲೆ ಮಲಗಿರುವವರ ವಿಷಯದಲ್ಲಿ ಆದರ ತೋರಿಸುತ್ತಾರೆ. ತಮ್ಮ ಅಂತಃಕಲಹಗಳಿಂದ ನಿಮ್ಮ ಮನಸ್ಸು ನೋಯುವುದೆಂದು ಅರಿತು ನಿಮ್ಮೆದುರಿಗಾದರೂ ಹೊಂದಿಕೊಂಡು ಹೋಗುತ್ತಾರೆ. ನಾನು ನಿಮಗೆ ಹೇಳುವುದೇನೆಂದರೆ : ಸರ್ವದಾ ರೋಗಿಗಳಾಗಿದ್ದರೆ ಪ್ರಯೋಜನವಿಲ್ಲ; ಎಲ್ಲರಿಗೂ ಜುಗುಪ್ಸೆ ಬಂದೀತು. ನಮ್ಮಂಥ ರತ್ನಗಳಾಗಿದ್ದರೇನೊ ಪರವಾ ಇಲ್ಲ. ಆದರೆ ಎಲ್ಲರಿಗೂ ಈ ಪ್ರೀತಿ, ಈ ಕರುಣೆಯ ಸನ್ನಿವೇಶ ಹೇಗೆ ಸಿಕ್ಕೀತು? ಆಗ ಈಗ, ನಿಮಗೆ ಬೇಸರವಾದಾಗ, ನಾಲ್ಕು ದಿನ ಆರೈಕೆಯ ಬಯಕೆ ಬಂದಾಗ, ಮನೆಯಲ್ಲಿ ಅಂತಃಕಲಹಗಳು ಹೆಚ್ಚುತ್ತಿವೆ, ಇನ್ನೇನು ಸಿಡಿದಾವು ಎಂದು ತಿಳಿದಾಗ, ದುಡಿತದಿಂದ ಕೆಲವು ದಿನ ವಿಶ್ರಾಂತಿ ಬೇಕೆನ್ನಿಸಿದಾಗ ಮಾತ್ರ ಖಾಲಿಮಾಡದೆ ಕಾಯಿಲೆ ಮಲಗಿಕೊಂಡು ನೋಡಿ. ಅದರ ಮಹೋಪಕಾರಗಳು ಎಂಥವೆಂಬುದು ನಿಮ್ಮ ಅನುಭವಕ್ಕೆ ಬರುತ್ತದೆ.

# ಬೆಳುದಿಂಗಳು

ಹಾಲು ಚೆಲ್ಲಿದ ಹಾಗಿದೆ ಬೆಳುದಿಂಗಳು ಎಂದರು ರಾಯರು. ಅಲ್ಲ, ಹಿಟ್ಟು ಚೆಲ್ಲಿದ ಹಾಗಿದೆ ಎಂದರು ಪಾಟೀಲರು. ಜಗಳವೇಕೆ? ಎರಡೂ ಸರಿ, ಎರಡೂ ಸರಿಯಲ್ಲ ಎಂದರು ಅಯ್ಯನವರು. ಮೂವರೂ ಬುದ್ಧಿವಂತರೇ. ಹಾಲು ಚೆಲ್ಲಿದರೆ ಇಂಗಿಹೋಗದೆ ನೆಲದ ಮೇಲೆ ನಿಲ್ಲುತ್ತದೆಯೆ – ನಮ್ಮ ಕಾಲದ ಹಾಲು? ಹಿಟ್ಟು ಚೆಲ್ಲಿದರೆ? ನಿಲ್ಲಬಹುದಲ್ಲ? ಆದರೆ ಎಷ್ಟು ಹಿಟ್ಟು ಚೆಲ್ಲಬೇಕು ಬೆಳುದಿಂಗಳಂತೆ ನೆಲಸು ಕಾಣಬೇಕಾದರೆ? ಹಾಲೊ ಹಿಟ್ಟೊ ಚೆಲ್ಲಿದಂತೆ ಎಂದಾಯಿತು. ನಮಗೆ ಬೇಕಾದುದು ಬೆಳ್ಳಗಿನ ಕವಿದ ಕಾಂತಿ. ಹಾಲು ಹಿಟ್ಟು ಎರಡೂ ಬಿಳುಪು. ಇದು ಎಲ್ಲರಿಗೂ ಕಂಡದ್ದು. ಅರ್ಥವಾಗುವುದು. ಆದ್ದರಿಂದ ಹಾಗೆ ಹೇಳುತ್ತಾರೇನೊ. ನೀವು ಬೇಕಾದರೆ ಬೇರೆ ರೀತಿ ಹೇಳಿ. ಚೆನ್ನಾಗಿದ್ದರೆ ಅದೂ ಸರಿಯಾಗುವುದು. ಅಲ್ಲದೆ ಆಡುವ ಪ್ರತಿಯೊಂದು ಮಾತನ್ನೂ ಅಳೆದು, ತೂಗಿ, ತರ್ಕಬದ್ಧವಾಗಿ, ಯುಕ್ತವಾಗಿ ನುಡಿಯಬೇಕೆಂದರೆ ಸಾಗುತ್ತದೆಯೆ? ಯಾಕೆ ನಿರ್ಬಂಧ ಮಾಡುತ್ತೀರಿ? ಅದು ಪಂಡಿತ ಬುದ್ಧಿಯೇ ಹೊರತು ಸಾಮಾನ್ಯರದಲ್ಲ. ನಮ್ಮ ಬದುಕನ್ನು ಕಷ್ಟ ಮಾಡಬೇಕು ಎಂಬುದು ವಿದ್ವಾಂಸರಾದ ಅವರ ಚಟ. ನಮ್ಮಂಥ ಸಾಮಾನ್ಯರ ಕಣ್ಣಿಗೆ ಕಟ್ಟಿದಂತೆ ಯಾವುದೊ ಚಿತ್ರ ಬೇಕು. ಚಿತ್ರ ಚೆಲುವಾಗಿದ್ದರೆ ಸಾಕು. ಉಳಿದುದನ್ನು ಹೇಗೊ ಕಲ್ಪಿಸಿಕೊಳ್ಳುತ್ತೇವೆ. ಬೆಳುದಿಂಗಳ ಗುಣ ಎಲ್ಲೆಲ್ಲೂ ಚೆಲ್ಲಿದ ಬಿಳುಪು. ಹಾಲಿನದಾದರೇನು? ಹಿಟ್ಟಿನದಾದರೇನು? ಹತ್ತಿಯದಾದರೇನು? ಅದರಲ್ಲಿಯೂ ಶುಕ್ಲ ಚತುರ್ದಶಿ, ಹುಣ್ಣಿಮೆ, ಬಹುಳ ಪಾಡ್ಯಮಿ ಮುಂತಾದ ದಿನ ರಾತ್ರಿಯ ಬೆಳುದಿಂಗಳ ಬಿಳುಪೇ ಬಿಳುಪು. ಆ ನುಣುಪು, ಅಲ್ಲಿಯ ತಂಪುಕಾಂತಿ ಎಷ್ಟು ಸೊಗಸಿನದು!

ಬೆಳುದಿಂಗಳದು ಒಂದೊಂದು ಋತುವಿನಲ್ಲಿ ಒಂದೊಂದು ಬಗೆಯ ಚೆನ್ನು. ಒಂದು ವಸಂತದಲ್ಲಿ ನೋಡಿ : ಹಗಲೆಲ್ಲ ನೆಲದಿಂದ ಜಿಗಿದೆದ್ದು ಕಾಣುವ ಹಸುರು ನೆಲಸು. ಗಿಡಗಳ ಬಣ್ಣ ಬಣ್ಣದ ಚಿಗುರು. ಜೊಂಪೆ ಹೂವಿನ ಹುಚ್ಚು. ಮರಗಳ ಮೇಲಿದ್ದು ಕೂಗುವ ಕೋಗಿಲೆಯ ರಂಪು ಕುಕಿಲು. ಇವುಗಳ ಸಂಗ ರಾತ್ರಿಯ ಕಣ್ಣಿಗೆ ಕಾಣಿಸದು. ಕೋಗಿಲೆಯೂ ದಣಿದು ರಾತ್ರಿಗೆ ನಿದ್ರೆ ಹೋಗಿರುತ್ತದೆ. ಆ ಸೊಗಸೆಲ್ಲ ನಮಗೆ ಹಗಲ ನೆನಪಿನೊಡನೆ ಹೆಣೆದುಕೊಂಡದ್ದು. ಚಂದ್ರನಿಗೆ ಅಂಥ ನೆನಪಿದೆಯೊ ಇಲ್ಲವೊ ನಾನು ಹೇಗೆ ಹೇಳಲಿ? ಇದ್ದೀತು. ತನ್ನ ಆಳಿಕೆಯ ರಾತ್ರಿಯಲ್ಲಿ ಅದಕ್ಕೆ ಸಮನಾದ ಶಾಂತಿ, ಸುಖ, ಚೆಲುವು, ಸವಿಗಳನ್ನು ನಾನು ಕೊಡುತ್ತೇನೆ ನೋಡಿ

ಎಂಬಂತೆ ಬೆಳುದಿಂಗಳ ಹುರುಡು ಹಬ್ಬಿಸುತ್ತಾನೆ, ಲೋಕದ ಮೇಲೆ. ಕಾಮನ ಹಬ್ಬ ಆಗ ತಾನೇ ಮುಗಿದಿರುತ್ತದೆ. ಮುಂದೆ ಚಿತ್ರಾಪೂರ್ಣಿಮೆಯಲ್ಲಿ ಹೊಲ, ಮನೆ, ಗದ್ದೆತೋಟ, ಕೆರೆ ಕಾಲುವೆ, ಬೆಟ್ಟ ಎಲ್ಲದರ ಮೇಲೆಯೂ ಬೆಳುದಿಂಗಳ ಒಡ್ಡಿದ ಉತ್ಸವ. ಆಗಲೇ ಎಲ್ಲ ರಥೋತ್ಸವ, ಜಾತ್ರೆ, ಬಿಳಿ ಎತ್ತುಗಳ ಪರಿಸೆ, ಮೊಸರನ್ನದ ಊಟ, ನಮ್ಮೂರ ಕರಗ. ಬೆಳ್ಳಗಿನ ದುಂಡುಮಲ್ಲಿಗೆಯ ತೇರು ಕಟ್ಟಿದ ಹಾಗೆ ಕಳಶದ ಸುತ್ತ ಹೂವಿನ ಶಿಲ್ಪವನ್ನು ಬುಟ್ಟಿಕಟ್ಟಿ, ಸುನೇರಿ ಕೆತ್ತಿ, ತಲೆಯ ಮೇಲೆ ಹೊತ್ತು ಆ ಹುಣ್ಣಿಮೆಯ ರಾತ್ರಿ ಕರಗದ ಪೂಜಾರಿ ಧರ್ಮರಾಯನ ಗುಡಿಯಿಂದ ಹೊರಟು ಬೆಂಗಳೂರಲ್ಲಿ ಒಂಬತ್ತು ಬಾಗಿಲಲ್ಲೂ ತಿರುಗಾಡಿದರೆ ಬಾನಲ್ಲಿ ಸುಳಿದಾಡುವ ಚಂದ್ರನ ಸಂಚಾರಕ್ಕೆ ಇಂಬುಕೊಟ್ಟು ನಡೆಯುವ ಹೂವಿನ ತೇರು ನಕ್ಷತ್ರಗಳದೇ ಈ ಮೆರೆತ. ಬಾನು ಇನ್ನಾವ ಹೆಚ್ಚಳದ ಉತ್ಸವ ತೋರೀತು?

ಯಾವ ನಿಯಮವನ್ನೊ ಹೊತ್ತು ನಕ್ಷತ್ರಗಳು ಸರದಿ ಸುತ್ತುತ್ತಿರುತ್ತವೆ-ತಮ್ಮ ತಮ್ಮ ಅಕ್ಷಗಳ ಮೇಲೆ; ತಮ್ಮ ಮಾಂಡಲಿಕ ಗ್ರಹಗಳ ತಾರೆಗಳ ದಿಬ್ಬಣದಲ್ಲಿ. ಆ ಪಥವನ್ನು ದಾಟಿ ಪ್ರತಿ ಬೆಳುದಿಂಗಳ ದಿನವೂ ಚಂದ್ರ ತನ್ನ ಸವ್ವಾರಿ ನಡಸಿ ಆಕಾಶದಲ್ಲಿ ಬೆಳಗುವಂತೆ ಕಾಣುತ್ತದೆ. ಜನದ ಕಣ್ಣಿಗೆ ಕಾಣುವುದು ಆತನ ಮೆರವಣಿಗೆ. ನಕ್ಷತ್ರಗಳು ಅವನ ಪರಿವಾರ. ಅವನು ರಾಜ. ಅವನ ಮಂದಹಾಸದಿಂದ ನಲಿವ ಸಭಾಸದರಂತೆ ತಾರಗೆಗಳು ನಡೆದುಕೊಳ್ಳುತ್ತವೆ. ನಿಜ ಏನೇ ಇರಲಿ. ಚಂದ್ರಗ್ರಹವೆಲ್ಲಿ? ನಕ್ಷತ್ರಗಳೆಲ್ಲಿ? ಕೋಟಿ ಕೋಟಿ ಮೈಲಿಗಳ ದೂರದಲ್ಲಿ ನಮ್ಮ ಸೂರ್ಯ ಮಂಡಲದ ನೂರಾರಷ್ಟು ಪ್ರಭಾವದಿಂದ ಉರಿವ ಮೇಲಿನ ತೇಜೋರಾಶಿಗಳು ಅವು. ಆ ಸಂಪರ್ಕದಲ್ಲಿ ಬಡ ಗ್ರಹವಾದ ಚಂದ್ರ ಮಂಡಲ ನಿಜವಾಗಿ ಕ್ಷಾಮ ದೇವತೆಯಾದೀತು. ಚಂದ್ರನೊ : ನಮ್ಮ ಸೂರ್ಯ ಮಂಡಲದ ಸುತ್ತ ತಿರುಗುವ ಭೂಮಿಯ ಸುತ್ತ ಪ್ರದಕ್ಷಿಣೆ ಮಾಡಿ ಹೊರಳುವ, ಸೂರ್ಯ ತೇಜದಿಂದ ಕಳೆಗೊಂಡ ಬೆಂಡು ಕಾಂತಿಯ ಪ್ರಾಣಿ. ಲೋಕದ ಕಣ್ಣಿಗೊ : ಚಂದ್ರಮೂರ್ತಿ ರಾತ್ರಿಯ ಕತ್ತಲೆಯನ್ನು ನಗಿಸಿ ಅರಳಿಸುವ ಮಹಾಸತ್ವ. ಚಂದ್ರನಿಗೆ ಊಳಿಗವನ್ನು ಮಾಡುವ ಕಿರುಮಿರುಗು ಚಿಕ್ಕೆಗಳದು. ಅಥವಾ ದೂರದ ಚುಕ್ಕಿಗಳ ಹಿನ್ನೆಲೆಗೆ ಅದು ತುಂಬಿದ ಮಂಡಲದಂತೆಯೊ ಅರ್ಧವರ್ತುಲವಾಗಿಯೊ ಬಿದಿಗೆಯ ಬೆಳಕಿನ ತೆಳ್ಳಸಿಯಂತೆಯೊ ಒಂದೊಂದು ಶುಕ್ಲಪಕ್ಷದ ದಿನ ಒಂದೊಂದು ವಿಶೇಷ ಆಕೃತಿಯನ್ನು ರೂಪಿಸಿ ದಿನ ದಿನಕ್ಕೂ ತುಂಬುವ ಬಿಂಬವನ್ನು ನೇಯುವ ಪೆರೆ.

ತಿಂಗಳ ಮಾವನನ್ನು ಕರೆಯದ ಮಗುವಿಲ್ಲ. ಆ ಮೃದು ಕಿರಣದ ಅಮೃತ ಸೇಚನವನ್ನು ಸವಿಯಲು ಆಶಿಸದವರಿಲ್ಲ. ಶಾಂತ, ಶುಭ್ರ, ಹಿತ, ಸ್ನೇಹಪೂರ್ಣತೆ ಚಂದ್ರನದು. ಆತನನ್ನು ನೋಡದ ಕಣ್ಣಿಲ್ಲ. ನೋಡಿ ಸಂತೋಷ ಪಡದ ಹೃದಯವಿಲ್ಲ. ಅದರ ಒಡಲ ಮೇಲಿನ ಮಚ್ಚೆ ಶಾಸ್ತ್ರಜ್ಞರ ಎಣಿಕೆಯಲ್ಲಿ ಹೇಗೇ ಬಂದುದಾಗಿರಲಿ

ಅದರ ಜಿಂಕೆಮೈ ನಯನಮನೋಹರವಾದ್ದು. ಚಂದ್ರನ ಚೆಲುವಿಗೆ ಅದು ಹೆಚ್ಚಿಕೆಯನ್ನು ತಂದೀತೇ ವಿನಾ ದೋಷವಲ್ಲ, ಖಂಡಿತ. ಪ್ರಿಯಳ ಮುಖದ ಮೇಲಿನ ಕಪ್ಪು ಮಚ್ಚೆಯಂತೆ–ಮೆಚ್ಚು. ಇರಾನಿನ ಒಬ್ಬ ಕವಿ ಹೇಳಿದನಂತೆ : ತನ್ನ ಪ್ರಿಯೆಯ ಕೆನ್ನೆಯ ಮೇಲಿನ ಮಚ್ಚೆಯ ಚೆಲುವಿಗೆ ಬೊಖಾರ, ಸಾಮರ್‌ಖಂಡ್, ಖಿವಾಗಳನ್ನು ಕೊಟ್ಟೇನೆಂದು. ಅವೆಲ್ಲ ಚೆಲುವಿಗೂ ಮಾತೃಕೆಯಂತಿರುವ ಚಂದ್ರಬಿಂಬದ ಈ ಮಚ್ಚೆಗೆ ಇನ್ನಾವುದು ಸಾಟಿಯಾದೀತು! – ಎಂಬುದು ಲೋಕಮತ.

ಎಷ್ಟು ಕತೆಗಳು ಚಂದ್ರನನ್ನು ಕುರಿತವು? ಆತನ ಮುಗಿಲಯಾನವನ್ನು ಬಣ್ಣಿಸಿ ಹಿಗ್ಗದ ಲೋಕದ ಕವಿಯೇ ಇಲ್ಲ. ಆತನೇ ಸಸ್ಯಗಳ ಪೋಷಕ. ದ್ರಾಕ್ಷಿಯೊ ಕಿತ್ತಿಳೆಯೊ ರಸವಿಡುವುದೂ ಸವಿಗೂಡುವುದೂ ಆತನಿಂದೆಂಬಂತೆ ಜನ ಆತನನ್ನು ಆರಾಧಿಸುತ್ತಾರೆ. ಅವೆಲ್ಲ ಹೇಗೂ ಇರಲಿ, ತುಂಬು ಬೆಳುದಿಂಗಳ ವೈಭವದ ಮುಂದೆ ಲೋಕ ಇನ್ನಾವ ಸಿಂಗಾರವನ್ನು ಹಿಡಿದು ನಿಲ್ಲಿಸೀತು?

ಬಸವನಗುಡಿಯ ನೆರೆ ಮೈದಾನದ ಬ್ಯೂಗಲ್‌ರಾಕಿನ ಶಿಖರದಲ್ಲಿ, ಚಂದ್ರಿಕಾ ಧವಳತೆಯಲ್ಲಿ, ಬೆಳುದಿಂಗಳ ಸೇವನೆ ತುಂಬಾ ಹಿತ. ಮೇಲೆ ಆಕಾಶದಲ್ಲಿ, ಕೆಳಗೆ ಭೂಮಿಯಲ್ಲಿ; ನಮ್ಮೂರಲ್ಲಿ. ಆ ಹಳೆಯ ನಕ್ಷತ್ರಕಾಂತಿಯದು ಏನು ಮಹಾಕಾಂತಿ? ಅವುಗಳ ಮಿರುಗು ಬಿರುಮಿರುಗು. ಸೂಜಿಯ ಚುಚ್ಚಿನಂತಿರುವುದು. ಕಣ್ಣನ್ನು ಚುಚ್ಚುವುದು. ಆ ಮೊನೆ ಎಲ್ಲಿಯವೊ ಎಷ್ಟು ಕೋಟಿ ದೀಪವತ್ಸರಗಳ ದೂರದವೊ ಯಾರು ಬಲ್ಲರು? ಅವು ಬೆಳಕಿನ ಚುಕ್ಕೆಗಳು ಮಾತ್ರ. ಅವುಗಳ ನಡುವೆಯೂ ಚಂದ್ರನ ನೋಟ ಚೆಲುವೇ. ನಮಗೆ ಹತ್ತಿರದ ಬಂಧು ಚಂದ್ರ. ಇವುಗಳೊಡನೆಲ್ಲ ಸ್ಪರ್ಧೆ ಹೂಡಿ ಈ ನಮ್ಮ ಬೀದಿಯ ಸಾಲು ಮನೆಗಳಲ್ಲಿ, ಪಕ್ಕದ ರಸ್ತೆಯ ರಾಮ ದೇವರ ದೇವಸ್ಥಾನದಲ್ಲಿ, ಆಚೆ ಪೇಟೆಯ ಲಕ್ಷದೀಪಗಳಲ್ಲಿ, ಬೇರೆ ಊರ, ನದಿಗಳ ಮೇಲೆ ನಡೆಯುವ ಸೊಡರ ದೋಣಿಯ ಮೆರವಣಿಗೆಗಳಲ್ಲಿ ಅವನು ಏನು ಸಂತೋಷ ಸಂಭ್ರಮಗಳ ಹೊಳೆ ಹರಿಸುತ್ತಾನೆ! ಎಷ್ಟು ಜನದ ಹೃದಯ ತೆರೆವ ಹಬ್ಬ ಕೃತ್ತಿಕೋತ್ಸವ! ಅಲ್ಲಿಂದ ಮುಂದೆ ಮೊದಲು ಓಡಿಬರುವುದು ನವರಾತ್ರಿಯ ಪೂಜೆ ಪುರಸ್ಕಾರ. ಅದೂ ಮುಗಿದರೆ ವಿಜಯದಶಮಿಯ ಕೋಲಾಹಲ ಮೆರೆದು ಸೀಮೋಲ್ಲಂಘನ ಮಾಡುವ ವಿದ್ಯಾರ್ಥಿಗಳ, ವೀರರ, ಅನ್ವೇಷಕರ ಪ್ರಗತಿದಾಳಿ. ಹಿಂದಿನ ಕಾಲದಲ್ಲಂತೂ ನಡೆಯುತ್ತಿದ್ದವು. ನೆಲದಲ್ಲಿ ಈ ಉತ್ಕರ್ಷ ಚಿಮ್ಮುತ್ತಿರುವಾಗ ಗಗನಾಂಗಣದಲ್ಲಿ ತಾರಾಖಚಿತ ನಭದ ಕಾಶೀನೀಲಾಂಬರ ಚಂದ್ರನ ದರ್ಬಾರಿಗೆ ಮೇಲ್ಕಟ್ಟು ಕಟ್ಟಿದಂತಿರುವ ವೈಭವ. ನವೆಂಬರ್–ಡಿಸೆಂಬರ್ ಬಂದವು ಎನ್ನಿ. ನಕ್ಷತ್ರವೀಥಿಯೆಲ್ಲ ದಟ್ಟೈಸಿ ಹುಣ್ಣಿಮೆ ಬೆರಗುಗೊಳಿಸುತ್ತದೆ. ಅದನ್ನು ವರ್ಣಿಸಿ ಹೇಗೆ ಮುಗಿಸುವುದು? ಬೆಳುದಿಂಗಳ ಆ ರಸಸ್ರೋತವನ್ನು ಕಣ್ಣಾರ ನೋಡುವವನಿಗೆ, ಎದೆ ತುಂಬಿ ನಲಿಯುವವನಿಗೆ ಅದು ಒಂದು ಅಮೃತಧಾರೆ. ಧಾರೆ ಏನು ಬಂತು–ಬೆಳಕು ಸೂಸುವ ಅಮೃತಾವರಣ. ಅಮೃತದ ತೆರೆ ತೆರೆದು ಬೆಳಕು ಬಯಲಾದಂತೆ ಎಂದರೆ ಸರಿಯಾಗುತ್ತದೆ.

ಅಮೃತವೆ? ಹೌದು. ಚಂದ್ರನಿಗೂ ಅಮೃತಕ್ಕೂ ನಿತ್ಯಸಂಬಂಧ. ಅವನ ಮೈಯೆಲ್ಲ ಅಮೃತವಂತೆ. ಅಷ್ಟನ್ನೂ ಹಂಚಿಕೊಡುತ್ತಾನಂತೆ. ತನ್ನ ಹದಿನಾರು ಕಳೆಗಳ ಅಮೃತಸಾರವನ್ನೂ ದೇವತೆಗಳಿಗೆ ಕೊಟ್ಟು ಕೊಟ್ಟು ತಾನು ಬಡವಾಗುತ್ತಾನಂತೆ. ಕೊಟ್ಟವನಿಗೆ ಏನುಳಿಯಿತು? ಅಮಾವಾಸ್ಯೆಗೆ ಬೆಳೆಯುವ ಕತ್ತಲು! ಮಣ್ಣು ಹುಯಿದುಕೊಳ್ಳಲಿ; ಬುದ್ಧಿ ಬೇಡವೆ ಇವನಿಗೆ ; ದಾನವಂತೆ ದಾನ! ದಾನದ ಫಲ ನೋಡಿದಿರೊ ಇಲ್ಲವೊ ಎಂದೀರೇನೊ? ಸ್ವಲ್ಪ ತಡೆಯಿರಿ ; ನಾಳೆ ನೋಡುವಿರಂತೆ. ಅಗೋ ಆ ಕಂಡೂ ಕಾಣದ ಹಾಗೆ ಮಿನುಗುವ ರೇಖೆಯನ್ನು ನೋಡಿದಿರ? ಎಳೆಯ ಚಂದ್ರನ ಬೆಳಕಿನ ಎಳೆ ಅದು. ಇನ್ನು ಹದಿನಾಲ್ಕು ದಿನ, – ದಿನದಿನಕ್ಕೂ ಮೈತುಂಬಿ ಪೂರ್ಣಕುಂಭದಂತಾಗುತ್ತದೆ. ಪುನಃ ಅದೇ ಕಂದದ ಬೆಳಕು. ಪುನಃ ಬಿಳುಪು. ಬೆಳಕು. ಅಮೃತ. ಕೊಟ್ಟವನಿಗೆ ಚ್ಯುತಿಯಿಲ್ಲ ಕಾಣಿರೋ. ಕೊಡಿ, ಕೊಟ್ಟವರ ಕೈಗೆ ಪುನಃ ಬಂದು ಸೇರುತ್ತದೆ ಭಾಗ್ಯ. ಬರಿದೆಲ್ಲ ತುಂಬುತ್ತದೆ. ಒಂದು ಕಡೆ ಬರಿದಾದರೆ ಇನ್ನೊಂದು ಕಡೆ ತುಂಬುತ್ತದೆ. ಇದು ತ್ಯಾಗದ ತತ್ವ. ದಾನದ ಮಹತ್ವ. ನಿಮ್ಮ ಹಂಗೇನು ದೇವರಿಗೆ? ಒಂದಕ್ಕೆ ಹತ್ತು ಕೊಟ್ಟು ನಿಮ್ಮ ದಾನದ ಹೊರೆ ಇಳಿಸಿಕೊಳ್ಳುತ್ತಾನೆ.

ಚಂದ್ರನ ದಾನದ ಬೆಳುದಿಂಗಳಷ್ಟು ಉಪಕಾರ ಇನ್ನಾವುದಕ್ಕಿದೆ ಎನ್ನಲು ಹೋದೆ. ಸೂರ್ಯನಿಗೆ ಇದೆಯೇನು ಈ ಹಿರಿಮೆ? ಅವನದು ಪ್ರಚಂಡತೆ. ಅವನ ದಬ್ಬಾಳಿಕೆಯ ಎದುರು ಯಾರದೇನು ನಡೆದೀತು? ನೀರಿನಲ್ಲಿ ಪ್ರತಿಫಲಿಸಿದ ಆತನ ಬಿಂಬವನ್ನು ದಿಟ್ಟಿಸಲಾದೀತೆ? ಅವನನ್ನು ಕಾಣಬಯಸಿದ ಕಣ್ಣು ಕುರುಡಾಗುತ್ತದೆ! ಅವನದು ಉರಿವ ತೇಜಸ್ಸು; ಚಂದ್ರನದು ಸೌಮ್ಯಾಧಿಕಾರ. ಮೃದು ನಯ. ಚಂದ್ರನು ಎಲ್ಲರ ಪ್ರಿಯಬಂಧು. ಸೂರ್ಯನ ತಾಪವೊ ಅವನಿಡುವ ಬೇಗೆಯೊ ತರುವ ಬೆವರೊ ಉಬ್ಬಸವೊ ತಡೆಯುವುದು ಕಷ್ಟ. ಅವನ ಹಂಗಿನದು ಚಂದ್ರಕಾಂತಿ ಎನ್ನುವಿರಿ, ಬಲ್ಲೆ. ಇರಬಹುದು. ಯಾರ ಹಂಗು ಯಾರದಾದರೆ ನಮಗೇನು? ಇನ್ನೊಬ್ಬರ ಹಂಗಿಲ್ಲದೆ ಯಾವ ಮಾನವ ಬಾಳು ಬದುಕೀತು? ನಾವು ಹಿಂದಿನ ಕಾಲದ ಕಲೆಗಾರರು, ಕವಿಗಳು, ನಾಟಕಕಾರರು, ಸಂಗೀತಗಾರರು, ನರ್ತಕರು, ಪ್ರಣಯಿಗಳು, ಸಂಸಾರಿಗಳು. ಲೋಕದ ಸಾಮಾನ್ಯ ಹರ್ಷಪಡುವ ಜನ. ನಮಗೆ ಚಂದ್ರನ ಬೆಳುದಿಂಗಳು ಸುಖವನ್ನೂ ನೆಮ್ಮದಿಯನ್ನೂ ಸ್ಫೂರ್ತಿಯನ್ನೂ ಕೊಡುವ ಹಾಗೆ ಸೂರ್ಯನೇನು ಕೊಟ್ಟಾನು? ನಮ್ಮ ಸತ್ವವನ್ನು ಹೀರಿ ಒಣಗಿಸುವ ದಾರುಣ ಶಕ್ತಿ ಅವನದು. ಪರಮಪುರುಷನಿಗೆ ಒಂದು ಕಣ್ಣು ಅವನದಾದರೆ ಇನ್ನೊಂದು ಕಣ್ಣು ಚಂದ್ರನೆಂಬುದನ್ನು ಮರೆಯಬೇಡಿ. ಉರಿ, ತಂಪು–ಎರಡು ನೋಟಗಳೂ ಬ್ರಹ್ಮದ್ದೇ ಅಲ್ಲವೇ ಮತ್ತೆ?

ಯಾವ ಕವಿ ಸೂರ್ಯನ ತಾಪಕ್ಕೆ ಒಲಿದಿದ್ದಾನೆ ? ವಾಲ್ಮೀಕಿಗೆ ಕೂಡ ಗ್ರೀಷ್ಮತಾಪ ಗಾಸಿಯನ್ನೇ ಕೊಟ್ಟಿದೆ. ಆದರೆ ಯಾವ ಚಿತ್ರಗಾರ ಚಂದ್ರನ ಚಿತ್ರವನ್ನು ಬಿಡಿಸಿಲ್ಲ? ಯಾವ ಜೊತೆ ಪ್ರಣಯಿಗಳಿಗೆ ಚಂದ್ರಕಾಂತಿ ಪ್ರೀತಿಯದಲ್ಲ ? ಬದುಕಿಗೆ ತಂಪು, ಸಂತೋಷ ಉಂಟಾಗುವುದೂ ಪ್ರೇಮ ಊರುವುದೂ ಉಸಿರುವುದೂ

ಮನಸ್ಸನ್ನು ಒಲಿಸುವುದೂ ಬೆಳುದಿಂಗಳ ರಾಗ ರಂಜನೆಯಲ್ಲಿಯೇ ಅಲ್ಲವೆ? ನಮ್ಮ ತಾಯಿ ನಮ್ಮನ್ನೆಲ್ಲ ಸುತ್ತ ಕೂಡಿಸಿಕೊಂಡು ಕೈತುತ್ತು ಹಾಕುತ್ತಿದ್ದುದು ಬೆಳುದಿಂಗಳಲ್ಲಿ. ಪಕ್ಕದ ಮನೆಯಲ್ಲಿ ಸಂಗೀತ ಕಚೇರಿ ನಡೆಯುವುದು ಇಂಥ ರಾತ್ರಿಗಳಲ್ಲಿ. ನಾವು ನೀವು ಅಕ್ಕಿ ಹೆಬ್ಬಾಳದ ಹತ್ತಿರ ಹೇಮಾವತಿಯ ತಿರುವಿನ ಮೇಲೆ, ಬಾರಕೂರಲ್ಲಿ ಸೀತಾನದಿಯ ಮೇಲೆ, ಕಾಶಿಯ ಗಂಗಾಲಹರಿಯಲ್ಲಿ, ಈ ದಡದಿಂದ ಆ ದಡಕ್ಕೊ ಉದ್ದಕ್ಕೊ ಸಂಚಾರ ಮಾಡಿದ್ದಾವಾಗ? ಬೆಳುದಿಂಗಳ ರಾತ್ರಿಯಲ್ಲಿ. ತಾಜಮಹಲಿನ ಅಮೃತ ಶಿಲ್ಪವನ್ನು ಕಂಡದ್ದು ಯಾವಾಗ? ಅಂಥ ಒಂದು ರಾತ್ರಿಯೇ. ಕರ್ಮ ಅವನನ್ನು ತಿನ್ನುತ್ತಿತ್ತು ನಿಜ; ಆದರೆ, ಅಯ್ಯೋ ಪಾಪ, ಮಗನ ನಿಷ್ಠುರ ನಿರ್ಬಂಧದಲ್ಲಿ ಸೆರೆಬಿದ್ದ ಷಾಹಜಹಾನನು ಬೆಳುದಿಂಗಳ ಇರುಳಲ್ಲಿ ಆ ತಾಜಮಹಲನ್ನು ನದಿಯ ಬೇರೆ ದಡದಲ್ಲಿ ಕುಳಿತು ಹೇಗೆ ನೋಡಿ ನಿಟ್ಟುಸಿರು ಬಿಡುತ್ತಿದ್ದನೋ.

ವಿರಹದಲ್ಲಿಯೇ ಶೃಂಗಾರ ಹೆಚ್ಚೆನ್ನುತ್ತಾರೆ. ಆಗಲಿದ ನಲ್ಲರ ಪಾಲಿಗೆ ಬೆಳುದಿಂಗಳು ಬಿರುಸು. ನೆರವಾಗದು. ವಿರಹದ ಮೊನೆಗೆ ತಿಂಗಳ ಸರಸ ದುಸ್ಸಹ. ಬೆಳುದಿಂಗಳಲ್ಲಿ ಯಾರು ಜೊತೆಯಾಗಿರಬೇಕೊ ಅಂಥವರು ಎಲ್ಲೋ ಬೇರೆ ಇದ್ದು ತಪಿಸಬೇಕಾಗುವ ಅಗತ್ಯ ನಿಟ್ಟುಸಿರ ಆವುಗೆಯನ್ನೇ ಹೊತ್ತಿಸುತ್ತದೆ. ಇದು ಲೋಕದ ಅನುಭವದ ಮಾತು. ಬೇಟ ಫಲಿಸುವಾಗ? ಪ್ರಿಯ ಪ್ರೇಯಸಿಯರ ಸಂಗದಲ್ಲಿ? ವನದಲ್ಲಿ, ಸರದಲ್ಲಿ, ಸರಸದಲ್ಲಿ,ಸಲ್ಲಾಪದಲ್ಲಿ, Heart–handfast in heart ಎಂದು ಕವಿ ಬರೆದಂತೆ, ಹಸ್ತಲಾಘವದಲ್ಲಿನಂತೆ ಹೃದಯವನ್ನು ಹೃದಯ ಹಿಡಿವಾಗ ಕಡೆಗಣಿಸತಕ್ಕುದೇನು? ಆಗ–ವಿರಹದ ಬೇನೆ ಮುಗಿದ ಮೊನ್ನೆಯ ಮರೆತ ಬೇಸರವಾಗುತ್ತದೆ. ಅಗಲಿಕೆಯ ಗಾಯ ಮಾಯ್ದು ಹಾಯೆನ್ನಿಸುತ್ತಿರುತ್ತದೆ. ಚಂದ್ರನ ಅಮೃತಸಾರದಿಂದ, ಕಣ್ಣು, ಹಣೆ, ಕೆನ್ನೆ ಮೃದುವಾಗಿ ಮಿನುಗುತ್ತಿರಲು ತಕ್ಕೆಯ ಮೈ ಕಾಯುತ್ತಿರುತ್ತದೆ. ಆ ಸುಖ, ಆ ಸ್ಪರ್ಶ ಓ–

ಇನ್ ಪೆರತಾವುದು ಸಂಸಾರಸಾರಸರ್ವಸ್ವಫಲಂ!

ಬೆಳುದಿಂಗಳ ಚೆಲುವನ್ನು ಮಾತ್ರ ವರ್ಣಿಸುತ್ತಿದ್ದೀರೆ ಹೊರತು ಅದರ ಅನ್ಯಾಯಗಳು ನಿಮ್ಮ ಎಣಿಕೆಗೆ ಬರುವುದೇ ಇಲ್ಲವೆ? ಬೆಳುದಿಂಗಳ ಬೆಳಕು ಅರೆಬೆಳಕು; ಭ್ರಾಂತಿ ಉಂಟು ಮಾಡುವುದು; ಹಳ್ಳ ತಿಟ್ಟು ಎಲ್ಲ ಒಂದೇ ಸಮ ನೆಲವಾಗಿ ಕಾಣುತ್ತದೆ; ತಾಯಿ ನೆಲವನ್ನು ನಂಬಿ ನಡೆಯುವುದಕ್ಕಾಗದು; ಚೆಲುವಲ್ಲದ ಎಷ್ಟೋ ಮುಖ, ಬಣ್ಣ ಚೆಲುವಾಗಿ ಕಂಡು ಮೋಸಗೊಳಿಸುವುದು ಎನ್ನುವಿರೇನೊ? ನಿಜ. ಆದರೆ ಏನು ನಿರ್ಭಾಗ್ಯರು ನೀವು! ಅನಂತಭೋಗವುಳ್ಳ ಕ್ಷೀರಸಮುದ್ರದ ನೆಲಸಿನಂತಿರುವ ಚಂದ್ರಿಕಾ ವಿಲಾಸದಲ್ಲಿ ನಿಮಗೆ ಚಂದ್ರನ ಕರೆ, ಕಲೆ, ದೋಷ, ಅಸಮತೆ ಮಾತ್ರ ಕಾಣಿಸುತ್ತವೆಯೆ? ನಾನೊಂದು ಪ್ರಶ್ನೆ ಕೇಳುತ್ತೇನೆ : ಎಲ್ಲ ಗಂಡಸರೂ ಮನ್ಮಥರೆ? ಇಲ್ಲ. ಎಲ್ಲ ಹೆಂಡತಿಯರೂ ರತಿಯರೊ? ಆದರೆ ಅವರ ಪ್ರೀತಿ ಪ್ರೀತಿಯಲ್ಲವೊ?

ಅವರ ಬಾಳಸೊಗಸು ಸೊಗಸು, ಸುಖ ಸುಖ ಅಲ್ಲವೊ? ಅವರ ಒಲಿದ ಒಲವು ಒಲವೇ ಅಲ್ಲವೆ? ಪ್ರೇಮಕ್ಕೆ ರಾತ್ರಿ ಒಗ್ಗಿದುದು. ಅದರಲ್ಲಿ ಬೆಳುದಿಂಗಳ ಸೂಸಲು ಪ್ರೇಮದ ಹೂರಣ. ಅದರ ಸವಿ ಹೂರಣದ ಸವಿ. ಲೋಪ, ದೋಷ, ಅನ್ಯಾಯ ಯಾವುದೇ ಇರಲಿ ಬೆಳುದಿಂಗಳು ನಿಮಗೆ ಬೇಡವೆನಿಸಿದರೆ ಮುಖ ಮುಚ್ಚಿಕೊಳ್ಳಿ. ಬೀದಿಯಲ್ಲಿ, ಬಯಲಲ್ಲಿ, ಉಪವನಗಳಲ್ಲಿ ಸಂಚರಿಸಬೇಡಿ. ಬಾಗಿಲು, ಕಿಟಕಿ ಮುಚ್ಚಿಕೊಂಡು ಕೃತಕವಾಗಿ ಇನ್ನಷ್ಟು ಕತ್ತಲು ಮಾಡಿಕೊಳ್ಳಿ. ನಾವು ತಿಕ್ಕಲುಜನವೆಂದು ಅಣಕಿಸಿ, ತೆಗಳಿ. ಆದರೆ ನಿಮ್ಮಂಥವರ ದೃಷ್ಟಿಯನ್ನು ಕುರಿತು ಹಿಂದೆ ಶಕುಂತಲೆಯ ಸಖಿಯರು ಅವಳಿಗೆ ಹೇಳಿದ ಮಾತುಗಳನ್ನು ಹೇಳಿ ನಿಮ್ಮ ಬಾಯಿ ಕಟ್ಟಬೇಕೆನ್ನಿಸುತ್ತದೆ.

'ಕ ಇದಾನೀಂ ಶರೀರ ನಿರ್ವಾಪಯಿತ್ರೀಂ ಶಾರದೀಂ ಜ್ಯೋತ್ಸ್ನಾಂ ಪಟಾಂತೇನ ವಾರಯತಿ'

—ಎಂದ ಅವರ ಮಾತು ನಿಜದ ತಿರುಳು. ಬೆಳುದಿಂಗಳು ಸೂಸಿಬರಲು ಅದು ಬೇಡವೆಂದು ಬಟ್ಟೆಯಿಂದ ಮುಖ ಮುಚ್ಚಿಕೊಂಡು ಅದನ್ನು ನಿವಾರಿಸುವ ಮೂರ್ಖರನ್ನು ಏನೆನ್ನೋಣ! ಐಶ್ವರ್ಯ ಸುರಿದಿದೆ ಹೊರಗೆ. ಅದನ್ನು ಸಹಿಸದ, ಒಲ್ಲದ ದರಿದ್ರರನ್ನು, ಅರಸರನ್ನು, ವಿರಸರನ್ನು ದೇವರು ಏಕೆ ಸೃಷ್ಟಿಸುವನೋ!

ನೀವು ಹೇಳಬಹುದು : ಇದೆಲ್ಲ Moonshine ಎಂದು. ನೀವು ಅರೆಅರೆಕಲಾಗಿ ಇಂಗ್ಲಿಷ್ ಓದಿದವರು. ನಮ್ಮ ಸಂಪ್ರದಾಯಕ್ಕೆ ನಿಮ್ಮದು ವಿರೋಧ. Moonshine ಅಂತೆ! ನಿಮ್ಮ ತಲೆಯಲ್ಲಿ ಚಂದ್ರ ಹೊಕ್ಕು ನಿಮಗೆ ಹಾಗೆ ತೋರುತ್ತಿರಬೇಕು. ಇಂಥ ಚಂದ್ರಹತರನ್ನು ಆಸ್ಪತ್ರೆಗೆ ಕಳಿಸಿ ಚಿಕಿತ್ಸೆ ಮಾಡುವುದು ಒಳಿತು. ಆದರೆ ಆಸ್ಪತ್ರೆಗಳೂ ಪಾಶ್ಚಿಮಾತ್ಯವೇ ಆದ್ದರಿಂದ ಚಂದ್ರಹತರಿಗೆ ತಕ್ಕ ಚಿಕಿತ್ಸೆ ಅಲ್ಲಿ ನಡೆಯುವುದೊ ಇಲ್ಲವೊ. ನಮ್ಮ ಪಂಡಿತರಲ್ಲಿಗೆ ಬನ್ನಿ ಮಾಡಿಸುತ್ತೇನೆ. ಈ ಪಾಶ್ಚಿಮಾತ್ಯ ಪ್ರಜ್ಞಾವಾದಕ್ಕೆ ಹೇಗೆ ಬೆಲೆಗಟ್ಟೋಣ? ಗಂಡನ್ನು ಹೆಣ್ಣು ಮಾಡಿ ಚಂದ್ರನನ್ನು ಅವಳು ಅನ್ನುವ ಗರಿಮೆ ನಿಮ್ಮದು. ನಮ್ಮದಲ್ಲ. ಚಂದ್ರ, ವಸಂತ, ಮನ್ಮಥ ಈ ತ್ರಿಮೂರ್ತಿಗಳ ಕೆಳೆತನದ ಸುಗ್ಗಿಯನ್ನೂ ತುಂಬು ಯೌವನದ ಮೆರೆತವನ್ನೂ ಯೋಗ್ಯತೆ, ಕಲ್ಪನಾಶಕ್ತಿಗಳಿಲ್ಲದ ಜನ ಒಂದು ಹೆಣ್ಣು, ಒಂದು ಅವಿವೇಕ, ಇನ್ನೊಂದು ಕಾಟ ಕೊಡುವ, ಕುಚೇಷ್ಟೆಯ ಕುರುಡು ಹುಡುಗ ಎಂದು ಭಾವಿಸುವ ಸತ್ಯಾಪಚಾರ ಭಾರತೀಯರ ರುಚಿಗೆ ರುಚಿಸದು. ನಮ್ಮ ಚಂದ್ರ ಅತ್ರಿ ಋಷಿಯ ಮಗ. ನಿಮ್ಮ ಭಾಗಕ್ಕೆ ಋಷಿಗಳಿದ್ದರೆ ತಾನೇ ಈ ಸಂಗತಿ ತಿಳಿದೀತು? ಹೌದು; ಚಂದ್ರ, ರಾಜ. ರೋಹಿಣಿ ಅವನ ಹೆಂಡತಿ. ರಾತ್ರಿಯಲ್ಲಿ ಅವರ ದಿಬ್ಬಣ ನೋಡಿ. ತನ್ನ ಕಣ್ಣಿಗೆ ಕಾಣದಾದರೆ ದೂರದರ್ಶಿನಿಯಲ್ಲಿ ನೋಡಿ. ಆ ದೌಲತ್ತು ಯಾವ ದಿಲ್ಲಿ ದ್ವೀಪಾಂತರದ, ಯಾವ ಬಾಗ್ದಾದ್ ಕಲೀಫನ ದೌಲತ್ತಿಗೆ ಕಡಮೆ? ಬೇಕಾದರೆ ಮಹಾಕವಿ ಬಾಣಭಟ್ಟನನ್ನು ಕೇಳಿ. ಅವನ ಕಾದಂಬರಿಯನ್ನು ಓದಿದ್ದೀರ? ಪತ್ರಲೇಖೆಯ ಒಡೆಯ, ಕಾದಂಬರಿಯ ಹೃದಯೇಶ್ವರ, –ರಮಣ

ಚಂದ್ರಾಪೀಡ ಯಾರು ಬಲ್ಲಿರ? ಚಂದ್ರ. ಅವನೇ ಆ ಕಾವ್ಯದ ಹೃದಯದಲ್ಲಿ ಕುಳಿತು ಹಲವರ ಭಾಗ್ಯವನ್ನು ನಡಸುವ ಮಹಾದೈವ.

ಇನ್ನು ವಸಂತದ ಉತ್ಸವಗಳೊ! ಭರತಖಂಡದಲ್ಲಿ ವಸಂತದ ಸಿಹಿ, ನಗೆ, ಉಲ್ಲಾಸ, ಚೆಲುವು ರಂಗುರಂಜನೆ ಚಿಗುರುವ ಅರಳುವ ಚೈತನ್ಯ, ಅದರ ಹೊಸತನ, ಕೋಮಲ ಮೃದುತೆ ಇನ್ನಾವುದಕ್ಕಿವೆ? ನವದಂಪತಿಗಳ ಓಕುಳಿಯ ಆಟ ವಸಂತದ ಆಟ. ಶುಭ ಸಂಭ್ರಮ, ವಸಂತಕನ ಹಾಸ್ಯ ಇವೆಲ್ಲ ಚಂದ್ರನಿಗೆ ಗೆಳೆಯ ವರ್ಗ. ಅವನ ಪರಮ ಸಖನಾದ ನಮ್ಮ ಮನ್ಮಥನ ದರ್ಬಾರು ಲೋಕದ ಕಣ್ಣ ಹಬ್ಬ, ಸೌಂದರ್ಯದ ಪಾರದರ್ಶನವಾದೀತು. ಅಲ್ಲಿರುವುದು ಎಲ್ಲವೂ ಹದವಾಗಿ ಬಲಿತದ್ದು. ಅದರ ಪಾರುಪತ್ಯ ಪರಿಣತ ಗಂಡು ಪಾರುಪತ್ಯ. ಬೆಳೆದ ಮನ್ಮಥನ ಹಸುರುಡಿಗೆ, ಗಿಳಿಯ ರಥ, ಕಬ್ಬು ಬಿಲ್ಲು, ಪುಷ್ಪಾಸ್ತ್ರ, ದುಂಬಿಗಳ ಓಲಗ ಮಧುರಭೋಗದ ಚರಮ ಸೀಮೆ. ಕುರುಡುಗಣ್ಣಿನ, ಪಡುವಲ ಆ ಕಿರುಕುಳದ ಚಿಳ್ಳೆಯ ಬೇಜವಾಬ್ದಾರಿಯೆಲ್ಲಿ ? ರಾಜ ಚಂದ್ರನ ಜೊತೆಯಲ್ಲಿ ಲೋಕವನ್ನು ದಾಳಿಮಾಡಿ ಗೆಲ್ಲುವ ನಮ್ಮ ಮನ್ಮಥನ ಲಲಿತ ಸಾಹಸಗಳೆಲ್ಲಿ? ಸಾವಿರಾರು ವರ್ಷ ಬೆಳೆದ ಸಂಸ್ಕೃತಿಯ ಫಲವಾದ ಈ ಪಕ್ವತೆಗೂ ಆ ಎಳಸು ಅಪಕ್ವತೆಗೂ ಎಲ್ಲಿಯ ಹೋಲಿಕೆ? ತೆಗೆ ತೆಗೆ. ನಮ್ಮ ನಿಮ್ಮ ರುಚಿಭೇದ ಧ್ರುವಗಳಷ್ಟು ದೂರ. ನಮ್ಮ ನಾಡಿನ ಮಕ್ಕಳಾದರೆ ನಮ್ಮ ಸಂಪ್ರದಾಯಕ್ಕೆ ಓಲಿ. ಇಲ್ಲಿನ ಸುಖವನ್ನು ನಮ್ಮ ಹಾಗೆ ಅನುಭವಿಸಿ. ಚಂದ್ರಭೋಗದ ಸಂತೋಷ ನಿಮಗೆ ದೊರೆಯುತ್ತದೆ. ಇಲ್ಲವಾದರೆ ನಿಮ್ಮ ಕರ್ಮ: ನಿಮ್ಮ ಅದೃಷ್ಟ ಪರದೇಶಿ.

ಚಂದ್ರ ಅಂದೆ; ಬೆಳುದಿಂಗಳು ಅಂದೆ. ಚಂದ್ರಲೋಕಕ್ಕೇ ಹೋಗಿ ಅಲ್ಲಿ ವಯ್ಯಾಳಿ ನಡಸೋಣವೆಂದು ಈಚೆಗೆ ಆಸೆಯಾಗುತ್ತಿದೆ. ಅಲ್ಲಿಗೆ ಹೋಗಿ ಬರಬಹುದಂತೆ. ತಾರಾಪಥದಲ್ಲಿ ಈಚೆಗೆ ಒಂದು ನಾಯಿ ಕೂಡ ಪ್ರಯಾಣ ಮಾಡಿತಂತೆ. ಅದರ ಚಿತ್ರಗಳನ್ನೂ ನೋಡಿದ್ದೇನೆ. ಇನ್ನು ಹತ್ತಿಪ್ಪತ್ತು ವರ್ಷಗಳಲ್ಲಿ ಗ್ರಹಯಾನ, ನಕ್ಷತ್ರಯಾನ ಮಾಡಲು ಅನುಕೂಲಿಸುವಂತೆ ಕಂಪನಿಗಳು ಹುಟ್ಟಿಕೊಳ್ಳುತ್ತವೆ. ಅಂಥವರ ವಿಮಾನ ಹತ್ತಿ ಆಕಾಶಗಂಗೆಯಲ್ಲಿ ಮಿಂದು–ಅದು ನನಗೆ ಬರಿಯ ತಾರಾಪುಂಜವಲ್ಲ–ಆ ಲೋಕದ ಪ್ರವಾಸ ಮಾಡುವ ಏರ್ಪಾಡು ಬೇಗ ಆಗುತ್ತದೆ. ರಷ್ಯನರು ಮಾಡುತ್ತಾರೆ. ಅಮೇರಿಕನರು ಆಗುವುದೆಂದಿದ್ದಾರೆ. ಇಂಗ್ಲಿಷರು ಒಪ್ಪಿದ್ದಾರೆ. ಮೂರು ಮಹಾರಾಷ್ಟ್ರಗಳು ಒಪ್ಪಿರುವುದು ಈ ಒಂದು ಸಂಗತಿಯನ್ನೇ. ಅಂತಾರಾಷ್ಟ್ರೀಯ ರಾಜತಂತ್ರದಲ್ಲಿ ಒಮ್ಮತ ಈ ಒಂದು ಸಂಗತಿಯಲ್ಲಿ ಸದ್ಯಃ ಸಾಧ್ಯವಾಗಿದೆ. ಅಂಥವರ ತಲೆಯಲ್ಲಿ Moonshine ಇದೆ ಎನ್ನಲು ನಾವು ನೀವು ಎಷ್ಟರವರು? ಅಥವಾ : ವಿಜ್ಞಾನಿಗಳು ಅವಿವೇಕಿಗಳು, ಅವರ ತಲೆಯ ತುಂಬ ಬೆಳುದಿಂಗಳಿದೆ ಎನ್ನಲು ನಿಮಗೆ ಧೈರ್ಯ ಉಂಟೇನು? ನಾಲ್ಕು ವರ್ಷ ತಾಳಿ. ಸಾಧನಗಳನ್ನು ಯಂತ್ರಶಿಲ್ಪಿಗಳು ತಯಾರು ಮಾಡುತ್ತಿದ್ದಾರೆ. ನಿಮ್ಮನ್ನು ಕರೆದುಕೊಂಡು ಹೋಗುತ್ತಾರೆ. ಅಲ್ಲಿಗೇ ಹೋಗಿ ನೆಲಸಬಹುದು. ಅಲ್ಲಿ

ಹೋಟೆಲುಗಳೊ ವಿಶ್ರಾಂತಿ ಗೃಹಗಳೊ ವಸಾಹತುಗಳೊ ಆವರೆಗೆ ಏರ್ಪಟ್ಟಿರುತ್ತವೆ. ಈಗಾಗಲೇ ಆ ಸುತ್ತ ಬಾವುಟಗಳು ನಟ್ಟು ಹಾರಾಡುತ್ತಿವೆ. ಮುಗಿಯದ ಮುಗಿಲ ಯುದ್ಧಗಳನ್ನು ಹೂಡುವವರು ಚಂದ್ರಗ್ರಹದ ಕಾವಲುಗಳಿಗಾಗಿ ಕಾದಾಡುತ್ತಾರೆ. ರಾಷ್ಟ್ರಗಳ ಬದುಕು ಈಗಾಗಲೆ ಭಯಗಳಿಗೆ ಬಂದಿಯಾಗಿದೆ.

ನಮಗೆ ಅಂಥ ಭಯವಿಲ್ಲ. ನಮಗೆ ಆಕ್ರಮಣ ಬುದ್ಧಿಯಿಲ್ಲ. ಸೊಕ್ಕಿಲ್ಲ. ಲೋಕದ ಸೌಖ್ಯವೆಲ್ಲ ನಮಗೆ ಮಾತ್ರವೇ ದೊರಕಲಿ, ದಕ್ಕಲಿ, ಇನ್ನೊಬ್ಬರಿಗೆ ಬೇಡ ಎಂಬ ದುರಾಸೆಯಿಲ್ಲ. ನಮಗೆ ಬೇಕಾದ್ದು ಬೆಳುದಿಂಗಳು. ದೂರದಿಂದ ಸವಿಯುವುದಕ್ಕಿಂತ ಸನ್ನಿಧಿಗೆ ಹೋದರಾಗದೆ ಎಂಬ ಸಣ್ಣ ಚಪಲದಿಂದ ಈ ಎರಡು ಮಾತಾಡಿದ್ದು. ಅದನ್ನು ಯಾರೂ ಕಸಿದುಕೊಳ್ಳಲಾರರು. ನಿಮಗೂ ಬೇಕಾದರೆ ಹೇಳಿ. ನಮ್ಮಷ್ಟೇ ನಿಮಗೂ ಅದು ದೊರಕುತ್ತದೆ. ಲೋಕದ ೩೦೦ ಕೋಟಿ ಜನ ಅನುಭವಿಸಿದರೂ ಸಾಕಾಗುವಷ್ಟು, ಆಗಿ ಮಿಗುವಷ್ಟು ಹರ್ಷ ದೊರೆಯುತ್ತದೆ. ಸಾವಿರಾರು ವರ್ಷಗಳಿಂದ ಕೋಟಿ ಕೋಟಿ ಜನಕ್ಕೆ ದೊರಕಿದೆ. ಭೂಮಿ ಆಕಾಶ ನಿಲ್ಲುವವರೆಗೂ ಎಲ್ಲರ ಪಾಲಿಗೂ ದೊರಕುತ್ತಿರುತ್ತದೆ. ಆ ಹರ್ಷದಲ್ಲಿ ಎಲ್ಲರೂ ಪಾಲುಗಾರರಾಗಬಲ್ಲರು. ಆ ಭೋಗದಲ್ಲಿ ಯಾರಿಗೂ ಅಸಹನೆಯಿಲ್ಲ; ಈರ್ಷ್ಯೆ ಇಲ್ಲ. ಸರ್ವತ್ರ ಸಮತೆಯನ್ನು ಸಾಧಿಸುವ ಸಂತೋಷಗಳು ತಾನೇ ದಿವ್ಯ ಸಂತೋಷಗಳು? ಒಬ್ಬರಿಗೆ ಮಾತ್ರ ಲಭಿಸೀತು, ಹೆರರಿಗೆ ಸಲ್ಲದು ಎಂಬ ತತ್ವ ಕಿರುಕುಳರ ತತ್ವ. ನಮ್ಮ ಬೆಳುದಿಂಗಳನ್ನು ಬಯಸುವವರನ್ನು ಕತ್ತರಿಸಿ ಹಾಕಿಯೇವು ಎಂಬ ಸ್ವಾರ್ಥ ಯಾವ ಕಾಲಕ್ಕೆ ಸರಿಹೋದೀತು ? ಎಲ್ಲರಿಗೂ ಹಂಚಿ ಬೆಳಗುವುದು ಈ ಬೆಳುದಿಂಗಳ ಭಾಗ್ಯ. ಇಲ್ಲಿಗೆ ಧರ್ಮಸ್ವರೂಪ.

ಬನ್ನಿ ಮದರಾಸಿಗೆ ; ಪುದುಚೇರಿಗೆ ; ಪುರಿ ಜಗನ್ನಾಥಕ್ಕೆ. ಮೂಡಲಿಗೆ ತಿರುಗಿ. ಉದ್ದಕ್ಕೆ ಕಡಲ ಕರೆಯಲ್ಲಿ ಹಾಸಿದೆ ಹೊಯಿಗೆ. ಮೈಲಿ ಮೈಲಿ. ನೀವು, ನಿಮ್ಮ ಪ್ರಿಯೆ, ನಿಮ್ಮ ಮಗು. ಅಗೋ ಹಗಲ ಕಾಂತಿ ಕಂತಿಬಂತು. ಇರುಳು ಕವಿದೀತೆಂಬ ಭಯ ಮೂಡುವುದಕ್ಕೆ ಮುಂಚೆಯೇ ದೂರದ ದಿಗಂತದಲ್ಲಿ ಸಂಜೆಯ ಸಾವಿರ ರಂಗುಗಳ ಮೋಹಕ ಪರದೆ ಸರಿದು ಕತ್ತಲೆಯ ಯವನಿಕೆ ಲೋಕದ ಮೇಲೆ ಕವಿಯದಂತೆ ಸರಿಸಿ, ಬೆಳ್ಗಾಂತಿ ಹರಡುತ್ತಿದೆ. ಮುಗಿಲನ್ನು ತೂರಿ ಸುರಿಯುತ್ತಿದೆ ಬೆಳ್ಳನೆಯ ಬೆಳಕು. ತುಂಬು ಶಾಂತಿಯದು. ಕಡೆದ ಮಜ್ಜಿಗೆಯ ಬೆಣ್ಣೆಯಂತೆ, ಬೆಣ್ಣೆಯುಂಡೆಯಂತೆ, ಉಕ್ಕಿ ಬರುತ್ತಿದೆ. ಎಲ್ಲ ಮುಗಿಲ ಮುಖವೂ ಬೆಳಗುವಂತೆ. ಇನ್ನೇನು ಆವರಿಸಿತು. ಮುಂದೆ, ಬಲ, ಎಡ, ಹಿಂದೆ. ಮೊದಲು ಒಂದು ರೇಖೆ; ಆಮೇಲೆ ಬೋರಲು ಬಾಣಲೆಯಂತೆ ಹೊಂಬೆಳಕಿನ ಒಂದು ಕಾಂತಿಯ ಹಸರ; ಎರಡು ನಿಮಿಷಗಳಲ್ಲಿ ಒಪ್ಪವಿಟ್ಟ ಜಂತದ ದುಂಡು ಬಿಂಬ. ಪೂರ್ಣ ಚಂದ್ರಮಂಡಲ ಆಚೆಯ ಆಳದಿಂದ ಎದ್ದು ರೋದೋಂತವನ್ನು ಆವರಿಸಿ ನಿಂತಿದೆ. ಅಲೆ ಆಡದ ದಿಗಂತವನ್ನು ಸದ್ದಿಲ್ಲದೆ ಹತ್ತಿ ನಿಮ್ಮೆಡೆಗೆ ಬರುತ್ತಿದೆ ಆ ಮಂಡಲ. ಅಲೆ ಆಡುತ್ತಿದೆಯೊ ಇಲ್ಲವೊ ಯಾರು

ಬಲ್ಲರು? ಅಡಿದರೆ ಕಾಣಿಸದು! ಉಳಿದೆಲ್ಲವನ್ನೂ ಮರಸುತ್ತಿದೆ. ಮಗನನ್ನು ಕಂಡು ಕಡಲ ತಾಯಿಗೆ ಏನು ಆನಂದವೋ. ಬಿಂಬ ತನ್ನ ಕಡೆಯಿಂದ ನಮ್ಮ ಕಣ್ಣಿಗೆ ಬೆಳಕಿನ ತಂತಿ ಕಳಿಸುತ್ತಿದೆಯೇನೊ. ಉಹುಂ ತಂತಿಯಲ್ಲ. ಒಂದು ದೀವಿಗೆಯ ಕಂಬವನ್ನು ಹೊತ್ತಿಸಿ ನಮ್ಮ ಕಡೆಗೆಸೆದಿದೆ. ಕಣ್ಣೆದುರಿಗೆ ಏರುವ, ಇಳಿವ, ಸುಳಿವ, ಉಬ್ಬುವ, ಮೊರೆವ, ನೊರೆವ, ಅಲೆಮಾಲೆ ಕಾಲತಲದಲ್ಲಿ ಅಡಗಿ ಮುದುರಿಕೊಳ್ಳುತ್ತಿದೆ; ಹಿಮ್ಮೆಟ್ಟುತ್ತಿದೆ. ದಿಗಂತದಿಂದ ನಿಮ್ಮವರೆಗೂ ನಿಲುಕಿ ಉದ್ದ ಉರಿವ ಈ ಬೆಳಕಿನ ಕಂಬ ನೀವಿರುವೆಡೆಗೆ ಚಂದ್ರಬಿಂಬ ಕಟ್ಟಿರುವ ಸೇತುವೆ. ಸೇತುವೆ ಕಟ್ಟಿಯಾಯಿತು. ಏರಿತು ಕಾಂತಿ. ಸೇತುವೆಯ ಮೇಲೆ ಆಕಾಶದಲ್ಲಿ, ಭೂಮಿಯಲ್ಲಿ, ನೀರಲ್ಲಿ, ನಿಮ್ಮ ಹೊರಗೆ, ಒಳಗೆ ಚೆಲ್ಲಿತು. ಇದೇನು ಬೆಳುದಿಂಗಳು!

ಇತ್ತ ನೋಡು ಪ್ರಿಯೆ. ನಮ್ಮ ಪ್ರೀತಿಯ ಕೆಳೆಯನಲ್ಲಾ ಈ ಚಂದ್ರ ? ಹೊಸತರಲ್ಲಿ ಅಂದು ನಾವು ಬೆಳುದಿಂಗಳಲ್ಲಿ ರಾತ್ರಿಯನ್ನು ದಣಿಸಿದುದು ನೆನಪಿದೆಯೆ ನಿನಗೆ? ಚಂದಮಾಮವನ್ನು ನೋಡು ಮಗು. ಮಗುವಿಗೆ ನಿದ್ದೆ ಬಂದಿದೆ ಪಾಪ, ನೋಡು. ಈ ಒತ್ತಿಗೆ ಬಾ. ಹಾಲು ಚೆಲ್ಲಿದಂತಿಲ್ಲವೆ ಕಡಲ ನೆಲಸು. ಹಿಟ್ಟು ಚೆಲ್ಲಿದಂತೆ ನೆಲದ ಹರವು!

ಇದು ಹಾಲುಗಡಲಿನಾ ಸೀಮಿ,
ಚಂದ್ರಮನೆ ಸ್ವಾಮಿ!
ಚಂದ್ರಕೀ ಚಂದ್ರಮರ ಜೋಡಾ -
ಬೆಳುದಿಂಗಳ ನೋಡಾ!

ಕರೆ, ನಾಡು, ಮನೆ, ಮಾಡು, ಬೀದಿ, ಅಂಗಡಿ ಎಂದೋ ಅಳಿಸಿತು. ಸುತ್ತಲ ಸಾವಿರ ನಮ್ಮಂತಹ ಜೊತೆ ಜನದ ಅರಿವು ಒಬ್ಬರದು ಇನ್ನೊಬ್ಬರಿಗಿಲ್ಲ. ಅವರ ಸೆಲೆಯಿಲ್ಲ. ಸದ್ದಿಲ್ಲ. ಎಲ್ಲರ ಹೃದಯವನ್ನೂ ತುಂಬುತ್ತಿದೆ ಬೆಳುದಿಂಗಳು. ಅದರ ಹಾಸ ಇಂದುಹಾಸ. ಅದರ ಮೌನ, ಅದರ ಸಿಂಗಾರ, ನಾವು, ಅದು ಇಷ್ಟು ಮಾತ್ರ ಸತ್ಯ. ಉಳಿದದ್ದು ಯಾವುದಿದೆಯೊ ಇಲ್ಲವೋ! ಯಾವುದಿದ್ದರೆ ಏನು? ಇಲ್ಲದಿದ್ದರೇನು? ಬೆಳುದಿಂಗಳ ಒಸಗೆ ಭೋಗಲೋಕಕ್ಕೆ ಚಂದ್ರನೆರೆದ ದಾನ. ಸಕಲ ಸೌಭಾಗ್ಯ.

ನೋೞ್ಪಿಂ ಬೆಲೆಗೊಟ್ಟು ತಾರ ಕೌಮುದಿಯಂ.

# ಮಳೆ

ಬೆಂಗಳೂರಲ್ಲಿ ಈ ಸಲ ಕಾದಷ್ಟು ಬಿಸಿಲು ಯಾವ ವರ್ಷವೂ ಕಾದಿಲ್ಲ. ಈ ವರ್ಷವನ್ನು ನೋಡದವರಿಗೆ ಹಿಂದಿನದೇ ಮೇಲೆನ್ನಿಸುತ್ತದೆ. ಪ್ರತಿವರ್ಷವೂ ಹೀಗೆಯೇ. ಆಗ ಅನುಭವಿಸಬೇಕಾಗಿರುವಷ್ಟು ಕಷ್ಟ ಹಿಂದೆ ಎಂದೂ ಇರಲಿಲ್ಲ ಎನ್ನುವುದು ಮನುಷ್ಯ ಸ್ವಭಾವ. ಅಥವಾ ವರ್ಷಗಳು ನಡೆದಂತೆಲ್ಲ ನಮಗೆ ಕಷ್ಟವನ್ನು ಸಹಿಸುವ ಶಕ್ತಿ ಕಡಮೆಯಾಗಿ ಈ ರೀತಿ ಯೋಚನೆ ಬರುತ್ತದೆಯೇನೊ. ಅದನ್ನು ಅನುಭವಿಸಿ ದಾಟಿ ನಾವು ಬದುಕಿರುವುದರಿಂದಲೂ ಹೀಗೆ ತೋರುತ್ತಿದ್ದೀತು. ಹೇಗೂ ಇರಲಿ, ಈ ಸಲದ ಬಿಸಿಲು ಬೆಂಗಳೂರಿಗೆ ದೊಡ್ಡ ಬಿಸಿಲು. ಮದರಾಸೇ ಮೇಲೆನ್ನುತ್ತಾರೆ. ಕಡಪ ಮತ್ತೂ ಮೇಲಿರಬೇಕು.

ಬೆಂಗಳೂರು ತಣ್ಣಗಿರುವುದೆಂದು ಜಾಲಾರಪೇಟೆಯ ಬೆಟ್ಟಗಳನ್ನು ಹತ್ತಿ ತಾವೂ ರೈಲೂ ಏದುತ್ತ ಏದುತ್ತ ಕಣಿವೆಯ ಕೆಳಗಿನವರು ಇಲ್ಲಿಗೆ ಬಂದು ಸೇರುತ್ತಾರೆ. ನಮಗೆ ಸುಣ್ಣ ಕಲ್ಲು ಗೂಡಿನಂತಿರುವ ಬೆಂಗಳೂರು ಈಗಲೂ ಮೊದಲು ಅವರ ಮೂಗನ್ನೂ ಗಂಟಲನ್ನೂ ಹಿಡಿದು ಅವರನ್ನು ಪರೀಕ್ಷಿಸುತ್ತದೆ. ಇಂಥ ಪರೀಕ್ಷೆಗಳಿಗೆಲ್ಲ ಅವರು ಹೆದರುವುದಿಲ್ಲವಾದ ಕಾರಣ ನೂರಾರು, ಸಾವಿರಾರು ಜನ ಒಳಕ್ಕೆ ಧುಮುಕುತ್ತಾರೆ. ವೆಚ್ಚ ಹೆಚ್ಚಾಗುವ ಉದಕಮಂಡಲ, ಕೊಡೈಕೆನಾಲ್ ಮುಂತಾದ ದೊಡ್ಡ ವಿಶ್ರಾಂತಿ ಸ್ಥಾನಗಳಿಗೆ ಹೋಗಬಲ್ಲವರು ಅಲ್ಲಿಗೆ ಹೋಗುವವರಾದರೂ ಇಲ್ಲಿಗೆ ಬರುವವರೇ ಹೆಚ್ಚು ಮಂದಿ. ಅವರಿರುವಲ್ಲಿ ಬಿಸಿಲು ಹೆಚ್ಚಾಗಿರುವುದು ಸಹಜ; ಅವರು ಕೇಳಿಕೊಂಡು ಬಂದದ್ದು. ಬರುವ ಕಡೆಗೆಲ್ಲ ಅದನ್ನು ಹೊತ್ತುಕೊಂಡು ಬಂದು ಇಲ್ಲಿನ ತಾಪ ಹೆಚ್ಚು ಮಾಡಿ ಏನೂ ಅರಿಯದ ಈ ಊರಿನವರ ಗೋಳು ಹುಯಿದುಕೊಳ್ಳುವುದು ಯಾವ ನ್ಯಾಯ? ಅವರವರ ಪ್ರಾರಬ್ಧ ಅವರನ್ನು ಬೆನ್ನಟ್ಟುವುದೆನ್ನುತ್ತಾರೆ. ಆದರೆ ಇನ್ನೊಬ್ಬರನ್ನು ಪೀಡಿಸುವ ಧರ್ಮವನ್ನು ಯಾವ ದೇವರು ಮಾಡಿದನೊ ಅರಿಯೆ. ಅವರನ್ನು ಅಟ್ಟಿ ಕಿತ್ತು ತಿನ್ನುವುದರ ಜೊತೆಗೆ ನಮ್ಮ ಪೀಡೆಯಾಗುವುದಾದರೆ ಅವರಿಗೂ ಆ ಕಾಟ ತಪ್ಪುವಂತಾಗಲಿ.

ಆ ವಿಚಾರ ಹಾಗಿರಲಿ. ವೈಶಾಖದ ಉರಿಬಿಸಿಲಲ್ಲಿ ಮೈ ನೀರು ಬಸಿದು ಬಾಯಾರಿ, ಕಂಗೆಟ್ಟು, ಮಳೆ ಬಂದೀತೆ ಎಂದು ಹಾತೊರೆಯುತ್ತೇವೆ. ಬೇಗೆಗೆ ಕಂದಿ ನಿರಾಶರಾಗಿ ಆಕಾಶದ ಕಡೆ ನೋಡುತ್ತ ಚೆದರಿ ಎಲ್ಲೊ ಅಲ್ಲೊಂದು ಇಲ್ಲೊಂದು ಆಡುವ ಚೂರು ಮೋಡವಾದರೂ ತಲೆಯ ಮೇಲೆ ಸುಳಿಯಲೆಂದು ಹಾರೈಸುತ್ತೇವೆ.

ತಂಪಿನ ದಿನಗಳು ಎಂದಿಗೆ ಬಂದಾವೋ ತಾಪ ಎಂದಿಗೆ ತಗ್ಗೀತೋ ಎಂದು ಬಾಯಿ ಬಾಯಿ ಬಿಡುತ್ತೇವೆ. ಬಾರದೆ ಎಲ್ಲಿಗೆ ಹೋದಾವು? ತೀರ ದುರದೃಷ್ಟದ ವರ್ಷಗಳನ್ನು ಬಿಟ್ಟರೆ ಸಾಧಾರಣವಾಗಿ ಮಳೆಗಾಲದಲ್ಲಿ ಬರಲೇಬೇಕು. ಗಣಿತಕ್ಕೆ ಗುಲಾಮನಾಗಿ ನಾವು ಬರುತ್ತದೆಂದ ದಿನ ಬರಬೇಕು. ಅದಕ್ಕೂ ಮುಂಚೆ ಕಾಮನನ್ನು ತಣ್ಣಗೆ ಮಾಡಲು ಎರಡು ಹನಿ; ಸುರುಗು ಗುಡಿಸುವುದಕ್ಕೆ, ತರಗು ತೂರುವುದಕ್ಕೆ, ಗಿರಿ ತೊಳೆಯುವುದಕ್ಕೆ ನಾಲ್ಕು ನಾಲ್ಕು ಹನಿ; ವೈಶಾಖ ಬಹುಳ, ಜ್ಯೇಷ್ಠಗಳಲ್ಲಿ ಬಿತ್ತನೆಗೆ–ಹೀಗೆ ಮಳೆ ಬಂದೇ ಬರುವುದೆಂದು ರೈತರೆಲ್ಲರಿಗೂ ಗೊತ್ತು. ಪಂಚಾಂಗದವರು ಕೂಡ ಪಂಥವಿಟ್ಟು ನುಡಿಯುತ್ತಾರೆ. ಮುಂಗಾರು ಸುರಿಯಲೇಬೇಕಲ್ಲ! ಜೂಲೈ, ಆಗಸ್ಟ್ ತಿಂಗಳಲ್ಲಿ ಖಂಡಿತವಾಗಿ ಬೇಕಾದಷ್ಟು – ಕೆಲ ವೇಳೆ ಬೇಕಾಗದಷ್ಟೂ – ಮಳೆ ಸುರಿಯುತ್ತದೆ. ಒಂದು ದಿನ ಹಿಂಚು; ಮುಂಚು.

ಈ ಸಲ ಪ್ರತಿಸಲಕ್ಕಿಂತಲೂ ಮುಂಚೆಯೇ ಮುಂಗಾರು ಮೊದಲಾಗುವುದೆಂದಿದ್ದರು. ಮಳೆಯೇನೊ ಬಂತು; ಬೆಂಗಳೂರಿಗಲ್ಲ! ನೀಲಗಿರಿಗೆ, ನಂದಿಗೆ. ಅಲ್ಲಿದ್ದ ಜನರನ್ನು ಬೆಂಗಳೂರಿಗೂ ಮೈಸೂರಿಗೂ ಅಟ್ಟುವುದಕ್ಕೆ. ಮಳೆಯ ಸಮಾಚಾರ ಮಾತ್ರ ನಮಗೆ ಬಂದಿತು. ಇಲ್ಲಿನ ತಾಪವನ್ನೂ ಆತುರವನ್ನೂ ಹೆಚ್ಚು ಮಾಡಲೆಂದು.

ಮೇ ತಿಂಗಳ ಮೂರನೆಯ ವಾರದ ಸುಮಾರಿಗೆ ದೊಡ್ಡ ಮೋಡಗಳಾಡುವುದಕ್ಕೆ ಆರಂಭ. ಕೊಡೆಯಿಲ್ಲದೆ ಹೊರಗೆ ಹೋಗುವುದಕ್ಕೆ ಎಂಥವರಿಗೂ ಹೆದರಿಕೆ. ಮೋಡಗಳ ಗುಡುಗಾಟವೇ ಆಟ. ದೂಳು ತುಂಬಿದ ಡೇರಾ ಬಟ್ಟೆಯ ಮೇಲ್ಹಾವಣಿ ಕಟ್ಟಿದಂತೆ, ಅದಕ್ಕೆ ಹೊಗೆ ತಾಕಿದಂತೆ, ಆಕಾಶದಲ್ಲಿ ಮೋಡ ಕಟ್ಟುತ್ತದೆ. ಅದರ ಮುಖ ಕಾದು ಕೆಂಪಾಗುತ್ತದೆ. ದಿನವೂ ಹೆಚ್ಚು ಕಪ್ಪಾಗುತ್ತ ಕೆರಳಿ ಅಬ್ಬರಿಸುತ್ತದೆ. ಗಾಳಿಗಳ ಜೊತೆಗೆ ಕೂಗಿ, ಓಡಿ, ಉರುಳಿ, ಹೊರಳಿ, ಲಾಗಹಾಕಿ ಮಿಂಚು ಕಾರುವುದು. ಕಾರಿದ ಮಿಂಚನ್ನು ಮತ್ತೆ ನುಂಗುತ್ತದೆ. ಆ ರಭಸವನ್ನು ನೋಡುವುದಕ್ಕಾಗದು. ಇನ್ನೇನು ಬಂದಿತು ಮಳೆ; ವಾಸನೆ ಬರುತ್ತಿದೆ; ನೀರ ಮೇಲಿನ ತಣು ಗಾಳಿ ಬೀಸಲು ಮೊದಲಾಯಿತು ; ಅದೋ ಆ ದೂರದಲ್ಲಿ ಸುರಿಯುತ್ತಿರಬೇಕು; ಚಿನಕು ಹಾಕಿತಲ್ಲವೆ? ಬೇಗ ಮನೆಗೆ ಹೋಗಿ ಸೇರಿಕೊಳ್ಳೋಣ. ಸದ್ಯಃ ನಡುವೆ ಎಲ್ಲಿಯಾದರೂ ಅದಕ್ಕೆ ಸಿಕ್ಕಿ ಪೇಚಾಡಬೇಕಾದೀತು. ಲಾಲ್‌ಬಾಗಿಂದ ಮನೆಯವರೆಗೂ ತಲೆಯ ಮೇಲೆ ಒಂದಡಿ ಮಾಳಿಗೆ ಸಿಕ್ಕುವುದಿಲ್ಲ. ನಿಲ್ಲಲು ಒಂದಂಗಡಿಯ ಕೈಸಾಲೆ ಇಲ್ಲ. ಉದ್ದಕ್ಕೂ ದೊಡ್ಡ ದೊಡ್ಡ ಕಾಂಪೌಂಡು ಹಾಕಿದ ಶ್ರೀಮಂತರ ಮನೆಗಳು ಎಂದುಕೊಂಡು ಹೊರಡುವುದು. ಅರೆದಾರಿ ಬರುವುದರೊಳಗೆ ಗಾಳಿ ಬೀಸಿ ಮುಖಕ್ಕೆ ಮಣ್ಣೆರಚಿ ಆಸೆ ಆರಿಸಿ, ಹೆದರಿಕೆ ಹಿಂಗಿಸಿ, ಮೋಡಗಳೆಲ್ಲವೂ ಕಾಲು ಕೆಟ್ಟು, ಎಲ್ಲಿಗೋ ಓಡಿ ಮಾಯವಾಗುತ್ತವೆ. ಆಕಾಶದಲ್ಲಿ ಪುನಃ ಜುಂಜು ಮುಗಿಲೇ. ಅದರಲ್ಲೂ ಕೊಡೆ, ಮಳೆಯಂಗಿ ಕೈಯಲ್ಲಿ ತೆಗೆದುಕೊಂಡು ಹೋದ ದಿನ ಖಂಡಿತ ಮಳೆ ಬರುವುದೇ ಇಲ್ಲ. ಲಾಲ್‌ಬಾಗಿಂದಲೊ ಹೊರಗಿನ

ಬೇರೆಲ್ಲಿಂದಲೂ ಮನೆಗೆ ಮರಳಿದ ನಮಗೆ ಭೂಗರ್ಭದಿಂದ ಪಾತಾಳ ಹೋಗುವ ಹಾಗಾಗುತ್ತದೆ. ಮಾಡುವುದೇನು? ಹೇಳಿಕೊಳ್ಳುವುದಾದರೂ ಯಾರಿಗೆ? ಯಾರಿಗೆ ಹೇಳಿದರೆ ಏನು ಮಾಡಿಯಾರು? ಯಾವ ಲಾವಂಚದ ಬೀಸಣಿಗೆ, ಯಾವ ಷರಬತ್ತು, ನೀರು ಮಜ್ಜಿಗೆ, ಯಾವ ಐಸ್ ಕ್ರೀಮು, ಫ್ರೂಟ್‌ಸಲಾಡ್ ತಂಪಿಡಿದೀತು?

ಕಡೆಗೆ ತಿಂಗಳ ಕೊನೆಯ ಒಂದು ದಿನ ಎಲ್ಲರ ಬಯಕೆ ಹಣ್ಣಾಗಿ ಮಳೆ ಬಂದೇ ಬಂದಿತು. ಹುಚ್ಚು ರೊಚ್ಚಿನಿಂದ ನಾಲ್ಕಾರು ದೊಡ್ಡ ಮಳೆ ಸುರಿದು ಉರುಬನ್ನು ಕಾರಿದವು. ಆಮೇಲೆ ತುಂತುರು ಮಳೆ. ಒಂದೆರಡು ಜಡಿಮಳೆ. ಒಂದೊಂದು ಸಲ ಜೋರೋ ಎಂದು ಸುಮ್ಮನೆ ಕುರುಡು ಸುರಿದು ಅರ್ಧ ಘಂಟೆಯ ಒಳಗಾಗಿ ಮೂರು, ನಾಲ್ಕು ಹದ ಹೊಡೆದುಹೋಗುವುದು. ಆಮೇಲೆ ಆಕಾಶವೆಲ್ಲ ಶುಭ್ರ. ಇನ್ನೊಂದು ಸಲ ತುಂತುರು ಹನಿ ಬಿದ್ದು ದೊಡ್ಡಪೇಟೆ, ಚಿಕ್ಕಪೇಟೆ, ನಮ್ಮ ಬೀದಿ, ಲಾಲ್‌ಬಾಗ್ ರಸ್ತೆ, ಅದಕ್ಕೆ ಮನಸ್ಸು ಬಂದೆಡೆ ಹತ್ತು ನಿಮಿಷ ನೀರು ಚೆಲ್ಲಿ, ನಾವು ಬಹುವಾಗಿ ತಿರುಗಾಡುವ ದಾರಿಗಳಲ್ಲಿ ನೆಲವನ್ನು ನೆನಸಿಹೋಗುತ್ತದೆ. ಮ್ಯುನಿಸಿಪಾಲಿಟಿ ನೀರಿನ ಅಭಾವದಿಂದ ರಸ್ತೆಗಳಿಗೆ ನೀರು ಹಾಕಿಸುವ ಹಾಗಿಲ್ಲ. ತುಂತುರುಹನಿ ಬಿದ್ದು ಹತ್ತು ನಿಮಿಷದಲ್ಲಿ ನೆಲವನ್ನು ಹದಮಾಡಿ ಬೆಳಗ್ಗೆ ಅಥವಾ ಸಾಯಂಕಾಲ ವಾಯುಸೇವನೆಗೆಂದು ಹೋಗುವ ನಮಗೆ ಆಪ್ಯಾಯಕರವಾಗುವಂತೆ ಅಚ್ಚುಕಟ್ಟು ಮಾಡಿಡುತ್ತಾರೆ.

ಇನ್ನೊಂದೊಂದು ದಿನ ಬೆಳಗ್ಗೆ ಏಳುವ ಹೊತ್ತಿಗೆ ಒಂಟಿ ಕಣ್ಣಲ್ಲಿ ಅಳುವಂತೆ ಮಳೆ ಉದುರುವುದಕ್ಕೆ ಆರಂಭಮಾಡಿದರೆ ಸಂಜೆಯವರೆಗೂ ನಿಲ್ಲದು. ಈ ಮಳೆಗೂ ನಮಗೂ ಆದಿಯಿಂದಲೂ ಜಿದ್ದು; ದಾಯಾದ ಮತ್ಸರ; ಜಾತಿ ವೈರ; ಹೇಗೆಂದರೂ ಸರಿಯೇ, – ಆಗದು. ದೊಡ್ಡದಾಗಿ ಸುರಿದು ಕೆರೆ ಕಾಲುವೆಗಳಿಗೆ ನೀರು ತುಂಬುವ ಮಳೆ ಅಲ್ಲ ಅದು. ಜನದ ತಿರುಗಾಟಕ್ಕೂ ದಿನಚರಿಯ ವ್ಯಾಪಾರಗಳಿಗೂ ಅನುಕೂಲವಲ್ಲ. 'ಜಡಿ'ಯ ಉಪಕಾರ ಒತ್ತಟ್ಟಿಗಿರಲಿ. ಹೊರಗೆ ತಲೆಯಿಕ್ಕುವ ಹಾಗಿಲ್ಲ. ಶನಿ. ಬೀದಿ ಬೀದಿಯಲ್ಲೂ ಕೆಸರು. ಮನೆಯಲ್ಲಿ ನಿಲ್ಲುವ ಅಭ್ಯಾಸ, ಅಗತ್ಯ, ಅನುಕೂಲ ಇಲ್ಲದ ನಮ್ಮಂಥವರಿಗೆ ಗತಿ? ಶಪಿಸುತ್ತ, ನರಳುತ್ತ ಹೊರಗೆ ಹೋದೆವು! ಹಗುರವಾಗಿರುತ್ತಿದ್ದ ಕಾಲ ಚಪ್ಪಲಿ ಗುರುವಾಗುತ್ತದೆ. ಮನೆಗೆ ಹಿಂದಿರುಗಿದೆವು; ಎಲ್ಲರ ಮೇಲೂ ರೇಗಿ ಹಾರಾಡುವುದು. ಮನೆಯಲ್ಲಿ ಗಂಡಸರಾಗಿರುವುದು ಬಿಟ್ಟೆಯೆ?..... ಓದುವುದಕ್ಕೆ ಕುಳಿತೆವು: ಕತ್ತಲು. ದೀಪ ಹಚ್ಚಿದರೆ ದೀಪಗಳಾರುತ್ತವೆ. ಶಪಿಸುವುದು ನರಳುವುದು, ನರಳುವುದು ಶಪಿಸುವುದು – ಇಷ್ಟೇ ಇಂಥ ದಿನಗಳಲ್ಲಿ ಕಾರ್ಯಕ್ರಮ. ಹೊತ್ತು ಹೋಗುವುದು ಹೇಗೆ? ಮುಖ ಪರಚಿಕೊಂಡು ಬಿಡೋಣವೆನ್ನಿಸುತ್ತದೆ. ಎಷ್ಟು ಹೊತ್ತು ಓದುವುದು? ಬರೆಯುವುದು? ಮಲಗಿಕೊಳ್ಳುವುದು? ಉಗುರು ಹೆರೆಯುವುದು? ಮಾಳಿಗೆಯ ದೂಲಜಂತಿಗಳನ್ನೂ ನೆಲದ ಹೆಂಚುಗಳನ್ನೂ ಎಣಿಸುವುದು? ಕೈಗೆ ಸಿಕ್ಕಿದ ಕಾಗದಗಳನ್ನು ಕತ್ತರಿಸುವುದು? ಹರಟೆ ಅನುಕೂಲವಾದರಂತೂ ಸರಿ, ಇಲ್ಲವಾದರೆ ವರ್ಷಕ್ಕೊಮ್ಮೆ ಹರಟೆಗೆ 'ಭ್ರಮಿಸಿ'

ಸರಸವಾಗಿ ನನ್ನಂಥವರು ಏನಾದರೂ ಮಾತೆತ್ತಿದರೆ – ಎರಡು ನಿಮಿಷ ಎಲ್ಲವೂ ಸಂತೋಷವಾಗಿರುತ್ತದೆ. ಹರ್ಷದ ನೆರೆ ಹರಿಯುತ್ತದೆ. ಮೂರನೆಯ ನಿಮಿಷವೇ ವಾದಹುಟ್ಟಿ, ಜನ್ಮಾಂತರದ ಯಾವುದೊ ಭೇತಾಳ ಎದ್ದು ತಣಿ ಕೇಳುತ್ತದೆ, ಖಂಡಿತವಾಗಿ. ಸ್ವಭಾವಗಳೇ ಹಾಗೆ. ಫ್ರೆಂಚರ ಮೇಧಾವಿ ನೊವಾಲಿಸ್ ಹೇಳಿದನಂತೆ ಸ್ವಭಾವವೇ ವಿಧಿ ಎಂದು. ನಮ್ಮ ಭಾಗ್ಯವನ್ನು ನಡಸುತ್ತಿರುವ ವಿಧಿ ಇದು; ಒಂದಕ್ಕೊಂದು ಹೊಂದದಿರುವುದು – ಬೆರೆಯುದಿರುವುದು; ಸರಸವೆಂದು ನುಡಿದುದು ಕೆಣಕಿದಂತಾಗುವುದು; ಯಾರ ಯಾವ ಮರ್ಮವೊ ಚುಚ್ಚಿ ಮುಳ್ಳು ಒಳಗೇ ಮುರಿದುಕೊಳ್ಳುವುದು ; ಅವರು ಪ್ರತಿಯಾಗಿ ಚುಚ್ಚಿ ವಿಷವೆರೆಯುವುದು.... ಕೆಲವೇಳೆ ಎಲ್ಲರೂ ಹೆಚ್ಚಾಗಿ ಮಾತನಾಡಬೇಕೆಂದು ಸ್ಪರ್ಧಿಸುವೆವೊ ನಾವು ಹೇಳುವುದೇ ಸರಿ ಎಂದು ಹಟ ಮಾಡುವೆವೊ ನಮ್ಮದೇ ಜಾಣತನವೆಂದು ಅದನ್ನು ಹೊಮ್ಮಿಸುವೆವೊ ಹೇಗೊ ಜಗಳಕ್ಕಾರಂಭವಾಗುತ್ತದೆ. ಜಗಳದ ವಾಸನೆ ಮಳೆಯ ವಾಸನೆಗಿಂತಲೂ ಸ್ಪಷ್ಟ.

ಮುಂದೆ ಒಂದೇ ದಾರಿ. ಅಲ್ಲಿಂದ ಪರಾರಿಯಾಗುವುದು. ಆಮೇಲೆ ಒಂದೇ ಒಂದು ನಿಮಿಷ ಒಳಗಿರುವುದಕ್ಕಿಲ್ಲ. ಅಂಗಿ ಹಾಕಿಕೊಂಡಾಯಿತು. ಕಾಲಿಗೆ ಚಪ್ಪಲಿ ತಗುಲಿತು. ಆಮೇಲೆ? ಕಂಡೇ ಇದೆ.... ಹೊರಗೆ ಜಡಿಮಳೆ. ಕಾಲಿಟ್ಟಲ್ಲಿ ಜಾರಿಕೆ; ಕೊಳಚೆ. ಎಲ್ಲಿಲ್ಲಿಯೂ ಗಿಜಿಗಿಜಿಯೆನ್ನುತ್ತಿರುತ್ತದೆ. ನೂರು ಜನದ ಕಾಲು ಹೆಜ್ಜೆಯಿಟ್ಟ ಕಡೆ ನೂರು ಹಳ್ಳ. ಜನ ಜಾರಿದ್ದಲ್ಲಿ ಹೆಜ್ಜೆ ಗುದ್ದಲಿಯಾಗಿರುತ್ತದೆ. ಹತ್ತು ಕಡೆಯಿಂದ ಕಾಲಿನೊಳಕ್ಕೆ ನೀರು ಜಿನುಗುತ್ತದೆ. ಹಾಗೇ ಮೊಂಡುತನ ಮಾಡಿ ಹೊರಗೆ ಸ್ವಲ್ಪ ದೂರ ಸಾಗಿದೆವೊ ದಾರಿಯುದ್ದಕ್ಕೂ ಗಾಡಿ, ಬೈಸಿಕಲ್ಲು, ಮೋಟರು. ಸಣ್ಣ ಮೋಟರುಗಳವರು ಸಭ್ಯರು ; ಆತ್ಮಪ್ರತ್ಯಯವಿದೆಯಾಗಿ ದುರಹಂಕಾರ ಬೀಳರು. ದೊಡ್ಡವು ಪಕ್ಕದಲ್ಲಿ ಬಂದರಾಯಿತು : ಮೈಯೆಲ್ಲ ಕೆಸರು ಸಿಡಿಸುವುದೇ. ಹೆಂಡತಿಯನ್ನೊ ತಂಗಿಯನ್ನೊ ಹಾಸ್ಯಮಾಡಿ, ಪಂತ ಕಟ್ಟಿ, ಪುಸಲಾಯಿಸಿ ಅಥವಾ ಬೈದು ಬೆಳ್ಳಗೆ ಒಗೆಯಿಸಿ ಮುರುಮುರು ಒಣಗಿಸಿ ಉಟ್ಟುಕೊಂಡಿರುವ ಪಂಚೆಗೆ ಬಂತು ಊನ. ದೊಡ್ಡ ಮೋಟರಲ್ಲಿ ಕುಳಿತು ಹಾರಾಡಿದರೆ ಬಂತೆ ದೊಡ್ಡತನ! ಏನು ಕೊಳ್ಳೆಹೋಗುವುದೊ! ದಾರಿಯಲ್ಲಿ ಏನಾದರೂ ಆಗಲಿ; ಯಾರು ಸತ್ತರು ಸಾಯಲಿ. ಯಾರ ಧೋತ್ರಕ್ಕೆ ಕೆಸರೆರಚಿದರೂ ಚಿಂತೆಯಿಲ್ಲ. ಅವುಗಳ ಆರ್ಭಟವೇ ಆರ್ಭಟ. ಮದವೇ ಮದ. ಅವು ಉರುಳುವ ಕಡೆಯಿಂದ ಹತ್ತು ಮಾರು ದೂರ ಹೋದರೆ ಮಾತ್ರ ಬದುಕಿಕೊಂಡಿರಿ. ಇಲ್ಲವಾದರೆ ಚಕ್ರದಿಂದ ಸಿಡಿದು ಬರುತ್ತದೆ ಪಂಕ, – ಬಟ್ಟೆಗೆ, ಮೈಗೆ, ಮುಖಕ್ಕೆ, ಬಾಯೊಳಕ್ಕೆ. ಇವರದು ಬೇಸಿಗೆಯಲ್ಲಿ ಒಂದು ಕಾಟ, ಮಳೆಗಾಲದಲ್ಲಿ ಒಂದು ಕಾಟ. ರಸ್ತೆಯೆಲ್ಲ ಅವರಿಗೆಯೆ? ರಸ್ತೆಯನ್ನು ಎಷ್ಟು ಅಗಲ ಮಾಡಿದರೆ ಬೇಕೆಂದು ಅದಕ್ಕಿಂತ ಹೆಚ್ಚು ಅಗಲವಾಗಿ ಬೆಳೆಯುವುದು ಪಟಿಂಗತನ ಎಂದು ಅವರಿಗೆ ಯಾರು ಹೇಳುವವರು? ನಾವು ಕಂದಾಯ ತೆರುವ ಪ್ರಜೆಗಳಲ್ಲವೆ?

ಸಹಜವಾಗಿ ದೇವರು ಕೊಟ್ಟ ಕಾಲಮೇಲೆ ನಡೆಯುವ ಬಹುಮಂದಿ ಮಹಾಜನಕ್ಕೆ ರಸ್ತೆಗಳಲ್ಲಿ ಸುಸೂತ್ರವಾಗಿ, ಸುರಕ್ಷಿತವಾಗಿ, ತಿರುಗಾಡುವ ಹಕ್ಕು ಬೇಡವೆ? ಯಾರಿಗೆ ಹೇಳಿಕೊಳ್ಳೋಣ? ಎಲ್ಲ ಕಾನೂನುಗಳನ್ನು ಮಾಡುವವರೂ ಕಾರಿನವರು; ದೊಡ್ಡ ಮೋಟರಿನವರು. ನಮಗೆ, ನಿಮಗೆ, ಮೋಟರಿಲ್ಲದವರಿಗೆ, ಗಾಡಿಗಳವರಿಗೆ, ಮುಖ್ಯವಾಗಿ ರಸ್ತೆಯಲ್ಲಿ ತಮ್ಮ ಕಾಲ ಮೇಲೆ ತಾವು ನಡೆಯುವವರಿಗೆ ಹಕ್ಕುಗಳನ್ನು ನಿಯಮಿಸುವವರು ಅವರು. ಅವರು ಕೊಟ್ಟರೆ ಉಂಟು, ಇಲ್ಲವಾದರೆ ಇಲ್ಲ. ಕಾಲಿನವರಿಗೂ ಕಾರಿನವರಿಗೂ ಎಲ್ಲಿಯ ಸಮಾನತೆ, ಸಮರಸ? ಇದು ಡೆಮಾಕ್ರಸಿಯಂತೆ ಚಟ.

ಮಸಲ, ಅವರ ಗೊಡವೆ ಬೇಡ, ದೂರವಾಗೋಣೆಂದು ದೂರ ಎಗರಿದೆವು; ಹಿಂದೆ ಜಟಕಾ ಗಡಗಡ, ಗುಡುಗುಡ ಎಂದು ಬೆನ್ನಟ್ಟುತ್ತದೆ. "ಹೈ ಸ್ವಾಮಿ, ದೂರ ಹೋಗಯ್ಯ" ಎಂದು ಚಾಟಿ ತಿರುವುತ್ತ ಗಾಡಿಯವನು ಬೇಕೆಂದು ಅದನ್ನು ನಿಮ್ಮ ಮೈಮೇಲೆಯೇ ಬಿಡುತ್ತಾನೆ. ಅವನಿಗೆ ತನ್ನ ಗಾಡಿಯಲ್ಲಿ ಕುಳಿತಿಲ್ಲದಿರುವ ನಿಮ್ಮ ದಾಕ್ಷಿಣ್ಯವೇನು? ಹಾಗೂ ಹೀಗೂ ಅಡ್ಡವಾದಿರಿ, ಚಂಗ್ ಟಿಂಗ್ ಎಂದು ಒಂದು ಬೈಸಿಕಲ್ಲು ಸೊಟ್ಟೆಸೊಟ್ಟೆಯಾಗಿ ಬಂದು ನಿಮ್ಮನ್ನು ಹಾಗೂ ಹೀಗೂ ಎಲ್ಲ ಕಡೆಗೂ ಅಡಿಸಿ ಚಕ್ರಗಳನ್ನು ನಿಮ್ಮ ಕಾಲ ಹಿಂದೆಯೇ ನಡುವೆಯೇ ದೂರಿಸುತ್ತದೆ. ಬೈಸಿಕಲ್ಲಿಗೆ ಹೀಗೆ ಬ್ರೇಕು ಬೀಳಲು ಸವಾರಿ ಮಾಡುತ್ತಿರುವ ಮನುಷ್ಯನು ನಿಮ್ಮನ್ನೂ ನಿಲ್ಲಿಸಿ ತಾನೂ ಕೆಳಗಿಳಿದು ನಿಮ್ಮನ್ನು ಕುರಿತು ಬಾಯಿಗೆ ಬಂದ ಹಾಗೆ ಮಾತನಾಡುತ್ತಾನೆ. ಇನ್ನೊಬ್ಬ ವೀರ ಆ ಮಳೆಯಲ್ಲಿ ಉತ್ಸವಗೊಂಡು ಎರಡು ಕೈಯನ್ನೂ ತೆರೆದು ಸರ್ಕಸ್ ಮಾಡುತ್ತ ದೂರ ಹೋಗಿರೆಂದು ಅರಚುತ್ತ ನಿಮ್ಮ ಮೇಲೆ ಬರುತ್ತಾನೆ. ದಾರಿಯಲ್ಲಿ ಎಲ್ಲ ಕೊಳಕೂ ಕೊಳೆಯುತ್ತ ಬಿದ್ದಿರುತ್ತದೆ. ಕುದುರೆ, ಎಮ್ಮೆ, ಮನುಷ್ಯರು ಎಲ್ಲರೂ ಏಕೋದರವೃತ್ತಿಯಿಂದ ನಿಮಗಾಗಿ ದಾರಿಯಲ್ಲಿ ಬಿಟ್ಟ ಪದಾರ್ಥವೆಲ್ಲ ಕೊಳೆಯುತ್ತ ನೀರಲ್ಲಿ ಕರಗಿ ಎಲ್ಲೆಲ್ಲಿಯೂ ಹರಡುತ್ತಿರುತ್ತದೆ, ಅಸಹ್ಯ! ಅದು ಮಾವಿನ ಹಣ್ಣಿನ ಕಾಲ ಬೇರೆ. ತಿಂದ ಹಣ್ಣಿನ ಸಿಪ್ಪೆಯನ್ನೂ ಹುಳಿ ಹಣ್ಣಿನ ಜುಂಗು ಓಟೆಗಳನ್ನೂ ಉದ್ದಕ್ಕೂ ಮಹಾತ್ಮರು ಬೀಸಾಡಿ ಹೋಗಿರುತ್ತಾರೆ. ಗ್ರಹಚಾರ ಕಡಮೆಯಾಗಿ ಕಾಣದೆ ಅದರ ಮೇಲೆ ಕಾಲಿಟ್ಟರೂ ಆಯಿತು, ಆ ಕ್ಷಣವೇ ಶಾಸ್ತಿ. ಕೆಸರು ನೋಡೋಣವೆ? ಪ್ರಾಣಾಪಾಯ ತಪ್ಪಿಸಿಕೊಳ್ಳೋಣವೆ? ಕೊಳೆ ತುಳಿಯೋಣವೆ? ಜಾರಿ ಬೀಳೋಣವೆ? ಬಿದ್ದು ಹಿಂಸೆಪಡುತ್ತಿರುವಾಗ ಸುತ್ತಲಿನ ನರರು ಹಲ್ಲು ಕಿರಿಯುವುದನ್ನು ನೋಡೋಣವೆ? ಯಾವುದನ್ನು ನೋಡುವುದು, ಯಾವುದನ್ನು ಬಿಡುವುದು?

ಒಂದೊಂದು ಸಂದರ್ಭದಲ್ಲಿ ಮಾತ್ರ ಜಡಿಮಳೆಯ ಅನುಕೂಲ ಬಹಳ. ಮನೆಯಲ್ಲಿ ಅಡಿಗೆ ಮನೆಗೆ ಹೋಗಿ ಒಲೆಯ ಮುಂದೆ ಕುಳಿತು, – ಒಲೆಗೆ ಬರುವ ಸೌದೆ ಒದ್ದೆಯಾಗಿಲ್ಲದಿದ್ದರೆ ಎಂಬುದು ಅಧ್ಯಾಹಾರ – ಹೆಂಗಸರನ್ನು ಗೋಲಸ್

ಮಾಡಿ ತಪ್ಪಲೆದೋಸೆ, ಬೋಂಡ, ಮುಚ್ಚೋರೆ, ಕೋಡುಬಳೆ, ಅಂಬೊಡೆ ಮುಂತಾಗಿ ತಿಂಡಿಗಳನ್ನು ಮಾಡಿಸುತ್ತ ಅವರು ಬಿಸಿಬಿಸಿಮಾಡಿ ಕೊಡುವುದು, ನಾವು ತಿನ್ನುವುದು ಮಾಡುತ್ತಿದ್ದರೆ ಈ ಮಳೆಯ ಸುಖವನ್ನು ತೃಪ್ತಿಯಿಂದಲ್ಲದಿದ್ದರೂ ಗೊಣಗದೆ ಅನುಭವಿಸಿ, ಬೇಕೆಂದರೆ ಅದರ ಔದಾರ್ಯವನ್ನೂ ಕೊಂಡಾಡಬಹುದು. ಆದರೆ ಮನೆಯಲ್ಲಿ ದಿನಾ ಹೀಗೆ ಬಿಸಿಬಿಸಿಯಾಗಿ ತಿಂಡಿ ಮಾಡಿಕೊಡುವವರು ಯಾರು? ಎಲ್ಲ ಮನೆಗಳಲ್ಲಿಯೂ ಸಾಧ್ಯವೊ? ಮನೆಯವರಿಗೆ ಮನಸ್ಸು ಬಾರದಿದ್ದರೆ? ಅದೇ ನೆಪವನ್ನು ಹಾಕಿಕೊಂಡು ಬೆಂಡೋಲೆ ಪ್ರಸ್ತಾಪವೇಳುವ ಹಾಗಿದ್ದಿದ್ದರೆ? ನಿಮ್ಮ ತಮ್ಮನನ್ನು ಹೊರಕ್ಕೆ ಹಾಕುವ ಮೃದು ಸಂಚೂ ವಕ್ರೋಕ್ತಿ ಸಂಚಾರವೂ ನಡೆದರೆ? ಕಡೆಗೆ ಎಣ್ಣೆಯೊ ತುಪ್ಪವೊ ಮುಗಿದುಹೋಗಿದ್ದರೆ? ಕೈಯಲ್ಲಿ ಕಾಸಿಲ್ಲದಿದ್ದರೆ? ಮನೆಯಲ್ಲಿ ಜನ ಹೆಚ್ಚಿದ್ದರೆ? ಯಾವ ಅಂಗಡಿಯಲ್ಲಿಯೂ ಸಾಲ ಹುಟ್ಟುವ ಹಾಗಿಲ್ಲದಿದ್ದರೆ? ಇರಿಚಲು ಹೊಡೆದು ಮನೆಯೆಲ್ಲ ತೇವವಾಗಿದ್ದರೆ? ಮಾಡುವುದೇನು? ವಿಷಯ ಎಷ್ಟು ಮಟ್ಟಗಳಲ್ಲಿ ಎಷ್ಟು ಬಗೆಯಲ್ಲಿ ಮಿನುಗುತ್ತದೆ? ಒಟ್ಟಿನಲ್ಲಿ, ಜಡಿ ಮಳೆಯ ಸಹವಾಸ ಬೇಡ.

ಮಳೆ ಬಾರದೆ ಬಾರದೆ ಬಂದು, ನಾವು ಮಲಗಿಕೊಂಡಿದ್ದಾಗ ಹುಯ್ದು, ಬೆಳಗ್ಗೆ ಏಳುವ ಹೊತ್ತಿಗೆ ನಿಂತುಹೋಗಿದ್ದರೆ ಅದರ ಸಮಾನವೇ ಇಲ್ಲ. ಎಂದರೆ, ನಮಗೆ ಅನುಕೂಲವಾದಾಗ–ಅನನುಕೂಲಮಾಡದೆ–ಬೇಕಾದಷ್ಟು ಸುರಿಯಲಿ. ನಮಗೇನೂ ಅದರ ಮೇಲೆ ವಿರೋಧವಿಲ್ಲ. ಹಿಂದಿನ ರಾತ್ರಿ ಮಳೆ ಬಂದು ನಿಂತಿರುವಾಗ ಬೆಳಗ್ಗೆ ಆಕಾಶವು ನಿರ್ಮಲವಾಗಿರುತ್ತದೆ. ಆಕಾಶದ ನೀಲಿಗೆ, ಮೋಡದ ಕಂದಿಗೆ, ಸೂರ್ಯನ ಬೆಳಕಿಗೆ ಶುಭ್ರತೆ ಬಂದಿರುತ್ತದೆ. ಪ್ರಕೃತಿಗೆ ಮಂಗಳಸ್ನಾನವಾಗಿ ಎಲ್ಲವೂ ಮಿರುಗುಟ್ಟುತ್ತಿರುತ್ತದೆ. ಊರಿನ ದೂಳು, ದಾರಿಗರ ಉಗುಳು ಬಿದ್ದು ಕೃಶವಾಗಿದ್ದ ರಸ್ತೆಯ ಪಕ್ಕದ ಹೂಗಿಡಗಳಿಗೆ ಕೂಡ ಈ ಜಲೋಪಚಾರ ನಗು ತಂದಿರುತ್ತದೆ. ದೂರದಲ್ಲಿನ ಸಾವನದುರ್ಗದ ಇಂದ್ರನೀಲಖಂಡವು ಆ ತೆಂಗಿನ ತೋಟದ ಆಚೆ, ಆ ಮನೆಯಾಚೆ, ಆ ಹಸಲೆಯಾಚೆ, ಓಡುತ್ತಿರುವ ಮುಗಿಲೋಳಿಯ ತಳದಲ್ಲಿ ಬಾನಿಗೆ ನಟ್ಟು ನಿಂತಿರುತ್ತದೆ. ತಂಪಾಗಿ ಗಾಳಿ ಸುಳಿಯುತ್ತಿರಲು ಮರ ಗಿಡಗಳ ಮೇಲೆ ಕುಳಿತಿದ್ದ ದೂಳು, ಕಶ್ಮಲವೆಲ್ಲ ನೆಲಕ್ಕಿಳಿದು ಕಾಣದೆ ಹೋಗಿರಲು ಕಣ್ಣು ಬಿದ್ದಲ್ಲೆಲ್ಲ ಕೆಂಪು, ಹಸುರು, ಹಳದಿ ಬಣ್ಣ ಆಳುತ್ತಿರುತ್ತದೆ. ಜಿಲಜಿಲನೆ ನೀರ್ಗಾಲುವೆಗಳು; ಭೂಮಿಯ ಎಲ್ಲ ತಗ್ಗಿನಲ್ಲಿಯೂ ತಂಪು, ಮೃದು, ನೀರು. ಬೆಂಗಳೂರು ಅಂತಹ ದಿವಸಗಳಲ್ಲಿ ಸ್ವರ್ಗ.

ಒಂದೊಂದು ಸಲ ಮಳೆಯಲ್ಲಿಯೇ ನಮಗೆ ತಿರುಗಾಡಬೇಕೆನ್ನಿಸುವುದುಂಟು. ಬಿಸಿಲಿನ ಬೇಗೆ ಬಹಳವಾಗಿದ್ದಿರಬೇಕು. ದೊಡ್ಡ ಮಳೆ ಸುರಿಯದಿದ್ದರೆ ಕೈಯಲ್ಲಿ ಕೊಡೆಯಿದ್ದರೂ ಅದನ್ನು ಹರಡಲು ಮನಸ್ಸು ಬರುವುದಿಲ್ಲ. ಹನಿ ಬೀಳುತ್ತ ಬೀಳುತ್ತ ಎಷ್ಟು ದೂರವಾದರೂ ಮಳೆಯಲ್ಲಿಯೇ ನಡೆಯಬೇಕೆನ್ನಿಸುತ್ತದೆ. ಅದೇ ಒಂದು ಮತ್ತು.

ಇನ್ನು ಸ್ವಲ್ಪ ಜೋರಾಯಿತು. ಚತ್ರಿ ಹಿಡಿಯದಿರುವುದು ಎಲ್ಲಿಗೂ ಅಸಾಧ್ಯವಾಯಿತು, ಮೊದಲು ಪಂಚೆ ನೆನೆಯುತ್ತದೆ; ಗಾಳಿ ಹೊಡೆವ ಕಡೆಯಿಂದ ಬಟ್ಟೆಯ ಒಂದು ಭಾಗ ತೋಯುತ್ತದೆ; ಕೊಡೆಯ ಕಿವಿಗಳಿಂದ ನೀರು ಇಳಿದು ಇಳಿದು ಭುಜಕ್ಕೆ ಬರುವುದು; ಅಥವಾ ಕೊಡೆಯ ಕಂಡಿಗಳನ್ನು ತೂರಿ ಮೆಲ್ಲಮೆಲ್ಲಗೆ, ಜಾಗ್ರತೆಜಾಗ್ರತೆಯಾಗಿ, ಹೆಚ್ಚು ಹೆಚ್ಚಾಗಿ, ಅಂಗಿಯ ಒಳಗೆ, ಷರಟಿನ ತೋಳಿನೊಳಕ್ಕೆ, ಬೆನ್ನೆಲುಬಿನ ಕೊಳವಿಗೆ ನೀರು ನುಗ್ಗುತ್ತದೆ. ನೀರು ಚರ್ಮಕ್ಕೆ ಇಳಿಯುವಾಗ ಒಂದು ಬಗೆಯ ನರಕಂಪನವಾಗುವುದು ನೋಡಿ, ಸುಖವೆಂಬ ಸುಖವಲ್ಲ, ಕಷ್ಟವೆಂಬ ಕಷ್ಟ ಅಲ್ಲ. ವರ್ಣಿಸಲಳವಲ್ಲ. ಮತ್ತೂ ಜೋರಾಯಿತು ಮಳೆ : ನೆನ್ದು ನೆನ್ದು ಮಳೆಯ ಭೀತಿ ಹೋಗಿರುತ್ತದೆ. ಮೈಯ ಶಾಖದಿಂದ ಮಳೆಯ ಹೊಡೆತ ಕಾಣಿಸಲು ಮನಸ್ಸಿಗೆ ಒಂದು ಜೋಮು ಹಿಡಿದ ಹಾಗೆ ಆಗಿರುವುದು. ಮಳೆ ಸ್ವಲ್ಪ ನಿಂತು ಪುನಃ ಆರಂಭವಾದರೆ, ಆಗಲೋ ಈಗಲೊ ದೊಡ್ಡದಾದ ಚಳಿ ಗಾಳಿ ಬೀಸಿ ಕೊರೆದರೆ ಮಾತ್ರ ನಡುಕ ಬಂದೀತು ; ಹಲ್ಲು ದವಡೆ ಹೊಡೆದುಕೊಂಡಾವು. ಅಷ್ಟೇ ಹೊರತು ತೀರ ನೆನ್ದವರಿಗೆ ಮಳೆಯೇನು? ಗಾಳಿಯೇನು?

ಮಳೆ ಸಾಧಾರಣವಾಗಿದ್ದು ನಡುನಡುವೆ ಎಳಬಿಸಲೊ ಇಳಿಬಿಸಲೊ ಬಂದರೆ ಸುತ್ತಲೂ ಎಲ್ಲವೂ ನಗುವಂತಿರುವುದು. ಇದ್ದ ಕಡೆಯೇ ನಿಂತು ಎಲ್ಲವನ್ನೂ ನೋಡಿ ಆನಂದಿಸುವೆವು. ಗೆಳೆಯರಿಗೂ ಮಕ್ಕಳಿಗೂ ತೋರಿಸುವೆವು. ವ್ಯಾಖ್ಯಾನ ಮಾಡುವೆವು. ಮಳೆ ನಿಂತಿರಲು ರಸ್ತೆಯ ಕಾವು ಆವಿಯಾಗಿ ತೆಳ್ಳಗೆ ತಾವರೆದಂಟಿನ ದಾರದಂತೆ ಎಳೆ ಎಳೆಯಾಗಿ ಮೇಲೇಳುತ್ತಿರುವುದು. ಉದುರುವ ಹೂ ಉದುರುವುದು; ಗಟ್ಟಿ ಹೂ ತೊಳೆದು ಹೊಸತಾಗುವುದು. ದಾರಿಯ ಬಳಿ ಕತ್ತಾಳೆಯ ಹೂಗಂಬ ಸುಂದರವಾಗಿ ನಂದಿಯ ಕೋಲಿನಂತೆ, ಸಿಂಗರಿಸಿದ ರಂಗಸ್ವಾಮಿಯ ತೇರಿನಂತೆ ತಲೆಯೆತ್ತಿ ನಿಂತಿರುವುದು. ಹೆಚ್ಚಾಗಿ ಎಲೆ ತೊಟ್ಟರೆ ರಸವೆಲ್ಲಿ ವ್ಯರ್ಥವಾಗುವುದೊ ಎಂಬ ನಿಷ್ಠೆಯಿಂದ ಜೀವನವನ್ನೆಲ್ಲ ಹೂಗಳಿಗೆರೆದು ಬೆಳೆದಿರುವ ದೇವಗಣಗಿಲೆ ತನ್ನ ಕೆಂಪು ಬಿಳುಪಿನ ಹೂಗಳಾರತಿಯನ್ನು ಆಕಾಶಕ್ಕೆ ಎತ್ತಿ ಹಿಡಿದಿರುವ ಸೊಬಗು ಭವ್ಯವಾದುದು. ಕಕ್ಕೆಯ ಗಿಡದ ಮೈತುಂಬ ಅಪರಂಜಿಯ ಹೊಳಪು ಹೊಳೆದು ಶೃಂಗಾರಗೊಂಡಿರುವುದು. ನಡುನಡುವೆ ಚಿಟ್ಟೆ, ಜೀರಜಂಬೆ, ಗುಬ್ಬಿ, ಗಿಳಿ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ, ರೆಕ್ಕೆ ಬಡಿದು ಹಿಡಿವಾಟವಾಡುತ್ತಿರುವುವು. ಅಥವಾ ಹನಿಗಳು ಬೀಳುತ್ತಿರುವಾಗ ಒಂದೊಂದು ಹನಿಯೂ ಧಾರೆಯಲ್ಲಿ, ಪ್ರತಿಧಾರೆಯೂ ಸಂತತಿಯಲ್ಲಿ ಭೂಮಿಗೆ ಬೀಳುತ್ತಿರುವ ನೋಟ ಬಹು ಚೆನ್ನ. ಗಾಳಿಯಲ್ಲಿ ಒಲಿ, ಬಾಗಿ, ಉಬ್ಬಿ ಸೂರ್ಯಕಿರಣದಲ್ಲಿ ಬಣ್ಣದ ಬಿಲ್ಲಗಳನ್ನು ಒಡಸಿ, ಹನಿ ಇಳಿಯುತ್ತಿರುವ 'ಇಂದ್ರಧನುರ್ಯಾನವು' ಸೊಗಸು! ಪ್ರತಿ ಹನಿಯೂ ಸೂರತಿ ಮುತ್ತಿನಂತೆ, ಸಾಣೆ ಹಿಡಿದ ರತ್ನದಂತೆ ಹೊಳಪುಗೊಳ್ಳುತ್ತಿರುವುದನ್ನು ನೋಡಲು ಎರಡು ಕಣ್ಣು ಸಾಲವು. ಗಿಡದ ಕೊಂಬೆಗಳ ಕೆಳಗೂ ಎಲೆಗಳ ಜೊಂಪದ ಅಡಿಯಲ್ಲಿಯೂ ಹಸುರು ಹುಲ್ಲಿನ ಮೇಲೆ ಹಾಸಿರುವ ಜೇಡನ ಬಲೆಯ ಮೇಲೂ ಲಾಲ್‌ಬಾಗ್ ಕೊಳದಲ್ಲಿರುವ ತಾವರೆ

ನೈದಿಲೆ ಎಲೆಗಳ ಮೇಲೂ ಸಾಲುಗಟ್ಟಿ ಮುತ್ತು ರತ್ನಗಳ ಗೊಂಚಲು ತೂಗುವವು, ಮಿರುಗುವವು. ನೆಲದ ಮೇಲೆ ತಿಳಿಯಾಗಿ ಹನಿ ಬೀಳುತ್ತಿರಲು ಬಿದ್ದ ಮಳೆಯನ್ನು ಅಟ್ಟಿ ಗುಡಿಸಿಕೊಂಡು ಹೋಗುವ ಗಾಳಿಯ ತಿದಿಬೀಸು ಎಲ್ಲಕ್ಕಿಂತಲೂ ಚೆನ್ನ. ಇದನ್ನು ವರ್ಣಿಸುವ ಕೆಲಸ ವಿಶ್ವವನ್ನು ವಿವರಿಸುವ ಕೆಲಸ. ಆದೀತೆ? ಮುಗಿದೀತೆ? ಒಬ್ಬರ ಕೆಳೆಗೈ ಇನ್ನೊಬ್ಬರ ಮಿದುಗೈಯನ್ನು ಪ್ರೀತಿಯಿಂದ ಬಯಸುವ ಸಮಯ ಅದು.

ಮಳೆ, ಗಾಳಿ, ಮೋಡ ಇವುಗಳನ್ನು ಮನೆಯೊಳಗೆ ಕುಳಿತೊ ರೈಲುಗಾಡಿಯ ಒಳಗಿಂದಲೊ ಕಿಟಕಿಯ ಮೂಲಕವಾಗಿಯೊ ನೋಡುವುದು ಇನ್ನೊಂದು ಸಂತೋಷ. ಕಿಟಕಿಯ ಬಾಗಿಲು ಮೂಲಕ ಕಾಣುವ ಪ್ರಕೃತಿಯ ಆ ಅಷ್ಟುಭಾಗಕ್ಕೆ ಕಟ್ಟು, ಕನ್ನಡಿ ಹಾಕಿಸಿ ನೋಡಿದಂತಾಗುತ್ತದೆ. ಮಳೆಯ ಉಪದ್ರವವಿಲ್ಲದೆ, ಮಿಂಚು ಸಿಡಿಲುಗಳ ಭೀತಿ ಇಲ್ಲದೆ ಮೋಡಗಳು ಉರುಳುವುದನ್ನೂ ಹೊರಳುವುದನ್ನೂ ಆರಿ ಅಬ್ಬರಿಸುವುದನ್ನೂ ಸೈನ್ಯದಂತೆ ಸಾಲುಗಟ್ಟಿ ನಡೆಯುವುದನ್ನೂ ಆಕಾಶದಲ್ಲಿ ಮಂಚಿಕೆ ಕಟ್ಟಿ ಉಯ್ಯಲಾಡುವುದನ್ನೂ ಒಳಗಿಂದ ನೋಡಬಹುದು. ಕಾಮಧೇನುವಿನ ಕೆಚ್ಚಲಂತೆ ಕಾರ್ಮೋಡಗಳು ಬಾನರಸವನ್ನು ಭೂಮಿಗೆ ಇಳಿಯಬಿಟ್ಟು ಮಳೆಗರೆಯುತ್ತಿರುವವು; ತಂಪು ಸುರಿಯುವವು, ಜೀವವೆರೆಯುವುವು. ಕಣ್ಣನ್ನು ತಿವಿಯುತ್ತಿದ್ದರೂ ಹೆದರಿಸಿದರೂ ನೋಡು ನೋಡುತ್ತ ಮಿಂಚು ಕಣ್ಣ ಬೆಳಕನ್ನು ಅಟ್ಟಿ ಆಟವಾಡಿಸಿ ಹೆಗ್ಗತ್ತಲಿಡುತ್ತಿರುವುದು. ಘಟಾರನೆ ಸಿಡಿದ ಸಿಡಿಲು ಮನಸ್ಸಿನ ಸ್ವಾಸ್ಥ್ಯ ತಪ್ಪಿಸುವುದು, ಎದೆಹಾರಿಸುವುದು. ಹೊರಗೆ ಇಷ್ಟಾಗುತ್ತಿದ್ದರೂ ಒಳಗಿನ ಸುರಕ್ಷಣೆ ನಮ್ಮನ್ನು ಕಾಪಾಡುವುದು.

ದೊಡ್ಡ ಮಳೆ ಬಂದರೆ ಆರೋಗ್ಯ, ಐಶ್ವರ್ಯ. ಕೆರೆ, ಕುಂಟೆ, ಕಾಲುವೆ, ನದಿ,ಬಾವಿ ಎಲ್ಲಕ್ಕೂ ನೀರು. ಬೆಂಗಳೂರು ನಲ್ಲಿಗಳು ಕೂಡ ತುಂಬುತ್ತವೆ. ವರ್ಷದ ಬೆಳೆಗೆ ಮಾರ್ಗ. ದನಕರುಗಳಿಗೆ ಮೇವು. ಪ್ರಪಂಚಕ್ಕೆ ಸುಭಿಕ್ಷ. ನಮಗೂ ಸುಖವೇ. ಹಾಲು, ಮೊಸರು ಮಾರುವವರೊಡನೆ ಧೈರ್ಯವಾಗಿ ಆ ದಿನವೇ ಚೌಕಸಿ ಮಾಡಬಹುದು. ಮಳೆ ನಿಂತ ಮೇಲೆ ಬೀದಿಯ ರಸ್ತೆಗಳು ಶುಭ್ರವಾಗಿರುತ್ತವೆ. ನಗರಾಧಿಕಾರಿಗಳು ಚರಂಡಿಯ ಮಣ್ಣನ್ನು ತೆಗೆದು ನೆಲಕ್ಕೆ ಹಾಸದಿದ್ದರೆ ಕೆಸರೂ ಜಳ್ಳುನೆಲವೂ ಹೊಡೆದುಕೊಂಡು ಹೋಗಿ ಗಟ್ಟಿ ನೆಲ ತಿರೆಯಾಗಿ ನಿಂತಿರುವುದು. ಕೀಲೆಣ್ಣೆ ಹಾಕಿ ಒಪ್ಪಮಾಡಿದ ರಸ್ತೆಗಳಲ್ಲಿ ರಾತ್ರಿಯ ದೀಪದ ಬೆಳಕು ಕಪ್ಪು ಕನ್ನಡಿಗಳಲ್ಲಿನಂತೆ ದೀಪದ ಸಾಲುಗಂಬಗಳನ್ನು ನಟ್ಟು ಹೊಳಪಿಸುತ್ತಿರುತ್ತದೆ. ಮೋಟರುಗಳ ರಕ್ಕಸದೀಪಗಳು ನುಣುಪಾದ ರಸ್ತೆಯ ಕರಿಯೊಡಲಿನ ಮೇಲೆ ಪ್ರಪಂಚವನ್ನೇ ತುಡುಕಿ ನುಂಗುವಂತೆ ಓಡಿಬರುತ್ತವೆ. ನೆಲದ ಮೇಲೆ ಬಿದ್ದ ಪೆಟ್ರೋಲ್ ತೊಟ್ಟುಗಳೂ ಕಾರಿನ ಎಣ್ಣೆಯೂ ಹರಡಿಕೊಂಡು ಹಗಲಲ್ಲಿ ನವಿಲುಗರಿಯ ಬಣ್ಣಗಳನ್ನು ಸುತ್ತಲೂ ಹಾಸಿರುತ್ತವೆ. ದಾರಿಯ ಕೊಳ್ಳಗಳಲ್ಲಿ ನಿಂತ ನೀರು ತಮ್ಮ ಮಸುಕುಗನ್ನಡಿಯಲ್ಲಿ ಮೇಲಿನ ಮೋಡಗಳನ್ನೊ ಲಾಂದರ ಕಂಬಗಳ ಗಿಡಗಳ ಪ್ರತಿರೂಪಗಳನ್ನೊ

ತೋರಿಸುತ್ತವೆ. ಹೊರಗೆ ಎಲ್ಲೆಲ್ಲಿಯೂ ಹಸುರು, ಹೊಸತು, ನಗು. ಮನೆಯ ಪಕ್ಕದ ಸಣ್ಣ ಕುಂಟೆ ತುಂಬಿ ಒಂದು ಸಾವಿರ ಕ್ರಿಮಿಗಳೂ ಕಪ್ಪೆಗಳೂ ಓಲಗವ್ವಾದುತ್ತವೆ. ರಾತ್ರಿಗೆ ಶುಭಜಾಗರ ಮಾಡಿಸುತ್ತವೆ. ಹತ್ತಿರದ ಅಗಸೆ ಮಾವುಗಳ ಮೇಲೆ ಕುಳಿತು ಗಂಟಲು ಗಾರಾಗುವವರೆಗೂ ನಿಮ್ಮ ಮುಂದೆ ಕೋಗಿಲೆಗಳು ಸ್ಪರ್ಧೆ ನಡಸುತ್ತವೆ.

ಆದರೆ ನಮ್ಮಂಥವರ ಮನೆಗಳ ಒಳಗೆ ಸ್ವಲ್ಪ ಕಷ್ಟ. ಅವು ಇವೊತ್ತಿಗೆ ನಿನ್ನೆಗೆ ಹುಟ್ಟಿ ದೊಡ್ಡವಾಗಿರುವ ನಾಯಿಕೊಡೆಗಳಲ್ಲ. ಅಥವಾ ಶ್ರೀಮಂತ ಸೌಧಗಳಲ್ಲ. ನಾಲ್ಕಾರು ತಲೆಮಾರಿನಿಂದ ಉಳಿದುಬಂದಿರುವ ಮನೆಗಳು. ಹಿರಿತನಕ್ಕೂ ವಯಸ್ಸಿಗೂ ಗೌರವ ಬೇಡವೆ? ನಡತೆಯಲ್ಲವೆ ಅದು? ಜನರೇನೊ ತೋರಿಸಿಯಾರು; ಮಳೆಗೇನು ಬಂತು ಮರ್ಯಾದೆ? ಲೌಕಿಕಕ್ಕೆ ಮೀರಿದುದು ಪ್ರಕೃತಿ. ಆದ್ದರಿಂದ ನಮ್ಮಂಥವರ ಮನೆಗಳಲ್ಲಿ ಎಲ್ಲ ಬಗೆಯ ಮಳೆಗಳ ಸಂಪೂರ್ಣ ಫಲವೂ ದೊರಕುತ್ತದೆ. ಜಡಿಮಳೆಯ ಕಾಲವಾದರೆ ಎಲ್ಲ ಕಡೆಯಿಂದಲೂ ನೀರು ಸುರಿಯುವುದು; ಜಿನುಗುವುದು. ಎಲ್ಲಿ ನೋಡಿದರೂ ಪಾತ್ರೆಗಳೇ. ಬಟ್ಟೆಗಳೇ, ಗೋಣಿತಾಟೇ, ಕೆಸರೇ. ಇರಬಹುದಾದ್ದೆಲ್ಲ ಹೊರಕ್ಕೆ ಬರುವುದು. ಧಿನ್‌ಧಿಕ್ ಥನ್ ಥನಕ್ ತ್ರಿಕ್ ಎಂದು ಇಪ್ಪತ್ತೆರಡು ಶ್ರುತಿಗಳಲ್ಲಿಯೂ ಮೂರು ಕಾಲದ ತಾಳಗಳಲ್ಲಿಯೂ ಮಾಳಿಗೆ ತೊಟ್ಟಿಡುವುದು. ಹುಡುಗರು, ದೊಡ್ಡವರು ವಿರಾಮವಿಲ್ಲದೆ ನೀರನ್ನು ಹಿಂಡುತ್ತಿರುವುದೇ ಒರಸುತ್ತಿರುವುದೇ ನಿರಂತರ ಕೆಲಸ. ಒಟ್ಟಿಗೆ ಒಂದು ಚದರಡಿ ಪ್ರದೇಶ ಒಣಗಿರದು. ಮನೆಯೆಲ್ಲ ತಂಡಿ. ಮಕ್ಕಳಿಗೆ ತಲೆನೋವು, ನೆಗಡಿ, ಕೆಮ್ಮು. ಒಂದೊಂದು ಮೂಲೆಯಲ್ಲಿ ಒಬ್ಬೊಬ್ಬರು 'ಗೂಡರಿಸಿ'ಕೊಂಡು ಕುಳಿತುಕೊಳ್ಳುತ್ತಾರೆ. ದೊಡ್ಡ ಮಳೆ ಬಂದರೆ ಹಾಗಲ್ಲ. ಅದರ ರೀತಿ ಬೇರೆ. ಆಗಿನ ವೈಭವ ಬೇರೆ. ಎಷ್ಟಾದರೂ ಅದರದು ದೊಡ್ಡ ತೀರು. ಕಿರುಕುಳಕೊಟ್ಟು ಪ್ರತಿಯೊಂದು ಭಾಗದಲ್ಲಿಯೂ ಹೀಗೆ ಹಿಂಸೆ ಕೊಡುವುದಿಲ್ಲ.

ಅನೇಕರು ದೇವರಿಗೆ ಉತ್ಸವಗಳನ್ನು ಏರ್ಪಡಿಸುತ್ತಾರೆ. ಗರುಡೋತ್ಸವ, ಹನುಮಂತೋತ್ಸವ, ಹೂವಿನ ಪಲ್ಲಕ್ಕಿಯ ಉತ್ಸವ, ಕೊನೆಗೆ 'ಎಲ್ಲರಿಗೆಂತಂತು' ಶಯನೋತ್ಸವ! ಸುಖಸೌಕರ್ಯ, ಬಯಕೆ, ಬೇನೆ ಎಲ್ಲ ನಮ್ಮ ಹಾಗೆಯೇ ನಮ್ಮ ದೇವರುಗಳಿಗೂ ಇಲ್ಲವೆ? ಆದುದರಿಂದಲೇ ವರ್ಷವರ್ಷವೂ ನಾವು ಅವರಿಗೆ ಮದುವೆ ಮಾಡುತ್ತ ಮದುವೆಯ ವಿ–ಜೃಂಭಣವನ್ನೆಲ್ಲ ಲೋಕಕ್ಕೆ ಹಂಚುವುದು. ಈ ಎಲ್ಲ ಬಗೆಯ ಉತ್ಸವಕ್ಕಿಂತಲೂ ನನಗೆ ತೆಪ್ಪೋತ್ಸವದಲ್ಲಿ ಪ್ರೀತಿ ಬಹಳ. ಮೂರು ನಾಲ್ಕು ವರ್ಷಗಳಿಗೊಂದಾವರ್ತಿ ನಮ್ಮ ಮನೆಯ ಮೇಲಿನ ಧರ್ಮಾಂಬುಧಿ ಕೆರೆಯಲ್ಲಿ, ನೀರಿನ ಸಂಪತ್ತಿ ಇರುವ ವರ್ಷಗಳಲ್ಲಿ ಎಂಟು ಹತ್ತು ದಿನ ಬೆಂಗಳೂರಿನ ಎಲ್ಲ ಹಿರಿಯ ದೇವತೆಗಳಿಗೂ ತೆಪ್ಪೋತ್ಸವಗಳನ್ನು ಮಾಡಿಸುವರು. ಮಳೆಗಾಲದಲ್ಲಿ ದೊಡ್ಡ ಮಳೆ ಒಂದು ದಿನ ಬಂದರೂ ಸಾಕು–ವರ್ಷಕ್ಕೆ ಒಂದು ದಿನ ಬರುವುದಿಲ್ಲವೆ? – ಬಂದಾಗ ನಮ್ಮ ಮನೆಯಲ್ಲಿ ಈ ಉತ್ಸವವು ತಪ್ಪದೆ ವೈಭವದಿಂದ ನಡೆಯುತ್ತದೆ.

ಧರ್ಮಾಂಬುಧಿಯಲ್ಲಿ ಒಂದೊಂದು ದಿನ ಒಂದೊಂದೇ ದೇವರಿಗೆ ಉತ್ಸವವಾದರೆ ನಮ್ಮಲ್ಲಿ ಮನೆಯ ಎಲ್ಲ ದೇವರಿಗೂ ಆಗುತ್ತದೆ. ಆ ದೇವತೆಗಳು ವಿಗ್ರಹಗಳು; ಈ ದೇವರುಗಳು ಮನುಷ್ಯರು: ಇಷ್ಟೇ ವ್ಯತ್ಯಾಸ.

ಊರಿಗೆ ಸಿರಿಯೂ ನಾಗರಿಕತೆಯೂ ಹೆಚ್ಚಿದಂತೆಲ್ಲ ಎತ್ತರವಾಗಿದ್ದ ನಮ್ಮ ಮನೆಯನ್ನು ಊರಿನ ರಸ್ತೆಗಳು ತಗ್ಗಿಸುತ್ತಿವೆ. ನಮ್ಮ ಮನೆಯ ಕಡೆಗೆ ಮ್ಯುನಿಸಿಪಾಲಿಟಿಯವರು ನೀರಿಗೆ ಜಾರುಗುಪ್ಪೆ ಮಾಡಿಕೊಟ್ಟಿದ್ದಾರೆ. ಆದುದರಿಂದ ಹೊರಗಿನ ನೀರು ಶ್ರೀಮಂತನಂತೆ ಹರಿದು ಒಳಕ್ಕೆ ಬಂದು ಹಿತ್ತಿಲಲ್ಲಿ, ಬಚ್ಚಲಲ್ಲಿ ಮೊದಲು ಆಧಿಪತ್ಯ ಹೂಡಿ ಕೊಳ ಮಾಡಿಕೊಳ್ಳುತ್ತದೆ. ಕ್ರಮ ಕ್ರಮವಾಗಿ ಸ್ನಾನದ ಮನೆಯ ಕಡೆಗೆ ಸಾಗುತ್ತದೆ. ಅಲ್ಲಿಯ ಬಾಗಿಲು ಅತಿ ಪುರಾಕೃತವಾದ್ದರಿಂದ ವಿನಯದಿಂದ ತಗ್ಗಿ ತನ್ನ ಸೌಜನ್ಯವನ್ನು ಕಾಪಾಡಿಕೊಂಡು ಬಂದಿದೆ. ಶ್ರೀಮಂತರಿಗೆ ತಗ್ಗದಿದ್ದರೆ ವಿನಯಕ್ಕೆ ಬೆಲೆಯೆಲ್ಲಿ? ಅವರಿಗೆ ಬಾಗದಿದ್ದರೆ ವಿನಯವನ್ನೇ ವಿನಯವೆನ್ನಲಾದೀತೊ? ರಾತ್ರಿ ಯಾರಿಗೂ ಸುಳಿವು ಕೊಡದೆ ಮನೆಯವರು ಮೈಮರೆತಿದ್ದಾಗ ಈ ಶ್ರೀಮಂತರು ಮನೆಯೊಳಕ್ಕೆ ಧಾರಾಳವಾಗಿ ಪ್ರವೇಶಿಸುತ್ತಾರೆ. ಸದ್ದಿಲ್ಲದೆ ಗಂಭೀರವಾಗಿ ಬೀಗರಂತೆ ಬರುತ್ತಾರೆ. ಬೆಂದೊಡಲಿಗೆ ತಂಪು ಹಾಯಿಸುತ್ತಾರೆ. ದಣಿದು ಬಂದವರಿಗೆ 'ಬಾಯಾರಿಕೆ' ಕೊಡುವುದೂ ತಂಪಿನ ಉಪಚಾರ ಮಾಡುವುದೂ ಎಲ್ಲೆಲ್ಲಿಯೂ ರೂಢಿ. ನಮ್ಮಲ್ಲಿ ಹೊರಗಿಂದ ಬಂದವರು ಮನೆಯವರಿಗೆ ಈ ಉಪಚಾರ ಸಲ್ಲಿಸುತ್ತಾರೆ. ಮೇಲಿನ ಅಧಿಕಾರಿಗಳು ನಿಮ್ಮ ಯೋಗ್ಯತೆಯನ್ನು ಪರೀಕ್ಷಿಸಬೇಕಾದರೆ ನಿಮಗೆ ಹೇಳಿ, ಕೇಳಿ, ಎಚ್ಚರಿಕೆಕೊಟ್ಟು ಬರುತ್ತಾರೇನು? ಸರ್‌ಪ್ರೈಸ್ ವಿಸಿಟ್ ಕೊಡುವರು. ಅಂತೇ ಇಲ್ಲಿಯೂ ಸರಿಯಾಗಿ ಆಗಬೇಕು ಅವರಿಗೆ ಆಗಬೇಕಾದ ಉಪಚಾರವೆಲ್ಲ. ಮನೆಮಕ್ಕಳೆಲ್ಲ ಎದ್ದು ಹರಿವಾಣಗಳನ್ನು ತಂದು ಅವರನ್ನು ತುಂಬಿ ತುಂಬಿ ಮನೆಯಿಂದ ಸಾಗುಗಳಿಸಬೇಕು. ಈ ಉತ್ಸವಗಳು ಇನ್ನೆಷ್ಟು ಮನೆಗಳಲ್ಲಿ ನಡೆಯುವುವೊ ಕಾಣೆ. ನಮ್ಮಲ್ಲೇನೊ ತಪ್ಪದೆ ನಡೆಯುತ್ತವೆ. ಒಂದು ವೇಳೆ ನಮಗೊಬ್ಬರಿಗೇ ಈ ಸೌಭಾಗ್ಯವೆಂದುಕೊಂಡರೆ ಅದೂ ಒಂದು ವಿಶೇಷವೇ. ಹಿರಿಯರ ಬೀಗತನ ಮಾಡಿ ಪ್ರಪಂಚಕ್ಕೆ ಒಳ್ಳೆಯದನ್ನು ಮಾಡುತ್ತಿರುವ, ಅವರ ದರ್ಪದಲ್ಲಿ ತಮ್ಮ ಕಿರಿಜೀವನವನ್ನು ತೇಲಿಬಿಟ್ಟು ಸಾರ್ಥಕಪಡಿಸಿಕೊಳ್ಳುವ ಪುಣ್ಯ ಎಷ್ಟು ಜನಕ್ಕುಂಟು ?

ಹೀಗೆ–ಇನ್ನೂ ಅನೇಕ, ಅನೇಕ ವಿಧಗಳಲ್ಲಿ, ಪ್ರಪಂಚದ ಇತರ ಸಂಗತಿಗಳಂತೆಯೇ ಮಳೆಯೂ ದ್ವಂದ್ವ ಪೂರ್ಣವಾದುದು. ಅದರ ಕಷ್ಟವುಂಟು ಸುಖವುಂಟು ; ಚೆಲುವುಂಟು ವಿಕಾರವುಂಟು; ಧರ್ಮವುಂಟು ಅನ್ಯಾಯವುಂಟು; ಕೊಳಕುಂಟು ನೈರ್ಮಲ್ಯವುಂಟು; ಈಗ ಇಲ್ಲಿಗೆ ಮಾತ್ರ ಹೊಂದುವ ಲಕ್ಷಣವುಂಟು; ವಿಶ್ವ ಸ್ವರೂಪವನ್ನು ಸೂಚಿಸುವ ಶಾಶ್ವತ ಲಕ್ಷಣವುಂಟು. ಹುಯ್ಯೊ ಹುಯ್ಯೊ ಮಳೆರಾಯ, ಹೂವಿನ ತೋಟಕ್ಕೆ ನೀರಿಲ್ಲ ಎಂದು ಹಾಡುವ ಒಕ್ಕಲು ಮಗುವಿಂದ

ಹಿಡಿದು ಮಳೆ ಬೀಳದಿರಲು ಹಟ ಪೂಜೆ ಹೂಡಿ ಶಿವನ ಬೋಳು ತಲೆಯ ಮೇಲೆ–ಕಡೆಗೆ ಹಣ್ಣು ಮೆಣಸಿನಕಾಯನ್ನಾದರೂ ಅರೆದಿಟ್ಟು–ಕುಂಭಾಭಿಷೇಕ ಮಾಡುವ ವೈದಿಕರ ಪೂಜೆಯವರೆಗೂ ಮಳೆಗೆ ಹಾತೊರೆಯುತ್ತೇವೆ; ಔತಣ ಕೊಡುತ್ತೇವೆ. ಬಂದಾಗ ಈ ಗತಿ. ಏಕೋ ಹೀಗೆ? ಅದಕ್ಕೆ ನಮ್ಮ ಮೇಲೆ ಕನಿಕರ ಹೆಚ್ಚಾಗಿ ಔತಣಕ್ಕೆ ಒಲಿದು ಮನೆಯ ಮದುವೆ ಮಂಗಳಗಳಿಗೆ ನಂಟರು ಬರುವಂತೆ ಕುಟುಂಬ ಸಮೇತರಾಗಿ ನಾಲ್ಕು ದಿನ ಮುಂಚೆ ಬಂದು ಎಂಟು ದಿನ ಆಚೆಗೆ ಇದ್ದು ಹೋದರೆ ಮನೆಯ ಗೋಡೆ ಕುಸಿಯುವುದು; ಮಾಳಿಗೆಯ ತೊಲೆ ಮಗ್ಗುಲಿಗೆ ಬರುವುದು; ಕಿಟಕಿಯ ಮೇಲೆ ಹಾಸಿರುವ ಕಲ್ಲುಚಪ್ಪಡಿ ತಲೆಯ ಮೇಲಾಡುವುದು; ಹೊರಗೆ ಬೆಳೆ, ಬಿತ್ತನೆ ಮುಳುಗಿ ಗದ್ದೆ ತೋಟಗಳಿದ್ದ ಕಡೆ ಮರಳು, ಗೋಡು ಹಾಸಿಗೆ ಹಾಸುವುದು. ಇದರ ಕೇಡನ್ನು ತಡೆವ ಉಪಾಯ ಯಾವುದೂ ಸದ್ಯಕ್ಕೆ ಇಲ್ಲ. ಜನ ಕಾಣಬಹುದು; ಸಾಹಸದಿಂದ.

ಬಡವರಿಗೂ ಭಾಗ್ಯವಂತರಿಗೂ ಹಳ್ಳಿಯವರಿಗೂ ಪಟ್ಟಣಿಗರಿಗೂ ಯಾರಿಗೂ ತೊಂದರೆಯಾಗದಷ್ಟು, ನಮಗೆಲ್ಲರಿಗೂ ಹಿತವಾಗುವಷ್ಟು, ಕೆರೆ ಕಟ್ಟೆ ನದಿಗಳು ಸರ್ವದಾ ತುಂಬಿ ಸುತ್ತಲ ಹಸುರು ಹಚ್ಚೆ ನಲಿಯುವಷ್ಟು, ಫಲಪುಷ್ಪ ಧನಧಾನ್ಯ ಸಮೃದ್ಧಿ ಒದಗುವಷ್ಟು, ಜನ ವಾಸ ಮಾಡುವ ಊರುಗಳಲ್ಲಿ ದೂಳಡಗುವಷ್ಟು, ಕೊಳಕು ತೊಳೆದು ಶುಚಿಯಾಗುವಷ್ಟು–ಒಟ್ಟಿನಲ್ಲಿ ಬೇಕಾದಾಗ ಬೇಕಾದಷ್ಟು ಮಾತ್ರ ಬಂದು, ಬೇಡವಾಗಿರುವಾಗ ಉಪಟಲ ಕೊಡದಿರುವಂತೆ ಮಳೆ ಹುಯ್ಯುತ್ತ ಲೋಕ ಹಿತಗೈಯ್ಯುತ್ತಿರಬಾರದೆ? ಹಾಗೆ ಮಾಡಿದರೆ ಮಳೆ ದೇವತೆಯಾದೀತು. ಅದಕ್ಕೆ ಬುದ್ಧಿ ಹೇಳಿ ಸಂಸ್ಕಾರ ಮಾಡುವವರು ಯಾರು ? ಮನುಷ್ಯನಿಗೇ ಇಲ್ಲದ ಆತ್ಮಶಾಸನ ಮಳೆಗೆಲ್ಲಿ ಬಂದೀತು? ಈ ಸುಧಾರಣೆಯನ್ನು ಮಳೆಗೆ ಸೂಚಿಸುವುದು ಹೇಗೆ? ಅದು ಪ್ರಕೃತಿ. ಭೂತ. ಅವರ ನಿರಂಕುಶತೆಗೆ ತಡೆಯೇನು? ಕೆಲವನ್ನು ಮನುಷ್ಯ ಯತ್ನದಿಂದ ಮಾಡಬಹುದು. ಇಂಥ ಸುಧಾರಣೆ ಬರಬೇಕಾದರೆ ದೇವರ ಕಣ್ಣು ತೆರೆಯಬೇಕು, ಅದು ಆಗಬೇಕು. ಪೌರುಷ ಮಳೆಯೆದುರು ವ್ಯರ್ಥ. ದೇವರು ಕಣ್ಣು ತೆರೆಯುವವರೆಗೂ ಸ್ಥಿತಿಗೆ ತಲೆಬಾಗಿ ಸುಖವೂ ಒಂದೇ ದುಃಖವೂ ಒಂದೇ, ಲಾಭವೇನು ನಷ್ಟವೇನು? – ಎಂದು ವೇದಾಂತ ಹೇಳಿಕೊಂಡು ಮನಸ್ಸಿಗೆ ಸಮತೆ ತಂದುಕೊಳ್ಳುವುದು ಮಾತ್ರ ಎಲ್ಲರಿಗೂ ಸಾಧ್ಯ. ಭಗವದ್ಗೀತೆ ಎಲ್ಲಿಗೂ ಹೊಂದುತ್ತದೆ.

# ಹೆಣ್ಣು

ಹೆಣ್ಣಿಲ್ಲದ ಮನೆ ಚೆನ್ನಿಲ್ಲ ಎನ್ನುತ್ತಾರೆ. ಹೆಣ್ಣಿಂದಲೇ ಮನೆಗೆ ಕಳೆ, ತುಂಬು, ಅಚ್ಚುಕಟ್ಟು. ಮನೆ ಮನೆಯಾಗಿರಬೇಕಾದರೆ ತಾಯಿ, ಹೆಂಡತಿ, ತಂಗಿ, ಮಗಳು ಇರಬೇಕು. ಜನ ಒಟ್ಟಿಗಿದ್ದಷ್ಟೂ ಸಂತೋಷ. ಒಂಟಿಕೈವಲ್ಯ ಯಾವ ದೇವರಿಗೆ ಪ್ರೀತಿ? ದಿಕ್ಕಿಲ್ಲದ ತಬ್ಬಲಿಗಳಂತೆ ಒಂದು ಮನೆಗೆಲ್ಲ ಒಬ್ಬರು ಎಷ್ಟು ಐಶ್ವರ್ಯದಿಂದಿದ್ದರೆ ಏನು ಪ್ರಯೋಜನ? ಆದ್ದರಿಂದಲೇ ಹಿಂದೂ ಸಮಾಜದಲ್ಲಿ ಕುಟುಂಬಕ್ಕೆ ಹೆಚ್ಚು ಪ್ರಾಶಸ್ತ್ಯ ಉಂಟಾದ್ದು. ಅದರಲ್ಲಿ ಹೆಂಡತಿಯ ಸ್ಥಾನ ಬಹು ಮುಖ್ಯ. ಈಚೆಗೆ ಕುಟುಂಬ ಎಂದರೆ ಹೆಂಡತಿ ಎಂಬ ಅರ್ಥವೇ ನಿಂತಿದೆ. ಕುಟುಂಬ ಅಂದರೂ ಅವಳೇ, ಸಂಸಾರ ಎಂದರೂ ಅವಳೇ : ಹೆಂಡತಿ ಪ್ರಾಣ ಹಿಂಡುತ್ತಿದ್ದರೂ ಆಕೆಯೇ ಸಂಸಾರ : ಅದನ್ನು 'ನಿಭಾಯಿಸಿ' ದರೆಯೇ ಸಂಸಾರಸುಖ.

ಎಂದರೆ, ಎಲ್ಲ ಮನೆಗೂ ಒಂದೊಂದು ಹೆಂಡತಿ ಬೇಕೆಂದಾಯಿತು. ತೋರವಿರಲಿ ತೆಳುವಿರಲಿ, ಎತ್ತರವಿರಲಿ ಕುಳ್ಳಿರಲಿ, ಜಗಳಗಂಟಿಯಾಗಿರಲಿ ಸೌಮ್ಯಳಾಗಿ ಕುರಿಯಾಗಿರಲಿ, ಚೆಲುವೆಯಿರಲಿ ಸುಮಾರಿರಲಿ ಹೆಂಡತಿ ಹೆಂಡತಿಯೇ. ಮನೆಗೆ ಒಡತಿಯಾಗಿ ಗಂಡನಿಗೆ ಹೆಂಡತಿಯಾಗಿ ಎಲ್ಲವನ್ನೂ ತೂಗಿ ನಡಸುವ ಹೆಣ್ಣು ಮನೆಗೆ ಕಣ್ಣು. ಯಾವುದನ್ನು ಕಟ್ಟಿಕೊಂಡರೂ ಕಷ್ಟ ಸುಖ ಜೊತೆಗೇ ಬರುತ್ತವೆಯಾದ್ದರಿಂದ ಇದನ್ನು ಕಟ್ಟಿಕೊಂಡವರೂ ಸುಖದ ಜೊತೆಗೆ ಸ್ವಲ್ಪ ಕಷ್ಟವನ್ನು ಅನುಭವಿಸಬೇಕಾದೀತು. ಸುಖ ಮಾತ್ರ ಬೇಕು, ದುಃಖ ಬೇಡ ಎಂದರಾಗುತ್ತದೆಯೆ? ನಿಮ್ಮದೇನು ಹಿರಿಮೆ? ನಿಮ್ಮ ದಾಕ್ಷಿಣ್ಯ, 'ಆಭಾರ' ಏನು ಲೋಕಕ್ಕೆ?

ಮನೆಗೆ ಒಬ್ಬ ಹೆಂಡತಿ ಬೇಕೆಂದ ಮೇಲೆ ಅವರವರ ಹೆಂಡತಿ ಅವರವರ ಬಳಿಯೇ ಇರಬೇಕು ಎಂಬುದನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಶ್ರಮವಾಗಬಾರದು. ವಯಸ್ಸಾದ ಮನೆಯ ದೊಡ್ಡವರು ತಮ್ಮ ಸಂಸಾರ ನಡಸಿಕೊಂಡು ಸಡಗರಿಸುವುದನ್ನು ನೋಡಿದರೆ ಬೆಳೆದ ಯಾವ ಗಂಡಿಗಾದರೂ ನನಗೂ ಒಂದು ಸಂಸಾರ ಬೇಕು ಎನಿಸುವುದು ಸಹಜವೇ. ಹೆಣ್ಣಿಗೂ ಅನ್ನಿಸೀತು. ಅನುಮಾನದಿಂದ ಹೇಳುತ್ತಿದ್ದೇನೆ. ಅವರಿಗೆ ಆ ಬಯಕೆ ಬರುವುದೂ ದೊಡ್ಡವರು ಅದನ್ನು ನೆರವೇರಿಸಿಕೊಟ್ಟು ಉಪಶಾಂತಿ ಮಾಡುವುದೂ ಇಬ್ಬರಿಗೂ ಕ್ಷೇಮ. ಸಮಾಜಕ್ಕೇ ಕ್ಷೇಮ. ಅದರಿಂದಾಗಿಯೇ ನಮ್ಮ ಸಮಾಜ ವ್ಯವಸ್ಥೆಯಲ್ಲಿ ಎಲ್ಲರಿಗೂ ಒಂದೊಂದು ಹೆಂಡತಿ, ಒಂದೊಂದು ಮನೆ, ಎಲ್ಲರಿಗೂ ಮಕ್ಕಳು ಮರಿ ನಿರ್ಣಯವಾಗಿರುವುದು. ಒಂದೊ ನಾಲ್ಕೊ ಮದುವೆ

ಮಾಡಿಸದಿದ್ದರೆ ಅಪ್ಪರಿಗೂ ಅಪ್ಪಪುತ್ರರಾಗದಿದ್ದರೆ ಹಿರಿಯರಿಗೆ ತೃಪ್ತಿಯಿಲ್ಲ. ಚಿಕ್ಕಪುಟ್ಟ ದಂಪತಿಗಳನ್ನು ಬೊಂಬೆಗಳಂತೆ ಹಸೆಮಣೆಯ ಮೇಲೆ ಕೂಡಿಸಿ ಆರತಿ, ಉರುಟಣೆ, ನಲುಗು ಮಾಡಿಸಿ ಗುಬ್ಬಿ ಹೊಡೆಸಿ ಮೆರಸಿದರೆಯೇ ಹರ್ಷ. ನಿಮಗೆ ಮದುವೆ ಆಗಿದೆಯೇ? ಮಕ್ಕಳೆಷ್ಟು? ಎಂದು ಕೇಳುವುದೇ ಸಂಪ್ರದಾಯದಲ್ಲಿ ಮೊದಲ ಪ್ರಶ್ನೆ. ಲೋಕಹಿತದೃಷ್ಟಿಗೆ ಒಳಪಟ್ಟು ಇದು ನಡೆದಿರುವುದರಿಂದಲೇ ಇಷ್ಟು ಜನ ಇಷ್ಟು ದಿನ ಭಾರತವನ್ನು ಉಳಿಸಿರುವುದು. ಜನದಂತೆ ಧನ. ಈ ಜನಧನವನ್ನು ನೋಡಿ ಹೊರಲೋಕ ಕುಹಕ ನುಡಿದಿದೆ. ಆ ದೇಶಗಳಲ್ಲಿ ಜನ ಕಡಮೆ : ಹೊಸದಾಗಿ ಹುಟ್ಟುವವರ ಸಂಖ್ಯೆ ಇನ್ನೂ ಕಡಮೆ. ಹುಟ್ಟುವುದೇನು, ಹುಟ್ಟದೆ ಇರುವುದೇ ಸಾಮಾನ್ಯ; ಅದೇ ಸಮಸ್ಯೆ. ಇದರಿಂದ ಅವರಿಗೆ ನಮ್ಮ ಸಂಖ್ಯಾಸಂಪತ್ತಿಯನ್ನು ಕಂಡು ಕರುಬು ಸಹಜ. ಬಹುಶಃ ಭಯವೂ ಆಗುತ್ತಿರಬೇಕು. ಇವೊತ್ತೂ ಧನಭಾಗಕ್ಕಿಂತ ಜನಭಾಗವೇ ನಮ್ಮಲ್ಲಿ ಅಧಿಕವಾಗಿರಬಹುದು. ಎಂದಿಗೂ ಹೀಗೇ ಉಳಿಯಬೇಕು ಏಕೆ? ನಾಳೆ ಧನಭಾಗವೂ ಅಧಿಕವಾಗಲು ಈ ಮೂಲಕ ಹೆಚ್ಚು ಅವಕಾಶವುಂಟು. ಬಾಯಿ, ಹೊಟ್ಟೆಗಳ ಜೊತೆಗೆ ಬುದ್ಧಿ, ಕೈಬೆರಳು ಹುಟ್ಟಿ ಬರುವುವಲ್ಲವೆ? ಬುದ್ಧಿ ಸಾಧಿಸಲಾರದುದು ಯಾವುದು? ಕೈ ಮಾಡಲಾರದ್ದೇನಿದೆ? ಬೆರಳ ಚಳಕದಿಂದ ಲೋಕವನ್ನು ಬೆರಗುಮಾಡುವೆವು ಎಂದವರ ಪ್ರಭಾವ ಅಲ್ಲವೆ?

ಯಾರಲ್ಲಿ ಹೇಗೇ ಆಗಲಿ, ನಮ್ಮಲ್ಲಂತೂ ಸಂಸಾರಗಳು ಬೆಳೆದು ಜನಸಮೃದ್ಧಿ ಮನಸಾರುವಷ್ಟಿದೆ. ಹೆಣ್ಣಿನ ಸೌಭಾಗ್ಯವಿಲ್ಲದಿರುತ್ತಿದ್ದರೆ ಈ ಪುಷ್ಟಿ, ಈ ತೃಪ್ತಿ ದೊರೆಯುತ್ತಿರಲಿಲ್ಲ. ಹೆಣ್ಣಿಂದ ತಲೆ, ತಲೆಮಾರು, ತಲೆಮೊರೆ. ಪರಿಸ್ಥಿತಿ ಹೀಗಿರುವಾಗ ಮನೆ ಬಿಟ್ಟು ಸನ್ಯಾಸಿಗಳಾಗುತ್ತಿದ್ದವರ ಬಗೆಯೇ ಅರ್ಥವಾಗುವುದಿಲ್ಲ. ಇವರನ್ನು ಆಳಲಾರದೆಯೊ, ಇವರಿಗೆ ಜೀವನ ಒದಗಿಸಲಾರದ ಕಷ್ಟಕ್ಕೊ, ತೀರಿಸಲಾಗದ ಸಾಲ ಸೂಲ ಮಾಡಿಕೊಂಡೊ, ಕೋಟಲೆ, ಬೇಸರಗೊಂಡು ಸನ್ಯಾಸಿಗಳಾಗುತ್ತಿದ್ದವರೇ ಬಹುಮಂದಿಯಿರಬೇಕು. ಲೋಕ ಕ್ಷಣಿಕ, ಬಾಳು ಅಸಾರ ಎಂದರಿತು ಪರವೇ ದೊಡ್ಡದಾದ್ದರಿಂದ ಪರವನ್ನು ಸಾಧಿಸುವೆಮೆಂದು ಆಶ್ರಮ ಬದಲಾಯಿಸಿದ ಅತಿಶಯಿಗಳು ಎಂದಿಗೂ ಕಡಮೆಯೇ. ಎಲ್ಲಿಯೂ ಕಡಮೆಯೇ. ಅದೇ ಕಾರಣವಾಗಿದ್ದರೆ ಈ ದೇಶ ಸಾವಿರಾರು ವರ್ಷಗಳಿಗೆ ಮುಂಚೆಯೇ ಮುಕ್ತವಾಗಬಹುದಾಗಿತ್ತು. ಆದರೆ ಬಾಳಲ್ಲಿ ಸೋತು ಸನ್ಯಾಸಿಯಾದವನನ್ನು ಏನೆನ್ನೋಣ? ಅದೂ ಹಾಗಿರಲಿ, ಅಂಥವರಿಗೂ ದಿನಾ ಒಂದು ಹೊತ್ತಾದರೂ ಭಿಕ್ಷ ನಡೆಯಬೇಡವೆ? ಭಿಕ್ಷ ನಡಸುವವರು ಯಾರು? ಯಾವುದಾದರೂ ಮನೆಯ ಅನ್ನಪೂರ್ಣೆ ತಾನೆ? ಎಷ್ಟು ಮಂದಿ ಸನ್ಯಾಸಿಗಳಿಗೆ ಮಾತಾಪತ್ಯ, ಶಿಷ್ಯ ಸಂಗ್ರಹ, ಸಿಬ್ಬಂದಿ, ಪಾಠಶಾಲೆ ಇರುತ್ತವೆ? ಇಂಥವರಿಗೆ ಗತಿ? ಸಂಸಾರಿಗಳ ಮನೆಯಲ್ಲವೆ? ಹೀಗೂ ಹೆಣ್ಣಿನ ಸ್ಥಾನ ಸ್ಥಾಪಿತವಾದಂತೆಯೇ ಸರಿ. ಗಂಡು ಅಡಿಗೆ ಮಾಡಬಾರದೋ ಎಂದೀರಿ. ಅಡಿಗೆಯಲ್ಲಿ ನಳ ಭೀಮರಿಗೆ ಕೀರ್ತಿಯೇ ಹೊರತು ಯಾವ ಅಡುಗೂಳಜ್ಜಿ, ಯಾವ ಸುಬ್ಬಕ್ಕ ತಿಮ್ಮಮ್ಮನಿಗೆ ಆಚಂದ್ರಾರ್ಕವಾದ

ಕೀರ್ತಿ ಇದೆ? ಯಾರು ಬೇಡ ಎಂದರು? ಆದರೆ ಸದಾ ಅನ್ನ ಬೇಯಿಸುವ ಗಂಡು ಎಂಥ ಗಂಡು? ಗಂಡನಿಗೆ, ಮಕ್ಕಳಿಗೆ ಅನ್ನ ಬೇಯಿಸಲು ಗೋಳಾಡುವ ಹೆಣ್ಣು ಯಾವ ಸೀಮೆ ಹೆಣ್ಣು?

ಹೀಗೆಂದ ಮಾತ್ರಕ್ಕೆ ಹೆಣ್ಣೆಂದರೆ ಹೆಂಡತಿ, ಅಡಿಗೆಯವಳು ಎಂಬರ್ಥವಲ್ಲ–ನಮ್ಮ ನಮ್ಮ ಮನೆಗಳಲ್ಲಿ ಸದ್ಯಕ್ಕೇ ಹೇಗೇ ಇರಲಿ. ನಾನು ಹಾಗೆ ಅರ್ಥ ಮಾಡುವವನೂ ಅಲ್ಲ. ಎಲ್ಲ ದೇಶಗಳಲ್ಲಿಯೂ ನಿನ್ನೆ ಮೊನ್ನೆಯವರೆಗೂ ಇದೇ ಸತ್ಯವಾಗಿತ್ತು. ಯಾರೂ ಬಾಯಿಬಿಟ್ಟು ಇದೇ ಸತ್ಯ, ಇಷ್ಟೇ ಅದರ ಆಕಾಂಕ್ಷೆ ಎಂದು ಪ್ರಕಟವಾಗಿ ಹೇಳುತ್ತಿರಲಿಲ್ಲ ಮಾತ್ರ. ಜೊತೆಗೊ : ಸಮಾಜದಲ್ಲಿ ವಸ್ತುತಃ ಹೆಂಡತಿಯಾದವಳ ಸ್ಥಾನ ಗೌರವದ್ದು. ಅಡಿಗೆ ಮಾಡಿ ಬಡಿಸುವ ಮನೆವಿಯ ಹಿರಿಮೆಯನ್ನು ಉಪಕಾರವನ್ನು ಬೇರೆ ಬಣ್ಣಿಸಬೇಕೇಕೆ? ಕಡೆಗೆ ನಿಮ್ಮ ಹೊಟ್ಟೆಗಳನ್ನು ಕೇಳಿ. ವೆಲ್ಸ್ ವರ್ಣಿಸುವ ಯಾವನೊ ಒಬ್ಬ ನಿರ್ಭಾಗ್ಯ ಪೋಲಿ ಹೆಂಡತಿಯ ಅಪಕ್ವಪಾಕಕ್ಕೆ ಈಡಾಗಿ ಕೆಟ್ಟನೆಂದಿದೆಯೇ ಹೊರತು ಲೋಕಸಾಮಾನ್ಯದಲ್ಲಿ ಯಾರೂ ಹೆಚ್ಚಾಗಿ ಹಾಗಾದವರಿಲ್ಲ.

ಅಲ್ಲದೆ ಮಡದಿಯಾದವಳ ಗೊಡವೆಗೆ ಯಾರು ಹೋಗುವರು? ಯಾರು ಏರಬಲ್ಲರು? ಹೆಣ್ಣು  ಬರಿಯ ಹೆಂಗಸಾಗಿಬಿಟ್ಟರೆ ಸಾಲದು; ಹೆಂಡತಿಯಾಗಬೇಕು. ಬಿಡಿ ಹೆಣ್ಣಿಗೆ ಲೋಕದಲ್ಲಿ ಕಷ್ಟವೇ ಹೊರತು ಇಂಥವರೊಬ್ಬರ ಧರ್ಮಪತ್ನಿ ಈಕೆ ಎಂದರೆ ಎಲ್ಲರಿಗೂ ಆ ಬಗ್ಗೆ ತಡೆ, ಗೌರವ ಬುದ್ಧಿ, ಹೊಣೆಗಾರಿಕೆ ಹೊಳೆಯುತ್ತದೆ. ಎಲ್ಲರೂ ಆಕೆಯ ಪರವಾಗಿ ಹುಷಾರಾಗಿ ನಡೆದುಕೊಳ್ಳುತ್ತಾರೆ. ಕುತ್ತಿಗೆಗೆ ಪಟ್ಟಿ ಹಾಕಿದ ನಾಯನ್ನು ಮ್ಯುನಿಸಿಪಾಲಿಟಿಯವರೂ ಮುಟ್ಟುವುದಿಲ್ಲ; ತಾಳಿ ಕಟ್ಟಿರುವ ಹೆಣ್ಣಿನ ತಂಟೆಗೆ ಯಾರು ಬರುತ್ತಾರೆ? ಬಿಡಿ ಹೆಣ್ಣನ್ನು ಲೋಕ ಬಿಡುಗಡೆಯ ಲಕ್ಷ ಕಣ್ಣಿಂದ ನೋಡುತ್ತದೆ. ತನಗೆ ಮಾಡಿಕೊಳ್ಳಬೇಕೆಂದು ಆಶೆಪಡುತ್ತದೆ. ಲೋಕಕ್ಕೆ ಅದು ಉದ್ವೇಗ ಸಾಮಗ್ರಿ. ಅಂಥದಾಗದಂತೆಯೂ ಸಮಾಜ ಸಂರಕ್ಷಣೆಯಾಗುವಂತೆಯೂ ಎಲ್ಲ ಹೆಣ್ಣು ಮದುವೆಯಾಗುವುದು ಲೇಸು. ಅವಳು ಮದುವೆ ಮಾಡಿಕೊಳ್ಳದಿದ್ದರೆ ಹಿರಿಯರು, ಗರುವರು ಬುದ್ಧಿ ಹೇಳಿ, ಮಂಗಳಸೂತ್ರ ಕಟ್ಟಿಸಿ ಯಾರ ಕೈಗಾದರೂ ಆಕೆಯನ್ನು ಹಾಕಿ ಕಾಪಾಡಬೇಕಾದ್ದು ಅಗತ್ಯ. ಗಂಡು ಹೆಣ್ಣಿನ ಸಂಬಂಧಗಳಲ್ಲಿ ಅತಿ ಧಾರಾಳ,ಸದರ ಇಬ್ಬರಿಗೂ ಆರೋಗ್ಯವಲ್ಲ : ಹಿತವಲ್ಲ. ತಾಯಾಗಲಿ ತಂಗಿಯಾಗಲಿ ಮಗಳಾಗಲಿ ಹೆಚ್ಚು ಹೊತ್ತು ಹೆಣ್ಣು ಸಾಮೀಪ್ಯದಲ್ಲಿ ಕಳೆಯಬೇಡ; ಅವರೊಡನೆ ಹೆಚ್ಚು ಸರಸ, ಬಳಕೆ, ಚಕ್ಕಂದ ಬೇಡ, 'ಮಾತ್ರಾ ಸ್ವಸ್ರಾ ದುಹಿತ್ರಾ ವಾ ನ ವಿವಿಕ್ತಾ SS ಸನೋ ಭವೇತ್' – ಎಂದು ಮನುಗಳೇ ಹೇಳಿದ್ದಾರೆ. ಈ ನಾಡಿನ ಧರ್ಮವಿಧಾಯಕರು ಅವರು. ಕಾರಣ? 'ಬಲವಾನ್ ಇಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ' ಅಂತೆ. ಯಾರೂ ಅದಕ್ಕೆ ಹೊರತಾಗದೆ ಹೋಗಬಹುದು ಎಂದಾಗ ಹೆಣ್ಣಿನ ಶಕ್ತಿ ಎಷ್ಟು ದುರ್ವಿಧಿಯಾಗಬಲ್ಲದು ಎಂಬುದು ತಿಳಿಯುತ್ತದೆ.

ಮದುವೆ ಗಂಡು ಹೆಣ್ಣಿನ ಒಂದು ಖಚಿತವಾದ ಸಂಬಂಧ. ಷಾ ಅವರು ಹೇಳಿದರು: 'ಯಾವ ಹೆಂಗಸು ಇನ್ನಾರಿಗೂ ಅಲ್ಲದ ರೀತಿಯಲ್ಲಿ ಒಬ್ಬನಿಗೆ ಮಾತ್ರ ಸಂಬಂಧಪಟ್ಟು ಸಲ್ಲುವಳೊ ಆಕೆ ಅವನಿಗೆ ಹೆಂಡತಿ; ಇನ್ನಾವ ಹೆಂಗಸಲ್ಲಿಯೂ ಸಲ್ಲದ ರೀತಿ ಇವಳೊಬ್ಬಳಿಗೇ ಮಿತವಾಗಿ ಯಾವನಿಗೆ ಯಾವಳಲ್ಲಿ ಸಂಬಂಧವೊ ಅವನು ಅವಳ ಗಂಡ' ಎಂದು. ಈ ಸೂತ್ರದಲ್ಲಿ ಅತಿವ್ಯಾಪ್ತಿ ಅವ್ಯಾಪ್ತಿ ಎರಡು ದೋಷಗಳೂ ಇವೆ. ಆದರೂ ಬೆಲೆಯುಳ್ಳ ಸತ್ಯಾಂಶವೂ ಉಂಟು. ನಮ್ಮಲ್ಲಿ ಇನ್ನೂ ಒಂದು ತತ್ತ್ವ ಈ ವಿಶಿಷ್ಟ ಸಂಬಂಧದಲ್ಲಿ ಸೇರಿಕೊಂಡಿದೆ. ಬಹು ಜನಕ್ಕೆ ಅದು ಅನಿವಾರ್ಯ. ಆದ್ದರಿಂದ ಪ್ರತಿ ಗಂಡಿಗೂ ಒಂದು ಹೆಣ್ಣು, ಪ್ರತಿ ಹೆಣ್ಣಿಗೂ ಒಂದು ಗಂಡು ಹಣೆಯಲ್ಲಿ ಬರೆದಿರುತ್ತದೆ. ಬ್ರಹ್ಮನು ಮೊದಲೇ ಅವರಿಗೆ ಗಂಟುಹಾಕಿರುತ್ತಾನೆ. ಜಾತಕಗಳನ್ನು ಗುಣಿಸುವ ಎಲ್ಲ ಜೋಯಿಸರಿಗೂ ಇದು ಗೊತ್ತು. ಅವರೇ ಬ್ರಹ್ಮಗಂಟನ್ನು ಬಿಡಿಸಿ ತೋರಿಸಿ ಕೂಟ ವಿವೇಚನೆ ಮಾಡಬಲ್ಲವರು. ಮದುವೆ ಆದಮೇಲೆ ಉಳಿದವರಿಗೂ ಇದು ತಿಳಿಯುತ್ತದೆ. ಈ ಹೆಣ್ಣಿಗೆ ಈ ಗಂಡು ಬರೆದಿತ್ತು, ಆ ಗಂಡಿಗಾಗಿ ಈ ಹೆಣ್ಣು ಕಾದಿದ್ದಳು, ತಪಸ್ಸು ಮಾಡಿದ್ದಳು, ನಾವು ಎಲ್ಲೆಲ್ಲೊ ಹುಡುಕಿ ಏನೇನು ಪಾಡುಪಟ್ಟರಾಯಿತೆ ಎಂಬುದು ಲೋಕವೇದ್ಯ. ಈ ಹಣೆಬರಹದ ಎದುರು ಯಾರ ಕೈಯೂ ನಡೆಯದು. ಅವರವರ ಕರ್ಮಾನುಸಾರ, ಕಾಲದ ಬಸಿರಲ್ಲಿ ಅಡಗಿ ಮರೆಯಾಗಿರುವ ಸಂಬಂಧಗಳು ಒಂದು ಹುಟ್ಟಿಂದ ಇನ್ನೊಂದು ಹುಟ್ಟಿಗೆ ನಡೆಯುವುವು. ಎರಡು ಜೀವಿಗಳ ಬಾಳು ಅವರಿಗೆ ತಿಳಿಯದಂತೆ 'ಪ್ರಾಕಾರಬ್ಧ'ವಾಗಿ ನಡೆದು ಇಲ್ಲಿ ಪುನಃ ಬೆಸೆದು ಸಂಸ್ಕಾರಗಳನ್ನು ಸಾಧಿಸುವುದು. ಇನ್ನಾರದೊ ಜಾತಕದಲ್ಲಿ ವಕ್ರ ಸಂಚಾರ ಮಾಡಿ ಅವರ ಬದುಕುಗಳನ್ನು ತೊಡಕು ಮಾಡುವುದು. ಆದ್ದರಿಂದ ನೀವೆಷ್ಟೇ ಬೇಡವೆನ್ನಿ, ನಿಮಗೆ ಮದುವೆ ಆಗಿಯೇ ತೀರೀತು. ಮನುಷ್ಯನಿಗೆ ಆಗಲೇಬೇಕಾಗಿರುವ ಹದಿನಾರರಲ್ಲಿ ಮದುವೆ ಒಂದು ಸಂಸ್ಕಾರ ಬೇರೆ.... ಆಯಿತು. ಹೆಂಡತಿ ಎಂದ ಮೇಲೆ ಮಕ್ಕಳು, ಸಂಸಾರ. ಮಕ್ಕಳಿಲ್ಲದ ಹೆಣ್ಣು, ಹೂಬಿಡದ ಮರ ಎರಡೂ ಅಸಹಜ. ಹೀಗೆ ಸಂಸಾರದ ರಾಟೆ ನಿರಂತರವಾಗಿ ಜೇಂಕರಿಸುತ್ತಲೇ ಇರುತ್ತದೆ. ಮದುವೆ ಆಗದ ಹೆಣ್ಣು? ಅಯ್ಯೋ, ಪಾಪ! ಸ್ವಂತ ಜೀವನ ಮಾಡಿಕೊಳ್ಳದಿದ್ದರೆ, ಅಮಾಜುರಿವ ಎಂದು ಮುಂತಾಗಿ ಖುಕ್ ಹೇಳುವಂತೆ, ಬಹುಶಃ ತಂದೆಯ ಮನೆಯಲ್ಲಿಯೇ ಉಳಿವ ಹೆಣ್ಣು ಅದು.

ಮದುವೆ ಮಾಡಿಕೊಳ್ಳಲೆ ಬೇಡವೆ ಎಂದು ನಿಮ್ಮನ್ನು ಸಲಹೆ ಕೇಳುವವರಿಗೆ ಏನೂ ಹೇಳಬೇಡಿ. ಬೇಡವೆನ್ನುವುದು ಅವಿವೇಕ ವರ್ತನೆ. ಅವರು ನೂರು ಕೇಳಬಹುದು. ಕೇಳಿದ್ದಕ್ಕೆಲ್ಲ ಉತ್ತರ ಕೊಡಲೇಬೇಕಾದ ಕಡ್ಡಾಯವೆಲ್ಲಿದೆ? ಯಾರ ಒಳ ಅಗತ್ಯ ಹೇಗೊ ನೀವೇನು ಬಲ್ಲಿರಿ? ಅವರ ಅರೆಪ್ರಜ್ಞೆಯಲ್ಲಿ ಯಾವ ಆಸೆ ಮೂಡಿ ಯಾವ ಉತ್ತರ ನಿಮ್ಮಿಂದ ಬಂದರೆ ತೃಪ್ತಿಯಾದೀತೊ ನಿಮಗೆ ಹೇಗೆ ಹೊಳೆದೀತು? ನಿರ್ಣಯ ಮಾಡಿದವರು ತಾವೆಂಬ ಹೊಣೆಗಾರಿಕೆ ತಪ್ಪಿಸಿಕೊಳ್ಳಬೇಕೆಂದು, ನಿಮ್ಮ ಮಾತು ಕೇಳಿ ಮದುವೆಯಾದೆನೆಂದು ಆಮೇಲೆ ನಿಮ್ಮ

ಮೇಲೆ ಸೊಡ್ಡು ಹೊರಿಸಲು ಅವರು ಮುಂಚಿತವಾಗಿ ಮಾಡಿಕೊಳ್ಳುವ ಅವಕಾಶವಿರಬಹುದು ಅದು. ಹಾಗೂ ನಿಮಗೆ ಸಂಬಂಧಿಸದ ಮಾತಿಗೆ ನೀವೇಕೆ ಹೋಗಬೇಕು ? ಮದುವೆ ಆದರೆ ಒಂದು ಕಷ್ಟ, ಆಗದಿದ್ದರೆ ಬೇರೊಂದು – ಇತ್ತ ಪುಲಿ, ಅತ್ತ ದರಿ – ಎಂಬುದೂ ಜಾಣತನವಲ್ಲ. ದರಿ ನಿಜವೇ ಎಂದು ಒಪ್ಪೋಣ. ಹುಲಿ ಹುಲಿಯಲ್ಲದೆ ಇರಬಹುದು. ಅದನ್ನು ಪಳಗಿಸಿ ಆಟವಾಡಿಸಬಹುದಾದೀತು. ಲೋಕದಲ್ಲಿ ದರಿ ಹುಲಿಗಳನ್ನು ಬಿಟ್ಟರೆ ಹುಲ್ಲೆ ಇಲ್ಲವೆ? ತೆವರು, ಹಸಲೆ, ಹಾಡಿ ಇಲ್ಲವೆ? ಕೋಟಿ ಬೆಡಗುಗಳ ತೋಟವಾಗಿರುವ ಈ ಪೃಥ್ವಿಯನ್ನು ಇಕ್ಕಟ್ಟಿಗೆ ಇರುಕಿಸಿ ಅಸಮಾಧಾನಪಟ್ಟುಕೊಳ್ಳುವವರನ್ನು ಏನೆಂದು ಕರೆಯೋಣ. ಎಲ್ಲ ಹೆಂಡತಿಯರೂ ಹುಲಿಗಳಲ್ಲ ಎಂಬ ತತ್ತ್ವವನ್ನು ಬಹುಜನ ಬಲ್ಲರು. ಆ ತಿಳಿವಿನಿಂದಲೇ ಲೋಕ ಕೆಲೆದಿದೆ, ಬದುಕಿದೆ. ಸಂತೋಷಕೊಟ್ಟಿದೆ, ಸಂತೋಷ ಕೊಂಡಿದೆ. ಲೋಪ, ದೋಷ, ಕಷ್ಟ, ಕಾರ್ಪಣ್ಯ ಇರುವ ಕಡೆಯೂ ಸಂಸಾರ ಸುಮಾರು ಚೆನ್ನಾಗಿಯೇ ನಡೆಯುತ್ತಿರಬೇಕು. ಬರಿಯ ದುಃಖವೇ ಕ್ಲೇಶವೇ ಆಗಿದ್ದಿದ್ದರೆ ದಿನಕ್ಕೆ ಸಾವಿರ ಮದುವೆ ಏಕೆ ಆಗುತ್ತಿತ್ತು? ಸಮಾಜ ಸಂತೋಷ, ಆರೋಗ್ಯ ಮತ್ತು ಭಗವತ್ ಸಂಕಲ್ಪಗಳ ಮಹಾಲಕ್ಷಣವಾಗಿ ಗಂಡು ಹೆಣ್ಣಿನ ಕೂಡುಜೀವನ ನಡೆಯುತ್ತಿರುವವರೆಗೂ ಸಂಸಾರದಲ್ಲಿ ಶುಚಿಯುಂಟು, ರುಚಿಯುಂಟು. ಗೃಹದಿಂದ ಗೃಹಿಣಿ, ಗೃಹಿಣಿಯಿಂದ ಗೃಹ ಶೋಭಿಸುತ್ತವೆ. ಗಂಡಿಲ್ಲದ ಹೆಣ್ಣಿನದೂ ಹೆಣ್ಣಿಲ್ಲದ ಗಂಡಿನದೂ ಬದುಕು ಎಡವಟ್ಟು.

ಬರಿಯ ಹೆಂಡತಿಯಾಗಿರಲೇ ಹೆಣ್ಣು ಹುಟ್ಟಿದ್ದು ಎಂಬುದು ನನ್ನ ಮತವಲ್ಲವೆಂದು ಹಿಂದೆಯೇ ತಿಳಿಸಿದ್ದೇನೆ. ಇನ್ನೂ ಏನೇನೊ ಆಗಬಹುದು. ಈವರೆಗೂ ಇದು ಬಹು ಮುಖ್ಯವಾದ ಸಂಬಂಧ ಎಂದು ಮಾತ್ರ ಹೇಳಿದ್ದು. ಇದರಲ್ಲಿ ಹೆಣ್ಣಿಗೆ ಹೀನಾಯವಿಲ್ಲ. ಹೀನಾಯವೇಕೆ ? ಬೆಳೆದ ವಯಸ್ಸು ಬಂದ ಕೂಡಲೆ ಯಾರಾದರೊಬ್ಬ ಗಂಡಸು ಅವಳನ್ನು ಮದುವೆಯಾದನೆಂದರೆ ಯೌವನ ಸಫಲವಾಯಿತು. ಅವಳ ಎಲ್ಲ ಹೊರ ಜವಾಬ್ದಾರಿಯೂ ಮುಗಿಯಿತು. ಆಕೆ ಚೆಲುವೆಯಾಗಿದ್ದರಂತೂ ಸರಿಯೆ. ಕೈಯಲ್ಲಿ 'ತುರುಫಿ'ದ್ದ ಹಾಗೆ. ಗಂಡನ್ನು ಆಡಿಸಬಹುದು. ನಿತ್ಯ ಭಯದಲ್ಲಿರಿಸಿಕೊಳ್ಳಬಹುದು. ತನ್ನ ರಕ್ಷಣೆಗಾಗಿ ಸಂತತವೂ ಅವನ ಸ್ಥಾನಮಾನ, ಧನ ಚಾತುರ್ಯ ಎಲ್ಲವನ್ನೂ ತನ್ನಿಚ್ಛೆಗೆ ದುಡಿಸಬಹುದು. ಒಬ್ಬ ಸೀತೆ, ಒಬ್ಬ ದ್ರೌಪದಿ, ಒಬ್ಬ ಹೆಲೆನ್, ಒಬ್ಬ ದೀರ್ದ್ರೆ, ಒಬ್ಬ ಬ್ರುನ್‌ಹಿಲ್ಡ್ ತಮ್ಮ ಚೆಲುವಿನಿಂದ ಗಂಡುಲೋಕಕ್ಕೆ ಏನೇನು ಕೆಲಸ ಕೊಟ್ಟರು ಎಂದು ತಿಳಿದಿರುವ ಪುರುಷ ಸಮುದಾಯಕ್ಕೆ ಅದರ ಬಲ ಎಷ್ಟು ಎಂದು ಗೊತ್ತಿದೆ. ಚೆಲುವಿಗೆ ಸೋತು ಎಷ್ಟು ಮನಸ್ಸು ಮುರಿದಿಲ್ಲ; ಎಷ್ಟೂರು ಉರಿದಿಲ್ಲ; ಎಷ್ಟು ಬದುಕು ಹಾಳಾಗಿಲ್ಲ? ಆಕೆ ಚೆಲುವೆಯಲ್ಲ; ಬಣ್ಣ ಬಿಳುಪು, ಕೆಂಪು ಇಲ್ಲದಿರಬಹುದು. ಕಣ್ಣು ಮೂಗು ನೆಟ್ಟಗಿದ್ದು ಹೆಣ್ಣು ಒಪ್ಪವಾಗಿ ಮಾಟವಾಗಿರಬಾರದೆ? ಕಳೆ, ಲಾವಣ್ಯ, ಬರಿಯ ತೊವಲ ಬಣ್ಣದಿಂದ

ಬರಬೇಕಿಲ್ಲವಲ್ಲ? ಹೆಣ್ಣು ಚೆಲುವೆಯಾದರೆ ಮಾತ್ರ ಬೇಕು, ಇಲ್ಲವಾದರೆ ಬೇಡ ಎಂದರೆ ಎಲ್ಲ ಗಂಡು ಚೆಲುವಾಗಿಯೇ ಗಂಡಾಗಿಯೇ ಇರಬೇಕು ಎಂದು ಅವರೂ ಕೇಳಿಯಾರು. ಆಗ? ಗಂಡಸರಲ್ಲಿ ಎಷ್ಟು ಜನ ಕುಳ್ಳು, ಕಪ್ಪು, ಸೆಣಕಲು, ಗಂಟು ಗಂಟು, ಸೊಟ್ಟ ಮೋರೆ ಇಲ್ಲ? ಇವರೂ ಇರ್ತಾರೆ. ಸ್ವಲ್ಪ ಹೆಚ್ಚು. ಸ್ವಲ್ಪ ಕಡಮೆ. ದೇವರು ಮಾಡಿಸಿದ ಹಾಗೆ. ಚೆಲುವಲ್ಲದವರದೇ ಗಂಡಲ್ಲಿ, ಹೆಣ್ಣಲ್ಲಿ ಯಾವಾಗಲೂ ಹೆಚ್ಚು ಸಂಖ್ಯೆ. ಹಾಗಾದರೆ ಅವರಿಗೆಲ್ಲ ಮದುವೆ ಬೇಡವೆ? ಲೋಕ ಸ್ವರೂಪಕ್ಕೂ ರಚನೆಗೂ ಸಂಬಂಧಿಸಿದ ಇಂಥ ಮೂಲಭೂತ ವಿಷಯಗಳಲ್ಲಿ ಅಲ್ಲಸಲ್ಲದ ಅತೃಪ್ತಿಗಳನ್ನು ತಂದುಕೊಳ್ಳದಿರುವುದು ಮೇಲು. ಅಲ್ಲಿಗೂ ಅವರವರ ಕರ್ಮಾನುಸಾರ ಅವರಿಗೆ ಬಾಳ ಸಂಗಡಿಗರು ದೊರೆಯುತ್ತಾರೆಂದಾಗ ಯಾರಿಗೆ ಯಾವ ಸ್ವಾತಂತ್ರ್ಯವಿದೆ? ಎಲ್ಲ ಭ್ರಮೆ! ಹಾಗಾಡಿಸುತ್ತೆ ಸ್ವಲ್ಪ ಕಾಲ. ನೆತ್ತರು ಕುದಿಯುವಾಗ. ಮೀಸೆ ಮೊಳೆಯುತ್ತಿರುವಾಗ.

ಈ ತತ್ತ್ವವನ್ನು ಒಪ್ಪದ ಹಲವು ಪಾಶ್ಚಿಮಾತ್ಯರು ತಾವು ಒಲಿದವರನ್ನೇ ಮದುವೆಯಾಗುತ್ತೇವೆ. ಇಚ್ಛೆಗೆ ಬಾರದವರನ್ನು ಆಗುವುದಿಲ್ಲ ಎಂದು ಹಿಗ್ಗುತ್ತಾರೆ. ಇದಕ್ಕೆ ನಮ್ಮವರು ಉಗುಳುನುಂಗಿ ಕುಳಿತುಕೊಂಡಿಲ್ಲ. ಹಿಂದೆಯೇ ತಕ್ಕ ಉತ್ತರ ತೀರ್ಮಾನವಾಗಿ ಕೊಟ್ಟುಬಿಟ್ಟಿದ್ದಾರೆ. ನಾವು ಮದುವೆಯಾದವರನ್ನು ಪ್ರೀತಿಸುತ್ತೇವೆ ಎಂದು. ಇಷ್ಟವಿಲ್ಲದೆ ಮದುವೆಯಾದೆವೆಂದರೂ ಒಂದು ಸಲ ಆದಮೇಲೆ ಕಟ್ಟಿಕೊಂಡದ್ದನ್ನು ಬಿಡುತ್ತಾರೆಯೆ? ಬಿಡುವುದಕ್ಕಾಗುತ್ತದೆಯೆ? ಒದ್ದುಕೊಳ್ಳುವು ದಕ್ಕಾಗುತ್ತದೆಯೆ? ಹಾಗೆ ಮೊದಲಾದ ಎಷ್ಟು ಸಂಸಾರಗಳು ನೆಟ್ಟಗಿಲ್ಲ? ಒಪ್ಪಿ ಆದದ್ದು ಎಷ್ಟು ಕೆಟ್ಟಿಲ್ಲ? ಅಲ್ಲಿ. ಇಲ್ಲಿ. ಉದಾಸೀನದಿಂದ ತೊಡಗಿದುದೂ ಎಷ್ಟು ಒಪ್ಪವಾಗಿಲ್ಲ? ಅಚ್ಚುಮೆಚ್ಚಾಗಿಲ್ಲ? ಹೇಳಿದೆನೇ – ಬರಿಯ ಭ್ರಾಂತಿ ಎಂದು. ಯಾವ ಯಾವುದು ಹೇಗೆ ಹೇಗೆ ಆಗಬೇಕೊ ಅದು ಆಗಿಯೇ ತೀರುತ್ತದೆ. ನಮ್ಮ ಭಾಗಕ್ಕೆ ಬಂದುದನ್ನು ನಾವು ಭೋಗಿಸಿಯೇ ಮುಗಿಯಬೇಕು. 'ಅನ್ನಂ ನ ನಿಂದ್ಯಾತ್' ಎಂಬ ವಾಕ್ಯ ಎಷ್ಟು ಧರ್ಮವೊ 'ದಾಂಪತ್ಯಂ ನ ನಿಂದ್ಯಾತ್' ಎಂಬುದೂ ಅಷ್ಟೇ ಧರ್ಮವಾಗಬಲ್ಲುದು. ಅದಕ್ಕಿಂತ ಹೆಚ್ಚು ಧರ್ಮ. ಅನ್ನ ನಿಂದೆಯಿಂದ ನಷ್ಟ ಒಬ್ಬರಿಗೆ. ದಂಪತಿಗಳಾದವರು ಒಬ್ಬರು ಇನ್ನೊಬ್ಬರನ್ನು ನಿಂದಿಸಿದರೆ ಇಬ್ಬರಿಗೂ ಕಷ್ಟ. ಮಕ್ಕಳಿದ್ದ ಮನೆಯಲ್ಲಿ ಪರಮಕಷ್ಟ. ಎಲ್ಲ ಲೌಕಿಕ ಧರ್ಮಕ್ಕೂ ಗಾರ್ಹಸ್ಥ್ಯವೇ ಆಶ್ರಯವಾದ್ದರಿಂದ ದಾಂಪತ್ಯನಿಷ್ಠವಾದ ನಮ್ಮ ಸಮಾಜದಲ್ಲಂತೂ ಮದುವೆಯನ್ನೂ ಮದುವೆಯಾದ ಹೆಂಡತಿಯನ್ನೂ ಯಾರೂ ಹಳಿಯಬಾರದು. ಈ ಸಂಬಂಧದಲ್ಲಿ ಸರ್ವಥಾ ಬೇಸರಪಡಬಾರದು. ಸುತರಾಂ ಪ್ರಯೋಜನವಿಲ್ಲ.

ಇನ್ನು ಹೆಣ್ಣು ಹುಟ್ಟಿತು ಎಂದಕೂಡಲೆ ಜನ ಏಕೆ 'ಮೂಗುಮುರಿಯ'ಬೇಕು? ಗಂಡನ್ನೇ ಹೆತ್ತು ಹೆತ್ತು ಒಂದು ಹೆಣ್ಣಾಗಲಿಲ್ಲವಲ್ಲಾ ಎಂದು ಗೋಳಾಡಿದವರು ಇದ್ದಾರೆ.

ಆದ ಗಂಡಿಗೆ ಹೆಣ್ಣು ಸಂಬೋಧನೆ ಮಾಡಿ, ತಲೆಗೂದಲು ಬಾಚಿ, ಹೆರಳುಹಾಕಿ, ಕಣ್ಣಿಗೆ ಕಪ್ಪಿಟ್ಟು, ಮಗಳುಡೆ ಉಡಿಸಿ ತುಷ್ಟಿಪಟ್ಟವರು ಇನ್ನೆಷ್ಟು ಮಂದಿ ಇಲ್ಲ? ಬರಿಯ ಗಂಡೇ ಹುಟ್ಟಿದರೆ ಕುಲಾಭಿವೃದ್ಧಿ ಹೇಗಾಗಬೇಕೊ! ಹೆಣ್ಣಿಂದ ಕುಲ, ಸಂತತಿಗಳೇ ಹೊರತು ಕೇವಲ ಗಂಡುಸಂಖ್ಯೆ ಪ್ರಬಲವಾದಷ್ಟೂ ಜನ ಕ್ಷೀಣವಾಗುವುದು ಸರಿ.

ಹೆಣ್ಣಿಗೆ ಹಿಂದೆ ಬಹಳ ತೊಂದರೆ ಕೊಟ್ಟಿದ್ದಾರೆ. ಎಲ್ಲಿ ಕೊಟ್ಟಿಲ್ಲ? ದನದಂತೆ ಬೆಳೆದ ಗಂಡು ಗಂಡಸುತನವೆಂದರೆ ಗಡಸುತನವೆಂದು ನಂಬಿ ತನ್ನ ಬಲ ನಡೆದಂತೆಲ್ಲ ಹೆಣ್ಣು ಲೋಕವನ್ನು ಕೈಗೆ ಸಿಕ್ಕಿಸಿಕೊಂಡು ಹೊಸಕಿರುವುದುಂಟು. ತನ್ನ ಭೋಗಕ್ಕಾಗಿ, ಬಲಾತ್ಕಾರದಿಂದ ಅದನ್ನು ಬಳಸಿರುವುದುಂಟು. ಹಿಂಸ್ರ ಜಂತು ಇನ್ನೇನು ಮಾಡಬಲ್ಲದು?

ತನ್ನಂತಿರುವ ಇತರ ಜಂತುಗಳೊಡನೆ ಹೋರಾಡಿ ಗೆಲ್ಲಬೇಕು–ಉಳಿಯಬೇಕು? ಇಲ್ಲವೇ, ಸೋಲಬೇಕು. ಗೆದ್ದು ಉಳಿಯಿತೋ ಸಾಧುವಾದ್ದನ್ನು ತನ್ನದಾಗಿಸಿಕೊಂಡು ಭೋಗಿಸಬೇಕೆನ್ನುತ್ತದೆ. ಈ ಕಾಡುಬುದ್ಧಿಗೆ ವೀರವೆಂದು ಹೆಸರಿಟ್ಟು ಲೋಕ ಅದನ್ನು ಮೆಚ್ಚುತ್ತದೆ. ಅದನ್ನು ಕುರಿತು ಕುರಿಕವಿಕುಲ ಪದ್ಯ, ನಾಟಕ ಬರೆಯುತ್ತವೆ. ಕಾಡುತನವನ್ನು ಕಡಮೆಮಾಡಿಕೊಂಡೇ ಸಂಸಾರಕ್ಕೆ ತಿದ್ದಿ ಪಳಗಿರುವ ಹೆಣ್ಣು ಜೀವಕ್ಕೆ ಹೊಗಲೆಲ್ಲಿ? ಒಂದು ಕಡೆ ಚೆಲುವು, ನಯ, ಮೃದು ಸಂಸ್ಕಾರ, ಲಲಿತತೆ ಇವೇ ದೊಡ್ಡವೆಂದು ಹೇಳಿಕೊಟ್ಟು ಬೆಳಸಿದ ಸಂಸ್ಕೃತಿಗೂ ಹೆಣ್ಣು ಸಮಾಜಕ್ಕೂ ಕಾಡಿನ ಕೈಯಿಂದ ಕೇಡುತಾನೆ ಸಂಭವಿಸೀತು? ಅಥವಾ, ತಾನು ಒರಟು, ಕಗ್ಗಲಿ, ಕತ್ತಾಳೆ, ಭೂತಾಳೆ ಆಗಬೇಕು–ಇದನ್ನಿದಿರಿಸುವುದಕ್ಕೆ ಎಂಬುದು ಹೆಣ್ಣಿಗೆ ಸರಿಯಾದೀತೊ? ಪ್ರಮೀಳಾಮಂಡಲಿಗಳು, ಸ್ತ್ರೀಗರುಡುರು, M.A.W.M.W. (ಮಿಡ್ಲ್ ಏಜೆಡ್ ವಿಮೆನ್ಸ್ ಮಿಲಿಟಂಟ್ ವಿಂಗ್) ಸಿದ್ಧವಾಗಲಿ. ತಪ್ಪೇನೂ ಅಲ್ಲ. ಆದರೆ ಮಡದಿ, ತಾಯಿ, ಮಗಳು ಎಂಬ ಮಾತಿನ ಒಳಮೈ ಮಾರ್ದವವನ್ನು ಕಾಪಾಡಬೇಕು. ಹೆಣ್ಣುತನ ಉಳಿಸಿಕೊಳ್ಳಬೇಕು. ಒರಟಿಗೆ ಒರಟು ಕನಲಿ, ಉಗುರು ಹಲ್ಲು ತೆರೆದರೆ ನಯ ಸಂಸ್ಕೃತಿ ಹುಟ್ಟಲಾರದು; ಹರಡಲಾರದು.

ಇನ್ನೂ ಒಂದು ಮಾತು ಕೇಳುತ್ತೇನೆ : ಹುಲಿ, ಸಿಂಹಗಳನ್ನು ಮೆಚ್ಚಿಕೊಳ್ಳುತ್ತ ವೀರರನ್ನು ಹುಲಿಗೂ ಸಿಂಹಕ್ಕೂ ಹೋಲಿಸಿದ ಕವಿಗಳು ದುಷ್ಟರಲ್ಲ. ಋಷಿಗಳೇ ಕೆಲವರು ಪುರುಷರ್ಷಭಃ, ನರಶಾರ್ದೂಲಃ ಎಂದ ಮಾತನ್ನು ಯಾರರಿಯರು? ಆದರೆ ನಿಜವಾಗಿ ಹುಲಿಯೊ ಸಿಂಹವೊ ಎದುರಿಗೆ ಅಬ್ಬರಿಸುತ್ತ ನಿಂತು ಅವರನ್ನೇ ತಿನ್ನುತ್ತೇನೆಂದಾಗ ಅವರೇನು ಮಾಡುತ್ತಾರೆ? ಒಂದೋ ಅದನ್ನು ಸಾಧುಮಾಡುತ್ತಾರೆ–ಇದು ಋಷಿಗಳಿಗೆ ಮಾತ್ರ ಸಾಧ್ಯವಿತ್ತು ಹಿಂದೆ. ಅಥವಾ, ಅವುಗಳ ಬಾಯಿಗೆ ಸಿಕ್ಕಿ ಜೀರ್ಣವಾಗುತ್ತಾರೆ. ಇದು ಸಾಮಾನ್ಯ; ನಮ್ಮಂಥ ಬಹುಮಂದಿಯ ಗತಿ. ಶಕ್ತರು, ಜಾಣರು ಆದರೆ ಅವನ್ನು ಹಿಡಿದು ಬೋನಿನಲ್ಲಿರಿಸಿ ವಿನೋದದ ಸಾಮಗ್ರಿಯನ್ನಾಗಿ ಮಾಡಿ ಹೆಂಗಸರು

ಮಕ್ಕಳಿಗೆ, ನಮಗೆ ಅವನ್ನು ತೋರಿಸುತ್ತಾರೆ, ಆಡಿಸುತ್ತಾರೆ. ಉಂ.... ತಮ್ಮ ಜೀವನ ಮಾಡಿಕೊಳ್ಳುತ್ತಾರೆ. ಅದು ಅಡಗದೆ ಕೊಲ್ಲಲು ನಿಮಿರಿನಿಂತರೆ ಹೊಡೆದುಹಾಕುತ್ತಾರೆ. ಇಲ್ಲವೇ ಒಂದು ೩೦೩ ನಂಬರ್ ಪಿಸ್ತೂಲು ಹಾರಿಸಿ ಸುಡುತ್ತಾರೆ. ಬೇರೆ ದಾರಿಯುಂಟೊ ಕ್ಷೇಮಕ್ಕೆ? ಸಮಾಜದಲ್ಲಿದ್ದುಕೊಂಡು ಎಲ್ಲರ ಕ್ಷೇಮವನ್ನೂ ಗಳಿಸಬೇಕೆಂದಾದರೆ ಶಾಂತಿ ಕಲೆಗಳಿಗೇ ಬೆಲೆ ಎಂಬುದನ್ನೂ ಲೋಕ ಅರಿತುಕೊಂಡಿದೆ. ಅದಕ್ಕೆ ಹೆಣ್ಣಿನ ಮಾನ, ಹೆಣ್ಣಿನ ಪ್ರಾಣ, ಹೆಣ್ಣಿನ ನಯಗಳನ್ನು ಕಾಪಾಡುವುದು ಮೊದಲ ಧರ್ಮ ಎಂದೂ ಸಾರಿದೆ. ಇಂಥ ಒಂದು ಜೀವ ನಮ್ಮ ಮನೆಯಲ್ಲಿ ಹುಟ್ಟಿತು ಎಂದು ಕಿವಿಗೆ ಬಿದ್ದ ಕೂಡಲೆ ಏಕೆ ಕಂಗೆಡಬೇಕು? ನಿಟ್ಟುಸಿರಿಡಬೇಕು?

ಈ ಕಾಲದಲ್ಲಿ ಗಂಡು ಹುಟ್ಟಿದರೆ ಯಾವ ಅತಿಶಯ, ಯಾವ ಕೋಡು? ಎರಡರಿಂದಲೂ ಒಂದೇ ಪೇಚಾಟ. ಒಂದೇ ಖರ್ಚು. ಪಿತ್ತ, ಪೀಡೆ ಬಲಿತರೆ ಎರಡೂ ಪಿಶಾಚಿಯೇ. ಹುಟ್ಟಿದ ಮಗ ಅಯೋಗ್ಯನಾದರೆ ? ಅನರ್ಸ್ ಪ್ಯಾಸು ಮಾಡೊ ಮಗನೆ ಎಂದರೆ ಅಡ್ಡೆ ಹೊರುತೇನೆ, ಇಟ್ಟಿಗೆ ಇಡುತೇನೆ, ಮೊಟ್ಟೆ ಹಾಕುತ್ತೇನೆ, ಚಕ್ಕಳ ಹೊಲಿಯುತ್ತೇನೆ ಎಂದರೆ ವಿದ್ಯಾವಂತ ತಂದೆಗೆ ಏನು ಸಂತೋಷ? ಪ್ರಯೋಜನದ ಮಾತು ಹಾಗಿರಲಿ. ಅವನು ಪೋಲಿ ಪಟಿಂಗ ಆದರೆ? ೧೦೦ಕ್ಕೆ ಗ್ರೇಸ್ ದೊರೆಯಬಹುದಾದ ಮಟ್ಟದ ೧೮ ಅಂಕಗಳು ದೊರಕದೆ ಎಲ್ಲ ಪರೀಕ್ಷೆಗಳಲ್ಲಿಯೂ ನಾಪಾಸಾಗಿ ಕೂಳಿಗೆ ದಂಡವಾಗಿ ಮನೆಯಲ್ಲಿ ಕುಳಿತರೆ? ಅಥವಾ ಎಂಥ ಪ್ಯಾಸು ಮಾಡಿದರೂ ಏನು ಯೋಗ್ಯತೆ ಸಂಪಾದಿಸಿಕೊಂಡಿದ್ದರೂ ಗಳಿಕೆಯ ಒಳ್ಳೆಯ ಚಾಕರಿ ಸಿಕ್ಕದೆ, ದಕ್ಕದೆ ಹೋದರೆ? ಚಿಂತೆಯಲ್ಲವೊ? ಹೆಣ್ಣು ಮಗುವಿನ ಅದೃಷ್ಟವೂ ಹಾಗೆಯೇ. ಆಕೆಯ ಹಣೆಯಲ್ಲಿ ಸುಖ ಬರೆದಿದ್ದರೆ, ಅವಳು ಜಾಣಳಾಗಿದ್ದರೆ ಅವಳ ಮನೆಯಲ್ಲಿ ಅವಳು ಸುಖವಾಗಿರುತ್ತಾಳೆ. ಇಲ್ಲವೇ, ಅವಳ ಓದು ಬರಹ ಮುಂದುವರಿಸಿ. ತನ್ನ ಜೀವನ ತಾನು ಮಾಡಿಕೊಳ್ಳುತ್ತಾಳೆ. ಆ ಮಗಳ ಹೆಸರಿಗೆ ಸ್ವಲ್ಪ ವಿಮೆ ಮಾಡಿಡಿ; ನಿಮ್ಮ ತರುವಾಯ ಬದುಕಿಕೊಳ್ಳುತ್ತಾಳೆ. ಹಾಗೂ ಇಲ್ಲ, 'ನಸೀಬಿಲ್ಲದ' ಮಗನು ಹೇಗೆ ವರ್ಜ್ಯನಲ್ಲವೊ ಸುಖ ತಪ್ಪಿದ ಮಗಳೂ ಹಾಗೇ. ನೀವಿರುವವರೆಗೂ ನಿಮ್ಮ ಮಗು ನಿಮ್ಮ ಮನೆಯಲ್ಲಿರುತ್ತೆ. ಬಳ್ಳಿಗೆ ಕಾಯಿ ಹೊರೆಯೆ? ಹೊಟ್ಟೆಯಲ್ಲಿ ಹುಟ್ಟಿದ ಮಗು ನೀವು ತಿಂದದ್ದನ್ನು ತಿನ್ನುತ್ತೆ; ನಿಮ್ಮ ನೆರವಿಗೆ ನಿಮ್ಮ ನೆರಳಲ್ಲಿ ಉಳಿಯುತ್ತೆ. ನಿಜವೊ ಸುಳ್ಳೊ? ಗಂಡು ಗಂಟಿಗತ್ತರೆ ಹೆಣ್ಣು ಹೆಣಕ್ಕತ್ತಿತು ಎನ್ನುತ್ತಾರೆ. ಗಂಡು ಮರ. ಹೆಣ್ಣು ಹೂ. ಅದನ್ನು ಬಾಡಿಸುವುದು ಪೀಡಿಸುವುದು ಯಾವ ನ್ಯಾಯ? ತಸ್ಮಾತ್, – ಮಾ ಶುಚಃ

ಪ್ರತಿ ಮನೆಯಲ್ಲಿಯೂ ಏನಾದರೊಂದು ಕಾರ್ಪಣ್ಯವಿರುತ್ತದೆಯೆಂಬುದು ನಿಜವಾದರೂ ಯಾವುದೋ ಹರ್ಷವೂ ಇರುತ್ತದೆಯೆಂಬುದು ನಿಜವೇಯೆ. ಒಬ್ಬರಿಗೊಬ್ಬರು ಗೋಣಗಿಯೊ ಎಗರಾಡಿಯೊ ಧರ್ಮಕ್ಕೆ ಕಟ್ಟುಬಿದ್ದೊ ತಮ್ಮದೆಂಬ

ಅಭಿಮಾನದಿಂದಲೊ ಒಬ್ಬರಿಗೊಬ್ಬರು ಆಗುತ್ತಾರೆ. ಆಗದಿದ್ದರೆ ಬೇರೆ ಹೋಗುತ್ತಾರೆ. ಎರಡೂ ಲಾಭವೇ. ಈ ನಡುವೆ ಒಡನಿದ್ದು ಸಂಸಾರ ನಡಸಬೇಕಾದ ಗಂಡು ಹೆಣ್ಣು ಪರಸ್ಪರ ನಡಸಿಕೊಂಡರಾಯಿತು. ಅದರಲ್ಲಿ ಗಂಡಿಗೆ ಹೆಚ್ಚೇನು ಬೇಕು? ಮನೆಗೆ ಬಂದ ಹೊತ್ತಿಗೆ ಕೈಗೆ 'ಎರಡು' ನೀರು; ಹೊಟ್ಟೆಗೆ ಒಂದಿಷ್ಟು ಅನ್ನ. ಚಂಚಗಳಲ್ಲಿ ತಿನ್ನುವ ಈ ಕಾಲದಲ್ಲಿ ಕೈ ನೀರು ಕೂಡ ಬೇಡ. ಇವನ ರುಚಿಯೇನು, ರಂಜನೆಯೇನು ಎಂದು ಅರಿಯಲು ಜಾಣೆಗೆ ಎಷ್ಟು ದಿನ ಬೇಕು? ಅವನಿಗೆ ಸೌತೆಯೊ ಹಾಗಲವೊ, ಮಜ್ಜಿಗೆ ಹುಳಿಯೊ ಒಡೆಯೊ, ಪಾಯಸವೊ ಇಷ್ಟವಾದ್ದನ್ನು ಒಂದಿಷ್ಟು ತಯಾರಿಸಿ ಒಂದೊಳ್ಳೆಯ ಮಾತಾಡಿ ಕಳಿಸಿದರೆ ಆ ಜೀವ ತೃಪ್ತವಾಯಿತು. ಅದರ ಸಂತೋಷಕ್ಕೂ ಅಗತ್ಯಕ್ಕೂ ಒಗ್ಗಿ ಒಂದು ನಿಮಿಷ ತೊನೆದರೆ, ಆಡಿದರೆ ತಣಿಯಿತು; ದಣಿಯಿತು. ಉಳಿದ ಎಲ್ಲ ಅಂಶದಲ್ಲಿಯೂ ಹೇಸರಕತ್ತೆಯಂತೆ ಗಂಡು ಹೆಣ್ಣಿಗಾಗಿ ದುಡಿಯುತ್ತದೆ. ತನ್ನ ಹೆಣ್ಣನ್ನು ಸಂತೋಷಗೊಳಿಸಬೇಕು ಎಂದು ಪಾಡುಪಡುತ್ತದೆ. ಎಚ್ಚರತಪ್ಪಿ ಅದರ ದಿಕ್ಕಲ್ಲಿ ಯಾರನ್ನ ಸುಳಿದರೆ, ಕಣ್ಣೆತ್ತಿ ನೋಡಿದರೆ ಬುಸ್ಸೆನ್ನುತ್ತದೆ. ಅರ್ಧಾಂಗಿ, ಭಾರ್ಯೆ ಎಂದು ಭರಣೆ, ಪೋಷಣೆ ಮಾಡುತ್ತದೆ. ಅರ್ಧವೇ ಏಕೆ, ಮುಕ್ಕಾಲು ಅಂಗಿಯಷ್ಟು ಅದು ಹರಡಿ ಬೆಳೆದಾಗಲೂ ಸಹಿಸಿಕೊಳ್ಳುತ್ತದೆ. ಅದರ ಗುಲಾಮಗಿರಿ ಒಪ್ಪಿ ಸಹವಾಸಕ್ಕೆ, ಸೇವೆಗೆ ಹಾತೊರೆಯುತ್ತದೆ. ಪ್ರಸಾದ ಬೇಡಿ ವಿನೀತವಾಗುತ್ತದೆ. ಹೇಳಿದ ಕೆಲಸ ಮಾಡಿ, ಕೇಳಿದ್ದನ್ನು ತಂದುಕೊಟ್ಟು, ತೆಂಗು ತುರಿದು, ಹುಯ್ ಗಡುಬಿನ ಹಿಟ್ಟು ರುಬ್ಬಿ, ತೊಟ್ಟಿಲ ಮಕ್ಕಳನ್ನು ತೂಗಿ ಮಲಗಿಸಿ, ಬೆಳೆದವರನ್ನು ಹೊತ್ತು ಪೇಟೆಗೆ ಕೊಂಡುಹೋಗಿ ಜಂಬೂಸವ್ವಾರಿ ಮಾಡಿಸಿಕೊಂಡು, ತೋರಿಸಿಕೊಂಡು ಹಿಂದಿರುಗಿ ಬರುತ್ತದೆ. ಇದು ಯಾವ ಗೋಜು? ಹೆಣ್ಣು ಒಲಿಯಲಿ ಎಂದಲ್ಲವೆ ? ಹೊರಗೆ ಯಾರನ್ನು ಹೊಡೆದು ಬಡಿದೊ ಯಾರಿಗೆ ಬಾಲ ಅಲ್ಲಾಡಿಸಿಯೊ ಜೀತಮಾಡಿಯೊ ಹಲ್ಲು ಕಿರಿದೊ ಮನೆಗೆ ಬೇಕಾದುದನ್ನು ತಂದು ಗಂಡಸು ದುಮುಕಿಸುತ್ತಾನೆ. ಅದನ್ನು ಅನ್ನವನ್ನಾಗಿ, ಸಂತೋಷವನ್ನಾಗಿ ಮಾಡುವುದು ತನಗೂ ಪ್ರಯೋಜನವೇ.

ಇತ್ತ ಗಂಡನ ಕಡೆಯಿಂದ ಹೀಗೆ ಪ್ರಯೋಜನವಾದರೆ ಅತ್ತ ತಾಯಿ ತಂದೆ ಹೊರಿಸಿ ಕಳಿಸುವ ಲಾಭ ಸೇರುತ್ತದೆ. ಈವರೆಗೂ ತಂದೆಯ ಆಸ್ತಿಯಲ್ಲಿ ಮಗಳಿಗೆ ಭಾಗವಿರುತ್ತಿರಲಿಲ್ಲವಾದರೂ ದೊರೆವ ಒಟ್ಟು ಪ್ರಯೋಜನಕ್ಕೆ ಯಾವ ಚ್ಯುತಿ ಇತ್ತು? ಮದುವೆ, ಪ್ರಸ್ಥ, ಬಸಿರು, ಬಾಣಂತನ, ಅವಳ ಮನೆಯ ಮಂಗಳ, ಅಳಿಯನ ಸಮಯ ಎಂದು ಪ್ರಯೋಜನದ ಕಾಲುವೆ ಹರಿಯುತ್ತಿರಲಿಲ್ಲವೆ ? ಗಂಡೇ ಎಂದಿಗೂ ತೆರುವವನು. ಅವನೇ ಹೋತ. ಇಲ್ಲಿ ಮನೆಯ ಮರ್ಯಾದೆಯೆಲ್ಲ ಅವಳ ಕೈಯಲ್ಲಿಯೇ ಇರುತ್ತದೆ. ಇವಳು ಒಪ್ಪಿ ಕೊಟ್ಟರೆ ಯಾರಿಗಾದರೂ ಉಂಟು. ಇಲ್ಲವಾದರೆ ಎಂಜಲು ಕೈಯಿಂದ ಯಾರೂ ಒಂದು ಕಾಗೆಯನ್ನು ಹೊಡೆಯುವ ಹಾಗಿಲ್ಲ. ಅವಳು ಅತ್ತು ಕೂಗಿ ಹೊರಗಿನವರ ಕರುಣೆಯನ್ನೊ ನೆರವನ್ನೊ ಕರೆವೆನೆಂದರೆ ಮಹಾವಿಷ್ಣುವೇ ನಿಮಗೆ ಮರೆ ನೀಡಲಾರ. ಅವಳನ್ನು ಬಿಡಬೇಕು, ಇಲ್ಲವೇ ನಿಮ್ಮ ಜೀವ ಬಿಡಬೇಕು.

ಎರಡೂ ಕಷ್ಟ. ಎರಡಕ್ಕೂ ಇಷ್ಟಪಡದಿರುವುದೇ ಸುಲಭವಾಗಿರುವಾಗ ತನ್ನ ಪಾಲಿಗೆ ಬಂದ ಚೆಂಡಿಗೂ ಮಹಾಲಕ್ಷ್ಮಿಗೂ ಹೊಂದಿಕೊಂಡು, ಇರುವಷ್ಟು ದಿನ ತಳ್ಳುವುದು ಜ್ಞಾನಿಗೆ ಒಪ್ಪುವ ಕೃತ್ಯ. ಆತ್ಮಹತ್ಯವನ್ನು ಎಲ್ಲ ದೊಡ್ಡ ಧರ್ಮಗಳೂ ನಿಷೇಧಿಸಿವೆ. ಜೀವವಿದ್ದರೆ ಇವೊತ್ತಲ್ಲ ನಾಳೆಗೆ ಹೆಂಡತಿ ಸರಿಹೋದಾಳು : ಮಗನಿಗೆ ಕೆಲಸವಾದ ಮೇಲೆ ; ಸೊಸೆ ಮನೆ ಬಿಟ್ಟು ಬೇರೆ ಸಂಸಾರ ಹೋದ ಮೇಲೆ; ಹೆಣ್ಣು ಮಕ್ಕಳು ಬೇಕಾದ್ದನ್ನು ತೆಗೆದುಕೊಂಡು ಅತ್ತೆಯ ಮನೆಗಳಿಗೆ ಹೋದಮೇಲೆ; ಅಳಿಯಂದಿರಿಗೆ ಅದು ಇದು ಬೇಕಾದ್ದನ್ನು ಕೊಟ್ಟಾದಮೇಲೆ. ಏಕಾಗಬಾರದು? ಇನ್ನಾರಿಗೆ ಮಾಡಬೇಕು?

ಸಾವಧಾನವಾಗಿ ಯೋಚಿಸಿ ನೋಡಿದರೆ ಹೆಂಡತಿಯದು ಒಂದು ಕಡೆ ಪದವಿ; ಇನ್ನೊಂದು ಕಡೆ ಪ್ರತಿಜ್ಞೆಗೂ ಒಪ್ಪಂದಕ್ಕೂ ಕಟ್ಟುಬಿದ್ದದ್ದು. ಅದು ವೃತ್ತಿ ಅಥವಾ ಉದ್ಯೋಗವೂ ಹೌದು. ಹೆಂಗಸಿಗೆ ಈ ಉದ್ಯೋಗ ಸಿದ್ಧವಾಗಿ, ಸುರಕ್ಷಿತವಾಗಿ, ಸುಪ್ರತಿಷ್ಠಿತವಾಗಿರುವಾಗ ತಾನು ಉದ್ಯೋಗಕ್ಕಾಗಿ ಹೊರಗೆ ಅಲೆಯಬೇಕಾಗಿಲ್ಲ. ನೀಚ ಅಧಿಕಾರಿಗಳ ಪೀಡೆ ಇಲ್ಲ. ಕೆಳನೌಕರರ ಕೋಟಲೆ ಇಲ್ಲ. ಬೆಲ್ಲದ ಸುತ್ತ ನೊಣ ಮುಸುಕುವ ಕಾಟವಿಲ್ಲ. ಸರ್ವಥಾ ಸುಖವಾದ ಬಾಳು ಹೆಣ್ಣ ಬಾಳು ಎನ್ನಿಸುತ್ತದೆ.

ಇಂದೋ : ಗಂಡಸು ಮಾಡಬಹುದಾದ್ದನ್ನೆಲ್ಲ ಹೆಂಗಸೂ ಮಾಡಬಲ್ಲಳೆಂದು ಗೊತ್ತಾಗಿದೆ. ನೆಲ ನೀರು ಗಾಳಿಗಳಲ್ಲಿ ಎಲ್ಲಿ ಬೇಕಾದರೂ ಅವಳು ಹೋಗಬಲ್ಲಳು. ಅತಿಯಾಗಿ ಮೈದುಡಿಸಿ ದುಸ್ಸಾಹಸಕ್ಕೆ ಈಡಾದರೆ ಅವಳಿಗೆ ಗಾಸಿಯಾಗಬಹುದೇ ಹೊರತು ಸಾಧಾರಣವಾಗಿ ಶ್ರಮಿಸಬೇಕಾಗಿಲ್ಲ. ತಾನೂ ಶ್ರಮಿಸಿ ಬೆವರು ಸುರಿಸಬಲ್ಲೆ, ತೋಳ ಮತ್ತು ಮೊಳಕಾಲ ಮಾಂಸಖಂಡಗಳನ್ನು ಬೆಳೆಸಬಲ್ಲೆ, ಕಡಲಲ್ಲಿ ಈಸಬಲ್ಲೆ, ಜೂಜಿನ ಕುದುರೆಯೇರಿ ಜೂಜಲ್ಲಿ ಗೆಲ್ಲಬಲ್ಲೆ ಎಂದು ಕಸರತ್ ಮಾಡಿ, ಹಸಿ ಕಡಲೆ ತಿಂದು, ಉಸ್ತಾದಿಯೂ ಆದಾಳು. ಹಲ್ಲಲ್ಲಿ, ಕೂದಲಲ್ಲಿ ಕಲ್ಲರೆ ಎತ್ತಿ ತೂಗಿಯಾಳು. ಅದಕ್ಕೆ ಒಲಿಯುವ ಜನಕ್ಕೆ ಅಲ್ಲಿಯೂ ಮೋಹ ಉಂಟೇ. ಹೆಣ್ಣುತನ ಉಳಿದಿರುವವರೆಗೂ ಯಾವುದೂ ನಷ್ಟವಲ್ಲ. ಗಂಡು ವೇಷವನ್ನೊ ಸಿಪಾಯಿ ಸಜ್ಜನ್ನೊ ಧರಿಸಿದರೆ ಹೆಚ್ಚು ಮಾದಕವಾಗಬಲ್ಲ ಶಕ್ತಿ ಅವಳದು. ಸೃಷ್ಟಿಯಲ್ಲಿ ಹೆಣ್ಣ ಆಕರ್ಷಣೆಗೆ ಇತಿಯಿಲ್ಲ, ಮಿತಿಯಿಲ್ಲ. ಹೆಣ್ಣಿನ ಎಲ್ಲ ವಿಶೇಷಗಳಿಗೂ  ವಿಕಾರಗಳಿಗೂ ಗಂಡು ಹೃದಯಗಳು ಹಾತೊರೆಯುವುವು, ಕರಗುವುವು, ಬಿರಿಯುವುವು.

ಆದ್ದರಿಂದ ಹೆಣ್ಣಿಗೆ ಅಬಲೆಯೆಂಬ ಮಾತು ಎಂದಿಗೂ ಒಪ್ಪದು. ಆ ಮಾತು ಮುಖವಾಡ, ನಟನೆ! ಗಂಡು ಹೆಣ್ಣಿನ ವಿಷಯದಲ್ಲಿ ನುಡಿದು ನಡಸಿರುವ ಒಂದು ಮರ್ಯಾದೆ; ಆಕೆಯ ರಕ್ಷಣೆಯನ್ನು ಸಾಧಿಸುವ ಒಂದು ನಯ. ಎಂತ ನೇರ್ಚಿನ ಎಂತ ಜೂಟಿನ ಎಂತವಾರುಲೈನ ಕಾಂತದಾಸುಲೇ–ಎಂದ ತ್ಯಾಗಬ್ರಹ್ಮನಿಗೆ ಸತ್ಯದ ಈ ಸ್ವರೂಪ ತಿಳಿದಿತ್ತು. ಇಂಥ ಮಾತು ದುಃಖದಿಂದ ಆಡಿದ ಮಾತಾಗಿರಬಹುದು; ಸ್ವಾಭಿಮಾನ ಸ್ವಶಕ್ತಿಗಳು ಕುಂದಿ ಗಂಡು ಆಡಿದ್ದಾಗಿರಬಹುದು; ಮೋಹಿತವಾಗಿ ಹತವಾಗಿ

ಒಪ್ಪಿ ನಡೆಸುವ ಜೀವವಾಗಿರಬಹುದು. ಗಂಡಿನ ಒರಟುತನವನ್ನು ಸಹಿಸಿಕೊಂಡು ತನ್ನ ಸಂಯಮವನ್ನು ಹೆಣ್ಣು ಉಳಿಸಿಕೊಳ್ಳುತ್ತಿರುವಾಗ ಅಥವಾ ಸಮಾಜದಲ್ಲಿ ತನಗೆ ಇರುವ ನಿಸ್ಸಹಾಯಕತೆಯ ಲಕ್ಷಣವಾಗಿ ಈ ಬಣ್ಣನೆ ಒಪ್ಪಬಹುದು. ಫಲವೇನೊ ಒಂದೇ. ಸೋತಂತೆ ನಟಿಸಿ ಗೆಲ್ಲುವವಳು ಹೆಂಗಸು. ಜೋಯಿಸರು ಹೆಂಡತಿಯ ಸ್ಥಾನವನ್ನು ಶತ್ರು ಸ್ಥಾನವೆನ್ನುತ್ತಾರಂತೆ. ಹೊರ ಶತ್ರುವಿಗೂ ಇದಕ್ಕೂ ಒಂದೇ ವ್ಯತ್ಯಾಸ – ಒಡನೆ ಬಾಳಬೇಕಾದ ಶತ್ರು ಇವಳು; ದಿನವೂ ಸೋಲಿಸಿ ಶರಣು ಮಾಡುತ್ತಿದ್ದರೂ ಸವರಿಸಿಕೊಂಡು ನಡೆಯಬೇಕಾಗಿರುವ ಶತ್ರು. ಈ ಶತ್ರುವನ್ನು ಪ್ರೀತಿಯ ಪ್ರಕಾರಗಳಲ್ಲಿ, ಪರೋಕ್ಷ ರೀತಿಗಳಲ್ಲಿ ಹೊಂದಿಸಿಕೊಂಡರೆಯೇ ಉಳಿಯಲಾದೀತು. ಪ್ರತಿದಿನವೂ ಗಂಡನ್ನು ಅಡಗಿಸಿ ನಿರ್ವೀರ್ಯವಾಗಿ ಮಾಡುವ ಪ್ರಾಬಲ್ಯ ಹೆಣ್ಣಿನದು. ಹೆಂಗಸು ಬಾಯ್ದೆರೆಯದವರೆಗೂ ಗಂಡಸು ಬದುಕಿದ. ಆಕೆ ಎದುರುಬಿದ್ದರೆ ಬಾಲ ಮುದುರಿ ಹಿಮ್ಮೆಟ್ಟಬೇಕಾದ್ದೇ. ಹೀಗಿರುವಾಗ ಹೆಣ್ಣಿನ ಕೀಳೇನು, ಗಂಡಿನ ಮೇಲೇನು?....ಇನ್ನೂ ಒಂದು ಪ್ರಶ್ನೆ ಕೇಳುತ್ತೇನೆ: ಎಷ್ಟು ಜನ ಗಂಡಸರು ತಮ್ಮ ಹೆಂಡಿರಿಗಿಂತ ಬಲಿಷ್ಠರು, ಬಲ್ಲವರು, ದೂರದರ್ಶಿಗಳು ಇದ್ದಾರು? ಅವರು ತಮ್ಮ ಮರ್ಯಾದೆಯಿಂದ ಇವರಿಗೆ ಇಂಬಾದರೆ ಆ ಗಂಡಂದಿರ ಕೈ ನಡೆದೀತೆ ಹೊರತು ಪ್ರತಿಯಾದರೆ ಇವರಿಗೆ ಈ ಲೋಕದಲ್ಲಿಯಂತೂ ಆಸರೆಯಿಲ್ಲ. ಇಲ್ಲಿ ಸಲ್ಲದವರಿಗೆ ಅಲ್ಲಿಯೂ ಸಲುಗೆಯಿಲ್ಲ ವೆಂಬುದು ಖಂಡಿತ. ಅಣ್ಣನವರ ನುಡಿಗೆ ವ್ಯಾಪ್ತಿ ಈ ಲೌಕಿಕಾರ್ಥದಲ್ಲಿಯೂ ಇದೆ. ಅಥವಾ ಪಠಾಣಿಯಂಥ ಹೆಣ್ಣು ಎದುರಿಗೆ ನಿಂತರೆ ಜೊತೆಗಾತಿಯಾಗಿ ಆಕೆಯನ್ನು ಕೋರಲು ನಮ್ಮ ಎಷ್ಟು ಗಂಡು ಎದೆಮಾಡೀತು? ಸುಮ್ಮನೆ ಹೆಣ್ಣಿನ ಅಬಲತೆಯನ್ನು ಎತ್ತಿ ಗಂಡಿನ ಪ್ರಬಲತೆಯನ್ನು ಅಧಿಕಮಾಡಿ ಬಣ್ಣಿಸಿದರೆ ಬಂತೆ? ಸತ್ಯಂ ವದ.

ಇನ್ನು ಮುಂದೆ ಕಾನೂನಿನ ಅಡ್ಡಿಯೂ ಇಲ್ಲ. ಆಕೆಗೂ ಆಸ್ತಿಯಲ್ಲಿ ಹಕ್ಕುಂಟು; ಒತ್ತಾಯ ಶಿಕ್ಷಣವುಂಟು; ಗಂಡಿನಷ್ಟೇ ಗಟ್ಟಿಯಾಗಿ ಬಲಿಯುವ, ದನಿಯೆತ್ತಿ ಕೂಗುವ ಅವಕಾಶಗಳುಂಟು. ಎಷ್ಟು ಮಾತ್ರ ಬೇಕೆಂದರೆ ಅಷ್ಟೇ ಮಾತ್ರ ಬಟ್ಟೆ ಉಡಬಹುದು. ಕುಡಿಯಬಹುದು, ಕುಣಿಯಬಹುದು. ನೂರು ಜನದ ಬಾಯಿಗೆ ಬಿದ್ದು ಬದುಕಬಹುದು; ಮತಾಂತರವಾಗಬಹುದು ; ದಾಂಪತ್ಯದಿಂದ ಮೋಕ್ಷ ಪಡೆಯಬಹುದು ; ಪುನಃ ಪುನರ್ಭೂ ಆಗಬಹುದು. ಸಂಪಾದನೆಗೆ ಆಕೆಗೆ ಎಲ್ಲ ಕ್ಷೇತ್ರಗಳೂ ತೆರೆವುವು. ರಾಜ್ಯಾಧಿಕಾರಗಳಲ್ಲಿ ಭಾಗವಹಿಸುವ, ಗವರ್ನರ್ ಪ್ರೆಸಿಡೆಂಟ್ ಆಗುವ, ಅರ್ಜೆಂಟೀನಾ ತಾಯ್ಲಾಂಡುಗಳಿಗೆ ರಾಯಭಾರಿಯಾಗುವ ಅಧಿಕಾರವುಂಟು. ವೋಟುಕೊಟ್ಟು ಜನರನ್ನು ಮೇಲೆತ್ತುವ, ಬೇಕಾದಂತೆ ಪದಚ್ಯುತರನ್ನಾಗಿ ಮಾಡುವ ಅನುಕೂಲವುಂಟು; ಎಂದಿನಂತೆಯೇ ಬಾಯುಂಟು. ರಂಪು ಮಾಡುವ, ಸಂಪು ಹೂಡುವ, ಕೋಪ ಗೃಹಗಳಲ್ಲಿ ಸೇರಿ ಚಂಡಿಸುವ ಸ್ವಭಾವ ಮೊದಲಿನಿಂದಲೂ ಇದ್ದೇ ಇದೆ; – ಅದು ಅವರ ಪುಷ್ಪಾಸ್ತ್ರದ ಅಂಶವಲ್ಲ; ಪಾಶುಪತ. ಬಣ್ಣಬೆಡಗುಗಳಂತೂ ಅವರ ಸರ್ವಮಾನ್ಯ. ಜೊತೆಗೆ ಕಣ್ಣೀರುಂಟು. ಇಂಥವರನ್ನು ತಡೆಯುವವರು ಯಾರು? ಹೊಸಕಾಲ ಹೊಸ

ಆವರಣಗಳಲ್ಲಿ ಹೆಣ್ಣಿಗೆ ಎಟುಕದ ಪ್ರಯೋಜನವಾವುದೂ ಇಲ್ಲ; ಆ ಪ್ರಾಬಲ್ಯದ ಮುಂದೆ ಗಂಡಿನ ಆಟ ಏನೂ ನಡೆಯಲಾರದು. ನಾಳೆಗೆ ಸಂರಕ್ಷಣೆ ದೊರೆಯಬೇಕಾದ್ದು ಗಂಡಸಿಗೆ ; ಅಬಲನು ಅವನು.

ಒಂದು ಬಗೆಯಲ್ಲಿ ನೋಡಿದರೆ ಸಮಾಜದಲ್ಲಿ ಇದು ಒಂದು ಮುನ್ನಡೆ. ಅತ್ತೆಗೊಂದು ಕಾಲ ಸೊಸೆಗೊಂದು ಕಾಲ ಎಂಬಂತೆ ಗಂಡಸಿಗೆ ಒಂದು ಕಾಲ ಹೆಂಗಸಿಗೊಂದು ಕಾಲ. ಗಂಡಿನ ಕಾಲಕ್ಕೆ–ಒಂದು ಇನ್ನಿಂಗ್ಸ್ ಆಟ ಮುಗಿದು ಹೋಯಿತು. ಹೆಣ್ಣಿನ ಯುಗ ಹೊಸಿಲ ಮೇಲೆ ಬಂದು ನಿಂತಿದೆ. ಅದರ ಕರಾಳ ಛಾಯೆ ಒಳಕ್ಕೆ ನೋಡಿದೆ. ಗಂಡಸಿನ ಪರಮಾಧಿಪತ್ಯದಲ್ಲಿ ಎಂಬಂತೆ ಈವರೆಗೂ ನಡೆದುಬಂದ ಸಮಾಜ, ಧರ್ಮ, ಕಟ್ಟುಪಾಡು ಆಕೆಗೆ ಅನ್ಯಾಯ ಮಾಡಿದ್ದವು. ಯಾರೂ ಬೇಕೆಂದು ಮಾಡಿರಲಿಲ್ಲವೇನೊ? ಆಕೆಯನ್ನು ಕಷ್ಟಕ್ಕೆ ಒಡ್ಡಬಾರದು, ಆಕೆಯ ಶುಚಿಯನ್ನೂ ನೇಮವನ್ನೂ ಕಾಪಾಡಬೇಕು ಎಂದೇ ಬಹುತರ ಮೊದಲಾದ್ದು. ಅದರ ದುರುಪಯೋಗ ಮಾಡಿತು ಜನ. ಗಂಡಿಗೇ ಎಲ್ಲ ಹಕ್ಕು, ಹೆಣ್ಣಿನದೇ ಎಲ್ಲ ಹೊಣೆ, ತಪ್ಪು ಎಂಬಂತೆ ನಡೆದು ಹೆಣ್ಣನ್ನು ಗಾಸಿಪಡಿಸಿತು. ಇನ್ನೂವರೆಗೆ ಸಂಶಯವೆಲ್ಲ ಹೆಣ್ಣಿನ ಮೇಲೆಯೇ ಇದೆ. ಪ್ರೇಮ, ಪಾತಿವ್ರತ್ಯ, ಧರ್ಮ, ಲಜ್ಜೆ, ಕುಂಭೀಪಾಕ, ಭಯ, ಭಕ್ತಿ ಎಂದು ದೊಡ್ಡ ದೊಡ್ಡ ಮಾತುಗಳನ್ನು ನಿರ್ಮಾಣ ಮಾಡಿಯೊ, ಬಣ್ಣನೆಯ ಮಾತುಗಳನ್ನಾಡಿ ಅದನ್ನು ಹಿಗ್ಗಿಸಿ ಮೇಲೆ ಕೂಡಿಸಿಯೊ, ಒಡವೆ ವಸ್ತ್ರಗಳ ಲಂಚ ಕೊಟ್ಟೊ, ಆರ್ಥಿಕ ಪರಾಧೀನತೆ ಉಂಟುಮಾಡಿಯೊ, ಬೆದರಿಕೆಗಳನ್ನು ಹೂಡಿಯೊ ವಶವಿರಿಸಿಕೊಂಡಿತ್ತು. ಉಡುಗೆ, ತೊಡುಗೆ, ನಡಗೆ ಅಲಂಕಾರ, ಓದು, ಸಂಚಾರ, ಮಾತುಕತೆ ಯಾವುದರಲ್ಲಿಯೂ ಗಂಡಸಿನ ಇಷ್ಟ, ಎಣಿಕೆ ಬೆಲೆಗಳಿಗೇ ಒಳಪಟ್ಟು ನಡೆಯತಕ್ಕದ್ದೆಂದು ವಿಧಿಸಿತ್ತು. ಗಾಳಿ ಬೆಳಕು ಬಿದ್ದರೆ ಕೆಟ್ಟೀತು, ಇತರರಿಗೆ ಕಾಣಿಸಿದರೆ ಕಂದೀತು ಎಂಬಂತೆ ಭಾವಿಸಿ ಮುಖಕ್ಕೆ ತೆರೆಹಾಕಿತು : ಆದರೆ ಲೌಕಿಕ ಆದರ, ಬಲಾತ್ಕಾರ, ನಿರ್ಗತಿಕತೆಗಳಿಂದ ಉಂಟಾದ ಧರ್ಮ ಯಾವ ಧರ್ಮ? ಹಾಗೆ ಭೋಗಿಸಿದ ಸಂತೋಷ ಯಾವ ಸಂತೋಷ ? ಹೃದಯೇ ಗೃಹ್ಯತೇ ನಾರೀ ಎಂದು ನಾಟಕದ ಒಬ್ಬ ವಿಟ ಹೇಳಿದ. ನಾಡಿಗೆ ತಿಳಿಯಲಿಲ್ಲವಾಯಿತು. ಶುಚಿಯಂತೆ, ಧರ್ಮವಂತೆ, ನೇಮವಂತೆ! ಚೀ, ಸಲ್ಲದು. ನಾಳೆ ನೋಡಿ; ನಿಮ್ಮಂತೆಯೇ ಬೆಳೆದು ಓದಿ ಕೆಲಸಕ್ಕೆ ಸೇರಿ, ಗಳಿಸಲೂ ಸ್ವತಂತ್ರವಾಗಿರಲೂ ಅಧಿಕಾರ ದೊರೆತು, ನಿಮಗಿಲ್ಲದ ಯಾವ ಸ್ವರ್ಗ, ನರಕ, ರಾಜಕೀಯ ಸಾಮಾಜಿಕ ಭೀತಿ ತಮಗೂ ಇಲ್ಲದೆ, ವೈದ್ಯ ಚಿಕಿತ್ಸೆಗಳ ಅನುಕೂಲ್ಯ ಸಮರ್ಪಕವಾಗಿ ಸಮವಾಗಿ ಏರ್ಪಟ್ಟು, ದಾಂಪತ್ಯ ವಿಚ್ಛೇದದ ಸೌಲಭ್ಯ ಇಬ್ಬರಿಗೂ ಸಲ್ಲುವಾಗ ಸ್ವಾಧೀನಳಾದ ಹೆಣ್ಣನ್ನು ಒಲಿಸಬೇಕು. ಆಕೆ ಸತಿಯಾಗಿರಬೇಕಾದರೆ ನೀವೂ ಆಕೆಯಲ್ಲಿ ಮಾತ್ರ ವಿಶ್ವಾಸವುಳ್ಳವರಾಗಿದ್ದರೇಯೇ ಸರಿ. ಬಾಂಧವ್ಯ ಆಗ ಸಮಾನ. ಸಮಾನತೆಯಿಲ್ಲದ ಕಡೆ ದೋಷ ಒಬ್ಬರ ಮೇಲೆ ಮಾತ್ರ ಹೊರಲಾರದು. ಎತ್ತಿಗೂ ಸಿಂಹಕ್ಕೂ ಒಂದೇ ಕಾನೂನು ಎಂಬುದು ದಬ್ಬಾಳಿಕೆಗೆ

ನಟ್ಟಿ ಬೇರೊಂದು ಹೆಸರು. One law for the ox and the lion is another name for tyranny – ಎಂದ ಯೇಟ್ಸ್ ಕವಿಯ ಮಾತು ಶತಶಃ ಸತ್ಯ.

ಮುಂದಕ್ಕಿದೆ ಮುದುಕಿಯ ಹಬ್ಬ ಎಂಬರ್ಥದ ತೆಲುಗು ಗಾದೆ ಒಂದುಂಟು. ಹಿಂದೆ ಹೇಗೊ ಹುಟ್ಟಿ ತನ್ನ ಅನುಕೂಲಕ್ಕೆ ಗಂಡಸು ದುಡಿಸಿಕೊಂಡಿರುವ ಒಂದು ಮುದುಕಿಯ ಧರ್ಮ ನಾಳೆ ಪರೀಕ್ಷೆಗೆ ಬರುತ್ತದೆ. ನಿಮ್ಮ ಬಂಡವಾಳ ಬಯಲಿಗೆ ಬರುತ್ತದೆ. ಸದ್ಯ ನಾವು–ವಯಸ್ಸಾದವರು–ಬದುಕಿಕೊಂಡೆವು. ನಾಳೆಯ ಹುಡುಗರ ಪಾಡನ್ನು ಊಹಿಸಿಕೊಂಡರೆ ಮಾತ್ರ ಒಂದೊಂದು ಸಲ ಏನೊ ಹೇಗೊ, ದಿಗಿಲ್ ಅನ್ನಿಸುತ್ತದೆ. ನೀವು ನಿಮ್ಮ ಹೊಸ ಪರಿಸ್ಥಿತಿಯಲ್ಲಿ ಸುಖಿಗಳಾದರೆ ನಮಗಿಂತ ನೀವೇ ನಿಜವಾಗಿ ಧೀರರು; ಪುಣ್ಯಶಾಲಿಗಳು.

ಗಂಡಸರು ಎಷ್ಟು ಮೆರೆದಿರಿ ? ನೀವು ಹೇಳಿದಂತೆ ಕೇಳುತ್ತ, ತಗ್ಗಿ ಬಗ್ಗಿ ನಡೆದ, ಹಾಗೆ ಹೀಗೆ ಕೂಡದೆಂದು ಆಣೆಯಿಟ್ಟು ಅನ್ನ ಬಟ್ಟೆಗೆ ನಿಮಗೆ ಅಧೀನಳನ್ನು ಮಾಡಿಕೊಂಡ ಹೆಂಗಸನ್ನು ಹೇಗೆ ಕಂಡಿರಿ? ಕಸಕ್ಕಿನ್ನ ಕಡೆಯೇ! ನೀವಾಡದ ಮಾತಿತ್ತೆ? ಸ್ತ್ರೀ ಚಾಪಲ್ಯವಂತೆ! ಗಂಡಸು ಚಪಲನಲ್ಲವೊ? ಹೆಣ್ಣು, ಹೆಣ್ಣಕ್ ಅಂತೆ! ನೀವು ಗಂಡೋ, ಗಂಡಕ್ಕೊ? ಎಷ್ಟಾದರೂ ಹೆಂಗಸು ಹೆಂಗಸೇ ಅಂತೆ! ಗಂಡಸರೆಲ್ಲ ಗಂಡಸರೋ? 'ಹೆಣ್ಣು... ಯ ಹಾಗೆ ಅಳುತಾನೆ' – ರಾಮ ರಾಮ! ಗಂಡಂದಿರು ನೀವು ಬದುಕಿರುವಾಗ ಅವರಿಗೆ ಆ ಪಟ್ಟ ಹೇಗೆ ಬರಬಲ್ಲದುರಿ? ಆ ದುಃಖ ನೀವೂ ಗಂಡು ಹೆಕ್ಕಳದ ಮೇಲೆ ಬಲಿತ ಸಮಾಜವೂ ವಿಧಿಸಿದ್ದಲ್ಲವೆ? ಗಂಡು ಅಳುಬುರುಕನಲ್ಲವೊ! ಏನನ್ಯಾಯ! ನಿಮಗೆ ಹಣವೊ ಸೊಕ್ಕೊ ಇದ್ದರೆ ಎಷ್ಟು ಹೆಣ್ಣಾದರೂ ಮದುವೆ ನಿಲ್ಲಬಹುದಂತೆ; ಆಕೆ ನಿಮ್ಮೊಡನೆ ಧಾರಾಳವಾಗಿ ಮಾಡನಾಡಬಾರದು! ನಿಮ್ಮನ್ನು ಹುಡುಕಿಕೊಂಡು ಬಂದವರಿಗೆ ನೀವು ಮನೆಯಲ್ಲಿಲ್ಲ ಎಂದು ನೇರ ಉತ್ತರ ಕೊಡಕೂಡದು. ನೀವು ಕೂಡದೆಂದ ಪುಸ್ತಕ, ಪತ್ರಿಕೆ ಓದಬಾರದು. ನೀವು ಹೊಡೆಯಬೇಕು, ಆಕೆ ಅಳಬಾರದು. ಪಕ್ಕದ ಮನೆಯವರು, ಬೀದಿಯವರು ಏನೆಂದಾರು ಎಂದು ನಿಮಗೆ ಭಯ. ನಾಲ್ವರನ್ನು ನೀವು ಮದುವೆಯಾದರೆ ಅವರಿಗೇನು ಕಡಮೆಯಪ್ಪ,–ನಾಲ್ಕು ಜನ ಹೆಂಡಿರು ಎಂದು ನಿಮಗೆ ಪೌರುಷದ ಕೀರ್ತಿ. ನಿಮ್ಮ ಮನೆಯೇನು ದನದ ಕೊಟ್ಟಿಗೆಯೆ, – ಹೆಣ್ಣನ್ನು ಕೂಡುವುದಕ್ಕೆ? ಆ ಹೆಂಡಿರು ಮನುಷ್ಯರಲ್ಲವೆ? ಒಂದು ಹೆಣ್ಣಿಗೆ ಒಂದು ಅನಾಮತ್ ಗಂಡ ಬೇಡಾ? ಅಥವಾ ಒಬ್ಬೊಬ್ಬರಿಗೆ ಒಂದೊಂದು ಕಾಲು ಗಂಡ ಸಾಕೊ? ಯೋಚನೆಮಾಡಿ. ತಿರುಗ ತಿರುಗ ಅವರನ್ನೇ ಆಕ್ಷೇಪಿಸುತ್ತೀರಲ್ಲ. ಅಣಗಿದವರಿಗೂ ಅಣಗುವುದಕ್ಕೂ ಮಿತಿ ಉಂಟು. ಅದು ಮೀರಿದರೆ ತಿರುಗಿ ಬೀಳುತ್ತಾರೆ. ನಿಮಗೆಲ್ಲ ಕಾದಿದೆ 'ಮುಸಲಿ ಪಂಡುಗ'.

ಎಂದರೆ, ಹೆಂಗಸರು ನಾಳೆ ಸ್ವತಂತ್ರರಾಗುತ್ತಾರೆ, ಎಲ್ಲರಿಗೂ ಶಾಸ್ತಿ ಕಾದಿದೆ ಎಂದಲ್ಲ ನನ್ನ ಬೆದರಿಕೆ. ಸಮಾಜದಲ್ಲಿ ಹುಟ್ಟಿದವರಿಗೆ ಎಲ್ಲಿದೆ ಸ್ವಾತಂತ್ರ್ಯ? ಮಣ್ಣು.

ಇಬ್ಬರೂ ಒಬ್ಬರನ್ನೊಬ್ಬರು ಹೊಂದಿ ನಡಸಿಕೊಂಡರೆ ಮಾತ್ರ ಲೋಕದಲ್ಲಿ ಯಾರಿಗೇ ಆಗಲಿ ಸುಖ. ಅವರನ್ನು ಬಿಟ್ಟರೆ ಇವರಿಗೆ ಗತಿಯಿಲ್ಲ; ಇವರನ್ನು ಬಿಟ್ಟರೆ ಅವರಿಗೆ ಗತಿಯಿಲ್ಲ. ಹೀಗಾಗಿಬಿಟ್ಟಿದೆ ಲೋಕದಲ್ಲಿ ಮೊದಲಿಂದ. ಏಕೋ ಏನೊ, –

ಸಂಸಾರೋಽಯಂ ಅತೀವ ವಿಚಿತ್ರ.

ಈ ಹೆಣ್ಣು ಗಂಡುಗಳ ಅಗತ್ಯ ದೇವಾಧಿದೇವತೆಗಳಿಗೂ ತಪ್ಪಿಲ್ಲ. ಹೀಗಿರುವಾಗ ಇವರನ್ನು ಅವರು, ಅವರನ್ನು ಇವರು ಬಾಳಿಸಿಕೊಂಡು ಬಾಳ ಚೆಲುವನ್ನು ಬೆಳಸಬೇಕೇ ಹೊರತು –'ನೋಡಿ, ಒಲಿದರೆ ನಾರಿ ಮುನಿದರೆ ಮಾರಿ ಎಂಬುದು ಗೊತ್ತಿದೆಯೊ ಇಲ್ಲವೊ' ಎಂದು ಆಕೆ–'ನೋಡು : ಹೆಂಗಸು ಹೆಂಗಸಿನ ಹಾಗೆ ಬಾಯಿ ಮುಚ್ಚಿಕೊಂಡು ಹೇಳಿದ ಹಾಗೆ ಕೇಳಿಕೊಂಡು ಬಿದ್ದಿದ್ದರೆ ಚೆನ್ನ, ಇಲ್ಲದಿದ್ದರೆ ನಿನ್ನ ಭೂಗತ ಮಾಡುತ್ತೇನೆ' ಎಂದು ಗಂಡು ಹುಯಿಲಿಟ್ಟರೆ ಏನನ್ನು ಸಾಧಿಸಿದ ಹಾಗಾಯಿತು? ಬರಿಯ ವಿರಸ; ದಡ್ಡತನ; ಕೊಳೆತ ಬದುಕು. ಮನುಷ್ಯ ಹುಟ್ಟಿದ್ದು ಇಷ್ಟಕ್ಕೇ ಏನು? ಮಥಿತಾರ್ಥ ಒಂದೇ. ಲೋಕದಲ್ಲಿ ಯಾರೂ ಹೆಚ್ಚಲ್ಲ; ಯಾರೂ ಕಡಮೆ ಅಲ್ಲ. ಆದ್ದರಿಂದ ಗಂಡು ಹುಟ್ಟಿತೆಂದು ಕುಣಿಯಬೇಡಿ; ಹೆಣ್ಣಾಯಿತು, ಸೆಕೆಂಡ್ ಕ್ಲಾಸ್ ತೇರ್ಗಡೆ ಎಂದು ಕುಗ್ಗಬೇಡಿ.

ಇಷ್ಟು ಹೇಳಿದ ಮೇಲೆ ಗಂಡಸರಿಗೂ ಒಂದು ಸಲಹೆ ಕೊಡಬಹುದೇನೊ! ರಾವ್‌ಜೀ, ನಿಮ್ಮ ಹುಷಾರಲ್ಲಿ ನೀವಿರಿ. ಎಂದಿಗೇ ಆಗಲಿ ಹೆಣ್ಣಿನ ಹಂಗಿಗೆ ಸಿಕ್ಕಿಕೊಳ್ಳಬೇಡಿ. ನಿಮ್ಮ ಬೀಗದ ಕೈ ಪೂರ್ತಿ ಅವರ ಕೈಗೆ ಕೊಟ್ಟು ಬಿಟ್ಟು ಆಮೇಲೆ ಪೇಚಾಡಬೇಡಿ. ಅವರಿಗೆ ಸಾಲಗಾರರಾಗಬೇಡಿ. ಅವರ ತವರು ಮನೆಗೆ ಹೋಗಿ ಬಹುಕಾಲ ನಿಲ್ಲಬೇಡಿ.

ಉಳಿದಂತೆ ಎಲ್ಲ ಸರಿಯೇ, ಸಮವೇ.

# ದೋಸೆ

ಊಟದ ಹೊಟೇಲೂ ಹೊಟೇಲೇ; ಕಾಫಿ ಹೊಟೇಲೂ ಹೊಟೇಲೇ. ಇಂದು ಈ ಎರಡನೆಯ ಜಾತಿಗೆ ಹಲವಾರು ಹೆಸರಿವೆ: ರೆಸ್ಟೋರಂಟ್, ಆ ಭವನ, ಈ ಭವನ, ಕ್ಯಾಂಟೀನ್, ಕೃಫೆ, ಲಂಚ್ ಹೋಂ, ಕೆಬಿನ್, ನಾನಾ ವಿಲಾಸಗಳು, ಮಂದಿರಗಳು–ಇನ್ನೂ ಎಷ್ಟು ಎಷ್ಟೋ. ಅದೆಲ್ಲ ಹೊಸ ಕಾಲದ ಮಾತು. ಹಿಂದಿನ ಕಾಲದಲ್ಲಿ ಆ ಜಾತಿಗೆಲ್ಲ ಕಾಫೀ ಕ್ಲಬ್ಬೆಂದೊ ದೋಸೆ ಅಂಗಡಿಯೆಂದೊ ಲೋಕರೂಢಿಯ ಹೆಸರು. ಜಾತಿವಾಚಕ ಅದು. ಯಾವ ವಿಲಾಸದ ಹೆಸರು ಹಾಕಿದರೂ ಸರಿಯೇ. ಟಿಫಿನ್ ರೂಂ ಎಂದರೂ ಅದೇ. ಇಂಗ್ಲಿಷಿನಲ್ಲಿ ಕಾಫೀ ಕ್ಲಬ್: ಕನ್ನಡದಲ್ಲಿ ದೋಸೆ ಅಂಗಡಿ. ಅಲ್ಲಿ ಕಾಫೀ ಜೊತೆಗೆ ಟೀ ಸಿಕ್ಕುತ್ತಿರಲಿಲ್ಲವೆಂದಲ್ಲ. ಕಾಫೀ ಟೀ ಮೈಗಾಗದವರಿಗೆ ಹಾಲೊ ಕೋಕೊವೊ ದೊರಕುತ್ತಿರಲಿಲ್ಲವೆಂದೂ ಅಲ್ಲ. ದೊರಕುತ್ತಿದ್ದವು. ಅವನ್ನು ಕುಡಿಯುವವರ ಸಂಖ್ಯೆ ಕಡಮೆ. ನಮ್ಮಲ್ಲಿ ಕಾಫೀ ಹೊಡೆತವೇ ಹೊಡೆತ. ಕಾಫೀ ಎಂದು ಹುಣಿಸೆಬಿತ್ತ, ಈಚಲುಬಿತ್ತ ಹುರಿದು ಹುಡಿ ಮಾಡಿ, ಅದೆಂಥುದೇ ಆಗಲಿ, ಯಾವುದರಿಂದ ಮಾಡಿಕೊಡಲಿ, ಆ ಅಂಗಡಿಗಳಿಗೆ ಹೋದವರು ಕಾಫಿ ಕುಡಿದೇ ಬರುತ್ತಿದ್ದರು. ಕುಡಿಯಲು ಕಾಫೀ, ತಿನ್ನಲು ದೋಸೆ. ಬರಿಯ ದೋಸೆ ತಿಂದು ಹಿಂತಿರುಗುವ ಮನುಷ್ಯನಿಗೆ ಸಾಧಾರಣವಾಗಿ ಗೌರವ ಕಡಮೆ. ಈಗಿನಂತೆಯೇ ಆಗಲೂ. ಮನೆಯಲ್ಲಿ ಗತಿ ಇಲ್ಲದೆಯೊ ಮಾಡುವವರಿಲ್ಲದೆಯೊ ಅಥವಾ ಹಸಿದ ಬಿಕನಾಸಿಗಳು ಹೊಟೇಲಿಗೆ ಹೋಗಿ ಹಾಗೆ ಮಾಡಬಹುದೇ ಹೊರತು ಗೃಹಸ್ಥರು, ಮರ್ಯಾದಸ್ಥರು ಎಂದಿಗೂ ಹಾಗೆ ಮಾಡರು. ಮರ್ಯಾದೆ ಬೇಡವೆ, ಸುಮ್ಮನೆ ತಿಂದು ಬಂದರೆ ಏನು ಭಾಗ್ಯ? ನಾಯಿ ತಿನ್ನುತ್ತದೆ. ಒಂದೊ ಎರಡೊ ಯಥಾಶಕ್ತಿ ದೋಸೆ ತಿನ್ನಬೇಕು. ಅದನ್ನು ಗಂಟಲಲ್ಲಿ ಸುಖವಾಗಿ ಸಾಗಕಳುಹಿಸಲು ಬಿಸಿಬಿಸಿಯಾಗಿ ಕಾಫೀ ಕೋಡಿ ಇಳಿಸಬೇಕು. ಹೇಗೂ ಕಾಫೀ ಕುಡಿದು ಬರುವುದೇ ನಾಗರಿಕವೃತ್ತಿ. ಕೈಯಲ್ಲಿ ಸಾಕಷ್ಟು ಕಾಸಿಲ್ಲವೇನು? ಖಾಲಿ ಕಾಫೀ ಕುಡಿದು ಹಿಂತಿರುಗಿ ಬನ್ನಿ. ಸಂಪ್ರದಾಯ ಇದು.

ಅದು ಹಾಗಿರಲಿ. ನಾನು ಈಗ ಆರಂಭಿಸಿದ್ದು ದೋಸೆಯ ವಿಷಯ ಬರೆಯಲು. ದೋಸೆ ಒಂದೇ ಅಲ್ಲ, ಹೊಟೇಲಲ್ಲಿ ಮಾಡುವುದು–ಇಡ್ಲಿ, ಉಪ್ಪಿಟ್ಟು, ಅಥವಾ ಯಾವುದೋ ಸಿಹಿಯ, ಕಾರದ 'ಬಾತು', ಪೂರಿ-ಇತ್ಯಾದಿ ಏನೇನೊ ಇರಬಹುದು. ಕಾಫೀ ಮಾರದ ಕಾಫೀ ಕ್ಲಬ್ ಹೇಗೆ ಇರಲಾರದೊ ದೋಸೆ ಇಲ್ಲದ ದೋಸೆ ಅಂಗಡಿಯೂ ಇರಲಾರದು. ಇಂದು ಟೀಗೆ ಕರೆದು – ಈ ಜನಕ್ಕೆ ಪ್ರಾಮಾಣಿಕತೆ

ಬೇಡವೆ? – ಟೀಯನ್ನೇ ಕೊಡದೆ ಉಪಚಾರಕೂಟಗಳು ನಡೆಯಬಲ್ಲವು. ಕಾಫೀ ಇಲ್ಲವೆನ್ನುವ ಕಾಫೀ ಕ್ಲಬ್ಬುಗಳು ಹಿಂದೆ ಇರಲಿಲ್ಲ, ಈಗ ಇಲ್ಲ, ನಾಳೆ ಇರಲಾರವು.

ಮೂರು ಬಗೆಗಳಿಗೆ ದೋಸೆಯೆಂದೇ ಸಾಮಾನ್ಯ ಹೆಸರು. ಸಾದಾ, ತುಪ್ಪ, ಮಸಾಲೆ. ಈ ಮೂರು ಬಗೆಯವೂ ದೋಸೆಗಳೇ. ಒಂದೇ ಪದಾರ್ಥದ ರೂಪಾಂತರಗಳು, ರುಚ್ಯಂತರಗಳು, ವಿಶೇಷಗಳು. ಅದರದರ ಗೌರವ ಅದಕ್ಕೆ ಸಲ್ಲುತ್ತದೆ. ಒಂದರ ಪ್ರಿಯರಿಗೆ ಇನ್ನೊಂದು ಕೆಲವೇಳೆ ಹಿಡಿಸದು. ಇದರಲ್ಲಿ ವೀರಪಂಥಗಳುಂಟು. ನನಗೆ ಆ ನಡುವೆ ಜಗಳ ಇಷ್ಟವಿಲ್ಲ. ದೋಸೆ ಅಂಗಡಿಗಳು ಹುಟ್ಟಿದ ಕಾಲದಿಂದಲೂ ಆ ಮೂರು ವರ್ಗದವೂ ಹೆಸರಾದವೇ. ಆದರೂ ಸಾದಾ ಕಂಡರೆ ಅಂಗಡಿಯವನಿಗೆ ಅಷ್ಟು ಗೌರವವಿಲ್ಲ. ತನ್ನ ಪದಾರ್ಥದಲ್ಲಿಯೂ ಗೌರವವಿಲ್ಲ. ಅದನ್ನು ಬಯಸುವವನ ಮೇಲಿನ ವಿಶ್ವಾಸವೂ ಅಷ್ಟಕ್ಕಷ್ಟೇ. ಆದರೆ ತನ್ನ ಗಿರಾಕಿಗಳ ರುಚಿಯೂ ಇಷ್ಟವನ್ನೂ ಈಡೇರಿಸಬೇಕಾದುದು ಅವನ ಪ್ರಯೋಜನವಾದ್ದರಿಂದ ಅದಕ್ಕೆ ಪ್ರಯತ್ನಿಸುತ್ತಾನೆ. ಸಾದಾ ದೋಸೆಗೆ ಕೆಲಸ ಜಾಸ್ತಿ. ಖರ್ಚು ಹೆಚ್ಚು. ಸಂಪಾದನೆ ಕಡಮೆ. ಆದ್ದರಿಂದ ಅವನಿಗೆ ಅದರ ಮೇಲೆ ಪಕ್ಷಪಾತವುಂಟಾಗದು. ಇತ್ತ ಇವರಿಗೆ ಇದು ಅಗ್ಗ, ಆರೋಗ್ಯ ಕರವೆಂದು ಭ್ರಾಂತಿ ಬೇರೆ. ಆರೋಗ್ಯಕ್ಕಾಗಿ ಹೊಟೇಲಿಗೆ ಹೋಗುವ ಮಂದಿ ಅದು ! ಇಂಥ ಎರಡು ಅನುಕೂಲಗಳುಳ್ಳ ಪದಾರ್ಥ ಸಹಜವಾಗಿ ಇವರಿಗೆ ಪ್ರಿಯ. ಒಂದೊಂದು ಸಮಯ ಒಂದು ಮಧ್ಯಸ್ಥವೃತ್ತಿ ಅನುವಾಗುತ್ತದೆ. ಎರಡು ಮೂರಕ್ಕಿಂತ ಕಡಮೆ ಸಾದಾದೋಸೆ ಮಾರುವುದಿಲ್ಲವೆಂದೂ ಗೊತ್ತಾದ ಒಂದು ಸೆಟ್ ದೋಸೆ ಕೊಳ್ಳಬೇಕೆಂದೂ ಕ್ರಮ, ಸಮಯ ಏರ್ಪಡುತ್ತದೆ. ಅಂಥ ಕಡೆ ಸೆಟ್ಟಿಗೆ ಎರಡು ಮೂರು ಆಣೆ ಹಾಕಿ ದೋಸೆಗೆ ಗಾತ್ರ ಚಿಕ್ಕದು ಮಾಡಿ ಸಾದಾ ದೋಸೆಯ ಪ್ರಚಾರವಾಗುವುದು ಪದ್ಧತಿ.

ತುಪ್ಪದ ದೋಸೆಯ ವಿಷಯ ಹಾಗಲ್ಲ. ಸಾಮಾನ್ಯವಾಗಿ ಆ ಬಗೆಯದು ಒಂದೊಂದಕ್ಕೇ ವ್ಯಾಪಾರ. ಜೊತೆ, ಜೋಡಿ 'ತುಪ್ಪಾ' ಅಪರೂಪ. ತುಪ್ಪವೆಂಬ ಯಾವುದನ್ನೋ ಹಾಕಿ ಗರಿಗರಿಯಾಗಿ, ಗರಗಾಗ್ಗಿ ಕಾವಲಿಯವನು ತೆಗೆದುಕೊಟ್ಟರೆ ಮಾಣಿಯೊ ಪೊಯ್ಯನೊ ನಿಮಗೆ ತಂದುಕೊಡುತ್ತಾನೆ. ಆ ನೋಟ ಮೈಗೆ ಪುಳಕ ತರುವ ಪ್ರಸಂಗ. ಒಂದೊಂದು ಅಂಗಡಿಯ ರುಚಿ, ಗರಗು ಆ ಹುಡುಗನ ಸಭ್ಯತೆ, ಶುಚಿ, ಠೀವಿಗಳಂತೆಯೇ ಒಂದೊಂದು. ಚಟ್ನಿಯೊ ಪಲ್ಯವೊ ಹಾಕಿಕೊಂಡು ಹತ್ತಿರ ಬಂದ ಅದನ್ನು ಕಂಡರೆ ಆಗುವ ಆನಂದ ಅತೀವ. ಅವನು ನಿಮಗೆ ತಿಳಿದವನಾಗಿ ಯಜಮಾನನಿಗೆ ನೀವು ಬೇಕಾದರೆ ತುಪ್ಪವೊ ಚಟ್ನಿಯೊ ಗರಗೊ ಸ್ವಲ್ಪ ಸ್ಪೆಷಲ್ ಆಗುವುದು. ಸ್ಪೆಷಲ್ ಬೆಣ್ಣೆ, ಸ್ಪೆಷಲ್ ತುಪ್ಪ ಈಚಿನ ಕಾಲದವು ನಿಜ. ಆದರೆ ಆ ಹೆಸರುಗಳು ಬಳಕೆಗೆ ಬಾರದ ಬಹು ಮುಂಚೆಯೇ ಸ್ಪೆಷಲ್ ಸಪ್ಲೈ ಆಗುತ್ತಿತ್ತು.

ಮೂರನೆಯ ಜಾತಿ ಮಸಾಲೆಯದು. ಅದರಲ್ಲಿ ಎರಡು ಪಂಗಡ, – ಸ್ಪೆಷಲ್ ಭಾಗ ಬಿಟ್ಟು : ಒಂದು ಬೆಣ್ಣೆಯದು; ಇನ್ನೊಂದು ತುಪ್ಪದ್ದು. ಆ ಎರಡರಲ್ಲಿ ಪಲ್ಯದ್ದು, ಸಾಗುದು. ದೋಸೆಗೆ ಯಾವ ಯಾವ ಮಸಾಲೆ ಮೇಲೆ ಬೀಳುವುದೊ – ಯಾವುದಾದರೂ ಬೀಳಲಿ – ದೋಸೆ ಹಾಕಿ ತಿಪ್ಪಿ, ಬೆಣ್ಣೆ, ತುಪ್ಪ, ಚಟ್ನಿ, ಪಲ್ಯ / ಸಾಗು ಹಾಕಿ, ಇನ್ನಷ್ಟು ಬೆಣ್ಣೆಯನ್ನೊ ತುಪ್ಪವನ್ನೊ ಮೇಲೆ ಹುಯಿದು, ಕಾವಲಿಯ ಮೇಲೆ ಹದವಾದ ಕೂಡಲೆ ಸರಿಯಾಗಿ ಮಡಿಕೆ ಮಡಿಸಿ, ಮೊಗಚುವ ಕೈಯಿಂದ ಪ್ಲೇಟಿಗೊ ಎಲೆಗೂ ಹಾಕಿ ನಿಮ್ಮ ಕೈಗೆ ತಂದುಕೊಟ್ಟರೆ ಕಾವಲಿಯ ಮೇಲೆ ಬಡಿದ ಮೊಗಚುವ ನಾದದಿಂದಲೇ ನೆಟ್ಟಗಾದ ಕಿವಿ ಹುರುಪುಗೊಳ್ಳುತ್ತದೆ. ಆ ಸ್ಥಿತಿ ದೃಶ್ಯ "ಸಲೆ ಸೊಗಸು." ಅದರ ಗಿರಾಕಿ ಕೈ ಹೊಸೆದುಕೊಳ್ಳುವುದು, ಷರಾಯಿ ಮಡಿಕೆ ಸರಿಮಾಡಿಕೊಂಡು ಅದನ್ನು ಗೌರವದಿಂದ ಎದುರುಗೊಳ್ಳುವುದು ಮುಂತಾದ ನೋಟ ಚೆನ್ನ. ಆ ದೊಸೆಯೇ ಆಗಲಿ ಕಾವಲಿಯ ಮೇಲೆ ಕೈ ಬಡಿದಾಗ, ಹಾಗೆ ಮೊಗಚಿ ಅಡಿಸಿದಾಗ ಹರಿದೀತೆ ? ಚೂರಾದೀತೆ? ಕಾವಲಿಯಿಂದ ಕೈ ಎತ್ತುವಾಗ ಹವಣು ತಪ್ಪಿ ಕೆಳಗೆ ಬಿದ್ದೀತೆ ? ಅನಾಮತ್ತು ಬಿಸಿಬಿಸಿಯಾಗಿ ಬರುವ ಅದು ಎದುರಿಗೆ ಸ್ಥಾಪಿತವಾದ ಕೂಡಲೆ ಅದರ ಮಡಿಕೆ ತೆರೆಯುವ ದೃಶ್ಯವೂ ಚೆನ್ನವೇ. ಮುಟ್ಟುವುದಕ್ಕಾಗದಷ್ಟು ಬಿಸಿ. ಮುರಿಯ ಹೋಗಿ ಬೆರಳಿಗೆ ಬಿಸಿ ತಟ್ಟಿ ಒಂದು ಚೂರೂ ಈಚೆಗೆ ಬಾರದೆ ಬೆರಳು ಸುಟ್ಟ ಹದ ದೋಸೆಗೆ ನಿಜವಾದ ಸಿಫಾರಸು. ಆಯಿತು. ಇಷ್ಟು ಕಷ್ಟಪಟ್ಟು ಮಾಡಿದ, ತರಿಸಿದ ಆ ಪದಾರ್ಥವನ್ನು ಬಿಡುವುದಕ್ಕಾಗುತ್ತದೆಯೆ? ಹೆಬ್ಬೆರಳಿಂದ ಇತರ ಬೆರಳುಗಳನ್ನು ಸವರಿಕೊಳ್ಳುತ್ತ ತುಟಿಯುಸಿರೂದಿ ಬೆರಳಿಗೂ ದೋಸೆಗೂ ಹಾಯೆನ್ನುವಂತೆ ಮುಂದಿನ ವ್ಯವಹಾರಕ್ಕೆ ಸಜ್ಜುಗೊಳ್ಳುವಾಗ ಕಾಣುವ ಅವರ ಹಾರ್ದಿಕ ಆತುರ ನಯನ ಮನೋಹರವಾದ್ದು. ತಮ್ಮ ದೋಸೆಗೆ ಕಾಯುತ್ತ ದೂರದಲ್ಲಿ ಕುಳಿತವರಿಗೆ ಮಾತ್ರ – ನಿಮಗೆ ದೃಷ್ಟಿ ತಾಕುವಷ್ಟು ಅಸೂಯೆ. ಒಂದು ಕ್ಷಣ ತಾಳಬಾರದೆ, ನೀವು ಕುಳಿತ ಸ್ವಲ್ಪ ಹೊತ್ತಿನ ಮೇಲೆ ಬಂದವರು ಅವರು. ಅವರ ಆರ್ಡರೂ ರಿಜಿಸ್ಟರ್ ಆಗಿದೆ. ದೋಸೆಗೆ ಅವರ ಸರದಿಯೂ ಬರುತ್ತದೆ. ನೋಡಿ; ಬಂತು. ಅಷ್ಟರಲ್ಲಿ ಆತುರ, ಅಸೂಯೆ, ಈ ದೃಷ್ಟಿಪಾತ ಏಕೆ?

ಅಂತೂ ಏನೇ ಹೇಳಿ, ನಿಮ್ಮ ಮೆಚ್ಚಿನ ಹೊಟೇಲಿಗೆ ಹೋಗಿ ದೋಸೆ ತಿನ್ನುವ ಸಂಭ್ರಮ ನಿಜವಾಗಿ ಸಂಭ್ರಮವೇ. ಸ್ವಲ್ಪ ಆರಿದರೆ ಆ ಅಧ್ವಾನ್ನವನ್ನು ಮುಟ್ಟಲಾಗದು. ನಾಲಿಗೆಗೆ ರುಚಿಸದು. ವಾಸನೆ, ತಂಗುಳು. ಆರಿದ್ದನ್ನು ತಿನ್ನುವುದಕ್ಕೇ ಹೊಟೇಲಿಗೆ ಹೋಗುವುದು? ಬಿಸಿಯ ಹದದಲ್ಲಿ ತಿನ್ನುವ ಸಂತೋಷ ವಾಸ್ತವವಾದ್ದು.

ಈ ಪ್ರಕರಣದಲ್ಲಿ ನನಗೆ ದೋಸೆಯ ಹಿರಿಮೆಗೆ ಇನ್ನೊಂದು ದೊಡ್ಡ ಕಾರಣ ತೋರಿದೆ. ಹೇಳದಿದ್ದರೆ ಮನಸ್ಸಿಗೆ ನ್ಯೂನತೆ ತೋರುತ್ತದೆ. ಉಳಿದ ಎಲ್ಲವನ್ನೂ ಹತ್ತು ಜನರಿಗಾಗಿ ಒಟ್ಟಿಗೆ ಮಾಡುತ್ತಾರೆ. ನಿಮಗಾಗಿಯೇ ಪ್ರತ್ಯೇಕವಾಗಿ ಮಾಡುವುದಿಲ್ಲ.

ಹತ್ತು ಜನಕ್ಕೆ ಮಾಡಿದುದರಲ್ಲಿ ನಿಮಗೂ ಭಾಗ; ಹತ್ತರಲ್ಲಿ ನೀವು ಹನ್ನೊಂದು. ದೋಸೆ ಹಾಗಲ್ಲ. ನೀವು ಹೇಳಿದಂತೆ ನಿಮಗೇ ಪ್ರತ್ಯೇಕವಾಗಿ ಅದನ್ನು ಮಾಡಿಕೊಡುತ್ತಾರೆ. ಎರಡು ವ್ಯಕ್ತಿತ್ವಗಳಿಗೆ ಬೆಲೆ ಇಲ್ಲಿ. ದೋಸೆಗೆ, ನಿಮಗೆ. ಈ ವಿಶೇಷ ಅದರ ಸ್ವರೂಪಲಕ್ಷಣ. ಸ್ವತಂತ್ರವಾಗಿ ಹುಟ್ಟಿದ ನಮಗೆ ಅಂಥದೇ ಗುಣದ ಆಕರ್ಷಣೆ ಹೋಗುತ್ತದೆಯೆ ? ನಿಮಗೆ ಹೇಗೆ ತೋರುವುದೊ ಕಾಣೆ. ನನ್ನ ಮನಸ್ಸಿಗೆ ಈ ವಿಶೇಷತೆ ಬಹುಮೆಚ್ಚು. ದೋಸೆಯನ್ನು ಆಧುನಿಕ ಸತ್ವವನ್ನಾಗಿರಿಸಿರುವ ಲಕ್ಷಣ ಅದು. ಇನ್ನೂ ಒಂದು ಸಂಗತಿ: ಏಕೊ ಏನೊ, ಎಷ್ಟು ಚೆನ್ನಾಗಿ ಮಾಡಿದರೂ ಮನೆಯಲ್ಲಿ ಮಾಡಿದ ದೋಸೆ ಹೊಟೇಲದರ ರುಚಿಯ ಸಮಕ್ಕೆ ಬರುವುದಿಲ್ಲ ಎನ್ನುತ್ತಾರೆ. ಮನೆಯ ಹೆಂಡತಿಯೇ ಹೀಗೆ ಹೇಳುತ್ತಾಳೆ. ಉತ್ತಮವಾಗಿ ತಾನು ಅಟ್ಟ ದೋಸೆಗಿಂತ ಹೊಟೇಲ್ ದೋಸೆ ಆಕೆಗೂ ಹೆಚ್ಚು ರುಚಿಯೆಂದು ಆಕೆಯ ಬಾಯಿಂದಲೇ ಪದೇ ಪದೇ ಕೇಳಿದ್ದೇನೆ. ಹೆಂಗಸು ತನ್ನ ಗುಣಕ್ಕೆ ಅಪೇಕ್ಷೆ ಕಡಮೆ ಮಾಡಿಕೊಂಡು ಇನ್ನೊಂದನ್ನು ಹೊಗಳುವ ಈ ಮನೋವೃತ್ತಿಯನ್ನು ಕಂಡರೆ ಆ ಪದಾರ್ಥದ ಗುಣ ನಿಜವಾಗಿ ವಿಶಿಷ್ಟವಾದ್ದಿರಬೇಕು. ಹೇಗೂ ಆಗಲಿ, ಪ್ರಕಾಂಡವಾದ ಆ ಕಾವಲಿಯ ಪ್ರಭಾವವೊ ಅದರ ಮೇಲೆ ಬಳಿಯುವ ಆ ತೈಲತುಪ್ಪದ ಭಾಗ್ಯವೊ ಅದನ್ನು ಬಳಿಯುವ ಆ ಬಟ್ಟೆಯ ಕೂರ್ಚದ ಭಾಗ್ಯವೊ ಆ ಎಲ್ಲದರ ಸಮ್ಮಿಳಿತ ಸೌಭಾಗ್ಯವೊ-ಅಂತೂ ಅದರ ಸಮಕ್ಕೆ ಇನ್ನೊಂದು ರುಚಿ ಬಾರದು.

ನಾನು ಕೆಲವರನ್ನು ಕಂಡಿದ್ದೇನೆ : ಒಬ್ಬರು ಇಬ್ಬರು, ಅತಿಯೆಂದರೆ ಮೂವರು – ಸಂಖ್ಯೆ ಅದಕ್ಕಿಂತ ಹೆಚ್ಚಾದರೆ ಸಂಗ ಗುಂಪಾಗುತ್ತದೆ, ಗುಂಪು ಗೊಂದಲವಾಗುತ್ತದೆ, ಸಂಗ ಒಡೆಯುತ್ತದೆ, ಸಂಗದ ಅಖಂಡತೆಗೆ ಚ್ಯುತಿ ಬರುತ್ತದೆ – ದಿನಾ ಒಂದು ಕಡೆ ಸೇರಿ ಯಾವುದೊ ಒಂದು ಗೊತ್ತಾದ ಕಡೆ ಒಂದು ಮುದ್ದೆ ಬೆಣ್ಣೆಯನ್ನು ಕೊಂಡು, ತಮ್ಮ ಪ್ರೀತಿಯ ದೋಸೆಯಂಗಡಿಗೆ ತೆರಳಿ, ಪ್ರಸನ್ನವಾಗಿ ಬಾಯಿತುಂಬ ನುಡಿದು ತಮಗೆ ತೆರೆಯುವ ಸ್ವಾಗತದೊಡನೆ ಒಳಗೆ ಹೋಗಿ ಕುಳಿತು ಅವನು ಹಾಕುವಷ್ಟು, ಇವರು ಕೇಳುವಷ್ಟು ದೋಸೆಗಳನ್ನು ಹಾಕಿಸಿಕೊಂಡು, ಸಂಗ್ರಹಿಸಿ ತಂದ ನವನೀತವನ್ನು ಹಂಚಿಕೊಂಡು, ಅವನ್ನು ಸವಿದು ತೃಪ್ತರಾಗಿ, ತೃಪ್ತಿಯ ಸಪ್ತಸ್ವರ ಸನ್ನಾದಗಳಿಂದ ವಿಜೃಂಭಿಸುತ್ತ ಅಲ್ಲಿಂದ ಬೇರೆ ಇನ್ನೊಂದು ಅಂಗಡಿಗೆ ಹೋಗಿ ಅಲ್ಲಿ ಸಾಕಷ್ಟು ಕಾಫೀ ಕುಡಿದು ತಮ್ಮ ತಮ್ಮ ಮನೆಗಳಿಗೊ ಕೆಲಸಗಳಿಗೊ ಕಸರತ್ತಿಗೊ ನೆಮ್ಮದಿಯಾಗಿ ಹೋಗುತ್ತಿದ್ದ ಹಿಂದಿನ ಕಾಲದ ಒಂದು ಚಿತ್ರ ನನ್ನ ಕಣ್ಣಿಗೆ ಕಟ್ಟಿದಂತಿದೆ. ಗದ್ದಲದ, ಅವಸರದ ಈ ಕಾಲದಲ್ಲಿ ಇಂಥ ದೃಶ್ಯ ಕಡಮೆಯಾಗುತ್ತಿದೆ. ಅಥವಾ, ಜನ ಹೆಚ್ಚಾದ್ದರಿಂದ ಕಣ್ಣಿಗೆ ಬೀಳುತ್ತಿಲ್ಲವೊ! ದೋಸೆ ಮಾಡುವವನಿಗೂ ಗಿರಾಕಿಗೂ ನಿಕಟತೆ, ಆಪ್ತತೆ ಪೂರ್ತಿ ಮಾಯವಾಗುತ್ತಿದೆ. ಈ ಸಂಗತಿ ಜನರು ಸತ್ವಹೀನರಾಗಿ, ರುಚಿಹೀನರಾಗಿ ಆಗುತ್ತಿರುವುದಕ್ಕೆ ಸಾಕ್ಷಿಯಲ್ಲವೆನ್ನುತ್ತೀರ? ಏನೋ ಅವಸರ; ಯಾವುದರಲ್ಲಿಯೂ ಅತೃಪ್ತಿ. ಯಾವುದಕ್ಕೂ ಅವಧಾನವಿಲ್ಲ. ಒಂದೇ ಮನಸ್ಸಿಂದ ಪರಿಷ್ಕಾರವಾಗಿ ದೋಸೆ ತಿನ್ನುವ ಪ್ರವೃತ್ತಿಯೂ ಕಾಣೆಯಾಗುತ್ತಿದೆ. ಈ ಕಾಲದ ರಂಗು

ಚುಂಗು ಈಗ್ಗೆ ಬೇರೆ ಇದೆಯಾದರೂ ತುಂಬು ಮನಸ್ಸಿನಿಂದ ಇಷ್ಟವಾದ್ದನ್ನು ಸವಿಯುವ ಹುಮ್ಮಸ್ಸೂ ಹರ್ಷವೂ ಎಲ್ಲಿ ಪೂರ್ತಿ ಹೋಗಿಬಿಡುವುವೊ ಎಂಬ ಶಂಕೆ ನನಗೆ.

ಬೆಂಗಳೂರು ನಿವಾಸಿಗಳಿಗೆ ಎಷ್ಟು ದೋಸೆ ಅಂಗಡಿಗಳು ಪರಿಚಿತವಲ್ಲ! ಎಲ್ಲರಿಗೂ ಎಂದಲ್ಲ. ತಜ್ಞನಿಗೆ. ವಿಶ್ವಾಸವಿರುವವರಿಗೆ. ಉಳಿದವರ, ವಿಮುಖರ ಮಾತು ಬೇಡ. ನಾವು ಸಕ್ತರು. ಎಷ್ಟು ಬಗೆಯ ದೋಸೆಗಳು! ಕಾಳಮ್ಮನ ಗುಡಿ ಬೀದಿಯ ಎಡ್ವರ್ಡ್ ದೋಸೆ. ಪಬ್ಲಿಕ್ ಲೈಬ್ರರಿಯ ಹನುಮಂತರಾಯರ ದೋಸೆ. ಬಳೇಪೇಟೆಯ ನಾರಣಪ್ಪನವರ ಮೋಟರ್ ಟೈರ್ ದೋಸೆ. ಉಡುಪಿ ಹೋಟೇಲಿನ ಒಂದೂ ಕಾಲಾಣೆಯ ಮಸಾಲೆದೋಸೆ. ಕಂಚೀವಿಳಾಸದ ರಮಢೋಲ್ ದೋಸೆ, ಐಯಂಗಾರ್ ಮಾರ್ಕೆಟ್ ಬಳಿಯು ದೋಸೆ – ಪ್ರಖ್ಯಾತವಾದ ಭಕ್ಷ್ಯಗಳು. ಗುಣ ಪಕ್ಷಪಾತಿಗಳೆಲ್ಲರಿಗೂ ಈ ಬಗೆಗಳು ಪರಿಚಿತ. ಇತರ ನೂರಾರು ಅಂಕಿತಗಳು ವಿಶಿಷ್ಟಜಾತಿಯವಾದ್ದರಿಂದ ಬಹುಶಃ ಅವು ಸರ್ವಸಾಮಾನ್ಯವಲ್ಲ. ಒಂದೊಂದರ ರುಚಿಯೂ ಒಂದೊಂದು ಕೀರ್ತನೆಗೆ ತಕ್ಕ ಪದಾರ್ಥ. ಎಲ್ಲೆಲ್ಲಿಯ ಪದಾರ್ಥವೂ ಒಂದೇ ರೀತಿ ಒಂದೇ ರುಚಿಯದಾಗುತ್ತಿರುವ ಕಾಲದಲ್ಲಿಯೂ ದೋಸೆ ದೋಸೆಯೇ ಆದ್ದರಿಂದ ಅಪರೂಪವಾಗಿ ಆಯಾ ಅಂಗಡಿಯ ಕೈವಾಡ ಅದಕ್ಕೆ ಉಳಿಯುತ್ತದೆ. ಆಕಾರ, ಗಾತ್ರ, ರುಚಿ, ಹದ, ಪರಿಮಳಗಳಲ್ಲಿ ವಿಶಿಷ್ಟತೆ ಇನ್ನೂ ತಕ್ಕಮಟ್ಟಿಗೆ ರೂಢಿಸಿದೆ. ಮನೆಯನ್ನು ಮಾರಿಯಾದರೂ ದೋಸೆ ತಿನ್ನುವವರಿರುವವರೆಗೂ ಎರಡು ರೂಪಾಯಿಗೆ ಒಂದು ಸೇರು ಅಕ್ಕಿ, ಮೂರಕ್ಕೆ ಒಂದು ಸೇರು ಉದ್ದಿನ ಬೇಳೆ ಆದಾಗಲೂ ಉಳಿದೀತೆಂಬ ಭರವಸೆ ನನಗೆ.

ಈಚೆಗೆ, ಸುಮಾರು ೧೯೧೫ರಲ್ಲಿ, ಬೊಂಬಾಯಿ ಆನಂದಭವನದವರು ಅಂಗಡಿ ಇಟ್ಟಾಗಿನಿಂದ ಅಗಲವಾದ ವಿಜಾತೀಯವಾದ ಪೊರಕೆ ಅಂಚಿನ ರವೆದೋಸೆ ಒಂದು ಪದಾರ್ಥವಾಯಿತಾದರೂ ದೋಸೆಯೆಂದರೆ ಎಂದಿಗೂ ಅಕ್ಕಿಯದೇ ದೋಸೆ. ಹುದುಗು ಇನ್ನಾವುದೇ ಬೀಳಲಿ, ಹದಿನಾರಾಣೆ ಹುದುಗೆಂದರೆ ಉದ್ದಿನದೇ ಹುದುಗು. ಸಾಬಾ ಸಾಮಾನಿಗೆ ಬೆರಕೆ ಸೇರದು. ಮೈದಾ ಬೆರಸಲಿ, ಗೋಧಿಹಿಟ್ಟು ಬೆರಸಲಿ, ಅಕ್ಕಿಯದೇ– ಹಸಿ ಅಕ್ಕಿ ಮನೆಯಲ್ಲಿ, ಕುದುಪಲಕ್ಕಿ ಹೊಟೇಲಲ್ಲಿ – ಮೂಲಧಾತು. ಹಿಟ್ಟನ್ನು ಬೆರಸುವ ಘೋಟಾವಣೆ ತಂತ್ರ ನನಗೊಪ್ಪದು. ದೋಸೆಯ ಹಿಟ್ಟನ್ನು ರುಬ್ಬಿಯೇ ಮಾಡಬೇಕು. ಯಂತ್ರದಲ್ಲಲ್ಲ, ನಾಡೊರಳಲ್ಲಿ; ತಿರುವುಗುಂಡಿನಲ್ಲಿ. ಹಾಗೆ ರುಬ್ಬುವ ವೃತ್ತಿಯವರ ಆಯ್ಕೆಯಲ್ಲಿಯೂ ಯಜಮಾನರು ಹೆಚ್ಚಿನ ಹುಷಾರನ್ನೂ ವರಣಶಕ್ತಿಯನ್ನೂ ಬಳಸಬೇಕಾಗುತ್ತದೆ. ಹಿಂದಿನ ಕಾಲದಲ್ಲಿ ದೋಸೆ ತಿನ್ನಲು ಹಣವಿಲ್ಲದೆ, ಅದರ ಗೀಳಿರುವವರು ನಾಲ್ಕೊಬ್ಬೆ ಹಿಟ್ಟು ರುಬ್ಬಿಕೊಟ್ಟು ನಾಲ್ಕು ದೋಸೆ ತಿಂದು ಹೋಗುತ್ತಿದ್ದುದುಂಟು. ರುಬ್ಬುವ ವೈಖರಿಯ ಹಿನ್ನೆಲೆ, ಅದರ ಪರಿಣಾಮಕಾರಿ ಹುದುಗು ಹದವಾಗಿ ಸೇರುವ ಬನಿ–ಹಿಟ್ಟಿಗೆ ಬಾರದಾದರೆ ದೋಸೆ ಮಾಡಿದರೂ ಒಂದೇ, ಮಾಡದಿದ್ದರೂ ಒಂದೇ.

ದೋಸೆಯ ಅಂಗಡಿಯ ವಿಷಯದಲ್ಲಿ ಇಷ್ಟು ವರ್ಣನೆ ಮಾಡಿದವರನ್ನು ಕುರಿತು ಇಂಥವನಿಗೆ ಮನೆ ಇರಲಾರದು, ಇವನು ಯಾವನೊ ಗುಂಡುಗೋವಿ ಎಂದುಕೊಳ್ಳಬೇಡಿ. ನಾನು ಗುಂಡೂ ಹೌದು; ನಿಮ್ಮರ್ಥದಲ್ಲಲ್ಲವಾದರೂ ಕೋವಿಯೂ ಹೌದು. ದೋಸೆಯ ಪೂರ್ವಸ್ಥಿತಿಯ ಮೂಲಸಾಧನ ಗುಂಡು ಕೋವಿ ನಾನು; - ಗುರಿ ಇಟ್ಟರೆ ಕೋವಿಯಿಂದ ಇಟ್ಟಂತೆ ಲಕ್ಷ್ಯಭೇದನವಾಗುವುದಾದ್ದರಿಂದ ಎದುರುಮಾತು ಉರಿದು ಬೀಳಬೇಕು. ಎರಡು ಸಂಸಾರದ ಸುಖ ಕಂಡವನಿಗೆ ಈ ಬಗ್ಗೆ ಹೆಚ್ಚಿನ ಭಾಗ್ಯ ಸಂಪಾದನೆಯಾಗಿದೆ ಎಂದು ಬೇರೆ ಬೇರೆ ಜೊತೆ ಕೈಬಳೆಗಳ ಗಲುಕಿನಲ್ಲಿ ಪಕ್ವವಾದ ರುಚಿ, ಅನುಭವ ಪಡೆದದ್ದರಿಂದಲೇ ನನಗೆ ವೈವಿಧ್ಯದಲ್ಲಿ ಅಸಹನೆಯಿಲ್ಲ. ಕಾಲೇಜಿನ ನಮ್ಮ ಗುರುಗಳೊಬ್ಬರು ಹಿಂದೆ ಯಾರಿಗೊ ಹೇಳಿದರಂತೆ, ನೀವೇಕೆ ಮದುವೆಮಾಡಿಕೊಳ್ಳಲಿಲ್ಲ ಎಂದುದಕ್ಕೆ ಉತ್ತರವಾಗಿ,-ಅವರು, ಒಂದಾ ರೂಪಾಯಿಗಿಂತ ನನಗೆ ಹದಿನಾರಾಣೆ ಚಿಲ್ಲರೆ ಹೆಚ್ಚು ಪ್ರಿಯ –"I prefer sixteen annas change to a Rupee" ಎಂದು. ಚಿಲ್ಲರೆಯ ಬೆಲೆಯನ್ನು ನೀವು ಹೇಗೇ ಕಟ್ಟಿ : ಅವರಾಡಿದ ಇಂಗ್ಲಿಷ್ ಮಾತಿನಲ್ಲಿ ಚೇಂಜ್ (Change) ಎಂಬ ಮಾತಿದೆ; ಬೇಸರ ನಿವಾರಣದ ವಿವಿಧತೆಯ ಸೂಚಿಕೆಯಾಗಿ. ಚಿಲ್ಲರೆಯ ಗೌರವ ಚಿಲ್ಲರೆಗಿದೆಯಾದರೂ ಚೇಂಜ್-ಕ್ಲಿಯೋಪಾತ್ರ ರಾಣಿಯ-ರಂಗುರಂಜನೆ ಅದಕ್ಕಿಲ್ಲ. ಎಲ್ಲದರಲ್ಲಿಯೂ ಎಲ್ಲ ಗುಣವನ್ನೂ ಅರಸುವುದೂ ನಿರೀಕ್ಷಿಸುವುದೂ ಸಾಧುವಲ್ಲವೆಂಬುದು ಮನಸ್ಸಿಗೆ ಸ್ವಲ್ಪ ಸಮಾಧಾನ ತರುತ್ತಿದೆ.

ದೋಸೆಯನ್ನು ಮಾಡಲು ಬಾರದ ಹೆಣ್ಣು ಕೈ ಯಾವ ಸಂಸಾರಕ್ಕೆ ಬರುತ್ತದೆ ? ಈ ಕಾಲದ ನಿಮಗೆಲ್ಲ ಆ ಪುಣ್ಯವಿದೆಯೊ ಇಲ್ಲವೊ ಕಾಣೆನೇ ಹೊರತು ನಮ್ಮ ಕಾಲದವರಿಗೆ ಅದು ಬಿ.ಎ., ಎಂ.ಎಸ್‌ಸಿ., ಗಳಿಗಿಂತ ದೊಡ್ಡ ಯೋಗ್ಯತೆ; ಹೆಚ್ಚು ಗಣ್ಯವಾದ ಉಪಾಧಿ. ಮೊದಲು ನಾವು ಹೆಣ್ಣಿನ ವಿಚಾರ ಮಾಡುವಾಗ ಸೀಗೆಪುಡಿ, ಮೆಣಸಿನಪುಡಿ ಮಾಡಬಲ್ಲರೆ? ದೋಸೆಗೆ ರುಬ್ಬುವ ಅಭ್ಯಾಸ, ಬತ್ತ, ಅವಲಕ್ಕಿ ಕುಟ್ಟುವ, ಹಿಟ್ಟು ಬೀಸುವ ಅಭ್ಯಾಸ ಇವೆಯೆ? ಹುಳು ಬೀಳದಂತಹ ಉಪ್ಪಿನಕಾಯಿ ಹಾಕಬಲ್ಲರೆ? ಹಪ್ಪಳ, ಸಂಡಿಗೆ, ಶಾವಿಗೆ ಮುಂತಾದವನ್ನು ಮಾಡಬಲ್ಲರೆ? ನಾಲ್ಕು ಸೇರಕ್ಕಿ ತಪ್ಪಲೆ ಇಳಿಸಬಲ್ಲರೆ? ಬಟ್ಟೆ ಒಗೆಯಬಲ್ಲರೆ, ಅಭ್ಯಂಜನ ಮಾಡಿಸಬಲ್ಲರೆ? ದೊಡ್ಡ ಅಡಿಗೆ ಮಾಡಿ ಬಡಿಸಿ ತಾವು ಕೆಲವು ಗಂಟೆಗಳು ಹೆಚ್ಚಾಗಿ ಉಪವಾಸ ತಡೆಯಬಲ್ಲರೆ ಎಂದು ಮುಂತಾಗಿ ಪರೀಕ್ಷೆ ನಡಸಿದ ಮೇಲೆಯೇ ಮದುವೆಯಾಗುತ್ತಿದ್ದದ್ದು. ನಮ್ಮ ಕಾಲದವರೆಲ್ಲರಿಗೂ ಆ ತರಬೇತು ಇರುತ್ತಿತ್ತು. ಮೊದಲಿಂದ ಹಿಡಿದು ಕಡೆಯವರೆಗೂ ಅವರೇ ಎಲ್ಲ ಮಜಲಲ್ಲಿಯೂ ಆ ಸಂಸ್ಕಾರದಲ್ಲಿ ಪರಾಯಣರಾಗಿರುತ್ತಿದ್ದವರು. ಪರೀಕ್ಷೆಗಳಲ್ಲಿ ಉತ್ತೀರ್ಣರಾಗುತ್ತಿದ್ದವರು. ಅಜ್ಜಿಯೊ ತಾಯೊ ಮಾಡುವುದನ್ನು ನೋಡಿ ಶಾಸ್ತ್ರಲಕ್ಷಣಗಳನ್ನು ಕಲಿತ ಗಂಡಿಗೆ ಅದರ ಆಗಮ, ರುಚಿ ವಿಮರ್ಶನ, ಹದ ಎಲ್ಲ ಗೊತ್ತು. ಮಾಡಲು ಕಲಿತು ಹೆಣ್ಣಿಗೆ ಅದರ ಸಂಭಾರ, ಸಾಧನೆ, ರೂಪಣ, ಬಡಿಸೋಣ

ಗೊತ್ತು. ಕಾವಲಿ, ಕಾವು, ಹುಯ್ಯಿ, ಪಾಕ ಗೊತ್ತು. ಒಂದೇ ಸಮನಾಗಿ ಹಿಟ್ಟು ಕಲಸಿಕೊಂಡು ಗಂಟಿಲ್ಲದೆ, ಕಲ್ಲು, ಕರಟ, ಇದ್ದಿಲುಪುಡಿ ಸೇರದೆ, ಒಂದೊಂದಕ್ಕೆ ಎಷ್ಟು ಬೇಕೊ ಅಷ್ಟಷ್ಟನ್ನೇ ಅಳತೆಯ ಸೌಟಿನಲ್ಲಿ ಕಾವಲಿಗೆ ಹಾಕಿ ಬರೆದು, ವಿಷ್ಣುಚಕ್ರದ, ಸೂರ್ಯ ಚಂದ್ರರ ವರ್ತುಲತೆಯನ್ನು ಧಿಕ್ಕರಿಸುವಂತೆ ತೆಳ್ಳಗೊ ದಪ್ಪಕ್ಕೊ ನಿಮ್ಮಿಷ್ಟವನ್ನು ಅನುಸರಿಸಿ ದೋಸೆ ಹುಯಿದು, ಘೃತವೆಂದರೆ ಘೃತವನ್ನೇ ಎರೆದು ತಿರುವಿಹಾಕಿ, ತಿರುಗಿ ಘೃತವೆರೆದು ಎಳಗೆಂಪಗೆ ಅದನ್ನು ಬೇಯಿಸಿ, ಒಂದೆರಡು ಒಳ್ಳೆಯ ಮಾತಾಡಿ ನಿಮಗೆ, ತಮ್ಮನಿಗೆ, ಮಕ್ಕಳಿಗೆ ಆಕೆ ಕೊಡುವಾಗ ಕಾವಲಿಯ ಆ ಸಾನ್ನಿಧ್ಯ, ಹುಯ್ಯುವವರ ಆ ಪ್ರೀತಿಯ ಏಕಾಂತೋಪಚಾರ ದೊರೆತರೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ. ಅವರು ಮಾಡಿ ಮಾಡಿ ಕೊಡುವುದು, ನಾವು ಬೇಡ ಬೇಡವೆಂದು ತಿನ್ನುವುದು. ಬೇಕಾದ್ದಕ್ಕಿಂತ ಹೆಚ್ಚಾಗುವ ಭಯದ ಮಿತಿಯನ್ನು ಮೀರಿ, ಮಾಡಿದವರಿಗೆ ತೃಪ್ತಿಯುಂಟು ಮಾಡುವುದು ಇಂಥಾ ಪ್ರಪಂಚದ ಮಹಾ ಲಕ್ಷಣ. ಹೊಟೇಲಲ್ಲಿ No Admission ಎಂದು ಬೋರ್ಡು ಹಾಕಿ ಒಳಗೆ ಏನೇನನ್ನೊ ಯಾರು ಯಾರೊ ಮಾಡುವ ಆವರಣದಲ್ಲಿ ಈ ಧಾರಾಳವೆಲ್ಲಿ ಬರಬೇಕು ? ಅಂಗಡಿಯ ಸಾಮಾನು ಮಾರುವ ಕೈಯ ಹಿಡಿತಕ್ಕೂ ಕೊಳ್ಳುವ ಕಿಸೆಯ ಮಿತಿಗೂ ನಿರ್ಘೃಣವಾಗಿ ಒಳಪಡುವುದರಿಂದ ಇಕ್ಕಟ್ಟಿಗೆ ಸಿಕ್ಕುವುದು. ಮನೆ, ಅಂಗಡಿ ಎರಡೂ ಒಂದೇಯೆ ? ಇದರ ಭೋಗ ಇದಕ್ಕೆ ; ಅದರ ಭಾಗ್ಯ ಅದಕ್ಕೆ. ಬೆಲೆಗೆ ಕೊಳ್ಳುವ ಅಂಗಡಿ ಸಾಮಾನಿನ ಮುಖ್ಯ ಲಕ್ಷಣ ಹಿಡಿತ, ಮಿತಿ. ಮಿತದಿಂದಲೇ ಅದರ ವೆಚ್ಚ, ಬೆಲೆ ಹೆಚ್ಚುವುವಾದ್ದ ರಿಂದಲೂ ಮನೆಯ ತೆರೆಗೈ ಧಾರಾಳದಿಂದ ತೃಪ್ತಿ ಬರುವುದರಿಂದಲೂ ಪಕ್ಷಪಾತಗಳು ಮನೆಯಿಂದ ಅಂಗಡಿಗೆ ತಿರುಗುವ ವಿಪರೀತಕ್ಕೆ ತುಡಿಯುತ್ತವೆ. ಇಂಥ ಬಯಕೆಗಳು ಬದಲುವುದು ಸಂಸ್ಕಾರ ಪ್ರಭಾವದಿಂದಲ್ಲ; ಚಿತ್ತ ಚಾಪಲ್ಯದಿಂದ. ಮನೆಯ ಹೆಂಡತಿ ಈ ಚಾಪಲ್ಯಕ್ಕೆ ಈಡಾದರೆ ಸಂಸಾರದ ಗತಿಯೇನು? ಆಕೆಗೆ ಈ ರಹಸ್ಯ ಹೇಗೆ ಅರ್ಥವಾಗಬೇಕು ? ಆದ್ದರಿಂದಲೇ ಆಕೆ ಅಂಗಡಿಯ ಪದಾರ್ಥಕ್ಕೆ ಎರಡನೆಯ ಕೈಯಾಗಬೇಕಾಗುವುದು,–ಪಾಪ.

ಮನೆಯಲ್ಲಿ ದಿನವೂ ಕೇಳಿದಾಗಲೆಲ್ಲ ದೋಸೆ ಮಾಡಲಾದೀತೆ? ಆಗದ ಕೆಲಸ. ಆದರೆ ವಾರಕ್ಕೆ ಮೂರು ನಾಲ್ಕು ದಿನವಂತೂ ನಮಗೆ ಆ ಸೇವೆ ದಶದಶಮಾನಗಳಿಂದ ಸಂದಿದೆ. ತುಂಬು ಅನುಭವದಿಂದ, ನಡೆದ ಸಂತೋಷಗಳ ನೆನಪಿಂದ, ಇನ್ನೂ ಆರದ ಉತ್ಸಾಹದಿಂದ ಆಡುವ ಮಾತು ಇದು. ದೂರದ ಅಡಿಗೆಯ ಮನೆಯಿಂದ ಚೊಯ್ ಎಂಬ ಶಬ್ದ ಕೇಳಿಸಿದೊಡನೆಯೇ ಬೈಠಕ್ ಖಾನೆಯಲ್ಲಿ ಕಕ್ಷಿಗಾರರ ನಡುವೆ ಕುಳಿತು ಫೀಸು ಕೇಳುತ್ತಿರುವ ಕಿವಿಗೂ ಮೂಗಿಗೂ ಅದರ ಸಂಬಂಧವೇರ್ಪಡುತ್ತದೆ. ಎರಡೂ ಅರಳುತ್ತವೆ. ಒಳಗೆ ಅರಿಯದಂತೆಯೇ ಆಹ್ಲಾದವುದಿಸುವುದು. ದುರ್ದಮ್ಯವಾದ ಪುಳಕ ಬರುವುದು. ಎಲ್ಲ ಸಂತೋಷಗಳ ಅನುಭವದಲ್ಲಿನಂತೆಯೇ ರಕ್ತದ ವೇಗ ಹೆಚ್ಚುವುದು. ಸುತ್ತಲಿನವರ ಗಮನಕ್ಕೆ ಬೀಳದೆ ಬಾಯಲ್ಲಿ ಲಾಲಜಲ ಆಡುವುದು ; ತಿಳಿಯಾಗುವುದು. ಬೀದಿಯಲ್ಲಿ ಹೋಗುವ ಯಾವನೊ ಪೋರ, ಯಾವನೊ ರಸಿಕ ಎಲ್ಲಿಂದಲೊ ಬರುವ

ದೋಸೆಯ ವಾಸನೆಯನ್ನು ಗ್ರಹಿಸಿ ಗುರುತಿಸುವರು. ವ್ಯಾಖ್ಯಾನ ಮಾಡುವರು. ಅದು ಕೇಳಿಸಿ ಒಂದೇ ಕ್ಷಣದಲ್ಲಿ ಅಸಮಾಧಾನವೂ ಸಮಾಧಾನವೂ ಇತ್ತ ಬೈಠಕ್ ಖಾನೆಯಲ್ಲಿ ಉಂಟಾಗುವುವು. ಈ ಪ್ರಕರಣದ ಇನ್ನೊಂದು ವಿಶೇಷ : ಕೆಲವು ಗೆಳೆಯರ ಮನೆಯ ದೋಸೆ ಬಹು ಪ್ರಖ್ಯಾತವಾದ್ದರಿಂದ ಆ ಕಾರ್ಯಕ್ರಮದ ವಾಸನೆ ತಟ್ಟಿದರೆ ಸಾಕು, ಸ್ನೇಹಿತರ ಸವ್ವಾರಿ ಅನಿರೀಕ್ಷಿತವಾಗಿ ನೆರೆಯುವುದು. ಐದೈದು ಹತ್ತು ಹತ್ತು ನಿಮಿಷಗಳ ಅಂತರದಲ್ಲಿ ಅವರು ಇವರು ದಯಮಾಡಿಸಿ ಸಂತೋಷಕೂಟವನ್ನು ನಡಸುವರು. ಮನೆಯವರ ಮನಸ್ಸಿನಲ್ಲಿ ಈ ಅಭ್ಯಾಗತರ ಎಣಿಕೆ ಮೊದಲೇ ಜಮಾ ಆಗಿರುವುದರಿಂದ ಪೂರ್ವಸಿದ್ಧತೆ ಇದ್ದೇ ಇರುತ್ತದೆ. ಮನೆಯ ಹೆಂಡತಿ ಸಂಸಾರಿಯಲ್ಲವೆ ? ಆದ್ದರಿಂದಲೇ ಯಾವ ಗೆಳೆಯರೂ ಬಾರದ ದಿನ ನಿಮಗೆ ಪ್ರಶ್ನೆ ಕೇಳಿ ಬರುತ್ತದೆ : ಇವತ್ತೇನು ಅವರ ಸುಳಿವಿಲ್ಲ ? ಇವರ ಭೇಟಿಯಿಲ್ಲ ? ಇನ್ನೊಬ್ಬರಿಗೆ ಹೇಳಿಕಳಿಸಬಾರದಿತ್ತೇನು ಮುಂತಾಗಿ.

ಮನೆಯ ದೋಸೆಯವರೆಗೆ ಬಂದಾಯಿತು. ಇವು ಸಾದಾವು ಅಲ್ಲ, ತುಪ್ಪವೂ ಅಲ್ಲ; ಎರಡೂ ಹೌದು. ಮನೆಯಲ್ಲಿ ಗೃಹಸ್ಥರು ಭೇದಮಾಡುವುದು ಹೇಗೆ? ಅದು ಸಾದಾವಾದರೂ ಹೊಟೇಲಿನ ಒಣಕಲು ಚಕ್ಕಳವಾಗದು. ತುಪ್ಪವೆಂದರೆ ಹನಿಯುವ ಬಸಿಯುವ 58ರ ಧಾರಾಪುರವಾಗದು. ಜೊತೆಗೆ ಮನೆಯ ಯೋಗ್ಯತೆಗೆ ತಕ್ಕಂತೆ ಮೇಲುತ್ತುಪ್ಪ ಬೀಳಬೇಕಲ್ಲವೆ? ಕೇಳಲಿ, ಕೇಳದಿರಲಿ, ಹಸ ಎಮ್ಮೆ ಕಟ್ಟಿರುವ ಮನೆಗಳ ಹೈನದ ಸಮೃದ್ಧಿ ದೋಸೆಯ ಮೇಲೆ ದುಮುಕುತ್ತದೆ. ಈ ಬಗೆಗೂ ಎಂದಿಗಿಂತ ನಮ್ಮ ಕಾಲ ಇನ್ನಷ್ಟು ಅನುಕೂಲದ್ದಾಗಿತ್ತು. ಹೊರಗೆ ಹೆಚ್ಚು ದುಡಿತವಿರಲಿಲ್ಲ. ಕಚೇರಿಗೆ ಬೇಕಾದಾಗ ಬೇಕಾದಷ್ಟು ಮಾತ್ರ ಹೋಗಿ ಬರಬಹುದಾಗಿದ್ದ ಕಾಲ. ಹೆಚ್ಚು ಕಾಲ ಕಚೇರಿಯಲ್ಲಿದ್ದ ಮಾತ್ರದಿಂದ ಈಗ ಕೆಲಸ ಹೆಚ್ಚಾಗುತ್ತಿದೆಯೆಂದಲ್ಲ – ಆಗ ಕಾಲಾವಕಾಶ ಧಾರಾಳವಾಗಿರುತ್ತಿತ್ತು ಎನ್ನುವುದಕ್ಕಾಗಿ ಮಾತ್ರ ಹೇಳಿದೆ; – ನಿಶ್ಚಿಂತೆಯಿಂದ ಒಳಗೆ ಕುಳಿತು ದೋಸೆ ತಿನ್ನುವುದಕ್ಕೆ. ದಿನದಿನಕ್ಕೆ ಬದುಕು ಬಿಗಡಾಯಿಸುತ್ತಿದೆ. ಯಾವುದಕ್ಕಾಗಿ ದುಡಿತವೋ, ಆ ಗುರಿಯ ಸಾಧನೆಗೆ ಸಮಯವೇ ಇಲ್ಲ. ಮನೆ, ಸಂತೋಷ, ಊಟ, ಉಪಚಾರ, ಮಾನ, ಮರ್ಯಾದೆ, ಶಾಂತಿ ಬೇಕೆಂದು ತಾನೆ ಈ ಚಾಕರಿಗಳನ್ನೆಲ್ಲ ನಾವು ಮಾಡುವುದು? ಚಾಕರಿಯ ಅನಿಷ್ಟ ಅಗೌರವಗಳನ್ನೆಲ್ಲ ನುಂಗಿಕೊಳ್ಳುವುದು ? ಚಾಕರಿ ಮಾಡುವುದಕ್ಕೊಪ್ಪುವುದು? ಅದಕ್ಕೆ ಬೇಕಾದ ನಾಲ್ಕು ಕಾಸು ಸಂಪಾದಿಸುವುದಕ್ಕೆ ಜೀವಿತ ಕಾಲವೆಲ್ಲ ವೆಚ್ಚವಾಗಿ ಬಿಡುತ್ತದೆ. ಅದರಲ್ಲಿ ತೊಡಗುವುದು, ಅದನ್ನು ನೆನೆಯುವುದು, ಅದನ್ನು ಕುರಿತು ಎಲ್ಲೆಲ್ಲಿಯೂ ಮಾತನಾಡುವುದು, ಅದಕ್ಕಾಗಿ ಸಿದ್ಧವಾಗುವುದು, ಗಾಡಿ, ರೈಲು, ಬಸ್ಸು ಕಾಯುವುದು, ತಡವಾದರೆ ನಿಮಿಷ ನಿಮಿಷ ಎಣಿಸಿ ತಲ್ಲಣಿಸುವುದು. ಪುರುಷಾರ್ಥಕ್ಕಿಂತ ಅದನ್ನು ಸಾಧಿಸುವ ಗಾಸಿಯೇ ನಮ್ಮ ಪಾಲಿಗೆ ಉಳಿಯುವ ಭಾಗ್ಯ ಇಂದು. ಇಂಥ ಕಾಲದಲ್ಲಿ ಸಾವಕಾಶ, ಸಾವಧಾನ ಎಲ್ಲಿಂದ ಬರಬೇಕು? ಅವಕಾಶ, ಅವಧಾನ ದೊರಕವಾದರೆ ದೋಸೆಯ ಸಂಸ್ಕೃತಿಗೆ ಧಕ್ಕೆ ಬರುತ್ತದೆ.

ಮನೆಯ ದೋಸೆಗಳಲ್ಲಿ ಬಗೆಗಳು ಅನೇಕ. ಶುದ್ಧ ಜಾತಿಗಳನ್ನು, ಅವುಗಳಲ್ಲಿ ಮುಖ್ಯವಾದವುಗಳನ್ನು ಮಾತ್ರ ಇಲ್ಲಿ ನೆನಸಿಕೊಳ್ಳಬಹುದು. ಒಂದೊಂದು ಮನೆಗೆ, ಊರಿಗೆ ಒಂದೊಂದು ಜನಕ್ಕೆ ಒಂದೊಂದು ಬಗೆ ಸಿದ್ಧ. ಬೀದಿಯಲ್ಲಿ ಕುಳಿತು ಮಾರುವ, ಮಡಕೆಯಲ್ಲಿ ಮಾಡಿದ ಕುದುಪಲಕ್ಕಿಯ ದೋಸೆಯಂಥದನ್ನೂ ಸಾಮಾನ್ಯ ಬಳಕೆಯವನ್ನೂ ರೈಲ್ವೆ ಸ್ಟೇಷನ್, ಮಾರ್ಕೆಟ್, ಮಂಡಿಪೇಟೆಗಳಲ್ಲಿ ಅನ್ನದೊಡನೆ ಮಾರುವ ಬಗೆಗಳನ್ನೂ ಸದ್ಯಕ್ಕೆ ಬಿಡುತ್ತೇನೆ. ನಡುಮಟ್ಟದವರ ದೋಸೆಯ ವಿಷಯ ಇಲ್ಲಿ ನನಗೆ ಸಂಬಂಧಿಸಿದ್ದು. ಉಳಿದವರ ಪರಿಚಯ ನನಗಿಲ್ಲವಾಗಿ ತಿಳಿಯದ ಅದನ್ನು ಕುರಿತು ನುಡಿದು ಅಪಚಾರ ಮಾಡಲು ನಾನೇನು ವಿಮರ್ಶಕನು ಕೆಟ್ಟೆನೆ? ದೋಸೆಯ ಆಕಾರ, ಸ್ಟ್ಯಾಂಡರ್ಡ್ ಒಬ್ಬೊಬ್ಬರಲ್ಲಿ ಒಂದೊಂದು. ಮುಖ್ಯ ಬಗೆಗಳು ದಪ್ಪ ಜಾತಿಯವು. ತೆಳ್ಳನೆಯವು. ದಪ್ಪದವುಗಳಲ್ಲಿ ಮುಖಮಲ್ಲಿನಂತೆ, ಮೈಸೂರು ಪಾಕಿನ ಬಿರುಕಿನಂತೆ, –ಎಲ್ಲರ ಮನೆಯ ದೋಸೆಯೂ ತೂತೆ, ಕೇಳಿಲ್ಲವೆ ?– ಜೇನುಗೂಡಿನ ಹಟ್ಟಿಯಂತೆ ಮೃದುವಾದುದು ಒಂದು ; ಬಳುಕಿಸದೆ ಎತ್ತಲಾಗದ ತೆಳುವಿನದೂ ನವುರಿನದೂ ಇನ್ನೊಂದು. ಅಗಲವಾದ ದೊಡ್ಡ ಬಿಸ್ಕತ್ತಿನಂತೆ ಉಡುಪಿಯಲ್ಲಿ ಮಾಡುವ ದಪ್ಪ ದೋಸೆ ಅದೊಂದು ಬಗೆ. ಇನ್ನೊಂದು : ಬಾಣಲೆಯಲ್ಲಿ ಮಾಡುವ ಹದದ್ದು ; ಇನ್ನೊಂದು ಶ್ರೀಮಂತ, ರಾಜಮಹಾರಾಜರ ಸೇವನೆಗಾಗಿ ಮಾಡುವ ಫೆಲ್ಟ್ ವುರ್ಸ್ಟೆಡ್ ಹದದ ದೋಸೆ ; ಇನ್ನೊಂದು ಕೆಲವರಿಗೆ ರುಚಿಸುವ ಪಾರ್ಚ್‌ಮೆಂಟ್ ದೋಸೆ. ಯಾವುದೂ ಹರುಕಲು ಮುರುಕಲು ಆಗಬಾರದು. ಬಹುಶಃ ಒಂದು ಬಗೆಯದನ್ನು ಬಿಟ್ಟು ಸಾಧಾರಣವಾಗಿ ದೋಸೆ ಮುರಿದರೆ ಹಾಕುವ ಕೈ ಪಳಗಿಲ್ಲ ಎಂದರ್ಥ. ಪಳಗದ ಸಂಗತಿಗಳನ್ನು ನನ್ನ ಮುಂದೆತ್ತಬೇಡಿ. ಹಸಿಯಿಲ್ಲದ, ಅಂಟಿಲ್ಲದ, ಸೀಯದ, ಒಣಕಲಲ್ಲದ, ಮೃದುವಾದ, ಎಳಗೆಂಪಿನ, ಹಲ್ಲಿಗೆ ಹದವಾಗಿ ನುರಿಯುವ, ಕಡಿದ ಕೂಡಲೆ ಸಿಹಿಯಾಗುವ, ಬಾಯಲ್ಲಿ ನೀರೂರಿಸುವ, ಅಗಿವ ಹೆಚ್ಚು ಅಗತ್ಯಕೊಡದೆ ನಾಲಗೆಯ ತಿರುವಿಗೆ ಸಿಕ್ಕುವ ಪ್ರಕಾರ ಅವ್ವಲ್ ಜಾತಿಯದು. ಉಳಿದವು ಎಷ್ಟೋ ಇವೆ. ಅವನ್ನು ಇತರರು ವರ್ಣಿಸಲಿ.

ಈ ಎಲ್ಲ ರೀತಿಯನ್ನೂ ಕೆಂಡ, ಕಾವಲಿ, ಕೈವಾಡ ಸಾಧಿಸಬಲ್ಲವು,-ಅವುಗಳ ಮನಸ್ಸು ಒಲಿದರೆ. ಆಕೃತಿಯಾಯಿತು, ರಚನೆಯಾಯಿತು. ಇನ್ನು ರುಚಿಯ ವಿಷಯ ತಿನ್ನುವವರದು. ಅವರ ಭೋಗಕ್ಕಾಗಿಯಲ್ಲವೆ ಎಲ್ಲ ಪ್ರಯತ್ನ? ಅವರು ದೋಸೆ ಮಾಡಬಲ್ಲವರಾಗಬೇಕಿಲ್ಲ. ವಿಮರ್ಶೆ ವ್ಯಾಖ್ಯಾನ ತಿನ್ನುವವರಿಗೆ ಸಂಬಂಧಿಸಿದುದೇ ಹೊರತು ಮಾಡುವವರಿಗಲ್ಲ. ಅವರು ಅಡಿಗೆಯವರಲ್ಲ, ರಸಿಕರು, ವಿಮರ್ಶಕರು; ಅವರ ಖುಷಿಗಾಗಿ, ಭೋಗಕ್ಕಾಗಿ, ಪರಮಾಯಿಷಿಗಾಗಿ ಮಾಡುವವರೆಲ್ಲ ಮಾಡುವುದು. ಮಾಡುವವರ ರುಚಿ ತಿನ್ನುವವರದೂ ಆಗಿದ್ದರೆ ಅಥವಾ ತಿನ್ನುವವರ ರುಚಿಗೆ ತಕ್ಕಂತೆಲ್ಲ ಮಾಡುವವರು ಮಾಡುವರಾದರೆ ಅದೂ ಸರಿಯೇ. ಆದರೆ, – ಎಲ್ಲಿಯೇ ಆಗಲಿ ಎಂದೇ ಆಗಲಿ ಸತ್ಯ ಇದು : ನೂರು ತರಹ ದೋಸೆ ಚೆನ್ನಾಗಿರಬಲ್ಲದು. ಇಲ್ಲಿನದೇ

ಚೆನ್ನ, ಇನ್ನೊಂದಲ್ಲ ; ಇದು ಹೀಗಿದ್ದರೆಯೇ ಚೆನ್ನ, ಬೇರೆ ಚೆನ್ನಾಗದು-ಎಂಬ ಹಟಮಾರಿತನ ಅವಿವೇಕ. ತಿಳಿದವರ, ಅನುಭವರಸಿಕರ ಲಕ್ಷಣವಲ್ಲ, ಮಾತಲ್ಲ. ಯಾರು ಇದಕ್ಕೆಲ್ಲ ಚಿಕಿತ್ಸೆ, ವಿಧಾನ ವಿಧಿಸುವವರು? ಸಿದ್ಧಹಸ್ತದ ವೈದ್ಯ ಕೊಟ್ಟ ನೀರು, ಬೂದಿ ಪರಮೌಷಧಿಯೂ ಸಂಜೀವನವೂ ಆಗಬಲ್ಲುದು ಎನ್ನುವುದಿಲ್ಲವೆ? ಹಾಗೆಯೇ ಸಿದ್ಧ ಹಸ್ತದ ದೋಸೆ ಸುಕೃತ. ತಾವೇ ಸುಟ್ಟು ಬೆಂದಿರುವ ವಿದಗ್ಧರಿಗೆ ಇದು ವೇದ್ಯವಾದ ಸಂಗತಿ.

ಮನೆಯಲ್ಲಿನವೂ ಎಷ್ಟು ಬಗೆಯವೋ ಪ್ರಕಾರಗಳು ಎಂದೆನಲ್ಲವೆ? ಮೆಂತೆಯದ್ದು, ಕಾಯಿದೋಸೆ, ಉದ್ದಿನದು, ಅವಲಕ್ಕಿಯದು, ಅಕ್ಕಿ ತೊಗರಿ ನುಚ್ಚಿನದು, ತಪ್ಪಲೆ ದೋಸೆ, ರವೆದೋಸೆ, ಮಸಾಲೆ ಹಾಕಿದ್ದು, ಹಾಕದ್ದು, ಉರುಳುಗಡ್ಡೆ ಅಥವಾ ಮೂಲಂಗಿ, ಸೌತೆಕಾಯಿ–ಕೆಲವರಿಗೆ ನೀರುಳ್ಳಿ–ತುರಿಯೂ ಇನ್ನಾವುದನ್ನೊ ಸೇರಿಸಿ ಹದ ಮಾಡಿದ್ದು; ಬೂದುಗುಂಬಳ, ಸೋರೆ, ಸೌತೆಗಳ ಎಳತಿಳಲನ್ನು ಬೆರಸಿದ್ದು ಇತ್ಯಾದಿ. ಕೊತ್ತಂಬರಿಸೊಪ್ಪು, ಮೆಣಸಿನಕಾಯಿ ಹಾಕಬಹುದು ಬಿಡಬಹುದು ; ಕೆಲವಕ್ಕೆ ಹಸಿಯ ತೆಂಗಿನಕಾಯಿ ಸೊಗಸು. ಕೆಲವಕ್ಕೆ ಒಣಕೊಬ್ಬರಿ ತುರಿಬೆರೆದಂತೆ ಕಾಯಿತುರಿ ಬೆರೆಯದು. ಆಯಾ ದೋಸೆಗೆ ತಕ್ಕಂತೆ ಚಟ್ನಿಯೊ ಪುಡಿಯೊ ಸಾಹಿತ್ಯ ಬೇಕು. ಪಲ್ಯಗಳು ಹಾಗೂ ಹೀಗೂ ಹೊಂದುತ್ತವೆಯಾದರೂ ಎಲ್ಲ ಅಲ್ಲ. ದೋಸೆಯ ಜೊತೆಗೆ ಆಲೂ ಪಲ್ಯ ಎತ್ತಿದ್ದು. ನನ್ನ ಗೆಳೆಯರೊಬ್ಬರು ಆಲೂ ಪಲ್ಯಕ್ಕಾಗಿಯೇ ಅಂಗಡಿಯಲ್ಲಿ ದೋಸೆ ಆರ್ಡರ್ ಮಾಡುತ್ತಾರೆ. ಆದರೂ ದೋಸೆಗೆ ಚಟ್ನಿ ಹೊಂದುವಷ್ಟು ಸ್ವಾರಸ್ಯವಾಗಿ ಪಲ್ಯಗಳು ಹೊಂದುವುವೊ ಇಲ್ಲವೊ. ಇದು ರುಚಿಯ ಪಕ್ಷಪಾತ ಭೇದವಾದ್ದರಿಂದ ಅಂಥದನ್ನು ಚರ್ಚಿಸಿ ಫಲವಿಲ್ಲ. ಒಲಿದರೆ ಮಾತ್ರ ಬರಬಲ್ಲ ಒಲವು ಬೇಡಿದರೆ ಬಂದೀತೆ?... ಬಗೆಬಗೆಯ ಚಟ್ನಿಗಳು ಒಪ್ಪುವುವಾದರೂ ತೆಂಗಿನಕಾಯದು ಉತ್ಕೃಷ್ಟ; ಕಾಯಿ ತನಿಯಾಗಿದ್ದಷ್ಟೂ ಸುಖ. ಕಣಿವೆ ಕೆಳಗಿನವರು ತೋಸೈಗೆ ಎಣ್ಣೆ, ಮಳಹಾಯಿ ಪುಡಿ ಸೇರಿಸುವ ಕಯಾಲಿನವರು. ಆ ಸಂಭಾರ ವಿಚಿತ್ರವಾಗಿ ಕಿವಿಗೆ ಕೇಳಿಸಿದರೂ, ಕಣ್ಣಿಗೆ ಕಾಣಿಸಿದರೂ ಪರವಾ ಇಲ್ಲ. ನಮ್ಮ ತೂಕಕ್ಕೆ, ಮಾನಕ್ಕೆ ಅದು ಏರದಿದ್ದರೂ ದಕ್ಷಿಣದ ಬಹುಭಾಗಕ್ಕೆ ಪ್ರಿಯವಾದ್ದರಿಂದ ಅದಕ್ಕೆ ಒಂದು ರೀತಿಯ ಬಹುಮತವನ್ನು ಈ ಕಾಲದಲ್ಲಿ ಅಲಕ್ಷಿಸುವ ಹಾಗಿಲ್ಲ. ಆದ್ದರಿಂದ ದೋಸೆ ತಿನ್ನುವಾಗ ದಕ್ಷಿಣದವರನ್ನು ಬಿಟ್ಟರೆ ಉಳಿಯುವ ಹಾಗಿಲ್ಲ. ಉತ್ತರದವರು ದೋಸೆಯ ಪಾಲಿಗಿಲ್ಲ. ಉತ್ತರವೇ ಏಕೆ ? ತುಂಗಭದ್ರೆಯಾಚೆಯ ನಮ್ಮ ಸೋದರ ಕನ್ನಡಿಗರಿಗೆ ಕೂಡ ದೋಸೆ ದಕ್ಕಿದ್ದಲ್ಲ. ಮರಾಠಿ, ಹಿಂದುಸ್ತಾನಿ ಸಂಪ್ರದಾಯದವರು ದೋಸೆ ಒಲಿಯದ ನಿರ್ಭಾಗ್ಯರು. ಅವಕ್ಕಾಗಿ ನಮ್ಮವರೆಗಾದರೂ ಬರಬೇಕು. ಮನೆಯ ದೋಸೆಯೂ ಮದುರೆ, ಶಿತ್ತಂಬಲಂ ದೋಸೆಗೂ ಸ್ವಲ್ಪ ಬಿಸಿ ಕಡಮೆಯಾದರೂ ರುಚಿಗೆಡವು. ಮನೆಯ ತೆರದವು ಅವು. ಪಲ್ಯವಿದ್ದರೆ ಒಳಿತು; ಇಲ್ಲವಾದರೆ ನಷ್ಟವಿಲ್ಲ.

ದೋಸೆ ಮೃದುವಾಗಿ, ಬಿಸಿಯಾಗಿ, ಸವಿಯಾಗಿ ಆದಾಗ ತಿಂದ ಬಾಯಿ ಚೊಕ್ಕಟವಾಗುವುದು. ಗಂಟೆಗಳವರೆಗೆ ಆ ಸುಖದ ಭಾವನೆ, ನೆನಪು, ಪರಿಮಳ ಉಸಿರಲ್ಲಿ, ಬಾಯಲ್ಲಿ ಒಳಗೆ ನಿಲ್ಲುತ್ತ ಹಾಯೆನಿಸುತ್ತಿರುವುದು. ಎಷ್ಟರ ಮಟ್ಟಿಗೆ ಸಂತೃಪ್ತಿ ತುಂಬಿದೆಯೆಂಬುದನ್ನು ಒಳಗು ನಿರಂತರವಾಗಿ ತಿಳಿಸುತ್ತಿರುವುದು. ಒಳ್ಳೆಯ ದೋಸೆ ತಿಂದು ಹೋಗಿದ್ದ, ತಿನ್ನಿಸಿದ್ದ ಆಫೀಸರಿಂದ ದೊಡ್ಡ ಪ್ರಯೋಜನ ಪಡೆದವರುಂಟು. ಲಕ್ಷಾಂತರ ರೂಪಾಯಿನ ಕಂಟ್ರಾಕ್ಟು, ಲೈಸೆನ್ಸು ಬೇಕಾದರೆ ಅದನ್ನು ಪಡೆಯಲು ಇದಕ್ಕಿಂತ ಮೇಲ್ತರದ ಉಪಚಾರ ಬೇರೊಂದಿಲ್ಲವೆನ್ನದವರಿಲ್ಲ. ಬಿದ್ದಿದ್ದ ಎಷ್ಟೋ ಜುಲ್ಮಾನೆಗಳು ವಜಾ ಆಗಿವೆ. ಶಾನುಭೋಗರು ಕಂದಾಯಕ್ಕೆ ವಾಯಿದೆ ಕೊಡಿಸುತ್ತಾರೆ. ಬರ್ತ್‌ಫರ್ಫ್ ಆದವರ ಮೇಲಿನ ಆಜ್ಞೆಗಳನ್ನು ಹಿಂದಕ್ಕೆ ತೆಗೆದುಕೊಂಡ ಸಂದರ್ಭಗಳಿವೆ. ತಿಂದಂದು ಮನಸ್ಸು ಪ್ರಸನ್ನ ; ದಿಕ್ಕು ದೆಸೆ, ನೆಲ ಜಲ, ಬಾನು ರಸ್ತೆ, ಕಚೇರಿ ಫೈಲು, ಒಳಗೆ ಸುತ್ತ, ಎಲ್ಲವೂ ಪ್ರಸನ್ನ. ನಡೆವ ದಾರಿ ಸುಗಮ. ಲೋಕ ನುಣುಪಾಗಿ ಗಾಜಿನಂತೆ, ಶುಭ್ರವಾದ ಗಾಜಿನಲ್ಲಿನಂತೆ ಕಾಣುವುದು. ಹಾಡಬೇಕೆನ್ನಿಸುವುದು. ಗಟ್ಟಿಯಾಗಿ ಹಾಡಿದರೆ ಅಸಭ್ಯವೆಂದೊ ಕರ್ಕಶವೆಂದೊ ನುಡಿಯುವರಿಲ್ಲದಿದ್ದರೆ ಗಟ್ಟಿಯಾಗಿಯೇ ಹಾಡೋಣವೆನ್ನಿಸುವುದು. ಸಣ್ಣ ದನಿಯನ್ನಾದರೂ ಅಡಗಿಸುವುದು ಅಶಕ್ಯವಾಗುವುದು. ಬೀದಿಯಲ್ಲಿ ಕಾಣುವವರಿಗೆಲ್ಲ ಮುದ್ದು ಮುಚ್ಚಟೆ ಹರಡೋಣವೆನ್ನಿಸುವುದು. ದೋಸೆಯ ಹದ ಕೆಡಿಸಿ ನ್ಯಾಯಾಧೀಶರನ್ನು ಬೆಂಚಿಗೆ ಕಳಿಸಿ ನೋಡಿ ; ಯಾವ ದುರ್ದೈವದ ಅಪರಾಧಿಗೊ ಫಾಸಿ ಶಿಕ್ಷೆ ಕಾದಿರುತ್ತದೆ.

ಸ್ನೇಹಿತರೊಬ್ಬರು ಆಕ್ಸ್‌ಫರ್ಡಿಗೆ ಹೋಗಿದ್ದರು. ಅಲ್ಲಿಂದ ಫ್ರಾನ್ಸ್, ಜರ್ಮನಿ, ಇನ್ನೂ ಎಲ್ಲೆಲ್ಲಿಯೊ ಸುತ್ತಿ ಬಂದವರು ಅವರು. ಊಟದ ರಸಿಕರೂ ಆದ ಪ್ರಯುಕ್ತ ಯಾವ ದೇಶದಲ್ಲಿ ಯಾವುದು ಉತ್ತಮ ಖಾದ್ಯವೊ ಪಾನೀಯವೊ ಅದನ್ನೆಲ್ಲ ಅರಿತು ಬಂದಿದ್ದರು. ಅವರು ಜುಜುಬಿ ನೂರು, ಸಾವಿರ ಸಂಬಳದವರಲ್ಲ. ದೊಡ್ಡ ಕೀರ್ತಿ ಸಂಪಾದಿಸಿದವರು. ಆ ತಿಂಡಿ ಈ ತಿಂಡಿಗಳನ್ನು ವರ್ಣಿಸಿ ನಮಗೆ ಹಕ್ಕಿ, ಹಂದಿ, ದನದ ಪಲಗಳ ಸಹನೆ, ಪ್ರೀತಿ ಉಂಟುಮಾಡಿದರು. ಪಾಶ್ಚಿಮಾತ್ಯರ ಅಡಿಗೆ ಹೇಗೇ ಇರಲಿ, ಅವರು ಹೇಗೇ ವರ್ಣಿಸಲಿ, ನಮ್ಮ ಅಡಿಗೆಯ ಹತ್ತಿರಕ್ಕೆ ಬರಲಾರದು ಎಂದು ನಮಗೆ ಶತಶತಕಗಳಿಂದ, ಏಕೆ ಅಲೆಕ್ಸಾಂಡರ್ ಕಾಲದಿಂದ, ತೀರ್ಮಾನವಾಗಿ ಹೋಗಿದೆ. ಉಪ್ಪು, ಹುಳಿ, ಕಾರ ಬೇರೆಯಾಗಿ ಬೆರೆಸಿಕೊಳ್ಳುವವರ ಊಟವೇನು ಊಟ ಹೇಳಿ. ನಮ್ಮ ಸ್ನೇಹಿತರ ಮುಡಿನುಡಿ ಸಿದ್ಧಾಂತಕ್ಕೆ ಬಂದಿದ್ದ ಅವರ ನಿಶ್ಚಯಕ್ಕೂ ಅಂತಃಪ್ರಮಾಣಕ್ಕೂ ಸಾಕ್ಷಿಯಂತಿತ್ತು. ಅದನ್ನು ಹೇಳುವಾಗ ಅವರ ಮುಖ ಪ್ರಫುಲ್ಲಿತವಾಗಿತ್ತು. ಕಣ್ಣು ತುಟಿ ಅಭಿಮಾನದಿಂದ ಬಿರಿದಿದ್ದವು. ಶುಭ್ರವಾದ ಅವರ ದಂತಪಂಕ್ತಿ ಪ್ರಸನ್ನವಾದ ಮುಗುಳುನಗೆಯ ಬೆಳಕಿನಲ್ಲಿ ದೀಪ್ತವಾಗಿತ್ತು. ಹೇಳಿದರು ಅವರು : ಭೂಮಿಯ ನಾಲ್ಕು ದಿಕ್ಕುಗಳಲ್ಲಿ ತಿರುಗಿ ಬನ್ನಿ; ಸ್ವರ್ಗದ ಎಂಟು ಗಾಳಿಗಳನ್ನು ಕೇಳಿ–ಅವರು ಆ ಕಾಲದಲ್ಲಿ, ಈಗ್ಗೆ 30–35 ವರ್ಷಗಳ ಹಿಂದಿನ ಒಂದು

ಸ್ವರ್ಣಯುಗದಲ್ಲಿ – ಇಂಗ್ಲಿಷಿನಲ್ಲಿ ಆಡಿದ ಮಾತು ಅವು. ನನ್ನ ಕಿವಿಯಲ್ಲಿಯೂ ಅಂತಃಕರಣದಲ್ಲಿಯೂ ಮಾರ್ದನಿ ಕೊಡುತ್ತಿವೆ ಇನ್ನೂ – ಹೇಳಿದರು : ನಮ್ಮೆರಡು ಮೂರು ಪದಾರ್ಥಗಳಿಗೆ ಸಮನಾದ ಖಾದ್ಯ ಲೋಕದಲ್ಲಿ ಇನ್ನೊಂದಿಲ್ಲ. ಹಿದಕವರೆ ಮೇಲೋಗರ, ತುಪ್ಪ ತೇಂಗೊಳಲು, ಎಲ್ಲಕ್ಕೂ ಅತಿಶಯವಾಗಿ ನಮ್ಮ ದೋಸೆ ಎಂದು. ಇನ್ನಾರಿಗೆ ಹೇಗೆನಿಸುವುದೊ ನನಗಂತೂ ಈ ಸತ್ಯ ವಾದಾತೀತ ; ಅಖಂಡ; ಪರಮ ಪ್ರಮಾಣದ್ದು; ಸ್ವಯಂಸಿದ್ಧ. ಅಂಥ ಮಾತಿಗೆ ವೃತ್ತಿಯೇಕೆ ? ವ್ಯಾಖ್ಯಾನವೇಕೆ? ಟೀಕೆ ಟಿಪ್ಪಣಿ ಸಲ್ಲದ, ಅವಕ್ಕೆ ಮೀರಿದ, ನಿರ್ವಚನಕ್ಕೆ ಎಟುಕದ, ಅತೀತ ಸತ್ಯ ಅದು. ಸಿದ್ಧಸಾಧನಂ ದೋಷಃ ಎನ್ನುವ ತಾರ್ಕಿಕರಾರೂ ಅಲ್ಲಿರಲಿಲ್ಲವಾಗಿ ನಿಂದಾಸ್ತುತಿ ಮಾಡಿಯೂ ಅದನ್ನು ಹೊಗಳಬೇಕಿರಲಿಲ್ಲ. ನಿಮ್ಮಲ್ಲಿಯೂ ಯಾರೂ ಇರಲಾರಿರಿ. ಇಂತಹ ಸತ್ಯವನ್ನು ಹೊಸತಾಗಿ ಸ್ಥಾಪಿಸಬೇಕಾದ್ದೇನಿದೆ? ಎಂದಿಗೂ ನಮಗೆ ಹೆಮ್ಮೆಯೇ; ಯೋಗ್ಯತೆಯಲ್ಲಿ, ಸಂಸ್ಕೃತಿಯಲ್ಲಿ, ಆಧ್ಯಾತ್ಮ ವಿಚಾರದಲ್ಲಿ, ಮಾತಿನಲ್ಲಿ, ಅಭಿಮಾನದಲ್ಲಿ ನಮ್ಮನ್ನು ಇನ್ನಾವ ಜನಾಂಗ ಮೀರಿಸಬಲ್ಲುದು? ಹೀಗಿರುವಾಗ ದೋಸೆಯನ್ನು ಕುರಿತು ಇಂಥ ಮಹನೀಯರು ಮಾಡಿದ ಪ್ರಶಂಸೆಯನ್ನು ಕಪಟವರಿಯದ ಸ್ನೇಹಿತರೊಡನೆಯ ಸಲ್ಲಾಪದಲ್ಲಿ ತೊಡಗಿದ್ದ ಅವರ ಮಾತನ್ನು ಒಪ್ಪದ, ಅದಕ್ಕೆ ಸಂತೋಷಪಡದ ಬಡವು ಯಾವನಿದ್ದಾನು?

ದೋಸೆ ಆರೋಗ್ಯವೊ ಅನಾರೋಗ್ಯವೊ ನಾನರಿಯೆ. ಚೆನ್ನಾಗಿ ದೋಸೆ ಮಾಡಿದರೆ ಎಂತಹ ಸ್ಥಿತಿಯಲ್ಲಿಯೂ ನನಗೇನೊ ಕಬೂಲೇ. ಮನೆಯಲ್ಲಿ ಮಾಡಿದರೆ ಮೂರು, ನಾಲ್ಕು, ಅಂಗಡಿಯದಾದರೆ ಒಂದಾದರೂ ಪೂರ್ತಿ–ಒನ್ ಬೈ ಟೂ, ಥೂ, ಅಲ್ಲ,-ಸ್ಪೆಷಲ್ ಮಸಾಲೆ ತಿನ್ನಲು ನಾನಂತೂ ಸಿದ್ಧ..... ಒಂದು ಸಲ ಗೆಳೆಯರೊಬ್ಬರ ಮನೆಗೆ ಊಟಕ್ಕೆ ಕರೆದಿದ್ದರು; ಹೋದೆವು. ಸ್ವಲ್ಪ ತಡಮಾಡಿ ಹೋಗಬೇಕಾಯಿತು. ಊಟಕ್ಕೆ ಕುಳಿತು ತೊಡಗಿದ ಒಡನೆಯೇ ಅಲ್ಲಿನ ಯಜಮಾನಿತಿಯರು ನಮ್ಮ ಲಕ್ಷಣವನ್ನು ಗುರುತಿಸಿದರು: 'ನಿಮಗೆ ಆಗಿರಬೇಕು, ಆ ಶನಿ, ಮಸಾಲೆದೋಸೆ; ಊಟ ಹೇಗೆ ರುಚಿಸೀತು; ನಿಮಗಾಗಿ ಈ ಎಲ್ಲ ಅಡಿಗೆ ಏಕೆ ಮಾಡಿ ಕಾಯಬೇಕೊ' ಎಂದರು. ಅದು ಬಹುದಿನದ ಸ್ನೇಹಿತರ ಪ್ರೀತಿಯ ಆಕ್ಷೇಪಣೆಯಾದ್ದರಿಂದ ಕೋಪವುಂಟು ಮಾಡಲಿಲ್ಲ. ಆದರೆ ಸಾಮಾನ್ಯವಾಗಿ ಸಂಕೋಚವಿಲ್ಲದ ಕಡೆ ನಾಚಿಕೆಯಾಯಿತೆಂದರೆ ಅದರ ಅರ್ಥವನ್ನು ನೀವು ಗ್ರಹಿಸೀರಿ. ನಿಜವನ್ನೇ ನುಡಿವವರ ಮುಂದೆ ಸುಳ್ಳಾಡುವುದಾದರೂ ಹೇಗೆ? ಆದರೂ, ಆದರೂ.... ಅದನ್ನು ಶನಿ ಎನ್ನಬಾರದಾಗಿತ್ತು ಅವರು. ದೋಸೆ ಚೆನ್ನಾಗಿತ್ತು.....

ಅವರು ತಾನೇ ಏನು ಮಾಡಿಯಾರು? ನಮಗಾಗಿ ಬೆಳಿಗ್ಗೆಯಿಂದ ದುಡಿದು ಪಲ್ಲೆಯ ಪಾಯಸ, ಪಕ್ವಾನ್ನಗಳನ್ನು ಮಾಡಿ ಔತಣದ ಊಟಕ್ಕೆ ಕರೆದಿದ್ದವರು. ನಾವು ಗಡದ್ದಾಗಿ ಮೊದಲೇ ಮಸಾಲೆದೋಸೆ ತಿಂದು ಹೋದರೆ ಅವರ ಮನಸ್ಸಿಗೆ

ಹೇಗೆನಿಸಬೇಕು? ಬೇಸರವಾಗದಿರುತ್ತದೆಯೆ?.... ನೀವೂ ಹಾಗೇ ಅಂದೀರಿ. ನಿಮ್ಮ ಮಾತಿನಲ್ಲಿ ನಯವಿದೆ; ಧರ್ಮವಿದೆ. ಅವರಲ್ಲಿ ಸಹಾನುಭೂತಿ, ಗೌರವ ಇವೆ. ಆಕ್ಷೇಪಣೆಯಲ್ಲಿ ಔಚಿತ್ಯವೂ ಪ್ರಕರಣಶುದ್ಧಿಯೂ ಇವೆ. ನಾನು ಬಲ್ಲೆ. ಅಪ್ಪರ್ಥ ಮಾಡಿಕೊಳ್ಳಲಾರದ ಮಡ್ಡಿಯೇ ಬೊಬ್ಬುಳಿ ತುಂಡೆ ನಾನು ? ಆದರೆ ನಮ್ಮ ಪರವಾಗಿಯೂ ಒಂದು ಮಾತನ್ನು ಹೇಳುತ್ತೇನೆ. ಸಹಾನುಭೂತಿ ಹಾದೀತು. ಮನೆಯ ಮಹಾತಾಯಾದ್ದರಿಂದ ಆಕೆಗಂತೂ ಹಾಯಿತು-ಕತೆ ಹೇಳಿದ ಮೇಲೆ. ಅವರ ಮನೆಗೆ ಹೋಗುವ ದಾರಿಯಲ್ಲಿಯೇ ಈ....ಹೊಟೇಲೇಕಿರಬೇಕು? ಅದರ ಬಾಗಿಲಲ್ಲಿ ಕ್ಯೂ ನಿಂತವರಲ್ಲಿ ಕಾಲೇಜಿನ ಹಳೆಯ ಕಾಲದ ಸ್ನೇಹಿತರು ನಮ್ಮನ್ನೇಕೆ ಗುರುತಿಸಿ ತಡೆದು ನಿಲ್ಲಿಸಬೇಕು? ನಮಗೆ ಅವರೂರಲ್ಲಿ ನೂರಾರು ಉಪಚಾರ ಮಾಡಿದ್ದವರಿಗೆ ನಾವು ಪ್ರತ್ಯುಪಚಾರ ಮಾಡುವುದು ಸರಿಯೆ? ನಾವು ಅವರಿಗೆ ಕೊಡಿಸದಾದರೆ ಹೋಗಲಿ, ಅವರು ಒತ್ತಾಯಮಾಡಿ ನಮ್ಮನ್ನು ಒಳಕ್ಕೆ ಕರೆದರೆ ಬರುವುದಿಲ್ಲವೆಂದು ಬರ್ಬರತೆ ತೋರಿಸುವುದಕ್ಕಾಗುತ್ತದೆಯೆ? ಒಳಗೆ ಹೋದಮೇಲೆ ನಮಗೆ ಬೇಡವೆಂದರೂ ಅವರು ಆರ್ಡರ್ ಮಾಡಿದ ದೋಸೆಯನ್ನು ತಿನ್ನದಿರುವುದೆ? ಚೆನ್ನಾಗಿದ್ದ ಅದರ ರುಚಿಯನ್ನು ಅಲ್ಲಗಳೆಯುವುದು ತರವೆ? ಸಂದರ್ಭಗಳು ಹೀಗೆ ಬೀರಿ ನಮ್ಮನ್ನು ದುರ್ಬಲಗೊಳಿಸಿದರೆ – ನಮ್ಮನ್ನು ಸೋಲಿಸಿದರೆ, ನಮ್ಮ ಸ್ವಾತಂತ್ರ್ಯವನ್ನು ಬಿಗಿದರೆ ಚಂಡಿಸುವುದು ನಾಗರಿಕವಾದೀತೆ? ಸರಿಯಾಗಿ ಇಲ್ಲಿ ಊಟಮಾಡುವ ಹಾಗಿರಲಿಲ್ಲವಾಗಿ ಬಂದು ಬೀರಿತ್ತು ಆಕ್ಷೇಪಣೆ. ಬಾಯಿ, ಮಾತು ಕಟ್ಟಿತು.

ಒಂದು ಸಂಗತಿಯಂತೂ ತಥ್ಯ : ಬೇಸರವಾದಾಗ, ಯಾವುದಾದರೂ ಚಿಂತೆ ಕಾಡುವಾಗ, ಅದರಿಂದ ಪಾರಾದ ಹೊರತು ಬದುಕು ದುರ್ಭರವಾದಾಗ, ಆ ಸ್ಥಿತಿಯಿಂದ ಮನಸ್ಸು ಕೆಡುವಂತಿದ್ದರೆ, ವಿಷಮಗೊಳ್ಳುವಹಾಗಿದ್ದರೆ ಪಾನವಲ್ಲ, ಅಫೀಮಲ್ಲ ಮದ್ದು. ಸಂಗೀತವಲ್ಲ, ನಾಟ್ಯವೂ ಅಲ್ಲ ; ಸ್ನೇಹವಲ್ಲ ಇನಿಯಳ ಲಲ್ಲೆಯಲ್ಲ ಚಿಕಿತ್ಸೆ. ನನ್ನ ಸಿದ್ಧಾಂತ ಇದು. ಬಹುದಿನದ ಅನುಭವದಿಂದ ಸ್ಥಿರಗೊಂಡದ್ದು. ಮನೋರೋಗಕ್ಕೆ ಮಸಾಲೆ ದೋಸೆ ಮದ್ದು ಎಂಬುದು ನನ್ನ ಚಿಕಿತ್ಸೆ. ಅಂಥ ಸಂದರ್ಭಗಳಲ್ಲಿ ಎರಡನೆಯ ಯೋಚನೆ ಮಾಡದೆ ಬಲವಾಗಿ ಒಂದನ್ನು ಹಾಕಿಬಿಡಿ. ತಲೆಯ ರಕ್ತ ಒಡನೆಯೇ ಹೊಟ್ಟೆಗೆ ಇಳಿಯುತ್ತದೆ. ಹಲವು ಗಂಟೆಗಳ ಕಾಲ, ನಿಮಗೆ ಪುಣ್ಯವಿದ್ದರೆ ಒಂದರೆಡು ದಿನಗಳ ಕಾಲ ತನ್ನ ಕಡೆಗೇ ತನ್ನ ಪರಿಣಾಮಗಳ ಕಡೆಗೇ ನಿಮ್ಮ ದೇಹವನ್ನೂ ಮನಸ್ಸನ್ನೂ ಸರ್ವ ವ್ಯಾಪಾರಗಳನ್ನೂ ಸೆಳೆದು ಹಿಡಿದುಬಿಡುತ್ತದೆ. ಅದರ ಮುಂದೆ ಯಾವ ಚಿಂತೆ ನಿಂತೀತು? ಅಂತಹ ಚಿಂತಾಮಣಿ ಕೈಯಲ್ಲಿರುವಾಗ, ರಸ್ತೆ ರಸ್ತೆಗೂ ಸಂಸ್ಥೆ, ಸಾಮಗ್ರಿ ಇರುವ ಜನತೆಗೆ ಯಾವ ಮನೋರೋಗ ಬಂದೀತು? ಯಾವ ಬಯಕೆ ಬೇನೆ ಉಂಟಾದಾವು?

# ಯಾವಾಗಲೂ ಓದೇನೆ ?

ನಮ್ಮ ಪಂಡಿತರು ಒಂದು ಕೃತಿ ಬರೆದು ಹಾಡಿದರು, ತುಂಬಾ ದಿನಗಳ ಹಿಂದೆ. ಅವರಿಗೆ ನೆನಪಿನಲ್ಲಿದೆಯೊ ಇಲ್ಲವೊ ಕಾಣೆ. ಅವರು ತೆಲುಗರು. ಹಾಡು ತೆಲುಗಿನಲ್ಲಿದೆ. ಅದರ ಮೊದಲ ಸಾಲು ಹೀಗಿತ್ತು : "ಮೀಕೆಪುಡೂ ಚದುವೇನಾ?" ಎಂದು. ನಿಮಗೆ ಯಾವಾಗಲೂ ಓದೇನೆ?– ಎಂಬುದು ಅದರ ಅರ್ಥ. ೩೦–೪೦ ವರ್ಷಗಳು ಕಳೆದ ಮೇಲೆ ಈಗ ನನಗೆ ಅದು ಏಕೆ ನೆನಪಿಗೆ ಬಂದಿತೊ ಕಾಣೆ. ಇದನ್ನು ಯಾರು ಯಾರಿಗೆ ಹೇಳಿರಬಹುದು ಎಂಬ ಪ್ರಶ್ನೆ ಸಹಜವಾಗಿ ತೋರುತ್ತದೆಯಲ್ಲವೆ? ಒಬ್ಬ ಗಂಡನಿಗೆ ಒಬ್ಬ ಹೆಂಡತಿ ಹೇಳಿರಬೇಕು. ಹಲವಾರು ಕಾರಣಗಳಿಂದ ಆಕೆಗೆ ಆತನ ಈ ವ್ಯಾಪಾರದಿಂದ, ವ್ಯಾಮೋಹದಿಂದ ಬೇಸರ ಬಂದಿರಬೇಕು. ಆಕ್ಷೇಪಣೆಯ ಧ್ವನಿಯಲ್ಲಿ ಇದನ್ನು ಹೇಳಿರಬಹುದು. ಆಕೆಗೂ ಹೇಳಲು ಇಚ್ಛೆಯಿಲ್ಲವೇನೊ. ಇನ್ನಾರದೊ ಇನ್ನಾವುದೊ, ಚುಚ್ಚು ಮಾತು, ಕೇಳಿ ಕೇಳಿ, ಅನುಭವಿಸಿ ತಡೆಯದೆ ಒಂದು ಸಲ ಹೀಗೆಂದಳೊ – ಯಾರು ಬಲ್ಲರು?

ಓದು ಪೂರ್ತಿ ಸರಿಯಲ್ಲವೆಂದಲ್ಲ. ಯಾವಾಗಲಾದರೂ ಅಷ್ಟು ಇಷ್ಟು ಓದಿದರೆ ತಪ್ಪಲ್ಲವೆಂದು ಆಕೆಯೂ ಮನಸ್ಸಿನಲ್ಲಿ ಒಪ್ಪಿಯಾಳು. ನಿರಂತರವಾಗಿ ಕಾಲವನ್ನೆಲ್ಲ ಓದುತ್ತಲೇ ಕಳೆದರೆ ಹೇಗೆ ಎಂಬುದಿರಬೇಕು ಆಕೆಯ ಆಕ್ಷೇಪಣೆ. ಇನ್ನೇನೊ ಮಾಡುವುದಿತ್ತು, ಮಾಡಿದ್ದರೆ ಹೆಚ್ಚು ಪ್ರಯೋಜನ ಆಗುತ್ತಿರಲಿಲ್ಲವೆ ಎಂಬುದೂ ಆಕೆಯ ಅಭಿಪ್ರಾಯವೆಂದು ಕಾಣುತ್ತದೆ. ಇಂಥದು ಕೆಲಸ ಎಂದು ಆತನಿಗೆ ಆಕೆ ಸೂಚಿಸುತ್ತಿಲ್ಲ. ಹೆಣ್ಣು ಅದನ್ನು ಹೇಗೆ ಹೇಳಿಯಾಳು? ಇಂಥದೆಂದು ಹೇಳಲು ಆಕೆಗೆ ಇಷ್ಟವಿಲ್ಲವೊ ಬಾಯಿಲ್ಲವೊ ಮರ್ಯಾದೆಯಲ್ಲವೊ ಗೊತ್ತಿಲ್ಲವೊ–ಆಕೆ ತಾನೇ ಹೇಳಬೇಕು? ಆಕ್ಷೇಪಣೆಯ ಹಿಂದೆ ಯಾವ ನೋವು, ಯಾವ ಹೀನಾಯ ಆಕೆಯನ್ನು ಒತ್ತುತ್ತಿದ್ದವು ಎಂಬುದಾದರೂ ನಮಗೆ ತಿಳಿಯುವುದು ಹೇಗೆ? ಕವಿತೆ ಪೂರ್ತಿ ಎದುರಿಗಿದ್ದಿದ್ದರೆ ಆಕೆಯ ಮನಸ್ಸಿನಲ್ಲಿ ಅಡಗಿದ್ದ ಕಾರಣದ ಸ್ವರೂಪ ನಮಗೆ ತಿಳಿಯುತ್ತಿತ್ತು. ನೋವಿಂದಾಡಿದಳೊ ಕೋಪದಿಂದಾಡಿದಳೊ ಮಾಡಬೇಕಾಗಿದ್ದುದನ್ನು ಆತನಿಗೆ ನೆನಪುಕೊಟ್ಟು ಅವನನ್ನು ಕೆಲಸದಲ್ಲಿ ತೊಡಗಿಸಲು ನುಡಿದಳೊ–ಗೊತ್ತಾಗುತ್ತಿತ್ತು. ಅಂತೂ ಅದು ಒಂದು ಹೆಂಗಸಿನ ಮಾತು. ಗಂಡಸನ್ನು ಕುರಿತದ್ದು. ಬೇರೆ ಮನಸ್ಸಿನ ಹೆಂಗಸರು ಬೇರೆ ಕಾರಣಗಳಿಗಾಗಿ ಈ ಮಾತನ್ನೇ ಆಡಬಹುದು; ಬಗೆಬಗೆಯ ಕಾರ್ಯ ಸಾಧನೆಗಳಿಗಾಗಿ. ಅದನ್ನು ಬಗೆಹರಿಸಬೇಕಾದವರು ಬೇರೆ ಕವಿಗಳು, ಕತೆಗಾರರು, ನಾಟಕಕಾರರು. ಆ ಗೊಡವೆ ನನಗೇಕೆ? ಈಗೇಕೆ?

ಇನ್ನು : ಓದುತ್ತಿರುವ ಮನುಷ್ಯನು ಯಾರು? ಇವನ ವಯಸ್ಸು, ಮನಸ್ಸು ಹೇಗಿರಬಹುದು? ಮಾಡಬೇಕಾದ ಕೆಲಸ ಇಂಥದೆಂದು ಅವನಿಗೆ ತಿಳಿಯದೆ? ಮಾಡುವುದಕ್ಕಾಗದೆ ಕುಳಿತಿದ್ದಾನೆಯೇ? ಹೇಡಿಯಾಗಿ, ನಿಸ್ಸಹಾಯನಾಗಿ ಕುಳಿತಿದ್ದಾನೊ? ಬೇರೇನೂ ತೋರದೆ ಪುಸ್ತಕ ಹಿಡಿದಿದ್ದಾನೊ? ಯಾವುದು ಎಲ್ಲಿಯಾದರೂ ಹಾಳಾಗಲಿ ಎನ್ನುವ ಮನಸ್ಸೊ ? ಅಥವಾ ಓದು ಅವನಿಗೆ ಬರಿಯ ಚಟವೊ? – ಅವನೇ ಹೇಳಬೇಕು. ಓದುವುದು ತಪ್ಪಲ್ಲ. ಯಾರಿಗೂ ತಪ್ಪಲ್ಲ. ಮನುಷ್ಯನಾಗಿ ಬಾಳಬೇಕಾದರೆ ತಕ್ಕಷ್ಟು ಓದುವುದು ಮೇಲು. ಆದರೆ ಯಾವಾಗಲೂ ಇನ್ನೇನನ್ನೂ ಮಾಡದೆ ಓದುತ್ತಿರುವುದು ಅಷ್ಟೇನು ಯೋಗ್ಯವಲ್ಲ-ಎಂಬ ಭಾವನೆ ಮೇಲಿನ ಪಲ್ಲವಿಯಲ್ಲಿ ಸೂಚಿತವಾಗುತ್ತದೆ. ಅದು ಅವನಿಗೂ ಮುಟ್ಟುತ್ತದೆ. ಇದೊಂದು ಗೂಬೆ, ಯಾವಾಗಲೂ ಪುಸ್ತಕ ಹಿಡಿದು ಕೂತಿರುತ್ತದೆ ಎಂಬುದು ನನ್ನ ಕಿವಿಗೆ ಬಿದ್ದಿದೆ. ಆಪಾದನೆ ಪೂರ್ತಿ ತಪ್ಪೂ ಆಗಬೇಕಿಲ್ಲವೇನೊ.

ಲೋಕದಲ್ಲಿ ನೂರಾರು ತೆರದ ಜನರಿರುತ್ತಾರೆ. ಒಬ್ಬೊಬ್ಬರಿಗೆ ಒಂದೊಂದು ಬಗೆಯ ಚಟ. ಊಟ, ನಿದ್ರೆ, ಆಟಪಾಟ ಬಿಟ್ಟು ಸುಮ್ಮನೆ ಓದುತ್ತ ಕುಳಿತಿರುವುದು ಕೆಲವರ ಚಟ. ಅವರಿಗೆ ಪ್ರಯೋಜನದ ದೃಷ್ಟಿಯಿಲ್ಲ. ಸಿಗರೇಟ್ ಸೇದುವುದೊ ನಸ್ಯ ಹಾಕುವುದೊ ಕಾಫಿ ಚಹಾಗಳನ್ನೊ-ಅದಕ್ಕಿಂತ ಬಲವಾಗಿರುವ ಇನ್ನಾವುದನ್ನೊ ಕುಡಿಯುತ್ತಿರುವುದೊ ಬಾಳು ಮುಗಿಯುವವರೆಗೂ ನಡೆಯುವ ಚಟಗಳು ಕೆಲವರ ಬಾಳಲ್ಲಿ. ನೀವು ಏನೇ ಮಾಡಿ, ಹೇಳಿ ಇವರು ಓದುತ್ತಲೇ ಇರುತ್ತಾರೆ. ಯಾವಾಗಲೂ ಇವರ ಕೈಯಲ್ಲಿ ಒಂದು ಪುಸ್ತಕವಿರುತ್ತದೆ. ಪುಸ್ತಕ ಮುಚ್ಚಿದಾಗಲೂ ಒಳಗಿನ ಯಾವುದೊ ಹಾಳೆಯಲ್ಲಿಯೇ ಇವರ ಬೆರಳು. ಓದದೆ ಇದ್ದಾಗ ಬಿಟ್ಟ ಭಾಗವನ್ನು ತೋರಿಸಲು ಇನ್ನಾವುದೊ ಗುರುತು : ಒಂದು ಕಾರ್ಡು, ಒಂದು ಹಂಚಿಕಡ್ಡಿಯ ಚೂರು. ಅದೂ ಇಲ್ಲವೊ, ಆ ಹಾಳೆಯ ಕಿವಿ ತಿರುವಿಡುವರು, ಹಾಳೆಯನ್ನೇ ಅರ್ಧಕ್ಕೆ ಕೋಚುಕೋಚಾಗಿ ಮಡಿಸಿಡುವರು. ರೈಲಿನಲ್ಲಿ, ಬಸ್‌ಸ್ಟ್ಯಾಂಡಲ್ಲಿ, ಹೊಟೇಲಲ್ಲಿ ಯಾವಾಗ್ಲೂ ಒಂದು ಪುಸ್ತಕ ಇದ್ದೇ ಇರಬೇಕು. ಪ್ರಿಯೆಯರ ಎದುರಿಗೂ ಪುಸ್ತಕವನ್ನು ಒಂದು ಕೈಯಲ್ಲಿ ಹಿಡಿದಿದ್ದರೂ ಇದ್ದರೇ ! ಅವರ ಪ್ರಪಂಚ ಪುಸ್ತಕಗಳ ಪ್ರಪಂಚ. ಸುತ್ತಲ ಜನ ಏನು ಮಾಡಲಿ, ಯಾರ ತಲೆ ಹೋಗಲಿ, ಯಾರ ತಲೆ ಉಳಿಯಲಿ, ಮಾರಲಿ – ಹೊರಗೆ ಯಾವುದು ಆಗಲಿ, ಬಿಡಲಿ ಅವರಿಗೆ ತಟ್ಟದು. ವಿಕಿಬಾಂ 'ಗ್ರ್ಯಾಂಡ್ ಹೊಟೇಲಿ'ನಲ್ಲಿ ಒಬ್ಬ ಡಾಕ್ಟರನ್ನು ಚಿತ್ರಿಸುತ್ತಾಳೆ. ದೊಡ್ಡ ಹೊಟೇಲು ಅದು. ಅಮೇರಿಕದಲ್ಲಿನದು. ನಟರು, ರಾಜಕಾರಣಿಗಳು, ಜೂಜು ಖೋರರು, ಕುಡುಕರು, ಪ್ರಿಯ ಪ್ರೇಯಸಿಯರು, ಮಾನ ಮಾರಿಕೊಳ್ಳುವವರು, ಹಣ ಹೀರುವ ತಿಗಣೆಗಳು, ಕ್ರಾಂತಿಕಾರರು, ದಿವಾಳಿಯಾಗುವವರು, ಖೂನಿಯಾದವರು, ಖೂನಿ ಮಾಡುವವರು, ಹುಚ್ಚು ಹಿಡಿದವರು – ಒಂದು ದಿನದಲ್ಲಿ ಆ ಹೊಟೇಲಿನ ಈ ಕೋಣೆಯಲ್ಲಿ ಆ ಕೋಣೆಯಲ್ಲಿ ಬಾಡಿಗೆಗೆ ಬರುತ್ತಾರೆ, ಹೋಗುತ್ತಾರೆ. ಎಷ್ಟೋ ವಿಧಿ ವ್ಯಾಪಾರ ನಡೆಯುತ್ತದೆ.

ಈ ಮುದುಕನಿಗೆ ಬೇಸರ : "Nothing ever happens here" – ಇದು ಒಂದು ಹಾಳು ಹೋಟೇಲು : ಇಲ್ಲಿ ಏನೂ ನಡೆಯುವುದಿಲ್ಲ – ಎಂಬುದು ಅವನ ಹಾಡು. ಹಾಗೆ ಇಂಥವರು. ಹತ್ತು ನಿಮಿಷ, ಅರ್ಧಘಂಟೆ ಊಟಕ್ಕೊ ಬೇರೆಗೊ ಮನಸ್ಸು ಕೊಟ್ಟಾರು ಬೇಕಾದರೆ. ಪುನಃ ಪುಸ್ತಕಕ್ಕೇ ಬಂದು ಕೂಡುತ್ತಾರೆ. ತಾವಿಟ್ಟ ಗುರುತಿನ ಹಾಳೆಯಿಂದ ಮುಂದಕ್ಕೆ ಓದತೊಡಗುತ್ತಾರೆ. ಓದಿದ್ದೆಲ್ಲ ಅವರ ನೆನಪಿನಲ್ಲಿರುವುದೆಂದಲ್ಲ; ಅದರಿಂದ ಅವರ ಜ್ಞಾನ ಹೆಚ್ಚುತ್ತದೆಂದೂ ಅಲ್ಲ. ಅವರಿಗೆ ಸುಮ್ಮನೆ ಓದುತ್ತಿರಬೇಕು. ಅಷ್ಟು ಸಾಕು. ಇದು ಒಂದು ವಿಶಿಷ್ಟ ಮನಃಸ್ಥಿತಿ.

ಅಂಥವರಿಗೆ ಲೋಕಜ್ಞಾನವಿರಬಹುದು, ಇಲ್ಲದಿರಬಹುದು. ಪರೀಕ್ಷೆಗೆ ಬಂದರೆ ತಾನೆ ಪ್ರಮಾಣ ಸಿಕ್ಕುವುದು? ಹಲವೇಳೆ ಅಂಥವರೊಬ್ಬರು ಪೇಟೆಗೆ ಹೋಗಿ ಕಾಯಿ ಪಲ್ಯ ವ್ಯಾಪಾರ ಮಾಡುವುದನ್ನು ನೋಡಿ, ಅವರ ಮನಸ್ಸು ಹೇಗೆ ವರ್ತಿಸುವುದು ಗೊತ್ತಾಗುತ್ತದೆ. ಅವರು ಓದುವ ಪುಸ್ತಕದಲ್ಲಿ ಸೌತೆಕಾಯಿ ಹೇಗೆ ಬೆಳೆಯುವುದು? ಬದನೆಯ ಬೆಲೆ ಕಡಮೆಯೆ, ತಗ್ಗ ? ಬಟ್ಟೆ, ಅಕ್ಕಿ, ಸಕ್ಕರೆ, ಸೌದೆ ಹೇಗೆ ಮಾರುತ್ತಿವೆ? ಅವಕ್ಕೆ ಎಷ್ಟು ಬೆಲೆ ಕೊಡಬೇಕು – ಎಂಬುದು ಬರೆದಿರುವುದಿಲ್ಲ. ಒಂದಾಣೆ ಕೊಟ್ಟರೆ ಎರಡು ಮೂಲಂಗಿ, ನಾಲ್ಕು ಆಣೆಗೆ ಒಂದು ಸೌತೇಕಾಯಿ ಎಂದರೆ ಅವರಿಗೆ ಬೆಳೆದವರನ್ನು ಕುರಿತು ಕನಿಕರ. ಪಾಪ, ಎಷ್ಟು ಜನ ಎಷ್ಟು ದಿನ ಕಷ್ಟಪಟ್ಟು ಬೆಳಸಬೇಕಾಯಿತೊ! ಒಂದು ಎಕರೆಗೆ ಇವೊತ್ತೆಲ್ಲ ಎಷ್ಟು ಬೆಳೆದೀತು? ಎಲ್ಲರಿಗೂ ಒಂದೊಂದೆಕರೆ ತೋಟವಿರುತ್ತದೆಯೆ? ಮೂರು ನಾಲ್ಕು ತಿಂಗಳ ದುಡಿಮೆಗೆ ಇದಾವ ಮಹಾ ಪ್ರಯೋಜನ ಎಂದು ಬೇಸಾಯಗಾರರನ್ನು ಕುರಿತು ತುಂಬಾ ನ್ಯಾಯವಾದ ಸಹಾನುಭೂತಿ ತೋರಿಸಿಯಾರು. ನಾಲ್ಕೆಂಟು ಮೂಲಂಗಿ ಕೊಡಿರೆಂದೊ ಸೌತೆಕಾಯಿ ಬೆಲೆಯ ವಿಷಯದಲ್ಲಿಯೊ ಚೌಕಸಿ ಮಾಡಿದವರನ್ನು ಕುರಿತು ಅವರಿಗೆ ಅಸಹ್ಯ ಅಸಮಾಧಾನ. ಇಂಥವರನ್ನು ಕಂಡರೆ ಸಾಮಾನ್ಯರಿಗೆ ಅಸಹನೆಯೇ ಸರಿ. ಲೋಕ ಜ್ಞಾನವಿಲ್ಲದ ಈ ಅಪ್ರಯೋಜಕರಿಂದ ಪ್ರಪಂಚಕ್ಕೆ ಯಾವ ಉಪಕಾರ ಉಂಟು ಎನ್ನಿಸುತ್ತದೆ. ಆದರೆ ಯಾರಿಂದ ಯಾವ ಪ್ರಯೋಜನ ಆಗುವುದೊ ಲೋಕಕ್ಕೆ ಅದರ ಬೆಲೆಯೆಷ್ಟೊ ಹೇಳುವುದು ಕಷ್ಟ. ಬೆಲೆಗಳಂತೂ ಉಂಟು. ಯಾವಾಗಲೂ ಓದುತ್ತ ಕುಳಿತಿರುವ ಗಂಡಸನ್ನು, ಗಂಡನನ್ನು ಈ ಹೆಂಗಸು ಮೂದಲಿಸಿದ್ದನ್ನು ಕೇಳಿದರೆ, ಬೆಲೆಗಟ್ಟು ಇದ್ದೇ ಇದೆ ಎಂಬುದು ಮಂದಟ್ಟಾಗುವುದು. ಒಬ್ಬರಿಗೆ ಏನೊ ಒಂದು ಬೇಕು, ಇನ್ನೊಬ್ಬರಿಗೆ ಅದು ಬೇಕಿಲ್ಲ; ಮತ್ತೇನೊ ಆಗಬೇಕಾಗಿದೆ. ಅದನ್ನು ಮಾಡದೆ ಪುಸ್ತಕದಲ್ಲಿ ಮುಳುಗಿದ್ದಂತಿದೆ ಇವನು. ಇದು ಸರಿಯಿಲ್ಲವೆಂಬ ಟೀಕೆ, – ಇದು ಇಲ್ಲಿಯ ಪರಿಸ್ಥಿತಿ.

ಓದು ಎಲ್ಲರಿಗೂ ಬೇಕು ಎಂದೆ. ಓದು ಬರಹ ಲೆಕ್ಕಾಚಾರ ಬಾರದ ಗಂಡು, ಹೆಣ್ಣಿಗೆ ಇಂದು ಯಾವ ಬೆಲೆಯಿದೆ? ಹಾಗೆಯೇ ಚೆನ್ನಾಗಿ ಓದಿ ದೊಡ್ಡ ಪ್ಯಾಸುಗಳನ್ನು

ಮಾಡದಿದ್ದರೆ ಸಂಬಳ ಸಾರಿಗೆ, ಪದವಿ, ಮರ್ಯಾದೆ, ಯಾವುದೂ ಸಿಗುವುದಿಲ್ಲ. ಇದು ಸರ್ವರಿಗೂ ತಿಳಿದದ್ದೇ. ಐಶ್ವರ್ಯ, ಅಧಿಕಾರ ಅವರವರ ಅದೃಷ್ಟಕ್ಕೆ ಒಳಪಟ್ಟದ್ದು ಎಂದರೂ ಚೆನ್ನಾಗಿ ಓದಿದವನನ್ನು ಕಂಡರೆ ಎಲ್ಲರಿಗೂ ಗೌರವ. ಅವನನ್ನು ಸುಲಭವಾಗಿ ದಬಾಯಿಸುವುದಕ್ಕಾಗುವುದಿಲ್ಲ. ಚೆನ್ನಾಗಿ ಓದಿದ ಮನುಷ್ಯನೆಂದರೆ ವಿಷಯ ತಿಳಿದವನು, ಅವನಿಂದ ತಿಳಿವಳಿಕೆ ಪಡೆಯಬಹುದು, ಸಂದೇಹ ನಿವಾರಣೆ ಮಾಡಿಕೊಳ್ಳಬಹುದು ಎಂಬ ನಂಬಿಕೆ ಜನಕ್ಕೆ ಉಂಟಾಗಿರುತ್ತದೆ. ಅವನು ಬುದ್ಧಿವಂತನೂ ಆಗಿದ್ದರೆ ಹೆಚ್ಚು ಪ್ರಯೋಜನ. ಈ ಓದುವ ಚಟ ಎಂಬುದು ಅಫೀಮ್ ತಿನ್ನುವಂತೆ. ಚಟದವನನ್ನು ಕುರಿತು ಎಂದದ್ದಲ್ಲ ಮೇಲ್ಕಂಡ ಪ್ರಯೋಜನದ ಮಾತು. ಚಟದವರು ನಿಷ್ಫಲರು. ಅಂಥವರಿಗೆ ಲಕ್ಷ್ಮಿ ಒಲಿಯದಿದ್ದರೆ ಯಾರದು ತಪ್ಪು? ಚೆನ್ನಾಗಿ ಓದಿದವರಿಗೇ ಬುದ್ಧಿವಂತರಿಗೇ ಅವಳು ಒಲಿಯಳು.... ಯಾರು ಯಾರಿಗೂ ಒಲಿಯುತ್ತಾಳೆ, ಅವಳಿಷ್ಟದಂತೆ. ಒಂದು ದೇವರ ಉಪಾಸನೆ ಮಾಡಿ ಇನ್ನೊಂದು ದೇವರು ಒಲಿಯಲಿಲ್ಲವೆಂದರೆ ಅಂಥವರನ್ನು ನ್ಯಾಯವಂತರು ಎನ್ನಬಹುದೆ ? ಹಾಗೆಯೇ ಲಕ್ಷ್ಮೀ–ಸರಸ್ವತಿಯರು ಅತ್ತೆ ಸೊಸೆಯರು; ಒಬ್ಬಳು ಒಲಿಯುವಲ್ಲಿ ಇನ್ನೊಬ್ಬಳಿಗೆ ವಿರೋಧ ಎಂಬ ಮಾತೂ ಬಹುಶಃ ಸರಿಯಾಗಲೊಲ್ಲದು. ಆದರೆ ಅವಳ ಆರಾಧನೆಯನ್ನು ಇವರು ಮಾಡಿದರೊ. ಎಲ್ಲಕ್ಕೂ ಹಣದ ಬೆಲೆಯನ್ನು ಹಚ್ಚುತ್ತ ಬಂದಲ್ಲಿ ವಿವೇಕವಾಗುತ್ತದೆಯೆ? ಹಣವಂತರಾರಿಗೂ ಲಕ್ಷ್ಮಿ ಒಲಿಯಳೊ? ಇದು ಯಾವ ಮಾತು? ಹಾಗೆಯೇ ಹಣವಂತರಿಗೆಲ್ಲ ಸರಸ್ವತಿ ಒಲಿಯಬೇಕೆಂಬುದೂ ಆಗದ, ಹೋಗದ ಮಾತು. ಯಾರಿಗೆ ಯಾವಳು ಒಲಿಯುವಳೊ ಅವರಿಗೆ ಅವಳು ಲಭ್ಯಳು. ಅಷ್ಟಂತೂ ವಿದಿತ.

ಪ್ರಯೋಜನ ಯಾವುದೇ ಆಗಲಿ,ಇಂದು ಎಲ್ಲ ಗಂಡು ಹೆಣ್ಣು ಮಕ್ಕಳನ್ನೂ ಓದಿಗೆ ಹಾಕುತ್ತೇವೆ. ಎಲ್ಲರಿಗೂ ಓದು ಬರಹ ಬಂದಲ್ಲದೆ ಜನವರ್ಗ ಮುಂದುವರಿಯದು, ಸ್ವತಂತ್ರವಾಗದು, ಆಗಿ ಉಳಿಯುವುದಿಲ್ಲ ಎಂಬುದು ಇಂದಿನ ಭಾವನೆ. ಅಷ್ಟು ಇಷ್ಟು ಸಾಕು ಎಂಬವರ ಮಾತು ಕೀಳರದು. ಹುಡುಗರ ಬುದ್ಧಿ ಕುದುರಬೇಕಾದರೆ ಅದೇ ಮಾರ್ಗ ಎಂದು ಜನದ ನಂಬಿಕೆ. ಬುದ್ಧಿ ಕುದುರುತ್ತದೆಯೊ ಬಿಡುತ್ತದೆಯೊ. ಓದಿನ ಜೊತೆಗೆ ಯೋಚನೆಯೂ ನಡೆದರೆ ಬುದ್ಧಿ ಕುದುರಿ ಬೆಳೆಯುತ್ತದೆ. ಇಲ್ಲವಾದರೆ ಮನಸ್ಸು ಕಸತುಂಬಿದ ಬುಟ್ಟಿಯಂತೆ ಹಾಳು ಮೂಳು ತುಂಬಿಕೊಂಡಂತಾಗುತ್ತದೆ. ಜೊತೆಗೆ ನೆರವಿಗೆ ವಸ್ತುಪ್ರಪಂಚದ ಪರಿಜ್ಞಾನವಿದ್ದರೆ ಓದಿನ ಬೆಲೆ ಹೆಚ್ಚುವುದು. ಲೋಕದ ಅನುಭವ ಲೋಕವನ್ನು ನೋಡಿ ನೋಡಿ, ಕೆಲಸ ಮಾಡಿ ಮಾಡಿ ಆಳವಾಗಬೇಕು; ವಿಸ್ತಾರವಾಗಬೇಕು. ಹಾಗಲ್ಲದೆ ಅನೇಕರಿಗೆ ಹಲಬಗೆಯ ತತ್ತ್ವ ಪುಸ್ತಕದ ಮೂಲಕ ತಿಳಿದದ್ದರಿಂದ ಬರಿಯ ಪುಸ್ತಕದ ಬದನೆಕಾಯಾಗುತ್ತದೆ. ಅವರು ಉಪನ್ಯಾಸಮಾಡಿ ಸೈ ಎನ್ನಿಸಿಕೊಳ್ಳಬಲ್ಲರು. ದೊಡ್ಡ ದೊಡ್ಡ ಪುಸ್ತಕಗಳನ್ನು ಬರೆಯಬಲ್ಲರು. 'ಹ್ಯಾಮ್ಲೆಟ್' ಓದಿದ್ದೀರ ? ಅಲ್ಲಿ 'ಪೊಲೊನಿಯಸ್' ಎಂಬ ಮುದುಕನ ಪಾತ್ರವಿದೆ. ಅವನಷ್ಟು ಬುದ್ಧಿಯ ಮಾತುಗಳನ್ನಾಡುವವರೇ ಇಲ್ಲ. ಅವನ ಉಪದೇಶ

ಸ್ವರ್ಣಾಕ್ಷರದಲ್ಲಿ ಬರೆದಿಡಬೇಕಾದ್ದೇ. ಆದರೆ ಅವನು ದಿನಚರಿಯ ನಡತೆಯಲ್ಲಿ ತಿಳಿಗೇಡಿ. ಪಾಕಶಾಸ್ತ್ರದ ಗ್ರಂಥಗಳನ್ನು ಓದಿಕೊಂಡು ಅಡಿಗೆ ಮಾಡಲು ಹೊರಡುವ ಪಾಕಶಾಸ್ತ್ರಿಗಳ ಪಾಂಡಿತ್ಯ ಎಂಥ ಭಕ್ಷ್ಯ, ಭೋಜ್ಯ ಮಾಡೀತು? ಅದಕ್ಕೆ ಬೀಳಬೇಕಾದ ಪದಾರ್ಥಗಳನ್ನು ತರಬಹುದು. ಕೊಳದಪ್ಪಲೆಗೂ ಹಾಕಬಹುದು. ಆದರೆ ಮಾಡಿ ಕಲಿತಲ್ಲದೆ ಬರಿಯ ಗ್ರಂಥ ಪಾಠದಿಂದ ಪಾಕದ ಹದ ಹೇಗೆ ಗೊತ್ತಾದೀತು? ಜಿಲೇಬಿಗೆ ಬದಲಾಗಿ ಇನ್ನೇನೊ ಅಂಟು ಇಳಿಯುವುದು. ಪಾಯಸ ಲೆಪ್ಪವಾಗುವುದು. ಹುಳಿ ಹುಳಿಯಾಗಿ ಬಾಯಲಿಡ ದಂತಾಗುವುದು. ಅನ್ನ ಸರಿಯಾಗಿ ಉಮಗಿಯುವುದಿಲ್ಲ. ಬಾಣಲೆಯಲ್ಲಿ ಕುದಿಯುವ ತುಪ್ಪ ಎಗರಿ ಮುಖ, ಮೈ, ಕೈ ಸುಟ್ಟು ಹೊಪ್ಪಳ ಎಬ್ಬಿಸುವುದು. ಹಾಗೆಯೇ ನೀರಲ್ಲಿಳಿದು ಕಾಲು ಕೈ ಬಡಿದು ಈಜಲು ಕಲಿತ ಹೊರತು ಈಜುವ ತತ್ವದ ಸಿದ್ಧಾಂತವನ್ನು ನಂಬಿಕೊಂಡು ಹರಿವ ನೀರಿನಲ್ಲಿ ಇಳಿದರೆ ಮುಳುಗುವುದಲ್ಲದೆ ತೇಲುವ ಆಸೆಯೇನು?

ಆದರೂ ಎಲ್ಲವನ್ನೂ ಮಾಡಿಯೇ ಕಲಿಯಬೇಕೆಂದಲ್ಲ. ಇನ್ನೊಬ್ಬರ ಅನುಭವ ನಮಗೆ ದೊರೆಯಬೇಕಾದರೆ ಇನ್ನೊಬ್ಬರನ್ನು ಕೇಳಬೇಕು. ಅವರು ಬರೆದುದನ್ನು ಓದಬೇಕು. ಲೋಕಾನುಭವದ ಸಾರಸಂಗ್ರಹವಿರುವ ಪುಸ್ತಕಗಳ ಓದು ಪ್ರಯೋಜನಕಾರಿಯಲ್ಲವೆಂದು ಯಾರು ಹೇಳಿಯಾರು? ಯಾವುದೊಂದು ವಿಷಯದ್ದಾದರೂ ಸ್ವರೂಪ, ಚರಿತ್ರೆ, ಇಂದಿನ ಅದರ ನೆಲಸು, ಅದರ ಸಮಸ್ಯೆಗಳು, ಅವನ್ನು ಬಿಡಿಸುವ ರೀತಿಗಳು ಎಲ್ಲವನ್ನೂ ಓದಿ ತಿಳಿಯುವ ಅವಕಾಶವಿರುವಾಗ ಓದು ವ್ಯರ್ಥವಾಗಲಾರದು. ಶಾಸ್ತ್ರ, ವಿಜ್ಞಾನ, ಚರಿತ್ರೆ ಇವುಗಳಲ್ಲಿ ಲೋಕಾನುಭವದ ಒಂದು ಬಗೆಯ ಪೂರ್ಣ ಚಿತ್ರ ಸಿಕ್ಕುತ್ತದೆ. ಓದು ಚಟವಾಗುವುದು ಅಂಥಲ್ಲಿಯಲ್ಲ. ಎಲ್ಲಿ ಬುದ್ಧಿ ಹೊರಲೋಕವನ್ನು ಮರೆಯುವುದೊ ಬೇರೊಂದರಲ್ಲಿ ಮುಳುಗುವುದೊ ಅಂಥಲ್ಲಿ ಅದು ಗೀಳಾಗುವ ಸಂಭವವುಂಟು. ಕತೆ, ಕಾದಂಬರಿ, ನಾಟಕ, ಮತ, ವೇದಾಂತ, ತರ್ಕ, ಕಲೆ, ವಿಮರ್ಶೆ ಇವುಗಳಲ್ಲಿ ಹೀಗಾಗಿ ಮನಸ್ಸು ಅನ್ಯಕ್ಕೆ ಬಂದಿಯಾಗುವುದಾದರೂ ಅಲ್ಲಿ ಅದಕ್ಕೆ ಶುದ್ಧಿಯೂ ಶಕ್ತಿಯೂ ಬರಬಲ್ಲವು. ಆದ್ದರಿಂದ ಓದಿಗೆ ಪ್ರಯೋಜನ ತಕ್ಕಮಟ್ಟಿಗೆ ಉಂಟು. ಓದುವವನ ಮನಸ್ಸು ಜಾಗ್ರತವಾಗಿದ್ದರೆ, ಚುರುಕಾದ ಪ್ರಚೋದನೆ ಬಾರದಿದ್ದರೆ ಅದು ದುರ್ಬಲತೆಗೆ ಎಳೆಯುವುದು. ಉತ್ತಮವಾಗಬಲ್ಲದ್ದನ್ನು ಜಡತೆಗೆ ಎಳೆಯುವ ಯಾವ ವ್ಯಾಪಾರವೂ ಆರೋಗ್ಯಕರವಲ್ಲ.

ಇದೆಲ್ಲ ಸರಿಯೆ : ಎಲ್ಲಿಂದ ಎಲ್ಲಿಗೆ ಬಂದಿರಿ ಎಂದು ನೀವು ಕೇಳಬಹುದಲ್ಲವೆ? ಯಾವ ಓದು ಪ್ರಯೋಜನಕಾರಿ ಎಂದು ತೋರಿಸುವುದಕ್ಕೆ ಮಾತ್ರ ಇಷ್ಟನ್ನೆಲ್ಲ ಹೇಳಿದುದು. ಮನಸ್ಸನ್ನು ಹಿಡಿವ ಓದೆಲ್ಲ ವ್ಯರ್ಥವಲ್ಲ ಎಂದು ತಿಳಿಸುವುದಕ್ಕೆ. ಯಾವ ಸಂಶೋಧನಕ್ಕೂ ತತ್ವಾನ್ವೇಷಕ್ಕೂ ಈ ರೀತಿಯ ಓದು, ಚಿಂತನ ಅವಿಶ್ರಾಂತವಾಗಿ ಬೇಕು. ಇತರರಿಗೆ ಬೇಸರವಾಗುವುದಾದರೆ ಆಗಲಿ. ಬೇರೆ ಮಾರ್ಗವಿಲ್ಲ. ಮೀಕೆಪುಡೂ

ಚದುವೇನಾ? – ಎಂಬ ಮಾತಿನಲ್ಲಿ ಅಡಗಿರುವ ಬೇಸರ ಆಕ್ಷೇಪಗಳನ್ನು ನಿವಾರಣೆ ಮಾಡುವ ದಾರಿಯಾಯಿತೆ ಓದು?.... ಅವನು ಯಾವುದನ್ನು ಓದುತ್ತಿದ್ದನೊ ನಾನು ಹೇಗೆ ಹೇಳಲಿ ? ಆಕೆಗೆ ತಾನೆ ಏನು ಗೊತ್ತು ? ಆಕೆಯ ಬದುಕು ಬೇರೆ ಏನನ್ನೊ ಬೇಡುತ್ತದೆ. ಇನ್ನಾವುದಕ್ಕೂ ಈ ಗಂಡಿನ ಮನಸ್ಸು ತವಕಪಡದು. ಪಡದಿದ್ದರೆ ಎರಡು ಜೀವಕ್ಕೆ ಕಷ್ಟ. ಅದನ್ನು ಮಾಡಲು ಈ ಮಾತು ಪ್ರಚೋದನೆಯಾದರೆ ಆಡಿದ ಮಾತು ಸಾರ್ಥಕ. ಅಲ್ಲಿಗೂ ಓದುತ್ತಲೇ ಕುಳಿತು ಕರ್ತವ್ಯವನ್ನು ಮರೆತರೆ ಇವನು ಜಡ. ಬೇರೇನೂ ಫಲಿಸದೆಂದು ನಿರಾಶೆಯಲ್ಲಿಯೊ ವ್ಯಾಮೋಹದಲ್ಲಿಯೊ ಮರೆತುಕೊಂಡ ಬಾಳಿನ ದುರ್ಬಲತೆಗೆ ಇವನ ಓದು ಒಂದು ಸಾಕ್ಷಿಯಾಗಿದ್ದರೆ ಮೇಲೇನೊ ಎನ್ನಿಸುವ ಸಂದರ್ಭ ಸೂಚನೆಯನ್ನೂ ಜೀವನ ಚಿತ್ರವನ್ನೂ ಓದಿನ ಒಂದು ಮುಖವನ್ನೂ ಕಾಣಿಸುತ್ತದೆ ಈ ಹಾಡು ಎನ್ನಲಿಯೆ? ಅಥವಾ ಆಕೆಗೆ ಶೃಂಗಾರಭಾವ ಕಾಣಿಸಬೇಕೆಂಬುದೊ ಆಸಕ್ತಿ ? ತನ್ನ ಚೆಲುವು, ಒನಪು, ಯೌವನ, ಬಯಕೆ, ಹಾರೈಕೆಗಳನ್ನು ಓಸರಿಸಿ ಅವಳ ಕಡೆಗೆ ಒಂದು ಕ್ಷಣ ಕೂಡ ಗಮನ ಕೊಡದ ಅರಸಿಕನೊ ಆತ?

> The champagne was on the table
> and you tasted it not, –

ಎಂಬ ಇಬ್ಸೆನನ ನಾಯಿಕೆ ರೀಟಾ ನುಡಿದು ಗಂಡನನ್ನು ಮೂದಲಿಸಿದಳು, – ಅವಳನ್ನು ಉಪೇಕ್ಷಿಸಿದಾಗ, ಆಕೆಗೆ ವಿಮುಖನಾದಾಗ. ಎಲೆಯಲ್ಲಿ ಪಾಯಸ ಬಡಿಸಿದ್ದೆ, ನೀವದನ್ನು ಮುಟ್ಟಲಿಲ್ಲ, ಕಣ್ಣೆತ್ತಿ ಕೂಡ ನೋಡಲಿಲ್ಲ – ಎಂಬುದು ನೋವಿನ ನುಡಿಯಾಗಬಲ್ಲದಲ್ಲವೆ? ಈ ಗಂಡಿಗೆ ತನಗಾಗಿ ತವಕಿಸುವ, ಕಾದಿರುವ ಹೆಣ್ಣು ಬೇಡವಾಯ್ತೆ? ಇದೇನು ಓದು ಈತನದು? ಹೂರಣವನ್ನು ಬಿಟ್ಟು ಸಿಪ್ಪೆಗೆ ಎಳಸುವನಲ್ಲ ಇವನು? ಬಿಂಬವಿರುವಾಗ ನೆಳಲನ್ನು ಬಯಸುವನೇ, ನೆಳಲನ್ನಪ್ಪಲು ಕಾತರಿಸುವನೇ, ಇವನ ಗಂಡನ್ನು ಏನೆನ್ನಬೇಕು ಎಂಬುದೊ ಮೂದಲೆ? ಕೇಳಿದರೆ ಆಕೆಯ ಭಾವ ಹಾದೀತೆಂದರೆ ಆಕೆ ನಮ್ಮೆದುರಿಗಿಲ್ಲ. ಇದ್ದರೂ ಮೂರನೆಯವರು ಕೇಳುವ ಮಾತಲ್ಲ ಅದು. ಅವರಿಬ್ಬರ ಸಂಬಂಧದ ಕತೆ ಹೇಗೊ. ಇವಳ ಆಸೆ ಕಾಮನ ಯಾವ ತೆರದ್ದೊ? ಅವನಿಗೆ ಇಂತಹ ಅರಸಿಕ ಅನಾಸಕ್ತಿ ಏಕೆ ಉಂಟಾಗಿತ್ತೊ? ಅದಕ್ಕೆ ಅವಳೆಷ್ಟು ಇನ್ನೊಬ್ಬರೆಷ್ಟು ಕಾರಣವೊ? ಆಕೆಯೂ ಎಷ್ಟು ದಿನ ಎಷ್ಟು ಬಗೆಯಾಗಿ ಕಾದಳೊ ಕಾಡಿದಳೊ ಬೇಡಿದಳೊ ಮರೆಯಾಗಿದ್ದಳೊ ತಾಳಿದಳೊ ತಡೆದಳೊ–ಈ ಮಾತನ್ನಾಡುವ ಮುಂಚೆ. ಇನ್ನಷ್ಟು ನಿರಾಸೆಗೆ, ನೋವಿಗೆ ತಳಹದಿಯಾಗಬಾರದು ಈ ಸ್ಥಿತಿಯೇ ಮುಂದಕ್ಕೂ ನಡೆದರೆ ಎಂದು ಮೀಕೆಪುಡೂ ಚದುವೇನಾ ಎಂದು ಕೇಳಿದಳೊ ? ಬಾಳಲ್ಲಿ ಇನ್ನಾವುದೂ ಕರ್ತವ್ಯವೇ ಗೋಜೇ ಬೇಡವೆ? ಮನೆ, ಜನ, ಸಮಾಜ, ರಾಷ್ಟ್ರ, ಕರ್ತವ್ಯ, ಮಾನ, ಆಕಾಂಕ್ಷೆ, ಮಕ್ಕಳು, ಮರಿ, ಗಳಿಗೆ, ಸಾಹಸ ಯಾವುದೂ ಸೊಗಸದೆ ? ಲೋಕದ ಸಮಸ್ತ ಗಲಿಬಿಲಿಯ ನಡುವೆ ಇರುವಾಗ

ವಿರಕ್ತನಂತೆ ಅನಾಸಕ್ತನಾದಂತೆ ಕಾಗದದ ಹಾಳೆಗಳನ್ನು ತಿರುವಿ ತಿರುವಿಹಾಕಿ ಲೋಕವನ್ನು ಮರೆತ ಈತನಿಗೆ ಆ ಪರಿಜ್ಞಾನ ಮಾಡಿಕೊಡಲು ಆಕೆ ಹೀಗೆ ನುಡಿದಳೊ ? ನಿಜವಾಗಿ ಅವನಲ್ಲಿ ಪ್ರೀತಿ ವಿಶ್ವಾಸಗಳಿಲ್ಲದೆಯೇ ನುಡಿದಳೊ?

ಇರಲಾರದು. ಪುಸ್ತಕದಿಂದ ಮೊಗವೆತ್ತಿ ಆಕೆಯ ಮುಖದತ್ತ ಒಂದು ಸಲ ನೋಡುವನಾದರೆ ಅವಳು ಬದುಕಿಯಾಳು ಎಂಬಂತಿದೆ ಆ ಮಾತಿನ ಮೊನೆ. ಆ ಧ್ವನಿಗೆ ಕನಲಿ ಕಾರ್ಯಮುಖನಾದಾನು ಎಂದು. ನೋಡಬೇಕಲ್ಲ.

ಮನಸ್ಸು ಭ್ರಮಿಸುತ್ತಿದೆ. ಕೃತಿ ಎದುರಿಗಿಲ್ಲ. ಕವಿ ಎಲ್ಲಿಯೊ ದೂರದಲ್ಲಿದ್ದಾರೆ. ಅವರಿಗೆ ಬರೆದು ಅವರ ಮಟ್ಟಿಗಾದರೂ ಹಿನ್ನೆಲೆಯನ್ನೂ ವಸ್ತು ಸತ್ಯವನ್ನೂ ಅರಿಯಬಹುದಾಗಿತ್ತು. ಕೇಳಬೇಕು ಪಂಡಿತರನ್ನು, ಅದನ್ನು ಬರೆದು ಕಳಿಸಿ ಎಂದು. ಅದು ಬರುವವರೆಗೂ ತೊಳಲೇ ಇಲ್ಲಿ ಮನಸ್ಸಿಗೆ. ಹೀಗೆ ಹಾಗೆ ಎಂಬ ಸಂದೇಹವೇ.

ಅಲ್ಲಿಗೂ ಇನ್ನೊಂದು ಕಳ್ಳಮನಸ್ಸಿದೆ ಒಳಗೆ, ಈಗ, ನನಗೆ : ತಿಳಿದು ಬಿಟ್ಟರೆ ಈ ಕಲ್ಪನೆಯ ಕಾಡಿನಲ್ಲಿ ಅಲೆಯುವುದು ಮುಂದೆ ನಿಂತುಹೋಗುತ್ತದೆಯಲ್ಲಾ ಎಂಬ ಭೀತಿ. ಉಹುಂ, ಅವರಿಗೆ ಬರೆಯುವುದಿಲ್ಲ. ಇದು ಹೀಗೆಯೇ ನಡೆಯಲಿ. ಪ್ರಕರಣ ನಿಶ್ಚಯವಾಗಿ ಹೋದರೆ ಸ್ವಾರಸ್ಯವೇನುಳಿಯುವುದು ಆಮೇಲೆ ? ಬೇಟೆಯಲ್ಲಿಯೇ ಸುಖ. ಷಿಕಾರಿ ಕೋವಿಗೆ ಬಿದ್ದರೆ ಬೇಟೆಯ ಸುಖ ಮುಗಿಯಿತು. ಕಲ್ಪನೆಯ ಅಪಾರತೆಗೆ, ಅನಂತ್ಯತೆಗೆ ಎಡೆಯಿರುವಾಗ ತಾನೇ ಮನಸ್ಸಿಗೆ ಈ ವ್ಯಾಪಾರ, ಹಂಬಲ ? ಬೇಡ. ಬರೆಯುವುದು ಬೇಡ. ಅವರು ಹೇಳಿದ್ದು ಒಂದು ವೇಳೆ ನನಗೆ ತೃಪ್ತಿತಾರದಿದ್ದರೆ ? ಹೀಗೆಯೇ ಮೆಲುಕು ಹಾಕುತ್ತಿರೋಣ. ಆಕೆಯ, ಆತನ ಕತೆಯನ್ನೂ ಬಾಂಧವ್ಯವನ್ನೂ ಪರಿಪರಿಯಾಗಿ ಊಹಿಸುತ್ತಿರೋಣ. ವಾಸ್ತವವಾಗಿ ಅವರಿಬ್ಬರ ಮನಸ್ಸು ಹೇಗೆಯೇ ಮೂಡಲಿ, ಹೇಗೆಯೇ ಮುಳುಗಲಿ, ಅದನ್ನು ಕಟ್ಟಿಕೊಂಡು ನನಗೇನು? ನನ್ನ ಯೋಚನೆಯ ಪರಂಪರೆ ನನಗೆ ಎಲ್ಲಿಯವರೆಗೆ ಎಂದಿರ? ಈ ಸ್ಥಿತಿಯಲ್ಲಿರುವ ನನ್ನನ್ನು ಕುರಿತು ನನ್ನ ಮನೆಯವರು ನನ್ನನ್ನೇ ಹೀಗೆ ನುಡಿಯುವವರೆಗೆ.

ಅಥವಾ, ಹೆಣ್ಣಿನ ಮೂದಲೆಗೆ ಇವನ ಉತ್ತರವಾಗಬಹುದಾದಂಥ ಇನ್ನೊಂದು ಕವಿತೆ, ಹಾಡು, ಕಥೆ ನಾನೇಕೆ ಬರೆಯಬಾರದು ? ಅದೂ ಒಳಿತೇ. ಅದನ್ನು ಮಾಡಿ ಪಂಡಿತರಿಗೆ ಕಳಿಸುವ. ಅವರು ಹಾಯಿಸಿದ ಭಾವಕ್ಕೆ, ಅದರ ಸೆಲೆಗೆ, ಸಂಚಾರಕ್ಕೆ ಇದು ಉತ್ತರ ಕೊಟ್ಟೀತೇನೊ ನೋಡುವ. ಕೊಡಲಿ ಬಿಡಲಿ. ಈ ಕೃತಿಗೆ ಆ ಹಾಡು ಪ್ರಚೋದನೆ ತಂದಿತೊ ಇಲ್ಲವೊ ? ಇನ್ನೊಂದು ಕೃತಿ ಹುಟ್ಟುವುದೋ. ಅದೂ ಲಾಭವೇ. ಖಚಿತತೆಗೇ ಎಂದಿಗೂ ಏನು ಪ್ರಾಜಾಪತ್ಯ? ಸಂದೇಹವೇ ಉಳಿಯಲಿ. ಮೀಕೆಪುದೂ ಚದುವೇನಾ, ಎಪುಡೂ ಚದುವೇನಾ,...... ಚದುವೇನಾ ? ಎಷ್ಟು ಕೆರಳಿಸುವುದು ಈ ಮಾತು!

# ನನ್ನ ಜೀವನ ದರ್ಶನ

ಬಾಳಲ್ಲಿ ನಾನು ಕಂಡುದೇನು? ಉಂಡುದೇನು? ಜನಕ್ಕೆ ತಿಳಿಸಿದುದೇನು?– ಎಂಬುದು, ಬಹುಶಃ, ಈ ಸಂಜೆಯ ವಿಷಯ. ನಾನು ಬರೆದಿರುವುದು ಕಲ್ಪನಾ ಪ್ರಧಾನವಾದ ರೂಪಕತಾಂಡವಗಳುಳ್ಳ ಕವಿತೆ ಅಲ್ಲ. ಮಹಾಕವಿಗಳ ಶಕ್ತಿಯಲ್ಲಿನ ಒಂದು ಕಾಲುಭಾಗ ಇಲ್ಲದವನಾದರೂ ನಮ್ಮ ಹಳೆಯ ಚಂಪೂ ಕಾವ್ಯದ ಅತಿರೇಕಗಳಿಗೆ ರೋಸಿ ವಿಶದವಾಗಿ, ವಾಸ್ತವವಾಗಿ, ನೇರವಾಗಿ ಬರೆಯಬೇಕೆಂದು ತೊಡಗಿದವರಲ್ಲಿ ನಾನೊಬ್ಬ. ಅದು ಯಾರಿಗೆ ಒಪ್ಪೊ ಯಾರಿಗಲ್ಲವೊ ಆ ಚಿಂತೆ ನನಗೇಕೆ ? ನನ್ನ ಮನಸ್ಸನ್ನು ಕಲಕಿದುದೇನು? ಕವಿತೆಯಾಗಿ ರೂಪಗೊಂಡದ್ದೆಷ್ಟು? ಅದನ್ನು ಓದಿದವರು ಕೇಳಿದವರು ಮೆಚ್ಚಿದಾಗ ಇಲ್ಲದಾಗ ನನಗೆ ಹೇಗೆನ್ನಿಸಿತೊ? ಬಹುಕಾಲದ ಮೇಲೆ ನನಗೇ ಅದು ಹೇಗೆನ್ನಿಸುತ್ತದೆಯೊ ? ಆ ಸಂಗತಿಯೂ ಈಗ ಬೇಡ. ಹಲವೇಳೆ ನಮ್ಮ ಮನಸ್ಸೇ ನಮಗೆ ತಿಳಿಯದು. ನಮ್ಮ ಮಾತಿಗೂ ಕೆಲಸಕ್ಕೂ ಒಂದೇ ಕಾರಣವಿರುವುದಿಲ್ಲ. ನಮ್ಮ ಮನಸ್ಸಿನ ಎಲ್ಲ ಪದರಗಳಲ್ಲಿನ ಪ್ರವೃತ್ತಿ ಯಾವಾಗಲೂ ಸಭ್ಯವಾದುದೇ ಎಂದು ಯಾರು ಶಪಥ ಮಾಡಿಯಾರು ? ಅಥವಾ ನಮ್ಮ ಅಂತರಾತ್ಮನಿಗೆ ತೃಪ್ತಿಯಾಗುವಂತೆ ನಡೆದಿದ್ದೇವೊ? ನಡೆಯುತ್ತೇವೆ ಎಂದು ತಾನೇ ಯಾರು ಹೇಳಬಲ್ಲರು? ಅವೆಲ್ಲ ಹೇಗೇ ಇರಲಿ - ಆಗಲಿ ನಮ್ಮ ಬೆಲೆ, ಎಣಿಕೆ, ಮನಸ್ಸು ತಿಳಿದೊ ತಿಳಿಯದೆಯೊ ಬಹುಬಗೆಯಾಗಿ ಮಾರ್ಪಡುತ್ತಲೇ ಇರುತ್ತವೆ. ಬದುಕನ್ನು ಸಂತತವಾಗಿ ರೂಪಿಸುತ್ತಿರುತ್ತವೆ.

ಯಾರ ಬಾಳಲ್ಲಿಯೂ ನೇರವಾಗಿ ಅರಿತ ಭಾಗವುಂಟು ; ಕೇಳಿ ತಿಳಿದದ್ದುಂಟು; ಊಹೆ ಉಂಟು; ಭ್ರಾಂತಿ, ಅಭಿರುಚಿ ಉಂಟು. ಇವುಗಳಲ್ಲಿ ಕೆಲವಕ್ಕೆ ಹೊಂದಿಕೆ ಯಾಗುವುದು; ಕೆಲವಕ್ಕಾಗದು. ಒಂದು ತೂಕದಲ್ಲಿಯೂ ಸೂತ್ರದಲ್ಲಿಯೂ ಇವು ಹೊಂದಿಕೊಳ್ಳುವವರೆಗೂ ಶಾಂತಿ, ನೆಮ್ಮದಿ ಬಾರವು. ಹೊಸ ಬಂದ ಅನುಭವ ಹಿಂದಿನ ನಿರ್ಣಯಗಳನ್ನೂ ಹದಗಳನ್ನೂ ಮೂದಲಿಸುತ್ತದೆ. 'ಒಂದೇ, ನಿನ್ನ ಬಗೆಗೆ ಬುದ್ಧಿಗೆ ನನ್ನನ್ನು ಹೊಂದಿಸಿಕೊ, ಇಲ್ಲವಾದರೆ ನನ್ನನ್ನು ಅಲ್ಲಗಳೆ, ಹೊರಗೆ ಹಾಕು. ಇಲ್ಲವೊ-ನನ್ನ ರೀತಿಗೆ ನಿನ್ನ ಹಳತೆಲ್ಲವನ್ನೂ ಮಾರ್ಪಡಿಸಿಕೊ' ಎಂದು ಕೂಗುತ್ತದೆ. ಹೀಗಾಗಿ ಎಲ್ಲಿಯೇ ಆಗಲಿ ಕಡೆಯ ತೀರ್ಮಾನ ಎಂಬ ಮಾತು ನನಗೆ ಅಗ್ರಾಹ್ಯ; ಹೊಸ ಅಂಥ ಅನುಭವ ಬಾರದಿರುವ ಮಹಾನುಭಾವರಿಗೆ ನಮಸ್ಕಾರ.

ಈ ಸ್ಥಿತಿಯಲ್ಲಿ ಸುಖವುಂಟು; ಅನಿಶ್ಚಯ ದುರ್ಬಲತೆಗಳೂ ಉಂಟು. ಆದರೆ ಕವಿಮನಸ್ಸಿಗೆ ಒಂದು ವಿಶೇಷವಾದ ನೋಟ, ದೃಢ, ಧಾರಾಳ, ಕೆಚ್ಚು ಬೇಕು. ನುಗ್ಗಿ ಮಡಿಯುವ ಒಂದು ಸಾಹಸ ಬೇಕು. ಇಲ್ಲವಾದರೆ ನೋಟ, ವಾಣಿ ತಡೆಯುತ್ತವೆ. ಕಲ್ಪನೆಯ ಓಟ ಕುಂಟಬಹುದು. ನುಗ್ಗಂತೂ ಅಶಕ್ಯವಾಗುತ್ತದೆ. ಅರೆತಿಳಿವೂ ಅರೆನಿಶ್ಚಯವೂ ಯಾರಿಗೆ ಬೆಳಕನ್ನಾಗಲಿ ಸ್ಫೂರ್ತಿಯನ್ನಾಗಲಿ ತಂದಾವು? ಹಾಗೆಂದು ಬೇರೆ ಪ್ರಯೋಜನಗಳಿಗಾಗಿ ನಮ್ಮ ಮನಸ್ಸು, ಬುದ್ಧಿ ಒಪ್ಪದವನ್ನು ಹೇಗೆ ಸ್ವೀಕರಿಸಲಾದೀತು? ಸತ್ಯಕ್ಕೆ ಹಲವು ಮುಖಗಳುಂಟು. ಅವೆಲ್ಲ ಸರಿಯೇ ಆಗಿರುವಾಗ ಒಂದು ಮಾತ್ರ ಸರಿ ಇನ್ನೊಂದಲ್ಲ ಎನ್ನುವುದು ಹೇಗೆ? ಇಂಥಲ್ಲಿ ನನಗೆ ಕಷ್ಟ. ಆದರೆ ಇನ್ನೊಬ್ಬರ ದೃಷ್ಟಿಯನ್ನು ಒಪ್ಪುವುದು ಇದರಿಂದ ಸುಲಭವಾಗಿದೆ. ಇದು ಕೆಲವೇಳೆ ವಿಪರೀತಕ್ಕೂ ಇಟ್ಟುಕೊಂಡಿದೆ. ಒಂದು ಸಲ : ಬಹು ವರ್ಷಗಳ ಹಿಂದಿನ ಮಾತು–ಎರಡು ಪಕ್ಷಗಳವರು ತುಂಬಾ ಕಟುವಾಗಿ ವಾದಿಸಿ ಕೆಂಪು ಮುಖಗಳನ್ನು ಕಪ್ಪು ಮಾಡಿಕೊಳ್ಳುತ್ತಿದ್ದರು. ರಾತ್ರಿ ಬೇಗೆ ಹೊತ್ತಿತ್ತು. ಸುಮ್ಮನಿದ್ದ ನನ್ನನ್ನು ಕುರಿತು ನನ್ನ ಅಭಿಪ್ರಾಯವೇನೆಂದರು. ನಾನು ಹೇಳಿದ್ದು ಇಬ್ಬರಿಗೂ ತೃಪ್ತಿಯಾಗಲಿಲ್ಲ. ಆವರೆಗೂ ಸುಮ್ಮನಿದ್ದ ಮಾನ್ಯರೊಬ್ಬರು ಉದ್ರೇಕಗೊಂಡು 'ಏನ್ರಿ, ರಸ್ತೆಯ ಎರಡೂ ಕಡೆ ನಿಂತು ಮಾತನಾಡುತ್ತಿದ್ದೀರಿ' You stand on both sides of the road – ಎಂದರು ಇಂಗ್ಲಿಷಿನಲ್ಲಿ. ನನಗೆ ಗತಿ? ಅದಕ್ಕೆ ನಾನೆಂದೆ; ನಾನು ರಸ್ತೆ, ಸ್ವಾಮಿ, ಈ ಎರಡೂ ನನ್ನ ಎದುರುಬದುರು ಕಡೆಗಳು. ನನ್ನನ್ನು ಕುರಿತು ಇನ್ನೂ ಎಷ್ಟೋ ಕಡೆಗಳು ಶಕ್ಯ ಎಂದೆ. ಮಾತು ನಿಂತಿತು. ಅವರು ಎದ್ದು ಅಲ್ಲಿಂದ ಹೊರಟು ಹೋದರು. ಪುನಃ ಅವರನ್ನು ನಾನು ಕಂಡಿಲ್ಲ. ಅವರ ಕೋಪ ತಿರುಗಿದೆಯೊ ಇಲ್ಲವೊ ನನಗೆ ತಿಳಿಯದು.

ಯಾವಾಗ ಯಾವ ಯೋಚನೆ ಹಾಯುವುದೊ ಅದರಂತೆ ಮನಸ್ಸು ಓಡುವಾಗ ಅದಕ್ಕೇ ಪ್ರಾಧಾನ್ಯ. ಆಗ ಅದರದೇ ತೂಕ ; ಅಳತೆ ; ಕಾಣ್ಕೆ. ಜೀವನವನ್ನು ಕುರಿತ ತತ್ತ್ವ, ವಾದ, ಸಿದ್ಧಾಂತವೂ ಆಗ ಬಾಧಿಸದು. ಇದೊಂದು 'ಅಸಹ್ಯ' ಪರಿಸ್ಥಿತಿ ಎಂದು ನಿರ್ದೇಶಿಸಬಹುದು. ಇದನ್ನು ಕೇಳಿ, ಓದಿ ಬೇಕಾದವರು ಕನಿಕರಪಡಬಹುದು. ಒಂದು ಬಗೆಯಲ್ಲಿ ಕವಿ ಬಾಳೆಲ್ಲ ಹೀಗೆ. ಈ ೩೦–೩೫ ವರ್ಷಗಳ ಅಹನ್ಯಹನಿ ಬಾಳನ್ನು ನಡಸಿದುದರಲ್ಲಿ ಯಾವುದೊ ಭಾವ, ರೀತಿ ನನ್ನ ಮನಸ್ಸಿನ ಹಾಸಾಗಿ, ನಿಟ್ಟಾಗಿ ಉಳಿದಿರಬೇಕು. ಅದು, ಬಹುತರ, ನನ್ನ ಒಟ್ಟು ಕೃತಿಗಳ ಉಸಿರಾಗಿ ಕಂಡೀತು. ಇದು ನಿಜವೊ ಅಲ್ಲವೊ ಬೇರೆಯವರು ನನಗೆ ತಿಳಿಸಬೇಕು.

ಜೀವನದರ್ಶನವೆಂದರೇನು? ಬದುಕು ನಮಗೆ ಹೇಗೆ ಕಾಣಿಸುತ್ತದೆ ಎಂದೆ? ಅದರ ಸ್ವರೂಪವನ್ನು ಕುರಿತೂ, ದೈವಗತಿ ಮಾನವಗತಿಯನ್ನು ಕುರಿತೂ ನಮ್ಮ ಅಭಿಪ್ರಾಯ ಏನೆಂದೆ ? ನಮ್ಮ ಕೃತಿಗಳಲ್ಲಿ ಕಾಣುವ ದೃಷ್ಟಿ ಯಾವುದು ಎಂದೆ ? ಹೇಗೂ ಆಗಬಹುದು. ನಾವೆಲ್ಲ ಎಲ್ಲಿಯೊ ಹುಟ್ಟಿ ಹೇಗೊ ಬೆಳೆಯುತ್ತೇವೆ. ನಮ್ಮ

ಶೀಲ, ಭಕ್ತಿ, ಶಕ್ತಿ ಆಕೃತಿಗೊಂಡಿರುತ್ತವೆ. ಊಟ, ಉಡುಪು, ನಡೆ, ನೋಟ, ಎಣಿಕೆ, ಪಕ್ಷಪಾತಗಳಲ್ಲಿ ಗುರುತಿಸಬಲ್ಲ ಒಂದು ಖಚಿತ ಲಕ್ಷಣ ಬಹುವಾಗಿ ಏರ್ಪಟ್ಟು ಎದ್ದು ಕಾಣುತ್ತದೆ ; – ಇಂಥವು ನಮ್ಮದೇ ಅಂಕಿತವೆಂಬ ಮಟ್ಟಿಗೆ. ಸ್ವಂತ ಬದುಕು ಕಷ್ಟದಲ್ಲಿ ಸುಖದಲ್ಲಿ, ಇಷ್ಟದಲ್ಲಿ ಅನಿಷ್ಟದಲ್ಲಿ ನಡೆದಿರುತ್ತದೆ. ಬೇರೆ ಹೆಚ್ಚಿನದು ದೊರೆಯದಾಗ ಇರುವುದಕ್ಕೆ ಸಂತೋಷಪಡುವುದೇ ಒಂದು ಧರ್ಮವಾದರೆ ಒಳಿತು ಎನ್ನಿಸುತ್ತದೆ. ನಮ್ಮ ಗುರುಗಳೊಬ್ಬರು ಹೇಳುತ್ತಿದ್ದರು : ದೊಡ್ಡದಕ್ಕೆ ಆಸೆಪಡಿ, ಯತ್ನ ಮಾಡಿ. ದೊರಕದಿದ್ದರೆ ಬಳಲಬೇಡಿ. ಬಂದುದನ್ನು ಬೇಡವೆನ್ನಬೇಡಿ. ಎಲ್ಲರೂ ಬುದ್ಧಿವಂತರೂ ಅದೃಷ್ಟಶಾಲಿಗಳೂ ಆಗುವುದು ಶಕ್ಯವಿಲ್ಲ. ಆದರೆ ಎಲ್ಲರೂ ಸಜ್ಜನರಾಗಬಹುದು – It is given to everyone to be good ಎಂದು. ಈ ಮಾತು ನನ್ನ ಬಾಳಿಗೆ ನೆರವು. ಇದು 'ವೇದಾಂತ' ವಲ್ಲ. ದಿನದ ಬದುಕಿಗೆ ಅಗತ್ಯವಾದ ಮನೋಧರ್ಮ. ಇಂಥದೊಂದಿಲ್ಲವಾದರೆ ನಾವು ಕೆಟ್ಟೆವು. ಬದುಕು ಗಾಸಿಪಡುತ್ತದೆ. ಅದನ್ನು ಗಾಸಿಪಡಿಸಿ ನಾವು ಗಳಿಸಬಹುದೇನನ್ನು ? ಸಂಸ್ಕಾರವನ್ನೆ, ಸಂಪತ್ತನ್ನೆ, ಶಾಂತಿಯನ್ನೆ, ಸಿದ್ಧಿಯನ್ನೆ?

ಲೋಕಜೀವನವೆಂಬುದರಲ್ಲಿ ನಮಗೆ ಕಾಣುವುದು ಬಹು ಸ್ವಲ್ಪ. ಕಂಡುದರಲ್ಲಿಯೂ ಅರೆಮನಸು, ಭ್ರಾಂತಿ ಒಟ್ಟಬಲ್ಲವು. ಕೇಳಿದುದೂ ಮನಸ್ಸಿಗೆ ತಟ್ಟಿದುದೂ ನನ್ನಂಥವರಿಗೆ ಸಾಹಿತ್ಯದ ಮೂಲಕ, ಲೋಕಚಿಂತನೆಯ ಮೂಲಕ ತಟ್ಟುತ್ತವೆ. ಇವೆಲ್ಲ ಚಿತ್ತಸಂಸ್ಕಾರಕಾರಿಯಾಗುತ್ತವೆ. ಇದರಲ್ಲಿ ನೂರಾರು ನಿಟ್ಟುಗಳುಂಟು. ನೋಡು ನೋಡುತ್ತ ಅಲ್ಲಿ ಮೇಲು, ಬೀಳು, ನಯ, ಒರಟು, ತುಂಬು, ಬಡಕಲು, ತಾಳು, ಕೊಂಬೆ, ಒಳ, ಪದರ, ಒಣ, ಸರಸ ಗೊತ್ತಾಗುತ್ತವೆ. ಇದು ಕೆನೆ, ಇದು ಪೋಷಕ, ಇದು ನಾಶಕ, ಇದು ನೇರ, ಇದು ಬಳಸು ಎಂಬ ವಿವೇಕ ದೊರೆಯುತ್ತದೆ. ಸ್ವಂತ ಅನುಭವದ ಜೊತೆಗೆ ಇಂಥ ಬೆಲೆಗಳ ದರ್ಶನ ಸೇರಿಕೊಳ್ಳುತ್ತದೆ. ದುರ್ಮಾರ್ಗರ ಸಂಗತಿ ಹೇಗೊ ಸಭ್ಯರ, ಸಂತರ ಸಂಗತಿಯೂ ಹಾಗೇ ಅನಂತ. ಆದರೆ ಈ ಕಾಲ ದೇಶ, ಈ ಜಾತಿಮತ, ಈ ಮನಸ್ಸಿನದೇ ಸರ್ವ ಪ್ರಾಮಾಣ್ಯ ಎನ್ನಲಾಗದು. ಹಿರಿತನದ ವಿಲಾಸ ಎಲ್ಲಿಯೂ ಆದೀತು. ಕಂಡಾಗ ಅದಕ್ಕೆ ಕೈಮುಗಿವ ಬುದ್ಧಿ ಮಾತ್ರ ಇರಲಿ. ಮಾಸ್ತಿಯವರ ತಿರುಪಾಣಿ ನಾಟಕದಲ್ಲಿ ಶ್ರೀರಂಗದಲ್ಲಿ ಹಲವು ಆಳ್ವಾರರ ವಿಗ್ರಹಗಳ ಜೊತೆಗೆ, ವಿಗ್ರಹವಿಲ್ಲದ ಪೀಠ ಒಂದು ಇತ್ತೆಂದಿದ್ದಾರೆ. ಬರಲಿರುವ ಆಳ್ವಾರರಿಗೆ ಸಂತತ ತರೆದಿರುವ, ಕಾದಿರುವ ಪೀಠ ಅದು. ಅವರ ಸಂತತಿ ಒಂದು ಕಾಲಕ್ಕೆ ಮುಗಿಯುವುದಲ್ಲ. ಪೀಠ, ಹೃದಯ, ಮನಸ್ಸು, ಹೀಗೆ ಸರ್ವದಾ ತೆರೆದಿದ್ದರೆ ಚೆನ್ನ. ಈತನು ವಿಮರ್ಶೆಯ ಬೆಲೆಗಳನ್ನೆಲ್ಲ ಕದಡಿ ಬಗ್ಗಡ ಮಾಡುತ್ತಾನೆಂಬಷ್ಟು ಪರಸ್ಪರ ವಿರುದ್ಧವಾದ ಒಲವು, ಪಕ್ಷಪಾತ ನನ್ನಲ್ಲಿ ಹುಟ್ಟಿವೆ. ಹಾಗಿದ್ದರೆ ಪ್ರಮಾಣವಾವುದೂ ಇಲ್ಲವೆ ಎಂದವರುಂಟು. ಇದೆ. ಆದರೆ ಅದೆಲ್ಲ ಹಳೆಯ ಸೃಷ್ಟಿಸಾಧನೆಯಲ್ಲಿ ಕಂಡ ಚೆಲುವಿಂದ ನಿರ್ಣೀತವಾದ್ದು. ಮುಂದೆಯೂ ಚೆಲುವು ಹೇಗೆ ಕಾಣಬೇಕು ಎಂಬ ನಿರ್ಬಂಧವೇನು? ಚೆನ್ನಾಗಿದ್ದುದರ ಲಕ್ಷಣ ಕಂಡಿರಿ. ಈ ಲಕ್ಷಣಗಳಿರುವುದರಿಂದ

ಇದು ಚೆನ್ನಾಗಿದೆ ಎಂದೀರಿ. ಇನ್ನಾವ ಚೆನ್ನಾದ್ದಕ್ಕೂ ಇವೇ ಲಕ್ಷಣಗಳಿರುವುದರಿಂದ ಎಂಬ ವಾದ ಮಾತ್ರ ಸರಿಯಲ್ಲವಾದೀತು. ಭಗವಂತನ ಸೃಷ್ಟಿಗೆ ತಡೆಯೇನು? ಇನ್ನೊಂದು ಹೊಸ ಬಗೆಯ ಚೆಲುವನ್ನು ನಿರ್ಮಿಸಲಾರದಷ್ಟು ಬರಡನೆ ಅವನು? ಮುಂದಿನ ಜೀವವುಳಿಸುವ ಪ್ರಸಂಗದಲ್ಲಿ ಇದು-ಹಿಂದಿನ ಬೆಲೆ ಬಳಕೆ-ಉಬ್ಬಸ ತರುವ, ಕುತ್ತಿಗೆ ಹಿಸುಕುವ ನಿರ್ಮಾನುಷ ನಿರ್ಬಂಧ ಮಾತ್ರ ಆಗಬಾರದು. ನಾದ ಹಾಡುಗಳನ್ನು ಹಾಡಲು ತೊಂಬತ್ತು ಮೇಲೊಂಬತ್ತು ದಾರಿಗಳುಂಟು; ಅವುಗಳಲ್ಲಿ ಒಂದೊಂದೂ ಸರಿಯೇ ಎಂದುದುಂಟು. ಅವು ಹಾಡಾದರೆ ಸಾಕು.

ಲೋಕಗತಿ, ವ್ಯಕ್ತಿಗತಿಗಳದು ದೊಡ್ಡ ಪ್ರಶ್ನೆ. ಸಾಮಾನ್ಯರಿಗೆ ನಿಲುಕದ್ದು, ನೀಗದ್ದು. ಇಂಥಲ್ಲಿ ದರ್ಶನಬಾಹುಳ್ಯವುಂಟು. ಆಚಾರ್ಯರೂ ಆದರ್ಶಗಳೂ ನಾನಾ. ಒಬ್ಬರ ಭಕ್ತಿ ಇನ್ನೊಬ್ಬರದಾಗಬೇಕಿಲ್ಲ. ಹೀಗಿರುವಾಗ ನಮ್ಮ ವಿಶ್ವಾಸಕ್ಕೆ ಇನ್ನೊಬ್ಬರನ್ನು ತಲೆ ತೆರಬೇಕೆನ್ನುವುದು ಯಾವ ನ್ಯಾಯ ? ಇವು ಅತಿ ಲೌಕಿಕ ಭಕ್ತಿಗಳಿಗೆ ಮನಸ್ಸನ್ನು ಒಯ್ಯುವ ಪ್ರಕರಣಗಳು. ಅವನ್ನು ಕಂಡ, ಕುರಿತ ಕಡೆಯ ನುಡಿ ಲೋಕ ಮುಗಿಯುವವರೆಗೂ ಶಕ್ಯವಿಲ್ಲ. ಅಲ್ಲಿ ಸತ್ಯ ನಿರ್ಣಾಯಕಗಳೂ ಸ್ಥಾಪಕಗಳೂ ಪ್ರಯೋಗಗಳೂ ಕಷ್ಟ. ಅವರವರ ಮನಸ್ಸು, ಜೀವದ ಅಗತ್ಯ, ಪ್ರೀತಿ ಅಪ್ರೀತಿಗಳಿಗೆ ಅವನ್ನು ಬಿಡೋಣ. ನಂಬಿದರೆ ವಿಶ್ವಾಸ; ಪವಿತ್ರವೆನಿಸಿದರೆ ಪವಿತ್ರ. ನಮಗೆ ಉಂಟಾದರೆ ಶ್ರದ್ಧೆ. ಶ್ರದ್ಧೆ, ನಂಬಿಕೆ, ಪವಿತ್ರಭಾವನೆ ಇವಿಲ್ಲದೆ ಮತಸಮಯವೇ–ರಿಲಿಜನ್ ಎಂಬುದೇ– ಇಲ್ಲ. ಇದು ಕೇವಲ ಬುದ್ಧಿಯ ಒಲವಲ್ಲ. ವಿಶ್ವಾಸದ ಪಕ್ಷಪಾತ. ಕೇವಲ ಯುಕ್ತಿಯ ಪ್ರಪಂಚಕ್ಕೆ ಇದು ಹೊರಗು.

ದಿನಜೀವನಕ್ಕೆ ಮೇಲ್ಪಟ್ಟ ಯಾವುದೊ ಶಕ್ತಿ ಲೋಕವನ್ನು ನಡಸುತ್ತಿದೆ ಎಂಬುದು ಬಹುಶಃ ನಿಜ. ಅದರ ಸ್ವರೂಪ ಹೀಗೆ, ಇಷ್ಟೇ ಸರಿ ಎಂಬುದು ಮಾತ್ರ ದುಡುಕು. ಶಾಸ್ತ್ರದ್ದು, ಧರ್ಮದ್ದು, ಕಲೆಯದು, ವ್ಯವಹಾರದ್ದು, ಅನುಭವದ್ದು ಎಲ್ಲ ಒಂದೊಂದು ದೃಷ್ಟಿ. ಇವೆಲ್ಲ, ಇನ್ನೂ ಎಷ್ಟೋ, ಸೇರಿ ಒಟ್ಟು ನೋಟ ಬಂದರೆ ಅದಕ್ಕೆ ಸಾಕಷ್ಟು ಸಿದ್ಧಿ ದೊರೆತ ನೋಟ ತುಂಬಿದ ನೋಟವಾಗುತ್ತದೆ. ಇದೆಲ್ಲ ಒಂದು ಸೃಷ್ಟಿ ಕ್ರಮದ, ಒಂದು ಕಾಲರಚನೆಯ ಮಾತು. ಇನ್ನೊಂದು ಬಗೆಯ ಸೃಷ್ಟಿಗೆ ಇನ್ನೊಂದು ಕಾಲಗಣನೆಯ ವ್ಯಾಪಾರಕ್ಕೆ ಇವೆಲ್ಲ ಹೇಗೆ ಕಾಣುವುದೊ ಯಾರು ಬಲ್ಲರು ? ಈ ಪ್ರಪಂಚದವರಲ್ಲಿ ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ತಾಳಿಕೆ, ತಾಳ್ಮೆ ಇರಬೇಕಾದ್ದು ಮಾತ್ರ ಅಗತ್ಯ. ಯಾರ ಅನುಭವದಲ್ಲಿ ಹೆಚ್ಚು ಸರ್ವಗ್ರಾಹಕತೆ ಇದೆಯೊ, ಯಾರಿಂದ ಲೋಕಕ್ಕೆ ಹೆಚ್ಚು ನೆಮ್ಮದಿಯೊ, ಯಾರ ನಿಲವಿನ ಪ್ರಶ್ನೆಯನ್ನು ವಿಮರ್ಶೆಯಿಂದಲೂ ಗ್ರಹಿಸಿಬಹುದೊ, ಅಂಥದಲ್ಲಿನ ಪಾಕವನ್ನು ಅವರ ಉಪಶಾಂತಿ ಪ್ರಸನ್ನತೆಗಳಿಂದ ಕಂಡುಕೊಳ್ಳಬಹುದು. ಅಂಥದಕ್ಕೆ ಬೆಲೆ ಹಿರಿದು. ಇಲ್ಲಿ ಪೌರ್ವಾತ್ಯ, ಪಾಶ್ಚಿಮಾತ್ಯಗಳ ವಿಶೇಷ ಲಕ್ಷಣ, ಮುಖ ಇರಬಹುದು. ಬಣ್ಣದಲ್ಲಿ, ಸ್ವರಘಾತದಲ್ಲಿ, ಹೊರಮೈಯಲ್ಲಿ,

ರಸದಲ್ಲಿ, ಸತ್ವದಲ್ಲಿ ಅಲ್ಲ. ಯಾವ ಒಂದು ಜನಕ್ಕೇ ದೇಶಕ್ಕೇ ಆಗಲಿ ಇಂಥ ಸಿದ್ಧಿ ಸರ್ವಸಾಮಾನ್ಯವಾಗಿಬಿಟ್ಟಿದೆ, ಉಳಿದವರೆಲ್ಲ ಸರ್ವಕಾಲಕ್ಕೂ ಹೀನರೇ, ನಮ್ಮದು ಸರ್ವಥಾ ಶ್ರೇಷ್ಠ, ಅದರ ಸರಿಗೆ ಯಾರೂ ಏರಿಲ್ಲ ಎಂದರೆ ಮಾತ್ರ ನಾನು ಒಪ್ಪಲಾರೆ. ಮಾನವನ ಅನುಭವದಲ್ಲಿ ಎಲ್ಲಿ ದೊಡ್ಡತನ ಕಂಡರೂ ಅದು ದೊಡ್ಡದೇ. ಅವಿರೋಧದಲ್ಲಿ ಎಲ್ಲದರೊಡನೆಯೂ ಸೇರಿ ಅವನು ಲೋಕ ಕಲ್ಯಾಣವನ್ನು ಸಾಧಿಸಬೇಕು. ಸೌಮನಸ್ಯ ಅಲ್ಲಿ ಮೂಲಧಾತು. ನಮ್ಮಲ್ಲಿಯೂ ಇರುವುದು ಇದೆ; ಇಲ್ಲದುದು ಇಲ್ಲ. ಇದ್ದುದನ್ನು ಕೊಡೋಣ ; ಇಲ್ಲದುದನ್ನು ತಂದುಕೊಂಡು ಬದುಕೋಣ.

ನಮ್ಮ ಗತಿ ಯಾವುದು? ಲೋಕದ್ದು? ಲೋಕದ ಕಥೆ ಮುಗಿದ ಮೇಲೆ ತಾನೆ ಅದರ ಗತಿ ಏನು ಎಂಬುದು ತಿಳಿದೀತು? ಹರಿವ ಒಂದು ನದಿಯ ಈ ದಡದಿಂದ ಆ ದಡಕ್ಕೆ ಆ ಕಡೆಯಿಂದ ಈ ಕಡೆಗೆ ಹೋಗುತ್ತ ಬರುತ್ತ ಬದುಕಿನ ದಿನದಿನದ ಅಥವಾ ಆಯುಸ್ಸಿನ ಕೆಲಸಗಳನ್ನು ಮಾಡಿಕೊಳ್ಳುತ್ತ ಇರುವವರು ನಾವು. ನದಿಯ ಮೂಲದಿಂದ ಹಿಡಿದು ಕಡಲು ಮುಟ್ಟುವವರೆಗೂ ಅದನ್ನು ಕಂಡವರಿಗಲ್ಲವೆ ನದಿಯ ಪೂರ್ಣ ಸ್ವರೂಪ ಗೊತ್ತಾಗುವುದು ? ಈಗ ನಡೆಯುತ್ತಿರುವ ಒಂದು ಕಾಲ ಪ್ರವಾಹದಲ್ಲಿ ಎಷ್ಟೋ ಜೀವಗಳು, ಜನತೆಗಳು, ನಾಗರಿಕತೆಗಳು ತೇಲಿವೆ ; ಮುಳುಗಿವೆ. ನಾವೂ ತೇಲುತ್ತ ಮುಳುಗುತ್ತ ಅಲ್ಪ ಪ್ರಯೋಜನಗಳಿಗಾಗಿ ಅಲ್ಲಷ್ಟು, ಇಲ್ಲಷ್ಟು ಆ ನದಿಯ ದರ್ಶನ, ಉಪಯೋಗ ಪಡೆಯುತ್ತಿರುವವರು. ಸೃಷ್ಟಿಯ ಕೆಲಸ ಮುಗಿದ ಕೊನೆಯಲ್ಲಿ ಮಾತ್ರ ಗೊತ್ತಾಗಬಲ್ಲ ಪೂರ್ಣತೆಯ ಪರಿಚಯ ಯಾರಿಗಾಗಬಹುದು ? ಸೂತ್ರರೂಪವಾಗಿ ಅದನ್ನು ತೊಡಗಿದ ಭಗವಂತನಿಗೆ ; ಪರಿಣಾಮವಾಗಿ, ಸಿದ್ಧಿಸಿದುದನ್ನು ಕಂಡ ಅದೇ ಭಗವಂತನಿಗೆ. ಉಳಿದವರೆಲ್ಲರದು ಅಪೂರ್ಣ ದರ್ಶನ. ಅವರಿಂದ ದೊರೆವುದು ಆ ಈ ವಾದಗಳು, ಕ್ಷಣಿಕ ವೇದನಗಳು, ನಿವೇದನಗಳು ಮಾತ್ರ. ಈ ನಡುವೆ ಯಾವ ಮತವೂ ನಂಬುವವರನ್ನು ಉದ್ಧಾರಮಾಡಬಲ್ಲದು,-ಹದಮಾಡಿ. ಅವರು ಹದಗೊಂಡರೆ. ಅದರ ತಿಳಿವಿನ ಎತ್ತರಕ್ಕೆ ಏರಿ ಅದರ ಶುಚಿಯನ್ನು ರೂಢಿಸಿಕೊಂಡು ಅವರು ಬೆಳೆದರೆ. ನಂಬಿಕೆ, ತಿಳಿವಳಿಕೆ, ಚಾರಿತ್ರ ಇವು ಮೂರು ರತ್ನಗಳು ಎಂಬ ಜೈನರ ಮಾತಿನಲ್ಲಿ ಅಡಕವಾಗಿ ಈ ತತ್ವ ಪ್ರಕಾಶವಾಗುತ್ತದೆ.

ನಾನು ಅನೇಕ ಹಿರಿಯರನ್ನು ನೋಡಿದ್ದೇನೆ. ಆಸ್ತಿಕರಾಗಿ, ಆಚಾರವಂತರಾಗಿ ಪ್ರಾಮಾಣಿಕರಾಗಿದ್ದು ಸಂಪ್ರದಾಯದಲ್ಲಿಯೇ ಉಪಶಾಂತಿಯನ್ನು ಸಾಧಿಸಿದವರಿದ್ದಾರೆ. ಕಹಿ ಬೆಳಸಿ ನೋವಿನಲ್ಲಿ, ಸೋಲಲ್ಲಿ ಕುಯ್ಯೋ ಮೊರೆಯೊ ಎಂದವರಿದ್ದಾರೆ. ಯಾವುದನ್ನೂ ನಂಬದೆ ಬಾಳನ್ನು ಚೊಕ್ಕಟವಾಗಿಟ್ಟುಕೊಂಡು ತುಂಬುಬಾಳು, ನೆರೆಬಾಳು ಬಾಳಿದವರಿದ್ದಾರೆ. ಬೇರೆ ಬೇರೆ ದೇಶ ಮತಗಳವರು ಶುದ್ಧಮನಸ್ಕರಾಗಿ ಸೋದರರಾಗಿ ಬಾಳಿದವರುಂಟು. ಒಂದೇ ದೇಶದವರು ವಿರಸವಾಗಿ ಹುಳುಗಳಂತೆ ಬಾಳಿರುವುದುಂಟು. ಇನ್ನು ಕೆಲವರು ಯಾವುದನ್ನೊ ಒಂದನ್ನು ಒಪ್ಪಿಕೊಂಡು ಹೊಸತಾಗಿ ಬರುವ ತಿಳಿವನ್ನೆಲ್ಲ

ತಮ್ಮ ಹಳತರ ಪೋಷಣೆಗೆ ಕಾಲುವೆ ಹರಿಸಿಕೊಂಡು ಒಂದು ನಂಬಿಕೆಯ ದ್ವೀಪವನ್ನು ಕಲ್ಪಿಸಿಕೊಂಡು ಕ್ಷೇಮದಲ್ಲಿ, ಸಂತೋಷದಲ್ಲಿ ಧೀರವಾಗಿ ನಡೆದವರುಂಟು. ಅವರಿಗೆ ಸಂದೇಹಗಳೇ ಇಲ್ಲ. ಎಲ್ಲ ತೀರ್ಮಾನವಾಗಿಬಿಟ್ಟಿದೆ. ಎಲ್ಲಿ ಏನು ನಡೆದರೂ ಅವರ ತಿಳಿವಿಗೇ ಪೋಷಕ. ಆಗದಿದ್ದರೆ ಹಾಗೆ ಅರ್ಥ ಮಾಡಿಕೊಂಡು ಅದರ ವಿಷಮತೆಯಿಂದ ಪಾರಾಗುತ್ತಾರೆ. 'ಬೆಟ್ಟಕ್ಕೆ ಚಳಿಯಾದರೇನ ಹೊದಿಸುವರಯ್ಯ' ಎಂದ ಪ್ರಭುವಿನ ಮಾತು ಇವರ ಬಳಿಗೆ ಬಾರದು. ಇವರನ್ನು ತಾಪಗೊಳಿಸದು. ಇವರು ಬೆಟ್ಟವಲ್ಲ. ಈ ಚಳಿ ಚಳಿಯಲ್ಲ ಇವರಿಗೆ. ಹತ್ತು ದಿಕ್ಕಿನ ಗಾಳಿಗೆ ತೆರೆದ ಬೆಟ್ಟಕ್ಕೆ ತಾನೇ ಚಳಿಯನ್ನು ತಡೆವ ಅಗತ್ಯ, ಚಿಂತೆ ? ಅದು ಬೆಟ್ಟವಾದ್ದರಿಂದ ಆ ಚಳಿಯನ್ನು ತಡೆಯಬಲ್ಲದು. ಇವೊತ್ತಿನ ಹುಚ್ಚು ಕ್ಷೋಭೆಗಳನ್ನು ನೋಡಲೊಲ್ಲದೆ, ಒಮ್ಮನ ತರುವ ಸಂಪರ್ಕಗಳನ್ನು ಹಳಿದು ದೂರ ನಿಲ್ಲುವವರಿಗೆ ಇಂದಿನ ಬಿಸಿ ಅರ್ಥವಾದೀತು ಹೇಗೆ? ಈ ತುಮುಲದಲ್ಲಿ ನೆಲೆ ಸಿಕ್ಕದೆ ಇರುವ, ಕಾಣುವ ನೆಲೆಗಳು ತೃಪ್ತಿಕರವಲ್ಲದೆ ಮುಂದೆ ಇನ್ನೂ ದಾರಿಯೇ ಕಾಣುತ್ತ ಇರುವ ಬಾಳುಗಳೂ ಉಂಟು. 'ನೂರು ಜನ್ಮಕ್ಕೆ ಪಯಣವಾದರೆ ನೂರು ಜನ್ಮಕು ಪಯಣವೇ' ಎಂದು ನನ್ನ ದಾರಿಕಾರನೊಬ್ಬ ಈ ಮನಸ್ಸಿನಲ್ಲಿಯೇ ನುಡಿದದ್ದು. ಇದು ತಪ್ಪೊ ಸರಿಯೊ ನಾ ಕಾಣೆ. ಇದನ್ನು ಅಣಕಿಸಬಹುದು.

ಒಂದು ಕಡೆ ಸಮಾಜ ಶಾಸ್ತ್ರಗಳ, ಇನ್ನೊಂದು ಕಡೆ ತತ್ತ್ವ ಧರ್ಮಗಳ ವ್ಯಾಸಂಗದಲ್ಲಿ, ಆಲೋಚನೆಯಲ್ಲಿ ನಾನು ಸ್ವಲ್ಪ ಕಾಲ ಕಳೆದಿದ್ದೇನೆ. ಅವು ಬಾಳಿಗೆ ಸಾಲವೆನ್ನಿಸಿತು. ನನ್ನ ಮನಸ್ಸು ಸಾಹಿತ್ಯಕ್ಕೆ ಹೆಚ್ಚಾಗಿ ಒಲೆಯಿತು, ಒಲಿಯಿತು. ಜೀವನಕ್ಕೆ ಒಂದು ಸಲ ಸಾಹಿತ್ಯದ ಸವಿ ಇಳಿದರೆ, ಬೇರೆ ಎಲ್ಲ ಸಪ್ಪೆಯಾಗುತ್ತದೆ. ಶಾಸ್ತ್ರಗಳದು ಸಾಧನಕಾಂಡ. ಅವು ಕಲ್ಪಗಳು, ಆಗಮಗಳು. ಪ್ರಯೋಜನಗಳಿಗೆ ದುಡಿವ ಅಂಗಗಳು. ಸಾಹಿತ್ಯ, ಸಂಗೀತ ಹಾಗಲ್ಲ. ಇವುಗಳಲ್ಲಿನ ಸ್ವಾತಂತ್ರ್ಯ, ಧೀರತೆ, ಅನಂತಾವಕಾಶ, ನಿರ್ಭೀತಿ, ಆಳ, ಉನ್ನತಿ, ವಿಸ್ತಾರ, ಸೂಕ್ಷ್ಮಗಳು, ಎಲ್ಲಕ್ಕೆ ಮೇಲಾಗಿ ಮಾನವತೆ, ಇನ್ನೆಲ್ಲೂ ನನಗೆ ಕಾಣವು. ಇಲ್ಲಿ ಮನಸ್ಸು ಆಡುವ ರೀತಿಯೇ ಸೊಗಸು. ಇಲ್ಲಿನ ಅಂತಃಕರಣ ಪ್ರವೃತ್ತಿ ಬೇರೆಲ್ಲಕ್ಕೂ ತಳಹದಿ; ಜೀವರಸ; ಫಲದಾನ. ಇಲ್ಲಿಲ್ಲದ ದಿವ್ಯತೆ ಬೇರೆಡೆ ಕಾಣದು. ದೊಡ್ಡ ಸಾಹಿತ್ಯದ ಅನುಭವದಿಂದ ಒಂದು ಗಳಿಗೆಯಲ್ಲಿ ಉಂಟಾಗುವ ಜೀವಸೌಭಾಗ್ಯದ ಕಾಣ್ಕೆ, ಚಿತ್ತ ಹೃದಯಗಳ ಸಂಸ್ಕಾರ ಒಂದು ಯುಗದ ತಪಸ್ಸಿನಿಂದ ಆದೀತೆನ್ನಿಸುವುದಿಲ್ಲ. ಬಹುಶಃ ನಾನು ತಪಸ್ಸು ಮಾಡಿಲ್ಲವಾದ್ದರಿಂದ ಇರಬಹುದು ನನ್ನ ಈ ಮಾತು. ಆದರೆ ಇಂಥ ಕಡೆ ತಪಸ್ಸಿದೆಯೆಂದು ಹೊಗಳಿರುವ ನಾಲ್ಕಾರು ಕಡೆ ನಿಜವಾದ ಹಣ್ತನವನ್ನು ನಾನು ಕಂಡಿಲ್ಲ. ಅದರ ಒರಟು, ಅಹಂತೆ ನನಗೆ ಕರ್ಕಶವಾಗಿ ಕಂಡಿವೆ. ಸಾಹಿತ್ಯದಲ್ಲಿ ದೌರ್ಬಲ್ಯಕ್ಕೂ ಚಾಪಲ್ಯಕ್ಕೂ ಸ್ಥಾನವುಂಟು. ಪಾಪಿಗೆ ಅನುಕಂಪೆಯುಂಟು. ದುಃಖಕ್ಕೆ ಸಾಂತ್ವನ ಉಂಟು. ವಿಧಿಯ ತೊಳಲಲ್ಲಿ ಸಿಕ್ಕಿದ ನರನನ್ನು ಕಂಡು ಅಯ್ಯೊ ಎನ್ನುವ ಕಾರುಣ್ಯ, ಅದಕ್ಕೆ ನೆರವಾಗಬಯಸುವ ಪ್ರೀತಿ ಉಂಟು.

ಪತತು ನಭಃ ಸ್ಫುಟತು ಮಹೀ
ಚಲಂತು ಗಿರಯಃ ಮಿಲಂತು ವಾರಿಧಯಃ
ಅಧರೋತ್ತರಮಸ್ತು ಜಗತ್
ಕಾ ಹಾನಿಃ ವೀತರಾಗಸ್ಯ?

—ಕಾ ಹಾನಿಃ-ವೀತರಾಗಸ್ಯ? ವೀತರಾಗತೆ ಕೆಲವರಿಗೆ ಕಡೆಯ ಹಂತವೇನೊ. ಅದು ಪೂಜ್ಯವೇ ಇರಬೇಕು. ಏನಾದರೆ ಅವರಿಗೇನು? ಅಮ್ಮ ಅಳಿದರೇನು? ಅಪ್ಪ ಕೊಳೆತರೇನು? ಮಗು ಅತ್ತರೇನು ? ದಿಕ್ಕಿಲ್ಲದ ವಿಧವೆಯನ್ನು ಬೀದಿಯ ನಾಯಿಮಾಡಿ ಅವಳನ್ನೆ ಹಳಿಯುವ ಹಿರಿತನ ವಿಜೃಂಭಿಸಿದರೇನು? ಅನ್ಯಾಯವೇನು, ಧರ್ಮಿಷ್ಠರ ಸೋಲೇನು? ಇವರು ವೀತರಾಗರು. ಲೋಕಕ್ಕೆ ಇವರು ವಿಮುಖರು. ನಾನಾಡುವುದು ಸಾಮಾನ್ಯರ ಮಾತನ್ನು. ಒಂದು ಹಾಡಿನ ಪಲ್ಲವಿ, ಚರಣ, ಅದರ ನಾದಲಯ, ಯಾವುದೊ ಕಣ್ಣಿನ ಒಂದು ಒಸೆವ ಹೊಳಪು ಒಂದೊಂದು ಬದುಕನ್ನು ಬಣ್ಣಿಸಬಲ್ಲವು. ಕಾಪಾಡಬಲ್ಲವು. ಉದ್ಧಾರ ಮಾಡಬಲ್ಲವು. ಇಲ್ಲಿನ ಸೌಂದರ್ಯ, ಮಾನವ ವಿಲಾಸ ಬೇರೊಂದರಲ್ಲಿ ನಾ ಕಾಣೆ. ಆದ್ದರಿಂದಲೇ ನನ್ನ ಮನಸ್ಸು ಸಾಹಿತ್ಯದ ಉಪಾಸನೆಗೂ ಅರ್ಜನೆಗೂ ಭೋಗಕ್ಕೂ ತನ್ನನ್ನು ತೆತ್ತುಕೊಂಡಿದೆ.

ನನಗೆ ಇಷ್ಟು ನಿಜ : ಬದುಕಿನಲ್ಲಿ ದುಃಖವಿರುವಂತೆ ಸಂತೋಷವೂ ಇದೆ. ಹಗೆಯಿರುವಂತೆ ಕೆಳೆ ಇದೆ. ನಿಷ್ಠುರತೆ ವಂಚನೆ ಇರುವಂತೆ ನಯ ಪ್ರಾಮಾಣಿಕತೆ ಇವೆ. ಕಷ್ಟದಲ್ಲಿ ಇರುವಾಗ ಯಾರೊ ಒಬ್ಬರಾಡಿದ ಮಾತು ಅಮೃತ ಸತ್ವವಾಗಬಲ್ಲದು. ಕೋಟಿ ಕರ್ಕಶ ಕೊಲ್ಲುತ್ತಿರುವಾಗ, ಮೌನದಲ್ಲಿ ಮರೆಯಲ್ಲಿ ನಮಗಾಗಿ ಚಾಚಿ ಹಿಡಿವ ಕೈಕೆಳೆ, ಕೊಡುವ ಧೈರ್ಯ, ನುಡಿವ ತುಟಿಯ ಒಂದು ಅಲುಗು, ಮಾತು, ಕಣ್ಣಿನ ಒಂದು ಸ್ನೇಹದ ಮಿನುಗು ಸಾಕು-ತಾರಣೆಗೆ, ಉಳಿಸುವುದಕ್ಕೆ, ಬದುಕಿನಲ್ಲಿ ನಂಬಿಕೆ ಸ್ಥಾಪಿಸುವುದಕ್ಕೆ. ಈ ಲಕ್ಷಣ ಮಾನವತೆಯ ಪರಮ ಲಕ್ಷಣ. ಇದು ನರಲೋಕದ ಸೌಭಾಗ್ಯ.

ಈ ಸೌಭಾಗ್ಯ ಎಷ್ಟು ಹೊಮ್ಮಿದರೂ ಕಡಮೆಯೇ ಎನ್ನಿಸುತ್ತದೆ ನನಗೆ. ಅದನ್ನು ಸವಿಯುವ ಭೋಗ, ಸಾಧಿಸುವ ಯೋಗ ಸಾಹಿತ್ಯ ಯೋಗ. ಲೋಕ ಕ್ಷಣಿಕವೇನು? ಆಗಲಿ. ಈ ಸೌಂದರ್ಯ, ಮೈತ್ರಿ ನಶ್ವರವೇ ಆಗಲಿ. ಇಲ್ಲಿನ ಪ್ರೀತಿ ನನಗೆ ದಿವ್ಯ. ಬಾಳಿಗೆ ನಾನು ಕೃತಜ್ಞ ಎಂಬ ಕವಿ ನುಡಿಗಳಿವೆ. ಆ ಸುಖೋಷ್ಣತೆ, ಆ ಕರುಳಕರುಣೆ, ನನಗೂ ಸಾಕು. ಅವನ್ನು ಎರೆವವರು ಬಂಧುಗಳು. ಲೋಕವೆಲ್ಲ ನಿರ್ಘೃಣವಾಗಿ ಕೈಬಿಟ್ಟ ಕಾಲದಲ್ಲಿ ಎಲ್ಲಿನದೊ ಒಂದು ಪ್ರೀತಿ, ಧೈರ್ಯ ಕಂಡಾಗ ನನಗೆ ಮಾನವನ ಬದುಕು ಸಾರ್ಥಕವಾದಂತೆ ಕಾಣುತ್ತದೆ. ಹಿರಿದರಲ್ಲಿ ನಂಬಿಕೆ ನಿಲ್ಲುತ್ತದೆ. ಹತ್ತು ಯುಗಗಳ ಕಷ್ಟವನ್ನು ದಾಟಬಲ್ಲೆನೆಂಬ ದೃಢ, ಸ್ಫೂರ್ತಿ ಬರುತ್ತವೆ. ರಾಜ್ಯ ಸಾಮ್ರಾಜ್ಯಗಳ ದರ್ಪವನ್ನು ಪ್ರತಿಭಟಿಸಬಲ್ಲೆನೆಂಬ ನಿಶ್ಚಯ, ಸಾಹಸ ಉಂಟಾಗುತ್ತವೆ. ಈ ನಂಬಿಕೆ ನನಗೆ ಸಾಕು.

# ಶಿಸ್ತು

ಯಾವ ಪಾಳಿಯದ ಪಾಳಿಯನ್ನೂ ಕುರಿತು ನಾನು ಮಾತನಾಡತೊಡಗಿಲ್ಲ. ಇದು ಬೇರೆ ಶಿಸ್ತು. ಏನು, ಶಿಸ್ತಾಗಿ ನಿಂತುಬಿಟ್ಟಳು ಇವೊತ್ತು, ಇಷ್ಟು ಹೊತ್ತಿಗೇ, ಎಲ್ಲಿಗೋ ಸವಾರಿ, ಕಾಣೆ ; ಗಂಡ ಬರುವುದಕ್ಕೆ ಇನ್ನೂ ಬೇಕಾದಷ್ಟು ಹೊತ್ತಿರಬೇಕಲ್ಲವೆ ಎಂದು ಒಳಗೆ ಗೊಣಗುವುದು ಕೇಳಿಸಿತು. ಶಿಸ್ತಿಗೆ ಅಲಂಕಾರ, ಸಜ್ಜು ಎಂಬ ಅರ್ಥವೂ ಇದೆ ಎಂದು ನನಗೆ ಅವರೆಗೂ ತಿಳಿದಿರಲಿಲ್ಲ. ಸಿಂಗಾರವೆಂದರೂ ಅದೇ ಮಟ್ಟದ ಅರ್ಥ ಕೊಡುವ ಮಾತು. ಒಂದೊಂದಕ್ಕೆ ಅಲ್ಪ ಸ್ವಲ್ಪ ವ್ಯತ್ಯಾಸವಿದೆಯೊ ಇಲ್ಲವೊ. ಶಿಸ್ತು! ಶಿಸ್ತನ್ನು ಪಾಲಿಸಬೇಕು. ಶಿವಪ್ಪನಾಯಕನ ಶಿಸ್ತು-ಮುಂತಾದವೆಲ್ಲ ನಿರ್ಬಂಧಗಳ ಪ್ರಪಂಚವೆಂದುಕೊಂಡಿದ್ದೆ ಬಹುಕಾಲ. ಮೊದಲ ಸಲ ಅಂದು 'ಶಿಸ್ತಾಗಿ ನಿಂತಳು' ಎಂಬುದು ಕೇಳಿಸಿದಾಗ ಹೊಸ ಭಾವ, ಅರ್ಥ ಹೊಳೆಯಿತು. ಶಿಸ್ತುಗಾರ, ಸೊಗಸುಗಾರ, ಅಯ್ಯಗಾರ ಎಂಬ ಮಾತುಗಳು ಸಮಾನವಾಚಕಗಳಾಗಿ ಬಳಕೆಯಾಗುವುದು ಮೋಜೆನಿಸಿತು. ನೀವು ಯಾರು ಕೇಳುವುದಕ್ಕೆ ? ಜನ ಮಾತನ್ನು ತಮ್ಮರ್ಥಕ್ಕೆ ಬಳಸುತ್ತಾರೆ. ಅವಕ್ಕೆ ಹಾಗೆಯೇ ಜೀವಂತಿಕೆ, ರಂಗು ಕುದುರುವುದು, ರೆಕ್ಕೆ ಬರುವುದು, ವ್ಯಾಪನೆ ಹೆಚ್ಚುವುದು, ಎಲ್ಲಿಂದ ಎಲ್ಲಿಗೊ ಅದರ ವಿಲಾಸ ಸಂಚಾರ ಮಾಡುವುದು, ಇನ್ನೆಲ್ಲಿಗೊ ಹಾವ ಹಾಯಿಸುವುದು...ಸಾಮಾನ್ಯವಾಗಿ ಶಿಸ್ತು ಅಷ್ಟೇನೂ ಪ್ರಿಯವಾದ, ಹುಮ್ಮಸ್ಸು ತರುವ ಮಾತಲ್ಲ. ಯುದ್ಧವಿದ್ಯೆಗೆ, ಸೈನಿಕ ನಡತೆಗೆ, ಕವಾಯತಿನ ಕಟ್ಟುನಿಟ್ಟಿಗೆ ಸಂಬಂಧಿಸಿದ್ದು. ಅಂಥ ಅದಕ್ಕೂ ನಮಗೂ ದೂರವೇ ಸರಿ. ಯಾರು ಶಿಸ್ತಿನಲ್ಲಿರುವವರು? ಅಶಿಸ್ತಿನಲ್ಲಿಯೇ ಸ್ವಾತಂತ್ರ್ಯ, ಧಾರಾಳ ಇರುವಾಗ ನಮ್ಮ ಜೀವಕ್ಕೆ ಶಿಸ್ತಿನ ಮಿತಿ, ನಿಯತಿ, ಹಿಡಿತ ಹೇಗೆ ಹಾಯಬಲ್ಲವು ? ಅಲ್ಲದೆ, ಆ ಅರ್ಥದ ಬೆನ್ನ ಹಿಂದೆ ದಂಡಾಧಿಕಾರವಿರುವಂತೆ ಕಾಣುವುದರಿಂದ ಶಿಸ್ತಿನ ಪ್ರಪಂಚದಿಂದ ಗಾವುದ ಹರಿದಾರಿ ದೂರವಿರಬೇಕೆಂಬುದೇ ನಮ್ಮ ಪ್ರವೃತ್ತಿ. ಆದರೆ ಈ ಗೊಣಗುಮಾತು ಕೇಳಿದಂದಿನಿಂದ ಅದರಲ್ಲಿ ಆಕರ್ಷಣೆ ಉಂಟಾಯಿತು. ವಿಶ್ವಾಸ ಹುಟ್ಟಿತು.

ಶಿಸ್ತಾದಳು ಎಂದರೆ ಸಜ್ಜೆ ? ಸಿದ್ಧತೆಯೆ ? ಯಾತಕ್ಕೆ ? ಇದರಲ್ಲಿ ಒಂದು ಕಟಕಿ ಸೇರಿರುವಂತೆಯೂ ತೋರಿತು. ಕಟಕಿ ಏಕೆ ಹುಟ್ಟಿತು ? ಶಿಸ್ತು ಮಾಡಿಕೊಂಡು ಕಾದಿರುವವರನ್ನು ಕಂಡು ವ್ಯಾಖ್ಯಾನ ಮಾಡುವವರಿಗೆ ಅಸಮಾಧಾನವೊ ಆಕ್ಷೇಪಣೆಯೊ ಅಸೂಯೆಯೊ ಇರುವಂತೆ ಕಾಣಿಸುತ್ತದೆ. ಗಂಡಸಿಗಾಗಿ ಕಾಯುವುದು ತಪ್ಪಲ್ಲ. ಚಿಕ್ಕ ವಯಸ್ಸಿನ ಹೆಣ್ಣು ಗಂಡು ಜೊತೆಯಲ್ಲಿ ಸಂತೋಷದಿಂದ ಸಂಸಾರಮಾಡಲಿ ಎಂಬ

ಉದ್ದೇಶದಿಂದಲ್ಲವೆ ಅವರಿಗೆ ಮದುವೆ ಮಾಡಿದುದು ? ಈಗೇಕೆ ಈ ಕಣ್ಣು ಬೇನೆ ? ಕಣ್ಣು ಕಾಲಿಗೆ ಅದಿಲ್ಲವೆಂದೆ ? ಬರಲಿಲ್ಲವೆಂದೆ ? ಎಷ್ಟು ವೈಭವ, ವೆಚ್ಚ, ಎಷ್ಟು ಸಮಾರಾಧನೆ, ಮೆರವಣಿಗೆ ಮದುವೆಯಲ್ಲಿ ! ಇವರ ದಾಂಪತ್ಯ ಕುದುರಿ, ಇವರ ಬದುಕು ಚೆನ್ನಾಗಬೇಕಾದರೆ ಇವರು ಒಡನೆ ಆಡಬೇಕು, ನಡೆಯಬೇಕು, ನುಡಿಯಬೇಕು; ಬೇಕಾದುದನ್ನು ಉಟ್ಟು, ತೊಟ್ಟು, ನಾಲ್ಕು ವರ್ಷ ಹಕ್ಕಿಗಳಂತೆ ಕೆಲೆಯಬೇಕು: ಬೇಕಾದಲ್ಲಿಗೆ ಹೋಗಿ ಸಂತೋಷ ಸವಿಯಬೇಕು ; ಸಂತೋಷವನ್ನು ಕೊಟ್ಟು, ಕೊಂಡು ಅದರ ನೆನಪನ್ನು ಬೆಳಸಿಕೊಂಡರಲ್ಲವೆ ಅವರ ಒಡಬಾಳು ನಾಳೆಗೆ ಹಣ್ಣಾಗುವ ಹೆಚ್ಚು ಸಂಭವ?

ಅಂತೂ ಆಕೆ ನಾಲ್ಕು ಗಂಟೆಗೆ ಶಿಸ್ತಾಗಿ ನಿಂತಿದ್ದಳು. ಎಲ್ಲಿಗೊ ಪ್ರೋಗ್ರಾಂ ನಿಶ್ಚಯವಾಗಿದ್ದಿರಬೇಕು. ಮುಖ ತೊಳೆದು, ಒಡವೆ ವಸ್ತ್ರ ಧರಿಸಿಯಾಗಿತ್ತು, ತಲೆ ಬಾಚಿ, ಹೆರಳು ಹಾಕಿ, ಕಾಲಿಗೆ ರಂಗುಚುಕ್ಕಿಯ ಅಲಂಕಾರವಿದ್ದ ಚಪ್ಪಲ್ ಹಾಕಿ, ಕೈಗಡಿಯಾರ ನೋಡಿಕೊಳ್ಳುತ್ತ ಕಿಟಕಿಯಿಂದಾಚೆಗೆ ನೋಡುವಳು ; ಕೊಟ್ಟಡಿಯ ಬಾಗಿಲಿಗೆ ಬರುವಳು. ಬಾಗಿಲಿಂದ ಗೇಟಿನ ಹತ್ತಿರಕ್ಕೆ ಒಡುವುದು ಕಷ್ಟ, ಗೇಟಿಗೆ ಹೋಗಿ ಅಲ್ಲಿಂದ ಹೊರಗೆ ನೋಡುವುದಕ್ಕೆ ಇಷ್ಟವಿದ್ದರೂ ಧೈರ್ಯವೊ ಧಾರಾಳವೊ ರೂಢಿಯೊ ಇನ್ನೂ ಇಲ್ಲವಾಗಿ ಬಹುಶಃ ಒಳಗೇ ಇದ್ದಾಳೆ. ಇದನ್ನು ಕಂಡು ಅತ್ತೆಯೊ ಅತ್ತಿಗೆಯೊ ತಕ್ಷಮರೊ ನುಡಿದಿದ್ದಾರೆ.

ಶಿಸ್ತಿಗೆ ಯಾವುದೋ ರೀತಿಯ ಖಚಿತತೆ ಇದೆಯೆಂದು ನನ್ನ ಭಾವನೆ - ನಿಷ್ಠುರವೆಂಬಷ್ಟು. ಹೋಗಲಿ. ಒಂದಕ್ಕೆ ಒಂದು ರೀತಿಯ ಶಿಸ್ತು, ಇನ್ನೊಂದಕ್ಕೆ ಇನ್ನೊಂದು. ಊಟಕ್ಕೆ ಹೋದ ಹಾಗೆ ಬೇಟೆಗೆ ಹೋಗಲಾಗದು. ಇವರೆಡಕ್ಕೂ ಶಿಸ್ತಾದಂತೆ ಸಿನೆಮಾಕ್ಕೂ ಪ್ರಯಾಣಕ್ಕೂ ಸಿದ್ಧವಾಗುವುದಿಲ್ಲ, ಗಂಡನ ಜೊತೆಯಲ್ಲಿ ಹೋಗುವಾಗಿನ ಶಿಸ್ತು ಇತರರೊಡನೆ ಹೋಗಬೇಕಾದಾಗ ಆಗುವುದಿಲ್ಲ, ಯಾವುದೂ ಔಚಿತ್ಯ ಅಲ್ಲಲ್ಲಿಗೆ ತಕ್ಕ ಹಾಗೆ ನೆಲಸುತ್ತದೆ. ಜೊತೆಗೆ ಇನ್ನೊಂದು ಸಂಗತಿ ನಿಮಗೆ ಈವರೆಗಾಗಲೆ ಹೊಳೆದಿರಬೇಕಲ್ಲಾ ! ಹಿರಿಯರು, ಭಕ್ತರು, ದೊಡ್ಡ ಸಮಯ ಸಂದರ್ಭಗಳಿಗೆ, ಎಂದರೆ, ಹೆಚ್ಚು ಗೌರವಾದಿಗಳನ್ನು ಬಯಸುವ ವ್ಯಾಪಾರಗಳಿಗೆ ಈ ಬಗೆಯ ಶಿಸ್ತು ಒಪ್ಪುವುದಿಲ್ಲ, ವಿಹಾರಕ್ಕೆ, ವಿಲಾಸಕ್ಕೆ, ವಿನೋದಗಳಿಗೆ ಮಾತ್ರ ವಿಶೇಷವಾಗಿ ಒಗ್ಗುವ ಮಾತು, ನಡತೆ ಇದು.

ಎಲ್ಲ ಕಾಲದಲ್ಲಿಯೂ ಒಂದಲ್ಲ ಇನ್ನೊಂದು ಬಗೆಯಲ್ಲಿ ಇದು ನಡೆದಿದೆ. ಒಂದೆ ಸಂಸಾರಗಳು ದೊಡ್ಡವಾಗಿ ಹತ್ತಾರು ಮಂದಿ ಒಂದೇ ಮನೆಯಲ್ಲಿ ಇರಬೇಕಾಗಿದ್ದಾಗ ಇತರರ ಕಣ್ಣು ಮರೆಮಾಡಿ ಶಿಸ್ತು ಮಾಡಿಕೊಳ್ಳಬೇಕಾಗಿತ್ತು. ಮುದಿಹದ್ದುಗಳ ಕಣ್ಣು ತಪ್ಪಿಸುವ, ದುಸ್ತರವನ್ನು ದಾಟುವ ಪುಣ್ಯ ಲಕ್ಷಕ್ಕೆ ಒಬ್ಬರ ಪಾಲಿಗೆ ಬರುತ್ತಿತ್ತೊ ಇಲ್ಲವೊ. ದುಷ್ಕರ ಕಾಲ. ಹುಡುಗರಿಗೆ ಯಾವ ಬೆಡಗನ್ನೂ ಪ್ರಕಟವಾಗಿ ತೋರಿಸುವ ಅವಕಾಶ

ಹೆಚ್ಚಾಗಿರಲಿಲ್ಲ. ಎಲ್ಲರ ಎದುರಿಗೆ ಮನೆಗೆ ಬಂದ ಸೊಸೆ ಶಿಸ್ತುಮಾಡಿಕೊಳ್ಳುವುದು ಸಭ್ಯತೆಯಲ್ಲ. ಮನೆಯ ಹೆಣ್ಣು ಮಗಳು ಮಾಡಿಕೊಳ್ಳಬಹುದೇನೊ ಹೊರತು, ಮಗನ ಹೆಂಡತಿ ಹಾಗೆಲ್ಲ ಬೊಲ್ಲುಬೊಲ್ಲಾಗಿ ನಡೆಯುವುದಾಗಲಿ ಅಲಂಕಾರ ಮಾಡಿ ಕೊಳ್ಳುವುದಾಗಲಿ ಸಲ್ಲದ ಕಥೆ. ಇಂದು ರೀತಿ ನೀತಿ ಸ್ವಲ್ಪ ಬದಲಾಯಿಸಿದೆಯಾಗಿ ಕಾಲನ್ನು ಒಂದು ಹೆಜ್ಜೆ ಮುಂದಿಡುವ ಸ್ವಾತಂತ್ರ್ಯ ಎಲ್ಲರಿಗೂ ಬಂದಿರುವ ಹಾಗಿದೆ.

ಅಲ್ಲದೆ ಇಂದು ಊರುಗಳು ದೊಡ್ಡವಾಗಿವೆ. ಯಾರು ಯಾರೊ ಎಲ್ಲೆಲ್ಲಿನವರೊ ಅಕ್ಕಪಕ್ಕದ ಮನೆಗಳಿಗೆ ಬರುತ್ತಾರೆ. ಬಾಡಿಗೆಗೆ, ಒಡೆತನಕ್ಕೆ, ಭೇಟಿಗೆ. ಅವರ ಮಾತುಕತೆ, ವೇಷ ಕಣ್ಣಿಗೆ ಹೊಡೆಯುತ್ತಿರುತ್ತವೆ. ಬೀದಿಯಲ್ಲಿ ನೂರಾರು ಬಗೆಯ ಶೃಂಗಾರ ಸಾಗುತ್ತಿರುತ್ತದೆ. ಕೈಗೆತ್ತಿಕೊಂಡ ವೃತ್ತ ಪತ್ರಿಕೆಯಲ್ಲಿ ಎಷ್ಟು ಬಗೆಯ ಅಲಂಕರಣದ ಚಿತ್ರಗಳು, ಸುದ್ದಿ ! ಬಟ್ಟೆ, ಉಡುಗೆ, ಕಂಚುಕ, ಮೆಟ್ಟು, ಪೌಡರು, ತೈಲ, ಕ್ರೀಂ, ಒಡವೆ, ಕೈಸಂಚಿ, ಬೀಸಣಿಗೆ- ಎಲ್ಲ ಹೆಣ್ಣು ಸಿಂಗಾರಗಳೂ ಕಣ್ಣನ್ನು ಮೋಹಿಸುತ್ತವೆ. ಎಷ್ಟು ಪದರ, ನಿರಿ, ಚುಂಗು ಬಟ್ಟೆಯಲ್ಲಿ ; ಎಷ್ಟು ನಯ ನೆಯ್ಗೆಯಲ್ಲಿ ; ಎಷ್ಟು ಮೈಗುಣ, ನಿಲವು ನಡೆ ಒಯ್ಯಾರಗಳಿಗೆ ತೊನೆದು ಮೇಟಿಯಾಗುವ ಚಿತ್ರಗಳು ಒದಗಣೆಗೆ! ಚಿತ್ರ ಮಂದಿರಗಳಿಗೆ ಹೋದೆವು : ಅಲ್ಲಿ ಕಣ್ಣು ಕೋರೈಸುವ ಇನ್ನೆಷ್ಟೊ ಬಣ್ಣ, ಬೆಡಗು. ಇವುಗಳಿಂದ ಚಿಕ್ಕವಯಸ್ಸಿನ ಮನಸ್ಸು ಮೋಹಗೊಳ್ಳದೆಂದರೆ ನಂಬಲಾಗದ ಮಾತು ! ಕೂಡದೆಂಬುದು ಹಸಿಯ ಅನಾರ್ಯವೃತ್ತಿ. ಇವುಗಳ ಪರಿಣಾಮ : ಎಲ್ಲ ಚಿಕ್ಕವರನ್ನೂ ತನ್ನತ್ತ ಸೆಳೆಯುತ್ತದೆ. ಅವನ್ನು ಪಡೆಯುವ, ಮೆರೆಯುವ ಶಕ್ತಿ, ಹಣ, ಅನುಕೂಲ ಇದ್ದಾಗ ಇನ್ನು ಕೇಳುವುದೇನು?

ಸ್ವಲ್ಪ ಹೊತ್ತಿನಲ್ಲಿಯೇ ಈಕೆ ಏಕೆ ಶಿಸ್ತಾಗಿದ್ದಳೆಂಬುದು ಗೊತ್ತಾಯಿತು. ಆರು ಗಂಟೆಗೆ ಮನೆಗೆ ಬರುವ ಗಂಡ ನಾಲ್ಕಕ್ಕೇ ಏಕೆ ಬಂದಾನು ? ಅಂದು ರಜಾ ದಿನವಲ್ಲ, ವಿಶೇಷವಿಲ್ಲ. ಆಚೆಬೀದಿಯ ಬಂಗಾರಮ್ಮನವರು ಬಂದಿಳಿದವರು ಕಾರಲ್ಲಿ. ಮೇಲ್ತರದ ಫಿಯೆಟ್ ಕಾರು ! ಅಡ್ಡ ರಸ್ತೆಯ ಚೌಕದ ಹತ್ತಿರ ಕಾರು ತಿರುಗುವ ಹೊತ್ತಿಗೆ ಇಲ್ಲಿ ಕಿವಿ ನೆಟ್ಟಗಾಯಿತು. ಅವರದೇ ಕಾರೆಂಬುದು ಈಕೆಗೆ ಗೊತ್ತು. ಅದರ ತೂಕ, ಗಾಂಭೀರ್ಯ, ಬೀಸು, ತಿರುವು, ಕೂಗು ಹೀಗೇ ಎಂಬುದನ್ನು ಬಲ್ಲಳು. ದೂರದ ಅಡಿಗೆಯ ಮನೆಯಲ್ಲಿ ಇದ್ದು ಕೂಡ ಅದರ ಗುರುತು ಸಿಕ್ಕುವಷ್ಟು ಪರಿಚಯ ಅವರದು. ಪಂದ್ಯ ಹಾಕಿ ಗೆಲ್ಲಬಲ್ಲಷ್ಟು ನಿಶ್ಚಯ. ಹಾರನ್ ಮಾಡಿ, ಕೂಡಲೆ ಡ್ರೈವರ್ ರಾಜು ಇಳಿದು ಬಂದು 'ಅಮ್ಮಾ ಲಲಿತಮ್ಮಾವರೆ' ಎಂದ. 'ಬಂದೇ ಅಪ್ಪಾ' ಎಂದವಳೇ ಲಲಿತ ನಡುಮನೆಯ ಒಳಕ್ಕೆ ಹೋಗಿ ಅತ್ತೆಯವರಿಗೆ ಮೆಲ್ಲಗೆ ಹೇಳಿದಳು-ಬಂಗಾರಮ್ಮ ಬಂದಿದ್ದಾರೆ, ಸ್ವಲ್ಪ ಹೋಗಿ ಬರುತ್ತೇನೆ ಎಂದು. ಒಳಗೆ ಬನ್ನಿ ಎನ್ನಬಾರದೆ ? -ಎಂದರು ಅತ್ತೆ. ಲಲಿತ ಕಾರಿನ ಬಾಗಿಲ ಬಳಿ ಹೋಗಿ ಅವರನ್ನು ಒಳಕ್ಕೆ ಕರೆದಳು. ಆಕೆಗೆ ಸಮಯ ಇರಲಿಲ್ಲವಾದರೂ ವೈಭವದ ಒಂದು ಸಾರಳ್ಯದಿಂದ ಇಳಿದು ಬಂದು

ಲಲಿತೆಯ ಅತ್ತೆಮ್ಮನವರನ್ನು ಮಾತನಾಡಿಸಿದರು ! ಲಲಿತೆಗೆ ಪ್ರಿಯವಾಗಲೆಂದು : ಕೆಡುಕಾಗದಿರಲಿ ಎಂದು. ಸ್ವಲ್ಪ ಮುಂಚೆ ಬರುವುದಕ್ಕಾಗಿದ್ದಿದ್ದರೆ, ಕಾಫೀಗೆ ನಿಲ್ಲಬಹುದಾಗಿತ್ತೆಂದರು. ನಮ್ಮ ಕ್ಲಬ್ಬಿನಲ್ಲಿ ಇವೊತ್ತು ವರ್ಷೋತ್ಸವ, ಲಲಿತಮ್ಮನ್ನ ಕರಕೊಂಡು ಹೋಗಿಬರುತ್ತೇನೆಂದು ಅತ್ತೆಯವರಿಗೆ ತಿಳಿಸಿದರು. ಕುಂಕುಮ ತೆಗೆದುಕೊಂಡು ಹೊರಟರು. ಮೇಲಂಗಿಯನ್ನು ಹಾಕಿಕೊ ಲಲಿತ, ಸಂಜೆ ಹಿಮ ಬಿದ್ದೀತು ಎಂದು ಅತ್ತೆ ಸೊಸೆಗೂ ಹೇಳಿದರು. ಬೇಡಿ ಅತ್ತೆ, ಬೇಗ ಬಂದು ಬಿಡುತ್ತೇನೆ ಎಂದು ಹೇಳಿ ಲಲಿತ ಹೊರಟಳು.

ಇತ್ತ ಬಂಗಾರಮ್ಮನವರ ಶಿಸ್ತು ನೋಡುವಂತಿತ್ತು. ಅದಕ್ಕೇ ಬಂದುದು. ಹೆಚ್ಚಲ್ಲದಿದ್ದರೂ ಕಿರುಬೆರಳಷ್ಟು ಕಲಾಪತ್ತಿನ ಎಳಹಸಿರು ಸೀರೆ, ಆ ಸೀಸನ್ನಿಗೆ ಫ್ಯಾಷನ್ ಬಣ್ಣ ಅದು. ಬೂದುಪಾರಿವಾಳ ಬಣ್ಣದ ಬದಲಿ ರೇಷ್ಮೆಯ, ಕೆಂಪು ಸರಿಗೆ ಅಂಚಿನ ಕಂಚುಕ. ಕಂಡೂ ಕಾಣದ ಹಾಗೆ ತುಟಿಗೆ ಹಚ್ಚಿದ ಸ್ಟಿಕ್, ಕೆನ್ನೆಗೆ ಹಗುರಾಗಿ ಹಾಯಿಸಿದ ರೂಜ್. ನಾಲ್ಕು ಕಿರು ಮುಂಗುರಲು ಒಪ್ಪವಾಗಿ ಬಾಚಿದ ತಲೆಗೂದಲಿಂದ ತೂಗಿ ಆಡುವಂತೆ, ಕೆನ್ನೆಯಿಂದ ಇಳಿವಂತೆ ಮಾಡಿಕೊಂಡ ಕೇಶ ಶೃಂಗಾರ. ಮುಂಗೈಯ ಚಿನ್ನದ ಗಡಿಯಾರವನ್ನು ಜಳಪಿಸುವ ಒಂದು ಬಿನ್ನಾಣಬುಟ್ಟಿ. ಕಾಲಿಗೆ ಸ್ಯಾಟಿನ್ ಸ್ಲಿಪ್ಪರ್- ನುಣುಪಾಗಿ ಪಾಲಿಷ್ ಅದ್ದು. ಆ ಕಾಲಿಗೆ ಆ ಸ್ಲಿಪ್ಪರ್, ಕಾರಿಗೆ ಆ ಕಾಲು-ದೇವರಿಂದ, ಮಾನವರಿಂದ ನಿರ್ಮಾಣವಾದವು. ಸಾದಾ ಕಾಲಿಗೆ, ಸಾದಾ ಸ್ಲಿಪ್ಪರಿಗೆ ಕಾರೇಕೆ ? ಈ ಶಿಸ್ತು ಲಲಿತಳಿಗೆ ಮೇಲ್ಪಟ್ಟ ಶ್ರೀಮಂತಿಕೆಯದು. ಕಿವಿಗೆ ಪೂನಾ ಮಾಟದ ಏಳುಮುತ್ತಿನ ಓಲೆ. ಮೂಗಿಗೆ ವಜ್ರದ ಮೂಗುತಿ ; ಮುಂಗೈಯಲ್ಲಿ ಕೆಂಪಿನ ಬಳೆ ; ಕೊರಳಲ್ಲಿ ಎರಡೊ ಮೂರೊ ಕೊಂಡಿ ಎಳೆಗಳ ಚಿನ್ನದ ಸರ. ಅವರಿಗೇನು ಕಮ್ಮಿ? ಅಪ್ಪನ ಕಡೆ, ಗಂಡನ ಕಡೆ ಹೂಳುವಷ್ಟು ಆಸ್ತಿ. ಗಂಡನಿಗೆ ದೊಡ್ಡ ಸಂಬಳ ಬೇರೆ. ಆಳು, ಕಾಳು, ಕಾರು. ನೆಲದ ಮೇಲೆ ನಡೆಯುವುದೇ ಅನಗತ್ಯ, ತಲೆಯ ಮೇಲೂ ನಡೆಯಬಲ್ಲರೇ. ಲಲಿತಮ್ಮನ ಸಂಗದಲ್ಲಲ್ಲವೇನೋ. ಅಂಥವರು ಬಂದದ್ದರಿಂದ ಲಲಿತೆಯ ಅತ್ತೆಗೆ ಅಭಿಮಾನ ಉಂಟಾಯಿತು. ಸೊಸೆಯ ಶಿಸ್ತನ್ನು ಕಂಡು ಕೆರಳುವುದಕ್ಕಾಗುತ್ತದೆಯೆ ? ಮಗನಿಗೆ ದೊಡ್ಡ ಕಡೆಯಿಂದ ಹೆಣ್ಣು ತಂದಾಗಿದೆ. ಅವಳ ತೌರುಮನೆಗೆ ಆ ಆಚಾರವೆಲ್ಲ ಬಂದದ್ದು. ನಮ್ಮ ಮನೆಯಲ್ಲಿ ಏಕೆ ಅವನ್ನೆಲ್ಲ ಬಿಡಬೇಕು ಅವಳು? ಮಲ್ಲಿಗೆಯನ್ನು ಬಾಡಿಸಿದರು ಇವರು ಎಂದು ಲೋಕ ತನ್ನನ್ನೇಕೆ ಆಕ್ಷೇಪಿಸಬೇಕು ಎಂದು ಸೊಸೆಯ ಶಿಸ್ತನ್ನು ಒಪ್ಪಬೇಕಾಗಿ ಬಂದದ್ದು.

ಇದು ಹೆಣ್ಣ ಶಿಸ್ತಾದರೆ ಗಂಡಿನ ಶಿಸ್ತುಗಾರಿಕೆಯೂ ಪ್ರಸಂಗಗಳಿಗೆ ತಕ್ಕಂತೆ ಬೇರ್ಪಡುತ್ತದೆ. ಹೆಂಗಸಿನ ಶಿಸ್ತಿಗೆ ಟ್ರಿಂ ಎನ್ನುವುದಿಲ್ಲ. ಟ್ರಿಂ ಆಗಿದ್ದಾನೆ, ಗೌರಮ್ಮನ ಹಾಗಿದ್ದಾನೆ, ಅವನು ಕಾಮಣ್ಣ ಕಣೊ—ಇವು ಗಂಡುಗಾಡಿಯ ಪ್ರಕಾರಗಳಲ್ಲಿನ ಮೃದು ಸೊಬಗು. ಅವನು ಯಮ, ಕಗ್ಗಲಿ ಕೊಂಟು, ರಾಕ್ಷಸ ಮುಂತಾದ ಮಹಾನಾಮತೆಗಳ

ಕರ್ಕಶತೆಯ ವರ್ಣನೆಗಳಿಗೆ ಆಚೆಯ ಕಡೆಯದು. ಈ ಪ್ರಪಂಚ ಬೇರೆ. ವಯಸ್ಸಾದ ನಮ್ಮಂಥವರ ಕಿವಿಗೆ ಬೀಳುತ್ತಿದ್ದ ಮಾತನ್ನು ನಾವು ಆಡುವುದು. ಈಗ ಹುಡುಗರ ಬಳಕೆಗಳು ಹೇಗಿವೆಯೋ. ಕಾಲೇ ಕಾಲೇ ಸಪಾಚಾರಾ. ಟ್ರಿಂ ಮುರುಗುಮುರುಗಾಗಿರುತ್ತದೆ ; ಮೈ, ವೇಷ, ನಡೆ, ನುಡಿ. ಸೌಂದರ್ಯದ ಸುಗುಣವು ಗೌರಮ್ಮನದು ; ಹೆಣ್ಣು ಶಿಸ್ತಿಗೆ ಹತ್ತಿರಹತ್ತಿರದ್ದು; ಉದಯಸ ಶೃಂಗಾರ; ಧೀರಕ್ಕಿಂತ ಲಲಿತ. ಕಾಮಣ್ಣ ಚೆಲುವನೇ ಹೌದು, ಸ್ವಲ್ಪ ಷೋಕು ಜಾಸ್ತಿ. ಕಣ್ಣಿನ ಆಟದಲ್ಲಿ ಓರೆ, ಚೇಷ್ಟೆ ಸಹಜವಾಗಿ ಇರಬಲ್ಲದು. ಅವನ ತಳುಕು, ಮಾತಿನ ಬೆಡಗು ಬೇರೆ ಜಾತಿಯವು. ಅವನು ವಶಿಯಲ್ಲ, ವಶಮಾಡಿಕೊಳ್ಳುವ ಪ್ರವೃತ್ತಿಯವನು. ಮದನವ್ಯಾಪಾರದ ಅರ್ಧ ಮದ, ಅರ್ಧ ದನದ ಸೂಚನೆ ಆ ಚಹರೆಗಳಲ್ಲಿ ಇರುತ್ತದೆ. ಟ್ರಿಮ್ಮಿನಲ್ಲಿ ಅಗಸರ ಇಸ್ತ್ರಿ ಪೆಟ್ಟಿಗೆಯ ಪ್ರಭಾವವೂ ದರ್ಜಿಯ ಕತ್ತರಿ ಹೊಲಿಗೆಗಳ ಕೈವಾಡವೂ ಜಾಣತನವೂ ವಿಶೇಷ. ಯಾವುದೂ ಮುದುರದು, ಮಾಸದು. ಕೂತರೆ ನಿಂತರೆ ಸೂಟಿನ, ಉಡುಗೆಯ ಹಸನು ಕೆಟ್ಟೀತೆಂಬ ಮೈ ಕೈ ಒಲೆತದ ಮತ್ತು ಮಾತಿನ ಬಿಗಿ ಗಂಡುಶಿಸ್ತಿನ ಹತ್ತಿರ ಹತ್ತಿರ ಬರುತ್ತವೆ.

ಇನ್ನೊಂದು ಶಿಸ್ತು ಆಟಗಾರರದು. ಕ್ರಿಕೆಟ್ ಟೆನ್ನಿಸ್ ಶಿಸ್ತು ಇವುಗಳಲ್ಲಿ ಬೆಡಗಿನವು. ಬೆಡಗೇನು? ವಿಶಿಷ್ಟ. ಈಗ ಈ ಒಯ್ಯಾರ ಅಷ್ಟಿಲ್ಲವಾದರೂ ಒಂದೆ ಅದಕ್ಕೆ ಓರಿಯ ವಿಲಾಸವಿತ್ತು. ಸಿಲ್ಕಿನದೊ ಇಂಗ್ಲಿಷ್ ಟ್ವಿಲ್ಲಿನದೊ ಷರಟು, ಟೆನ್ನಿಸ್ ಫ್ಲಾನಲ್ ಷರಾಯಿ ಬೇಕು. ಕಡಮೆಯಾದರೆ ಆಟದ ಮರ್ಯಾದೆಗೆ ಒಗ್ಗುತ್ತಿರಲಿಲ್ಲ ಒಂದು ಕಾಲದಲ್ಲಿ. ದಟ್ಟಿ, ರೇಷ್ಮೆಯ ನಡುಕಟ್ಟು ಉಟ್ಟು–ಕುಡುಮಿ ಇತ್ತೊ ಇಲ್ಲವೊ ನೆನಪಿಲ್ಲ– ಚಾಂಪಿಯನ್‌ಷಿಪ್ ಪಡೆದ ಆಟಗಾರರಿರುತ್ತಿದ್ದರಾದರೂ ಈ ನಾಡುಡೆ ಬಹುಕಾಲ ಬಾಳಲಿಲ್ಲ. ಇಂದು ಷಾರ್ಟಿನ ಸಜ್ಜು ಹಳೆಯ ಕಣ್ಣಿಗೆ ವಿಕಾರವೆನಿಸಿದರೂ ಯಾವ ಯಾವದೊ ಸಾಮಗ್ರಿಯಿಂದಾದ ಬೆಲ್ಟುಗಳೊ ಬಕುಲಗಳೊ ಇದ್ದೇ ತೀರಬೇಕು. ಎಂದಿಗೂ ಅದಕ್ಕೆ ಸ್ಪೆಷಲ್ ಬಿಳಿಯ ಬಟ್ಟೆ ಸಲ್ಲುತ್ತದೆ. ಕ್ರೀಂ, ಸ್ನೋ ಸಂಸ್ಕಾರ, ತಲೆಗೆ ಕ್ರಾಪು ಅಗತ್ಯ. ಸ್ಟೈಕಲ್ ಕಚ್ಚೆ ಕಟ್ಟಿ, ಆಟವೊಂದಕ್ಕೆ ಐನೂರು ರಿಟರ್ನ್ ಹಾಕಿ ಎದುರಾಳಿಗೆ ಹೇಸಿಗೆ ಉಂಟುಮಾಡಿ ಗೆಲ್ಲುತ್ತಿದ್ದ ರೋಸು ಆಟಗಾರಿಕೆ ಮೆಚ್ಚಿನದೇನಲ್ಲ. ಆಟದಲ್ಲಿ ಗೆಲವು ಸೋಲಲ್ಲ ಮುಖ್ಯ. ಆಟದ ನಯ, ಶೃಂಗಾರ, ವಿತರಣೆ, ಚಳಕ, ಪಳಗು, ಬಗೆಬಗೆಯ ಜಾಣೆನ ಪ್ರಕಾಶ ಮುಖ್ಯ. ಟೆನ್ನಿಸಿನ ಟ್ರಿಂಗೂ ಜಿಗಣೆ ಆಟಕ್ಕೂ ಬಹುದೂರ.

ಕ್ರಿಕೆಟ್ಟಿನ ಟ್ರಿಂ ಬೇರೆ. ಇಲ್ಲಿ ಯಾರೊಬ್ಬರಿಗೂ ಪ್ರಾಶಸ್ತ್ಯ ಕಡಮೆ. ಟೀಮು ಟೀಮಿನದೇ ಒಟ್ಟು ಚಂದ. ವ್ಯಕ್ತಿಯ ವ್ಯಾಪಾರ ಟೀಮಿನ ಶಿಸ್ತಿಗೆ ಒಳಪಟ್ಟು ತೂಗುವ ಅಂಗ. ಅದಕ್ಕೂ ಫ್ಲಾನಲ್ ಪ್ಯಾಂಟ್ಸೇ ವಿಧಿಸಿದ್ದರೂ ಒಳ್ಳೆಯ ಗಟ್ಟಿ ಮುರುಗಿನ ಬಿಳಿ ಬಟ್ಟೆ ಸಾಕು. ಫ್ಲಾನಲ್ ಶ್ರೀಮಂತಿಕೆಯ ಪರಿಜು. ಇಂದಿಗೂ ನನ್ನ ಸ್ನೇಹಿತರೊಬ್ಬರ ನಿಲವು ಕೊಟ್ಟಿಗೆ ಕಾಮಣ್ಣನದು ಕಣ್ಣಿಗೆ ಕಟ್ಟಿದಂತೆ ಕಾಣುತ್ತದೆ. ಹದಿನೆಂಟಕ್ಕೇ

ಅರುವತ್ತೆಂಟು ಎಪ್ಪತ್ತು ಅಂಗುಲ ಎತ್ತರದ ಆಳು ; ಮೈಯಲ್ಲಿ ಹುಸಿ ಅಥವಾ ಸಡಿಲ ಮಾಂಸಖಂಡ ಇಲ್ಲ. ತೆಳು ತೋರ ಅಲ್ಲ; ತುಂಬುಮುಖ, ಬಂಗಾರದ ಸರಪಳಿ ಇಳಿಬಿದ್ದ, ಕಟ್ಟಿಲ್ಲದ ಕನ್ನಡಕ. ಮೊಳಕಾಲ ಎತ್ತರಕ್ಕೆ ತ್ರಾಣಗಳನ್ನು ಕಟ್ಟಿ, ಅವುಗಳ ಕಿವಿ ಅಲ್ಲಾಡುತ್ತಿರಲು ವಿಕೆಟಿನ ಹಿಂದೆ ನಿಂತು ಅವರು ಬೌಲರ್ ಬ್ಯಾಟರುಗಳನ್ನು ನಿರೀಕ್ಷಿಸುವ ತಂತ್ರವೂ ಕಟ್ಟೆಚ್ಚರಿಕೆಯೂ ಬೆಡಗಿನವು. ನಾವಂತೂ ಆಟ ನೋಡುವುದಕ್ಕಿಂತ ಹೆಚ್ಚಾಗಿ ಇಂತಹ ಆಟಗಾರರ ಶಿಸ್ತು ನೋಡಲು ಹೋಗುತ್ತಿದ್ದದ್ದು. ದೂರದಲ್ಲಿ ನಿಂತು ನೋಡುವವರಿಗೆ ಕ್ರಿಕೆಟ್ ಆಟದ ಸೂಕ್ಷ್ಮಗಳನ್ನು ಕಾಣುವುದಕ್ಕಿಂತ ಆಟದ ಆವಟವೇ ಹೆಚ್ಚು ಮೋಹಕ ; ಕಣ್ಣು ಕುಕ್ಕು.

ಎಷ್ಟೇ ಸಜ್ಜು ಚೆನ್ನಾಗಲಿ ಕ್ರಿಕೆಟ್ ಶಿಸ್ತು ಅಪ್ಪಟ ಪರದೇಶಿ. ಆಗಾಗ ಅದರಲ್ಲಿ ಕೆಲವರು ಇಂದು ಹಾಕುವ ಹಸುರು ಬಣ್ಣದ ಕೋತಿ ಕುಲಾವಿ, ವುಲ್ಲನ್ ಸಮವಸ್ತ್ರ-ಟೀಮಿನ ಅಂಕಿತವುಳ್ಳದ್ದು-ಬ್ಯಾಟು, ಗಾರ್ಡು, ಕೈಚೀಲ, ಅಂಗುಲಿತ್ರಾಣ, ಸಾಮಾನಿಡುವ ಬ್ಯಾಗುಗಳು. ಆಟದ ವಿತರಣೆ ಒಳ್ಳೆ ಮಟಮಟ ಮಧ್ಯಾಹ್ನದ ಉರಿ ಬಿಸಿಲಲ್ಲಿ–ಇಂಗ್ಲಂಡಲ್ಲಿ ಆ ಗಂಟೆಗಳಲ್ಲಿ ಆಡುವುದು ಸಹಜವಾದರೆ ಇಂಡಿಯದಲ್ಲೇಕೆ ಹಾಗಾಡಬೇಕೊ ಭಗವಂತನಿಗೇ ಗೊತ್ತು ! ಬೆಳ್ಳಂಬೆಳಗು–ನಾಲ್ಕು ದಿನ ಆಡಿ ನಲವತ್ತು ರನ್ ಮಾಡುವ, ಎದುರು ಟೀವಿಗೆ ಕೊಡುವ ಆಟದ ಸಾವಧಾನ ಹಲವೇಳೆ ಬೇಜಾರು ಹಿಡಿಸುತ್ತದೆ. ಆದರೂ ಆಟಗಾರರು ಬಯಲಲ್ಲಿ ಚೆದರಿ, ಒತ್ತಿ, ಹೊಂದಿ ನಿಲ್ಲುವ ಹದ, ಸಂಚಾರ, ಫೀಲ್ಡಿಂಗ್, ಬೇಟೆಯ ಹುಲಿಯಂತೆ ಕಾಯುವುದು – ಅಥವಾ ಚಿರತೆಗಾವಲು ಎನ್ನಲೆ? – ಆಟಕ್ಕಿಂತ ಹೆಚ್ಚಾಗಿ ಹತ್ತಿರ, ದೂರ, ಅಂತರ ಬಿಟ್ಟು ಮುತ್ತಿಗೆ ಕಟ್ಟಿ ನಿಲ್ಲುವುದು, ಈ ಕಡೆಗೆ ಆರಾರು ಚೆಂಡಿನ ಎಸೆತಕ್ಕೂ ಬಯಲ ಪಕ್ಕ ಬದಲಾಯಿಸುವುದು, ಬೌಲರುಗಳ ವಿಚಿತ್ರ ವಿಚಿತ್ರ ವೇಗವಿಕಾರಗಳು, ದೂರದ ಫೀಲ್ಡರಿನ ದಿಕ್ಕೆಟ್ಟ ಭ್ರಷ್ಟನಿರೀಕ್ಷೆ – ಈ ಆವರಣ ಸುತರಾಂ ನಮ್ಮವಲ್ಲ. ನಮಗೆ ತಾಳ್ಮೆಯ-ಅವಧಾನ ಎಲ್ಲಿ ಬರಬೇಕು? ಅದು ಯುದ್ಧಗಳ ತರಬೇತಿ ಕೂಡ. ಟೆನ್ನಿಸ್ ಆಟ ಚುರುಕಿನದು. ಗಂಟೆಗೆ ಮೂರಾಟ ಮುಗಿಸಿ ಗೆದ್ದು ಹೋಗಬಹುದು; – ಲೋಕವಿಖ್ಯಾತ ಕೀರ್ತಿಯನ್ನು ಪಡೆದು. ಆಡುವವರು ಹೇಗೇ ಆಡಲಿ ನೋಡುವವರಿಗೆ ಬಿಡುವಿಲ್ಲ; ದಣಿವಿರುವುದಿಲ್ಲ. ಶುಭ್ರವಾದ ಚೆಂಡು ಹಾಗೆ ಹೀಗೆ ಹಾರುವಾಗ, ತಿರುಗುವಾಗ, ಜಾರುವಾಗ, ಬಲೆಯನ್ನುಜ್ಜಿ ಆಚೆಗೆ ಸತ್ತಂತೆ ಪುಟವೇಳದೆ ಬಿದ್ದಾಗ ಅದನ್ನು ನೋಡುವ ನೋಟವನ್ನೊ ಕೊರಲು ಕೀಲುಗೊಂಬೆಗಳಂತೆ ಎಡಬಲ ತಮ್ಮಷ್ಟಕ್ಕೆ ತಾವು ತಿರುಗುತ್ತಿರುವುದನ್ನೊ ನೋಡಿದರೆ ಕೀಲುಗೊಂಬೆಗಳಿಗೇ ನಗುಬಂದೀತು. ಟೆನ್ನಿಸ್ ಆಟಗಾರರು ಮುಖವೊರೆಸುವ, ನೀರೊ ಸೋಡಾನೊ ಕುಡಿವ, ಮುಕ್ಕುಳಿಸಿ ಉಗಿವ ವೈಖರಿ ಆ ಆಟಕ್ಕೆ ವಿಶೇಷ. ಅವರು ಬೀದಿಯಲ್ಲಿ ತಿರುಗುವ ರೀತಿಯೂ ಅವರದೇ ಬಗೆಯದು. ಒಂದು ಸ್ಕೂಟರನ್ನೊ ಬೈಸಿಕಲ್ಲನ್ನೊ ಕೈಗೆ ಆಪಾಗಿ ಹಿಡಿದು ನಡಸುತ್ತ ಅದರ ಮೇಲೊ ಕಂಕುಳಲ್ಲೊ ಬ್ಯಾಟು ಇಟ್ಟುಕೊಂಡು – ಬಹು ಚೆಲುವಿನ ಕೈದು

ಅದು, ಆ ಮಾಟ, ಚೌಕಟ್ಟು, ಬಲೆ, ಹಿಡಿ – ಭುಜದ ಮೇಲೊ ಬೈಸಿಕಲ್ ಹ್ಯಾಂಡಲ್ ಮೇಲೊ ಹಗುರವಾಗಿ ಎಸೆದ ವುಲ್ಲನ್ ಕೊರಲ ವಸ್ತ್ರ ಅಥವಾ ಬೀದಿಯಲ್ಲಿ ಕೈಬೀಸಿ ನಡೆವಾಗ ಆಗೊಂದು ಸಲ ಈಗೊಂದು ಸಲ ಬ್ಯಾಟನ್ನು ನೀಟಾಗಿ ತಳಕಿನಲ್ಲಿ ಬೀಸಿ ಹಿಡಿ ಸರಿನೋಡಿಕೊಳ್ಳುವ ಬಿನ್ನಾಣ – ಯಾರಿಗುಂಟು ಯಾರಿಗಿಲ್ಲ ! ಕೈಯಲ್ಲಿ ಗೋಲ್ಡ್ ಫ್ಲೇಕೊ ಸ್ಟೇಟ್ ಎಕ್ಸ್‌ಪ್ರೆಸ್ಸೊ ಸಿಗರೇಟ್ ಹೊಗೆಯಾಡಿಸುತ್ತ ಆಗಾಗ್ಗೆ ಹೊಗೆಯುಂಗುರಗಳನ್ನೂ ಹಗುರವಾಗಿ ಹಗುರವಾಗಿ ನೇಯುತ್ತಿರುವ ಸೊಗಸು ಕಷ್ಟಪಟ್ಟು ಸಾಧಿಸಿದ ಸಂಸ್ಕಾರ. ಎಷ್ಟಾದರೂ ಟೆನ್ನಿಸ್ ತುಂಬಾ ನಯದ ಆಟ. ಅಲ್ಲಿನ ಶಿಸ್ತು, ಸಜ್ಜು ನಯದ ಕೆನೆ.

ಸಜ್ಜು ಎಂದು ಮಾತು ಬೆರಸಿಯೇ ಆಡುತ್ತಿದ್ದೇನೆ. ಸಜ್ಜು ಶಿಸ್ತಿನ ಹತ್ತಿರದ ಮಾತೇ ಆದರೂ ಇನ್ನಾವುದಕ್ಕೊ ಅದು ಸಿದ್ಧತೆ, ಯೋಗ್ಯತೆ, ಸಾಧನ ಎಂಬ ಸೂಚನೆಯುಳ್ಳ ಮಾತು. ಯುದ್ಧದ್ದು ಎಂಬುದನ್ನು ನೀವು ಕೇಳಿದ್ದೀರಿ. ಒಂದೊಂದು ಕಾಲದಲ್ಲಿ ಒಂದೊಂದು ರೀತಿಯದು. ಬಿಲ್ಲುಬಾಣಗಳ ಮೂಡಿಗೆ ಹೊತ್ತು ತಿರುಗುವ ವೀರರ ವರ್ಣನೆ ಕಾವ್ಯಗಳಲ್ಲಿ ಸಿಗುತ್ತದೆ. ರಾಮ ಅರ್ಜುನರ ಕೋದಂಡ, ಗಾಂಡೀವ ಇವನ್ನು ಬಿಟ್ಟು ಅವರು ನಡೆದರಾಗುತ್ತದೆಯೆ? ಅಥವಾ, ಇವರು ಇವರೇ ಎಂದು ಗುರುತಿಸುವುದು ಹೇಗೆ? ಅರ್ಜುನನಿಗೆ ಬತ್ತಲೆ ಮೈಯಿಲ್ಲದಿದ್ದರೂ ಶ್ರೀರಾಮನಿಗೆ ಅದು ತಪ್ಪಿದ್ದಲ್ಲ. ಗುರುತಿಸಬಲ್ಲ ಆ ಸಜ್ಜಿಲ್ಲದವನು ರಾಮನೊ ಭೀಮನೊ ಯಾರು ಬಲ್ಲರು ? ಭೀಮನಾದರೇನು ನಮಗೆ ಭಯ ? ನಿನ್ನ ಮೀಸೆಹೊದೆ ಎಲ್ಲಿ, ಗದೆಯೆಲ್ಲಿ ಎಂದು ಕೇಳಿ ಆಮೇಲೆ ಅವನಿಗೆ ಪ್ರವೇಶ ನಿಶ್ಚಯಿಸಬೇಕಾಗುತ್ತದೆ. ಶಿವನಿಗೇ ನಿಸ್ತಾರವಿಲ್ಲ. ವೇಷ ಪೂರ್ತಿಯಾಗದಿದ್ದರೆ ಇವನು ಶಿವನೇ ಎಂದು ಗೊತ್ತು ಮಾಡುವುದು ಹೇಗೆ ? ಜಟೆ ; ಅಲ್ಲಿಂದ ಉಕ್ಕಿ ಸುರಿವ ಗಂಗೆ; ತಲೆಯ ಮೇಲೆ–ನಿಮಗಲ್ಲ–ಅರ್ಧ ಚಂದ್ರ; ಕೈಯಲ್ಲಿ ತ್ರಿಶೂಲ; ಹಣೆಯಲ್ಲಿ ಮುಚ್ಚಿದ ಮೂರನೆಯ ಕಣ್ಣು ; ಉಟ್ಟ ಗಜ, ವ್ಯಾಘ್ರ ಯಾವುದರದೊ ಚಕ್ಕಳ; ತೋಳಲ್ಲಿ ಕುತ್ತಿಗೆಯಲ್ಲಿ ಒಂದೊ ಎರಡೊ ಆದರೂ ನಾಗರಹಾವು–ಈ ಸಲಕರಣೆಗಳಿಲ್ಲದಿದ್ದರೆ ಅವನು ಶಿವನು ಹೇಗಾದಾನು? ಅವುಗಳ ಹೊರತು ಸಾದಾ ಮನುಷ್ಯರಾದ ನಮಗೆ ದೇವರೇ ದಮ್ಮಯ್ಯ ಗುಡ್ಡೆ ಹಾಕಿ ನಾಟಕಮಂದಿರಗಳಿಗೊ ಭರತನಾಟ್ಯಕ್ಕೊ ಪ್ರದರ್ಶನಗಳಿಗೊ ಪ್ರವೇಶ ಪಡೆಯ ಬೇಕಾದೀತು. ಮಫ್ತಿಯಲ್ಲಿ ಬಂದರೆ ಅವರನ್ನು ಮಾನ್ಯ ಮಾಡುವವರ್‍ಯಾರು? ಬಾಗಿಲಲ್ಲಿ ವಾಲಂಟಿಯರು ತಡೆದುಬಿಡುತ್ತಾರೆ. ನೀಲವರ್ಣ, ಪೀತಾಂಬರದ ಉಡುಗೆ, ಹಣೆಯ ತಿಲಕ, ನವಿಲುಗರಿ ಕುಲಾವಿ, ತುಟಿದೆರೆಯ ರಕ್ತರಾಗ, ಕೈಯ ಕೊಳಲು ಇಲ್ಲವಾದರೆ ಕೃಷ್ಣಸ್ವಾಮಿಯೇ ಕಾರ್ಡು ತೋರಿಸಿ, ಅದರಲ್ಲಿ ಫೋಟೊ ಇರುವುದಾದರೆ ಮಾತ್ರ ಅಡ್ಮಿಷನ್ ಪಡೆಯಬೇಕಾಗುತ್ತದೆ. ಆ ಕಾಲದ ಹೆಣ್ಣುಗಳನ್ನು ಬೆರಗುಗೊಳಿಸಿದಂತಲ್ಲ ಇಂದು. ಮಧ್ಯಯುಗಕ್ಕೆ ಬಂದರೆ ಶಿರಸ್ತ್ರಾಣ, ಕೈಹೊಡೆ, ಪಕ್ಕದಲ್ಲಿ ತೂಗಾಡುವ ಕತ್ತಿ, ಗುರಾಣೆ, ಉಡಿಬಂಧ, ನಡುಕಟ್ಟಿನಲ್ಲಿ ಕಿಗ್ಗಟ್ಟಿನ ಕಠಾರಿ ಇಲ್ಲದ ಸಜ್ಜು ಯಾವ

ಯೋಧನನ್ನು ರೂಪಿಸೀತು. ನಮ್ಮ ಕಾಲದ ವೇಷಗಳೂ ಹಾಗೆಯೇ. ದೊಡ್ಡ ಪೆರೇಡಿನ ದಿನದಲ್ಲಿ ಮಾತ್ರ ಷರಾಯಿ ತೊಟ್ಟರೂ ಸಾಮಾನ್ಯವಾಗಿ, ಖಾಕಿ ಕಾಲುಕುಪ್ಪಸ, ಅರೆತೋಳಿನ ಬನಿಯನ್, ಕೈಯಲ್ಲಿ ಕೋವಿ-ಬೈನೀಟು ಇರುವುದು, ಇಲ್ಲದ್ದು- ಬೆಲ್ಟಿಗೆ ಸಿಕ್ಕಿಸಿದ ಆರೆಂಟು ಅಂಗುಲದ ಬಾಕು, ಒಂದೇ ಕ್ರಮದಲ್ಲಿ ವೇಗದಲ್ಲಿ ಯಂತ್ರದಂತೆ ಕಾಲಿಡುವ ನಡಗೆ, ದಿನವೂ ಕ್ಷೌರ ಮಾಡಿಕೊಳ್ಳದಿದ್ದರೆ ಮೇಜರಿಂದ ಒದೆತಿನ್ನಬೇಕಾಗುವ, ಮುಖಕ್ಕಿಂತ ಕ್ಷೌರ ಹೆಚ್ಚು ಕಾಣಿಸುವ ಅದಾವುದು ಎಂದು ಕಾಣಿಸದಿರುವ ಆಕೃತಿ ಇಂದಿನ ಸಜ್ಜು.

ಸಾಮಾನ್ಯ ಇತರ ಸಜ್ಜು ಆಯಾ ವೃತ್ತಿಗೆ ತಕ್ಕಂತಿರುತ್ತದೆ. ಗುಮಾಸ್ತ, ಹಜಾಮ, ತಿಥಿ ಮಾಡಿಸುವ ವೈದಿಕ, ತ್ರಿಮತಸ್ಥ ಬ್ರಾಹ್ಮಣ, ಹಳೆಯ ಕಾಲದ ಸಂಗೀತಗಾರ, ಇಂದಿನ ಡಾನ್ಸರ್, ವಿಮಾನಸಖಿ, ಸಿಖ್ ಸರದಾರ, ಪಠಾಣ, ಡಾಕ್ಟರು, ಬಸ್ ಕಂಡಕ್ಟರು, ಪೊಲೀಸ್ ಅಧಿಕಾರಿ, ಕಚೇರಿ ದಫೇದಾರ್ ಖಚಿತವಾದ ಸಜ್ಜುಳ್ಳ ಜನ. ನೋಡಿ ಆ ಪೆನ್ಸಿಲ್, ನೋಟುಬುಕ್ಕು, ಇವನು ಸ್ಟೆನೊ. ಹಡಪ ಹೊತ್ತಿಲ್ಲವಾದರೂ ಇವನ ಕಿಸೆಯಲ್ಲಿವೆ ಕತ್ತಿ, ಕೂರ್ಚ, ಕಲ್ಲು, ಕತ್ತರಿ, ಕೂಂ, ಸಾಬೂನು. ದಾಸರಿ ಅಪರೂಪವಾಗುತ್ತಿದ್ದಾನೆ: ಮುಖದಲ್ಲಿ ಹಳದಿ, ಬಿಳಿ ನಾಮ; ಕೈಯಲ್ಲಿ ಗರುಡಗಂಬ; ಕೊರಲಿಂದ ತೂಗಾಡುವ ಶಂಖ, ಜಾಗಟೆ, ತುತೂರಿ – ಪಂಚವಾದ್ಯಗಳಲ್ಲಿ ಮೂರು – ಉಟ್ಟ ದೊಡ್ಡ ಕಚ್ಚೆಯ ದೋತರ – ದಾಸಯ್ಯನ ರಂಗುರಂಜನೆ ವಿಶಿಷ್ಟವಾದ್ದು...... ಹತ್ತು ಬಣ್ಣದ ತೇಪೆ ಹೊಲಿದು,ಹರುಕಲು ಶಾಲು ನಿವೀತಿ ಹಾಕಿ, ಗದ್ದೆಮಡಿ ರುಮಾಲಿಗೂ ಆರೇರ ಮುಂಡಾಸಿಗೂ ನಡುವೆಯ ಒಂದು ಆಕೃತಿ ತಿದ್ದಿ, ಚಾಟಿ ಮೀಸೆಯನ್ನು ಮೇಲೊ ಕೆಳಗೊ ಹೊಸೆಯುತ್ತ, ಹಣೆಗೆ ದೊಡ್ಡ ಕುಂಕುಮ ಇಟ್ಟು, ಕೈಯಲ್ಲಿ ಡಮರು ಹಿಡಿದು 'ಜಹಾ ಜಹಾ ಜಯವಾಗುತ್ತೈತೆ' ಎಂದೊ, 'ಅಯ್ಯವಾರಿಕಿ ಬಜ್ಜ ಪೆರುಗುತುಂದಿ' ಎಂದೊ 'ಆ ಮೂಲೆ ಹಕ್ಕಿ ನುಡಿಯುತ್ತೈತೆ ಸ್ವಾಮಿ ಕಿಲಕಿಲ ಕುಟುಕುಟುಕಿಲ' ಎಂದು ಜತಿಗಳನ್ನು ಹೊಮ್ಮಿಸುತ್ತ ಅಲೌಕಿಕ ಆವರಣವನ್ನು ಕಟ್ಟುವ ಬುಡುಬುಡುಕೆಯವನೂ ಕಾಣೆಯಾಗುತ್ತಿದ್ದಾರೆ. ಸಂನ್ಯಾಸಿಯ ಕಾವಿ, ದಂಡ ; ಮಾಂತ್ರಿಕನ ಪಂಚಲೋಹದ ಬಳೆ, ಕೆಂಪುಕಣ್ಣು, ಹುಬ್ಬಿನ ನಡುವಿನ ಕುಂಕುಮ ಎಲ್ಲಿ ? ಕಡೆಗೆ, ತಿರುಪತಿ ಯಾತ್ರೆ ತಿರುಪೆಯ ಮೆರವಣಿಗೆ, ಚತ್ರಿ, ಬ್ಯಾಂಡು; ಅರಿಸಿನದ ಉಂಡೆ, ಬಾಯಿಬೀಗ ಚಿತ್ರತರವಾದವು. ನಮ್ಮ ಹಾವಾಡಿಗನ ಹೇಳಿಗೆಯ ಅಡಕಿಲು ಅಡ್ಡೆ, ವೇಷ ಲೋಕದಲ್ಲಿ ಇನ್ನೆಲ್ಲಿ ಕಂಡೀತು?....

ಇಂದು ಕಾನ್ವೊಕೇಷನ್ ಅಲ್ಲ ? ನೋಡಿ,-ಜಗನ್ಮೋಹನ ಬಂಗಲೆಯಲ್ಲೆ? ಅಲ್ಲ-ಕ್ರಾಫರ್ಡ್ ಹಾಲಿನಲ್ಲಿ ? ಗಂಡು ಹೆಣ್ಣು ಪದವೀಧರರು ಹೊಸದಾಗಿ ಗಳಿಸಿದ ತಮ್ಮ ಉಪಾಧಿ (!) ಗಳನ್ನೂ ಅಧಿಕಾರಪತ್ರಗಳನ್ನೂ ಪಡೆಯಲು ಗೌನ್, ಹುಡ್ ಧರಿಸಿ ಧಾವಿಸುತ್ತಿದ್ದಾರೆ. ನಮ್ಮ ನಾಡಿನ ಸಾಧು ಸಂನ್ಯಾಸಿಗಳ ಲಂಗವಿರಲಿಲ್ಲವೆ?

ಕುಲಾವಿಗಳಿಲ್ಲವೆ ? ಜೋಳವಿಲ್ಲದಾಗಲೂ ನಮ್ಮಲ್ಲಿ ಜೋಳಿಗೆಗೆ ಬರವೆ ? ಎಷ್ಟು ಬಗೆಯವು ಬೇಕು ? ಕ್ರೈಸ್ತಪಾದ್ರಿಗಳ ಮಧ್ಯಯುಗದ ಉಡುಪು ಇವರಿಗೆ ಸಜ್ಜಾಗಿ ಉಳಿದಿದೆ ಇನ್ನೂ : ಏನು ಬುದ್ಧಿಯ ತಿರುಪೆ ಇವರದು ?-ಆದರೆ ಏನು ಸಡಗರ, ಗಂಡು ಹೆಣ್ಣು ಶಿಸ್ತು..... ಈ ಸಜ್ಜು ಈ ವೃತ್ತಿಗೆ ಪ್ರವೇಶಕ್ಕೆ ಮೀಸಲು ; ಇದಕ್ಕೆ ಸಿದ್ಧ ಅಧಿಕಾರ, ಪ್ರವೇಶ ದೊರಕಿಸುವುದು. ಇದು ಊಟದ್ದು, ಇದು ಬೇಟೆಯದು, ಇದು ಆಸ್ಪತ್ರೆಯದು, ಇದು ಆಫೀಸಿನ ದ್ವಾರವಾನನದು, ಇದು ರೆಯಿಲ್ವೆ ಗಾರ್ಡಿನದು, ಇದು ವಾಲಂಟಿಯರದು, ಡ್ರೈವರನದು, ಕುದುರೆ ಅಂಚೆಯವನದು, ಭಿಕ್ಷುಕನದು ಎಂಬಂತೆ ಖಚಿತವಾಗಿರುತ್ತವೆ. ಇವಕ್ಕೆ ಇವಾಗಿ ಪ್ರಾಶಸ್ತ್ಯವಿಲ್ಲದಿರಬಹುದು ; ಇನ್ನಾವುದೊ ಪ್ರಾಧಾನ್ಯಕ್ಕೆ, ಪ್ರಯೋಜನಕ್ಕೆ ಸಾಧನ.

ಎಲ್ಲಕ್ಕಿಂತ ವಿಶಿಷ್ಟವಾದ್ದು ಪ್ರಯಾಣದ ಸಜ್ಜು. ಹಾಸಿಗೆ, ಹೋಲ್ಡಾಲ್, ಟ್ರಂಕು, ಚೌಕಸಿ ಇಲ್ಲಿನ ಆವರಣ. ಹಗುರವಾಗಿ ಸಂಚಾರ ಮಾಡುವ ಹೊಸಕಾಲದ ಹಣಗಾರನ ಸಜ್ಜು ಸರಳ. ಕೈಯಲ್ಲಿ ಒಂದು ಟಿನ್ ಸಿಗರೇಟು, ಷರಟನ್ನು ಒಳಗೆ ಸಿಕ್ಕಿಸಿ ಫ್ಲಷ್ ಷರಾಯಿ ಏರಿಸಿದ ಅವನ ಧಾರಾಳ ಸುತ್ತಲ ಕೂಲಿಯವರಿಗೆ ನಿರಾಸೆ ತಂದರೂ ಟ್ಯಾಕ್ಸಿಯವರಿಗೆ ಹಬ್ಬ. ಹೆಂಡತಿಯ ತಲೆಯ ಮೇಲೆ ಪೆಟ್ಟಿಗೆ ಗಂಟು ಹೊರಿಸಿ, ತಾನು ಒಂದು ಕೈಯಲ್ಲಿ ಒಂದು ಮಗುವನ್ನು ನಡಸುತ್ತ ಇನ್ನೊಂದರಲ್ಲಿ ಕಡೆಗೋಲು ತುರಿಮಣೆ ಸುಟ್ಟುಗ ಹೊರಟುಕೊಂಡು ಕಾಣಿಸುವ ಕೈಚೀಲವನ್ನು ಹಿಡಿದು ರೆಯಿಲ್ವೆ ನಿಲ್ದಾಣಕ್ಕೆ ನಡೆಯುತ್ತಿರುವ ಹಳೆಯ ಕಾಲದ ಬಡ ಗೃಹಸ್ಥನ ಚಿತ್ರ ಮತ್ತೊಂದು ರಂಗಿನದು. ಎಷ್ಟು ಬಗೆಯ ಬುಟ್ಟಿ, ಪೆಟ್ಟಿಗೆ, ಗಂಟು, ಮೂಟೆ, ಅವಸರ, ಜಗಳ, ನುಗ್ಗಾಟ ಈ ಪ್ರಯಾಣಿಕರದು!

ಒಂದು ಕಿರುಚಿತ್ರ ನನ್ನ ಮನಸ್ಸಿನಲ್ಲಿ ನಟ್ಟು ನಿಂತಿದೆ. ಬೇಸಗೆಯ ಪೂರ್ವಾಹ್ನ: ಹಾರ್ಡಿಂಗ್ – ಇಂದು ಮಹಾಕವಿ ಪಂಪ-ರಸ್ತೆ ಬರಿದಾಗಿದೆ. ಗದ್ದಲವಿಲ್ಲ. ಇಬ್ಬರು ಹುಡುಗರು ಕಣ್ಣಾಸ್ಪತ್ರೆಯ ದಿಕ್ಕಿನಲ್ಲಿ ನಡೆದು ಹೋಗುತ್ತಿದ್ದಾರೆ ನಡುರಸ್ತೆಯಲ್ಲಿ. ಹತ್ತು ಹನ್ನೆರಡು ವರ್ಷ ಹುಡುಗನಿಗೆ. ಎಂಟು ಹತ್ತಿರಬಹುದು ತಂಗಿಗೆ. ಇವನ ಎಡ ಬಗಲಿಗೆ, ಅವಲ ಬಲ ಬಗಲಿಗೆ ಒಂದೊಂದು ಹರುಕು ತೂಗುವ ಚೀಲ. ಅವರಿಗೆ ಇದ್ದ ಸಂಪತ್ತೆಲ್ಲ ಅಲ್ಲಿ ದಾಸ್ತಾನು. ತಾಯೆಲ್ಲಿಯೊ ? ತಂದೆ ಯಾರೊ ? ಯಾರೂ ಇಲ್ಲ, ಬಹುಶಃ ಲೋಕದಲ್ಲಿ ಇದ್ದವರೇ ಇಬ್ಬರು ಇವರು. ಇವನು ಹರುಕುಪಂಚೆ ಮೊಳಕಾಲ ಮೇಲಕ್ಕೆ ಉಟ್ಟಿದ್ದಾನೆ ; ಮೇಲ್ಮಯ್ ಬತ್ತಲೆ ; ಅವಳಿಗಿದ್ದದ್ದು ಮಾಸಲು ಕಿರಿಗೆ ; ಮಣಿಸರ ಕೊರಳಲ್ಲಿ. ಎಲ್ಲಿಗೊ ಹೊರಟಿದ್ದಾರೆ. ಎಲ್ಲಿಗಾದರೇನು ? ತರಗುಪೇಟೆ, ಮಲ್ಲೇಶ್ವರ, ಚಿತ್ರದುರ್ಗ, ಪೂನಾ, ಕಾಶ್ಮೀರ, ಗಾಂಧಾರ, ರಷ್ಯ ; ಸ್ಪಿಟ್ಸ್ ಬರ್ಗೆನ್; ಲೋಕದ ಕೊನೆಯವರೆಗೆ ಹೋದರೂ ಹೋಗಬಹುದು. ಅವರಂತೂ ದಾರಿ ನಡೆಯುವವರೇ. ಸ್ವರ್ಗದ ಆಸೆ ಇಲ್ಲ. ನರಕದ ಭೀತಿಯಿಲ್ಲ, ಲೋಕದ ಕ್ಲೇಶ ಕಾರ್ಪಣ್ಯ

ಕಪಟ ಪಾಡಿಲ್ಲ ಈ ಎಳೆಜೀವಿಗಳಿಗೆ, ಕಣ್ಣಲ್ಲಿ ಹೊಳಪಿದೆ ; ಮುಖದಲ್ಲಿ ಗೆಲುವು, ನಡೆಯಲ್ಲಿ ಸ್ಥಿರತೆ ಇವೆ. ಮುಂದೆ ನಡೆದಿದ್ದಾರೆ. ಸುತ್ತಲಿನ ಲಕ್ಷ್ಯವಿಲ್ಲ, ಇಂಥ ಧೈರ್ಯ ಎಲ್ಲರ ಬಾಳಿಗೂ ಲೋಕಯಾತ್ರೆಯಲ್ಲಿ ಬರಬಾರದೆ?

ಶಿಸ್ತಿನಲ್ಲಿ ಒಂದು ಒರಗು, ನೇಮ ಇರಬಲ್ಲದು ; ಸಜ್ಜು ಇನ್ನಾವುದಕ್ಕೆ ತಯಾರಿ: ಅಲಂಕಾರ ವ್ಯಕ್ತಿಕವಾದ ಒಂದು ಸಿಂಗಾರದ ಕೆಲಸ. ನಮ್ಮ ರೂಪ, ವೇಷ ಚೆನ್ನಾಗಿರಲು, ಇತರರಿಗೆ ಚೆನ್ನಾಗಿ ಕಾಣಲು ನಾವು ಮಾಡಿಕೊಳ್ಳುವ ಸಂಸ್ಕರಣ. ಅಲಂಕಾರದ ಬಗೆಗಳೂ ಸಾವಿರ. ಶುಚಿ, ರುಚಿ, ರಂಗು, ರೂಪ, ರೇಖೆ ಅನಂತ. ಒಬ್ಬೊಬ್ಬರದು ಒಂದೊಂದು ರೀತಿ, ರಚನೆ. ನಾವಾಗಿ ಒಲಿದ ಬಗೆ ಒಂದು ತೆರನಾದರೂ ನಮಗೆ ಹಿಡಿಸದವೂ ಸಾವಿರ. ಗಂಡು ಹೆಣ್ಣಿನದು, ಮನೆಯುವರು ಪೇಟೆಯುವರದು, ನಾಟ್ಯದವರು ಸಿನೆಮದವರದು ಎಷ್ಟೋ ರೀತಿ. ನಾವಾಗಿ ಒಲಿದವರಿಗೆ ಮೆಚ್ಚುವಂಥಾದ್ದು. ಒಡೆಯರಿಗೆ, ಸರಿಯವರಿಗೆ ತಕ್ಕಂತೆ ಕಾಣಬೇಕೆಂದು, ಸ್ಪರ್ಧೆ ನಡುಸುವ ಇತರರ ಇದಿರಿಗೆ ಅಟ್ಟಹಾಸ ತೋರಿಸಬೇಕೆಂದು ನೋಡಿ ಹೊಟ್ಟೆ ಉರಿದುಕೊಂಡು ಸಾಯಲಿ ಎಂದು ಬಗೆಬಗೆಯ ಅಲಂಕಾರ ಮಾಡಿಕೊಳ್ಳುತ್ತೇವೆ. ಅಲಂಕಾರವೆಂದರೆ ಒಡವೆ ವಸ್ತ್ರವೇ ಅಲ್ಲ. ಮೈ ಸಂಸ್ಕಾರ ಸೈರಂಧ್ರಿ ಕಾರ್ಯಗಳೇ ಅಲ್ಲ. ಹೂವಿನ ಸಿಂಗರವಲ್ಲ, ಬಣ್ಣ, ಬಾಚು ಅಲ್ಲ. ಅದರಲ್ಲಿ ಸರಳತೆ ಇರಬಹುದು. ಅಬ್ಬರವಿರಬಹುದು. ಒಂದು ದಿನ ಒಂದು ಬಗೆ, ಇನ್ನೊಂದು ದಿನ ಇನ್ನೊಂದು ಇರಬಲ್ಲದು. ಗಂಡು ಮಖಮಲ್ ಷರಾಯಿ, ಫ್ಯಾನ್ಸಿ ಷರಟು ಧರಿಸಿದರೆ ಹೆಣ್ಣು ವುಲ್ಲನ್ ಧರಿಸಿ ಪಾಯಿಜಾಮ, ಗೌನು, ಮೇಲಂಗಿ ಹಾಕಿಯೊ ಚಕ್ಕಳದ ಜಾಕೆಟ್ ತೊಟ್ಟೊ ಮೆರೆಯಬಹುದು. ಮಣಿ ಚಿನ್ನ ಹೊತ್ತು ಅಸೂಯೆ, ಅಸಹ್ಯ ಹುಟ್ಟಿಸಬಹುದು; ನಿರಾಭರಣದಲ್ಲಿ, ಗಂಟಿಕ್ಕಿ ಸಡಿಲವಾಗಿ ಕಟ್ಟಿದ ತುಂಬು ಕೇಶಪಾಶಕ್ಕೆ ಏಳುಸುತ್ತಿನ ಮಲ್ಲಿಗೆಯೊಂದನ್ನು ಸಿಕ್ಕಿಸಿ ಲೋಕದ ಎದೆಯನ್ನು ಜಿಲ್ಲೆನ್ನಿಸಬಹುದು. ಇಂಥಲ್ಲಿ ಚೆಲುವಿಂದ, ಏಕೆ, ಚೆಲುವೇ ಅಲಂಕಾರ ; ಅಲಂಕಾರದಿಂದ ಚೆಲುವಲ್ಲ. ಚೆಲುವಿಗೆ ಹದವಾದ ಅಲಂಕಾರ ದೊರೆತರೆ ನಾಡು ಗಿಡಕ್ಕೆ ದೋಹದ ದೊರೆತಂತಾಗುತ್ತದೆ. ಹಸುವಿನ ಹಾಲಿಗೆ ಕೇಸರಿ, ಸಕ್ಕರೆ ಬೆರೆತಂತಾಗುತ್ತದೆ. ಇಷ್ಟು ಸಾಕು, ಇನ್ನು ಬೇಕಿಲ್ಲ ಎಂಬುದು ಇಲ್ಲಿ ಹದದ ಸ್ವರೂಪ. ಅಲಂ ಎಂದರೆ ಅದೇ ಅರ್ಥ ; ಅರಂ ಎಂದರೂ ಅನುಕೂಲವಾದ ಅದೇ, -ಸಜ್ಜು ಎಂದಲ್ಲವೆ ? ಪ್ರಿಯೆ, ಅಲಂಕಾರವಾಗಿದ್ದರೆ ಇತ್ತ ಬಾ ಎಂದು ಸೂತ್ರಧಾರ ಹಿಂದಿನ ಕಾಲಗಳಲ್ಲಿ ನಟಿಯನ್ನು ನಾಟಕರಂಗಕ್ಕೆ ಕರೆಯುತ್ತಿದ್ದುದು ವಾಡಿಕೆ. ಆಗ ಆಕೆ ಗಾನವನ್ನಾರಂಭಿಸಿ ನಾಟಕಾಭಿನಯಕ್ಕೆ ಪೀಠಿಕೆ ಹಾಕಲು ನೆರವಾಗುತ್ತಿದ್ದಳು. ಆಕೆಯ ಅಲಂಕಾರಕ್ಕೆ ಮಿತಿಯಿತ್ತು. ಈಗಿನವರಿಗೆ ಅಲಂ ಇಲ್ಲ. ಕನ್ನಡಿ ಕಿಸೆಯಲ್ಲಿಯೇ ಕೈಚೀಲದಲ್ಲಿಯೇ ಸದಾ ಇರತಕ್ಕದ್ದು. ಬಾಚಣಿಗೆಗೆ ಬಿಡುವಿಲ್ಲ ಗಂಡು ಹುಡುಗರಿಗೂ. ತುಟಿ ಅಂಚಿನ ಕೊಪ್ಪ ತುಟಿಯನ್ನು ತಿದ್ದುತ್ತಲೇ ಇರಬೇಕು. ಅಷ್ಟು ಅಲ್ಪ ಸ್ಥಾಯಿ ಕೆಂಪು. ಥೂ.

ಎಲ್ಲಿಯವರೆಗೆ? ಇವನು ಅಲಂಕಾರ ವಿದ್ಯಾರ್ಥಿ. ಕೈಯಲ್ಲಿ ಪುಸ್ತಕ ಪೆನ್ ಇವೆ ಅಷ್ಟೇ; ಉಳಿದ ಗಮನ ಬೇರತ್ತ ಎಂಬವರೆಗೆ. ಇದು ಅಲಂಕಾರದ ಅಡಿಗೆ, ಅದು ಅಲಂಕಾರದ ಉಂಡೆ, ತಿನ್ನುವುದಕ್ಕಲ್ಲ ಎಂಬಂತೆ ನಿಷ್ಪ್ರಯೋಜನ. ಹ್ಯೂಮ್ -

I am tired of roses and the singing poets
Josephs all, not tall enough to try

ಎಂದಂತಹ ಬೇಸರ ತರುವ ಜಾತಿ ಇದು. ಈ ಗುಲಾಬಿ, ಈ ಹಾಡುವ ಕವಿಗಳು ಬರಿಯ ಸೊಗಸುಗಾರ ಪುಟ್ಟಸಾಮಿಗಳು-ಶಿಸ್ತುಗಾರರು ಎನ್ನಬಾರದೆ-ಯತ್ನಕ್ಕೆ ಎಟುಕುವ ಎತ್ತರವಿಲ್ಲದ ಮಕ್ಕಳು. ಇವರಿಗೆ ವೇಷ ಸಿದ್ಧಿಯಾದೀತು ಮಾತ್ರ. ಲಾಭವಿಲ್ಲ. ಮಾಯ್ಕೋವ್‌ಸ್ಕಿ ವರ್ಣಿಸಿದಂತೆ "For ever combing their hair, for ever drinking tea", ಅನಂತ ಕಾಲವೂ ಚಹ ಕುಡಿಯುತ್ತಿರುವ, ಕ್ರಾಪು ಬಾಚುತ್ತಿರುವ, ಕೂದಲು ನೇವರಿಸುತ್ತಿರುವ ಈ ಬಾಚಣಿಗೆಯ ಲೋಲುಪವರ್ಗ ಲೋಕದಲ್ಲಿ ಏನು ಮಾಡೀತು?

ನಮ್ಮ ದೇವಸ್ಥಾನಗಳಲ್ಲಿ ಇಂದು ಈ ಅಲಂಕಾರ, ಆ ಅಲಂಕಾರ, ಲಕ್ಷ ದೀಪೋತ್ಸವ, ರತ್ನದ ತೊಟ್ಟಿಲಿಟ್ಟಿದ್ದಾರೆ, ನೋಡಲು ನಾಲ್ಕು ಕಣ್ಣು ಸಾಲವು ಎಂದಾಗ ಈ ಅಲಂಕಾರಪ್ರಿಯತೆ ದೇವರಿಗೂ ಹರಡುತ್ತದೆ. ಯಾವ ಭಕ್ತರಿಗೆ ಇದು ಮೆಚ್ಚಲ್ಲ ? ಆದಿ ಶಂಕರರಿಗೆ ಚಿನ್ನದ ಸರಪಳಿ ಸರ ಹಾಕಿ, ಪೀತಾಂಬರ ಉಡಿಸಿ, ಕಿರೀಟ ಹಾಕಿಸುವವರು ಇನ್ನೇನು ಮಾಡರು? ನಮ್ಮಂತೆಯೇ ನಮ್ಮ ದೇವರುಗಳಿಗೂ ಅಲಂಕಾರಗಳನ್ನು ಮಾಡಿ ಅವರನ್ನು ಒಂದು ಜಡತೆಯಲ್ಲಿ ಕೂಡಿಸಿಬಿಟ್ಟಿದ್ದೇವೆ. ಅವರು ಹೊರಗೆ ದೂಳಿಗೆ ಬರದಂತೆ, ಲೋಕದ ಅಗತ್ಯಕ್ಕೆ ಒದಗದಂತೆ-ಅಲಂಕಾರ ತೊಡಿಸಿ ಪವಡಿಸು ಪರಮಾತ್ಮನೆ ಎಂದು ಹಾಡಿ ಏಳಬೇಡವೆಂದು ಹೇಳುವಂತೆ ಕೂಡ ಮಲಗಿಸಿಬಿಟ್ಟಿದ್ದೇವೆ.

ಸಾಕರಿ ಅಲಂಕಾರ, ಹೊರಡಿ ಬೇಗ, ರೈಲಿಗೆ ಹೊತ್ತಾಯಿತು, ಕಾಲೇಜಿಗೆ, ಆಫೀಸಿಗೆ ಬಸ್ಸು ಸಿಕ್ಕುವುದಿಲ್ಲ. ಪರ್ಸು ತೆಗೆದುಕೊಳ್ಳಿ, ಲೇಟಾಯಿತು. ಜುಲ್ಮಾನೆ ಬೀಳುತ್ತದೆ. ಅಲಂ. ಏಳಿ. ನಡೆಯಿರಿ. ಬೇಗ ಬೇಗ. ಹೆಜ್ಜೆಹಾಕಿ. ಕಾಲ ಧಾವಿಸುತ್ತಿದೆ.

# ಪತ್ರದೂತ

ಲಾಲಿಗೆ,

ಅಲ್ಲ ಲಲಿತೆಗೆ, ಅದೂ ಅಲ್ಲ, ಲಲಿತಮ್ಮನಿಗೆ. ಅಮ್ಮನೇನು ಬಂತು ? – ಲಲಿತಮ್ಮನವರಿಗೆ. ಗೌರವವಿಲ್ಲದ ಕಡೆ ಅವರು ಎಂಬ ಬಹುವಚನವನ್ನಾದರೂ ಏಕೆ ಉಪಯೋಗಿಸಬೇಕು, ನಿನಗೆ ? ಡಿಯರ್, ಚಿನ್ನ, ಎಲ್ಲಾ ಕಟ್ಟಿಟ್ಟುಬಿಡು–ಶಕ್ಯವಿಲ್ಲ. ಇನ್ನು ಅದೆಲ್ಲಾ ಆಗಿಹೋಯಿತು. ನೀನು ಡಿಯರೂ ಅಲ್ಲ, ಷೀಪೂ ಅಲ್ಲ. ಚಿನ್ನವಂತೂ ಮೊದಲೇ ಅಲ್ಲ. ನನ್ನ ಆಶೀಃ. ಥೂ ಇದೇನು! ಆಶೀರ್ವಾದಗಳೇನು ಬಂತು ಅವಿಧೇಯಳಾದವಳಿಗೆ? ಪ್ರೇಮಪುರಸ್ಸರವಾಗಿ ಎಂದು ಬರೆಯಬೇಕು ಸಾಮಾನ್ಯವಾಗಿ. ಪ್ರೇಮ ಇಲ್ಲದಾಗ ಪುರಸ್ಸರವಾಗಿ ಎಂದು ಹೇಗೆ ಬರೆಯುವುದು ? ವಿಜ್ಞಾಪನೆಗಳು. ಉಃ, ನಿನ್ನಲ್ಲಿ ವಿಜ್ಞಾಪನೆ ಮಾಡುವುದಾದರೂ ಏನಿದೆ ? ಶನಿಕಾಟ ! ಏನೊ ಒಂದು ಬರೆಯಬೇಕಲ್ಲ.

ನಿ—ನ—ಗೆ.

ನನ್ನ ಪತ್ರ ಬೇಕಾದರೆ ಓದು ; ಬೇಡವಾದರೆ ಬಿಡು. ಈಗಿನ ನನ್ನ ಮನಃಸ್ಥಿತಿಯಲ್ಲಿ ಬರೆಯುವುದು ಹಾಗೆ. ಸಂಬೋಧನೆ, ಒಕ್ಕಣೆ, ಬಾಲ ಇಲ್ಲದೆ ಇದ್ದರೆಯೆ ಹಿತ.

ನಿನ್ನೆ ನಿನ್ನನ್ನು ಶಾಸ್ತ್ರಿಗಳು ಯಾವುದೊ ಸಂತೆಯಲ್ಲಿ-ಅಲ್ಲ ಕ್ರಾಫರ್ಡ್ ಹಾಲ್ ಸಭೆಯಲ್ಲಿ ಕಂಡಿದ್ದರಂತೆ. ನೀನು ಅವರನ್ನು ಮಾತನಾಡಿಸಿದೆಯಂತೆ. ತುಂಬಾ ವಿಶ್ವಾಸದಿಂದ, ಗೌರವದಿಂದ ಮಾತನಾಡಿಸಿದೆ ಎಂದರು. ಅಷ್ಟಾದರೂ ತೋಚಿತಲ್ಲ ನಿನಗೆ ! ಇನ್ನೊಬ್ಬರಿಗೆ-ಅದರಲ್ಲೂ ನನ್ನ ಕಡೆಯವರಿಗೆ-ವಿಶ್ವಾಸ, ಗೌರವ ತೋರಿಸಬೇಕು ಎಂದು. ಮುಖ ತಗ್ಗಿಸಿ, ನೆಲ ಬರೆಯುತ್ತ, ನನ್ನಿಂದ ಕಾಗದವೇ ಬರಲಿಲ್ಲ ಎಂದೆಯಂತೆ. ನನ್ನ ಮೇಲೆ ಇವರಿಗೆ ತುಂಬಾ ಕೋಪವಿರಬೇಕು ಅಂದೆಯಂತೆ. ಅದನ್ನೆಲ್ಲ ಅವರ ಕೈಯಲ್ಲಿ ಹೇಳತಕ್ಕದ್ದೇನಿತ್ತು? ಅಲ್ಲದೆ ಬರೆದರೆ ಬರೆಯುತ್ತೇನೆ, ಇಲ್ಲವಾದರೆ ಇಲ್ಲ: - ಮದುವೆ ಮಾಡಿಕೊಂಡ ಗಂಡನಿಗೆ ಹೆಂಡತಿಗೆ ಕಾಗದ ಬರೆಯುವುದಕ್ಕೂ ಬರೆಯದೆ ತಡೆಯುವುದಕ್ಕೂ ಕಡೆಗೆ ಬರೆಯದೆ ಇರುವುದಕ್ಕೂ ಅಧಿಕಾರವಿಲ್ಲವೆ ? ಕೋಪಮಾಡಿಕೊಳ್ಳುವ ಹಕ್ಕಿಲ್ಲವೆ ?.... ಅಥವಾ ನಿನ್ನ ಮೇಲೆ ಕೋಪ ಮಾಡಿಕೊಂಡು ಏನು ಪ್ರಯೋಜನ ? ಕೋಪವೊ ತಾಪವೊ ಅದನ್ನೆಲ್ಲ ಕಟ್ಟಿಕೊಂಡು ನಿನಗೇನಾಗ ಬೇಕಾಗಿದೆ ? ಪಟಾಲಂ ಪಟಾಲಂ ಎಲ್ಲ ಜಮಾಯಿಸಿತ್ತಂತೆ. ಅಪ್ಪ, ಅಮ್ಮ, ತಂಗಿ,

ತಮ್ಮಂದಿರು ಎಲ್ಲರೂ ಗೆಲವಾಗಿದ್ದರು ಎಂದು ಸಂಗತಿ ತಿಳಿಯಿತು. ಇರದೆ ಏನು? ದೊಡ್ಡ ಸರ್ಕಸ್ ಅದು. ನಾನು ಕಾಣದ್ದೆ? ಹಸು ಕರು ಜೊತೆಯಲ್ಲಿದ್ದರೆ ಎರಡಕ್ಕೂ ನೆಮ್ಮದಿಯೇ. ಅವರಿಗೆ ನೀನು ಇದ್ದುದು ಗೆಲವಾಗಿರಬೇಕು. ಅದು ಸರಿ : ಗೆಲವು ನಿನಗೆ ಏಕಾಗಬೇಕಿತ್ತು ಅಂತೇನೆ–ಬೆಂಗಳೂರಿಂದ ಹೊರಟುಹೋಗಿರುವುದು ಅದಕ್ಕೆ ಕಾರಣವಿರಬೇಕಲ್ಲ? ಎದುರಿಗೆ ನಾನಿಲ್ಲವಲ್ಲ ; ನೀನು ಬೇಕಾದಂತೆ ಮೆರೆಯಬಹುದು. ನನ್ನ ಅಭ್ಯಂತರ ಏನೂ ಇಲ್ಲ. ಅಡ್ಡಿ ಮಾಡಲು ನಾನು ಯಾರು ? ಅಡ್ಡಿಮಾಡುವುದು ಈ ಊರಿಂದ ಹೇಗಾಗುತ್ತೆ? ನಾನು ಬೇಡವೆಂದರೂ ನಿಮ್ಮೂರಿಗೆ ಹೊರಟುಹೋದ ನೀನು ನನಗೆ ಇನ್ನಾವಳು? ನಿನ್ನ ಅಡ್ಡಿ ಮಾಡಲು ನಾನು ಎಷ್ಟರವನು ? ಬುದ್ಧಿ ಇಲ್ಲದೆ ಮದುವೆ ಮಾಡಿಕೊಂಡ ಗಂಡ. ಅಷ್ಟೆ. ನನ್ನ ಪಾಡಿಗೆ ನಾನು ಇರುತ್ತೇನೆ. ನಿನ್ನ ಪಾಡು ನೀನು ಆಯ್ದುಕೊಂಡಿದ್ದೀಯೆ–

ನೀನು, ನಾನು ಹತ್ತು, ಅದರಲ್ಲಿಯೂ ವಿಶೇಷವಾಗಿ ಎಂಟು ವರ್ಷ ಕಾಲ ಜೊತೆಯಲ್ಲಿದ್ದೆವು. ಅದಕ್ಕಾಗಿಯಾದರೂ ಒಂದು ನೆನಪು ಬೇಡವೆ ಎಂದೀಯೇನೊ! ನಾನೇನು ಕಾಳಿದಾಸನ ಯಕ್ಷ ಕೆಟ್ಟೆನೇ. ಈಚಿನ ಕವಿಗಳು ಯಾರು ಯಾರೊ ಅವನನ್ನು ನೋಡಿಕೊಂಡು ನೂರು ಬಗೆಯ ಸಂದೇಶಗಳನ್ನು ಬರೆದು ಮಂದಾಕ್ರಾಂತ ಛಂದಸ್ಸು, ಓದುವವರ ಮನಸ್ಸು-ಎರಡನ್ನೂ ಹಾಳುಮಾಡಿದ್ದಾರೆ. ಕವಿಯಶಃಪ್ರಾರ್ಥಿಗಳು ಅವರು. ಯಕ್ಷನಿಗೆ ಪ್ರೀತಿಯಾದರೂ ಇತ್ತು. ಇವರಿಗೆ ಇರುವುದು ಯಾವುದೊ ಬಗೆಯ ಅಧ್ವಾನ್ನ ತಮ್ಮ ಕವಿತ್ವ ಪ್ರೀತಿ ಮಾತ್ರ. ಅವರು ಬೇಕಾದಂತೆ ಹಂಸಗಳನ್ನೊ ಬಕಗಳನ್ನೊ ಕಾಕಗಳನ್ನೊ ಉಲೂಕಗಳನ್ನೊ ದೊಣ್ಣೆ ಕೋಲನ್ನೊ ಕಳಿಸಿಕೊಡಲಿ ತಮ್ಮ ಕಲ್ಪನೆಯ ಪ್ರೇಯಸಿಯರಿಗೆ. ಅವನ್ನು ಹುಡುಕಲು ನಾನೆಲ್ಲಿಗೆ ಹೋಗಲಿ? ನಾನು ಕಾಗದ ಸಂದೇಶವನ್ನೂ ಕಳಿಸಿಕೊಡುವವನಲ್ಲ. ಸಂದೇಶ ಪ್ರಿಯರಿಗೆ, ಕಾತರರಿಗೆ, ಆರ್ತರಿಗೆ, ಪ್ರೇಮ ಉಳಿದು ಪ್ರಿಯರ ಅಗಲಿಕೆಯ ಬೇನೆಯನ್ನು ಅನುಭವಿಸುತ್ತಿರುವವರಿಗೆ ಸಂದೇಶದ ಒತ್ತಡ, ಅಗತ್ಯ ಇರುತ್ತವೆ.

ನನಗೇನೂ ಹಾಗಿಲ್ಲ. ಆದ್ದರಿಂದ ನಾನು ಶಾಸ್ತ್ರಿಗಳು ಹೇಳಿದರಲ್ಲ : ನೀನೇ ಎದುರಿಗೆ ಬಂದು ನಿಂತು ನನಗೆ ಒಂದು ಸಂದೇಶ ಕಳಿಸಿ ಎಂದು ಬೇಡಿಕೊಂಡರೂ ಕಳಿಸುವವನಲ್ಲ. ಕನ್ನಡದಲ್ಲಿ ಮಂದಾಕ್ರಾಂತ ಸುಖವಾಗಿ ನಡೆಯುವುದೂ ಇಲ್ಲ. ನಿನ್ನಿಂದ ಎಂಟು ವರ್ಷಗಳ ಕಾಲ ಆಕ್ರಾಂತನಾಗಿದ್ದವನು ನಿಜವಾದರೂ ನಿನಗೋಸ್ಕರ ಮಂದಾಕ್ರಾಂತಗಳಲ್ಲಿ ಆದರದ ಪ್ರೇಮ ನಿವೇದನೆಯನ್ನು ಮಾಡಿ ಆ ಕೀರ್ತಿಯನ್ನು ನಿನಗೆ ಮಾಡಿಕೊಡುವಷ್ಟು ಬಕರಾ ಅಲ್ಲ ನಾನು.

ನಿನಗೆ ತುಂಬಾ ಸೊಕ್ಕಾಯಿತು ಈಚೆಗೆ. ಹತ್ತು ಜನ ನಿನ್ನ ಚೆಲುವು ವಿಲಾಸಗಳನ್ನು ಮೆಚ್ಚಿದರು. ನನ್ನೊಡನೆ ನೀನು ನಡಸಿದ ಸಂಸಾರ ಅಚ್ಚುಮೆಚ್ಚಿನದೆಂದು ತಲೆಗೆ ಏನೇನೊ ತುಂಬಿ ನಿನ್ನ ಬುದ್ಧಿಯನ್ನು ಕೆಡಿಸಿದರು ; –ಇಷ್ಟು ಅವಿವೇಕವಾಯಿತು. ನಾನು ಅದಕ್ಕೆ

ಅವಕಾಶ ಕೊಡದೆ ಹೆಂಗಸನ್ನು ದರ್ಪದಲ್ಲಿ, ಅದಬ್ಬಿನಲ್ಲಿ ಹೇಗೆ ಇಟ್ಟಿರಬೇಕಾಗಿತ್ತೊ ಹಾಗೆ ಇಟ್ಟಿದ್ದಿದ್ದರೆ–ಎದ್ದರೆ ನಾಲ್ಕು, ಕೂತರೆ ಎಂಟು ಗದರು ಹಾಕಿಯೊ ಮುಖ ಸಿಂಡರಿಸಿಯೊ ಛೀಮಾರಿ ಹಾಕಿಯೊ ಬೆದರಿಕೆಯಲ್ಲಿ ಇಟ್ಟಿದ್ದಿದ್ದರೆ–ಚೆನ್ನಾಗಿತ್ತು. ತಪ್ಪು ನನ್ನದು. ಈಗ ಹೇಳಿಕೊಂಡು ಪ್ರಯೋಜನವಿಲ್ಲ. ಆದಿಯಲ್ಲಿಯೇ ಕೆಟ್ಟು ಹೋಯಿತು. ಈಗಿನ ಕಾಲದವ ನಾನು ; ಕೈಹಿಡಿದ ಹೆಂಡತಿಯನ್ನು ತುಂಬಾ ನಾಗರಿಕವಾಗಿಟ್ಟು ಕೊಳ್ಳಬೇಕೆಂದು ಬಯಸಿದೆ. ಬಗೆಬಗೆಯ ನಯನಾಜೂಕುಗಳಿಂದ ನಿನ್ನನ್ನು ನಡಸಿಕೊಂಡೆ. ನಿನಗಾಗಿ ಅಲ್ಲ ಅನ್ನುವೆಯೇನೊ ! ಅನ್ನು ; ನನಗಾಗಿ. ನಾನು ಮದುವೆಯಾಗುವ ಹೆಂಡತಿಗೆ ನಾನು ಗಾಸಿಕೊಡುವುದಿಲ್ಲ, ಕೊಡಬಾರದು ಎಂಬುದು ಮೊದಲಿಂದಲೂ ನನ್ನ ಜೀವ ಮೆಚ್ಚಿದ ತತ್ತ್ವ. ನಮ್ಮ ತತ್ತ್ವಗಳೇ ನಮ್ಮನ್ನು ಮುಳುಗಿಸುತ್ತವೆ ಎಂಬುದನ್ನು ಕಂಡ ಮೇಲೆ ಯಾವುದರ ನಂಬಿಕೆ ಉಳಿಯಿತು ? ಅಷ್ಟಕ್ಕೇ ನೀನು ಅಟ್ಟ ಏರಿ ಕುಳಿತೆ. ಯಾವ ಮರ್ಯಾದೆ, ಪ್ರೀತಿ ನಾನು ನಿನಗೆ ಕೊಟ್ಟೆನೊ ಅದು ನಿನ್ನ ಯೋಗ್ಯತೆಗಾಗಿ ಸಲ್ಲತಕ್ಕದ್ದೆಂಬಂತೆ ವಿದ್ಯೆ, ನುಡಿ, ನಡತೆ ಕಲಿತೆ. ವರ್ಷ ವರ್ಷಕ್ಕೆ, ತಿಂಗಳು ತಿಂಗಳಿಗೆ ನಿನ್ನ ಪ್ರತಿಷ್ಠೆಗೆ ಮಿತಿಯೇ ಇಲ್ಲದಂತಾಯಿತು. ಅದೆಲ್ಲ ಮೊದಲು ಮೊದಲು ನನಗೆ ತೋರಲಿಲ್ಲ. ಈಗ ಅರ್ಥವಾಗುತ್ತಿದೆ. ನಾಗರ ವಿಷ ಏರಿದ ಹಾಗೆ ಏರಿತು ಅದು. ನಾ-ನೇ-ಂ ಲಕ್ಷ್ಯವಿಲ್ಲ ನಿನಗೆ! ಒಂದು ದಿನ ಮನೆಯಿಂದ ಹೊರಗೆ ಕಾಲಿಡುತ್ತಿಲ್ಲ ಪ್ರಾಣಿ; ಕ್ಲಬ್ಬಿಗೆ ಹೋಗಿ ಬರಲಿ, ನಾಲ್ಕು ಜನ ಸರಿಕರು ಗುರುತಾಗಲಿ ಎಂದು ರಾಯರ ನಾದಿನಿಗೆ ಹೇಳಿ ಅಲ್ಲಿಗೆ ಸೇರಿಸಿದರೆ ಅವರೂ ನೀನೂ ಒಂದಾದಿರಿ; ನಾನೇ ಬೇರೆಯಾದೆ. ನನ್ನ ಮನೆಯಲ್ಲಿ ವಾರಕ್ಕೆ ಮೂರು ಸಲ ಪಾರ್ಟಿ ; ನಿಮ್ಮದು ವಿಹಾರ. ಮಹಿಳಾ ಸಮಾಜದ ಮುಖ್ಯ ಕಾರ್ಯಾಲಯವಾಯಿತು ಈ ಮನೆ. ನನ್ನ ಸ್ಥಾನ ಯಾವುದು ಆ, ಅಂಥ ಸಮಯದಲ್ಲಿ? ನನ್ನ ಮನೆಯಲ್ಲಿ? ನಾನು ಹೊರಗೆ ಹೋಗದಿದ್ದರೆ? ನನಗೆ ಆ ಮೀಟಿಂಗುಗಳ ಪ್ರಯೋಜನವೆಲ್ಲ ಸಿಕ್ಕಿದ್ದೆಷ್ಟು? ನಿಮ್ಮ ತಿಂಡಿ ತೀರ್ಥ ನನ್ನ ಖರ್ಚಿನಿಂದ ಆದವು. ನಿಮ್ಮ ಗಲಾಟೆ, ನಿಮ್ಮ ಚೆಲ್ಲಾಟ, ನಿಮ್ಮ ಜನಾರ್ದನ ಕಚೇರಿಗಳ ಹುಯಿಲೋ ಹುಯಿಲು. ನಮ್ಮಪ್ಪ! ಗಂಡಸರ ಕಚೇರಿಗಳು, ಇವಕ್ಕೆ ಹೋಲಿಸಿದರೆ, ನಿಜವಾಗಿ ಮೌನಿಗಳ ತಪೋವನಗಳು. ಅವರನ್ನು ಮಾತಾಡಿಸುವವರು ಯಾರು ? ಮಾತನಾಡುವವರು ಯಾರು?

ವೆಚ್ಚಕ್ಕೆ ನಾನು ಅಸಮಾಧಾನ ಪಡುವುದಿಲ್ಲ. ದೇವರು ಕೊಟ್ಟಿದ್ದಾನೆ-ನಿನ್ನ ಪುಣ್ಯದಿಂದ ಅಂದುಕೊ ಬೇಕಾದರೆ. ಆದರೆ ನನ್ನ ಮನೆಯಲ್ಲಿ ನನಗೆ ಧಾರಾಳವಾಗಿರುವುದಕ್ಕೆ, ತಿರುಗಾಡುವುದಕ್ಕೆ ಆಗದಂತೆ ಈ ಮಲೆಯಾಳ ಕಟ್ಟಿದರೆ ನನ್ನ ಗತಿಯೇನು? ಎಂದೆ ನಾನು. ನಿಮ್ಮ ಹೆಂಡತಿ ಇಷ್ಟು ಸಣ್ಣ ವಯಸ್ಸಿನಲ್ಲಿ ಕ್ಲಬ್ಬಿನ ಮಾನಿನಿಯರಲ್ಲೆಲ್ಲ ತುಂಬಾ ಜನಪ್ರಿಯಳಾಗಿರುವುದನ್ನು ನೋಡಿ ಹೆಮ್ಮೆಪಡುವುದಕ್ಕೆ ಬದಲಾಗಿ ನಿಮಗೇಕೆ ಆಕ್ರೋಶ ಎಂದೆ, ನೀನು–ಒಂದು ದಿನ. ಆಗ ಅದನ್ನು ತಮಾಷೆ ಎಂದುಕೊಂಡಿದ್ದೆ. ನಿನ್ನ ಮೇಲೆ ಆಕ್ರೋಶಪಟ್ಟು ಯಾವ ಸ್ವರ್ಗಕ್ಕೆ ಹೋಗಬೇಕು ನಾನು?

ಎಲಾ, ಇವನ ಗತಿಯೇನು? ಮನೆಯಲ್ಲಿ ಇವನು ಒಂಟಿ. ನಾವಿಷ್ಟು ಜನ ಹೆಣ್ಣುಗಳು. ಹಗಲು, ರಾತ್ರಿ ನಾವೇ ತುಂಬಿಕೊಂಡಿದ್ದರೆ ಇವನ ಜೊತೆಗೆ ಯಾರು ? – ಎಂಬ ಯೋಚನೆ ನಿನಗೆ ಬರಲೇ ಇಲ್ಲ. ತಡೆದು ತಡೆದು ಒಂದು ದಿನ ನಿನಗೆ ಅದನ್ನು ಹೇಳಿದರೆ ನೀನು ಅಂದದ್ದಾದರೂ ಏನು? ಉಳಿದ ಯಾವಾಗಲೂ ನಾನಿಲ್ಲವೆ ನಿಮ್ಮ ಹತ್ತಿರವೆ? ವಾರಕ್ಕೆ ಈ ಒಂದು ಗಂಟೆ, ಎರಡು ಗಂಟೆಯ ವಿನೋದವನ್ನು ಏಕೆ ಹಚ್ಚಿಕೊಳ್ಳುತ್ತೀರಿ? ನೀವು ಸೇರು ಅಂದದ್ದರಿಂದ, ಸೇರಿಸಿದ್ದರಿಂದ ಅಲ್ಲವೆ ನಾನು ಕ್ಲಬ್ ಸೇರಿದ್ದು- ಎಂದದ್ದು ನೆನಪಿನಲ್ಲಿದೆ. ಅವರು ಬಂದಾಗ ಅವರ ಜೊತೆಯಲ್ಲಿರಬೇಡವೆ ? ಅವರ ಮನೆಗಳಿಗೆಲ್ಲ ನಾನೇಕೆ ಹೋಗೋದು, ದೇವರು ಕೊಟ್ಟ ಹಾಗೆ ನಮಗಿರುವಾಗ ? ಇನ್ನೂ ಇಪ್ಪತ್ತು ಜನ ಬಂದರೂ ತೋಟವಿದೆ ; ಟೆನ್ನಿಸ್ ಅಂಗಳವಿದೆ ; ಚಿಲುಮೆ ಇದೆ ; ಸುತ್ತ ಕೂಡಲು ಆಸನಗಳಿವೆ ; ಸಾಕಾದಷ್ಟು ಸ್ಥಳಾವಕಾಶವಿರುವಾಗ ಇಲ್ಲಿಗೇಕೆ ಅವರನ್ನೇ ಕರಸಬಾರದು, ಬರಿಸಬಾರದು ಎಂದು ಹೀಗೆ ಮಾಡುತ್ತಿದ್ದೇನೆ ಎಂದೆ. ಆಗ ನಾನು ಸುಮ್ಮನಿರಲು "ಬೇಕಾದರೆ ನಾಳೆಯಿಂದ ನಿಲ್ಲಿಸುತ್ತೇನೆ. ಅಥವಾ, ನಾನೇ ಬೇರೆ ಸ್ಥಳಕ್ಕೆ ಎಲ್ಲಿಯಾದರೂ ಕ್ಲಬ್ಬಿಗಾಗಿ ಅರ್ಧ ಗಂಟೆ ಹೋಗಿ ಬರುತ್ತೇನೆ, ಬಿಡಿ"– ಎಂದುಬಿಟ್ಟೆ. ಇದು ಹೆಂಗಸರಲ್ಲಿ ನನಗೆ ಅಪಕೀರ್ತಿ ತರುವ ಪ್ರಯತ್ನವೊ ಮತ್ತಾವುದನ್ನಾನೊ ? ಅವರೆಲ್ಲ ನಾನು ಮುಸಂಡಿ, ಮಡ್ಡಿ ಎಂದುಕೊಳ್ಳಬೇಕು ! ಮೊದಲು ಅಷ್ಟು ಧಾರಾಳ ತೋರಿಸಿ, ಈಗ ಇದ್ದಕ್ಕಿದ್ದಂತೆ ಬಿಗಡಾಯಿಸಿದರೆ, ನಿನ್ನ ಮುಖ ಅವರೆದುರಿಗೆ ತಗ್ಗುವಂತೆ ಮಾಡುವ ಮಡೆಯನಾಗಲೆ ನಾನು ? ನೀನು ಹೇಗೇ ಮಾಡು ನನ್ನ ಹೆಂಡತಿ ಎಂಬ ಅಭಿಮಾನ ಇಲ್ಲವೆ ನನಗೆ ? ನಿನ್ನ ಹೆಮ್ಮೆ ಅವರ ಕಣ್ಣಲ್ಲಿ ತಗ್ಗುವುದನ್ನು ನಾನು ಕಾಣಬೇಕೆ? ಇದೆಲ್ಲಾ ನಾನೂ ಯೋಚಿಸಬೇಡ? ನಾನು ನಿನ್ನ ಮರ್ಯಾದೆಯನ್ನು ಕುರಿತು ಇಷ್ಟು ಬಗೆಯಲ್ಲಿ ಯೋಚಿಸುವಾಗ ನೀನು ನನ್ನ ದುರವಸ್ಥೆ ಚಿಂತಿಸಲಾರದೆ ಹೋದೆ.

ಅದು ಹಾಗಿರಲಿ, ನಿನ್ನ ಸೊಕ್ಕಿಗೆ ಕಾರಣ ನನಗೆ ಗೊತ್ತಿದೆ. ಒಂದು : ನೀನು ಚೆಲುವೆ ಎಂಬುದು. ಎರಡು : ಬೇಕಾದಷ್ಟು ಉಡಲು, ಉಣಲು ಇದೆ, ಒಳ್ಳೆಯ ಗಂಡ, ಮನೆ ಇವೆ ಎಂಬುದು. ಗಂಡ ಹಸುವಿನಂತೆ ಸಾಧುವಾದ ಪ್ರಾಣಿ ಎಂಬುದು. ಅಯ್ಯೋ ಗಂಡ ಹೆಂಡತಿ ಎಂದರೆ ಹಾಗಿರಬೇಕು ಎಂದು ಆಚೆ ಬೀದಿ ಪ್ರಭಾವತಮ್ಮನವರು, ಕಡೇ ಮನೆ ಕಮಲಮ್ಮ, ಸುಗ್ರೀವರಾಯರ ಗುಡಿ ಸುಂದರಮ್ಮ ಅಂದರಂತೆ. ಅದೇ ಎಲ್ಲರ ಅಭಿಪ್ರಾಯ ಎಂಬುದು. ಇದೆಲ್ಲ ನನಗೆ ಗೊತ್ತು. ಅವರ ಅಭಿಪ್ರಾಯ ಇನ್ನೇನಿದ್ದೀತು? ನಾವು ಸರಿಯಾಗಿ ಸಂಸಾರ ಮಾಡಬಾರದೆಂದೇನು ? ಹೆಂಡತಿ ಹಿಡಿಂಬಿ ಆಗಬೇಕೆ ? ಗಂಡನ ಕೈಯಲ್ಲಿ ಅನುಗಾಲವೂ ಕಾಳಗ ಕಟ್ಟಿ, ಅವನ ಹಿಂದೆ, ಮುಂದೆ, ನೆಟ್ಟಿಗೆ ಮುರಿಯುತ್ತ ಹಿಡಿಶಾಪ ಹಾಕುತ್ತಿರುವುದು ಸರಿಯೆ? ಗಂಡ ಹೆಂಡತಿಯನ್ನು ಛೀ, ಥೂ ಎಂದು ಸಿಕ್ಕಿದ ಹಾಗೆ ಚಚ್ಚಿ, ರಂಪ ಮಾಡುತ್ತಿದ್ದರೆ ಅವರಿಗೆ ಸರಿಯಂತೊ? ಅವರ ಮನೆಗಳಲ್ಲಿ ಅವರನ್ನು ಹೇಗೆ ನಡಸಿಕೊಳ್ಳುತ್ತಿದ್ದಾರೊ ಏನು

ಮಾಡುತ್ತಿದ್ದಾರೊ ನಿನಗೆ ಗೊತ್ತಾಗುವ ಬಗೆ ಹೇಗೆ ? ಅಲ್ಲದೆ ಅದೆಲ್ಲ ಕಟ್ಟಿಕೊಂಡು ನನಗೇನು? ನಿನಗೆ ತಾನೇ ಏಕೆ ? ನಮ್ಮ ಬದುಕು ನಮ್ಮದು. ಅಮೃತ ಆದರೆ ಅಮೃತ ; ವಿಷವಾದರೆ ವಿಷ.

ಅಲ್ಲ : ನಿನ್ನನ್ನು ಚೆಲುವೆಯಲ್ಲ ಎಂದವರು ಯಾರು? ನೀನು ಚೆಲುವೆಯೆಂದೇ ಅಲ್ಲವೆ ನಾನು ಮದುವೆಯಾದ್ದು? ನಾನು ಮೇಲೆ ತಾನು ಮೇಲೆ ಎಂದು ಮೈಮೇಲೆ ಬಿದ್ದು ಬಂದವರನ್ನೆಲ್ಲ ಬಿಟ್ಟು ನಿನ್ನನ್ನು ಮದುವೆಯಾದ್ದು ಇನ್ನೇತಕ್ಕೆ ಎಂದುಕೊಂಡಿದ್ದೀಯೆ? ಆದರೆ ಲೋಕದಲ್ಲಿ ಎಷ್ಟು ಮಂದಿ ಚೆಲುವೆಯರಿರಲಿಲ್ಲ? ಈಗಿಲ್ಲ? ಇನ್ನು ಮುಂದೆ ಹುಟ್ಟುವುದಿಲ್ಲ? ನೀನೊಬ್ಬಳೇ ಏನು ಚೆಲುವೆ ಲೋಕಕ್ಕೆಲ್ಲ? ಸೀತೆ, ದ್ರೌಪದಿ, ಕ್ಲಿಯೊಪ್ಯಾಟ್ರಾ, ಹೆಲೆನ್, ಮಾಡ್‌ಗನ್ಸ್, ಬಿಯಾಟ್ರಿಸ್? ಆ ಕೆಲವರಲ್ಲಿ ಒಬ್ಬೊಬ್ಬರಿಗಾಗಿ ಒಂದೊಂದು ರಾಜ್ಯ ಉರಿದು ಹೋಯಿತೆ? ದೊಡ್ಡ ಕಾವ್ಯಗಳು ಹುಟ್ಟಿದವೆ? ನೀನು ಓದಿಲ್ಲವೆ? ಅವರಿಗಿಂತ ನೀನು ಚೆಲುವೆಯೆ? ನೀವು ಅವರನ್ನೆಲ್ಲ ಕಂಡಿದ್ದೀರ ಎನ್ನಬೇಡ. ನೀನೂ ಕಂಡಿರಲಿಲ್ಲ. ಅವರು ಚೆಲುವೆಯರೆಂದಿದ್ದಾರೆ ಚರಿತ್ರೆಯಲ್ಲಿ; ಕಾವ್ಯದಲ್ಲಿ. ಬದುಕಿರುವವರು ಪುಸ್ತಕಗಳಲ್ಲಿರುವಷ್ಟು ಎಂದಿಗೂ ಚೆನ್ನಾಗಿರಲಾರರು. ಆದ್ದರಿಂದ ನೀನು ಅಷ್ಟು ಚೆಲುವೆ ಎನ್ನಲಾರೆ. ಅದು ಹೇಗೇ ಆದರೂ ನಿನ್ನನ್ನೂ ಒಂದು ಪ್ರಶ್ನೆ ಕೇಳಲಿಯ? ಅದಕ್ಕೆ, ಎಂದರೆ ನಿನ್ನ ಚೆಲುವಿಗಾಗಿ, ನೀನೇನು ಮಾಡಿದ್ದು ಅಂತೇನೆ ? ನಿಮ್ಮ ಅಪ್ಪ, ನಿಮ್ಮ ಅಮ್ಮ ಚೆನ್ನಾಗಿದ್ದಾರೆ ; ನೀನು ಚೆನ್ನಾಗಿದ್ದೀಯೆ. ಅವರ ಮೂಗು, ಇವರ ಮುಖ, ಇಬ್ಬರ ಹೊಳಪು ಬಣ್ಣ, ಆರೋಗ್ಯ ನಿನಗೂ ಬಂದಿವೆ. ಅದಕ್ಕೆ, ನೀನೇನು ಕಷ್ಟಪಟ್ಟು ಸಂಪಾದಿಸಿರುವುದು? ಅವರ ಕೈಯಲ್ಲಿಯೂ ಬೇಕಾದಷ್ಟು ಹಣ, ಅನುಕೂಲ ಇತ್ತು. ಬಹುಕಾಲ ಒಬ್ಬಳೇ ಮಗಳು, ಚೊಚ್ಚಿಲು ಎಂದು ನಿನ್ನನ್ನು ಆರೈಕೆ ಮಾಡಿ ಮುದ್ದಿನಿಂದ ಬೆಳಸಿದರು. ಆದ್ದರಿಂದ ಆ ಬಳುಕು, ವಿಲಾಸ, ಆ ನವುರು, ಆ ಮಖಮಲ್ ಚಕ್ಕಳ, ಗುಲಾಬಿ ರಂಗಿನ ಮುಖ, ಆ ನುಣುಮ್ಮೆ ಉಂಟಾದವು. ಆ ಪದಾರ್ಥವನ್ನು ಕೈ ತಣ್ಣಗೆ ಮಾಡಿ ನನಗೆ ಅವರು ಧಾರೆ ಎರೆದು ಒಪ್ಪಿಸಿದರು.

ಇನ್ನು ಇಲ್ಲಿಗೆ ನೀನು ಬಂದ ಮೇಲೆ ನಿನ್ನ ಚೆಲುವಿಗೆ ಎಷ್ಟು ಬೇಸಾಯ ನಡೆದಿಲ್ಲ? ಆ ವೆಚ್ಚಕ್ಕೆ ನಾಲ್ಕು ಕಾರ್ಖಾನೆ ನಡೆಯಬಹುದಿತ್ತು. ದಿನಕ್ಕೆ ನಾಲ್ಕು ಸಲ ಉಟ್ಟರೆ ಬೇರೆ ಬೇರೆ ಈಡುಜೋಡಿನ ಹೊಂದಿಕೆಯ ಬಟ್ಟೆಗಳಿವೆ. ಆರಿಸಿ ಒಂದು ಸಲ ಹಾಕಿಕೊಂಡ ಸೆಟ್ ಪುನಃ ಹಾಕಿಕೊಳ್ಳಬೇಕಾಗದಂತೆ ವಿಧವಿಧ ಐಠಕ್ಕುಗಳಲ್ಲಿ ಮೆರೆಯಲು: ಬಳೆ, ಸರ, ಮೂಗುತಿ, ಓಲೆ, ಉಂಗುರ, ಒಡ್ಯಾಣ ಇವೆ. ಹತ್ತು ಜೊತೆಯಾದರೂ ಕಾಲಿನೋವು ಇವೆ. ನಿನ್ನ ಪೌಡರೊ, ಬಣ್ಣಗಳೊ, ತೈಲಗಳೊ, ಬಾಚಣಿಗೆಗಳೊ? ಆ ಒಂದೊಂದು ಲಾಟಿಂದ ನಾಲ್ಕಾರು ಬಡವರ ಮನೆ ಸಂಸಾರ ನಡೆದೀತು. ನಾನು ಬೇಡ ಎನ್ನುವವನಲ್ಲ. ನನ್ನ ಹೆಂಡತಿಯಲ್ಲವೆ ಮಾಡಿಕೊಳ್ಳಲಿ ಎಂದೆ. ಒಂದು ಉಗುರು ಹರಗಲು ಎಷ್ಟು ಲೈಮ್ ಜ್ಯೂಸ್, ಗ್ಲಿಸರೀನ್, ಎಷ್ಟು

ಬಗೆಯ ಸಣ್ಣ ಅರ, ಎಷ್ಟು ಕ್ಲಿಪ್ಪು, ಕುಡುಕತ್ತರಿ, ಎಷ್ಟು ಷಾಮಾಯ್ ಚಕ್ಕಳ, ಬುರುಸು, ಎಷ್ಟು ಉಗುರಂಟು, ರಂಗು, ಸುಗಂಧದ್ರವ್ಯ! ಇವೆಲ್ಲ ನಿಮ್ಮ ಮೆಚ್ಚಿಗೆಗೆ ತಾನೇ ಎಂದ ದಿನಗಳೂ ಇಲ್ಲದೇ ಇಲ್ಲ. ನೀನು ಚೆನ್ನಾಗಿದ್ದರೆ ಚೆನ್ನ ಎಂದು ಅವಕ್ಕಾವುದಕ್ಕೂ ನಾನು ಆಕ್ಷೇಪಿಸಿಲ್ಲ.

ಯಾವುದಕ್ಕೆ ನಾನು ನಿನಗೆ ಕಡಮೆ ಮಾಡಿದೆ : ಗಾಡಿಗೇ? ಮನೆಯಲ್ಲಿ ನಿನಗೊಂದು ನನಗೊಂದು ಎರಡು ಕಾರುಗಳಿವೆ. ಅಡಿಗೆಯವರಿದ್ದಾರೆ. ಪರಿಚಾರಕರಿದ್ದಾರೆ. ಸೈರಂಧ್ರಿಯರಿದ್ದಾರೆ. ಮನೆಯ ಉಲ್ಲಾಸವಿದೆ. ಕಬ್ಬಿಣದ ಪೆಟ್ಟಿಗೆಯ ಬೀಗದ ಕೈ ನಿನ್ನಲ್ಲಿಯೇ ಇರುತ್ತದೆ. ಒಂದು ದಿನ ನಾನು ನಿನ್ನನ್ನು ಏತಕ್ಕಾದರೂ ಲೆಕ್ಕ ಕೇಳಿದ್ದೇನೆಯೆ? ನಿನ್ನ ಧಾರಾಳಕ್ಕೆ ಅಡ್ಡಿ ಬಂದಿದ್ದೇನೆಯೆ ? ನನಗಿಷ್ಟವಿಲ್ಲದ ಕಡೆ ನನ್ನನ್ನು ಹೇಗೊ ಪುಸಲಾಯಿಸಿ ಕರೆದುಕೊಂಡು ಹೋಗಿ ಹತ್ತು–ನೂರು–ಸಾವಿರ ಚಂದಾ ಹಾಕಿಸಿ ಗಾಸಿ ಪಡಿಸುತ್ತಿದ್ದ ಥಗ್ಗು ನೀನೇ ಹೊರತಾಗಿ ನಾನೆಂದಾದರೂ ನಿನ್ನ ಇಷ್ಟಕ್ಕೆ ವಿರೋಧವಾಗಿ ನಡೆದವನೆ? ಇಲ್ಲಿಗೆ ಅಲ್ಲಿಗೆ ಹೋಗಬೇಡ, ಬರಬೇಡ, ಈ ಪುಸ್ತಕ ಓದಬೇಡ, ಆ ಆಟ ಕೂಡದು ಎಂದಿದ್ದೇನೆಯೆ ? ಒಂದೇ ಒಂದು ಸಲ ಹಾಗೆ ಮಾಡಿದ್ದರೆ ಹೇಳು. ನಿನ್ನನ್ನು ನಾನು ಪೂರ್ತಿ ನಂಬಿದೆ. ನನ್ನನ್ನು ಒಂಟಿಯಾಗಿ ಬಿಡದೆ ಕಾಪಾಡಿಕೊಳ್ಳುತ್ತಾಳೆ, ಪರವಾಯಿಲ್ಲ, ಜಾಣಳಾಗುತ್ತಿದ್ದಾಳೆ, ಇವಳಿಗೆ ನನ್ನ ಅಗತ್ಯಗಳ ಅರ್ಥ ಆಗಿದೆ, ಎಲ್ಲ ಇಂಗಿತ ತಿಳಿದುಕೊಳ್ಳುತ್ತ ಇದ್ದಾಳೆ, ನನ್ನ ಮನಸ್ಸು ಬಲ್ಲ ಹುಡುಗಿ, ಆರಿಸಿದ ಪದಾರ್ಥ ನೆಟ್ಟಗಾಯಿತು, ಇನ್ನು ಮೇಲೆ ಯಾಜಮಾನ್ಯವನ್ನು ಅವಳಿಗೆ ಒಪ್ಪಿಸಬಹುದು, ನಾನು ನೆಮ್ಮದಿಯಾಗಿ ನಿದ್ರೆ ಮಾಡಬಹುದು- ಎಂದು ಕೊಂಡಿದ್ದೆ. ನೀ ಕೊಟ್ಟೆ ಕೆಲಸ. ದೊಡ್ಡವರು ಹೇಳಿದ್ದು ಅಸತ್ಯವಲ್ಲ : ಹೆಣ್ಣನ್ನು ನೆಚ್ಚಬಾರದು. ಎಷ್ಟೇ ಬಲ್ಲವಳಾಗಲಿ ದಕ್ಷಳಾಗಲಿ ಒಳ್ಳೆಯವಳಾಗಲಿ ಹೆಂಗಸು ಹೆಂಗಸೇ. ಅಷ್ಟಲ್ಲದೆ ವಾಕ್ಯಗಳನ್ನು ಹೇಳುವುದಕ್ಕೆ ಅವರೇನು ದಡ್ಡರೆ?

ಮೊನ್ನೆ ಇಲ್ಲಿ ನಾಯಿ ಷೊ ಆಯಿತು ; ಲಾಲ್‌ಬಾಗ್ ಷೊ ಆಯಿತು. ಎಂಟು ವರ್ಷಗಳ ಕಾಲ ಜೊತೆಯಲ್ಲಿ ಹೋದೆವು. ಆ ತಾರೀಕುಗಳು ನಿನಗೆ ಗೊತ್ತಿರಲಿಲ್ಲವೊ? ಗ್ರೇಟ್ ಡೇನ್ ಕೊಂಡುಕೊಳ್ಳಬೇಕು ಒಂದನ್ನು ಎಂದು ಗೊತ್ತಾಗಿರಲಿಲ್ಲವೆ ? ಈ ಸಲ ತುಂಬಾ ಚೆನ್ನಾದ ಡೇನ್ ಬಂದಿತ್ತಂತೆ. ನಿನಗೇ ಇಲ್ಲ. ಚಾರ್ಲಿ ಚಾಪ್ಲಿನ್ ಚಿತ್ರ ಬಂದಿತ್ತು. ಅಷ್ಟು ದೂರ ಹೋಗಿ ಒಬ್ಬನೇ ಏನು ಒಳಕ್ಕೆ ಹೋಗುವುದೆಂದು ಬೇಸರದಿಂದ ಹಿಂದಕ್ಕೆ ಬಂದದ್ದಾಯಿತು. ನಿನಗೇನು ಇವನ್ನೆಲ್ಲ ಕಟ್ಟಿಕೊಂಡು ? ನಿಮ್ಮ ಆ ದರಬೇಸಿ ಊರಿಗೆ ಒಂದು ಚೆನ್ನಾದ ಚಿತ್ರ ಬರುವುದಿಲ್ಲ. ಕೆಲಸವಿಲ್ಲದವರು ತಂಪಾಗಿ ವಿಶ್ರಮಿಸಲು ತಕ್ಕ ಸ್ಥಲ ಒಂದಾದೀತಲ್ಲದೆ ಇನ್ನಾವುದಕ್ಕೆ ಅಲ್ಲಿ ಅವಕಾಶವುಂಟು ? ಜನಕ್ಕಿಂತ ಮನೆ ಜಾಸ್ತಿ, ಮನೆಗಿಂತ ರಸ್ತೆಗಳು ಜಾಸ್ತಿ ನಮ್ಮೂರಲ್ಲಿ, ಬೆಂಗಳೂರನ್ನು ಬಿಟ್ಟರೆ ಇನ್ನು ಊರುಂಟೆ ಎನ್ನುತ್ತಿದ್ದವಳು ನೀನಲ್ಲವೆ ? ನಿನ್ನ ಹುಟ್ಟಿದೂರ ಮಮತೆ ಅಷ್ಟಿರುವಾಗ

ನಾನು ಅದನ್ನು ಇನ್ನು ಹೇಗೆ ವಿವರಿಸಲಿ ? ನಿನ್ನ ಮನಸ್ಸು ಗೊತ್ತಾಯಿತು. ನನ್ನ ಮೇಲೆ ನಿನಗೆಷ್ಟು ಧಾರಾಳವಿದೆ ಎಂಬುದನ್ನು ನಿಮ್ಮವರೆಲ್ಲರಿಗೂ ತೋರಿಸಕೊಡಬೇಕು ಎಂದು ನೀನು ಈ ಸಲ ಅಲ್ಲಿಗೆ ಹೋಗಿರುವುದು. ಅದಕ್ಕೆ ಹದಿಹಾಕಿ ಹೊರಟೆ. ಅದರ ಮೇಲೆ ಮನೆ ಕಟ್ಟುವವನು ನಾನು ಎಂದುಕೊಂಡೆ. ಅಯ್ಯೋ ಬೆಪ್ಪೆ ! ನಿನ್ನಲ್ಲಿ ಎಷ್ಟು ಪ್ರೀತಿಯುಳ್ಳವನಾದರೂ ಇಂಥ ತಂತ್ರಕ್ಕೆ ಒಳಪಡುವ ಹೆಡ್ಡ ನಾನು ಎಂದುಕೊಂಡೆಯೇನು ?

ಎಷ್ಟಾದರೂ ನಾನು ಗಂಡು. ಗಂಡ. ನನ್ನ ಮಾತು ನೀನು ನಡಸುತ್ತಿರುವುದಾದರೆ ಸಂಸಾರ ಸುಖ ಅಲ್ಲವೆ ? ನಡಸುತ್ತಿರದಿದ್ದರೆ ಹೋಗಲಿ. ಹಾಗೆ ನನಗೆ ಎನ್ನಿಸುವಂತೆ ನಡೆಯುತ್ತಿದ್ದರೂ ಒಳಿತೇ. ಜಾಣಳಾದ ಹೆಂಗಸು ಗಂಡಸನ್ನು ಹಾಗೆ ನಡಸುತ್ತಾಳೆ ಎನ್ನುತ್ತಾರೆ. ನಿನ್ನಾಸೆಯೊ ? ನಿನ್ನ ಆಧಿಪತ್ಯದ ಮೊನೆ ನನಗೆ ತೋರುವಂತೆ ಮಾಡಬೇಕೆಂಬುದು. ಅದು ಹೇಗೆ ನೆರವೇರೀತು ? ನಾನೇನು ಶಾನುಭೋಗರ ತಟ್ಟೆ? ಗಾಂಪರೊಡೆಯರ ತುರಂಗವೆ ? ನನ್ನಂಥ ಸಜ್ಜನನಾದವನನ್ನು ನಡಸಿಕೊಳ್ಳುವ ರೀತಿಯೆ ಇದು ? ತಿಳಿದವರು ಏನೆಂದುಕೊಂಡಾರು ? ನಿನ್ನ ಮನಸ್ಸು ತಾನೆ ಹೇಗೆ ಒಪ್ಪಿತು? ಅದನ್ನೂ ನೀನು ಕೇಳಿಕೊಳ್ಳಬಾರದೆ ? ತಲೆ ತಗ್ಗಿಸುವುದೇಕೆ ? ನೆಲ ಬರೆಯುವುದೇಕೆ? ಕೈ ಬಳೆಯನ್ನು ಮೇಲೆ ಕೆಳಗೆ ಸರಿಸಿಕೊಳ್ಳುವುದೇಕೆ ? ಕಾಗದ ಬರೆದರಾದೀತು ಎಂಬುದೇಕೆ? ನಿಜವಾಗಿ ಬುದ್ಧಿ ಇಲ್ಲದ ಜನ ನೀವು.

ಬೇಡ, ಬೇಡ ಎಂದರೆ ನಿಮ್ಮಪ್ಪನ ಮನೆಗೆ ಹೊರಟುಹೋದೆ. ಹೋಗು. ಅವರಲ್ಲಿ ಸದ್ಯಕ್ಕೆ ಮದುವೆಯೊ ಮುಂಜಿಯೊ ಮಂಗಳವೊ ಯಾರಿಗಾದರೂ ಅನ್ನಪ್ರಾಶನವೊ ಸೀಮಂತವೊ ? ನಿಮ್ಮಪ್ಪನಿಗೆ ಎಂಬತ್ತರ ಸಾವಿರಚಂದ್ರಬಿಂಬ ದರ್ಶನವೊ ? ನಮ್ಮಪ್ಪ ಬದುಕಿದ್ದರೆ ಅವರಿಗಿಂತ ಹತ್ತು ವರ್ಷ ಹಿರಿಯರಾಗುತ್ತಿದ್ದರು. ನೀನು ಹೋಗದೆ ಇದ್ದರೆ ಅವರಿಗೆ ಕಷ್ಟ ನಷ್ಟ ಆಗುತ್ತಿತ್ತೊ ? ಆಗಬೇಕಾದುದು ಏನಾದರೂ ನಿಂತು ಹೋಗುತ್ತಿತ್ತೊ? ಅವರಿಗೆ ಮನೆಯಲ್ಲಿ ಬೇರೆ ಮಕ್ಕಳು ಇರಲಿಲ್ಲವೆ? ಕರೆಯುತ್ತಾರೆ. ನೂರು ಹೇಳಿ ಕಳಿಸುತ್ತಾರೆ. ತಂದೆ ತಾಯಿಗಳಿಗೆ ಮಕ್ಕಳು ಬೇಡವೆಂದವರು ಯಾರು ? ಹಾಗೆಂದರೆ ಕರೆದಾಗಲೆಲ್ಲ ತವರಿಗೆ ಹೋಗಿರುವುದಕ್ಕೇ ಮದುವೆಯಾಗಿ ಗಂಡನ ಮನೆಗೆ ಬರುವುದು? ಈಗ ಬರುವುದಕ್ಕಾಗುವುಲ್ಲ, ಅವರು ಒಂಟಿ, ನಾನು ಅವರನ್ನು ಬಿಟ್ಟಿರಲಾರೆ ಎನ್ನುವುದಕ್ಕಾಗುತ್ತಿರಲಿಲ್ಲವೊ ? ಹಿಂದೆ ನೂರು ಸಲ ಅಂದಿರಲಿಲ್ಲವೊ ? ಈ ಸಲವೂ ಅಂದಿದ್ದರೆ ಏನು ಖರ್ಚಾಗುತ್ತಿತ್ತು ? ಪತಿಭಕ್ತಳಾದ ಮಗಳನ್ನು ಕಂಡು ಅವರಿಗೆ ಅಭಿಮಾನ ಕುಗ್ಗುತ್ತಿತ್ತೇನು ? ನೀನೇ ಹೇಳು. ಅಷ್ಟರಮೇಲೆ ಬೇಕಾಗಿದ್ದರೆ, ಕರೆದಿದ್ದರೆ ನಾನು ನೀನೂ ಇಬ್ಬರೂ ಕಾರಲ್ಲಿ ಹೋಗಿ ಒಂದು ದಿನ ಎರಡು ದಿನ ಇದ್ದು ಹಿಂದಕ್ಕೆ ಬರಬಹುದಿತ್ತು. ಮುಂದಕ್ಕೆ ಇನ್ನೆಲ್ಲಿಗಾದರೂ ಹೋಗಿ ಬರಬಹುದಿತ್ತು. ನಿನಗೆ ಅದು ಬೇಕಾಗಲಿಲ್ಲ. ನನ್ನ ಕೈಯಲ್ಲಿ ವಾದಮಾಡಿ ಈ ಸಲ

ಹಟಮಾಡಿ ಹೋದೆ. ಹೋಗು. ಇರು. ಅಲ್ಲಿಯೇ ಇರು. ಇನ್ನು ಇಲ್ಲಿಗೆ ಬರುವುದೇ ಬೇಡ.

ಬೇಡ ಅಂತೇನೆ. ಮೂರು ವಾರದ ಮೇಲಾಯಿತು ನೀನು ಹೋಗಿ. ಒಂದು ಕಾಗದ ಬರೆದೆಯ ? ಸತ್ತಿರ, ಬದುಕಿದ್ದೀರ ಎಂದು ವಿಚಾರಿಸಿದೆಯ ? ನಾನು ಮೊದಲು ಕಾಗದ ಬರೆಯಬೇಕೆಂಬುದು ನಿನ್ನ ಹಟ. ಬರೆಯುವುದಿಲ್ಲವೆಂದು ನಾನು ಹೇಳಿರಲಿಲ್ಲವೆ? ನಿನ್ನಿಷ್ಟದಂತೆ ಹೋಗಬಹುದು, ನನಗೂ ಅದಕ್ಕೂ ಸಂಬಂಧವಿಲ್ಲ ಎಂದುದು ನಿನಗೆ ನೆನಪಿರಬೇಕಲ್ಲ ? ಒಂದಿಷ್ಟು ಮರವಿಲ್ಲ ನಿನಗೆ ! ಏನೇನೊ ಹೇರಿಸುತ್ತಿರುತ್ತೀಯೆ ನನ್ನ ಮೇಲೆ. ಆ ಮಾತೆಲ್ಲ ಏಕೆ ? ನಿನಗೇನು ಬೇಕೊ ತರಿಸಿಕೊ. ತೆಗೆದುಕೊ. ಬೇಕಾದರೆ ಹಣ ಕೇಳು, ಕಳಿಸಿಕೊಡುತ್ತೇನೆ. ಈ ಮನೆಯನ್ನೇ ನಿನಗೆ ಬಿಟ್ಟುಕೊಡುತ್ತೇನೆ. ಇನ್ನು ನಿನ್ನ ಪಾಡು ನಿನ್ನದು ; ನಿನ್ನ ಚಿಂತೆ ನನಗೆ ಬೇಕಿಲ್ಲ.

ಶಾಸ್ತ್ರಿಗಳಿಗೆ ಆ ಮಾತು ಹೇಳಿ ನನ್ನಿಂದ ಕಾಗದ ಬರಸಬೇಕೆಂದು ಪರ್ಯಾಯವಾಗಿ ಯತ್ನಮಾಡಿದೆ. ಅಲ್ಲವೆ ? ನನಗೆ ಈ ಆಟ ಅರ್ಥವಾಗುವುದಿಲ್ಲವೆ ? ಕಾಗದ ಬರೆಯುವುದು ಅಲ್ಲ ಮುಖ್ಯ ; ತತ್ವ ಮುಖ್ಯ. ನಡವಳಿಕೆ ಮುಖ್ಯ. ನಾನೆಣಿಸಿ ಕೊಂಡಂತಹ ಹೆಂಡತಿಯೇ ನೀನಾಗಿದ್ದಿದ್ದರೆ ನಾನು ಬರೆಯುವುದಕ್ಕೆ ಕಾಯುತ್ತಿದ್ದೆಯ? ಕೋಪಗೊಳಿಸಬಾರದೆಂದು ಎಂದೋ ಈವರೆಗೆ ಹಿಂದಿರುಗುತ್ತಿದ್ದೆ. ನಿನಗೆಲ್ಲಿ ಆ ಯೋಚನೆ? ಅಥವಾ, ನನ್ನಿಂದ ಬಾ ಎಂದು ಕರಸಿಕೊಳ್ಳದೆಯೆ ತವರಿಂದ ಹಿಂತಿರುಗಿ ಬರುವುದು ಹೇಗೆ ಎಂಬ ಆತ್ಮಗೌರವವೊ? ನಿಮ್ಮಪ್ಪನಿಗೆ ನಿಮ್ಮಮ್ಮನಿಗೆ ತೋರಿಸಿಕೊಳ್ಳುವುದಕ್ಕೆ. ಗಂಡ ನಿನಗೆ ಹೇಗೆ ಬಾಯಿಬಿಟ್ಟುಕೊಂಡಿದ್ದಾನೆ ಎಂದು ಅವರಿಗೆ ತಿಳಿಸಿ ಹಿಗ್ಗುವುದಕ್ಕೆ : ಅಲ್ಲ ? ನಿನಗೆ ಇಲ್ಲಿಗೆ ಬರಲು ನೆಪವಾಗಿ ನನ್ನಿಂದ ಕರೆಬೇಕು ಎಂದೇನು ? ಅಲ್ಲಿಗೆ ನಿನ್ನನ್ನು ನಾನು ಕಳಿಸಿದ್ದಿದ್ದರೆ ನಿನಗೆ ನಾನು ಕರೆಕಳಿಸಬಹುದಾಗಿತ್ತು. ಅಲ್ಲದೆಯೊ ನಿನ್ನ ಮನೆಗೆ ನೀನು ಬರುವುದಕ್ಕೆ ಯಾರೇಕೆ ಹೇಳಿಕಳಿಸುವುದು ? ಈಗ ನೀನೇ ಬರಬೇಕಿತ್ತು. ಬಾರದಿದ್ದರೆ ಬೇಡ. ಎಷ್ಟು ದಿನ ನಿನಗೆ ಅಲ್ಲಿಯೇ ಇರಬೇಕೆನಿಸುತ್ತದೆಯೊ ಅಷ್ಟು ದಿನವೂ ಇರು. ಬರಲೇಬೇಡ ಅಂದೆನೇ.

ನನಗೂ ಕೋಪ ಬರುತ್ತಿದೆ : ನಿನ್ನೆ ಮೊನ್ನೆಯಿಂದ ಬಹಳ ಕಷ್ಟಪಟ್ಟು ತಡೆದು ಕೊಂಡಿದ್ದೇನೆ. ನೀನು ಬಂದರೂ ಮನೆಯ ಒಳಗೆ ಬರಿಸಕೂಡದು, ಹೊರಗೇ ನಿಂತಿರಲಿ, ಹಿಂದಕ್ಕೆ ತವರಿಗೆ ಹೋಗಲಿ ಎಂದು. ಹಾಲಿನಂಥ ನಮ್ಮ ಸಂಸಾರವನ್ನು ಕಂಡಿದ್ದವರು ಆಮೇಲೆ ಇನ್ನೇನನ್ನಾದರೂ ಭಾವಿಸಿದರೆ ನನಗೂ ಮಾನವಲ್ಲ ; ನಿನಗೂ ಅಲ್ಲ. ನೀನಿಲ್ಲಿ ಬರುವುದು, ನಾನು ಒಳಕ್ಕೆ ಬಾರಗೊಡದಿರುವುದು ತರವಲ್ಲ. ಆದ್ದರಿಂದ ಬರಬೇಡ. ಬಲಾತ್ಕಾರದಿಂದ ಬರುವ ಪ್ರಯತ್ನ ಮಾತ್ರ ಬೇಡ. ಮನೆಯಲ್ಲಿ ಹೊಸದಾಗಿ ತಂದ ಅಲ್ಸೇಷಿಯನ್ ಇದೆ. ತೋಳ ಅದು ಮೊದಲೇ. ನೀನು ಅದನ್ನು ಕೀಟಲೆ ಮಾಡುತ್ತಿ ಎಂದು ನಿನ್ನ ಮೇಲೆ ಅದಕ್ಕೆ ಸ್ವಲ್ಪ ಅಸಮಾಧಾನವೂ ಉಂಟು. ಅದರ

ಬುದ್ಧಿ ತಬ್ಬಲಿ ಬುದ್ಧಿ. ನಾನು ಅದರ ಮೈತಡವಿದರೆ ನಿನ್ನನ್ನು ಜೀವದ ಒರಸೆ ಬಿಡುವುದಿಲ್ಲ. ನಾನು ಮಾಡಿಕೊಳ್ಳಬೇಕಾದ ಕೋಪವನ್ನು ಆ ನಾಯಿ ಮಾಡಿಕೊಂಡರೆ ನಿನ್ನ ಪಾಡು ಅದರ ಪಾಲಾಗುತ್ತದೆ. ಸ್ತ್ರೀಹತ್ಯ ಕಟ್ಟಿಕೊಳ್ಳಲು ನನಗೆ ಇಷ್ಟವಿಲ್ಲ.

ಛೀ ; ಏನು ಮಾತಾಡುತ್ತಿದ್ದೇನೆ! ಇಷ್ಟು ದಿನ ಸಾತ್ವಿಕನೆನ್ನಿಸಿಕೊಂಡವನು ಇಂಥ ಯೋಚನೆ ಮಾಡುವುದೆ? ನಿನ್ನ ಮೇಲೆ ನಾಯಿ ಬಿಡುವುದಿಲ್ಲ. ನೀನು ಬಾ; ಬಂದು ಮನೆಯಲ್ಲಿರು. ಎಲ್ಲವನ್ನೂ ತೆಗೆದುಕೊಂಡು ಸುಖವಾಗಿರು. ಬ್ಯಾಂಕಿಗೆ ಹೇಳಿರುತ್ತೇನೆ, ಬೇಕಾದಾಗ ಬೇಕಾದಷ್ಟು ತರಿಸಿಕೊ; ಬೇಕಾದ್ದು ಮಾಡಿಸಿ ತಿನ್ನು ; ನಿನ್ನ ಸಖಿಕರನ್ನೆಲ್ಲಾ ಕರಸಿ ನಿತ್ಯಸಮಾರಾಧನೆ ಮಾಡು. ರಾಣಿಯ ಹಾಗೆ ವಾಸಮಾಡು. ನಾನು ಇದೇ ಮನೆಯಲ್ಲಿ ಇರುವುದಿಲ್ಲ ಅಷ್ಟೆ. ಈ ಊರು ಬಿಟ್ಟು ಇನ್ನೆಲ್ಲಿಗಾದರೂ ಹೋಗುತ್ತೇನೆ. ನಾಲ್ಕು ವರ್ಷ ಸುತ್ತಾಡಿ ಬರುತ್ತೇನೆ. ಬರುತ್ತೇನೆಯೊ–ಇಲ್ಲ ಹೇಗೊ ಅದು ಬೇರೆ ಮಾತು. ಈಗ, ಸಂಜೆ ಆರು ಗಂಟೆ, ನಾಳೆ ಬೆಳಗ್ಗೆ ಡೆಲ್ಲಿ, ನಾಳಿದ್ದು ಮಾಸ್ಕೊ, ಲಂಡನ್, ಪ್ಯಾರಿಸ್, ರೋಂ ಸುತ್ತಾಡಿ ಬರುತ್ತೇನೆ. ಬೆಂಗಳೂರು ಮೈಸೂರುಗಳಲ್ಲಿ ಏನಿದೆ ಕಣ್ಣಿಗೆ ಹಬ್ಬ! ಅಲ್ಲಿಯಾದರೂ ಹೋಗಿ ಬರುತ್ತೇನೆ. ಬೇಕಾದ್ದು ಸಿಕ್ಕುವುದಂತೆ. ಹಿಂದೆ ಜೊತೆಗೆ ಹೋಗೋಣ ಎಂದಾಗ ನೀನು ಸದ್ಯಃ ಬೇಡವೆಂದಿದ್ದೆ. ಈಗ ನಾನಾದರೂ ಹೋಗಿ ಬೇಸರ ತೀರಿಸಿಕೊಳ್ಳುತ್ತೇನೆ. ನನಗೇನು ಬೇಕು? ಬೇರೆ ಹೆಣ್ಣಿನ ಆಸೆ ನನಗಿಲ್ಲ ಎಂಬುದು ನಿನಗೆ ತಿಳಿದಿದ್ದರಿಂದಲ್ಲವೆ ನಿನ್ನ ಸೊಕ್ಕು? ನಿಜ. ಅಂಥವಳು ಮಾತು ಕೇಳದೆ ಹೊರಟು ಹೋಗಿ ಮೂರುವಾರ ಅಪ್ಪ ಅಮ್ಮನ ಉಡಿಯಲ್ಲಿ ಸೇರಿ ಕುಳಿತುಕೊಂಡೆಯಲ್ಲಾ, ಇನ್ನು ನಿನ್ನ ಆಸೆ ನನಗೇಕೆ? ಹೋಗುತ್ತೇನೆ. ಬೇಸರ ಕಳೆದುಕೊಂಡು ಕಾಲ ಹಾಕುತ್ತೇನೆ. ತಿರುಗಿ ಮನಸ್ಸು ತಿರುಗಿದರೆ, ಇತ್ತ ಹಿಂದಿರುಗುತ್ತೇನೆ. ಇಲ್ಲವಾದರೆ ಎಲ್ಲಿಯೊ ಒಂದು ಕಡೆ. ಒಬ್ಬನಿಗೆ ಏನಾಗಬೇಕು? ಎಲ್ಲಿಯಾದರೂ ಆಗುತ್ತದೆ. ಹಣ ಕೊಟ್ಟರೆ ಸಿಕ್ಕದ ಪದಾರ್ಥ ಯಾವುದಿದೆ ? ನೀನೇ ಮಾಡಬೇಕು ಎಂಬುದು ಒಂದಿಲ್ಲ. ಈ ೨೦ ದಿನ ನಡೆಯಲಿಲ್ಲವೆ. ೨೦ ವರ್ಷವೂ ನಡೆಯುತ್ತದೆ. ನೀನು ನಿಮ್ಮಪ್ಪನ ಮನೆಯಲ್ಲಿಯೊ ಈ ಮನೆಯಲ್ಲಿಯೊ ಇಷ್ಟತೋರಿದ ಕಡೆ ಆಡಿಕೊಂಡಿರು. ಆಳಿಕೊಂಡಿರು. ಒಂಟಿ ಸೌಭಾಗ್ಯದಲ್ಲಿ. ಮನಸ್ಸು ಕೆಟ್ಟು ನಾನು ನಿನ್ನನ್ನು ಬಿಟ್ಟುಹೋಗಿದ್ದೇನೆಂದು ಯಾರಿಗೂ ಹೇಳುವಷ್ಟು ಪ್ರಾಕೃತನಲ್ಲ ನಾನು. ನನಗೇ ಅದು ಹಿರಿಮೆಯಲ್ಲ. ನನ್ನ ಸುಖದ ಯೋಚನೆ ನಿನಗಿಲ್ಲವಾದರೆ, ನಿನ್ನ ಮಾನ, ಸುಖ, ಒಳ್ಳೆಯ ಹೆಸರಿನ ಚಿಂತೆ ನನಗನ್ನ ಬೇಡವೆ?

ನೀನು ಈಗಲೆ ಬಂದರೂ ನನ್ನೊಡನೆ ಮಾತನಾಡಬೇಕಿಲ್ಲ. ನೀನು ಬರುವುದು ನನಗೆ ಎಲ್ಲಿಂದಲೂ ಗೊತ್ತಾಗುತ್ತದೆ. ನನ್ನ ಮೋಟರ್ ಶಬ್ದ ನನಗೆ ಕೇಳಿಸದೆ ? ನಿನ್ನ ಕಾಲನಡೆ, ಹೊಸ ರೇಷ್ಮೆ ಬಟ್ಟೆಯ ಬಡಿತ ನನಗೆ ಗುರುತಿಲ್ಲವೊ ? ಹಚ್ಚಿಕೊಳ್ಳುವ ಅತ್ತರು ಪರಿಮಳದ ಪರಿಚಯ ಇಲ್ಲವೆ ? ಅವೆಲ್ಲಾ ನಾನು ಆರಿಸಿಕೊಟ್ಟದ್ದು, ಕಲಿಸಿ

ಕೊಟ್ಟದ್ದು ಅಲ್ಲವೆ? ನನಗೆ ೫೦೦ ಗಜದಿಂದ ಗೊತ್ತಾಗುತ್ತದೆ. ಆ ಮುಂಚೆ ನಾನು ಬೇರೆ ಕಡೆಗೆ ಹೊರಟುಹೋಗಿರುತ್ತೇನೆ. ನೀನು ಬಂದು ನನ್ನನ್ನು ಅದು ಇದು ಮಾತನಾಡಿಸಿ, ಮುದ್ದು ಮುಚ್ಚಟೆ ಮಾತುಗಳನ್ನಾಡಿ, ನಾನು ಕೂತ ತಿರುಗಣೆಯ ಕುರ್ಚಿಯನ್ನು ಸುತ್ತಿಸಿ ಅಥವಾ ನೀನು ಆ ಸುತ್ತ ತಿರುಗಾಡಿ, ತಲೆ ಕ್ರಾಪನ್ನು ಹಾಗೆ ಹೀಗೆ ಆಡಿಸಿ, ಹಿಂದಿನಿಂದ ಬಂದು ಕೊರಲ ಬಳಿ ಮುತ್ತಿಟ್ಟು, ಅಥವಾ ಎದುರಿಗೆ ನಿಂತು ಬೆಡಗು ಮಾಡಿದರೆ ನಾನು ಕರಗುವೆನೆಂದುಕೊಂಡಿದ್ದೀಯೇನೊ? ಆ ಕಾಲ ಮೀರಿ ಹೋಯಿತು. ಮೊನ್ನೆ ಸಂಜೆ ಆರು ಗಂಟೆಯವರೆಗೂ ಗಡುವಿಟ್ಟಿದ್ದೆ– ಬ್ಯಾಂಕುಗಳವರೇ ಕೊಡುತ್ತಾರಂತೆ ಕೃಪೆವಾಯಿದೆ– ಹಾಗೆ ಇನ್ನೂ ಮೂರು ದಿನ ಕಾದೆ. ಆ ಕಾಲದ ಗಡುವಿನ ಮಿತಿಯೂ ಮೀರಿ ೨–೩ ದಿನ ಆಗಿಹೋಯಿತು. ಈಗ ಶಾಸ್ತ್ರಿಗಳ ಮಾತು ಕೇಳಿ ನೀನು ಸದ್ಯಃ ಬರುವುದಿಲ್ಲವೆಂದು ಖಚಿತವಾಯಿತು. ನಿನ್ನ ಮರ್ಯಾದೆ ಕಾಪಾಡಲು ನಾನು ನಿನಗೆ ಕಾಗದ ಬರೆಯಬೇಕೆಂಬ ಸೂಚನೆ ಆ ಮೂಲಕ ಬಂದ ಹಾಗಾಯಿತು. ನಾನು ಬೇಡದೆ ಹೋದ ನಿನಗೆ ನಾನೇಕೆ ಮರ್ಯಾದೆ ತೋರಿಸಬೇಕು? ಇನ್ನೊಬ್ಬರನ್ನು, ನಿಮ್ಮಪ್ಪನ ಮನೆಯವರನ್ನು ಹೆಚ್ಚು ಮಾಡಿ ನನ್ನನ್ನು ದೂಡಿ ಹೋದವಳಿಗೆ ಕಾಗದ ಬರೆಯುವುದು? ಏನೆಂದು ಬರೆಯಬೇಕು? ನೀನು ಬಾರದೆ ನಾನು ಬದುಕಲಾರೆ, ಒಡನೆಯೇ ಹಿಂತಿರುಗುವುದು ಎಂದೆ? ನಿನ್ನ ವಿರಹ ಅಸಹ್ಯವಾಗಿದೆ, ಪ್ರಿಯೆ; ನಿನ್ನ ನಲ್ಲ, ನೀನಿಲ್ಲದೆ ತಳಮಳಿಸುತ್ತಿರುವ ನಿನ್ನ ಹೃದಯದರ್ಧ ನಾನು ಎಂದೆ? ಆಗದು ಆಗದು. ಅದು ನನ್ನ ಗಂಡುತನದ ಹೆಚ್ಚಳಕ್ಕೆ ತಕ್ಕದ್ದಲ್ಲ. ಅದು ನಿಜವೂ ಅಲ್ಲ. ಅಷ್ಟು ಕೆಟ್ಟಿಲ್ಲ ನಾನು. ಹೇಗೆ ಹೋದೆಯೊ ಹಾಗೆ ಬಂದರೆ ಬಾ; ಇಲ್ಲವಾದರೆ ನಿನ್ನಿಷ್ಟ. ನಾನು ಕರೆಯುವವನಲ್ಲ, ಬರೆಯುವವನಲ್ಲ.

ಇದನ್ನು ಬರೆಯುವುದೇನು ? ನೀನೇ ತಿಳಿದುಕೊಳ್ಳಬೇಕು. ಎಂಟು ವರ್ಷ ಜೊತೆಯ ಹಕ್ಕಿಯಾಗಿ ನಿನ್ನನ್ನು ನಡಸಿಕೊಂಡದ್ದಕ್ಕೆ ನಿನ್ನ ಪ್ರತೀಕಾರ ಹೀಗಾಗುವುದು ಎಂದು ಯಾರು ಎಣಿಸಬಹುದಿತ್ತು! ನಿನ್ನ ಮುಖ ನೋಡಬಾರದು. ಇವೆಲ್ಲಾ ಏಕಾದರೂ ಬರೆಯುತ್ತಿದ್ದಾರೊ ಇವೆಲ್ಲ ಇವರ ದುರ್ಬಲತೆಯ ಪ್ರತೀಕ ಅಲ್ಲವೆ ? ಪರ್ಯಾಯವಾಗಿ ನನ್ನಲ್ಲಿ ಇವರಿಗಿರುವ ಪ್ರೀತಿಯ ನಿವೇದನೆ ಇದು ಎಂದುಕೊಂಡೀಯೆ? ಜೋಕೆ. ಅದಕ್ಕೂ ಹೇಸುವವಳಲ್ಲ ನೀನು. ಅದೂ ಶಕ್ಯ. ನೀನು ತುಂಬಾ ಬುದ್ಧಿಶಾಲಿ. ಯಾವುದಕ್ಕೆ ಏನು ಅರ್ಥ ಕಟ್ಟಿದರೂ ಕಟ್ಟುವವಳೇ.

ಅದೂ ಅಲ್ಲ. ತಾಳು. ಎರಡೇ ಎರಡು ಸಾಲು ಕಾಗದ ಬರೆಯಲಿ ಅವರು ಹೊರಟುಬಿಡುತ್ತೇನೆ, ಎಂದುಕೊಂಡಿರಬಹುದು ನೀನು. ಕೈಯಿಂದ ಕಾಗದವನ್ನು ಬರಸಿ ನನ್ನನ್ನು ಸೋಲಿಸಿ ಗೆಲ್ಲುವವಳು. ಪುನಃ ಯಾವುದೊ ಭ್ರಮರ ಸಂದೇಶ, ಕುಕ್ಕುರ ಸಂದೇಶ ಕಳಿಸಿಕೊಟ್ಟಾರು ಎಂದು ಎಣಿಸುವವಳು. ನನ್ನನ್ನು ಮೀರಿಹೋಗಿ ಪುನಃ ನನ್ನಿಂದಲೇ ಆಹ್ವಾನ ಪಡೆದು ಬರಬೇಕೆಂಬ ಹಟಮಾರಿ. ಅದಕ್ಕೆ ಅವಕಾಶ

ಕೊಡಬಾರದು. ಈ ಕಾಗದವನ್ನು ಮುಂದಕ್ಕೆ ಬರೆಯುವುದಿಲ್ಲ. ಇಷ್ಟು ಬರೆದಿದ್ದೇನೆ ನಿಜ. ಬುದ್ಧಿ ಕೆಟ್ಟು. ಇಲ್ಲಿಗೆ ನಿಲ್ಲಿಸುತ್ತೇನೆ. ಅಥವಾ, ಪೋಸ್ಟಿಗೆ ಕಳಿಸುವುದಿಲ್ಲ. ಸೋಲಿನ ಲಕ್ಷಣವಾಗುತ್ತದೆ. ಹರಿದು ಹಾಕುತ್ತೇನೆ. ಪುನಃ ನೀನು ಬೇಗ ಹಿಂದಿರುಗಿ ನಿನ್ನ ಕೈಗೆ ಇದು ಬಿದ್ದರೆ ಆಗ ನಿನ್ನನ್ನು ಹಿಡಿಯುವವರು ಯಾರು?

ಅಥವಾ, ಅವಿವೇಕ ಮಾಡಿಕೊಳ್ಳಬಾರದು. ಬಂದರೆ ನಿನ್ನ ಮನೆ ಇದೆ-ಎಂದಿದ್ದೇನೆ. ನಿನ್ನಿಷ್ಟದಂತೆ ಮಾಡು. ಮುಂದಕ್ಕೆ ಇನ್ನೊಂದು ಅಕ್ಷರ ಬರೆಯುವುದಿಲ್ಲ. ಕತಂ ಹುವಾ.

*　　*　　*

ತರುವಾಯ.

ಲಾಲಿ, ಲೇ ! ಈ ಕಾಗದ ಕಂಡಕೂಡಲೆ ಹೊರಟುಬಂದೆಯೊ ಸರಿ. ಇಲ್ಲವಾದರೆ ನಾನೇ ಅಲ್ಲಿಗೆ ಬಂದು ಗಾಡಿಯಲ್ಲಿ ಎತ್ತಿಹಾಕಿಕೊಂಡು ಇಲ್ಲಿಗೆ ಸಾಗಿಸಿ ತರಬೇಕಾಗುತ್ತದೆ. ಅದೊಂದು ನಗುಪಾಟಲು. ತಿಳಿದಿರಲಿ.

ಇಂತೀ

**ನಾನು**

# ಸೀಕರಣೆ

# ಕೋಳಿ

ಕೋಳಿಯನ್ನು ಕುರಿತು ಈ ಬ್ರಾಹ್ಮಣ, ಏನು ಬರೆದಾನು, ಎಂದುಕೊಳ್ಳಬೇಡಿ. ಬ್ರಾಹ್ಮಣನಾದರೇನು ? ಕೋಳಿಯನ್ನು ಕಂಡಿರುವುದಿಲ್ಲವೆ ? ಅದರ ರುಚಿ ಕಂಡವನಾದರೆ ಮಾತ್ರ ಅದನ್ನು ಕುರಿತು ಬರೆಯಬಹುದು ; ಇಲ್ಲವೆಂದರೆ, ಬರೆಯಬಾರದೆ ? – ಸ್ವರ್ಗ ನರಕ ಎಂದು ಬರೆವವರೆಲ್ಲ ಅಲ್ಲಿಗೆ ಹೋಗಿ ನೋಡಿಕೊಂಡು ಬಂದವರೆ ? ಕತೆ-ಕಾದಂಬರಿಗಳಲ್ಲಿ ಯಾವಯಾವುದೊ ವಿಷಯ ಬಂದಿರುತ್ತದೆ. ಅದೆಲ್ಲವನ್ನೂ ಸ್ವಂತ ಅನುಭವದಿಂದಲೇ ಬರೆಯಬೇಕೆಂದರೆ ಆಗುತ್ತದೆಯೆ? ಬರವಣಿಗೆಗೆ ಏನೇನೊ ಬಂದು ಸೇರುತ್ತದೆ, ಒಗ್ಗುತ್ತದೆ, –ನೋಡುವ ಕಣ್ಣಿದ್ದರೆ ; ಕೇಳುವ ಕಿವಿ ಇದ್ದರೆ ; ಯೋಚಿಸಲು ತಲೆ ಇದ್ದರೆ ; ಪ್ರೀತಿಸಲು ಹೃದಯವಿದ್ದರೆ. ಅಲ್ಲದೆ, ನನಗೆ ಈ ಸಂಬಂಧದಲ್ಲಿ ಹಿಂದೆ ನಡೆದ ಒಂದು ಘಟನೆ ನೆನಪಿಗೆ ಬರುತ್ತದೆ. ಮೈಸೂರು ಮೈಸೂರು ಮಾತ್ರ ಆಗಿದ್ದು ಇನ್ನೂ ಕರ್ನಾಟಕದ ವಿಶಾಲತ್ವ ಅದಕ್ಕೆ ಸಿದ್ಧಿಸದೆ ಇದ್ದಾಗ, ನಮ್ಮ ಪ್ರತಿನಿಧಿಸಭೆಯ ಅಧಿವೇಶನದಲ್ಲಿ ಒಂದು ಪ್ರಶ್ನೆ ಹಾಕಿದರು, ಖಾಸಗಿ ಸದಸ್ಯರೊಬ್ಬರು : 'ಕೋಳಿ ಸಾಕಣೆ ಯೋಜನೆಗೆ ಲಕ್ಷಾಂತರ ರೂಪಾಯಿ'-ಅದಿನ್ನೂ ಲಕ್ಷಗಳ ಕಾಲ !–'ವೆಚ್ಚ ಮಾಡಬೇಕೂಂತ ಆಗಿದೆ ಸ್ವಾಮಿ ; ಅದನ್ನು ಒಬ್ಬ ಬ್ರಾಹ್ಮಣರ ಮೇಲಾಡಳಿತಕ್ಕೆ ಒಪ್ಪಿಸಿದ್ದೀರಿ ; ಬ್ರಾಹ್ಮಣರಿಗೆ ಕೋಳಿ ವಿಚಾರ ಏನು ಗೊತ್ತು ?' ಎಂದು. ಅವರ ಅರ್ಥದಲ್ಲಿಯೂ ಕೋಳಿಯ ವಿಚಾರ ಗೊತ್ತಿರುವ ಅನೇಕ ಬ್ರಾಹ್ಮಣರು ಆಗಲೂ ಇದ್ದಿರಬಹುದಾದರೂ ಯಾರನ್ನು ಕುರಿತು ಈ ಪ್ರಶ್ನೆ ಎದ್ದಿತೊ ಆತನ ವಿಷಯವಾಗಿ ಬಹುಶಃ ಅವರಿಗೆ ಅಂಥ ಸಂಶಯವಿರಲಿಲ್ಲ. ಆಗ ಸರ್ಕಾರದ ಕಡೆ ಮಾತನಾಡಿದವರಿಂದ ಖಚಿತವಾಗಿ ಉತ್ತರ ಬಂದಿತು : 'ಅವರ ಕೈಯಲ್ಲಿ ಕೋಳಿಗಳು ಸುರಕ್ಷಿತವಾಗಿರುತ್ತವೆ' ಎಂದು. ಉತ್ತರ ನಿರೀಕ್ಷಿಸಿದ್ದಲ್ಲ. ತಕ್ಷಣಕ್ಕೆ ಆ ಮಾತು ಅಲ್ಲಿಗೆ ನಿಂತಿತು. ಇಂಥ ಪ್ರಶ್ನೆಗಳಿಗೆ ಸಭೆಗಳಲ್ಲಿ ಕೊಡುವ ಜಾಣರ ಉತ್ತರಗಳೆಲ್ಲ ಹೀಗೆಯೇ. ತೀರ್ಮಾನ, ತೃಪ್ತಿ ತರಬೇಕಾದ್ದಿಲ್ಲ ; ಉತ್ತರ ಪೂರ್ತಿ ಸರಿಯಾದ್ದೂ ಆಗಬೇಕಿಲ್ಲ ; ಸಂದೇಹ ನಿವಾರಣೆಯಾಗುವುದೆಂದೂ ಅಲ್ಲ ; ಆ ಕ್ಷಣಕ್ಕೆ ಕೇಳುವವರ ಬಾಯಿ ಕಟ್ಟಿದರೆ ಆಯಿತು. ಇತ್ತ ಇವರಿಗೆ ಬೀಸುವ ದೊಣ್ಣೆ ತಪ್ಪಿದರೆ ಸಾವಿರ ವರ್ಷ ಆಯುಸ್ಸು. ಕೋಳಿಯನ್ನು ಕುರಿತು ಬರೆಯುವ ನನ್ನ ಅಧಿಕಾರವ್ಯಾಪ್ತಿಗೂ ಈ ನೆಲಸೇ.

ಕೋಳಿಗಳನ್ನು ಕಾಣದವರಾರು ? ಯಾವ ಊರಿನಲ್ಲಿ ಅವಿಲ್ಲ ? ಅವಿಲ್ಲದ ಕಡೆ ದಿನಾ ಬೆಳಗಾಗುವುದು ಹೇಗೆ ? ಕೋಳಿ ಕೂಗದಿದ್ದರೆ ಮಲಗಿರುವ ಸೂರ್ಯನಿಗೆ ಎಚ್ಚರವಾಗುವುದು ಹೇಗೆ ?

"The shrill clarion of the cock" ಎಂದು ಬಾಯಿತುಂಬ ನುಡಿಯಲು ಬರುವುದು ಕೂಗಿನ ಈ ನಿರ್ದೇಶನ. Beauty Sleep ಎಂಬುದನ್ನು ಕೇಳಿದ್ದೀರಲ್ಲಾ! ಆ ನಿದ್ದೆಯಿಂದಲೇ ಗಂಡು-ಹೆಣ್ಣಿನ ಚೆಲುವು ರೂಪಗೊಳ್ಳುವುದು. ನಸುಕಿನ ಐದು ಐದೂವರೆ ಆರರ ಸುಮಾರಿಗೆ ಮೃದುವಾಗಿ ಕವಿಯುವ ನಿದ್ರೆ ಮುಖಕ್ಕೆ ನುಣುಪು, ಕಣ್ಣಿಗೆ ಕಾಂತಿ, ಮೈಗೆ ನೆಮ್ಮದಿ ತರುವುದು ಎಂಬ ಮಾತಿದೆ. ಬೆಳಗಾಗುವ ಮುಂಚೆ ಅಂಥ ಚೆಲುವಿನ ನಿದ್ರೆ ಬಾರದಿದ್ದರೆ ನಿಮಗೆ ಆ ಕೂಗು ಕೇಳಿಸಲೇಬೇಕು. ಇಲ್ಲವಾದರೆ ನಿಮ್ಮ ಸುತ್ತ ಒಂದು ಮೈಲಿ ದೂರದಲ್ಲಿ ಎಲ್ಲಿಯೂ ಕೋಳಿ ಇರಲಾರದು! ಅಥವಾ ನಿಮ್ಮ ಕಿವುಡು ಕಲ್ಕಿವುಡು. 'ಕೊಕ್ಕೋಕ್ಕೋ, ಕೋ' ಎಂದು ಕೋಳಿ ಕೂಗಿತು ಎಂದು ನಾವು ಓದಿದ ಮೊದಮೊದಲ ಪಠ್ಯ ಪುಸ್ತಕಗಳಲ್ಲಿ ಕೂಡ ಇದನ್ನು ಬರೆದಿರುತ್ತದೆ. ಅದರ ತಲೆ, ಅದರಲ್ಲಿ ಬರೆದಿರುವುದೇನು? ಅದಕ್ಕೆ ಎಷ್ಟೊ ಮುಂಚೆ ಯಾವುದೊ ಕೋಳಿ ಹಾಗೆ ಕೂಗಿದ್ದನ್ನು ನೀವೇ ಕೇಳಿರುತ್ತೀರಿ. ಕೋಳಿಯ ಬಳಿಗೆ ಹೋಗಿ ಕೂಗಿ ಅದನ್ನು ಕೀಟಲೆ ಮಾಡಿದ್ದೀರಿ. ಹ್ರಸ್ವ, ದೀರ್ಘ, ಪ್ಲುತಗಳಿಗೆ ವ್ಯತ್ಯಾಸ ತೋರಿಸುವಂತೆ ವೈಯಾಕರಣರು ಈ ಕೂಗನ್ನು ನಿದರ್ಶನ ಮಾಡುವುದು ವಯಸ್ಸಿನ ಇನ್ನು ಸ್ವಲ್ಪ ಆಮೇಲೆ ಬರುವ ಭಾಷಾಪರಿಜ್ಞಾನ. ನಮ್ಮ ಲೋಕಾನುಭವ ಬೆಳೆದಂತೆಲ್ಲ ಕೋಳಿಯನ್ನು ಕುರಿತ ಇಂಥ ತಿಳಿವಳಿಕೆ ಆಳವಾಗುವುದು; ವಿಸ್ತಾರವಾಗುವುದು. ಒಂದು ಕೋಳಿಯ ಕೂಗಿಗೆ ಎಷ್ಟೊ ಅರ್ಥಗಳು, ಪ್ರಯೋಜನ ಆಕಾಂಕ್ಷೆಗಳು ಹೀಗೆ ತೂಗಿ ಬೀಳುತ್ತವೆ. ಅದಕ್ಕೆ ಅಷ್ಟು ಸಹಜತೆ, ಸುಲಭಗ್ರಾಹ್ಯತೆ, ಸಾರ್ವತ್ರಿಕತೆ ಇಲ್ಲವಾಗಿದ್ದರೆ ಅದರ ಕಡೆ ಗಮನ ಹರಿಸುತ್ತಿದ್ದರು ಯಾರು?

ನಿಮ್ಮ ಎಲ್ಲರಂತೆಯೇ ನಾನೂ ಕೋಳಿಯ ಕೂಗು ಕೇಳಿದ್ದೇನೆ. ಒಂದೇ ಏಕೆ? ಮೊದಲನೆ, ಎರಡನೆ, ಮೂರನೆ ಕೋಳಿಗಳ ಕೂಗನ್ನು ಕೇಳಿದ್ದೇನೆ. ನಿದ್ರೆ ಚೆನ್ನಾಗಿ ಮಾಡುವ ನಿಮಗೆ ಆ ಭೇದಗಳು ಮಂದಟ್ಟಾಗದೆ ಇರಬಹುದು ; 'ರೈಲು ಬಿಡುತಿದ್ದಾನೆ ಇವನು', ಎಂದುಕೊಳ್ಳಬಹುದು. ಆದರೆ ಬಲ್ಲವರು ಬಲ್ಲರು ಅದರ ಸತ್ಯವನ್ನು. ಕೂಗಿನ ಆಯಾ ಗಂಟೆಯ ಧ್ವನಿಯಲ್ಲಿ ಅದಕ್ಕೇ ಹೊಂದುವ ನಾದ, ನುಡಿತ, ಆವರಣ ಇರುತ್ತದೆ. ನಾನು ಹಳ್ಳಿಯಲ್ಲಿ ಹುಟ್ಟಿದವನಾದ್ದರಿಂದ ಎಷ್ಟೋ ಕೋಳಿಗಳ ಕೂಗನ್ನು ಕೇಳಿದ್ದೇನೆ. ಅವು ಹಳ್ಳಿಕೋಳಿಗಳು, ನಾಡು ಕೋಳಿಗಳು ನಿಜ. ಯಾವುದಾದರೆ ಏನು, ಕೋಳಿ ಕೋಳಿಯೇ ಅಲ್ಲವೆ ? ಅದಕ್ಕೆ ಹೊತ್ತು ಬಂದು, ಭೂಮಿಯ ಮೇಲೆ ಇನ್ನು ಮುಂದೆ ಅವಿಲ್ಲ ಎಂದು ನೀವನ್ನಿಸುವವರೆಗೂ ಅದರ ಕೂಗು ನಿಲ್ಲದು. ಇದು ಈ ಕೋಳಿ, ಅದು ಆ ಮನೆಯದು, ಈ ಶಬ್ದ ಗೌಡರ ವೆಂಕಟಪ್ಪನ ಮನೆಯದು ; ಇದು ತೌಕಲಸಾಬಿಯ ಕೋಳಿ, ಇದು ಮುನಿಯಮ್ಮನು ಸಾಕುತ್ತಿರುವ ಹುಂಜದ್ದು ಎಂದು ಗೊತ್ತಾಗಿ ತಿಳಿಯುತ್ತಿತ್ತು. ಕೂಗು ಸರ್ವಥಾ ಹುಂಜದ್ದೇ. ಹೆಣ್ಣು ಕೋಳಿಯದಲ್ಲ. ಅದು ಆ ಜಾತಿಗೆ ವಿಶೇಷ. ಆ ಕಾಲ ಕಳೆದು ಬೆಂಗಳೂರು ಮೈಸೂರು ಪಟ್ಟಣಗಳಿಗೆ ನಾನು ಬಂದು ನೆಲಸಿದ ಮೇಲೂ ಸುಮಾರು ಹೀಗೆಯೇ ಆಗಿದೆ. ಸುತ್ತ ಅಷ್ಟು

ಬಗೆಯ ಕೋಳಿಗಳಿಲ್ಲವಾದರೂ ಆಚೆ ಈಚೆಯ ರಸ್ತೆಗಳಲ್ಲಿ ಕೋಳಿಗಳನ್ನು ಸಾಕುವ ಎಷ್ಟೊ ಮನೆ, ಜನ ಇದೆ. ಅವುಗಳ ಕೊರಲು ಗೊತ್ತಾಗಿ, ತಪ್ಪದೆ ಬೆಳಗಿನ ತಮ್ಮ ಕರ್ತವ್ಯವನ್ನು ನೆರವೇರಿಸುತ್ತದೆ. ಕರ್ತವ್ಯವೇನು? ಕೂಗುವುದು ಅದರ ಧರ್ಮ. ಧರ್ಮವೆಂದರೆ ಸ್ವಭಾವಲಕ್ಷಣ. ಕೋಳಿಯ ಬಾಳಲ್ಲಿಯೂ ಯಾವುದೋ ನೇಮವಿದೆ. ಬೆಳಗಾಗಲು ಕೋಳಿ ಕೂಗಬೇಕು ಎಂಬ ಸಿದ್ಧಾಂತವನ್ನು ಒಪ್ಪದವರು ಒಪ್ಪಲಿ, ಬಿಡಲಿ. ಬೆಳಗಾಗ ಅದು ಕೂಗುತ್ತದೆ. ಕೂಗಿತು, ಇನ್ನೇನು ಬೆಳಗಾಗುತ್ತದೆ ಎಂಬ ತಿಳಿವಳಿಕೆ ಬಂದಿದೆಯೊ ಇಲ್ಲವೊ! ನಿಮ್ಮ ದೃಷ್ಟಿಯಿಂದ ಅದು ತಿಳಿವಿನ ಅಂಶ. ಒಂದು ಬಗೆಯ ಪ್ರಯೋಜನ ಕಾಂಡ. ತನಗೂ ಬೆಳಗಾಗುವುದಕ್ಕೂ ಇರುವ ಕಾರ್ಯಕಾರಣ ಸಂಬಂಧ ಅಥವಾ ಏಕಸಮಯತೆ ಕೋಳಿಗೆ ತಿಳಿದಿದೆಯೊ ಇಲ್ಲವೋ,-ನಾನು ಕೋಳಿಗಳನ್ನು ಕೇಳಿಲ್ಲ. ಕೇಳಿದಾಗ ಅವು ಉತ್ತರ ಕೊಟ್ಟರೆ ಸತ್ಯ ತೇಲೀತು. ನಾನು ಕೋಳಿಯಾಗಿದ್ದಿದ್ದರೆ ಅದರ ಭಾಷೆಯಲ್ಲಿ ಕೊಟ್ಟ ಉತ್ತರ ಅರ್ಥವಾಗುತ್ತಿತ್ತು. ಆ ಅದೃಷ್ಟ ಇಲ್ಲವಾಗಿ ಊಹೆಗೂ ಅನುಮಾನಕ್ಕೂ ಕಟ್ಟು ಬಿದ್ದು ಆ ಮಾತನ್ನು ಆಡಿ ತೃಪ್ತಿಪಡಬೇಕಾಗಿದೆ.

ಯಾರೊ ನನಗೆ ಹೇಳಿದ್ದುಂಟು ; ಅದು ತಿಂದ ಆಹಾರ ಜೀರ್ಣವಾಗಬೇಕಾದರೆ ಅದು ಹಾಗೆ ಕೂಗಬೇಕಂತೆ. ಇನ್ನೊಂದು ವಾದವಿದೆ. ಅದು ಆಯ್ದು ಆಯ್ದು ಸಣ್ಣ, ಸಣ್ಣ ಕಲ್ಲು ತಿನ್ನುವುದು ಕೂಡ ಅದರ ಪಚನಶಕ್ತಿಗೆ ನೆರವಾಗುವುದಕ್ಕಂತೆ. ಈ ಎರಡರಲ್ಲಿ ಯಾವುದು ನಿಜವೋ. ಎರಡೂ ನಿಜವೊ, ಎರಡೂ ಅಲ್ಲವೊ. ಇದರ ಸಾಧಕಾಂಶ ಎಷ್ಟೆಷ್ಟರದೊ, ಅದು ಕೋಳಿಗೆ ಗೊತ್ತಿರಬೇಕಾದ ಸಂಗತಿಯಾದ್ದರಿಂದ ಈ ಸಂಬಂಧದ ವಾಗ್ವಾದಗಳನ್ನು ಅವಕ್ಕೂ ಕೋಳಿಯ ಶಾಸ್ತ್ರಿಗಳಿಗೂ ಬಿಡುವುದು ಒಳಿತು. ಇಷ್ಟು ಖಚಿತ: ನಾಲ್ಕಕ್ಕೆ, ಐದಕ್ಕೆ, ಆರಕ್ಕೆ ಕೋಳಿಯ ಕೂಗು ಕೇಳಿಸಲು ರಾತ್ರಿ ಮುಗಿಯಿತು, ಇನ್ನೇನು ಬೆಳಗಾಗುತ್ತದೆ, ಬೆಳಗಾಯಿತು ಎಂದು ಗಂಟೆ ಹೊಡೆದ ಹಾಗೆ ನಮಗೆ ತಿಳಿದುಬರುತ್ತದೆ. ಅದರ ದೇಹಧರ್ಮವನ್ನು ಕಾಪಾಡಿಕೊಳ್ಳಲು ಅದು ಕೂಗುತ್ತಿರುವಾಗ ಅದರ ಪ್ರಯೋಜನ ನಮಗೆ ಹೀಗೆ ದೊರೆಯುತ್ತದೆ ಎಂಬುದು ಅರ್ಥವತ್ತಾದ ಸಂಗತಿ. ನಮಗೂ ಅದಕ್ಕೂ ಇರುವ ದಿನನಿತ್ಯದ ಸಂಬಂಧ ಹೀಗೆ.

ಕೋಳಿಗಳನ್ನು ಬಗೆಬಗೆಯಾಗಿ ವಿಂಗಡಿಸಬಹುದಾದರೂ ಮುಖ್ಯವಾದ್ದು ಲಿಂಗದೃಷ್ಟಿಯಿಂದ ಮಾಡುವ ಹೆಣ್ಣು ಕೋಳಿ, ಗಂಡು ಕೋಳಿ ಎಂಬುದು. ಗಂಡನ್ನು ಹುಂಜ ಎನ್ನುವುದು ರೂಢಿ. ಹೆಣ್ಣನ್ನು ನಮ್ಮಲ್ಲಿಯೂ ಹೇಂಟೆ ಎಂದು ಕರೆಯುವುದಿಲ್ಲವಾದರೂ ನಾವು ಹುಡುಗರಿದ್ದಾಗ ಅಭ್ಯಾಸ ಮಾಡಿದ 'ಭಾಷಾಂತರಬೋಧಿನಿ' ಯಲ್ಲಿ ಆ ಹೆಸರಿದೆ. (ಪೆಟ್ಟೆಗೊರ್ರ-ಎಂಬುದು ತೆಲುಗಿನಲ್ಲಿ ಹೆಣ್ಣು ಮೇಕೆಯ ಹೆಸರು.) ಪೆಣ್ ಎಂಬುದರ ಮದುವೆಯಿಂದ ಆದ ರೂಪಾಂತರ ವಿರಬೇಕು ಅದು. ಇದು ಹೆಣ್ಣಿನ ಬೇರೆ ರೂಪದ ಮಾತಾಯಿತೇ ಹೊರತು ಹೇಂಟೆ ಎಂದರೆ ಹೆಣ್ಣುಕೋಳಿಯೇ ಏಕಾಗಬೇಕೊ ನನಗೆ ಇನ್ನೂ ಹಾಯದ ಬೆಳಕು. ಇನ್ನು

ಇಂಗ್ಲೀಷಿನ hen ಇದೆ. ಅದು ನಮ್ಮ ಹೆಣ್ಣಿನ ತದ್ಭವವೇ ಎಂಬುದು ನನ್ನ ಭಾವನೆ. ಭಾಷಾಶಾಸ್ತ್ರದ ಸೂತ್ರಗಳು ಇದಕ್ಕೆ ಅನುಕೂಲವಲ್ಲವಾದರೆ, ಅವನ್ನು ಮಾರ್ಪಡಿಸುವುದು ಅಗತ್ಯ. ನ, ಣ ಆಗುತ್ತದೆಯೊ, ಣ, ನ ಆಗುವುದೊ ತಿಳಿಯದು. ಇದು ತೀರ್ಮಾನವಾದರೂ ಪ, ತಾನೇ ಹ ಆಗಬೇಕಾದ್ದು? ಹೇಗೊ ಅವರ 'ನ' ನಮ್ಮ 'ಣ' ದಶರಾತ್ರಜ್ಞಾತಿಗಳು. ಅಂತೂ ಹೆಣ್ಣು ಗಂಡು ಎಲ್ಲ ಜೀವಜಂತುಗಳಲ್ಲಿನಂತೆ ಕೋಳಿಗಳಲ್ಲಿಯೂ ಎರಡು ಮುಖ್ಯ ವರ್ಗಗಳು. ಮೊಟ್ಟೆ ಹಾಕುವುದು ಹೆಣ್ಣು, ಅದು ಮಾರ್ಪಟ್ಟು ಮರಿ ಕೊಡುವುದು. ಗಂಡು, ಗಂಡು. ಅದಿನ್ನೇನೂ ಮಾಡಬೇಕಾದ್ದಿಲ್ಲ, ಹೆಣ್ಣನ್ನು ನೋಡಿಕೊಳ್ಳುವುದು, ಸಾಧ್ಯವಾದರೆ ಅದನ್ನು ರಕ್ಷಿಸುವುದು. ಕೊಕ್ಕಿಯಂತೆ ಮೇಲೆತ್ತಿದ ಪುಕ್ಕ ಕೆದರಿಕೊಂಡು ಕುಕ್ಕುಟಧ್ವನಿ ಮಾಡುತ್ತ ಟಣಕ-ಪುಣಕ ಓಡಿಯಾಡುವುದು. ಆಗಾಗ್ಗೆ ಗೋಡೆ ಹತ್ತುವುದು, ತನ್ನ ತಲೆಯ ಮೇಲಿನ ಶಿಖೆಯನ್ನು ರಕ್ತಧ್ವಜದಂತೆ ಬೆಳಕಿಗೆ ಹಿಡಿದು ಆಡಿಸಿ, ಗುಂಡನೆಯ ಸಣ್ಣ ಕಣ್ಣನ್ನು ಹೊಡೆದು ಮಿನುಗಿಸಿ ತನ್ನ ಹೆಣ್ಣಿಗೆ ನೆರವಾಗಿ ಮೊಟ್ಟೆಗೆ ಕಾವು ಕೊಟ್ಟು ಹುಂಜ ಅದನ್ನು ಮರಿ ಮಾಡುವುದು. ಅದನ್ನು ಮರಿಮಾಡುವುದೊ ಇಲ್ಲವೊ ; ಅಷ್ಟು ಜೀವವಿಜ್ಞಾನ ಲೋಕಾನುಭವ ನನಗಿಲ್ಲ. ಆದರೆ ನೆಮ್ಮದಿಯಾಗಿ, ಪ್ರಸನ್ನವಾಗಿ, ಒಪ್ಪಿ ನೆಲದಲ್ಲಿ ಹೂಡಿ ಕುಳಿತ ಹೇಂಟೆಯ ಬಳಿ ಹುಮ್ಮಸಿನಿಂದ ನಿಲ್ಲುವ, ಕೆಲೆಯುವ, ತಿರುಗಾಡುವ, ಕುಣಿದಾಡುವ ಹುಂಜಗಳನ್ನು ಹಲಬಾರಿ ಕಂಡಿದ್ದೇನೆ. ದಾರಾಪ್ರೇಮ, ಪ್ರಜಾವಾತ್ಸಲ್ಯ ಅವಕ್ಕೆ ಇಲ್ಲವಾಗಿದ್ದಿದ್ದರೆ ಅವು ಹಾಗೆ ಮಾಡುತ್ತಿದ್ದವೊ ಇಲ್ಲವೊ. ಇದನ್ನು ಯೋಚಿಸಿದಾಗೆಲ್ಲ ಬರ್ನಾರ್ಡ್‌ಷಾ ಆಡಿದ ಒಂದು ವಾಕ್ಯ ಜ್ಞಾಪಕಕ್ಕೆ ಬರುತ್ತದೆ. ಪಾಶ್ಚಿಮಾತ್ಯರು ಪಶ್ಚಿಮ ದ್ವೀಪ ಸ್ತೋಮಗಳ ಅನಾಗರಿಕರೆನ್ನುವವರ ಸಂಸಾರಗಳನ್ನು ಕುರಿತು ತಮ್ಮ ಒಂದು ಪಾತ್ರದ ಬಾಯಲ್ಲಿ ಈ ಮಾತನ್ನು ಆಡಿಸುತ್ತಾರೆ : "In native house the woman keeps the house and works there, the man keeps the woman and rests there." (ದೇಶಿ ಮನೆಯಲ್ಲಿ ಹೆಂಗಸು ಮನೆಗೆಲಸ ನೋಡಿಕೊಳ್ಳುತ್ತಾಳೆ ; ಅಲ್ಲಿ ದುಡಿಯುತ್ತಾಳೆ ; ಗಂಡಸು ಅವಳನ್ನಿಟ್ಟುಕೊಳ್ಳುತ್ತಾನೆ, ಅಲ್ಲಿ ವಿರಮಿಸುತ್ತಾನೆ.) ಪಶು-ಪಕ್ಷಿ-ಪ್ರಾಣಿಗಳಲ್ಲಿ ಬಹುಭಾಗದ ಜೀವನ ಹೀಗೇ : ಸ್ವಲ್ಪ ಹೆಚ್ಚು, ಸ್ವಲ್ಪ ಕಡಮೆ ; ಸ್ವಲ್ಪ ನೇರವಾಗಿ ಅಥವಾ ಪರ್ಯಾಯವಾಗಿ.

ಆದರೆ ಒಂದು ಮಾತ್ರ ನಿಶ್ಚಯ : ಹೆಣ್ಣಿನ ಸೊಗಸಿಗಿಂತ ಗಂಡು-ಕೋಳಿಯ ಚೆಂದ ಬಲು ಚೆಂದ. ಜೀವ-ರಚನಾ ವಿಲಾಸದಲ್ಲಿ ಹೆಣ್ಣಿಗಿಂತ ಗಂಡಿನ ಚೆಲುವೇ ಮೋಹಕತೆಯೇ ಹೆಚ್ಚೆಂಬಂತಿದೆ. ಇದನ್ನು ಪಕ್ಷಪಾತದ ಮಾತೆನ್ನಬೇಡಿ. ಗಂಡಿನ ಕೆಲಸ ಸುಖವಾಗಿರುವುದು ; ಹೆಣ್ಣಿನ ಸಂಗಡಿಗನಾಗಿರುವುದು. ಪ್ರಕೃತಿಯಲ್ಲಿ ಅದರ ಕಾರ್ಯ, ಹಿತವಾದ್ದು ಮಿತವಾದ್ದು. ಯಾವ ಪ್ರಾಣಿಯನ್ನೇ ಕೇಳಿ ಅದು ಹೇಳುತ್ತದೆ. ಕಡೆಗೆ, ಜೇನುನೊಣವನ್ನು ಕೇಳಿ, ಗೊತ್ತಾಗುತ್ತದೆ. ಆ ಒಂದು ಅಂಶದಲ್ಲಿಯೇ ಪ್ರಕೃತಿಯ

ಮಿತಸಾಧನೆ ಕಾಣುವುದು. ಬೇರೆ ಸಂಗತಿಗಳಲ್ಲಿ ಅದರ ಮುಂದುಗಾರಿಕೆಗೆ ಕಣ್ಣೇ ಇಲ್ಲ. ಗಂಡಿನ ನಿರ್ಮಾಣ ರಚನೆ, ಸೃಷ್ಟಿ ಕ್ರಿಯಾ ಸಂಬಂಧದ್ದು. ಶಕ್ಯವಾದರೆ ಅಲ್ಪ ಸ್ವಲ್ಪ ರಕ್ಷಣಾಕಾರ್ಯದಲ್ಲಿ ತನ್ನ ಜಾತಿಯ ಹಗೆಗಳಿಂದ ತನ್ನನ್ನೂ ತನ್ನ ಹೆಣ್ಣನ್ನೂ ಕಾಪಾಡಿಕೊಳ್ಳಲು ಅದಕ್ಕೆ ಸಾಮರ್ಥ್ಯ ಸುಮಾರು ಉಂಟೇನೊ ; ಎಲ್ಲ ಜಾತಿಯ ಗಂಡಿಗೂ ಇದ್ದಂತೆ. ಆದರೆ ಚೆಲುವಿನಲ್ಲಿ ಮಾತ್ರ ಗಂಡಿಗೇ ಮೇಲ್ಗಯ್. ಗಿಳಿಯನ್ನು ನೋಡಿ ; ನವಿಲನ್ನು ನೋಡಿ ; ಆನೆಯನ್ನು, ಸಿಂಹವನ್ನು, ಕಡೆಗೆ ಹಂದಿಯನ್ನು ನೋಡಿ. ಜಾತಿಯಲ್ಲಿ ಗಂಡಿನ ಬೆಡಗೇ ಹೆಚ್ಚು ರಂಜನೆಯದು. ಸತ್ಯದ ಪ್ರತಿಪಾದನೆಯ ಸಮತೋಲ ತಪ್ಪಬಾರದೆಂದು ವೃಷಭಗಳನ್ನೂ ಮಹಿಷಗಳನ್ನೂ ನಿದರ್ಶನವಾಗಿ ತೆಗೆದುಕೊಳ್ಳುತ್ತಿಲ್ಲ. ಒಂದರ ಹೆಣ್ಣು ಪಾಪ, ಹಸುಪ್ರಾಣಿ, ಕಾಮಧೇನು. ಇನ್ನೊಂದು ಮಹಿಷಿ. ಹೊತ್ತಿಗೆ ಹತ್ತು ಸೇರು ಕರೆವ ಧಾರವಾಡದ, ಅಹಮದಾಬಾದಿನ ಪ್ರಕಾಂಡ, ಅಸಿತಲಕ್ಷ್ಮಿ ಅದು. ಅವನ್ನು ಕುರಿತಾಡಿ ಅವಕ್ಕೆ ಅಪಕರ್ಷ ಮಾಡುವುದು ನನ್ನ ಮನಸ್ಸಿಗೆ ಒಪ್ಪದ ಮಾತು. ಇನ್ನು ಮಾನವ ವರ್ಗದಲ್ಲಿ ಮಾತ್ರ ಹೆಣ್ಣಿನದೇ ಚೆಲುವು ಎಂಬುದು ಎಲ್ಲ ಗಂಡಸರ ಅಭಿಪ್ರಾಯ. ಗಂಡಸು ಎಷ್ಟೇ ಚೆನ್ನಿದ್ದರೂ ನಮಗಿಂತ ಚೆನ್ನಾಗಿರುವ ಯಾವ ಗಂಡಿನ ನಿಲವು, ಪೌರುಷಗಳನ್ನೂ ಮೆಚ್ಚುವುದು ನಮ್ಮ ಗಂಡುತನಕ್ಕೆ ಊಣೆಯ. ನಿಜವಾಗಿ ನೋಡಿದರೆ ಹೆಣ್ಣಿನಲ್ಲಿ ಎಷ್ಟು ಬಗೆಯ ರೂಪ, ಲಾವಣ್ಯ, ಒಯ್ಯಾರಗಳಿವೆಯೊ ಅವಕ್ಕೆ ಕಡಮೆ ಇಲ್ಲದ ಆಕೃತಿ, ನಿಲವು, ಗಾಂಭೀರ್ಯ ಗಂಡಿನಲ್ಲಿಯೂ ಇದೆ. ಹೆಣ್ಣನ್ನು ಕೇಳಿ ಹೇಳುತ್ತಾರೆ. ಮೀಸೆ ಒಂದೇ ಸಾಲದೆ ? ಹೆಣ್ಣಿಗೆ ಮೀಸೆ ತಕ್ಕುದೊ ? ಅದನ್ನು ಮೆಚ್ಚುವುದು, ಅದಕ್ಕೆ ಸೋತು ಕಂಗಾಲಾಗುವುದು ಹೆಣ್ಣಿನ ಪಾಲಿಗೆ ಕಟ್ಟಿದ, ಅದರ ಪುಣ್ಯಕ್ಕೆ ಬರುವ ಭಾಗ್ಯವಾದ್ದರಿಂದ ಅದರೊಡನೆ ಮೇಲ್ಪೋಟಿ ಮಾಡುವುದು ತರವಲ್ಲ. ಸರ್ವಸಮಾನತೆ ಸ್ಥಾಪಿತವಾಗಿರುವ ಈ ಕಾಲದಲ್ಲಿಯಂತೂ ಅವರೊಡನೆ ಸ್ಪರ್ಧೆ ಸುತರಾಂ ಕಷ್ಟ ; ಸಲ್ಲದು. ಗೆಲವು ಅದಕ್ಕೆ.

ಆದರೂ ಆಗೊಂದು ಸಲ ಈಗೊಂದು ಸಲ, ಇಲ್ಲೊಬ್ಬ ಅಲ್ಲೊಬ್ಬ ಸೌಂದರ್ಯ ಮೀಮಾಂಸಕನು ಮಾನವ ಸೌಂದರ್ಯವನ್ನು ಪ್ರತಿಪಾದಿಸುವಾಗ, ವಿಮರ್ಶಿಸುವಾಗ, ಹೆಣ್ಣಿನ ಚೆಲುವಿಗಿಂತ ಗಂಡುರಚನೆ, ಗಾಡಿ ಹೆಚ್ಚು ಸುಂದರವಲ್ಲವೆ ಎಂದು ಧೈರ್ಯವಾಗಿ ಕೇಳಿರುವುದುಂಟು. ಸಂಪ್ರದಾಯಕ್ಕೆ, ಬಹುಮತದಿಂದ romance ಗೆ ವಿರುದ್ಧವಾದ ಈ ವಾದವನ್ನು ಎತ್ತುವುದು ವಿವೇಕವಲ್ಲವಾಗಿ ಅದನ್ನು ಸದ್ಯಕ್ಕೆ ಬೆಳಸುವುದಿಲ್ಲ. ಗಂಡಿಗೆ ಖಚಿತವಾದ ಕಾರ್ಯವಿಭಾಗವಿದ್ದು ಅದರ ಸ್ಥಾನದ ಅರಿವು ಅದಕ್ಕೆ ಪೂರ್ಣವಾಗಿರುವುದರಿಂದ, ಬಹುಕಾಲದಿಂದ ಗಂಡು ಕೈಮೇಲಾಗಿರುತ್ತಿದ್ದ ಸಮಾಜದಲ್ಲಿ ಸೌಂದರ್ಯಾಂಶದಲ್ಲಿಯೂ ಗಂಡಿನದೇ ಪ್ರಾಧಾನ್ಯವೆನ್ನಲು ನನಗೆ ಇಷ್ಟವಿಲ್ಲ. ನರವಿಷಯದಲ್ಲಿ ತೀರ್ಮಾನ ಹೀಗೆ ಮೊಂಡು. ಹುಂಜದ ವಿಷಯದಲ್ಲಿ ಸಂದೇಹಕ್ಕೆಡೆಯೇ ಇಲ್ಲ. ಹೆಣ್ಣು ಕೋಳಿಗೆ ಬೆಡಗಿಲ್ಲ, ಅಲಂಕಾರವಿಲ್ಲ. ಅದರ ಚೆಲುವಿಗಂತ ಗಂಡಿನ ತೆನೆ, ಚುಂಗು, ಕೊಕ್ಕಿನ ಮೇಲಿನ ಕುತ್ತಿಗೆಯ ಕೆಂಪು ಜೋಲು

ತೊಗಲು, ಪುಕ್ಕದಲ್ಲಿ ಎತ್ತಿ ನಿಂತ ಅರ್ಧಚಂದ್ರಾಕಾರದ ಕುಡುಚಾಕು ಗರಿ, ಅದಕ್ಕೆ ಶೃಂಗಾರವನ್ನು ಕೊಟ್ಟಿದೆ. ಹುಂಜಕ್ಕೂ ಮನುಷ್ಯನಿಗೂ ಒಂದಂಶದಲ್ಲಿ ಸಾಮ್ಯ. ಅತಿ ಅಹಂತೆಯುಳ್ಳವನನ್ನು ಅರ್ಥಾತ್ ಬಡಾಯಿಕೊಚ್ಚುವವನನ್ನು ಜಂಬದ ಕೋಳಿ ಎನ್ನುತ್ತಾರೆ. ಕೆಲವು ಊರುಗಳಲ್ಲಿ 'ಕೋ' ಎಂದರೆ ಸಾಕು. ಅಲಂಕಾರಮಾಡಿಕೊಂಡು ಬೀದಿಯಲ್ಲಿ ತಿರುಗಾಡುತ್ತ ಜನರ ಕಣ್ಣು ಸೆಳೆವ ಗಂಡಸನ್ನು Peacock ಎಂದೂ ಅವನ ಚರ್ಯೆಯನ್ನು Paycocking ಎಂದೂ ಕರೆಯುವ ವಾಡಿಕೆ. (ಜೂನಿನ ರಾಣಿ ಜೂನೊ, ಅಲಸಗಾರ ಗಂಡ, ಆ ಹೆಂಡತಿಗೆ ಪೇಕಾಕ್ ಪೇಸೊ ಕ್ಯಾಸೆ ನಾಟಕದಲ್ಲಿ). ಪುಕ್ಕಕೆದರಿ ಕುಣಿಯುವ ಗಂಡು ನವಿಲಿನ ಮೆರೆತಕ್ಕೆ ಸಂಬಂಧಿಸಿದ್ದ ಮಹಾ ವರ್ಣವೈಭವದ ಪ್ರಪಂಚ. ಅಲ್ಲದೆ ನಾವು ಬೆಳಸುವ ಒಂದು ಬಗೆಯ ಪಡುವಣ ಹೂವಿಗೆ ಕೋಳಿ ಜುಟ್ಟು (Coxcomb) ಎಂದೇ ಹೆಸರು. ಸ್ಪರ್ಧೆಗಳಲ್ಲಿ, ದೋಣಿ ನಡಸುವವರ ಕರ್ಣಧಾರನಾಯಕನನ್ನು 'ಕಾಕ್ಸ್' ಎನ್ನುತ್ತಾರೆ; ದೋಣಿಯೊಳಗಿರುವ ಕೋಳಿಗಳಿಗೆ ಚುಕ್ಕಾಣಿಯಾದ ಅವನೇ ನಾಯಕ ; – ಆ ಹುಂಜಗಳಲ್ಲೆಲ್ಲ ದೊಡ್ಡ ಹುಂಜ ಎಂಬಂತೆ. ಯಾರಾದರೂ ಪ್ರಾಮುಖ್ಯತೆಯನ್ನು ಪಡೆವಂತೆ ಎಲ್ಲ ಸಮಯಗಳಲ್ಲಿಯೂ ಮುಂದೆ ಬಂದು ಮಾತಾಡುವಾಗ, ಅವನ ಮಾತು ನಡೆಯುವಾಗ, ಅವನಿಗೆ 'Cock of the Show' ಎನ್ನುವುದುಂಟು. ಇದೇನು ಹೀನಾಯವೆಂದಲ್ಲ. ಯೋಗ್ಯತೆ, ಕ್ರಿಯೆ, ಮುಂದಾಳ್ತನ, ಬಾಯಿ ಎಲ್ಲದಕ್ಕೂ ಕೂಡಿ ಅನ್ವಯವಾಗುವ ಮಾತು. ಆದ್ದರಿಂದ ಯಾರೂ ಅಸಮಾಧಾನ ಪಡಬೇಕಾದ್ದಿಲ್ಲ. ಇರುವುದೇ ಉಂಟಂತೆ, ಹೆಸರಿಟ್ಟು ಕರೆದರೆ ಸಂಕೋಚಪಡಬೇಕೇಕೆ ?

ಹುಂಜದ ಉಪಕಾರವನ್ನು ಕುರಿತು ಸ್ವಂತ ಜೀವನಕ್ಕೆ ಸಂಬಂಧಿಸಿದಂತೆ ನನಗೆ ಒಂದು ನೆನಪಿದೆ : ನನ್ನ ಕಣ್ಣು ನೋಟ ಕಳೆದುಕೊಳ್ಳದೆ ಈಗಿಗೂ ಚೊಕ್ಕವಾಗಿರುವುದು ಒಂದು ಹುಂಜದ ಅನುಗ್ರಹದಿಂದ. ತುಂಬ ಚಿಕ್ಕವನಾಗಿದ್ದಾಗ ಊಟ ಮಾಡದ ನನ್ನ ಚಂಡಿತನಕ್ಕೆ ರೇಗಿ ಒಂದು ದಿನ ನನ್ನನ್ನು ಗದ್ದರಿಸಿದವರು ಒಂದು ಬೀಸಣಿಗೆಯನ್ನೆತ್ತಿ ಹೆದರಿಸುವಂತೆ ನನ್ನ ತಂದೆ ಬೀಸಿದರು. ರಾತ್ರಿ ಸಮಯ; ನನಗೆ ನಿದ್ದೆಗಣ್ಣು. ನಾನು ಹೇಗೆ ತಿರುಗಿದೆನೊ ಏನೊ ಬಲಗಣ್ಣಿನ ಗುಡ್ಡಗೆ ಅದು ತಾಕಿತು. ರಕ್ತ ಬಂದಿತು. ರಣವಾಯಿತು. ಆ ರಕ್ತವನ್ನೂ ರಣವನ್ನೂ ನೋಡಿ ಆ ಪ್ರಾಣಿ ನೊಂದ ನೋವು ಕಟುಕನ ಎದೆಯನ್ನು ಬೆಣ್ಣೆ ಮಾಡುವಂಥದು. ಎಷ್ಟು ಪೇಚಾಡಿದರು! ಎಷ್ಟು ಕಳವಳಪಟ್ಟರು! ಅದಕ್ಕಾಗಿ ಅವರು ನನಗೆ ಒಂದು ತಿಂಗಳ ಕಾಲ ಚಿಕಿತ್ಸೆ ಮಾಡಿಸಿದರು. ದಿನಾ,–ಇದು ನಿಜವೊ ಅಲ್ಲವೊ ನಾ ಕಾಣೆ,–ಮೀನಿನ ತಲೆಯಲ್ಲಿ ಒಂದು ಬಗೆಯ ಹರಳಿರುವುದಂತೆ, ಅದನ್ನು ತೇದು ಆ ಗಂಧವನ್ನು ದಿನಕ್ಕೆರಡು ಬಾರಿ ಬಳಿಸುತ್ತಿದ್ದರು. ಹಾಗೆಯೇ ಬೆಳಿಗ್ಗೆ ಒಂಬತ್ತು ಗಂಟೆಗೆ ಸರಿಯಾಗಿ ರಾಣಾಸಿಂಗನ ಪೇಟೆಯಲ್ಲಿದ್ದ ಒಂದು ಮರಗೆಲಸದ ಪಟ್ಟಡಿಗೆ ನನ್ನನ್ನು ಕರೆದೊಯ್ದು ಹತ್ತಿರದ ಮನೆಯಿಂದ ಒಂದು ಹುಂಜವನ್ನು ತಂದು ಯಾರೊ ಒಂದು ಸಣ್ಣ ಕುಡುಚಾಕುವಿನಿಂದ ಮೆಲ್ಲಗೆ–ಇದೂ

ನನ್ನ ಭಾವನೆ–ಅದು ಕೊ ಕ್ಕೊ ಕೊ ಕ್ಕೊ ಕ್ಕೊ ಎಂದರೂ ಬಿಡದೆ–ಹುಂಜದ ಜುಟ್ಟಿನ ಬಿಸಿ ನೆತ್ತರ ಎರಡು ಮೂರು ತೊಟ್ಟನ್ನು ಕಣ್ಣಿಗೆ ಬೀಳಿಸುತ್ತಿದ್ದರು. ಸುಖೋಷ್ಣವಾಗಿ ಬಿದ್ದ ಆ ತೊಟ್ಟುಗಳು ಇವೊತ್ತಿಗೂ ನನಗೆ ದೃಷ್ಟಿದಾನ ಮಾಡಿವೆಯಾದ್ದರಿಂದ ನನಗೆ ಕೋಳಿಗಳನ್ನು ಕಂಡರೆ ತುಂಬಾ ಕೃತಜ್ಞತೆ.

ಈ ಮಾತಾಡುತ್ತಿರುವಾಗ ಮನುಷ್ಯನಿಗೆ ಕೋಳಿಯಿಂದಾಗಿರುವ ಇನ್ನೊಂದು ಉಪಕಾರವನ್ನು ತಿಳಿಸಬಹುದು : "ಎಂತ ನೇರ್ಚಿನ, ಎಂತ ಜೂಚಿನ, ಎಂತವಾರುಲೈನ ಕಾಂತದಾಸುಲೇ"-ಎಂದು ಮೊದಲಾಗುವ ತ್ಯಾಗರಾಜರ ಕೀರ್ತನೆ ಇದೆಯಲ್ಲವೆ ? ಎಷ್ಟು ಕಲಿತರೂ ಎಷ್ಟು ನೋಡಿದರೂ ಎಂಥವರೇ ಆದರೂ ಕಾಂತೆಯರ ದಾಸರೇ ಎಂಬುದು ಅದರ ಅರ್ಥ. ಕೋಳಿಗಳು ಇದಕ್ಕಪವಾದವಲ್ಲ. ಗಂಡು ದರ್ಬಾರು ಮಾಡಿದರೂ ನಿರುದ್ಯೋಗಿಯಾಗಿದ್ದರೂ ಅಲಸವಾದರೂ ಅದರ ಹೆಣ್ಣಿಗೆ ಅದನ್ನು ದುಡಿಸುವ ಶಕ್ತಿ ಇದೆ. ಹೇಗೆ ತನ್ನ ಪ್ರಯೋಜನವನ್ನು ಅದರಿಂದ ದುಡಿಸಿಕೊಳ್ಳುತ್ತದೆ, ಅದನ್ನು ಕದುಕಿ, ಕೊಕ್ಕಿಂದ ಕುಕ್ಕಿ ಕೆಲವು ಬಗೆಯ ಕೆಲಸ ಮಾಡಿಸಿಕೊಳ್ಳುತ್ತದೆ. ಹುಂಜವನ್ನು ಹೆಣ್ಣು ಕುಕ್ಕುವಾಗ ಸುಖವಾಗುವುದೆಂಬುದು ಕೆಲವರ ಅಭಿಪ್ರಾಯ ; ಇತರರು ಮಾತ್ರ ಎದುರಿಗಿರಬಾರದು. ಅದು ಸ್ವಲ್ಪ ಬಲಿತರೆ 'ಹೆನ್‌ಪೆಕ್ಡ್' ಎಂಬ ಮಾತು ಸಿದ್ಧವಾಗುತ್ತದೆ. ಈ ಮಾತು, ಅಷ್ಟು ಸಭ್ಯವಲ್ಲದ ಮಾತೆಂದು ಜನ ಸಾಮಾನ್ಯವಾಗಿ ಭಾವಿಸುವರು. ಆ ಬಗ್ಗೆ ನಾನೊಂದು ಸಂಗತಿ ಕೇಳಿದ್ದೇನೆ; ಇಂಥ ಜನಕ್ಕೆ ಒಳಗೆ ಸಂಸಾರದಲ್ಲಿ ತುಂಬಾ ಸುಖವಿರುತ್ತದೆ ಎನ್ನುತ್ತಾರೆ. ಕುರಿ ಕೊಬ್ಬಿದಷ್ಟೂ ಕುರುಬನಿಗೇ ಹೇಗೆ ಲಾಭವೊ ಹುಂಜ ಪುಷ್ಟಿಗೊಂಡಷ್ಟೂ ಹೇಂಟೆಗೇ ಅಲ್ಲವೇ ಲಾಭ? ಹೆನ್ನಿಗೆ ಗೊತ್ತು, ತನ್ನ ಪ್ರಯೋಜನ ಸಾಧಿಸಬೇಕಾದರೆ ಗಂಡೇ ತನಗೆ ದುಡಿಯಬೇಕು ಎಂದು. ಆದ್ದರಿಂದ ಎಲ್ಲ ರೀತಿಯಿಂದಲೂ ಅದು ತನ್ನ ಆರೈಕೆಯಲ್ಲಿ, ಅಂಕೆಯಲ್ಲಿ ಇರುವ, ತಾನು ಕೆದಕಿ ಕುಕ್ಕುವ ಗಂಡನ್ನು ಬಹು ಸೊಂಪಾಗಿ ಪೋಷಿಸುತ್ತದೆ. 'ಅಯ್ಯೋ ನಮ್ಮಪ್ಪಾ ಆ ಮುಖ ನೋಡಿ ಹೇಗೆ ಬಾಡಿಸಿಕೊಂಡಿದ್ದೀರಿ! ಬನ್ನಿ ಸ್ವಲ್ಪ ಸ್ನೋ ಆದರೂ ಬಳಿಯುತ್ತೇನೆ' –ಎಂದರೆ ನೀವೇಕೆ ಹಿಮ್ಮೆಟ್ಟಬೇಕೊ ಕಾಣೆ. ಇದು ಹೇಗೊ ಏನೊ. ಹೀಗೆ ಕರಸಿಕೊಂಡವರು ಹಿಗ್ಗುಗಪಡಬೇಕಾಗಿಲ್ಲವೆಂದು ಮಾತ್ರ ಹೇಳುತ್ತಿದ್ದೇನೆ. ಹೊರಗೆ ನಮ್ಮನ್ನು ದುಡಿಸಿಕೊಳ್ಳುವ ಸಿಕ್ಕಿಸಿಕ್ಕಿದ ಅಯೋಗ್ಯರ ಕೈಯಲ್ಲಿ ದಿನಕ್ಕೆ ಆರು ಗಂಟೆ, ಏಳು ಗಂಟೆ ಕುಕ್ಕಿಸಿಕೊಳ್ಳಬಹುದಂತೆ! ಪ್ರೀತಿಯ ಮಡದಿ ಮನೆಯಲ್ಲಿ ಕುಕ್ಕಿದರೆ ಏಕೆ ತಲೆತಗ್ಗಿಸಬೇಕು ? ನಿಮ್ಮನ್ನು ಕುರಿತು ಗೆಳೆಯರು ಹಲ್ಕಿರಿದರೆನ್ನಿ. ನಾಯಿ ಬಗುಳಿದರೆ ಸಂಸಾರ ಹಾಳೆ ? ಬೇರೆ ಏನು ಮಾಡುತ್ತೀರಿ, ಓಡಿಹೋಗುತ್ತೀರ ? ಓಡಿದಷ್ಟೂ ಅದು ನಿಮ್ಮನ್ನಟ್ಟುತ್ತದೆ. ಅದರೆದುರಿಗೆ ನೀವು ನಿಲ್ಲಬೇಕು. ಆಗ ಬಗುಳುವುದನ್ನು ನಿಲ್ಲಿಸಿ ತೋಕೆ ಮುದುರಿಕೊಂಡು ಅದೇ ತನ್ನ ದಾರಿ ಹಿಡಿದು ಹೋಗುತ್ತದೆ ಅಲ್ಲವೆ? ಅಥವಾ ಎದುರಿಗೆ ನಿಂತು ನೀವೂ ಗರ್ರ್‌ರ್ರ್ ಎಂದರೆ ಒಂದಕ್ಕೆರಡು ನಾಯಾಗುವುದಿಲ್ಲವೆ? ಹಲ್ಲು ಕಿರಿವವರ ಬಳಿ ದಿಟ್ಟವಾಗಿ ನಿಂತು ಅವರನ್ನು ನಿಮ್ಮನೆಗೆ

ಊಟಕ್ಕೆ ಕರೆಯಿರಿ. ಊಟ ಉಪಚಾರಗಳಲ್ಲಿ ಎಷ್ಟು ಅದರ ವಿಶ್ವಾಸಗಳು ನಿಮಗೆ ದೊರಕುತ್ತಿರುವುವೆಂದು ಅವರು ಕಾಣಲಿ. ದಿನವೂ ನೀವು ಉಡುವ ಬಟ್ಟೆಯನ್ನು ನಿಮ್ಮ ಗೆಳೆಯರು ನೋಡಿದ್ದಾರೆ. ಅದನ್ನು ಹಾಗೆ ಒಗೆದು ಇಸ್ತ್ರಿಮಾಡಿ ಇಟ್ಟವರು ಯಾರು ? ನಿಮ್ಮ ಕೊಠಡಿ ಎಷ್ಟು ಒಪ್ಪವಾಗಿ ಓರಣವಾಗಿರುತ್ತದೆಯೊ ಅವರ ಕಣ್ಣಿಗೆ ಬೀಳಲಿ. ನೀವು ಕಚೇರಿಗೆ ಹೋಗುವಾಗ ತಾವೇ ಬುರುಸು ಹಾಕಿ ಒರಸಿ, ಬಣ್ಣ ಕಳೆ ಕೊಟ್ಟ ಕಾಲ್ಜೋಡನ್ನು ಮುಂದೆ ತಂದಿಟ್ಟು ಲೋಹದ ನಾಲಿಗೆಯಿಂದ ನಿಮ್ಮ ಹಿಮ್ಮಡಿಯನ್ನು ಅದರಲ್ಲಿ ಸೇರಿಸುವವರು ಯಾರು ? ಷೂ ಹಾಕಿದ ದಿನ ಲೇಸ್ ಕಟ್ಟುವವರು ಯಾರು? ಆ ಒರಟು ಗಂಡುಗಳಿಗೆ ತಮ್ಮ ಮನೆಯಲ್ಲಿ ಯಾವ ಸುಖ ದೊರಕುತ್ತದೆಯೊ ಅವರೇ ಕೇಳಿಕೊಳ್ಳಲಿ. ಶನಿ, ಮನೆಯಿಂದ ತೊಲಗಿದರೆ ಸಾಕು ಎಂದಿರಬಲ್ಲದು ಅಲ್ಲಿ....ಅಲ್ಲದೆ, ಗಂಡಿನದೇ ಏಕೆ ಎಂದಿಗೂ ಜರ್ಬು ? ಹೆಚ್ಚು ಪ್ರಯೋಜನ ದೊರಕುವಂತಾದರೆ ಅವಳೇ ಜರ್ಬು ಮಾಡಲಿ ಕೆಲವು ಕಾಲ. ನಾವು ಸಂಪಾದಿಸಿ ಅವಳು ಕುಳಿತು ತಿನ್ನುವುದೇಕೆ? ನೀವೇ ಕುಳಿತು ತಿನ್ನಿ, ಅವಳೇ ದುಡಿಯಲಿ; ಜರ್ಬು ಮಾಡಲಿ, ಅಥವಾ ಇಬ್ಬರೂ ದುಡಿದು ಜರ್ಬು ಮಾಡಿ. ಒಂದು ಸರಿಸಮತೆ ಸಿದ್ಧಿಸಿದ ಕ್ಷೇಮಮಾರ್ಗ ಅಲ್ಲವೆ ಅದು? 'ಅಮ್ಮಾವ್ರ ಗಂಡ' ದಲ್ಲಿ ಈ ತತ್ತ್ವವನ್ನು ತಾನೇ ಕೈಲಾಸಂ ನಿರೂಪಿಸಿರುವುದು? ರಾಯರ ಹೆಂಡತಿಯನ್ನು ಸುಲಭವಾಗಿ ಸೋಲಿಸುವ ಹಾಗಿಲ್ಲ. ಅಮ್ಮಾವ್ರ ಗಂಡಂದಿರು ಹೊರಗಿನವರಿಗೆ ಹಾಗೂ ಹೀಗೂ ಕಾಣಿಸಬಹುದಾದರೂ ಒಳಗೆ ನಿಜವಾದ ಪ್ರೀತಿ ಸಿದ್ಧಿಸಿರುತ್ತದೆ.

ಕೋಳಿಗಳು ಗಂಡಾಗಲಿ ಹೆಣ್ಣಾಗಲಿ ಹಲವು ಬಹು ಚೆಲುವಿನ ಪ್ರಾಣಿಗಳು. ಇವನ್ನು ಹಕ್ಕಿಗಳೆನ್ನಲೆ, ಜೀವಗಳು, ಜಂತುಗಳು ಎನ್ನಲೆ ನಿರ್ಣಯ ಮಾಡಲಾರದೆ ಪ್ರಾಣಿಗಳು ಎಂದಿದ್ದೇನೆ. ಅವುಗಳ ಪ್ರಾಣ ನಿಮ್ಮ ಕೈಯಲ್ಲಿದೆಯಾದರೂ ನೀವು ಇರಿಸುವವರೆಗೂ ಅವು ಪ್ರಾಣಿಗಳೇ ಸರಿ. ರೆಕ್ಕೆಗಳಿದ್ದರೂ ಎತ್ತರಕ್ಕೆ ಆಕಾಶದಲ್ಲಿ ಹಾರುವ ಶಕ್ತಿ ಅವಕ್ಕಿಲ್ಲ. ಬೀದಿ ನಾಯಿಗಳಿಗೆ ಹೆದರಿ ಬದುಕಬೇಕಾದ ಬಾಳು ಅವುಗಳದು. ಅವುಗಳಿಗೆ ತಪ್ಪಿಸಿಕೊಂಡು ಬದುಕಬಲ್ಲಷ್ಟು ಎತ್ತರ ಇವು ಹಾರಬಲ್ಲವು ಅಷ್ಟೇ. ಹಾಗೆ ನೋಡಿದರೆ ಬ್ರಾಹ್ಮಣನಿಗೆ ಎರಡೂ ಕೊಳೆಗಳೇ ; ಕೋಳಿ, ನಾಯಿ. ಅವನಿರುವ ಕಡೆ ಇವು ಅಥವಾ ಅವುಗಳಿರುವ ಕಡೆ ಇವನು, ಇರತಕ್ಕದ್ದಲ್ಲ. ಇವುಗಳನ್ನು 'ನ ಸ್ಪೃಶೇಯಃ ಸ್ಪೃಷ್ಟ್ವಾ ಸ್ನಾಯಃ' - ಮುಟ್ಟಬಾರದು, ಮುಟ್ಟಿದರೆ ಸ್ನಾನ ಮಾಡಬೇಕೆಂಬುದು ವಿಧಿ.... ಆದರೆ ಎಷ್ಟು ಬಣ್ಣಗಳ, ಎಷ್ಟು ಬಣ್ಣದ ಬೆರಕೆಗಳ, ಚುಕ್ಕೆಗಳ, ಚೌಕಳಿಗಳ ಆಕೃತಿಗಳ ಕೋಳಿಗಳಿಲ್ಲ. ಕೆಲವಂತೂ -ಆ ವಾಸನೆ ಬಿಡಿ-ಹಂಸಗಳಿದ್ದ ಹಾಗಿರುತ್ತದೆ. ಹುಂಜಗಳ ಬಾಲದ ಮೇಲೆ ಬಾಗುವ ಒಂದೆರಡು ಪುಕ್ಕ ಯಾವ ಹಂಸದ ಬಾಗಿಗೆ, ಯಾವ ಚೌತಿಚಂದ್ರನ ಆಕೃತಿಗೆ, ಕಾಂತಿಗೆ, ವಕ್ರತಾವಿಲಾಸಕ್ಕೆ ಕಡಮೆ ! ಜಾಣನಾದ ಚಿತ್ರಕಾರನೊ ಶಿಲ್ಪಿಯೊ, ಕೋಳಿಯ ಬಾಗುಬಳುಕನ್ನು ಅದರ ಕೊರಲನ್ನು, ಮೂಗುತಿ ಮುಕುರವನ್ನು, ಅದರ ಶಿಖೆಯನ್ನು, ಚೇತನದಿಂದ, ಚಲಿಸುವ ಅದರ ಬಳುಕನ್ನು

ಚಿತ್ರಿಸಬಲ್ಲಿರಾ ? ಕಡೆದು ತೋರಿಸಬಲ್ಲಿರಾ? ಒಂದು ಸಲ ಕೋಳಿಗಳ ಪ್ರದರ್ಶನಕ್ಕೆ ಹೋಗಿ ನೋಡಿ ಬನ್ನಿ. ಹಲವೆಲ್ಲ ವಿದೇಶಿ ಹೆಸರಿನವೂ ತಳಿಗಳೂ ಆದರೂ ನಮ್ಮಲ್ಲಿ ಅವೆಲ್ಲ ಇವೆ. ಆ ವೈವಿಧ್ಯ, ಆ ವರ್ಣಸಂಪತ್ತಿ ನಿಮ್ಮ ಕಣ್ಣು ತುಂಬುತ್ತದೆ. 'ಲೆಗ್‌ಹಾರನ್' ಕೋಳಿಗಳನ್ನು, 'ಅಂಕೋನಾ' 'ರ್ಹೋಡ್ ಐಲೆಂಡ್' ಜಾತಿಯವನ್ನು ಕಂಡಿದ್ದೀರ ? ಸುಮಾತ್ರಾ ಜಾತಿಯದು ಬಿಲ್ಲು ಬಗ್ಗಿದಂತೆ ಕುಡಲು ಕೊಂಕಿದಂತೆ ಕೊಂಕುವುದು. ಆ ಸೌಂದರ್ಯ ಇನ್ನಾವುದಕ್ಕೂ ಬಾರದು. ಆ ರೆಕ್ಕೆ ಪುಕ್ಕ, ಆ ಕೊಕ್ಕು, ಒಪ್ಪುವ ಜುಟ್ಟಿನ ನಿಮಿರು ಕೆಂಪು, ಕೊರಲಿನ ಜೋಲು ಕೆಂಪು, ಆ ಕಲೆತ, ನಡೆ, ಅವಕ್ಕೇ ವಿಶೇಷ. ಹೆಣ್ಣಿಗೆ ಅಷ್ಟು ಹೆಚ್ಚು ಅಲಂಕಾರವಿಲ್ಲವಾದರೂ ಅವುಗಳ ಮೈಬಣ್ಣ ಹೆಚ್ಚು ಸ್ನಿಗ್ಧ. ಗರಿಕೆ, ಎಳಬಿದಿರು, ಲಾಳ, ಜೋಳ, ರೇಷ್ಮೆ ಬಣ್ಣದೊಡಲಿನ ಕೋಳಿಯ ಕೊರಲಲ್ಲಿ ಕಾಣುವ ಕೆಂಪು ಬಹು ಮೆಚ್ಚು ತರುತ್ತದೆ. 'ವ್ಯಾನ್ ಡೋಟ್' 'ಸಸೆಕ್ಸ್' ತಳಿಯ ಹತ್ತೆಂಟು ಬಣ್ಣಗಳು ಅಲೆ ಅಲೆಯಾಗಿ ರೆಕ್ಕೆ ಪುಕ್ಕಗಳಾಗಿ ಅವುಗಳ ಒಡಲನ್ನು ಕವಿದು ಮುಚ್ಚುತ್ತದೆ. ಎಂಥ ಕೈಯ ಮಾಟವೊ ಈ ಸೌಂದರ್ಯವನ್ನು ಕಿತ್ತು ಹರಿದು ತುಪ್ಪುಳನ್ನು ತೋಡಿ ಚಕ್ಕಳದೊಳಕ್ಕೆ ಸಂಭಾರವನ್ನು ಗಿಡಿದು ಬಾಡಿಸಿ, ಕರಿದು, ಅದನ್ನು ಹೊಟ್ಟೆಗೆ ಹಾಕಿಕೊಳ್ಳುವ ಪ್ರವೃತ್ತಿ ಮನುಷ್ಯನಿಗೆ ಮಾತ್ರ ಸಹಜವಾದ ಬಾಣಸ. ಮೈ ತುಂಬಿಕೊಂಡು ಹದವಾಗಿ ಬೆಳೆದ ಆ ಪ್ರಾಣಗಳನ್ನು ನೋಡಿ ಸೃಷ್ಟಿಯ ಸೌಭಾಗ್ಯ ಸಾಮಾನ್ಯವಸ್ತುಗಳಲ್ಲಿಯೂ ಎಷ್ಟು ಮೋಹಕವಾದ್ದು ಎಂದು ಯೋಚನೆ ಬರುವುದರ ಬದಲು ಅಂಥದನ್ನು ಅನ್ನವಾಗಿಸುವ ಚಿಂತೆ, ನಿರಂತರ ವೃತ್ತಿ ನರನದು. ಮಾಂಸಭೋಜನ ಸಾಲದೆಂದು ಅದನ್ನು ಅದೇ ಜೀವಂತ ಆಕಾರಕ್ಕೆ ಬರುವಂತೆ ರೂಪಿಸಿಕೊಂಡು ತಿನ್ನುತ್ತಾರೆ. ಯಾವುದನ್ನು ಕಂಡರೂ ಬಾಯಿ, ಹಲ್ಲು, ಹೊಟ್ಟೆಗೆ ಅವನ್ನು ತುರುಕುವ ಪಶುತನ ಮನುಷ್ಯನದು. ಚಿಗುರು ಕಂಡ,- ಅಗಿಯುತ್ತಾನೆ. ಹುಲ್ಲು ಕಡ್ಡಿ ಕಿತ್ತು ಕಡಿಯುತ್ತಾನೆ. ಗುಲಾಬಿ ಕೊಟ್ಟರೆ ಅದರ ದಳ ದಳ ಬಿಡಿಸಿ ಹೊಟ್ಟೆಗೆ ಹಾಕುತ್ತಾನೆ. ತುಳಸಿದಳ ಮೇಯುತ್ತಾನೆ ; ಆರೋಗ್ಯವಂತೆ ಮೈಗೆ. ಚೆಲುವಾದ ಪದಾರ್ಥ ಹೊರಗೆ ನೆಮ್ಮದಿಯಾಗಿ ಉಳಿಯುವಂತಿಲ್ಲ. ತನಗೆ ಆಹುತಿಯಾದ ಹೊರತು ಮನಸ್ಸಿಗೆ ಶಾಂತಿ ಇಲ್ಲ. ತನ್ನ ಹೊಟ್ಟೆಗೆ ಬೀಳುವವರೆಗೂ ನೆಮ್ಮದಿ ಇಲ್ಲ ಈ ತೋಳಕ್ಕೆ.

ಕೋಳಿ ಕೊಳ್ಳುವುದನ್ನು ನೋಡಿದ್ದೀರಲ್ಲ ! ಎತ್ತರಕ್ಕೆ ನಿಂತು ಕಣ್ಣಾಡಿಸಿ ಮೊದಲು ಅದನ್ನು ನೋಡುವರು. ಆಮೇಲೆ ಅವಕ್ಕೆ ಬಾಗಿಯೊ ಅವನ್ನು ಕೈಯಲ್ಲಿ ಎತ್ತಿಕೊಂಡೊ ಕುರಿಯನ್ನು ಪರೀಕ್ಷಿಸಿದಂತೆಯೇ ಇಲ್ಲಿ ಅಲ್ಲಿ ಹಾಗೆ ಹೀಗೆ ಅದನ್ನು ಹಿಸುಕಿ ಎಷ್ಟು ಮಾಂಸ ಸಿಕ್ಕುತ್ತದೆಂದು ಗೊತ್ತು ಮಾಡಿಕೊಳ್ಳಲು ಅದರ ಗೋಳು ಹುಯ್ದುಕೊಂಡಾಗ ಅಂಥವರ ಜೀವ ಹಿಂಡಬೇಕೆನ್ನಿಸುತ್ತದೆ. ಕಸಬುದಾರನಿಗೆ ಕಣ್ಣು ತಿಳಿಸಲಾರದೆ, ಕೈ ತೂಕ ಕಾಣಿಸಲಾರದೆ, ಹಿಸುಕಬೇಕೇಕೆ? ಅವರನ್ನು ತಡೆಯುವವರು ಯಾರು? ಮನುಷ್ಯನ ಆಹಾರಕಲ್ಪದಲ್ಲಿ ಕೋಳಿಗೆ ಬಹು ದೊಡ್ಡ ಸ್ಥಾನವಿರುವಂತಿದೆ. ಶತಶತಮಾನಗಳಿಂದ, ಕೋಳಿ ತಿನ್ನುವವರ ಸಂಖ್ಯೆ ಲೋಕದಲ್ಲಿ ಹೆಚ್ಚಾದುದರಿಂದ

ಸೊಪ್ಪು, ಸೌತೆ, ಹುಲ್ಲು ತಿನ್ನುವ ಬಡವುಗಳ ಮಾತಿಗೆ ಯಾವ ಬೆಲೆ ಬಂದೀತು ? (ಅವರೇ ಮುರುಗೈಗಳಾಗುವರು) ಹೇಗೊ ಏನೊ ದೇವರಿಗೆ ಅರ್ಪಿಸಿಯೇ ಬಿಟ್ಟು ದಿನವೊಂದಕ್ಕೆ ಒಂದನ್ನು ಪಕಾಯಿಸಿ ಇಂದು ಮರಿಯ ಸಾರ, ಇಂದು ಈ ಅಡಿಗೆ, ನಾಳೆ ಅದು ಮಾಡಿ ಅವಕ್ಕೆ ಮುಕ್ತಿ ತರುವ ವ್ಯಾಪಾರವೇ ಎಲ್ಲೆಲ್ಲಿಯೂ. ಹಲ್ವ ಮಾಡುತ್ತಾರೆಯೊ 'ಭಾತು' ಗಳಿಗೆ ಹಾಕುತ್ತಾರೆಯೊ ಭಜಿ ಕರೆಯುತ್ತಾರೆಯೊ ಯಾರು ಬಲ್ಲರು ? ಇವೊತ್ತು ಕೋಳಿ ಮಾಡಿದ್ದೆವು ಎಂಬ ಸಾಕಲ್ಯದ ಮಾತಿನಲ್ಲಿ ಪಕ್ವಾನ್ನಗಳ ಊಟವಾಗಿರುತ್ತದೆ. ಯಾವುದನ್ನು ಕಿತ್ತು ಹೂರಣಗಳನ್ನು ತುಂಬಿ ಅನಾಮತ್ತಾಗಿ ಅದನ್ನು ಹಂದಿಗೊಬ್ಬಿನಲ್ಲಿಯೊ ಏತರಲ್ಲಿಯೊ ಬೇಯಿಸಿ ತಯಾರಿಸಿದ ಭಕ್ಷ್ಯಗಳನ್ನು ತಿನ್ನುವುದು ಮಜಾ ಅಂತೆ. ಹೆಂಗಸರು ಈ ಮಾತಾಡುತ್ತಾರೆ ; – ಏನಂತೀರಿ ! ಅಲ್ಲದೆ ಈ ಸಂಬಂಧದಲ್ಲಿ ಒಂದು ನಾಣ್ನುಡಿ ಇನ್ನೊಂದರ್ಥವನ್ನು ಹಾಯಿಸಲು ನೆರೆಯುತ್ತಿದೆ. ಕೋಳಿಯನ್ನು ಕೇಳಿ ಸಂಬಾರ ಅರೆಯುತ್ತಾರೆಯೆ ? ಎಂಬುದು ಅದು. ರುಚಿ ಕಂಡವರು, ಬಯಸುವವರು, ಯಾವ ಖಾರ ಸಂಭಾರ ಹೇಗೆ ಹೇಗೆ ಅರೆದರೆ ಅದಕ್ಕೆ ತಕ್ಕ ಹದವಾಗುವುದೊ ಬಲ್ಲರು. ನಿನ್ನ ಅಡುಗೆಗೆ ಇಂಥ ಖಾರ ಅರೆಯಲೇ ? ಇಂಥ ದ್ರಾಕ್ಷಿ, ಇಂಥ ಕೇಸರಿ ನಿನ್ನಡುಗೆಗೆ ಬೇಕೆ? ಹಾಕಲೆ ? ಎಂದು ಕೋಳಿಯನ್ನು ಕೇಳಿ ಒಪ್ಪಿಸಿ ಅರೆಯುತ್ತಾರೆಯೆ ? ಸೇರಿಸುತ್ತಾರೆಯೆ? ತಮಗೆ ಸಂತೋಷವನ್ನು ಒದಗಿಸುವ ಪ್ರಾಣಿಯ ಅಭಿಪ್ರಾಯಕ್ಕೆ ಬೆಲೆ ಇಲ್ಲದೆ ಹೋಯಿತಲ್ಲ ಎಂದು ವ್ಯಥೆ ಪಡುವಿರಾದರೆ ಅದಕ್ಕೆ ಯಾರಾದರೂ "Fundamental rights" ಓ ರಿಟ್ ಅಧಿಕಾರವೊ ಕೊಟ್ಟಿದ್ದಾರೇನು? ಇಲ್ಲವಲ್ಲ. ಹಕ್ಕುಗಳು, ದಕ್ಕುಗಳು ನಮಗೆ; ಮನುಷ್ಯರಿಗೆ. ಕೋಳಿಗೆ ಎಲ್ಲಿ ಬರಬೇಕು ಆ ಅದೃಷ್ಟ? ದೇವರ ಪೀಠದೆದುರು ನಿಂತು ಅವೆಲ್ಲ ಸೇರಿ ಅವನ ಬರ್ಬರತೆಯ ಮೇಲೆ ಅಹವಾಲ್ ಹೇಳಿಕೊಳ್ಳುವಾಗ ಅವನೇನು ಉತ್ತರ ಹೇಳುತ್ತಾನೆಯೊ ಕೇಳಬೇಕು. ಅಲ್ಲದೆ ಯಾವ ಕೋಳಿಗೂ ಮೀನಿಗೂ, ಮಾಂಸಕ್ಕೂ ಸಿಹಿ, ದ್ರಾಕ್ಷಿ, ಕೇಸರಿ ಸಂಸ್ಕಾರ ಒಗ್ಗದಂತೆ. ಎಲ್ಲಕ್ಕೂ ಖಾರ ಮೆಣಸು ಅರೆದರೆಯೇ ಲೇಸು.

ದೇವರ ಮಾತು ಬಂತು. ಕೆಲವು ದೇವರುಗಳು ಶಾಕಾಹಾರಿಗಳೇ ಅಲ್ಲ. ತಮ್ಮ ಭಕ್ತರಂತೆಯೇ ಆಮಿಷಾಹಾರಿಗಳು. ಹಾಲು, ನೀರು, ಹಣ್ಣು ಬೋನವಾದ ಸಾಧುಗಳು ಹಾರುವಯ್ಯಗಳ ದೇವರಾದರೆ ಕುರಿ, ಕೋಳಿ, ಗೂಳಿ, ಕೋಣ, ಗೇ ಎನ್ನಲೆ-ಘೇ ಎನ್ನಲೆ–ಂಡಾಮೃಗ ತಿನ್ನುವ ಜನರ ದೇವರು ಆ ತಿಂಬ ಭಕ್ತರ ಮನಸ್ಸಿಗೆ ಸಂತೋಷವುಂಟುಮಾಡಲು ಅದೇ ಆಹಾರವನ್ನು ಬೇಡುತ್ತಾರೆ. ನಮ್ಮೂರ ದುಗ್ಗಲಮ್ಮ ತಾಯಿ ಕೆರೆಯ ಕಟ್ಟೆಗೆ ಸರಿಯಾಗಿ ನಡುವೆ ನೆಲಸಿದ್ದಾಳೆ. ಶುಕ್ರವಾರ, ಮಂಗಳವಾರ, ಆಕೆಗೆ ವಿಶೇಷ ಪೂಜೆ ನಡೆಯುತ್ತದೆ. ಶುಕ್ರವಾರ ಹೆಚ್ಚಾಗಿ ; ಮಂಗಳವಾರ ಕಡಮೆಯಾಗಿ. ಆಕೆಗೆ ಮಂಗಳವಾರ ಪ್ರಿಯವಾದರೂ ನಮ್ಮ ಭಾಗ್ಯಕ್ಕೆ ಶುಕ್ರವಾರ ಹೆಚ್ಚು ಪ್ರಯೋಜನಕಾರಿಯಾದ್ದರಿಂದ ಈ ಏರ್ಪಾಡಿಗೆ ಆಕೆಯ ಒಪ್ಪಿಗೆ ದೊರೆತಿದೆ. ಅರಿಸಿನ,

ಕುಂಕುಮ, ಹಾಲು, ಮೊಸರು, ಎಳನೀರು, ಕಬ್ಬಿನ ರಸ, ತಂಬಿಟ್ಟು, ಕಣಗಿಲೆ, ಹೊಂಬಾಳೆ, ಕೇದಗೆಯಿಂದ ಪೂಜೆ ಪುರಸ್ಕಾರ ಆಗುತ್ತದೆ. ಇಷ್ಟರಿಂದ ನಮ್ಮ ಪೂಜೆ ಮುಗಿಯಿತು. ನಾವು ಹಾಕಿದ ತುಪ್ಪದ ದೀಪಿಗೆಗೆ ಎಲ್ಲರೂ ತುಪ್ಪ ತಂದು ಸುರಿಯುತ್ತಾರೆ. ಅದು ಅಖಂಡವಾಗಿ ಉರಿಯುತ್ತದೆ. ದೇವಸ್ಥಾನದ ಎದುರಿಗೆ ರಸ್ತೆಯ ಆಚೆ ಕಲ್ಲಿನ ಸಣ್ಣ ಬಲಿಕಂಬ ಒಂದಿದೆ. ಅಲ್ಲಿ ಕೋಳಿ ಕುರಿ ಮುಂತಾದುವನ್ನು ಬಲಿಕೊಡುತ್ತಾರೆ. ಅವನ್ನು ಕುಯ್ಯುವಾಗ, ಹೊಡೆಯುವಾಗ ಅವರಿಗೂ ಆಕೆಯ ಶಕ್ತಿ, ಆವೇಶ ಹೆಚ್ಚಾಗುತ್ತದೆ. ಆ ಉತ್ಸಾಹಗಳಲ್ಲಿ ಈ ಜೀವಿಗಳ ರಕ್ತವನ್ನೂ ಅಮ್ಮನ ಪಾದಕ್ಕೆ ಎರೆಯುತ್ತಾರೆ. ಹತ್ತಿರದಲ್ಲೇ ಒಂದು ಕಡೆ ಅದನ್ನು ಅಟ್ಟು ಆಕೆಗೆ ನೈವೇದ್ಯ ಮಾಡಿ ತಾವು ಪ್ರಸಾದವನ್ನು ತಿನ್ನುತ್ತಾರೆ. ಕೋಳಿಯನ್ನು ಕುಯ್ಯುವಾಗ ಅದು ಕೂಗಿದರೇನು ನಷ್ಟ ? ಅದರ ತಲೆ ಹತ್ತು ಗಜ ಹಾರಿ, ಎಗರಿ ಒಡಲು ಬೇರೆ ತಲೆ ಬೇರೆ ಒದ್ದಾಡಿ ಸತ್ತರೇನು ? ಕುರಿ ಮೇಕೆ ಆರ್ತವಾಗಿ ಕೂಗುತ್ತವೆ, ನಿಜ. ಆ ಶಬ್ದದಿಂದ ದೇವತೆಗೆ ತೃಪ್ತಿಯೇ ಎನ್ನುವರು. ಅವರವರ ಭಕ್ತಿಗೆ ತಕ್ಕಂತೆ ಅವರವರ ಪೂಜೆ ; ಸೇವೆ.

ಆದರೆ ಈ ಒಂದು ನಡತೆಯನ್ನು ಮಾತ್ರ ನನ್ನ ಮನಸ್ಸು ಒಪ್ಪಿಲ್ಲ. ಕೋಳಿಗಳನ್ನು ಬೇಕಾದ ಹಾಗೆ ಸಾಕಿ ; ದಿನವೂ ತಿನ್ನಿ; ಹಲ್ಲಿಂದ ಕಡಿದು ಹಸಿಯಾಗಿಯೇ ಭಕ್ಷಿಸಿ. ಗ್ಯಾಲನ್ ಗಟ್ಟಲೆ ಕೋಳಿಮರಿ 'ಬ್ರಾತ್' ಕುಡಿಯಿರಿ. ಹೆನ್ಸ್‌ಎಗ್ಗ್ ಹಲ್ವ ತಿಂದು ತೋಳಖಂಡ ಬೆಳಸಿಕೊಳ್ಳಿ. ದೊಡ್ಡ ಹೇಳಿಗೆಗಳು ನೂರಾರಲ್ಲಿ ಕೂಡಿ ಲಷ್ಕರುಗಳಿಗೊ ಬೊಂಬಾಯಿಗೊ ಸಾಗಿಸಿ. ಅದೂ ಒಂದು ದಂಧೆ. ಆದರೆ ಕೊಂಡ ಮಾತ್ರದಿಂದಲೇ ಅದರ ಎರಡೂ ಕಾಲೂ ಕಟ್ಟಿ ತಲೆಕೆಳಗಾಗಿ ಅದನ್ನು ಎತ್ತಿಕೊಂಡು ಹೋಗುವ ನಿರ್ಮಾನುಷತೆ ಏಕೆ ನಿಮಗೆ? ಇಲ್ಲವಾದರೆ, ಅದು ತಕರಾರು ಮಾಡುವುದೆಂದಲ್ಲವೆ? ನಿಮ್ಮ ಅನುಕೂಲಕ್ಕೆ ತಕ್ಕಂತೆ ಅದು ಉಡುಗಲೆಂದಲ್ಲವೆ? ನಮಗೂ ಇರುವುದು ಎರಡೇ ಕಾಲು. ಅವನ್ನು ಯಾರಾದರೂ ಕಟ್ಟಿ ತಲೆ ಕೆಳಗಾಗಿ ಹಿಡಿದು ನಿಲ್ಲಿಸಿದರೆ, ನಾಲ್ಕು ಮೈಲಿ ಒಯ್ದರೆ ನಾವು ಎರಡು ನಿಮಿಷ ತಾಳಬಲ್ಲವೆ? ಒಡಲ ರಕ್ತವೆಲ್ಲ ತಲೆಗಿಳಿದು ನರ ಬಿಗಿವ ಯಾತನೆ ಯಾರು ಅನುಭವಿಸಿಯಾರು? Third degree ಎನ್ನುತ್ತಾರಲ್ಲ,– ಮೂರನೆಯ ಹಂತದ ಬಿಗಿತದ ಶಿಕ್ಷೆ ಕೊಡುವ ಪೊಲೀಸರು ಬೀಗ ಬಿಗಿದ ಕತ್ತಲ ಕೋಣೆಗಳಲ್ಲಿ ಸೇರಿಸಿಕೊಂಡು ಅಪರಾಧಿಗಳಿಗೆ ಹೀಗೆ ಹಿಂಸೆ ಕೊಡಬಹುದು. ಹಿಂಸೆಪಡುವವರ ಮೇಲೆ ಅಪರಾಧಿಗಳೆಂಬ ಆಪಾದನೆಯಾದರೂ ಇದೆ. ನಿಜವನ್ನೊ ನಿಜವಲ್ಲದ್ದನ್ನೊ ಅವರ ಬಾಯಿಂದ ಹೊರಡಿಸಬೇಕಾಗುತ್ತೆನ್ನುತ್ತಾರೆ. ಅಂಥಲ್ಲಿ ಚಿತ್ರಹಿಂಸೆ ಅಗತ್ಯವಂತೆ. ಆದರೆ ನೀವು ದಿನವೂ ಬೆಳಸುವ, ತಿನ್ನುವ, ನಿಮಗೆ ಇಷ್ಟು ಹರ್ಷ ಪುಷ್ಟಿ ಕೊಡುವ ಪ್ರಾಣಿಗಳಿಗೆ ಆ ಹಿಂಸೆ ತರವೇ ಎಂದು ಅಂಥ ಜನರನ್ನು ಕೇಳಬೇಕೆನ್ನಿಸುತ್ತದೆ. ನಾವು ಕೇಳಬಹುದು. ಆದರೆ ಅದರ "ಸೆಬ್ಬಿ" ಹಾಗೇ ಎಂದು ಉತ್ತರ ಬರುತ್ತದೆ. ತಜ್ಞರ ಮಾತನ್ನು ಒಪ್ಪಲೇಬೇಕು.

ಕೋಳಿಗಳ ಪ್ರಯೋಜನ ಇನ್ನೊಂದು ಬಗೆಯದಿದೆ. ಅವನ್ನೇ, ಅವುಗಳ ಮರಿಯನ್ನೇ ತಿನ್ನಬೇಕು ಎಂದಲ್ಲ. ಸಾಕುವವರು ಮಾಂಸಕ್ಕೊ ಮೊಟ್ಟೆಗೊ ಮರಿಗಳು ಬೇಕೆಂದೊ ಪೋಷಣೆಯ ಬಗೆಬಗೆಯ ಎಚ್ಚರವಿಚಕ್ಷಣೆಗಳಿಂದ ಬೆಳಸುತ್ತಾರೆ. ಮೊಟ್ಟೆ ಬಹು ಪುಷ್ಟಿಕರವಾದ ಆಹಾರವೆನ್ನುತ್ತಾರೆ. ನುಣ್ಣಗೆ ಮುತ್ತಿನ ಹೊಳಪಿನ ಅಂಡಾಕಾರದ ಆ ಪದಾರ್ಥವನ್ನು ಕೈಯಲ್ಲಿ ಹಿಡಿವುದೇ ಆನಂದ. ಆ ನೋಟ ಸೊಗಸು. ಹೊಸ ಮೊಟ್ಟೆಯಲ್ಲಾಡುವ ಜೀವಸಾರ ಎಳನೀರಿಗಿಂತ ರುಚಿಯಂತೆ. ತೂಕಕ್ಕೆ ತೂಕ ಮನುಷ್ಯನಿಗೆ ರಕ್ತಪೋಷಣೆ ಮಾಡುವುದಂತೆ. ಇನ್ನೇನೂ ಜೀರ್ಣವಾಗದವರಿಗೆ ರೂಪಾಯಿಗೆ ೧೦೦ ಪೈಸೆಯಂತೆ ಜೀರ್ಣವಾಗಿ ಅವರನ್ನು ಪೋಷಿಸುವುದಂತೆ. ಉಗುರ ಮೊನೆಯಿಂದ ತಟ್ಟಿದರೆ ಸಾಕು ಆ ರಸ ಕುಡಿಯಬಹುದು. ಅದನ್ನು ಒಡೆದು ಬೇಕಾದಂತೆ ರಸವನ್ನು ಬಗ್ಗಿಸಿಕೊಂಡು ಬಟ್ಟಲಂತಿರುವ ಆ ಹೊರ ಚಿಪ್ಪನ್ನು ಹೊರಗೆ ಬೀಸಾಡುವ ಸಂಭ್ರಮ ನೋಡುವಂಥದು. ಅದನ್ನು ಹಾಗೆ ಹೀಗೆ ಅಟ್ಟು, ಸಿಪ್ಪೆ ಸುಲಿದು ಒಳಗಿನ ಬಿಳಿ ಬೆಣ್ಣೆಯುಂಡೆಯನ್ನು ತಿನ್ನುವುದೊ ಮಿಣ್ಣೆ ಚಮಚಗಳಿಂದ ಅದನ್ನು ಕವರಿ ಅಂದವಾಗಿ ಸವಿಯುವುದೊ ಒಂದು ನಯಕಲೆ.

ಈಚೆಗೆ ಮೊಟ್ಟೆಯ ಸೇವನೆ ಮಡಿಯಾಗುತ್ತಲೂ ಬಂದಿದೆ. ಪಾಶ್ಚಿಮಾತ್ಯರ ಸಂಪರ್ಕದಿಂದ ಜೀವಾಜೀವ ವಿವೇಚನೆ ಬಹು ಸೂಕ್ಷ್ಮವಾಗಿ ನಡೆದು ಮೊಟ್ಟೆ ಮಾಂಸಾಹಾರವಲ್ಲ, ಅಪೇಯವಲ್ಲ, ಅಭೋಜ್ಯವಲ್ಲವೆಂದು ನಿರ್ಣಯವಾಗಿದೆ. ಎಲ್ಲ ಮೊಟ್ಟೆಯಿಂದಲೂ ಮರಿಯಾಗುವುದಿಲ್ಲವೆಂದು ಪ್ರಮಾಣವಾಗಿದೆಯಾದ್ದರಿಂದ ಅದು ಶಾಕವೇ ಅಂತೆ. ಮೀನು ಬಂಗಾಳಿಗಳಿಗೆ ಹೇಗೆ ಗಂಗಾಫಲವೊ ನೀರ ಬಾಳೆಯೋ ಮೊಟ್ಟೆ ಹಾಗೆಯೇ ಆಮಿಷಾಹಾರವಲ್ಲವೆಂದು ವಿಜ್ಞಾನಿಗಳು ತಿಳಿಸಿದ್ದಾರೆ. ವಿಜ್ಞಾನಿಗಳು ಈ ಕಾಲದ ಋಷಿಗಳು. ಆದ್ದರಿಂದ ಅವರದು ಋಷಿವಾಣಿಯೇ ಆಯಿತು. ಗಾಂಧೀಜಿಯವರಿಗೆ ಕೂಡ ಈ ಮಾತನ್ನು ಒಮ್ಮೆ ನಿವೇದಿಸಿದರು. ನನಗೂ ಬಹುಮಂದಿ ಕೇಳಿದ್ದಾರೆ – "Not even an egg !" ಎಂದು; ಅತೀವ ಕನಿಕರದಿಂದ. ದಿವ್ಯವಾದ 'ಒಬ್ಬಿಟ್ಟು' ಮಾಡಿ, ಅದರ ಹೂರಣಕ್ಕೆ ಮೊಟ್ಟೆಯ ಸಂಸ್ಕಾರ ಮಾಡಿಸಿದೆ. ಅದನ್ನು ಒಲ್ಲದ ಅರಸಿಕನನ್ನು ಏನೆನ್ನೋಣ? ಪಾಪವೇ, ಇವರಿಗಿನ್ನೇನು ಮಾಡಿಡೋಣ? ಗರಿಕೆಯೊ ತೌಡೊ ಹೊಟ್ಟೊ ಹಿಂಡಿಯೊ ತರಿಸಿದ್ದರಾಗುತ್ತಿತ್ತು-ಎಂದು ಪಶ್ಚಾತ್ತಾಪ ಪಟ್ಟವರುಂಟು. ಇಂದು ಎಲ್ಲಕ್ಕೂ ಜನ ಮೊದಲು ಬೊಂಬಾಯಿಗೊ ಡೆಲ್ಲಿಗೊ ಹೋದರೆ-ಅಷ್ಟು ದೂರವೇಕೆ, ಸಿಟಿಯಿಂದ ಪೆರೇಡ್ ಹೊಟೇಲಿಗೆ ಹೋದರೆ, ಹೊಸದಾಗಿ ಬಂದ ಧಾರಾಳದಲ್ಲಿ ಹುಡುಗರು ಮೊದಲು ಆರ್ಡರ್ ಮಾಡುವುದು ಆಮ್ಲೆಟ್ (Omelette) ಎಂಬ ಮೊಟ್ಟೆದೋಸೆಯನ್ನು. ತೆಳ್ಳನೆಯ ತಪ್ಪಲೆ ದೋಸೆಯಂತೆ ಅದಕ್ಕೆ ಏನೇನೊ ಮಸಾಲೆ ಸೇರಿಸಿ ಜೊತೆಗೆ ಹಸಿ ಈರುಳ್ಳಿಯ ಅಥವಾ ಟೊಮ್ಯಾಟೊ ಚೂರುಗಳನ್ನು ನಂಚಲು ತಂದುಕೊಟ್ಟಾಗ ಕಪ್ಪು ಮುಖ

ಕೆಂಬಾಗುತ್ತದೆ. ಬದನೆ ಹೂ ತಾವರೆಯಂತೆ ಅರಳುತ್ತದೆ. ಆ ಭಾಗ್ಯ ಒಲ್ಲದವರು ಅನುಭವಿಸಬೇಕಾದ ದಾರಿದ್ರ್ಯದಲ್ಲಿ ಆ ನಷ್ಟ ಬಹು ದೊಡ್ಡ ಕೊರತೆ.

ಹುಂಜಗಳ ಕಾಳಗ ಬಹು ಹಿಂದಿನ ಕಾಲದಿಂದ ಬಂದಿರುವ ಒಂದು ಪಂದ್ಯ. ಕುಸ್ತಿ, ವಜ್ರಮುಷ್ಟಿ ಕಾಳಗ, ದ್ವಂದ್ವ ಯುದ್ಧಗಳಂತೆಯೇ ಹುಂಜಗಳನ್ನೂ ಬಟೀರಾಗಳನ್ನೂ ಕಾಳಗಕ್ಕೆ ತರಪೇತು ಮಾಡುತ್ತಾರೆ. ಹುಂಜದ ಕಾಳಗ ಹಳ್ಳಿ ಹಳ್ಳಿಯಲ್ಲೂ ಒಂದು ಕಾಲದಲ್ಲಿ ನಡೆಯುತ್ತಿತ್ತು. ಮನುಷ್ಯರಿಗೆ ಯುದ್ಧ ಮರೆತು ಹೋಗದಿರಲೆಂದು ಹೀಗೆ ಆವೇಶವುಳಿಸಿಕೊಂಡಿತೇನೊ ಜನ. ಮಂಗಳೂರು ಕಡೆ ಈಗಲೂ ಅದೊಂದು ಹಬ್ಬ. ಕೆಲವು ಕಾಳಗದ ಹುಂಜಗಳು ನಿಂತರೆ, ಡೇಗೆ ಗಿಡಗಗಳಿಗಿಂತ ದಿಟ್ಟವಾಗಿ ನಿಂತು ಕಾದುತ್ತವೆ. ಭದ್ರವಾಗಿ ಕಾಲೂರಿ ಕೊರಳು, ತಲೆ ನಿಮಿರುವುವು-ಹೋರಾಟಕ್ಕೆ ಮಸೆದು ಅವನ್ನು ಬಿಡುವ ಮುಂಚೆ. ಅವುಗಳ ಕಾಲುಗಳಿಗೆ ಕತ್ತಿ ಕಟ್ಟಿ ಕಾಳಗ ಆಡಿಸುತ್ತಾರೆ. ನೂರಾರು ಸಾವಿರಾರು ರೂಪಾಯಿ ಪಣ ಇಡುತ್ತಾರೆ. ಅನೇಕ ಒಬ್ಬೆ, ಒರಸೆ, ಕಾದಾಟ ನಡೆದು ಇಕ್ಕಡೆಯವರ ಪ್ರೋತ್ಸಾಹಗಳಲ್ಲಿ ಹೋರಾಟ ನಡೆಯುತ್ತದೆ. ಆಡಿಸುವವರ ಮದ ಹುಂಜಗಳ ಆವೇಶವನ್ನು ಮೀರಿದ್ದು. ದವಡೆಯಲಿಟ್ಟ ಎಲೆ, ಅಡಿಕೆ, ಹೊಗೆಸೊಪ್ಪು ಮೆಲುವುದನ್ನೂ ಮರೆತು, ಚುರುಚುರನೆ ನೋಡುವ ನೆತ್ತರುಗೆಂಪಾದ ಅವರ ಕಣ್ಣು ಹೋರಾಟದಲ್ಲಿ ಬೆರೆಯುತ್ತದೆ. ಸಂಕೇತದ ಶಬ್ದಗಳನ್ನು ಮಾಡುತ್ತ, ಪಟ್ಟುಗಳನ್ನು ಸೂಚಿಸುತ್ತಿರುತ್ತದೆ. ಮೊದಲೇ ಅವಕ್ಕೆ ತೆಳುದುಪ್ಪಳು. ರೆಕ್ಕೆ ಬಲಕ್ಕಾಗಿ ಬಲಿತಿವೆಯೇ ಹೊರತು ಗರಿಗಲ್ಲ, ಚೆಲುವಿಗಲ್ಲ. ಕಾದಾಡುತ್ತಾಡುತ್ತಾ ರೆಕ್ಕೆ ಪುಕ್ಕ ಕಳಲಿ, ಕತ್ತರಿಸಿ, ಬಿದ್ದು, ಮೈಯೆಲ್ಲ ನೂರಾರು ಗಾಯವಾಗಿ ರಕ್ತ ಸುರಿಯುತ್ತ, ತಿದಿಯ ಬೊಂಬೆಗಳಂತೆ ಅವು ಒಂದರ ಮೇಲೊಂದು ಕ್ರೋಧದಲ್ಲಿ ಕವಿವ, ಕತ್ತಿ ಹಾಕುವ ರಭಸ, ಚಳಕ ಯಾವ ಐರಾವಣ ಮೈರಾವಣ ಕಾಳಗಕ್ಕೂ ಕಡಮೆಯದಲ್ಲ. ಗೆದ್ದಿತೊ ಜೈ ಬಾಬು ಗಿಟ್ಟಿತು. ಕೋಳಿಗೂ ಸಾಕಿದವರಿಗೂ ಕೀರ್ತಿ ಬಂದಿತು. ಅದರ ಕಾಲಿಗೆ ಚಿನ್ನದ ಚೈನು ಗಳಿಕೆಯಾಯಿತು. ಅದರ ಕೊರಳಿಗೆ ಹಾರಬಿತ್ತು. ಸುತ್ತ ಕಾಶ್ಮೀರ ಶಾಲು ಸುತ್ತಿತು. ಮುಲಾಮುಗಳ ಸರ್ವೋಪಚಾರ ನಡೆಯಿತು. ಸೋತಿತೊ ಅದರ ಮುಖಕ್ಕೂ ಯಜಮಾನನ ಮುಖದ ಮೇಲಿನಂತೆಯೆ ಮುಸುಕು ಬಿತ್ತು. ಕಾಳಗದಲ್ಲಿ ಅದು ಸತ್ತಿತೆನ್ನಿ,-ಆ ರಾತ್ರಿ ಖಾರ ಅರೆದು ಅದನ್ನು ಮುಗಿಸಿ ಬಿಡಬಹುದು. ಹಾಗೂ ಸರಿಯೇ ಹೀಗೂ ಸರಿಯೇ. ಗೆದ್ದ ಕೋಳಿ, ಕೊರಲೆತ್ತಿ ಕೂಗುವುದನ್ನು ಕೇಳಬೇಕು. ಆಗ ಅದು ಬರಿಯ ಜಂಬದ ಕೋಳಿಯಲ್ಲ. ಅದರದು ವೀರನಾದ. ಜಯದ ವಿಜೃಂಭಣ.

ಸಾಹಿತ್ಯ ಸಂಸ್ಕೃತಿಗಳಿಗೆ ನೀತಿಗಳಿಗೆ ನೆರವು ಕೊಟ್ಟ ಸತ್ವಗಳಲ್ಲಿ ಕೋಳಿಯೂ ಒಂದು. ಅದರ ಒಂದು ಕತೆಯನ್ನು ನೀವು ಕೇಳಿರಬೇಕು. ಚಿನ್ನದ ತತ್ತಿ ಇಡುವ ಕೋಳಿಯನ್ನು ಅದರ ಯಜಮಾನನು ಕೊಂದದ್ದು. ಮೈಡಾಸನ ಕತೆಯಂತೆಯೇ ಇಲ್ಲಿಯೂ ಅಷ್ಟೇ ಮೂಲಾವಿವೇಕ ದುರಾಸೆ. ತನ್ನ ಕುಕ್ಕುಟಲಕ್ಷ್ಮಿ ದಿನಾ ಒಂದೊಂದು

ಚಿನ್ನದ ಮೊಟ್ಟೆ ಇಟ್ಟರೆ ಅವನಿಗೆ ಸಾಲದಾಯಿತು. ತಿಂಗಳಿಗೆ ೧೫ ಮೊಟ್ಟೆ ಇಡುವ ಕೋಳಿಯೇ ಉತ್ತಮ ವರ್ಗದ್ದೆನ್ನುವಾಗ ಸುಧಾರಿತ ಜಾತಿಗಳು ದಿನಾ ಒಂದನ್ನು ಕೊಡುವುದು ಸೌಭಾಗ್ಯವೇ ಸರಿಯೆಂದು ೧೯೫೫ರಲ್ಲಿ ಕೂಡ ಗಣ್ಯವಾಗಿರುವಾಗ ಆ ಪುರಾತನ ಕಾಲದ ಕೋಳಿ ದಿನವೂ ಒಂದೊಂದು ಚಿನ್ನದ ಮೊಟ್ಟೆ ಇಡುತ್ತಿದ್ದರೂ ಅವನ ಆಸೆ ತೀರಲಿಲ್ಲ. ಮಡೆಯತನಕ್ಕೆ ಮಿತಿ ಎಲ್ಲಿ ? ಮದ್ದೆಲ್ಲಿ ? ಅವನಿಗೆ ಆತುರ. ಕೋಳಿಯನ್ನು ಒಡನೆಯೇ ಕೊಂದುಬಿಟ್ಟರೆ ಅದರೊಳಗಿರುವ ಎಲ್ಲ ಮೊಟ್ಟೆಗಳನ್ನೂ ಒಟ್ಟಿಗೆ ಸಂಗ್ರಹಿಸಬಹುದೆಂದು ಭಾವಿಸಿದ್ದ ದಡ್ಡ ಅವನು. ಅದರ ಬಸಿರೇನು ಕೊಳದಪ್ಪಲೆಯೆ, ರೆಫ್ರಿಜಿರೇಟರೆ, ಸರಕಾರದ ಮಳಿಗೆಯೆ ? ಕೇಸು ವರ್ಕರಿನ ಕೈಗುಂಡಿಯೆ ? ಸಬ್‌ರಿಜಿಸ್ಟ್ರಾರ್ ಕಚೇರಿಯೆ ? ಅಂಥ ವಿಪರೀತ ಕಲ್ಪನೆಗೆ ತಕ್ಕ ಪ್ರಾಯಶ್ಚಿತ್ತವಾಯಿತು, ಕೋಳಿ ಸತ್ತಿತು. ಇವನ ಬಾಯಿಗೆ ಮಣ್ಣು ಬಿತ್ತು. ಆದರೆ ಲೋಕಕ್ಕೆ ದೊಡ್ಡ ವಿವೇಕವನ್ನು ಕೊಟ್ಟಿತು, ಈ ಸಂಗತಿ.

ಇದು ಲೋಕನೀತಿಯಾದರೆ ಒಂದು ಕೋಳಿಯ ಬಲಿ ನಮ್ಮ ಸಾಹಿತ್ಯದಲ್ಲಿ ಬಲು ದೊಡ್ಡ ಧರ್ಮೋಪದೇಶವನ್ನು ಮಾಡಿದ ಪ್ರಸಂಗ ನಮ್ಮ ಯಶೋಧರ ಚರಿತ್ರೆಯಲ್ಲಿದೆ. ಹೆಂಡತಿ ತನಗೆ ಮಾಡಿದ ದ್ರೋಹವನ್ನು ಕೆಟ್ಟ ಕನಸೆಂದು ತಿಳಿಸಿದಾಗ ಮಗನ ಮಂಗಳಕ್ಕಾಗಿ ಶಾಂತಿಕರ್ಮವನ್ನಾಚರಿಸಬೇಕೆಂದ ತಾಯಿಯ ಮಾತನ್ನು ಮೀರಲಾರದೆ ಯಶೋಧರ ಚಕ್ರವರ್ತಿ ಜೀವಂತ ಕೃಕವಾಕಿಗೆ ಪ್ರತ್ಯಾಮ್ನಾಯವಾಗಿ ಹಿಟ್ಟಿನ ಕೋಳಿಯ ಬಲಿ ಕೊಡಿಸುತ್ತಾಳೆ. ಜೀವದಯೆ ಧರ್ಮದ ಮೂಲ ಎಂದು ನಂಬಿದ ಜಿನಧರ್ಮದಲ್ಲಿ ಈ ಪ್ರಸಂಗ ಧರ್ಮಸೂಕ್ಷ್ಮವನ್ನು ಕಾಣಿಸುತ್ತದೆ. ವಸ್ತುವಲ್ಲ ಮುಖ್ಯ, ಭಾವಕಲ್ಪನೆಗಳಿಗೂ ಅದೇ ಸ್ಥಾನವೆಂದು ತಿಳಿಸುವುದು ಅಗತ್ಯವಾಗಿತ್ತು. ಕೋಳಿ ಹಿಟ್ಟಿನದಾದರೇನು, ಜೀವಂತವಾದರೇನು, ಸಂಕಲ್ಪ ತಾನೆ ಮುಖ್ಯ ? ಅಲ್ಲದೆಯೊ ಕಥೆಯಲ್ಲಿನ ದುರದೃಷ್ಟವನ್ನು ನೋಡಿ. ಹಿಟ್ಟಿನ ಕೋಳಿಯನ್ನು ಹೊಯ್ದರೆ ಅಲ್ಲಿದ್ದ ಯಾವುದೊ ಬೆಂತರದ ಪ್ರಭಾವದಿಂದ ಅದು ಕೊಕ್ಕೊಕ್ಕೋ ಎಂದು ಕೂಗಿ ಸತ್ತು ಬಿದ್ದಿತಂತೆ. ಈ ಪಾಪದಿಂದ, ಎಷ್ಟು ಜನ್ಮಾಂತರಗಳಲ್ಲಿ ಅವನು, ತಾಯಿ ಎಷ್ಟು ಗಾಸಿ ಪಡಬೇಕಾಯಿತು ಎಂದು ಕವಿ ವರ್ಣಿಸಿ ತತ್ವಬೋಧೆ ಮಾಡಿದ್ದಾನೆ.

ಈವರೆಗೂ ಒಂದು ಬಗೆಯ ದಿನಸಾಮಾನ್ಯದ ಕೋಳಿಯನ್ನೇ ಕುರಿತು ನುಡಿದುದಾಯ್ತು. ಇನ್ನೊಂದು ಬಗೆಯಲ್ಲಿ ಅವನ್ನು ವಿಂಗಡಿಸಬಹುದು. ಊರು ಕೋಳಿ, ನೀರುಕೋಳಿ, ಕಾಡುಕೋಳಿ ಎಂದು. ಅರ್ಥವಿಸ್ತರಣದಿಂದ ಅದಕ್ಕೂ ಕೋಳಿ ಎಂಬ ಹೆಸರಿರುವುದೇ ಹೊರತು ನನ್ನೆಣಿಕೆಯಲ್ಲಿ ಅವು ನಿಜವಾದ ಕೋಳಿ ಅಲ್ಲ. ನೀವು ಲೋಪವನ್ನೆತ್ತೀರೆಂದು ನಿಮ್ಮ ತೃಪ್ತಿಗಾಗಿ ಒಂದೆರಡು ಮಾತು ಅವನ್ನು ಕುರಿತು ಹೇಳುತ್ತೇನೆ. ನೀರಕೋಳಿಗಳ ಪ್ರಯೋಜನ ಊರಿನದರಂತಲ್ಲ. ಊರ ಕೋಳಿಗಳ ಸಂಸಾರ ನಮ್ಮದರಂತೆ,-ಆದರೆ ಅಲ್ಲಿ ಕುಟುಂಬ ಯೋಜನೆ ತಕ್ಕದಲ್ಲ ?- ದೊಡ್ಡದು;

ಅಷ್ಟೇ ಮಾನವೀ. ಡೇಗೆಯೊ ಗರುಡನೊ ಆಕಾಶದಲ್ಲಿ ಪಿಳ್ಳೆಗಳಿಗಾಗಿ ಹಾರಾಡುತ್ತಿರುವಾಗ ಅದನ್ನು ಕಂಡ ಹುಂಜ ಎಚ್ಚರಿಕೆ ಕೊಡುತ್ತದೆ. ಬೆಳಿಗ್ಗೆ ಮರಿಗಳನ್ನೆಲ್ಲ ರೆಕ್ಕೆಯೊಳಗೆ ಇಟ್ಟು ಸೇರಿಸಿಕೊಂಡು ಅವನ್ನು ಕಾಪಾಡಬಯಸುವ ತಾಯವಾತ್ಸಲ್ಯ ಯಾವ ಯಶೋದೆಗೆ ಕಡಮೆಯದು? ಪಿಳ್ಳೆಗಳನ್ನೆಲ್ಲ ಆಡಿಸಿಕೊಂಡು ತಾಯ್ಕೋಳಿ ಆಹಾರ ಹುಡುಕುತ್ತ ತೂರಾಡುತ್ತ ದಿಬ್ಬಣ ತಿರುಗುವ ದೃಶ್ಯವೂ ಅಂತೇ ಕರುಳನ್ನು ಮಿಡಿಸುತ್ತದೆ. ಮನುಷ್ಯನು ತನ್ನ ಪ್ರಯೋಜನಕ್ಕಾಗಿ ಪಳಗಿಸಿಕೊಂಡವು, ಬಳಸಿಕೊಳ್ಳುವುವು, ಬೆಳಸುವುವು, ಮೊಟ್ಟೆ ಇಟ್ಟು, ಮರಿ ಕೊಟ್ಟು ಮಾಂಸ ಒದಗಿಸಿ ದಿನದ ಅಗತ್ಯಕ್ಕೆ ನೆರವಾಗುವ ಪ್ರಾಣಿಗಳು ಅವು. ಏಕೊ ಏನೊ ಯಾವವು ನಿಷ್ಕಪಟವಾದ, ಕೆಡುಕರಿಯದ, ಯಾರಿಗೂ ಕೆಡಕು ಮಾಡದ ಪ್ರಾಣಿಗಳೊ ಅಂಥವೇ ಮಾನವನ ಹಲ್ಲಿಗೆ ಹೆಚ್ಚಾಗಿ ಈಡಾಗಿವೆ. ತೋಳ, ಕಿರುಬ, ಹುಲಿ, ಚಿರತೆಗಳ ಬೇಟೆಯನ್ನೇನೊ ಆಡುತ್ತಾರೆ. ಆದರೆ ಅವುಗಳ ಮಾಂಸ ರುಚಿಯಲ್ಲವಂತೆ. ಚಕ್ಕಳ ಕಡಿದ ಹಾಗಂತೆ. ಇವರಿಗೆ ರುಚಿ ಕುರಿ ಕೋಳಿಗಳಲ್ಲಿ ; ಹಸು, ಕೋಣ, ಮೊಲ ಜಿಂಕೆ, ನವಿಲು, ಪಾರಿವಾಳಗಳಲ್ಲಿ ; ಪ್ರಾಣಿ ಎಷ್ಟು ಸಾಧುವಾದರೆ, ಚೆಲುವಾದರೆ ಅಷ್ಟು ರುಚಿ. ಎಷ್ಟು ಬಗೆಯ ಪ್ರೇಮ ಋಣಾನುಬಂಧ ಅವಕ್ಕೂ ನಮಗೂ! ಅಗತ್ಯ ಬಿದ್ದರೆ, ಈ ಜನ ಕುದುರೆ, ಒಂಟೆ ಬಿಡುವುದಿಲ್ಲ. ಕುದುರೆಗೆ ಗಾಡಿ ನೇಗಿಲು ಎಳೆಯುವ, ಸವಾರಿಗೆ ಒದಗುವ ಅಗತ್ಯವಿಲ್ಲವಾಗಿ ಈಗ ಅದನ್ನು ಮಾಂಸಕ್ಕಾಗಿಯೇ ಯುರೋಪಿನಲ್ಲಿ ಬಳಸುತ್ತಿದ್ದಾರೆ. ಅರಬ್ಬಿ ದೇಶದಲ್ಲಿ ಹಿರಿಯ ಅತಿಥಿಗಳು ಬಂದರೆ ಅವರನ್ನು ಎದುರುಗೊಳ್ಳಲು ಹೋಗಿ ಬಿದ್ದಿನರು ಬರುವ ದಾರಿಯಲ್ಲಿ ಪುಷ್ಟವಾಗಿ ಬಲಿತ ಒಂಟೆಯನ್ನು ನಿಲ್ಲಿಸಿ ಕಡಿಯುತ್ತಾರಂತೆ. ಅದರ ನೆತ್ತರ ಮೇಲೆ ಅತಿಥಿ ಮೆರವಣಿಗೆ ಬರಬೇಕು. ಅದರ ಮಾಂಸದಿಂದ ಬಗೆಬಗೆಯ ಭಕ್ಷ್ಯಗಳು ತಯಾರಾಗುತ್ತವೆ. ಅದರ ಯಕೃತ್ತೊ, ಇನ್ನಾವುದೊ ಅಮೂಲ್ಯವಾದ ಅಂಗದ ಹಸಿಯ ಭಾಗ ಬಹು ರುಚಿಯಂತೆ. ಅದನ್ನು ನಿಂಬೆಹುಳಿಯಲ್ಲಿ ಅದ್ದಿ ತಿನ್ನುತ್ತಾರಂತೆ. ಏಕೆ ಹೇಳಿದೆನೆಂದರೆ, ಎಷ್ಟು ಉಪಯುಕ್ತ ಪ್ರಾಣಿಗಳಿವು. ಇವನ್ನು ಕಡಿದು ತಿಂದರೇನೇ ಪಕ್ವಾನ್ನದ ರುಚಿ.

ಒಂದು ಸಲ ಬೆಂಗಳೂರಿನ ಸಾಲುಮರದ ರಸ್ತೆಯಲ್ಲಿ (Avenue Road) ನಡೆದು ಬರುತ್ತಿದ್ದೆ. ಸುಮಾರು ೧೧-೩೦ರ ಸಮಯ. ೨೫-೩೦ ವರ್ಷದ ಒಬ್ಬ ಹೆಣ್ಣು ಮಗಳು ೧೦-೨೦ ಬಾತುಗಳನ್ನೂ ಸುಮಾರು ಅಷ್ಟೇ ಸಂಖ್ಯೆಯ ಕೋಳಿಗಳನ್ನೂ ನಡಸಿಕೊಂಡು ಹೊರಟಿದ್ದಳು. ಈ ಗುಂಪೊಂದು ಕಡೆ, ಅದೊಂದು ಕಡೆ, ನಡುವೆ ಆಕೆ. ತಾಯಂತೆ ಅವನ್ನು ಬೆಳಸಿದ್ದಳೆಂದು ಕಾಣುತ್ತಿತ್ತು. ಅವಕ್ಕೆ ಅವಳಲ್ಲಿ ಎಷ್ಟು ಪ್ರೀತಿ, ವಿಶ್ವಾಸ! ಹೆಜ್ಜೆ ಹೆಜ್ಜೆಗೂ ಅವೊ-ಇವೊ ಅವಳ ಬಳಿ ಬರುವುವು. ಕಾಲನ್ನು ತೊಡರುವುವು. ಕೊರಲನ್ನು ಕಾಲಿಗೆ ಉಜ್ಜಿ ಕೊಕ್ಕಾಡಿಸಿ ಅವಳ ಕಾಲ ಸುತ್ತ ಸುತ್ತುವುವು; ತಮ್ಮತ್ತ ಅವಳ ನೋಟ, ಗಮನ ಸೆಳೆಯಬೇಕೆಂದು. ಆದರದ ಒಂದು ಮಾತು ಅವಳಿಂದ ಕೇಳಿ ತಮ್ಮ ಕಡೆಗೆ ಪುನಃ ಹೋಗಿ ನಿರಾತಂಕದಿಂದ ಅವಳ ಜೊತೆ

ನಡೆಯುವುವು. ಎಲ್ಲಿಗೊಯ್ದರೆ ಅಲ್ಲಿಗೆ. ಈ ಗುಂಪಿನ ಶಬ್ದ ಒಂದತ್ತ, ಆದರ ಶಬ್ದ ಇನ್ನೊಂದತ್ತ. ಎಷ್ಟು ಸಡಗರ, ಈ ಪ್ರಾಣಿಗಳಿಗೆ! ತಾಯಿ ತಂದೆ ವಿಹಾರಕ್ಕಾಗಿ ಮಕ್ಕಳನ್ನು ನಡಸಿಕೊಡು ಲಾಲ್‌ಬಾಗಿಗೊ ಕಬ್ಬನ್ ಪಾರ್ಕಿಗೊ ಹೋದರೆ, ಯಾವ ಹಿಗ್ಗೊ ಮಕ್ಕಳಿಗೆ, ಅದಕ್ಕೆ ಕಡಮೆಯಿಲ್ಲದ ಸಡಗರ ಸಂತುಷ್ಟಿ ಅವಕ್ಕೆ. ಎಲ್ಲವೂ ಚೆನ್ನಾಗಿ ಬಲಿತಿವೆ. ಒಂದೊಂದು ಪ್ರೀತಿಯಿಂದ ಸಾಕಿದ್ದು. ಇಷ್ಟು ದಿನವೂ ಎಷ್ಟು ಚೆನ್ನಾಗಿ ಸಾಕಿದ್ದಳೊ–ಒಂದರ ಮೈಮೇಲೆ ಕೊಳೆಯಿಲ್ಲ, ಒಂದೂ ಕೃಶವಿಲ್ಲ, ನಿಸ್ತೇಜವಲ್ಲ– ಇವನ್ನು ಆಡಿಸಿಕೊಂಡು ಪೇಟೆಗೆ ಒಯ್ಯುತ್ತಿರುವ ಆಕೆಯ ಮನಸ್ಸು ಆಗ ಹೇಗಿರಬಹುದು? ಇವನ್ನು ಮಾರಿದರೆ ಎಷ್ಟು ಹಣ ಬರುವುದೆಂದೆ? ಅವಳಲ್ಲಿ ನಂಬಿಕೆ ಎಷ್ಟು ಅತಂತ್ರದ್ದೆಂದೇ? ಇನ್ನರ್ಧ ಗಂಟೆಯಲ್ಲಿ ಯಾರ ಕೈಗೊ ಸೇರುವ ಅವು ಯಾವ ಗತಿಗೆ ಬರುವುವು ಎಂದೆ? ಯಾವುದಾದರೇನು? ಮನುಷ್ಯರ ಕೈಗೆ ಸಿಕ್ಕಿದ, ಆಹಾರಕ್ಕಾಗಿ ಬೆಳಸಿದ ಎಲ್ಲ ಜೀವದ ಗತಿಯೂ ಇಷ್ಟೇ.

ನೀರುಕೋಳಿ ಹಲವು ಬಗೆಯವು. ಅವು ಕೆರೆ, ಕಾಲುವೆ, ಗದ್ದೆ, ತೋಟಗಳಲ್ಲಿ ಹಾರಾಡುವುವು. ಊರುಕೋಳಿಗಳಿಗಿಂತ ಅವುಗಳ ಮೈ ಹಗುರ, ರೆಕ್ಕೆಯ ಬಲ ಹೆಚ್ಚು. ಕೊಕ್ಕರೆ, ಕ್ರೌಂಚ, ಬಲಾಕ, ಕಾರಂಡವ ಜಾತಿಗಳು ಅವು. ಬಾಣಗಳನ್ನು ಬಿಟ್ಟೊ ಕೋವಿಗಿಟ್ಟೊ ಅವನ್ನು ಬೀಳಿಸಬೇಕು. ನೀರ ಉದ್ದಕ್ಕೂ ಬದು, ದಡ, ಕೆರೆಗಳ ಸುತ್ತ ಸಾಲಾಗಿ ಅವು ಕುಳಿತವೆಂದರೆ ಮಲ್ಲಿಗೆ ಮೊಗ್ಗು ಪೋಣಿಸಿ ಹಾರಹಾಕಿದಂತಿರುತ್ತದೆ. ನೀರ ನಡುವೆ ಒಂಟಿಗಾಲಲ್ಲಿ ನಿಂತು ಧ್ಯಾನಮಾಡುವಂತಿರುವ ಕೊಕ್ಕರೆ ನಿಜವಾಗಿ ವ್ರತಿ, ಯಮಿ. ಆ ಕೊಕ್ಕೂ, ಆ ಸೆಣಕಲ ಕಾಲೂ, ಹೂವಿನ ಅಲಂಕಾರವನ್ನು ಹೊತ್ತ ಬೆಳ್ಳಿಯ ದಾನಿಯಂತೆ ಇರುತ್ತದೆ. ಒಂದರ ಪಕ್ಕಕ್ಕೊಂದು, ಕರಿ, ಬಿಳಿ, ಬೂದು, ಊದಾ ಬಣ್ಣದವು - ತಮ್ಮ ತಮ್ಮ ಗುಂಪುಗಳಲ್ಲಿ ಜಿಗಿದು, ಹಾರಿ ಬಂದು ಒಂದರ ಒಡಲನ್ನೊ ಕೊರಲನ್ನೊ ಕೊಕ್ಕನ್ನೊ ಇನ್ನೊಂದು ಕದುಕುತ್ತ ತಾರಾಡುವ ಅವುಗಳ ವಿಲಾಸ ರಮಣೀಯ. ಇಲ್ಲ, ಹಾರಿದವೊ : ಒಂದಾದ ಮೇಲೊಂದು, ಒಟ್ಟಿಗೆ, ಬಗೆಬಗೆಯ ವ್ಯೂಹಗಳನ್ನು ರಚಿಸುತ್ತ ಗಾಳಿಗೆ ರೆಕ್ಕೆಗಳನ್ನು ಮೂಡಿಸಿ ಅಲೆಅಲೆಯಾಗಿ ನುಸುಳಿ, ಜಾರಿ, ಇಳಿದು, ಎದ್ದು, ಉರುಳಿ-ಹೊರಳಿ, ನೇರ ಹಿಂದಕ್ಕೆ ತಿರುಗಿ ಕಾಣಿಸುವ ಸಾಮೂಹಿಕ ಚಲನೆ ಬ್ರಿಟಿಷ್ ಸೈನ್ಯದ ಯಾವ ಟಟ್ಟೂಗೆ ಎರಡನೆಯದಾದೀತು ? ನೋಡಲು ಎಷ್ಟು ಕಣ್ಣಿದ್ದರೂ ಸಾಲದು. ಆಕಾಶ ಈ ಚಲನೆಯಿಂದ ತುಂಬುತ್ತದೆ. ಕಣ್ಣು ತಪ್ಪಿಸಿ, ಪುನಃ ಕಣ್ಣಿಗೆ ಕಾಣಿಸಿ ಆ ಸ್ವಚ್ಛಂದ ಹಾರಿಕೆ ಕಣ್ಣ ಸೆಳೆಯಾಗುತ್ತದೆ.

ಕಾಡುಕೋಳಿಯನ್ನು ನೀವು ಕಂಡಿದ್ದೀರೊ ಇಲ್ಲವೊ. ತೀರ್ಥಹಳ್ಳಿ ಸಾಗರದ ಕಡೆ ಒಮ್ಮೆ, ಕಡೂರು ಚಿಕ್ಕಮಗಳೂರ ನಡುವಿನ ಒಂದು ನಿಟ್ಟಿನಲ್ಲಿ ನಾನು ಒಂದೆರಡು ಬಾರಿ ಕಂಡಿದ್ದೇನೆ. ಬಹು ಪುಷ್ಟವಾಗಿ ಆದರೂ ಅಡಕವಾಗಿ ಬೆಳೆದಿರುತ್ತವೆ. ಸ್ವತಂತ್ರವಾಗಿ

ಕಾಡಿನಲ್ಲಿ ಬೆಳೆದದ್ದೆಲ್ಲವೂ ಹಾಗೆಯೇ ; ಹಗೆಯ ಕೈಗೆ ಸಿಕ್ಕು ಆಹುತಿಯಾಗುವವರೆಗೂ– ಮನುಷ್ಯನಿಗೂ ಮೃಗಕ್ಕೂ ಯಾವುದಕ್ಕೂ ಆಗಬಹುದು- ಅದು ಸುಲಭವಾಗಿ ಏಟಿಗೆ, ಬೇಟೆಗೆ ಸಿಕ್ಕುವುದಿಲ್ಲವೆಂದು ಕೇಳಿದ್ದೇನೆ. ಹೊಡೆವ ಗುರಿ ಬಹು ನೇರಾಗಬೇಕಂತೆ. ಅಂಥ ಒಂದನ್ನು ಹೊಡೆದು ಗರಿ ಮುರಿದ ಒಂದನ್ನು ತಂದು, ತಂದವರು ಇನ್ನಾರಿಗೊ ಕೊಟ್ಟು ದುರಂತ ಕಟ್ಟುವ ಒಬ್ಬ ಮುದುಕ, ಮಗ, ಸೊಸೆ, ಮೊಮ್ಮಗಳ ವಿರಸ ಬಲಿವ ಸಾಂಕೇತಿಕ ನಾಟಕವೊಂದನ್ನು 'The Wild Duck' ಎಂಬ ಹೆಸರಲ್ಲಿ ಇಬ್ಸೆನ್ ಬರೆದಿದ್ದಾನೆ. ಅದು ವಿದೇಶಿ ವಿಚಾರವಾದರೆ ಕಾಡುಕೋಳಿಗೆ ಅಂಟಿದಂತೆ ಒಂದು ನಾಣ್ನುಡಿ ಇದೆ. ಬಾಳಿನ ಯಾವುದೊ ಅನಾದರಕ್ಕೆ, ಭಂಗ ಕರ್ಕಶತೆಗಳಿಗೆ ಸಿಕ್ಕಿದ ಜೀವಕ್ಕೆ, ಇನ್ನು ಯಾವ ಸುಖದ ಬಯಕೆಯಿದ್ದೀತು? ಯಾವ ಉಪಚಾರ ಬೇಕಾದೀತು? ಯಾವ ಸಂತೋಷ ಸಂತೋಷವೆರೆಯಬಲ್ಲದು ಎಂಬಂತಹ ಪ್ರಕರಣದಲ್ಲಿ 'ಕಾಡುಕೋಳಿಗೆ ಮಕರ ಸಂಕ್ರಾಂತಿಯೆ?' ಎನ್ನುವುದುಂಟು. ತಾನು ಊರ ಕೋಳಿಯಾಗಿದ್ದರೆ ತನಗೂ ರಂಗು, ರಂಜನೆ, ಉಪಚಾರ, ಹರ್ಷ. ಕಾಡುಕೋಳಿಗೆ ಅವೆಲ್ಲ ಏಕೆ, ಹೇಗೆ ಬರಬಲ್ಲವು, ಬಿಡಿ ಎಂಬ ನೋವು ಬಲಿತ ನುಡಿ ಅದು.

ಸಿಂಗರಕ್ಕೆ, ನೋವಿಗೆ, ಪ್ರಯೋಜನಕ್ಕೆ, ನಯಕ್ಕೆ ಈಡಾಗದ ಜೀವವೇ ಇಲ್ಲ. ಸುತ್ತ ಸುರಿದಿದೆ ಸಂಪತ್ತು. ಅದನ್ನು ಸುಖಕ್ಕೆ ಬಳಸಿಕೊಳ್ಳಬಹುದು; ಮನಸ್ಸು ಮಾಡಿದರೆ, ಯತ್ನ ನಡೆದರೆ. ಅವಕಾಶವಂತೂ ಅಸೀಮವಾಗಿದೆ. ಅದರಿಂದ ಸಂಸ್ಕಾರಗೊಳ್ಳದ ಬದುಕು ಮಾತ್ರ ಲೋಕವನ್ನು ನಿಬ್ಬರವಾಗಿ ತುಂಬಿದೆ. ಏನದೃಷ್ಟವೊ ಚಾರಿತ್ರವೊ ಮಾನವನದು!

# ನೆನಪು

ಒಂದು ಸಲ ಓದಿದರೆ ಸಾಕು ; ಯಾವುದೂ ನನ್ನ ನೆನಪಿನಲ್ಲಿರುತ್ತಿತ್ತು ; ಒಮ್ಮೆ ಕಂಡ ಮುಖ, ಉಟ್ಟ ಉಡುಪು, ಕೇಳಿದ ದನಿ ಉಳಿಯುತ್ತಿತ್ತು. ಆ ಕಾಲದಲ್ಲಿ ನೋಡಿದುದೆಷ್ಟೊ ಓದಿದುದೆಷ್ಟೊ ಅಷ್ಟೂ ಇಂದಿಗೂ ನೆನಪಿನಲ್ಲಿದೆ ; ಯಾವಾಗೆಂದರೆ ಆಗ ಇತರರಿಗೆ ಹೇಳಲು ಸಿಗುತ್ತದೆ. ಹುಡುಗತನದ ನೆನಪೆಲ್ಲ ಹಾಗೇ. ಕ್ರಮಕ್ರಮವಾಗಿ ನೆನಪು ಮಂಕಾಯಿತು ; ಈಗ ? ದೇಹ ಕಳಲಿದಂತೆ ನೆನಹು ಸಡಿಲವಾಗಿದೆ. ಅರ್ಧ ಗಂಟೆಗೆ ಮುಂಚೆ ಓದಿದುದು ಮಸುಕು ಮಸುಕು. ಹಲವೇಳೆ ಹೆಸರು ನೆನಪುಂಟು; ಮುಖ ಪರಿಚಯ ಉಂಟು ; ಎರಡನ್ನೂ ಸೇರಿಸಲು ಬಾರದು. ಎಲ್ಲಿಯೊ ಒಂದು ಸಲ ಕಂಡದ್ದು ಕೇಳಿದ್ದು, ಅವರಲ್ಲಿ ಉಳಿದು, ಉಂಡದ್ದು ಉಂಟು ; ಅವರ ರಾಜೋಪ ಚಾರಕ್ಕೆ ಹರ್ಷ ಪಟ್ಟದ್ದುಂಟು. ಅವರನ್ನು ಕಂಡ ಗುರುತುಂಟು ; ಹೆಸರು, ಮುಖ, ಸ್ಥಳ, ಸಮಯ-ಸೇರಿಸಿ ನುಡಿಯಲು ಬಾರದು. ಇಂಥ ಸಂದರ್ಭದಲ್ಲಿ ಮನಸ್ಸಿಗೆ ಉಂಟಾಗುವ ಭಂಗ ದುರ್ಭರ. ಅವರೇನೆಂದುಕೊಳ್ಳುತ್ತಾರೆಯೊ ? ಏನೆಂದುಕೊಂಡರೆ ತಪ್ಪು? ಪಂಚಾಂಗದವರ ಮನೆಯ ಮಕ್ಕಳಿಗೆ ಸ್ಮೃತಿಶಕ್ತಿ ಹೆಚ್ಚು ಎನ್ನುತ್ತಾರೆ. ನಮ್ಮವರು ಎಲ್ಲರೂ ಪಂಚಾಂಗ ಹೇಳಿದವರಲ್ಲವಾದರೂ ವಂಶ ಅದು. ಆದ್ದರಿಂದ ಬಹುಶಃ ನೆನಪು ಮೊದಲು ಮೊದಲು ಊರುತ್ತಿತ್ತು. ಅದನ್ನು ಕ್ರಮವಾಗಿ ಹುರಿ ಗೊಳಿಸಿಕೊಳ್ಳಲಿಲ್ಲವೇನೊ ; ಅತಿಯಾಗಿ ದುಡಿಸಿದೆನೇನೊ ; ಕಂಡುದಕ್ಕೆ, ಕೊಂಡುದಕ್ಕೆ, ಸಾಕಷ್ಟು ಗಮನ ಕೊಡದೆ, ಆಸಕ್ತಿ ಕಳೆದುಕೊಂಡೆನೇನೊ ; ಉದಾಸೀನನೂ ಕೃತಘ್ನನೂ ಅದೆನೇನೊ. ವಯಸ್ಸು ಬೇರೆ ಆಯಿತು. ನೆನಪನ್ನು ನೆನಪು ಅಳಿಸಿ ಚಿತ್ರ, ಧ್ವನಿ ಮಾಸಿವೆ. ಈ ನಷ್ಟ ತುಂಬಲಾಗದ್ದು.

ಒಂದೊಂದು ವೇಳೆ ಹೀಗೂ ಅನ್ನಿಸುತ್ತದೆ : ನಾವು ಓದಿದುದೆಲ್ಲ ನೆನಪಿನಲ್ಲಿ ಉಳಿದಿದ್ದಿದ್ದರೆ ಗತಿ ಏನು ? – ಎಂದು. ಈಗಲೇ ಇವನೊಬ್ಬ ಪೀಡೆ ಎನ್ನುತ್ತಾರೆ ; ಎಲ್ಲೆಲ್ಲಿನದಕ್ಕೊ ಬಾಯಿ ಹಾಕುತ್ತಾನೆ ; ಎಲ್ಲಕ್ಕೂ ವಾಕ್ಯವೊ ಉದಾಹರಣೆಯೊ ಇವನಿಗೆ ಒದಗುತ್ತದೆ. ನಮ್ಮ ಬಾಯಿ ಕಟ್ಟುತ್ತದೆ, ನಾವು ಸಪ್ಪೆಯಾಗುವಂತಾಗುತ್ತದೆ ಎಂದು. ಇನ್ನು ನನ್ನ ನೆನಪೆಲ್ಲ ಅಚ್ಚಳಿಯದೆ ಇದ್ದಿದ್ದರೆ ಆ ರಾಕ್ಷಸತೆ ಯಾರಿಗೂ ತಾಳಲಾಗು ತ್ತಿರಲಿಲ್ಲ. ನನಗೂ ಹಾಗೆಯೇ. ಅಲ್ಲದೆ, ಎಷ್ಟು ಹೊರೆ ? ನನ್ನ ಗುರುಗಳಿಬ್ಬರು ಮೂವರ ನೆನಪು ಅವರಿಗೆ ಒಂದು ಶಾಪದಂತಾಗಿ ಅವರನ್ನು ಸ್ವತಃ ಬಂಜೆ ಮಾಡಿತು. ಏನು ಬರೆಯುವುದಪ್ಪ ; ನಾನು ಹೇಳಬಹುದಾದ್ದನ್ನು ಮಾರ್ಷಲ್, ಬ್ರಾಡ್ಲೆ ಇನ್ನೂ

ದಿಟ್ಟವಾಗಿ ಹೇಳಿದ್ದಾರೆ. ನಮ್ಮ ಬಡಮಾತು ಹೇಗೆ ಸೊಗಸೀತು ಎನ್ನುವವರು ಬರೆಯಿರಿ ಎಂದರೆ. ನಮ್ಮಲ್ಲಿ ಬರೆಯುತ್ತಿರುವವರು ಅವರಿಗಿಂತ ಕೀಳೆಂದು ತಿಳಿದರೂ ಇವರು ಒಲಿಯುತ್ತಿರಲಿಲ್ಲ. ಇನ್ನು ಕೆಲವರು ಹಿರಿಯರಿದ್ದಾರೆ. ಇವರಿಗೇಕೆ ಇಷ್ಟು ಒಳ್ಳೆಯ ನೆನಪಿದೆಯೊ : ನಮ್ಮ ಗೋಳು ಹುಯಿದುಕೊಳ್ಳುವುದಕ್ಕೆ, ಎನ್ನಿಸುತ್ತದೆ. ಅವರ ಕೈಗೆ ಈ ಆಕ್ಷೇಪಕರು ಸಿಕ್ಕಬೇಕು. ಒಳಗೆ ಕುದಿಯುತ್ತ ಸಂಗತಿಗಳಿರುವಾಗ, ಮೇಲುಕ್ಕಿ ಬರಲು ಹಾತೊರೆಯುತ್ತಿರುವಾಗ ಅವನ್ನು ಅಡಗಿಸುವುದು ಹೇಗೆ? ಆದರೆ, ಅಡಗಿಸದೆ ಸಮಾಜದಲ್ಲಿ ಬಾಳುವುದು ಹೇಗೆ ? ದೇವರ ದಯ ; ನಮ್ಮ ಪುಣ್ಯ ; ಈ ನೆನಪು ಮಸುಳಿ ನಾನೂ ಲೋಕವೂ ಉಳಿದುಕೊಂಡೆವು. ಊನವೇ ಪ್ರಯೋಜನವಾದಂತಾಯಿತು. ಇದು ಇನ್ನೊಂದು ಮುಖ.

ಬಹುಶಃ ಮರೆವನ್ನು ನಿರ್ಮಾಣ ಮಾಡಿ ಭಗವಂತ ಯಾರೊ-ಯಾವ ಶಕ್ತಿಯೊ, ಇದನ್ನೆಲ್ಲ ಹೀಗೆ ನಿರ್ಮಿಸುವ, ನಿಯಾಮಿಸುತ್ತಿರುವ ಶಕ್ತಿ ಯಾವುದಿದೆಯೊ ಅದು-ದೊಡ್ಡ ಉಪಕಾರ ಮಾಡಿದ್ದಾನೆ. ಇಲ್ಲವಾದರೆ ಪ್ರತಿ ಉರುಬಿನ ನೆನಪೂ ಹೊಸತಕ್ಕೆ ನಮ್ಮನ್ನು ವಿಮುಖರನ್ನಾಗಿ ಮಾಡುತ್ತಿತ್ತು ; ಜೀವಕ್ಕೆ ಹೊಸತು ಬರಲು ಅಡ್ಡಿಯಾಗುತ್ತಿತ್ತು. ಬದುಕು ಬಡವಾಗುತ್ತಿತ್ತು. ಹಾಗೆಯೇ ಕಳೆದುಕೊಂಡು ತಂದೆ ತಾಯಿ, ಹೆಂಡಿರು, ಮಗು ಇವರ ಅಗಲಿಕೆಯ ಬೇಗೆ ಮೊದಲ ಕ್ಷಣದಲ್ಲಿದ್ದಂತೆಯೇ ಎಂದಿಗೂ ಉಳಿಯುತ್ತಿದ್ದಿದ್ದರೆ ಮನುಷ್ಯನ ಗತಿ ಏನು ? ನೆಮ್ಮದಿಯ ಬದುಕು ಹೇಗೆ ಶಕ್ಯ ? ಹೋದ ವರ್ಷದಲ್ಲಿ ನೂರು ನಯೆಪೈಸೆ ಉಮ್ಮಳ ; ದುಃಖದ ಒತ್ತಡ. ನಾಳೆ ಎಂಭತ್ತು; ಹದಿನೈದು ದಿನ ಕಳೆದಮೇಲೆ ಹಾಗೂ ಹೀಗೂ ಸೇರಿಸಿಕೊಂಡು ಎರಡು ಹೊತ್ತು ಊಟ ಮಾಡುತ್ತೇವೆ. ಒಂದು ವರ್ಷ ಎರಡು ವರ್ಷಗಳಲ್ಲಿ ಕಳೆದವರ ಆಕೃತಿಯನ್ನೇ ಯತ್ನದಿಂದ ನೆನಪಿಗೆ ತಂದುಕೊಳ್ಳಬೇಕಾದೀತು ; ಅವರ ಶ್ರಾದ್ಧದ ಅಡಿಗೆ ಅಂದು ಸರಿಯಾಗಲಿಲ್ಲವೆಂದು ಗೊಣಗುತ್ತೇವೆ. ಲೋಕದ ಉಳಿದೆಲ್ಲವೂ ಎದುರಿಗೂ ಪಕ್ಕಕ್ಕೂ ಇರುವಾಗ ಕಳೆದುದರ ನೆನಪು ಅಷ್ಟಾಗಿ ಕಾಡದು ; ಬಳಲಿಸದು. ದೇಹದ, ಮನಸ್ಸಿನ ರಚನೆ ಹಾಗೆ. ಆದುದು ಆಯಿತು ; ಹೋಯಿತು ; ಎದುರಿಗಿನದಕ್ಕೆ ಹೊಂದಿಕೊ, ತೂಗು ಎಂಬುದೇ ಪ್ರಕೃತಿಯ ಕರೆ ಎಂಬ ಹಾಗೆ ಪ್ರಕೃತಿಯ ರಚನೆ ಇರುವಂತಿದೆ. ಯೋಚಿಸ ಹೋದರೆ ಹಲವೇಳೆ ಸಂಸ್ಕಾರ ಮೂಲಕ ನೆನಪಿನ ಯತ್ನ ಮಾಡಿ ಬಗೆಬಗೆಯ ರೀತಿ ನೆನಪನ್ನು ಉಳಿಸುವ ಯತ್ನ ಮಾಡುತ್ತಿಲ್ಲವೆ ನಾವು ಎನಿಸಲಾರದೆ? ಅತ್ತು ಹಗುರ ಮಾಡಿಸುವ ದುಃಖ, ನಕ್ಕು ಬರಿದಾಗುವ ಹರ್ಷ ಒಮ್ಮೆ ಭುಗ್ಗೆಂದು ಉರಿದು ಮಾಯವಾಗುವ ಉರಿಯಂತೆ. ಅವನ್ನು ಉಳಿಸಿಕೊಂಡಿರುವವರೆಗೆ ಸುಖ-ದುಃಖಗಳ ನೆನಪು ನಿರಂತರ ನೋವನ್ನೊ ನಗೆಯನ್ನೊ ಕೊಡುತ್ತ ಹೋಗುತ್ತದೆ. ಇದು ಒಂದು ಬಗೆಯಲ್ಲಿ ಉಪಕಾರ ; ಮತ್ತೊಂದು ಬಗೆಯಲ್ಲಿ ನಷ್ಟ. ಯಾವುದು ಹೆಚ್ಚೊ ಯಾವುದು ಕಡಮೆಯೊ ! ಮರೆವುದೇ ಮೇಲೇನೊ. ಇಲ್ಲವಾದರೆ ಮಮತೆಗಳು, ಕಾರ್ಪಣ್ಯಗಳು ಬಲಿತಿರುತ್ತವೆ : ಕರ್ಮವಾಗಿ ; ಪ್ರಾರಬ್ಧವಾಗಿ. ಅವುಗಳ ಹಿಡಿತ,

ಒತ್ತಡ ಹಿಂದಿನದಕ್ಕೇ ಎಳೆದು ಇವೊತ್ತಿನ ಮೇಲೆ ಭೂತದಂತೆ ಆಕ್ರಮಣ ಮಾಡುತ್ತಿರುತ್ತದೆ. ನೆನಪು ಹೀಗೆ ಕರ್ಮ. ಕರ್ಮ ಸವೆಯಬೇಕು. ಅದನ್ನು ಸವೆಸುವ ಯತ್ನ ಮಾಡಬೇಕು ;- ಮುಕ್ತಿಗೆ, ಎಂದರೆ ಬಿಡುಗಡೆಗೆ. ಯಾವ ಬಗೆಯ ಬಿಡುಗಡೆ ಬೇಕು ಎಂಬುದು ಮಾತ್ರ ಯೋಚಿಸಬೇಕಾದ್ದು. ಹಾಗೆಂದರೇನು ಎಂದು ಪ್ರಶ್ನೆ ಮಾಡಿಕೊಳ್ಳಿ. ಆ ಕಾಟ, ಗೊಂದಲ, ಗೊತ್ತಾಗುತ್ತದೆ. ಯೋಚನೆ ಮಾಡದಿರುವುದು ಮೇಲು.

ಹೌದು ; ಆದುದೆಲ್ಲ ಮರೆತರೆ-ದುಃಖ, ನೋವು, ನಷ್ಟ, ಚಿಂತೆ, ಅಪಮಾನ ಭೀತಿಗಳು ನಷ್ಟವಾದರಂತೂ ಪರವಾಗಿಲ್ಲ ; ಸಂತೋಷ, ಮೈತ್ರಿ, ಸುಖ, ಉಪಕಾರ ಮರೆತು ಹೋದರೆ ಹೇಗೆ ? ಯಾವ ನಯ ಉಳಿದೀತು, ಲೋಕದಲ್ಲಿ ? ಯಾವ ಸಂಸ್ಕಾರ ಬಲಿತೀತು ? ದಿನವೂ ಹೊಚ್ಚ ಹೊಸತಾಗಿಯೇ ಎಲ್ಲವೂ ಅನುಭವವಾಗ ಬೇಕಾದರೆ ದೇಹಕ್ಕೆ, ಮನಸ್ಸಿಗೆ ಒಂದು ರೀತಿ ಸದ್ಯಃತೃಪ್ತಿಯಾಗಬಹುದು. ಕೆಲವರಿಗೆ, ರಕ್ತದ ಒತ್ತಡದಲ್ಲಿ ಅದು ಇರದೆ-ಒಳಗೇ ಶಂಕೆಯೊ ನಡುಕವೊ ಅಪ್ರಿಯದ ನೆಳಲೊ ಹಾಯವಾದರೆ ಹೋಗಲಿ. ಎಷ್ಟು ಹೆಜ್ಜೆ ಇಟ್ಟು ನರರ ಬಾಳು ಇಂದಿನ ಸ್ಥಿತಿಗೆ ಬಂದಿದೆ ಎಂಬುದು ಗೊತ್ತಿದ್ದರೆ ಮಾನವನ ಶಿಕ್ಷಣಕ್ಕೆ ದೊಡ್ಡ ಸಾಧನವಾಗದೆ ? ಜನ ನಿತ್ಯ ಪ್ರಾಕೃತರಾಗಿ ಉಳಿಯಬೇಕಾದೀತು. ನಯ, ಬೆಲೆ, ಬೆಳೆವಣಿಗೆ, ಸಂಸ್ಕಾರ ಯಾವುದೂ ಆಗ ಇಲ್ಲ. ಇಂದು, ನಾಳೆ ಹಿಂದಿನ ಸಂಬಂಧಗಳಿಗೆ ಮಾನ್ಯತೆ, ಅರ್ಥ ಇಲ್ಲ. ವೇದವೆಲ್ಲ ಶ್ರುತಿ. ಶ್ರುತಿ ಎಂದರೆ ಕೇಳಿದ್ದು, ಋಷಿವಾಕ್, ದೇವವಾಕ್. ಸ್ಮೃತಿಯೊ ? ಎಲ್ಲರ ನೆನಪಿನಲ್ಲಿರುವ ವಿಧಿ ನಿಷೇಧರೂಪವಾದ ನಿಯಮಗಳು-ಇವಾವುವೂ ಇರುತ್ತಿರಲಿಲ್ಲ. ಇವೊತ್ತಿನದು ಇಂದಿಗೇ ಮುಗಿಯಿತು. ಬಾಂಧವ್ಯ, ಹೊಣೆಗಾರಿಕೆಗಳ ಅರಿವಿಲ್ಲ. ಎಲ್ಲವೂ ಅಹನ್ಯಹನಿ ಆಗುತ್ತಿದ್ದರೆ ಅಂಥ ಬಾಳಪ್ರಕಾರವನ್ನು ಊಹಿಸಿಕೊಳ್ಳಬಹುದು ! ಕೊಳ್ಳಬಹುದೆ? ಊಹೆಗೆ ಆಸರೆ ಯಾವುದು ? ನೆನಪಲ್ಲವೆ ? ಅಲ್ಲದೆಯೊ ಎಚ್ಚರಿಕೆಗಳಿಗೆ ಬೆಲೆಯಿಲ್ಲವೆ? ಸ್ಫೂರ್ತಿಗಳಿಗೆ ಬೆಲೆ ಬೇಡವೆ ? -ಎಂಬುದೂ ಪ್ರಶ್ನೆಯಾಗುತ್ತದೆ. ಹೇಗೇ ಎನ್ನಿ, ನೆನಪು ಬೇಕು. ಅದು ಹಿತವಾಗಿರಬೇಕು ಎನ್ನಿಸುತ್ತದೆ ಮನಸ್ಸಿಗೆ. ಉಳಿದರೆ ಸುಖಸಂಕಷ್ಟಗಳೆರಡರ ನೆನಪೂ ಉಳಿಯುತ್ತದೆ, ಇಲ್ಲವಾದರೆ ಎರಡೂ ಇಲ್ಲ. ಇಂಥದು ಬೇಕು, ಬೇರೆಯವು ಬೇಡ ಎಂಬ ಆಯ್ಕೆ ಸಲ್ಲದು, ನಡೆಯುವುದಿಲ್ಲ.

ವ್ಯಕ್ತಿಯಂತೆಯೇ ಸಮಾಜದ್ದೂ ನೆನಪು ಎಂಬುದುಂಟು. ರಾಷ್ಟ್ರ ರಾಷ್ಟ್ರಗಳದೂ ನೆನಪೇ. ಅದು ಅದರ ಚರಿತ್ರೆ. ಲಾಭನಷ್ಟಗಳ, ಮಾನಾಪಮಾನಗಳ ಕಾಂಡ ; ಕೆಳೆ ಹಗೆಗಳ ಲಹರಿ ; ಬಾಂಧವ್ಯ ವಿರಸಗಳ ಸಂತತಿ. ಚರಿತ್ರೆ ಒಂದರ್ಥದಲ್ಲಿ, ನಡೆದದ್ದೆಲ್ಲ; ನಡೆಯದಾದದ್ದೆಲ್ಲ. ಈ ಎರಡಕ್ಕೂ ಸಾಕಷ್ಟು ಕಾರಣಗಳಿದ್ದಾವು. ಕಂಡದ್ದು, ಕಾಣದ್ದು; ಅದುಮಿದ್ದು, ಮರೆಮಾಚಿದ್ದು ; ಬೇರೆಯಾಗಿ ಕಾಣಿಸಿದ್ದು. ಒಂದು ರೀತಿ ನಡೆಯಿತು, ಇನ್ನೊಂದು ರೀತಿ ನಡೆಯಲಿಲ್ಲ ಎಂಬುದೂ ಈ ಎಲ್ಲ ಕಾರಣಗಳೂ ಜನವರ್ಗಗಳನ್ನು

ಮಸೆಯುತ್ತವೆ, ಬೆಸೆಯುತ್ತವೆ ; ಕೋಟಲೆಗಳನ್ನೊ ಕೆಳೆಗಳನ್ನೊ ಬಿಗಿಸುತ್ತವೆ. ಇವುಗಳನ್ನು ದಾಟಿ ಜನ ಬದುಕಬೇಕಾದರೆ ಒಂದನ್ನು ಮರೆಸಬೇಕು, ಮತ್ತೊಂದನ್ನು ಬಲಿಸಬೇಕು. ಇಲ್ಲವಾದರೆ ಘರ್ಷಣೆಗಳು ಬಿತ್ತಿ ಬೀರುತ್ತವೆ. ವ್ಯಕ್ತಿಯ ಹೆಜ್ಜೆಯನ್ನು ಕರ್ಮ ಹೇಗೆ ಹಿಡಿಯುವುದೊ ಬಿಗಿಯುವುದೊ ಸಮಾಜಗಳ ಗತಿಯನ್ನೂ ಹಾಗೆಯೇ ; ಅಂತರ ರಾಷ್ಟ್ರೀಯ ಚರಿತ್ರೆಯನ್ನೂ ಹಾಗೆಯೇ. ಇದೆಲ್ಲ ಮನುಷ್ಯರ ಮನಸ್ಸಿನಲ್ಲಿ, ನಾಯಕರ ಮನಸ್ಸಿನಲ್ಲಿ ನೆಲಸಿದ್ದಾದ್ದರಿಂದ. ಇದು ವ್ಯಕ್ತಿಶಃ ರಾಷ್ಟ್ರಗಳ ಬಾಂಧವ್ಯವನ್ನು ನಿರಂತರವಾಗಿ ನೆನಪು, ಅಶಂಕೆ, ಭರವಸೆಗಳಲ್ಲಿ ನಡಸುತ್ತಿರುತ್ತದೆ. ವ್ಯಕ್ತಿಶವಾದ್ದು ಆಗ ಗಾತ್ರ ಪ್ರಮಾಣಗಳಲ್ಲಿ ಬೆಳೆದು ಸಾಧಾರಣ್ಯವನ್ನು ಪಡೆಯುತ್ತದೆ. ಅದರ ಆವೇಶಗಳ ರೀತಿ ಸಾಮೂಹಿಕ. ಇಂದಿನ ಎಲ್ಲಕ್ಕೂ ಹಿಂದಿನದೆಲ್ಲ ಕಾರಣ ; ಗಳಿಕೆಗಳು ಹಾಗೆ ; ಸಮಸ್ಯೆಗಳು ಹಾಗೆ. ಪ್ರತ್ಯಂಶದಲ್ಲಿಯೂ ಆಯಾ ಚರಿತ್ರೆಗಳಿಗೆ ಮಾನ್ಯತೆ ಕೊಟ್ಟೇ ಇವಕ್ಕೆ ಸಮಾಧಾನ ಮಾಡಬೇಕಾಗುತ್ತದೆ. ಇಂದಿನ ಹಗೆ ನಾಳೆ ಕೆಳೆಯಾಗಬಹುದು ; ಕೆಳೆ ಹಗೆಯೊ ತಟಸ್ಥವೊ ಉದಾಸವೊ ಆಗಬಹುದು. ವ್ಯಕ್ತಿಗಳ ಮನಸ್ಸು ಎಷ್ಟು ಸೂಕ್ಷ್ಮವೊ ಎಷ್ಟು ಸುಲಭದಲ್ಲಿ ಮುರಿದುಕೊಳ್ಳುತ್ತದೆಯೊ ರಾಷ್ಟ್ರ ರಾಷ್ಟ್ರಗಳ ಮನಸ್ಸು, ರೀತಿ ಓಲು ಒಲವುಗಳೂ ಹಾಗೆಯೇ. ಇದನ್ನು ಬರೆದಿಟ್ಟರೆ ಗ್ರಂಥಸ್ಥ ಚರಿತ್ರೆ-ಇತಿಹಾಸ ಅದು ; ಸರ್ವಕಾಲಕ್ಕೂ ಉಳಿವ ನೆನಪು ; ಶಿಲಾನಿಕ್ಷಿಪ್ತಾಕ್ಷರಂ ಎಂಬಂತೆ : ಬರೆದಿಟ್ಟದ್ದು. ಕವಿತೆಯಾಗಿ, ನಾಟಕವಾಗಿ, ನೃತ್ಯವಾಗಿ, ಇತಿಹಾಸ ಗ್ರಂಥವಾಗಿ, ಕೌಲು ಕರಾರುಗಳಾಗಿ; ಗಡಿ ನಿರ್ಣಯಗಳಾಗಿ. ವರ್ಸೆಯ್, ಕಾಂಪೀಯ್ನ್ ಒಪ್ಪಂದಗಳಾಗಿ, ಬರ್ಕ್‌ಟೆಸ್ ಗ್ಯಾಡೆನ್, ನ್ಯೂರೆಂಬರ್ಗ್, ಹಿರೋಷಿಮಾಗಳಾಗಿ ; ಜಲಿಯನ್‌ವಾಲಾ ಬಾಗ್, ಹಳದಿ ಘಾಟಿಯಾಗಿ, ದ್ಯೂತದ ಅನ್ಯಾಯ ದೃಶ್ಯಗಳಾಗಿ ; ದುರ್ಯೋಧನನ ತೊಡೆತಟ್ಟುಗಳಾಗಿ ; ದ್ರೌಪದಿಯ ಬಿಡುಮುಡಿಯಾಗಿ ; ಬ್ರುನ್‌ಹಿಲ್ಡ್ ಕೊರಗಾಗಿ, ಮುಯ್ಯಾಗಿ. ಅವನ್ನು ಕಂಡ ವ್ಯಕ್ತಿಗಳು ಇಲ್ಲವಾಗಿಯೇ ದಶಮಾನಗಳೊ ಶತಮಾನಗಳೊ ಉರುಳಿ ಹೊರಳಿರಬಹುದು ; ಆ ನೆನಪನ್ನು ದೃಢವಾಗಿ ಭಕ್ತಿ, ಆವೇಶ, ಪ್ರೀತಿ ಪಕ್ಷಪಾತಗಳಲ್ಲಿ ಈ ಹೆಸರು, ಘಟನೆಗಳು ಉಳಿಸುತ್ತವೆ.... ಇವು ಏತೇತಕ್ಕೊ ಸಂಕೇತಗಳು. ಹಲವು ಮುಯ್ಯಿ ಕೇಳುತ್ತಿರುತ್ತವೆ ; - ಲೋಕದ ಇಂದಿನ, ನಾಳೆಯ ಇತಿಹಾಸ ಇವಕ್ಕೆ ತಣಿಯೆರೆಯದಿದ್ದರೆ, ಪ್ರತಿಕಾರ್ಯವನ್ನು ಮಾಡಿ ಅಮೃತವೂಡದಿದ್ದರೆ ಇವು ಆರವು ; ತೀರವು.

ಯುಧಿಷ್ಠಿರನು ಎಂದಂತೆ ಶಾಂತಿಃ ಪತ್ನೀ, ಕ್ಷಮಾ ಪುತ್ರಃ ಎಂಬುದು ಧರ್ಮ ರಾಜನಾದವನ ಮಾತು. ಇಂಗ್ಲಿಷಿನಲ್ಲಿ Forgive and Forget – ಕ್ಷಮಿಸು, ಮರೆ ಎಂಬ ಮಾತುಗಳಿವೆ. ಕ್ಷಮಿಸದಾದರೆ ಮರೆಯಲಾಗದು ; ಮರೆಯದಾದರೆ ಕ್ಷಮೆ ಒಲಿಯುವುದಿಲ್ಲ. ಕ್ಷಮೆ ಒಂದರ್ಥದಲ್ಲಿ ತಾಳ್ಮೆ. ಭೂತಾಯಿ ತಾಳ್ಮೆ ತಾಯಲ್ಲವೆ ? ಮಕ್ಕಳ ಎಲ್ಲ ತಪ್ಪುಗಳನ್ನೂ ಅನ್ಯಾಯಗಳನ್ನೂ ಹಿಂಸೆ ಅಪಮಾನವನ್ನೂ ಆಕೆ ತಾಳಿಕೊಳ್ಳುತ್ತಾಳೆ. ತಾಯಿ, ಧಾತ್ರಿಯಾದ್ದರಿಂದ. ಆಕೆ ಅವನ್ನು ಮರೆಯದೆ, ಕ್ಷಮಿಸದೆ

ಮುನಿದರೆ ನಮಗೆ ಹೋಗಲೆಲ್ಲಿ? ಆ ತಾಯಿ ಮಕ್ಕಳಾದ ನಮಗೆ ಆ ಧಾರಣೆ, ಆ ತಾಳ್ಮೆ, ಆ ಅಪರಾಧ ಕ್ಷಮಾಬುದ್ಧಿ ಏಕೆ ಬಾರವೊ! ಮಾನವರಲ್ಲಿ ಆ ಗುಣಗಳಿಗೆ ಎಂದು ಉತ್ಕರ್ಷ ಬರುತ್ತದೆಯೊ ಅಂದು ಲೋಕಚರಿತ್ರೆಗೆ ಶಾಂತಿ, ಸುರಕ್ಷಣೆ, ಸೌಭಾಗ್ಯ ಒದಗುತ್ತವೆ.

ಪಾಶ್ಚಿಮಾತ್ಯರಲ್ಲಿ ನೈಟಿಂಗೇಲ್ (ಬಹುಶಃ ಪರ್ಷಿಯನರ ಬುಲ್‌ಬುಲ್) ಕಥೆ ಇದೆ. ಅದರ ಹಾಡು ಸವಿ ; ಆದರೆ, ಶೋಕಭೂಯಿಷ್ಠವಾದ್ದು. ಇದು ಅವರ ಕವಿ ಸಮಯ ; ನಮ್ಮ ಕೋಗಿಲೆಯ ಇಂಚರದಂತೆ. ಗಂಡ ಹೆಂಡತಿ, ನಾದುನಿ, ಮಗ ಇವರ ಒಂದು ಕಥೆ ಅದು. ನಾದುನಿಯ ಸಂಬಂಧದಲ್ಲಿ ಕಾಮ ಉಂಟಾಗಿ, ಬೇಟೆಗೆ ಅವಳನ್ನು ಜೊತೆಗೆ ಕರೆದುಕೊಂಡು ಹೋಗಿ, ಆಕೆಯನ್ನು ಬಳಸಿಕೊಂಡು, ಈ ಸಂಗತಿ ಹೆಂಡತಿಗೆ ತಿಳಿಯದಿರಲೆಂದು ಅವಳ ನಾಲಗೆ ಕತ್ತರಿಸಿ, ಅವಳನ್ನು ಒಬ್ಬ ಹೆಗ್ಗಡೆ ಅಥವಾ ಪಾಳೆಯಗಾರ ಸೆರೆಯಲ್ಲಿ ಮರೆಯಲ್ಲಿ ಇಡುತ್ತಾನೆ. ನಾದುನಿ ತನ್ನ ಅಪಮಾನ ಭಂಗಗಳ ಕಥೆಯನ್ನು ತನ್ನ ಅಕ್ಕನಿಗೆ ಕಸೂತಿಯ ಹಸೆಯೊಂದರಲ್ಲಿ ಮುಟ್ಟಿಸುತ್ತಾಳೆ. ಈ ಮೂಲಕ ನಿಜ ಅರಿತ ಅಕ್ಕ-ಹೆಂಡತಿ ಕ್ರುದ್ಧಳಾಗಿ ಗಂಡನ ಮೇಲೆ ಮುಯ್ಯಿ ತೀರಿಸಿಕೊಳ್ಳಲು ತನ್ನ ಮಗ ಇಟಿಲಸನ್ನೇ ಕತ್ತರಿಸಿ ಅಡುಗೆ ಮಾಡಿ ಗಂಡನಿಗೆ ಬಡಿಸುತ್ತಾಳೆ. ಈ ಕರ್ಮ ಕಥೆ ಇನ್ನೆಷ್ಟು ದುಃಖಕ್ಕೆ ದಾರಿ ಇಡದು ಎಂದು ಕರುಣೆಯಿಂದ ದೇವತೆಗಳು ಎಲ್ಲರನ್ನೂ ಹಕ್ಕಿಗಳಾಗಿ ಮಾಡಿದರಂತೆ. ನಾದುನಿ ನೈಟಿಂಗೇಲ್ ; ಹೆಂಡತಿ ಸ್ವಾಲೊ ; ಗಂಡ ಗಿಡುಗ,-ಹೀಗೆ. ಈ ದಾರುಣ ಕಥೆ ನೈಟಿಂಗೇಲಿನದು : ಅದು ಹಾಡಿದಾಗಲೆಲ್ಲ ಈ ಕರ್ಮ ಪ್ರಪಂಚ ಆ ಜನತೆಗಳ ಗಮನಕ್ಕೆ ಬರುತ್ತದೆ. ಸ್ವಾಲೊ ಹಾಡಿದಾಗ How can thine heart be full of the Spring ? – ನಿನ್ನ ಹೃದಯದಲ್ಲಿ ವಸಂತ ಸಂತೋಷ ಹೇಗೆ ಬಂದೀತು ? ನೀನು ನಿನ್ನ ಕಥೆಯನ್ನು ಹೇಗೆ ಮರೆತೆ ? ನನ್ನದನ್ನು ನಾನು ಹೇಗೆ ಮರೆತೇನು ? The world will end when I forget – ಲೋಕ ಮುಗಿದಿರುತ್ತದೆ ನಾನು ಮರೆತಾಗ ಎನ್ನುತ್ತದಂತೆ ನೈಟಿಂಗೇಲ್. ಹೀಗೆಂದು ಒಬ್ಬ ಕವಿಯೆಂದರೆ Eternal passion ! Eternal pain !– ನಿತ್ಯ ಉದ್ವೇಗ, ರಾಗೋನ್ಮಾದ ! ನಿತ್ಯ ನೋವು! ಎಂದು ಇನ್ನೊಬ್ಬನೆನ್ನುತ್ತಾನೆ.

ಇಂಥವಕ್ಕೆ ಮಿತಿಯಿಲ್ಲವೆ ? ಮಿತಿ ಬೇಡವೆ ? ಜನತೆಗಳ ನೆನಪಿನಲ್ಲಿ ನಟ್ಟ ಇಂಥ ಕಥೆಗಳು ಭವ್ಯ ಭಾವಕವಿತೆಗಳಾಗಿ, ವರ್ಣ ಚಿತ್ರಗಳಾಗಿ, ಶಿಲ್ಪಗಳಾಗಿ, ರೂಪಕಗಳಾಗಿ, ಅಮೃತ ಸತ್ಯಗಳಾಗಿ ಇರುವಾಗ ಲೋಕ ಮರೆತೀತು ಹೇಗೆ ? ಅಂಥ ನೋವು ಬೇನೆ ಇಲ್ಲದಿದ್ದರೆ ಅಂಥ ಕಲಾಕೃತಿಗಳು ಹುಟ್ಟುತ್ತಿದ್ದವೊ ?-ಎಂದೀರಿ. ಅವು ಎಚ್ಚರ ಕೊಡುವುದಾದರೆ ಶಾಂತಿ ; ಇಲ್ಲವಾದರೆ ಲೋಕಕ್ಕೆ ಶಾಂತಿ ಎಲ್ಲಿ ? ಭಗವತಿ ವಸುಧೇ, ದೇಹಿ ಮೇ ವಿವರಂ-ಬಾಯಿ ತೆರೆ ; ನನ್ನನ್ನು ತೆಗೆದುಕೊ ತಾಯಿ, ಭೂಮಾತೆ; ಇನ್ನು ಈ ಅಪಮಾನದ ಒಂದು ಕ್ಷಣ ಬದುಕಲಾರೆ ಎಂದು ಸೀತೆಯಿಂದ ಆಡಿಸಿದ ದೇಶದಲ್ಲಿ ಇದು ಎಷ್ಟು ಕರುಣೆಗೆ ಕಾರಣವಾಗಬೇಡ ! ಆಗುತ್ತದೆಯೆ ? ಈ ಜನಕ್ಕೆ

ಸಂಸ್ಕಾರವೇಕೆ? ಚರಿತ್ರೆಯೇಕೆ ? ವಿದ್ಯಾ ಶಿಕ್ಷಣಗಳೇಕೆ ? ಇಲ್ಲಿಯೇ ಅಲ್ಲ. ಹೆಂಡತಿಯನ್ನು ಹೊಡೆಯದ ಗಂಡನನ್ನು ನೀವು ಹುಡುಕುವಿರಾದರೆ ಇನ್ನು ನಾಲ್ಕು ರಸ್ತೆ ಆಚೆ ವಿಚಾರಿಸಿ ನೋಡಿ ; ಇಲ್ಲಿ ಎಲ್ಲರೂ ಹೊಡೆಯುತ್ತಾರೆ ಎಂದರಂತೆ ಕೆಲ ಮಂದಿ ಮುದುಕಿಯರು, ಅಮೇರಿಕದಲ್ಲಿ ಕೂಡ, ಹುಡುಕಿಕೊಂಡು ಬಂದ ಪೋಲೀಸರಿಗೆ, ಒಂದು ಸಿನೆಮದ ಕಿರುಚಿತ್ರದಲ್ಲಿ. ಬರ್ಬರತೆಗೆ ನಾಡೇನು, ಕಾಲವೇನು?

ಒಂದು ಹಾಳೆಯಲ್ಲಿ ಬರೆದಿದ್ದುದನ್ನು ಅಚ್ಚುಮಾಡಿ ಲಕ್ಷ ಪ್ರತಿಗಳಲ್ಲಿ, ಸಾವಿರ ನೂರು ಭಾಷೆಗಳಿಗೆ ಭಾಷಾಂತರಿಸಿ ನೂರು ಕಾಲಕ್ಕೆ ಉಳಿಸುವ ಯತ್ನ ನೆನಪನ್ನು ಹರಡುವ ಊರುವ ಯತ್ನ. ಕರ್ಮ ಕಥೆಯನ್ನು ಅನಂತ ಕಾಲಕ್ಕೂ ಉಳಿಸುವ ಕ್ರಿಯೆ ಅದು.

ಹೀಗೆಂದು ಅಚ್ಚು, ಭಾಷಾಂತರ ಬೇಡವೆಂದರಾದೀತೆ ? ಇಂದು ಕಂಡು, ಮರೆವ ವೃತ್ತಪತ್ರಿಕೆಯ ಮಾತಲ್ಲ ಅದು. ಅಥವಾ ಹಾಗೆನ್ನುವುದೂ ತಪ್ಪು. ವೃತ್ತ ಪತ್ರಿಕೆಯ ಯಾರ ಯಾವ ಮಾತು ಹೇಗೆ ಮರ್ಮಸ್ಪೃಕ್ಕಾಗಿ, ವಿಷವಾಗಿ ಯಾರಲ್ಲಿ ಮುರಿದುಕೊಳ್ಳುವುದೊ! ಯಾವ ಸಾಮಾಜಿಕ, ರಾಷ್ಟ್ರೀಯ ವಿಷಮತೆ, ಐಶ್ವರ್ಯ ಸಿಂಹಾಸನಗಳನ್ನು ಬೆಳಸುವುದೊ ಯಾರು ಬಲ್ಲರು? ಒಂದು ಸಲ ಹೊಳೆದರಾಯಿತು; ಕಲ್ಪನೆಯೊ ಭ್ರಾಂತಿಯೊ ವಂಚನೆಯೊ ನೋಟವೊ ಹಲ್ಕಿರಿತವೊ ವ್ಯಂಗ್ಯವೊ-ಅದು ಘಟನೆ ; ಅದು ಚರಿತ್ರೆಯ ಅಂಶ. ಅದು ಇಲ್ಲದಿರುತ್ತಿದ್ದ ಕಾಲಕ್ಕಿಂತ ಅದು ಹೊಳೆದ ಕಾಲ ಒಂದು ಸಂತೋಷವೊ ವಿಷಾದವೊ ಲೋಕಕ್ಕೆ ಹೊಸತಾಗಿ ಬಂದು ಸೇರಿದ ಜೀವಾಂಶ. ಮನೋಲೋಕದ ಹೊಸ ಒಂದು ಪ್ರಜೆ ; ಸುಖದುಃಖಗಳ ಹೊಸ ಒಂದು ಕೇಂದ್ರ. ಆಗಿನಿಂದ ಅದರ ಚರಿತ್ರೆಗೆ ಆರಂಭ ; ಅದರ ಆಗುಹೋಗುಗಳ ಕಥೆ, ಲೋಕದ ಜೀವನವನ್ನು ಮಾರ್ಪಡಿಸತೊಡಗುತ್ತದೆ. ಸವಿಯನ್ನೊ ನೋವನ್ನೊ ಅರಿವನ್ನೊ ಅಜ್ಞಾನವನ್ನೊ ಭ್ರಾಂತಿಯನ್ನೊ ರಾಗದ್ವೇಷಗಳನ್ನೊ ವಿಕಾರಗಳನ್ನೊ ಚೆಲುವುಗಳನ್ನೊ ತನ್ನದಾಗಿ ಬೆಳಸುತ್ತದೆ. ಅಲ್ಲಿದೆ ಅಮೃತತತ್ವದ ಬಿಂದು ; ರಹಸ್ಯ. ಒಂದು ಸಲ ಹೊಳೆದುದು, ಹೊಮ್ಮಿದುದು, ನುಡಿದುದು, ನಡೆದುದು ಲೋಕವನ್ನು ಆ ಮಟ್ಟಿಗೆ ಮಾರ್ಪಡಿಸುವ ಸತ್ವ. ಪರಿಣಾಮ ಅಧಿಕವೆ, ಅಲ್ಲವೆ ಎಂಬುದಲ್ಲ ಲೆಕ್ಕ.

ಷಾಹಜಹಾನ್ ಮುಮತಾಜ ಮಹಲ್ ಏಕಾಂತದಲ್ಲಿದ್ದಾರೆ. ಪ್ರೀತಿಯ ಉತ್ಸವದಲ್ಲಿ. “ಭೂಲಿನಾಃ ಭೂಲಿನಾಃ ಭೂಲಿನಾಃ ಪ್ರಿಯಾ”- ಮರೆಯಬೇಡ ಪ್ರಿಯ-ಎಂಬುದು ಮಾತು. ಪ್ರಿಯನ ಕಲ್ಪನೆಯಲ್ಲಿ, ಪ್ರೀತಿಯಲ್ಲಿ ಅದು ಬೆಳೆದು ರೂಪಗೊಂಡಿತು. ಅಮೃತಾಕೃತಿಯನ್ನು ಪಡೆಯಿತು. ಆ ಪ್ರೀತಿಯ ಸ್ಮಾರಕವಾದ ತಾಜಮಹಲಾಯಿತು. ಈ ಪ್ರೇಮದ ನೆನಪನ್ನು ಹೇಗೆ ಉಳಿಸುವುದು, ಈ ಬೆಲೆ, ಗುಣ, ಭಕ್ತಿ ಕಾಣಿಸುವುದು ಎಂಬ ಕಲ್ಪನೆ ಎದ್ದಂತೆಲ್ಲ ಅಮೃತ ಶಿಲಾಮಂದಿರವೊಂದು ಕಟ್ಟಿತು. ಲೋಕಕ್ಕೆ ಅಚ್ಚರಿಯ ವಾಸ್ತುವನ್ನು ನಿರ್ಮಾಣ ಮಾಡಿತು. ರವೀಂದ್ರರು ಬರೆದಂತೆ

ಏಕಬಿಂದು ನಯನಜಲ್
ಕಾಲೇರ್ ಕಪೋಲ ತಲೇ ಶುಭ್ರ ಸಮುಜ್ಜಲ್,
ಏ ತಾಜಮಹಲ್.

- ಕಾಲದ ಕೆನ್ನೆಯ ಮೇಲೆ ಉರುಳಿ ನಿಂತ ಶುಭ್ರ ಸಮುಜ್ವಲವಾದ ಒಂದು ಕಣ್ಣೀರ ಬಿಂದುವಂತೆ ತಾಜಮಹಲ್ ! ಇಂದು ಆ ಸಮ್ರಾಟನಿಲ್ಲ ; ಆ ಸಂರಾಜ್ಞಿಯಿಲ್ಲ : ಚಲೇಗೇಛ್ ತುಮಿ ಆಜ್-ಮಹಾರಾಜ್-ಎನ್ನುತ್ತಾರೆ ಕವಿ. ಅವರ ವೈಭವ, ದರ್ಪ ಮಾಯವಾಗಿದೆ. ಆದರೆ ಪ್ರೀತಿಯ ಸ್ಮಾರಕವಾಗಿ ಆಗ್ರದ ತಾಜಮಹಲ್ ಉಳಿದಿದೆ. ಅದರ ನೆನಪು ಕವಿಗೆ ಬಂದುದು ಕಾರ್ತಿಕದ ಒಂದು ಶುಕ್ಲ ಚತುರ್ದಶಿಯ ಬೆಳುದಿಂಗಳಲ್ಲಿ; ಅಲಹಾಬಾದಲ್ಲಿ ; ೨೫೦-೨೭೦ ವರ್ಷಗಳ ತರುವಾಯ. ಅದಕ್ಕೆ ದುಡಿದವರೆಷ್ಟೊ, ಬಲಿಯಾದವರೆಷ್ಟೊ ; ವೆಚ್ಚವೆಷ್ಟೊ, ಶಾಪವಿಟ್ಟವರೆಷ್ಟೊ ; ಆಕ್ರೋಶಪಟ್ಟವರೆಷ್ಟೊ; ಅದು ಸ್ಫೂರ್ತಿಗೊಳಿಸಿದ ಕವಿತೆ, ಪ್ರೇಮ, ಕಲಾಕೃತಿ ಎಷ್ಟೊ ; ಅದು ಸಂತೋಷಪಡಿಸಿದ ಕೋಮಲ ಮನಸ್ಸುಗಳು-ಅದು ನಿಂತಿರುವವರೆಗೂ ಇನ್ನೆಷ್ಟೊ. ಅದರ ಇತಿಹಾಸದ ಅಂಗಗಳು ಇವೆಲ್ಲ. ಹಾಗೂ ಇದು ಪ್ರೀತಿಯ ಸ್ಮಾರಕವೆಂದು ಕೆಲವರೆಂದರೆ ಅದು ಒಂದು ಹೆಣವನ್ನು ಹೂಳಿರುವ ಗೋರಿ ; –ಅಮೃತಶಿಲೆಯ ಅಹಂಕಾರವನ್ನು ಮೆರಸುವ ಅಟ್ಟಹಾಸ ಎಂದು ಇನ್ನು ಕೆಲವರು. ಯಾವುದು ನಿಜ ? ಯಾವುದಲ್ಲ ? ಈ ಮುಖವೂ ನಿಜ ; ಅದೂ ನಿಜ. ಯಾರ ಯಾರ ಭಾವದಲ್ಲಿ ಅದು ಹೇಗೆ ಕಾರ್ಯ ಮಾಡಿದರೆ ಅದೆಲ್ಲ ನಿಜ. ಭಾವ ಸುಂದರವಾಗಬಹುದು ; ಅಸುಂದರವಾಗಬಹುದು; ಧರ್ಮವಾಗಬಹುದು ; ಅಶಿವವಾಗಬಹುದು ; ಸತ್ಯವಂತೂ ಖಂಡಿತ.

ಪ್ರಿಯರು, ಹಿರಿಯರು ತೀರಿಕೊಂಡರು. ಅವರನ್ನು ಸುಟ್ಟು ಬೂದಿ ಮಾಡುತ್ತೇವೆ. ಆ ಬೂದಿಯನ್ನು ಗಾಳಿಗೆ ತೂರಿ ಆಯಿತು ; ಹರಿವ ನೀರಲ್ಲಿ ಕಲಸಿ ಆಯಿತು ಪಂಚಭೂತಗಳಲ್ಲಿ ಸೇರಿಕೊಳ್ಳಲಿ ಎಂದು. ಸ್ಪಷ್ಟವಾಗಿ ಉದ್ದೇಶಪೂರ್ವಕವಾಗಿ ಅಂಥ ಭಾವನೆ ಅಗತ್ಯವಿಲ್ಲ. ನಿಜ. ಪಂಚೀಕರಣ ತಾನಾಗಿ ಆಗುತ್ತದೆ. ಆಗಿ ಕಾರ್ಯಕಾರಿಯಾಗಲಿ ಎಂದು ಬಯಸುವ ಕರ್ಮ ಉಂಟು. ಶವ ಜೀವವಲ್ಲ. ತಾಯಿ, ಮಡದಿಯರ ನಿತ್ಯಾಂಶ ಬೇರೆ. ಆ ದೇಹವನ್ನು ಅದನ್ನು ಕವಿದ ವೇಷವನ್ನು ಮರೆಯೋಣ; ಅದು ಹಿಡಿ ಬೂದಿಯಾಯಿತು ; ಅವರಿಗೆ ಸಂಬಂಧಿಸಿದ್ದೆಲ್ಲವನ್ನೂ ದಾನ ಮಾಡಿಬಿಡೋಣ - ಎಂದು ಅದನ್ನೆಲ್ಲ ಮರೆವ ವೃತ್ತಿ ಉಂಟು. ಪುನರಾವೃತ್ತಿರಹಿತ ಶಾಶ್ವತ ಪುಣ್ಯಲೋಕ ಪ್ರಾಪ್ತಿ ಅವರಿಗಾಗಲೆಂಬ ಹಾರೈಕೆಯ ಕರ್ಮ ಉಂಟು. ಸಂತರು ಸಂನ್ಯಾಸಿಗಳೇ ಆದರೂ ಅವರಿಗೆ ಸಂಬಂಧಿಸಿದ ವಸ್ತುಗಳನ್ನು ಉಳಿಸಿ ಅವರ ಸ್ಮಾರಕವಾಗಿ ಕಾಪಾಡುವ, ಅವರ ದೇಹಗಳನ್ನು ಪರಿಮಳ ದ್ರವ್ಯ ಬಳಿದು ಉಳಿಸಿಡುವ, ದರ್ಶನವೇರ್ಪಡಿಸಿ ಜಾತ್ರೆ ಮಾಡುವ ವೃತ್ತಿಯೂ ಉಂಟು. ಯಾವುದು ಸರಿ? ಯಾವುದು ತಪ್ಪು ? ಹಿರಿದರ ನೆನಪು ಹೇಗೆ ಉಳಿಯಬೇಕು? ಉಳಿಸುವ ಅಗತ್ಯವಿದ್ದರೆ,

ರೀತಿ ಯಾವುದು ? ಎಂಬ ವ್ಯವಹಾರ ವಿಧಾನಗಳುಂಟು. ಮರೆವಿಗೆ ನೆನಪಿಗೆ ಎರಡಕ್ಕೂ ರೂಢಿಯ ಪ್ರಾಮಾಣ್ಯ ದೊರಕುತ್ತದೆ.

ದುಃಖವನ್ನು ಮರೆ, ಸರಿ ; ಅನ್ಯಾಯವನ್ನು ? ಮರೆ ! ಮರೆತರೆ ಸರಿಯಾದೀತು? ಅದರ ವಿರುದ್ಧ ಹೋರಾಡು ; ಅದು ಲೋಕದಲ್ಲಿರುವವರೆಗೂ ನಮಗೆ ಶಾಂತಿಯಿಲ್ಲ, ನಿಲವಿಲ್ಲ, ನಿಲುಗಡೆ ಇಲ್ಲ. ಒಂದರ ಮರೆವು ಅಗತ್ಯ ; ಇನ್ನೊಂದನ್ನು ಮರೆಯಲಾಗದು. ದ್ವೇಷವನ್ನು ಮರೆ, ದ್ವೇಷ ಮತ್ಸರವಾದಾಗ, ವಂಶಪಾರಂಪರ್ಯವಾಗಿ ಕೇಡನ್ನು ಸಾಧಿಸುವಾಗ. ಅದರ ಬೇರು ಕಿತ್ತ ಹೊರತು ಲೋಕಶಾಂತಿ, ಹಿತ ಆಗವು. ಅದು ತಣಿ ಕೇಳುತ್ತಿರುತ್ತದೆ. 'ಕರ್ಮಮೀಪರಿ ಮರಿಗೆ ಮರಿಯಿಕ್ಕುತಿರ್ಕುಂ' ಎಂಬಂತೆ. ದುಷ್ಕರ್ಮವಾಗಲಿ ಅದರ ಫಲವಾಗಲಿ ಲೋಕವನ್ನು ಗಿಡಿಯದಂತೆ ಕ್ರಮ, ಕಾರ್ಯ ಬೆಳೆದಲ್ಲದೆ ಕ್ಷೇಮವಿಲ್ಲ. ಪ್ರೀತಿ, ಔದಾರ್ಯ, ಕ್ಷಮೆ, ಕೆಳೆ, ಕರುಣೆ ಇವುಗಳನ್ನು ಬೆಳಸಬೇಕಾದೀತು. ಸರ್ವಥಾ ಯತ್ನಿಸಿ. ಒಂದನ್ನು ಮರೆಯಿರಿ ; ಇನ್ನೊಂದನ್ನು ನೆನಪಿಡಿ-ಇಂಥಲ್ಲಿ ಬೆಲೆಗಳು ಹುಟ್ಟಿಕೊಳ್ಳುತ್ತವೆ. ಇಲ್ಲಿ ವಿವೇಚನೆ ಬೇಕಾಗುತ್ತದೆ. ಯಾವುದನ್ನು ಮರೆವುದು ಸರಿ, ಮೇಲು ; ಯಾವುದನ್ನು ನೆನೆವುದು, ಒಲಿಸುವುದು ಅಗತ್ಯ? -ಎಂಬ ಪರಿಜ್ಞಾನ ಲೋಕಹಿತಸಾಧನೆಯ ಮೂಲಸೂತ್ರ, ಎಲ್ಲ ನಯದ ಮೂಲಮಂತ್ರ ಆಗುತ್ತದೆ. ಚೆನ್ನಾಗಿ ಬದುಕಿಸುವುದೆಲ್ಲ ಉಳಿಯಲಿ ; ಕೆಡಿಸುವುದೆಲ್ಲ ಅಳಿಯಲಿ ಎಂಬುದು ಸುಲಭ. ಆದರೆ ವಿಮರ್ಶೆ, ವಿವೇಚನೆಗಳಿಗೆ ಒಡ್ಡಿದ ಪ್ರಶ್ನೆಗಳು ನೂರಾರು. ಇಲ್ಲಿ ನಯ ಸೂಕ್ಷ್ಮದಲ್ಲಿ. ಧರ್ಮ ಧರ್ಮಸೂಕ್ಷ್ಮದಲ್ಲಿ ಇದೆ ; ಸತ್ಯ ಸತ್ಯಸೂಕ್ಷ್ಮದಲ್ಲಿದೆ. ಧರ್ಮಸ್ಯ ತತ್ವಂ ನಿಹಿತಂ ಗುಹಾಯಾಂ–ಎಂಬಂತಾದರೆ ಇದು ಕೇವಲ ಸುಳಿವು, ಹೊಳವು, ನೆಳಲು ಎಂಬಂತೆ ಆಡಿದ ಮಾತು. ಸತ್ಯವೆಂಬುದು ನೆಲದ ಮರೆಯ ನಿಧಾನದಂತೆ ; ಶಿಲೆಯ ಮರೆಯ ಬಂಗಾರದ ಸೆಲೆಯಂತೆ. ಬೆಲೆಗಳಾವುವೆಂಬುದನ್ನು ಕಲಿಯಬೇಕು. ಕಲಿಸಬೇಕು ಶಿಕ್ಷಣ.

ದೆಹಲಿಯಂಥ ಊರಿಗೆ ಹೋದರೆ ಅಲ್ಲಿ ಮಹಾಭಾರತ ಕಾಲದಿಂದ ಹಿಡಿದು ಇಂದಿನವರೆಗೂ ಭಾರತದ ಇತಿಹಾಸವನ್ನು ನೆನಪಿಗೆ ತರುವ ಬೀದಿ, ಮಂದಿರ, ಸ್ಮಾರಕ, ಕೋಟೆಕೊತ್ತಳ, ಕೊಳ, ಕಂಬ, ವಿಗ್ರಹ, ಉಳಿಕೆ, ಹೆಸರು ಇವೆ. ಇಂದಿನ ಪ್ರೀತಿಗೆ–ಯಾರ?– ವಿರುದ್ಧವಾದವುಗಳನ್ನು ನಾಶಮಾಡುವುದೆ? ಮರೆಯುವುದೆ? ಮರೆಮಾಡುವುದೆ? ಹಲವು ನಮ್ಮ ಕ್ರೋಧಕ್ಕೂ ಕಾರಣವಾಗುತ್ತವೆ; ಅಪಮಾನಕರವೆನ್ನಿಸುತ್ತವೆ. ನಾಳೆ ಅವನ್ನು ಮುರಿವ ಯತ್ನ ನಡೆದೀತು. ಕಲ್ಕತ್ತದ ವಿಕ್ಟೋರಿಯ ಮೆಮೋರಿಯಲ್ಲನ್ನು ಮೊದಲು ಕಂಡಾಗ ಅದರಲ್ಲಿ ನನಗೆ ಕರ್ಜನನ ಅಮೃತಶಿಲಾ ರಚನೆಯ ತಾಜಮಹಲ್ ಸ್ಪರ್ಧೆ ಕಾಣಿಸಿತು. ಜೊತೆಗೆ ಮಹಾರಾಜ್ಞಿ, ನಿಮ್ಮ ಜನ ಸರಿಯಾಗಿ ನಡೆದುಕೊಳ್ಳದಾದರೆ ಇದರ ಪ್ರತಿಯೊಂದು ಕಲ್ಲನ್ನೂ ಕಿತ್ತು ಬೀಸಾಡುತ್ತಾರೆ–ಜಾಗ್ರತೆ, ಎನ್ನಿಸಿತು. ಅವೆಲ್ಲ ಇರುವಾಗ ಒಟ್ಟು ಭಾರತದ ಅಖಂಡ

ಚರಿತ್ರೆಯ ಅರಿವು ನಟ್ಟು ನಿಂತಂತಲ್ಲವೆ? ಆ ರಾಜಧಾನಿ ಹೇಗೆ ಹುಟ್ಟಿ, ಹೇಗೆ ಬೆಳೆದು, ಏನೇನು ಕಷ್ಟ ಭಂಗಗಳನ್ನು ದಾಟಿಯಾದ ಮೇಲೆ ಈ ನಾಡು ಪುನಃ ಸ್ವತಂತ್ರವಾಗಿ ಎದ್ದಿದೆ? ಯಾವುದನ್ನು ದಾಟಬೇಕು? ಯಾವುದನ್ನು ನೆನಪಿಡಬೇಕು ಎಂಬುದರ ಸಂಕೇತಗಳಲ್ಲವೆ ಅವೆಲ್ಲ? ನಮ್ಮ ಸಮಸ್ತ ಶಿಕ್ಷಣದ ಸಾಧನವಾಗಲಾರವೆ? ಉಹೂಂ. ಅವುಗಳ ಹೆಸರನ್ನು ಕೂಡ ಮಾರ್ಪಡಿಸಬಾರದು. ನೆನಪು ಉಳಿಯಲಿ; ಕಾಡಲಿ; ಸ್ಫೂರ್ತಿ ಕೊಡಲಿ; ಎಚ್ಚರಿಕೆ ಕೊಡುತ್ತಿರಲಿ; ಸಂತೋಷ ಕೊಡಲಿ; ಸ್ಮಾರಕವಿರಲಿ.

ಅವು ಶವಗಳು; ಆ ಪ್ರೇತ ಆ ಭೂತಗಳ ನಡುವೆ ಸಂಚಾರವೆ? ಜೀವನವೆ? ಎಂದೀರಿ. ಏಕಾಗಬಾರದು? ಅವಾದರೂ ಹೊರಗಿನ ಭೂತಗಳು. ನಮ್ಮ ರಕ್ತಗಳಲ್ಲಿಯೂ ರಾಗಾವೇಶಗಳಲ್ಲಿಯೂ ಪಕ್ಷಪಾತಗಳಲ್ಲಿಯೂ ಹೂಳದ, ಸುಡದ ಇನ್ನೆಷ್ಟು ಭೂತಗಳು, ಶವಗಳು ಇಲ್ಲ? ಅವುಗಳಿಗೆ ಸಂಸ್ಕಾರವಾಗುತ್ತದೆಯೆ? ಮಾಡುತ್ತೇವೆಯೆ? ಆ ಕಡೆಗೆ ನಮ್ಮ ಲಕ್ಷ್ಯ ಹೋಗುತ್ತದೆಯೆ? ಅವಕ್ಕೆ ಸಂಸ್ಕಾರವಾಗದೆ ವ್ಯಕ್ತಿಗಾಗಲಿ ಜನತೆಗಾಗಲಿ ಏಳಿಗೆ ಉಂಟೆ? ಅವಾದಾಗಲ್ಲವೆ ಕರ್ಮಕ್ಷಯ? ಅದಕ್ಕೆ ಬೋಧಿಲಾಭ ಬೇಡವೆ? ಕೇವಲ ಸ್ಮೃತಿಯಾಗಿರುವವರೆಗೂ ಅವಕ್ಕೆ ದುಷ್ಕ್ರಿಯಾ ಚೈತನ್ಯವೇ ಹೆಚ್ಚು ; ಬಾಳನ್ನು ಅದು ತಿದ್ದಬೇಕು.

ಪ್ರಿಯೆಯನ್ನೂ ಕೆಳೆಯನ್ನೂ ಬಹುಕಾಲ ಕಂಡುದಿಲ್ಲ ; ಇವರೊ : ನೆರವು ಕೊಟ್ಟವರು, ಸಾಕಿ ಬೆಳಸಿದವರು ; ಇದರಿಂದ ಬಾಳು ಚೊಕ್ಕವಾಯಿತು; ದೀನವಾಗಿದ್ದ ಚೇತನ ಇಂಥವರ ಮಾತಿನಿಂದ, ಮಾರ್ಗದಿಂದ ಶಕ್ತವಾಯಿತು, ಉದ್ಧಾರವಾಯಿತು; ಇವರು ಮನಸ್ಸನ್ನೂ ಪ್ರವೃತ್ತಿಗಳನ್ನೂ ತಿದ್ದಿದವರು, ಶುಚಿಗೊಳಿಸಿದವರು; ಇದು ಶೇಷಣ್ಣನವರು ಬಾಜಿಸುತ್ತಿದ್ದ ವೀಣೆ; ಇದು ವರದಾಚಾರ್ಯರ ವೀರಭಂಗಿ, ಶೃಂಗಾರಾಭಿನಯದ ಸೌಭಾಗ್ಯ; ಇದು ಬೇಲೂರಿನ ಶಿಲಾ ಬಾಲಿಕೆಯ ವಿಗ್ರಹ; ಇದು ಪ್ರಭಾಸ–ಕೃಷ್ಣನೂ ಇಲ್ಲಿ 'ಜರಾ'(!) ವ್ಯಾಧನ(!) ಬಾಣಕ್ಕೆ ತುತ್ತಾದನಂತೆ; ಇದು ವಿದ್ಯಾರಣ್ಯರ ತಪೋಭೂಮಿ; ಇದು ಸಾರನಾಥ್; ಗಯಾ; ಇಲ್ಲಿ ಸುಳಿದುದು ಯೇಸು, ಬುದ್ಧ, ಸಾಕ್ರಟೀಸ್, ಗಾಂಧೀಜಿ; ಇವು ಅವರ ನುಡಿಗಳು; ಈ ನಡೆ ಲೋಕೋದ್ಧಾರಕಾರಿ; ತಾರಕ! 'ಶಾಂತಮುಲೇಕ ಸೌಖ್ಯಮುಲೇದು' 'ಎಕ್ಕಡಿ ನೇಸ್ತಮು ಎಕ್ಕಡಿನೆವರು ಎವ್ವರಿಕೆವ್ವರೇ' ಎಂದೊ 'ವಾಗುರಮನಿ ತೆಲಿಯಗ ಮೃಗ ಗಣಮುಲುವಚ್ಚಿ ತಗಲು ರೀತಿ ಉನ್ನದಿ–ಮತ್ಸರಮನು ತೆರತೀಯಗರಾದಾ' ಎಂದಾಗಲೊ ಹಾಯುವ ಮನಸ್ಸಿನ ಭಾವಬಂಧುರತೆ; 'ಕಾರ್ಯಂ ಕರುಣಮಾರ್ಯೇಣ ನ ಕಶ್ಚಿನ್ನಾಪರಾಧ್ಯತಿ' ಎಂದ ಸೀತಾದೇವಿಯ ಆರ್ಯಕರುಣೆ –ಇವೆಲ್ಲ ನೆನಪೇ – ಇವು ಅನಂತ ಕಾಲದ ಸೌಭಾಗ್ಯಗಳು; ನೆನಪಿನ ಮುಡಿಗಳು ; ಇವನ್ನು ಲೋಕ ಮರೆತರೆ ಅಂದು ಲೋಕ ಬಡವಾಗುತ್ತದೆ, ಬೆಂಡಾಗುತ್ತದೆ. ಬಾಳು ತಬ್ಬಲಿಯಾಗುತ್ತದೆ.

ನೆನಪಿರಲಿ; ಇದು ಕಡೆಯಲ್ಲ, ಮೊದಲು; ಪುನಃ ಕಾಣುತ್ತೇವೆ. ಕಾಣದಿದ್ದರೆ ಬೇಡ. ನೆನಪಿನ ಈ ಸವಿ ನನ್ನ ನೆತ್ತರ ಓಟದಲ್ಲಿ, ಹೃದಯ ಮಿಡಿತದಲ್ಲಿ, ಮನಸ್ಸಿನ

ಸಮಸ್ತ ಕಲ್ಪನೆಗಳಲ್ಲಿ ಜಾಗ್ರತವಾಗಿರುತ್ತದೆ – ಎಂದೆಂದಿಗೂ ನನ್ನ ವಿಶ್ವಾಸ ಇದು-ನೀನು ಹೇಗೇ ಮಾಡು-ಎಂಬುದು ತಪ್ಪಲ್ಲ; ಅಭಿಮಾನವಲ್ಲ; ವ್ಯರ್ಥವಲ್ಲ.

ಅಂಥ ನೆನಪು ಉಳಿಯಲಿ; ಅಲ್ಲದವು ಮರೆಯಲಿ ಎನ್ನಲೆ? ಅದು ಆಶೆ. ಆದರೆ ಶಕ್ಯವೆ? ಎಷ್ಟು ಶಿಕ್ಷಣವೊ ಶಿಸ್ತೊ ಬೇಕು ಜೀವಕ್ಕೆ! ದೇವರೆ, ಇವುಗಳಿಂದ ಬಿಡುಗಡೆ ಇಲ್ಲ; ಯಾವುದು ಒಳ್ಳೆಯದೊ ನನಗೆ ಹಿತವೊ ಅದನ್ನು ನೀನು ನನ್ನಲ್ಲಿ, ನನಗಾಗಿ ಉಳಿಸು ಎಂದು ಪ್ರಾರ್ಥಿಸೋಣವೆ? – ಅವನು ನಮ್ಮ ಪ್ರಾರ್ಥನೆಯನ್ನು ಆಲಿಸಿ ನಮಗೆ ಸಾವು ತಂದರೆ? ಯೋಚಿಸಿ ಯೋಚಿಸಿ ಬಾಳನ್ನು ಚೊಕ್ಕ ಮಾಡಿಕೊಳ್ಳುವುದೇ ಸಂಸ್ಕಾರ. ಶಕ್ತಿ ಸಂತೋಷಗಳನ್ನು ಬಲಿಸುವ ನೆನಪುಗಳು ಉಳಿಯಲಿ; ವಿರುದ್ಧವಾದವು ಅಳಿಯವಾದರೆ ಏನು ಮಾಡುವುದು? ಅವೂ ಉಳಿಯಲಿ.

ಇದು ಜೀವನದ ನೆಳಲು ಬೆಳಕಿನ ಆಟ. ನೆಳಲು ಹಾಯದ ಬೆಳಕಿಲ್ಲ ಪೃಥ್ವಿಯಲ್ಲಿ – ಎಂದರೆ, ಬೆಳಕು ಬೇಡವೆನ್ನುವ ಹಾಗಿಲ್ಲವಲ್ಲ!

# ನಿಂಬೆ

ಬಿಜನೂರಿನ ಹೆಣ್ಣೆ, ಗಜನಿಂಬೆ ಹಣ್ಣೆ ಎಂದು ಕೇಳಿದ್ದೇನೆ. ಗಜ-ದಲ್ಲಿಯಾಗಲಿ, ಗಜನಿಂಬೆಯಲ್ಲಿಯಾಗಲಿ ನನಗಷ್ಟು ಪ್ರೀತಿ ಇಲ್ಲ. ನಿಂಬೆಯಲ್ಲಿದೆ. ಅದು ಸೇಬು, ಮಾವು, ಕಿತ್ತಳೆಗಳಂತೆ ಪ್ರಧಾನವಾಗಿ ತಿನ್ನುವ ಹಣ್ಣಲ್ಲದಿದ್ದರೇನು ? ಹುಳಿಯಾದರೇನು? ಅದರ ನೋಟ ಇಂಪು ; ಅದರ ರುಚಿ ಅದರದೇ. ಎಲ್ಲಕ್ಕೂ ಅದರದರದೇ ರುಚಿ ಎಂಬುದು ಎಲ್ಲಕ್ಕೂ ನಿಜವಾದರೂ ನಿಂಬೆಯ ರುಚಿ ಇನ್ನೊಂದಕ್ಕೆ ಶಕ್ಯವಿಲ್ಲ. ರಸದೊಡನೆ ಚಿಮ್ಮುವುದು, ಹಿಂಡುವುದು, ಸವಿಯುವುದು ಆ ರುಚಿ. ಹಿಂಡಿದರೆ ರಸವೆಲ್ಲ ಇಳಿದು ತೊಗಟೆ ಕುಲಾವಿಯಾಗಿ ಮೊಗಚಿ ಬೀಳುವುದು ನಿಂಬೆ ಒಂದರಲ್ಲಿಯೇ. ಆ ಬಣ್ಣ, ಆ ರಸ ! ಸೃಷ್ಟಿಯಲ್ಲಿ ಅದಕ್ಕೆ ಸಮವಾಗುವಷ್ಟು ಇನ್ನೊಂದಾಗಿಲ್ಲ. ನಿಂಬೆಯನ್ನು ಲಿಂಬೆ ಎಂದು ಗ್ರಾಮ್ಯರು ಕುಲಗೆಡಿಸುತ್ತಾರೆ. ಉಚ್ಚಾರಶಕ್ತಿ ಊನವಾಗಿರುವವರು, ದಿನಕ್ಕೆ ನಾಲ್ಕು ತೊಲೆ ನಸ್ಯ ಸೇದಿಕೊಳ್ಳುವವರು ಬಾಯಿಂದ ನುಡಿಯಬಲ್ಲರೆ ಇದನ್ನು? ನಾಲಿಗೆ ತಿರುಗಬೇಕಲ್ಲ ! ಅಂಥವರೂ ಚೆನ್ನಾಗಿ ಹಣ್ಣಾದ ಹೊನ್ನಿಂಬೆ ಹಣ್ಣನ್ನು ಒಮ್ಮೆ ನಾಲಗೆಗೆ ಸುಳಿದರೆ ಲ, ತಿರುಗಿ ಮರಳಿ ನ ಆದೀತೆಂದು ನನ್ನ ಭಾವನೆ : ಭಾಷಾಶಾಸ್ತ್ರ ಏನನ್ನುತ್ತೊ ಕಾಣೆ. ಶಾಸ್ತ್ರಗಳನ್ನು ಕಟ್ಟಿಕೊಂಡು ನನಗೇನು. ನನಗೆ ನಿಂಬೆಯ ಆ ರುಚಿ ರುಚಿ. ಅದರ ಆರಾಧನೆ ಸದ್ಯದ ಅಧಿಕರಣ.

ನಿಂಬೆಯ ಹುಳಿ ಏನು ವಿಶೇಷ, ಹುಣಿಸೆಯೂ ಹುಳಿಯೇ, ಮಾವಿನದೂ ಹುಳಿಯೇ ಅಲ್ಲವೆ– ಎನ್ನುತ್ತೀರೇನೊ : ಒಂದು ಇನ್ನೊಂದರಂತಲ್ಲ. ಹುಣಿಸೆ ಹುಳಿಗೆ ಆಮ್ರ, ಆಮ್ಲ ಎಂದೇ ಹೆಸರು. ಹುಣಿಸೆಹಣ್ಣು ಬಳಸುವುದರಿಂದಲೇ ಅಡುಗೆ ಹುಳಿ (ತಮಿಳರ ಸಾಂಬಾರ್), ಹಳ್ಳಿಗರ ಆಮ್ರ. ಹುಳಿಯಾಗಿರುವುದು ನಿಜ. ಆದರೆ ರಸಕ್ಕೆ, ರುಚಿಗೆ ಅದು ಸರಿಯಾದೀತೇನೊ : ಅದು ಪಥ್ಯಕಾರಿಯೂ ಅಲ್ಲ. ಕುಸುಮೆಯ ಜಾತಿಗೆ ದೊರಕುವ ಸೌಭಾಗ್ಯ ಹುಣಿಸೆಗೆ ಎಲ್ಲಿಂದ ಬರಬೇಕು? ಅದು ಕೊಳೆ ತೊಳೆದು ಶುಭ್ರಮಾಡಬಲ್ಲದು ಎಂದೀರಿ ಕೂಡ. ಇನ್ನೂ ಏನೇನೊ ಮಾಡುತ್ತೆ. ಕಜ್ಜಿ ತರಿಸಿದರೆ ಏನು ಮಾಡುತೀರಿ?

ನೋಟಕ್ಕೆ ಕೂಡ ಅಷ್ಟಷ್ಟೇ. ಒಮ್ಮೊಮ್ಮೆ ಕೈಲಾಸಂ ಒಂದು ಸಂಗತಿ ಹೇಳುತ್ತಿದ್ದರು: ಕರಿಯಣ್ಣ, ನಿಂಗಪ್ಪ ಅಮಲ್ದಾರರ ಕಚೇರಿಗೆ ಹೋದರಂತೆ. ಇಬ್ಬರಲ್ಲಿ ಒಬ್ಬರೂ ಸಾಹೇಬರಿಗೆ ಏನೂ ಕಾಣಿಕೆ ತೆಗೆದುಕೊಂಡು ಹೋಗತಕ್ಕದ್ದಲ್ಲ ಎಂದು ಮೊದಲೇ ಒಪ್ಪಂದವಾಗಿತ್ತಂತೆ. ಸಾಹೇಬರು ಬರಲು ಹೇಳಿ ಕಳಿಸಿದರು, –ಒಳಕ್ಕೆ ಇಬ್ಬರನ್ನೂ,

ನಿಂಗಪ್ಪನಿಗೆ ಕಾಣದಂತೆ ಒಂದೇ ಒಂದು ನಿಂಬೆಹಣ್ಣನ್ನು ಕಿಸೆಯಲ್ಲಿ ಎಲ್ಲಿಂದಲೊ ತೆಗೆದು ಕರಿಯಣ್ಣ ಸಾಹೇಬರಿಗೆ ಕೊಟ್ಟನಂತೆ. ನಿಂಗಪ್ಪನಿಗೆ – 'ಎಲಾ ಮಗನೆ, ಮಾಡೋದಿಲ್ಲ ಎಂದದ್ದನ್ನು ಮಾಡಿದೆಯಲ್ಲ; ನಿಂಬೆ ತರೋದು ಎಂದಿದ್ದರೆ ನಾನು ತರಲಾರದಾಗಿದ್ದೆನೆ' ಎಂದವನೇ, ಅಪ್ಪಣೆ ಪಡೆದು ಒಂದು ಕ್ಷಣ ಹೊರಗೆ ಹೋಗಿಬಂದು, 'ಮಾಸ್ವಾಮಿ ನೋಡಿ ಇವನ್ನ; ಏನೊ ಮಾತಾಡಿಕೊಂಡು ತಮ್ಮಲ್ಲಿಗೆ ಬಂದಿವಿ. ತಮ್ಮನ್ನು ಒಲಿಸಿಕೊಳ್ಳಬೇಕು ಅಂತಲ್ಲ; ನ್ಯಾಯದ ದಣಿಗಳು ತಾವು, ಏನೂ ತಕ್ಕೊಳ್ಳೋರಲ್ಲ ಎಂದು. ಇವ ನಿಂಬೆ ತರುತಾನೆ ಎಂದಿದ್ದರೆ ಗಾಡಿ ಗಾಡಿ ತಮ್ಮ ಮುಂದೆ ನಾ ಉರುಳಿಸ್ತ ಇದ್ದೆ. ಇದನ್ನು ಒಪ್ಪಿಸಿಕೊಬೇಕು' – ಎಂದವನೇ ಕಚೇರಿಯ ಮುಂದಿದ್ದ ಮರದಿಂದ ಹುಣಿಸೆ ಕಿತ್ತು ತಂದು ನಾಲ್ಕು ಹುಣಿಸೇಕಾಯಿ ಮೇಜಿನ ಮೇಲಿಟ್ಟು ಕೈಮುಗಿದನಂತೆ. ಸಾಹೇಬರಿಗೆ ಹೇಗಾಯಿತೊ ಅವರ ಸಂತೋಷಕ್ಕೆ ಬಿಡೋಣ. ಆ ಗುಂಡಿಗೆ ಈ ಡೊಂಕು; ಈ ಬಾಗು. ಆ ನುಣುಪಿಗೆ ಈ ಬಿಗಿಪು, ಈ ಬಣ್ಣ. ಆ ಬಿತ್ತಕ್ಕೆ ಈ ಹತ್ತು. 'ಉಳೀಲದ್ರಪ್ಪ, ಒಪ್ಪಿಸಿಕೊಬೇಕು ಸ್ವಾಮಿ. ಜನಾನ ನಂಬಬಾರದು ಎನ್ನೋದು ಇದಕ್ಕೇನೆ', ಅಂದನಂತೆ. ಸಾಹೇಬರಿಗೆ ಯಾರಿಗೆ ಒಲಿಯಬೇಕೆನ್ನಿಸಿತೊ ಏನೊ. ನಿಂಬೆ ಒಪ್ಪಿಸುವ ಸಂಸ್ಕಾರ ಮರ್ಯಾದೆ ನಮ್ಮಲ್ಲಿ ಬಹು ದಿನದಿಂದ ಬಂದದ್ದು. ದೊಡ್ಡವರನ್ನು ಕಾಣಹೋದಾಗ ನಿಂಬೆ ಎರಡು ತೆಗೆದುಕೊಂಡು ಹೋಗುವುದು ವಾಡಿಕೆ. ಜೊತೆಗೆ ಹೂವೊ ಬೇರೆ ಇನ್ನೇನಾದರೊ ಕೊಂಡು ಹೋದರಾಯಿತು. ನಿಂಬೆಗೆ ಗೌರವವುಂಟು. ಗುಂಡಗೆ, ನುಣುಪಾಗಿ, ತೋರವಾಗಿ, ತೆಳುಚರ್ಮದ ನಿಂಬೆಯ ಅಚ್ಚ ಹೊನ್ನ ಹಳದಿ ರಂಗಿನ ನಿಂಬೆಯ ಸಮಾನ ಇನ್ನಾವ ಹಣ್ಣಿಗೆ ಬಂದೀತು? ಈ ನುಣುಪು, ಹೊಳಪು, ತೆಳು ಇಲ್ಲದ್ದರಿಂದಲೇ ಏನೊ ನನಗೆ ಗಜನಿಂಬೆಯಲ್ಲಿ ಪ್ರೀತಿ ಇಲ್ಲ. ಅದು ಗಾತ್ರದಲ್ಲಿ ದೊಡ್ಡದಾಗಿರಬಹುದು. ಉಪ್ಪಿನ ಕಾಯಿಗೆ ಮಾತ್ರ ಪ್ರಯೋಜನವೊ ಏನೊ : ಆದ್ದರಿಂದ ಗಜನಿಂಬೆ ವರ್ಣನೆ. ಅದಕ್ಕಾಗಲಿ ಆ ಹೆಣ್ಣಿಗಾಗಲಿ ನನ್ನ ಮನಸ್ಸು ತೆರೆಯದು. ಹೆಣ್ಣಿಂಥ ಒಳ್ಳೆ ಪದಾರ್ಥವನ್ನು ಅದಕ್ಕೆ ಹೋಲಿಸಿ ನನ್ನ ಬೇಸರ, ಅಪ್ರೀತಿ ಕೆರಳಿಸಬಾರದೆನ್ನಿಸುತ್ತೆ.

ಸಣ್ಣವು, ದೊಡ್ಡವು, ಉದ್ದನೆಯ ಶಿವಲಿಂಗಾಕಾರದವು, ಕೋಳಿ ಮೊಟ್ಟೆಯ ಆಕಾರದವು ಎಷ್ಟೆಷ್ಟೊ ನಿಂಬೆಹಣ್ಣುಂಟು. ನನಗೆ ಗುಂಡಗಿನ, ಒಂದೆಡೆ ಸ್ವಲ್ಪವೇ ಸ್ವಲ್ಪ ಮುಳ್ಳು ತುದಿಯ, ಇನ್ನೊಂದೆಡೆ ಕಣ್ಣಿಗೆ ತಂಪು ಮಾಡುವ, ಸ್ವಲ್ಪವೇ ಸ್ವಲ್ಪ ತಾಗುವ ಗಲ್ಲ, ಕೆನ್ನೆಯ ನುಣುಪು ಕುಳಿಗೆ ಎಣೆಯಾಗುವ ಆಕೃತಿಯ ನಿಂಬೆ ತುಂಬಾ ಪ್ರೀತಿ. ಅಂಥುದನ್ನೇ ಆರಿಸಿಯೇನು–ಆರಿಸಲು ಕೈಗೆ ಅವಕಾಶ ಕೊಟ್ಟರೆ. ಅಂಥದಕ್ಕೆ ಈ ಕಾಲದಲ್ಲಿ ಅವಕಾಶವೆಲ್ಲಿದೆ? ರೂಪಾಯಿ ನೂರು ಕೊಡುತ್ತೇನೆಂದರೂ ಆಯಗೊಡರು ಅಂಗಡಿಯವರು.

ಆ ಮಾತು ಹೋಗಲಿ : ಕಣ್ಣಿಗೆ, ಕೈ ಸೋಕಿಗೆ, ರುಚಿಗೆ ತುಂಬಾ ಸಂತೋಷ ತರುವ ಪದಾರ್ಥ ನಿಂಬೆ ಎಂಬುದು ನಿಜ. ಕಣ್ಣು ರೇಗಿತು, ಉರಿಯಹತ್ತಿತು; ಅದನ್ನು

ಕಣ್ಣಿಗೆ ಮೆಲ್ಲಗೆ ಹೀಗೆ ಹಾಗೆ ಮೃದುವಾಗಿ ಒತ್ತಿ; ರೇಗು, ಉರಿ ಇಳಿಯುತ್ತವೆ; ಕಣ್ಣು ತಿಳಿಯಾಗುತ್ತವೆ. ಸಿಪ್ಪೆಯನ್ನು ಕಣ್ಣಿಗೆ ಚಿರಿಕೆಯಂತೆ ಹಿಂಡಿಕೊಳ್ಳಿ. ಒಳಕೊಳೆಯೆಲ್ಲ ಕಣ್ಣಿಂದ ಸುರಿದು ಹಾಯೆನ್ನಿಸುತ್ತದೆ. ಬಾಯಾರಿತು, ಪಿತ್ತವಾಗಿ ತಲೆತಿರುಗು ಬಂತು; ಆಯಾಸ ಪರಿಹಾರ ಬೇಕಾಯಿತು : ಬಾಯಲ್ಲಿ ಹಾಕಿ ಚಪ್ಪರಿಸಿ, ಎರಡು ತೊಟ್ಟು ರಸ ಬೀಳಲಿ. ಹೊಸತು ಹುರುಪು, ಚುರುಕು ಸ್ವಯಂ ವೇದ್ಯವಾಗುತ್ತದೆ. ಉಪ್ಪಿಟ್ಟು ಎನ್ನುತ್ತ ಉಪ್ಪು ಹೆಚ್ಚಾಗಿ ಹಾಕಿದರೆ ಆ ಅನ್ನಕ್ಕೆ ನಿಂಬೆ ಹಚ್ಚಿದರೆ ಮಾತ್ರ ಚಿಕಿತ್ಸೆ; ಇಲ್ಲವಾದರೆ ನಮ್ಮಪ್ಪ ಕ್ಷಾರ ಅದು. ಉಪ್ಪೇದಿ ಎಂಬ ತೆಲುಗಿನ ಧಾತುವೊಂದಿದೆ. ಅಂಥದೇ ಧಾತುವಿಂದ ಆ ಪದ ಬಂದಿದ್ದರೂ ಬೇಗ ಉಪ್ಪು ಸುರಿದು ಇದನ್ನು ಮಾಡಿ ತಿನ್ನಿ ಎನ್ನುತ್ತಾರೆ ಅಡುಗೆಯ ಹದ ಅರಿಯದವರು. ಒಗ್ಗರಣೆ ಮಾಡಿ, ನೀರು ಹುಯ್ದು ಅದರಲ್ಲಿ ರವೆ ಬೇಯಿಸುವ ಹದದ ಧಾತು ಅದು. ಹುರಿಯಲ್ಲ, ಕರಿಯಲ್ಲ; ಸುಡುವುದಲ್ಲ, ಬೇಯಲ್ಲ; ಹಬೆಯಲ್ಲ, ಹೊಗೆಯಲ್ಲ ; ಹೊಂಗಲ್ಲ, ಉಮಗಿಯುವುದಲ್ಲ. ಈ ರೀತಿ ಬೇರೆ. ಕಲಸಲ್ಲ, ಊರಲ್ಲ, ಉಪ್ಪುವುದು ಇದು. ಮಾತು ಚೆನ್ನವಲ್ಲವೇನೊ. ಹದ? ಚೆನ್ನಾಗಿ ಮಾಡಿದರೆ ಅದೂ ಚೆನ್ನಾಗುತ್ತಿತ್ತು. ಹಿಂದೆ ಬೆಂಗಳೂರು ಉಡುಪಿ ಹೊಟೇಲಲ್ಲಿ ಉಪ್ಪಿಟ್ಟು ಮಾಡುತ್ತಿದ್ದರು. ಅವರ ರವೆ ಇಡ್ಡಲಿಗೆ ಯಾವ ಖ್ಯಾತಿ ಇತ್ತೊ, ಒಂದೂಕಾಲಾಣೆ ಮಸಾಲೆದೋಸೆಗೆ ಯಾವ ಉತ್ತುಂಗ ಕೀರ್ತಿಯಿತ್ತೊ, ಅದೇ ಜನಾನುರಾಗ ಅವರ ಉಪ್ಪಿಟ್ಟಿಗೂ ಇರುತ್ತಿತ್ತು. ಆಗಲೂ ನಮ್ಮಜ್ಜಿ ಮಾಡಿದ್ದರೆ ಅದೂ ಎರಡನೆ ಕೈಯೇ ಆಗುತ್ತಿದ್ದರೂ ಪೇಟೆಯಲ್ಲಿ ನಮಗೆ ಸಿಕ್ಕುತ್ತಿದ್ದುದರಲ್ಲಿ ಅದೇ ಮೇಲ್ತರದ್ದು. ಹದವಾಗಿ ಅದಕ್ಕೆ ನಿಂಬೆ, ಒಣಕೊಬ್ಬರಿ ತುರಿ, ಗೋಡಂಬಿ, ಕರಿಬೇವಿನದೊ ಕೊತ್ತುಂಬರಿ ಸೊಪ್ಪಿನದೊ ರುಚಿಕಟ್ಟು, ಬೇಕಾದಷ್ಟು ಹಸುವಿನ ತುಪ್ಪ ಇರುತ್ತಿತ್ತು. ಇವು ಅದರ ಶ್ರೀಮಂತಿಕೆಯ ಒಡನಾಡಿಗಳು ; ಒಡನೂಡಿಗಳು ಎನ್ನಿ, ಬೇಕೆಂದರೆ.

ಬೆಟ್ಟದ ಜಾತಿಯವು, ಕಾಡಿನ ಜಾತಿಯವು, ಕೊಡಗಿನವು, ನಿಂಬೆ ಬರುತ್ತವೆ. ಅವೂ ನಿಂಬೆಯೇ ಸೈ ; ರಸಕ್ಕಿಂತ ಕುಸುಮೆ, ಕುಸುಮೆಗಿಂತ ಒರಟು ತೊಗಟೆ ಇರುವುವು ಏತರ ನಿಂಬೆಗಳು ! ನಮ್ಮೂರ ಕಡೆ ತೋಟಗಳಲ್ಲಿ ಬೆಳೆವ ನಿಂಬೆ ನಿಜವಾಗಿ ನಂದನವನದಲ್ಲಿ ಬೆಳೆದಂಥವು. ಬಹುಶಃ ನಮ್ಮೂರಿಂದಲೇ ನಂದನವನಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ನಟ್ಟುಕೊಂಡರು ಎಂದು ನನ್ನ ಭಾವನೆ. ಎಷ್ಟು ಕಷ್ಟಪಟ್ಟೊ ಅದನ್ನು ಬೆಳಸಬೇಕು. ಸುಲಭಕ್ಕೆ ನಿಂಬೆಗಿಡ ಬೆಳೆದೀತೆ; ಎಷ್ಟು ಬಗೆಯ ಸಾರ ಪೋಷಣೆ, ನೆಲದ ಅಗೆತ, ಹದ, ಗೊಬ್ಬರ ಬೇಕು,– ಗಿಡ ಏಳುವುದಕ್ಕೆ. ಅಮೇರಿಕದ ತಜ್ಞರು ಆಕ್ಸ್‌ಫರ್ಡ್ ಕೇಂಬ್ರಿಜ್ ಕಾಲೆಜುಗಳ ಹಿಂದಿನ ಅಂಗಳದಲ್ಲಿನ ಹಸುರು ಹಸಲೆಗಳನ್ನು ನೋಡಿ ತುಂಬಾ ಮೆಚ್ಚಿದರಂತೆ. ಅದಕ್ಕೆ ತಗಲುವ ವೆಚ್ಚವನ್ನು ಕೇಳಿ ತುಂಬಾ ಕರುಬಿದರಂತೆ. ನೀವೇನು ಮಾಡುತ್ತೀರಿ, ಇಷ್ಟು ಹುಲುಸಾಗಿ ಒಂದೇ ಸಮನೆ ಸೊಂಪಾಗಿ ನಾರಿಯರ ತಲೆಕೂದಲು ಮಟ್ಟದಂತೆ ಬೆಳೆಯಲು – ಎಂದು ಕೇಳಿದರಂತೆ. ಹಣ,

ಹರಗು, ಸಸಾರಪೋಷಕಗಳ ಜೊತೆಗೆ ಸ್ವಲ್ಪ ಪ್ರೀತಿ, ತಕ್ಕಮಟ್ಟಿಗೆ ಪ್ರಾಮಾಣಿಕವಾದ ಇಂಗ್ಲಿಷ್ ಅಭಿಮಾನ (Affection and some honest English pride) ಎರೆಯುತ್ತೇವೆ – ಈ ಹುಲುಸು ಹುಟ್ಟುತ್ತದೆ, ಉಳಿಯುತ್ತದೆ ಎಂದರಂತೆ ಅವರು. ನಮ್ಮ ನಿಂಬೆಗೂ ಅದೇ ಗುಣ. ಅದು ಚಿಗುರಿ, ಆ ಹೂ ಬಿಡಬೇಕು. ಮಲ್ಲಿಗೆಯಲ್ಲ, ಕಾಫೀ ಹೂವಲ್ಲ. ಯಾವುದು ಆ ನಿಂಬೆಯ ಹೂವಿಗೆ ಸಮ, ಸಾಟಿ? ಗಂ ಎನ್ನುವ ಅದನ್ನು ಗಿಡದಲ್ಲಿ ಕಾಣುವ ಹೊತ್ತಿಗೆ ನಿರೀಕ್ಷೆ ಆತುರಪಟ್ಟು ಹಂಬಲಿಸಿ ಗಾಸಿಪಟ್ಟಿರುತ್ತದೆ. ಹೂದಳ ಕಳಚಿ ಬಿದ್ದು ಅದರ ಹೀಚು, ಕಾಯಿ, ಹಣ್ಣು, ಅವುಗಳ ಗಡಸು, ಮುಳ್ಳು, ಕಸರು ಮುರಿದು ರಸ ತುಂಬ ತುಂಬಿದಂತೆ ಒಗರು ಮುರಿದು, ಹಸುರು ಮಾರಿ, ಹಳದಿ ತೇಲಿ, ಕ್ರಮವಾಗಿ ಹೊಳೆವ ಅಪ್ಪಟ ಅರಿಸಿನಹಳದಿ ಹೊನ್ನಿನ ಬಣ್ಣಕ್ಕೆ ತಿರುಗುವ ಆ ವಿಧಾನಕ್ರಿಯೆ ಕಣ್ಣಿಗೆ ಹಬ್ಬ. ಮಡದಿ ತಾಯಾಗಲಿರುವಾಗ ಮೈನವಿರೇಳುವಂತೆ ದಿನವೂ ಆ ಸಂತೋಷ ಅನುಭವಿಸದ ಗಂಡು ಗಂಡೇ ಅಲ್ಲ. ಹಣ್ಣಾಗುತ್ತಿರುವ ನಿಂಬೆಯ ನೋಟ ಹಾಗೆ ಕಣ್ಣ ಸೆಳೆ. ಇದು ಸಾಮಾನ್ಯವಾದ ಪದಾರ್ಥವಾಗಿದ್ದರೆ ಇಷ್ಟು ವರ್ಣನೆ ಬೇಕಿರಲಿಲ್ಲ.

ಸ್ಕ್ವಾಷ್‌ಗೆ ನಿಂಬೆ ಬೇಕು ; ಸುವಾಸನೆ ಕಟ್ಟಲು ಬೇಕು ; ಬಾಯಾರಿಕೆಗೆ ಬೇಕು; ಕಾಣಿಕೆಗೆ ಬೇಕು ; ಪಿತ್ತ ಇಳಿಸಲು ಬೇಕು ; ಕಾಯಿಲೆಯ ತಲೆ ದಿಂಬಿನ ಬಳಿ ರೋಗ ವಾಸಿಮಾಡಲು ಬೇಕು ; ಭೂತ ಪಿಶಾಚಿ ಓಡಿಸಲು ಮಂತ್ರಿಸಿದ ನಿಂಬೆ ಬೇಕು. ಎಲ್ಲ ಔತಣದ ಊಟಗಳಿಗೂ ಅದರ ಬಡಿಸಿಕೆ ಬೇಕು. ಉಪ್ಪಿನಕಾಯಿಗೆ ಬೇಕು. ಮೀಸೆಯ ಮೇಲೆ ನಿಲ್ಲಿಸಿ ಗಂಡುತನದ ಹೆಚ್ಚಳ ಮೆರಸಲು ಕೊಬ್ಬಿ ಬೆಳೆದ ನಿಂಬೆ ಹಣ್ಣೇ ಬೇಕು. ನಮ್ಮೂರು ಬಾಬಯ್ಯನ ಹಬ್ಬದಲ್ಲಿ ಹುಲಿವೇಷ ಹಾಕುವವರ ಬಾಯಿಗೆ ತುಂಬಲು ಬೇಕು. ರಾಜ ಸಂರಾಜರಿಗೆ ಹಾರ ಕಟ್ಟುವಾಗ ಚಿನ್ನದ ಹಾಳೆ ಸುತ್ತಿ ಸುತ್ತ ಗುಲಾಬಿ ಮೊಗ್ಗು ತೊಂಗಲು ಆಡಿಸಲು ಬೇಕು. ತುರಾಯಿಗೆ ಬೇಕು. ಒಣಗಿದರೆ-ಸ್ವಾಮಿ, ಒಣಗಿದರೆ ಮಂತ್ರ ಹಾಕಲೂ ಪ್ರಸಾದ ಕೊಡಲೂ ಬೇಕು. ಅಣ್ಣೆಯಮ್ಮ, ದುರ್ಗಿ, ದುಗ್ಗಲವ್ವೆ, ದ್ಯಾಮವ್ವೆಯರ ಸನ್ನಿಧಿಯಲ್ಲಿ, ಕಡೆಗೆ ಮಾಟ ಮಂತ್ರ ಮಾಡುವವರಿಗೂ ಬೇಕು. ಸಾಧುಗಳ ಯೋಗಿಗಳ ಸನ್ನಿಧಿಯಲ್ಲಿ ವಿಭೂತಿ, ಒಣನಿಂಬೆ ಇಲ್ಲವಾದರೆ ಯಾವ ರಂಗೂ ಕಟ್ಟದು; ಅವರನ್ನು ಕೇಳುವವರು ಯಾರು? ನಂಬುವವರು ಯಾರು ? ಅವರ ಪೂಜೆ ಪುರಸ್ಕಾರಕ್ಕೆ ಮೂರು ಪೈಸೆ ಬೆಲೆ ಬಾರದು. ಯಾವುದಕ್ಕೂ ತಾಳಿಕೆ ಬೇಕಲ್ಲ! ನಿಂಬೆಯ ಮಾಹಾತ್ಮ್ಯೆಯನ್ನು ಶಿವನ ತ್ರಿಶೂಲದ ಕಾಳಿದುರ್ಗಿಯರ ಕಣ್ಣ ಹೊಳಪಿನ ಹತ್ತಿರ ಹಿಡಿದು ತೋರಿಸಬೇಕೇ ಹೊರತು ನಾಡಾಡಿಯಾಗಲ್ಲ.

ಅದರ ರುಚಿ ಮಾತ್ರ ನನಗೆ ಅದರ ಮೊದಲ ಪ್ರೀತಿ : ಹುಳಿ ನಿಂಬೆಹಣ್ಣು ಎಂದು ತೆಗಳುವ ನಿರ್ಭಾಗ್ಯರ ಗೋಷ್ಠಿ ನನಗೆ ರುಚಿಸದು. ಮೀನು, ಮೊಸಳೆ, ಪಲಪಲಾಂಡುಗಳ ಲೆಕ್ಕಕ್ಕೆ, ಬಾಣಸಕ್ಕೆ ಇದು ಸೊಗಸುತ್ತೊ ಇಲ್ಲವೊ ಕಾಣೆ. ದನ,

ಜೀವ, ಹೇಗೂ ತಿನ್ನುವ ಆ ಅಭಿರುಚಿ ಸಾಧುಗಳದಲ್ಲವಾದ್ದರಿಂದ ನನ್ನ ಪಕ್ಷಪಾತ ಆ ಕಡೆಗಿಲ್ಲ. ಸದ್ಯಕ್ಕೆ ಎರಡು ತರತೀವುಗಳನ್ನು ಒಕ್ಕಣಿಸಿ ನನ್ನ 'ಸಂಬ್ರ' ಗೆಲ್ಲುತ್ತೇನೆ. ಒಂದು ಉಪ್ಪಿನಕಾಯಿ; ಒಂದು ಬಿಸಿ ನಿಂಬೆಯ ಚಿತ್ರಾನ್ನ – ಇವುಗಳ ಸಮಕ್ಕೆ ಸಲ್ಲುವ ನಂಟು, ಪಕ್ವಾನ್ನ ಈ ಕಾಲದ ಮಕ್ಕಳಿಗೆ ಸರಿಯಾಗಿ ದೊರಕದಾಗುತ್ತಿರುವುದು ನಮ್ಮ ನಾಡು ಎಲ್ಲ ರೀತಿಯಲ್ಲಿಯೂ ಹೇಗೆ ಹೀನಾಯಕ್ಕೆ ಇಳಿಯುತ್ತಿದೆ, ನಮ್ಮ ಸಂಸ್ಕೃತಿ ಹೇಗೆ ಧಾತು, ಕಾಂತಿ ಕುಂದುತ್ತಿದೆ, ಅದಕ್ಕೆ ಧಕ್ಕೆ ಬಡಿದಿದೆ ಎಂಬುದಕ್ಕೆ ಸಾಕ್ಷಿ. ಮಾಧ್ವರನ್ನೂ ಮಹಾರಾಷ್ಟ್ರವನ್ನೂ ಕಂಡರೆ ನನಗೆ ಒಂದಂಶದಲ್ಲಿ ಬಲುಪ್ರೀತಿ. ಎಲೆ ಕೊನೆಗೆ ಮೊದಲು ಉಪ್ಪು ಬಡಿಸದೆ ಅವರು ಇನ್ನೇನೂ ಬಡಿಸರು. ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ ಎಂಬುದು ಆಧಾರಸತ್ಯ. ಸೃಷ್ಟಿಗೆಲ್ಲ ನೀರು ಹೇಗೆ ಮೊದಲೊ ಉಪ್ಪಿನಿಂದಲೇ ರುಚಿ ಎಂಬ ಮಾತೂ ಅಷ್ಟೇ ನಿಜ. ಉಪ್ಪಿನ ಪುಡಿ ಹೇಗೆ ಬಡಿಸುತ್ತಾರೆಯೊ ಹಾಗೆಯೇ ನಿಂಬೆಯ ಹೋಳನ್ನೂ ಬಡಿಸುತ್ತಾರೆ. ಷಡ್ರಸ ಸೌಭಾಗ್ಯಗಳಲ್ಲಿ ಈ ಎರಡೂ ಜೊತೆಗೂಡಿಯೇ ಪೂರಕವಾಗಿಯೇ ಇರುತ್ತವೆ ಎಂಬುದು ರಸತತ್ವ. ದ್ವೈತಿಗಳಿಗೆ ತಿಳಿದಿರುವಂತೆ ಅದ್ವೈತಿಗಳ ತದೇಕಂಗೊ ಏಕಂ ಸತ್ತಿಗೊ ತಿಳಿಯದು. ಈ ದ್ವೈತ ಲೌಕಿಕ ಸತ್ಯ. ಪಾರಮಾರ್ಥಿಕಕ್ಕೆ ಹಾತೊರೆಯುವ ತಲೆಗೀಳು ಲೋಕಕ್ಕೆ ಸಾಮಾನ್ಯವಲ್ಲವಾದ್ದರಿಂದ ನನಗೂ ಆ ಸಿದ್ಧಿಗಳಿಗೂ ದೂರ. ನಾನು ಪಾರ್ಥಿವ – ಈ ಬಗೆಯಲ್ಲಿ. ಈ ನಿಂಬೆಯ ಪ್ರಪಂಚಕ್ಕೂ ಪರಬ್ರಹ್ಮ ಸಾಧನೆಗೂ ಎಲ್ಲಿಯ ಗಂಟು? ಯಾವ ನಂಟು? ಭದ್ರಮಾಡಿಕೊಳ್ಳಿ. ಅಲ್ಲಿನದನ್ನು ಸಮೆವವರು ಬೇರೆಯವರು. ನಿಮ್ಮ ಕೈವಾಡ ಅಲ್ಲೇನು ನಡೆಯುತ್ತದೆ? ನಿಂಬೆ ಲವಣ ಇವುಗಳಿಗೆ ಸಂಭಾರವನ್ನು ಎರೆದು ಹಣ್ಣು ಅಥವಾ ಹಸಿರು ಮೆಣಸಿನಕಾಯಿ, ಸಾಸುವೆ, ಮೆಂತೆಯಾದಿಗಳನ್ನು ಹಾಕಿ, ಇಷ್ಟಪಟ್ಟವರು ಶುಂಠಿಯೊ, ಮಾಕಳಿ ಬೇರೊ, ಅರಸಿನವೊ, ಹಸಿಯ ಕಾಳುಮೆಣಸು, ಬಿದಿರು ಕಳಲೆ, ಯಾಲಕ್ಕಿ ಕಾಯಿ, ಗೋರಿ (ಚವುಳಿ) ಕಾಯಿ, ಹಾಗಲ, ಯಾವುದನ್ನಾದರೂ ಸೇರಿಸಿ ಇತರ ಬಗೆಯ ಸೆಬ್ಬಿಗಳನ್ನು ರಹಸ್ಯವಾಗೆರೆದು – ಅವರವರ ಮನೆಯ ರುಚಿ ಅಲ್ಲಲ್ಲಿಗೇ ರಹಸ್ಯ – ಆ ಮನೆಯ ಪೇಟೆಂಟು – ಮಾಡುವ ನಿಂಬೆಯ ಉಪ್ಪಿನಕಾಯಿ. ಅದು ಪಕ್ವವಾದಾಗ ತರುವ ರುಚಿ ಅಲಭ್ಯಲಾಭ. ಎಷ್ಟೋ ಸುಲಭವಾಗಿ ದೊರಕಬಹುದಾದ ಆನಂದಕ್ಕೆ ಕರಗದೆ, ಒಲಿಯದೆ ಎಂದಿಗೂ ದೊರಕಲಾರದ ಪರಬ್ರಹ್ಮ ಸಾಕ್ಷಾತ್ಕಾರಕ್ಕೆ ಬಳಲುವ ತೊಳಲುವ ಬಡಪಾಯಿಗಳನ್ನು ಏನೆನ್ನೋಣ ! ಸಾಧಾರಣರು ಮಾಡಿದರೆ ಉಳಿಯುವ ಸೇರುವೆಯಲ್ಲ ಉಪ್ಪಿನಕಾಯಿಯದು. ಅದಕ್ಕೆ ಇಷ್ಟರಲ್ಲದವರು ಹಾಕಿದರೆ ಬೇಗ ಹುಳಿತು ಹೋಗುತ್ತದೆ. ಆತುರಪಡುವವರನ್ನು ಕಂಡರೆ ಅದಕ್ಕೆ ಸೇರದು. ಏನು ಅವಸರ ಇವರಿಗೆ; ನಾಲ್ಕು ದಿನ ತಾಳಲಾರರೆ? ಉಪ್ಪು, ಹುಳಿ, ಕಾರ ಸೇರಲಿ, ಊರಲಿ; ಎಲ್ಲಿ ಹೋಗುತ್ತದೆ? ನಮ್ಮ ಮರಿಗೆಯಲ್ಲಿ, ಭಾಂಡದಲ್ಲಿ, ಜಾಡಿಯಲ್ಲಿ ತಾನೇ ಇದೆ – ಎನ್ನುವಷ್ಟು ಸಹನೆ ಅವರಿಗಿಲ್ಲ. ಸಂಯಮವಿಲ್ಲದವರಿಗೆ ಸಂಸಾರ ಹೇಗೆ ಸುಖವಾದೀತು? ಕೋತಿ ಗಿಡಗಳನ್ನು ನೋಡಿಕೊಳ್ಳುತ್ತೇನೆಂದು ಮಾತುಕೊಟ್ಟು ಪ್ರತಿದಿನವೂ ಅವು

ಸರಿಯಾಗಿವೆಯೊ ಇಲ್ಲವೊ ನೋಡೋಣವೆಂದು ಪ್ರತಿದಿನವೂ ಬುಡ ಅಲ್ಲಾಡಿಸಿ, ಕಿತ್ತು ಕಿತ್ತು ಪುನಃ ನೆಟ್ಟು ತೋಟವನ್ನು ಹಾಳುಮಾಡಿದ ಹಾಗೆ ಇಂಥವರ ನಡವಳಿಕೆ. ನಾಲ್ಕಕ್ಕೆ, ಎರಡಕ್ಕೆ, ಅದರ ಮರುದಿನಕ್ಕೆ ಜಾಡಿ, ಮರಿಗೆಗಳ ಮುಸುಕು ತೆರೆದು, ಬಿರಡೆ, ಮುಚ್ಚಳ ಸಡಿಲಿಸಿ ಪ್ರತಿದಿನವೂ ಮಾಗಿತೊ ಹಣ್ಣಾಯಿತೊ ಇಲ್ಲವೊ ಎಂದು ತಹತಹ ಪಡುತ್ತಿರುವವರಿಗೆ ನಿಂಬೆ ಉಪ್ಪಿನಕಾಯಿ ಒಲಿಯದು. ಒಂದು ತಿಂಗಳಿಗೆ, ಆಮೇಲೆ ಹತ್ತು ದಿನ-ಎರಡು ವಾರಕ್ಕೆ, ಮರದ ಒಂದು ಸಟ್ಟುಗದಿಂದ ಅದನ್ನು ಸ್ವಲ್ಪ ಕಲಕಿ ಕಲಸಿ, ಪುನಃ ಅದನ್ನು ಅದೇ ಎಚ್ಚರಿಕೆ, ಗೌರವ, ಭಕ್ತಿಗಳಿಂದ ಕೂಡಿಟ್ಟುಕಾದರೆ ತಾನೇ ತಾನಾಗಿ ಅದು ಒಲಿಯುತ್ತದೆ. ಅದು ಸುಭೋಜ್ಯವಾಗುವ ಹಾಗೆ ನಂಚಿಕೊಳ್ಳಲು ಅದು ಕೊಡುವ ಸುಖ ಇನ್ನಾವುದಕ್ಕಾದರೂ ಬರುತ್ತದೆಯೊ ಇಲ್ಲವೊ.

ಇತರ ಉಪ್ಪಿನಕಾಯಿಗಳೂ ಇವೆ. ಅವುಗಳಲ್ಲಿ ಬಗೆಗಳೂ ಇವೆ : ಅವೂ ರುಚಿಯೇ; ಅಲ್ಲವೆಂದವರಾರು ? ಮಾವಿನ ಇಡಿ, ಮಿಡಿಹೋಳು, ನೀರು ಮಾವು; ನೆಲ್ಲಿ, ಹೇರಿಳೆ, ಅಮಟೆಯುವು ಎಲ್ಲ ಪ್ರಖ್ಯಾತವೇ. ಕಿತ್ತಿಳೆ, ನಿಂಬೆಗಳ ಜ್ಞಾತಿಯಾದ್ದರಿಂದೇನೊ ನಿಂಬೆಗೆ ದ್ವಿತೀಯವಾಗಿ ಹೇರಿಳೆ ತೇರಬಹುದು. ಮೊಸರನ್ನದ ಜೊತೆಗೆ ಸೇರಬೇಕಾದರೆ ನಿಂಬೆಯೇ ಬೇಕು. ಎಲ್ಲರಿಗೂ ಎಲ್ಲ ಸಮುದಾಯದಲ್ಲಿಯೂ ಫಸ್ಟ್ ಕ್ಲಾಸ್ ದೊರಕಬೇಕೆಂದರೆ ಹೇಗೆ ಸಾಧ್ಯ ? ನಿಂಬೆ ಹೆಚ್ಚಿದೆ-ಎಂದರೆ ಮುಗಿದಿದೆ– ಇವೊತ್ತು ಸ್ವಲ್ಪ ಹೇರಿಳೆಯಿಂದ ಸಮಯವನ್ನು ತೂಗಿ ಎಂದರೆ ಸಹ್ಯವಾಗಬಹುದೇನೊ. ಅಷ್ಟೇ ಹೊರತು, ಥೇಟ್ ಮೊಸರಿನ-ಕೆನೆ ಒಡೆಯದೆ-ಗಟ್ಟಿ ಮೊಸರು ಬಡಿಸಿಕೊಂಡು ಊಟಮಾಡಿ, ಊಟದ ಕಡೆಯ ಮಜಲಲ್ಲಿ ತೇರಬೇಕೆಂಬ ಊಟದಲ್ಲಿ ನಿಂಬೆಯ ಉಪ್ಪಿನಕಾಯಿ ಸಮಾನ ನಾಽಪರಃ ಕಿಂಚಿತ್ ಅಸ್ತಿ-ಯಾರನ್ನು ಬೇಕಾದರೂ ಕೇಳಿ. ಬೇರೆ ಉಪ್ಪಿನ ಕಾಯಿಗಳ ಭಕ್ತರು ತಮ್ಮದಕ್ಕೆ ಎಷ್ಟು ದುಂಬಾಲು ಬಿದ್ದವರಾದರೂ ನಿಂಬೆಯದನ್ನು ಬೀಳಣಿಸಲು ಕೀಳಣಿಸಲು ಆಗುತ್ತದೆಯೇನೊ ಅವರನ್ನೇ ಕೇಳಿ : ಕ್ಷುದ್ರತೆಯೊ ಕಾರ್ಪಣ್ಯವೊ ಇಲ್ಲದವರು ಸತ್ಯವನ್ನು ಹೇಗೆ ತೆಗಳಿಯಾರು ! ನಾನಂತೂ ನಿಂಬೆಯವನು.

ಇನ್ನು ಬಿಸಿನಿಂಬೆ 'ಭಾತ್', ಚಿತ್ರಾನ್ನ. ಕಾಲ ಕೆಟ್ಟಿತು. ಈ ಬಿರಿಯಾನಿ, ಪಲಾವ್ ಕಾಲಗಳಲ್ಲಿ ವಿದೇಶಿ ತರಕಾರಿಗಳ ಜೊತೆ ಬಟಾಣಿ, ಬದನೆ, ಹೂಕೋಸುಗಳನ್ನು– ರಾಮಾ! ದೊಣ್ಣೆ ಮೆಣಸಿನಕಾಯಿ-ಕಲಸಿ ಮಾಡಿದ ಕಲಸನ್ನಗಳ ಕಾಲದಲ್ಲಿ ಕದಂಬವನ್ನಾಗಲಿ, ಪೊಂಗಲು, ಉಮಿಂದೋಗರೆ, ನಿಂಬೆ ಚಿತ್ರಾನ್ನಗಳನ್ನು ನಿರಾಕರಿಸಿದ್ದಾರೆ. ಎಲ್ಲದರಲ್ಲಿಯೂ ಪರದೇಶಿಯರಿಂದ ಕೊಂಡು ಅವರಂತೆ ಬದುಕಬಯಸುತ್ತಿರುವ ಈ ಕಾಲದಲ್ಲಿ ಸ್ವಾಸ್ಥ್ಯ, ಆತ್ಮಗೌರವ, ಸ್ವಾಭಿಮಾನ ಇಲ್ಲವಾಗುತ್ತಿರುವಾಗ ಬಿಸಿ ನಿಂಬೆ ಚಿತ್ರಾನ್ನಕ್ಕೆ, ನಿಂಬೆ ಉಪ್ಪಿನಕಾಯಿಗೆ ಕಟ್ಟು ಬೀಳದಿರುವುದು-ಅದನ್ನು ಅರಿಯದೆಯೇ ಇರುವುದು ಆಶ್ಚರ್ಯವೇನಲ್ಲ. ಆರಿಸಿದ ಸಣ್ಣ ಅಕ್ಕಿಯನ್ನು ಅಗಳು ಅಂಟದ ಹಾಗೆ ಅಟ್ಟು ಬೇಯಿಸಿ, ತುಪ್ಪದಲ್ಲಿಯೇ

ಒಗ್ಗರಣೆಹಾಕಿ, ಗೋಡಂಬಿ, ಉದ್ದಿನಬೇಳೆ, ಕಡಲೆಬೇಳೆ, ಕೊತ್ತುಂಬರಿ, ಕರಿಬೇವಿನ ಸೊಪ್ಪುಗಳ ಒಗ್ಗರಣೆ ಹಾಕಿ, ಒಂದು ಪ್ರತಿ ಅಗುಳಿನ ಸುತ್ತ ಹೆಚ್ಚಾಗದೆ ಕಡಮೆ ಆಗದೆ ತುಪ್ಪ ಮಿನುಗುತ್ತಿರಲು ಒಣಕೊಬ್ಬರಿ ತುರಿ ಹಾಕಿ, ಹಸಿಮೆಣಸಿನಕಾಯನ್ನು ಸಣ್ಣದಾಗಿ ಹೆಚ್ಚಿ ಒಗ್ಗರಣೆಯಲ್ಲಿ ಬಾಡಿಸಿ, ಬೆರಸಿ ಒಂದು ಬಾಣಲೆಯಲ್ಲಿ ಇಲ್ಲವಾದರೆ ಸ್ಟೆಯ್ನ್‌ಲೆಸ್‌ಸ್ಟೀಲ್ ಪಾತ್ರೆಯಲ್ಲಿ ಸೌಟಿಂದ ಸಮರ್ಪಕವಾಗಿ ಘೋಟಾಯಿಸುತ್ತ, ಕೆದಕುತ್ತ, ಎಲ್ಲ ಭಾಗವೂ ಒಂದೇ ಹದಕ್ಕೆ ಪಕ್ವವಾಗುವಂತೆ ಮಾಡಿ ಬಿಸಿಬಿಸಿಯಾಗಿ ಬಿಸಿಬಿಸಿಯಾಗಿ ಬಡಿಸಿ. ಕೇಳಿದವರಿಗೆ ಇನ್ನಷ್ಟು ಕರಗಿಸಿದ ತುಪ್ಪ ಎರೆಯಿರಿ. ಆ ಮಜವನ್ನು ಈ ಕಾಲದ ಮುಕ್ಕಗಳೇನು ಬಲ್ಲವು ? ಸ್ವದೇಶಿ-ನಾಟಿ-ಎಂದು ಅಲ್ಲಗಳೆಯುವ ಜನ ಒಮ್ಮೆ ಅದರ ಘನತೆಗೆ ತಕ್ಕಂತೆ ಅದನ್ನು ಆಡಿಸಿ ಊಟ ಮಾಡಲಿ, ಆಗ ಗೊತ್ತಾಗುತ್ತದೆ-ಭಾರತದ ಸಂಪ್ರದಾಯ ಎಷ್ಟು ಸಂಪನ್ನ, ಅದರಲ್ಲಿ ಕರ್ನಾಟಕದ ಅಡುಗೆ, ಊಟ, ಪಕ್ವಾನ್ನದ್ದು ಎಷ್ಟು ದೊಡ್ಡ ಸ್ವಾರಸ್ಯದ್ದು ಎಂದು ಗೊತ್ತಾಗುತ್ತದೆ. ದೊಡ್ಡ ಗಂಟಲವರ ಕಾಲವಾಗಿಬಿಟ್ಟು ಮರ್ರ್ಯಾದೆಗೆ ಮರ್ಯಾದೆ ಬಾರದೆಹೋಗಿದೆ.

ದ್ರಾಕ್ಷಿಯಂತೆ, ದಾಳಿಂಬೆಯಂತೆ; ಅವು ಸಿಹಿಯಾದರೆ ಸರಿಯೇ; ಅವೂ ಹುಳಿಯಾಗಬಾರದೊ? ಇವರಾರು ಹೇಳುವುದಕ್ಕೆ ಕೇಳುವುದಕ್ಕೆ? ಆ ಹುಳಿ ರುಚಿ ಪಥ್ಯಕ್ಕೆ, ಪಾನಕ್ಕೆ, ಪಕ್ವಾನ್ನಕ್ಕೆ ಒದಗುವಂತೆ ಸಿಹಿ ದ್ರಾಕ್ಷಿಯ ಒಮಟ್ಟಿನ ಹಿತವನ್ನೇ ಮೆಲುಕುತ್ತ ವಸ್ತು ಪ್ರಪಂಚಕ್ಕೂ ಗುಣಕ್ಕೂ ಮೇರೆ, ಮಿತಿ ಹಾಕಿ ಹರ್ಷವನ್ನು ಮೊಟಕುಮಾಡಿಕೊಳ್ಳುವ ಬುದ್ಧಿ ಏಕೆ ಜನಕ್ಕೆ ಕವಿಯುತ್ತಿದೆಯೊ ಕಾಣೆ. ನಿಡುಗಾಲ ಹುಳಿ ಮುರಿದು ಸಿಹಿಯಾದ ರುಚಿಯೇ ರುಚಿ. ಮೃದುವಾದ ಹುಳಿ ಹಾಯಿ. ಹಳೆಯ ಕಾಲದ ಬೆಂಗಳೂರು ಸೇಬಿನ ರುಚಿಯನ್ನು ಈ ದಡ್ಡರೇನು ಬಲ್ಲರು? ಹುಳಿಯೇ ರುಚಿ, ಹುಳಿ ಮುರಿದರೆ ರುಚಿ, ಹುಳಿ ಊರಿ ಸಿಹಿಯಾದರೆ ರುಚಿ. ವೈನ್ ಕುಡಿಯುವವರನ್ನು ಕೇಳಿ : ಎಷ್ಟು ಕಾಲ ದ್ರಾಕ್ಷಾರಸವನ್ನು ಇಟ್ಟಿದ್ದರೆ ಅಷ್ಟು ರುಚಿ ಎನ್ನುತ್ತಾರೆ. ದಶಕ ದಶಕಗಳ ಲೆಕ್ಕದಲ್ಲಿ ದ್ರಾಕ್ಷಾರಸದ ಬೆಲೆಕಟ್ಟುವುದು ರಸಿಕರ ರೂಢಿ. ಈಗಂತೂ ಯಾವ ಯಾವುದೊ ಶಾಸ್ತ್ರರೀತ್ಯಾ ಯಂತ್ರವಿದ್ಯೆಗಳಿಂದ ತಕ್ಷಣದಲ್ಲಿ ಹುಳಿ ಸಿಹಿಮಾಡುವ, ಕಾಯಿ ಹಣ್ಣು ಮಾಡುವ, ತಕ್ಷಣಕ್ಕೆ ಅದೇ ನಿಂಬೆ ಬೇಯಿಸಿ ಉಪ್ಪಿನ ಕಾಯಿ ಮಾಡುವ ವಿದ್ಯೆಗಳು ಬರುತ್ತಿವೆ. ಇವೆಲ್ಲ ಪ್ರತ್ಯಾಮ್ನಾಯಗಳು. ನಕಲಿ. ಅವಸರದ ಮೈನೆರಕೆಗಳು. ಮೂಲದ ಆಮ್ನಾಯ ಸಹಜವಾದ್ದು ; ಸುಭಗವಾದ್ದು. ಅದರಷ್ಟು ಸುಭೋಜ್ಯ ಬೇರೆ ಇಲ್ಲ. ಅದರದರ ಕಾಲ ಅದಕ್ಕೆ ತುಂಬಿ ಬರಬೇಕು. ಆಗಲೇ ಹಣ್ಣು ಹೆಣ್ಣು ಭೋಗ್ಯ.

ಔಷಧಿಗೆ ಔಷಧ, ಪಥ್ಯಕ್ಕೆ ಪಥ್ಯಕಾರಿ, ರುಚಿಗೆ ರುಚಿ, ಹದಕ್ಕೆ ಹದ, ಪರಿಮಳಕ್ಕೆ ಪರಿಮಳ, ಕಣ್ಣಿಗೆ ಮನಸ್ಸಿಗೆ, ಮೂಗಿಗೆ ಕೈಬೆರಳಿಗೆ, ನಾಲಗೆಗೆ ತೃಪ್ತಿ ತರುವ ನಿಂಬೆಯನ್ನು ಚಿಕಿತ್ಸೆಗೊದಗುವ, ಪ್ರಸಾದವಾಗುವ, ಅನುಗ್ರಹವಾಗುವ ಅದರ ಗುಣಗಳು ಸೇರಿಕೊಂಡು ನಿಂಬೆಯ ಅತಿಶಯತೆ ಸರ್ವ ಕಾಲಕ್ಕೂ ಸ್ಥಾಪಿತವಾಗಿದೆ.

# ಮದುವೆ

ನಮ್ಮಪ್ಪ ಮದುವೆ ಮಾಡಿಕೊಂಡಿದ್ದರು. ಇಲ್ಲದಿದ್ದರೆ ನಾನು ಹೇಗೆ ಹುಟ್ಟುತ್ತಿದ್ದೆ, ನ್ಯಾಯವಾಗಿ? ನಮ್ಮ ಅಜ್ಜಿ-ಅಜ್ಜ ಮದುವೆಯಾಗಿದ್ದವರು. ನಾನು ನೋಡಿದ ಯಾವ ಮರ್ಯಾದಸ್ಥರೂ ಮದುವೆಯಾದವರೇ. ಹೀಚುಗಳೂ ಅಪಕ್ವಗಳೂ ಪಡ್ಡೆ ಗಂಡುಗಳೂ ಕೈಗೆ ಬಂದು ಹೆಣ್ಣೂ ಎಷ್ಟೋ ಮದುವೆ ಒಲ್ಲದೆ ಕಾದಿವೆಯಾದರೂ ಅವೂ ಬೇಗ ಮದುವೆ ಮಾಡಿಕೊಳ್ಳುವವೇ. ಬಾಯಲ್ಲಿ ಎಷ್ಟೇ ಬೇಡವೆನ್ನಲಿ ಆ ಮಾತೆತ್ತಿದರೆ ರೇಗಲಿ ಮನೆ ಬಿಟ್ಟು ಹೊರಗೆ ಹೊರಟುಹೋಗಲಿ ಮನಸ್ಸಿನ ಒಳಗೆ ಮದುವೆ ಎಂದರೆ ಮಂಡಿಗೆ ಆಗುತ್ತಿರುತ್ತದೆ. ತುಟಿ, ರೂಪಕದಲ್ಲಿನಂತೆಯಾದರೂ, ಚಪ್ಪರಿಸುತ್ತಿರುತ್ತಾರೆ ಬಹುಮಂದಿ. ಇಂದು ಹಟದಿಂದ ೩೦–೩೫ ರವರೆಗೆ ಮುಂದಕ್ಕೆ ಹಾಕುತ್ತಾರಾದೀತು. ಅವಿವೇಕದಿಂದ ಹಾಗೇ ಉಳಿದರೆ ಆಮೇಲೆ ಅವರ ಪಾಡು ಬೇಡ. ಒಣಗುತ್ತಿರುವ ಮೈ ನೋಡಿಕೊಂಡು ಸೊರಗುತ್ತಾರೆ, ಮರುಗುತ್ತಾರೆ, ನಿಟ್ಟುಸಿರು ಬಿಡುತ್ತಾರೆ. ಲೇಡಿ ಚಾಟ್‌ರ್ಲಿ ಏಕಾಂತದಲ್ಲಿ ಕನ್ನಡಿಯಲ್ಲಿ ತನ್ನ ನಿಟ್ಟೊಡಲನ್ನು ನೋಡಿಕೊಂಡು ನೋಡಿಕೊಂಡು ಇದು ಹುಟ್ಟಿ ಏನು ಸುಖ ಉಂಡಿತು, ಕಂಡಿತು ಎಂದಂತೆ ತಮ್ಮ ಚಕ್ಕಳವನ್ನೇ ನೋಡಿಕೊಂಡು ನೋಡಿಕೊಂಡು ಕನಿಕರ ಪಟ್ಟುಕೊಳ್ಳುತ್ತಾರೆ. ಆ ಬೇನೆ ಯಾರಿಗೂ ಬೇಡ. ಬಿ.ಎ., ಎಂ.ಎ., ಪಾಸು ಆಗಲಿ, ಆಮೇಲೆ ಮದುವೆ, ಅಂದವರು ಹೆಣ್ಣಾದರಂತೂ ಇನ್ನಷ್ಟು ಕಷ್ಟಪಡುತ್ತಾರೆ. ಅಷ್ಟಕ್ಕೆ ಕಡಮೆ ಅಲ್ಲದ ಗಂಡಿಗೆ ಅವರು ಕಾಯಬೇಕು. ಅದಕ್ಕೆ ಕಡಮೆ ಮರ್ಯಾದೆ ಅವರಿಗೆ ಸಮಾನವಲ್ಲ. ಅಂಥದು ಸಿಕ್ಕುವುದು ಸುಲಭವಲ್ಲ. ಅಷ್ಟು ಸಿಕ್ಕದಿದ್ದರೆ ಅಯ್ಯೋ ಹಣೆಯ ಬರಹವೆ ! ಎಂದುಕೊಳ್ಳುವ ಹಾಗಾಗುತ್ತದೆ. ಕಡಮೆಯೆಂದರೆ, ಓದಿದ ಹೆಣ್ಣಿಗೂ ತಾತ್ಸಾರ ; ಅಭಿಮಾನ ಭಂಗ. ಆಗ ಗಂಡು, ಕಡಮೆಯೆಂದರೆ, ಒಂದು ಮಿಲಿಟರಿ ಹೋಗಲಿ, ಜುಜುಬಿ ಪೋಲೀಸ್ ಆಫೀಸರೊ ಪೈಲಟ್ ಆಫೀಸರೊ ಆಗದೆ ಇದ್ದರೆ, ಹೀನಾಯವೆನ್ನಿಸುತ್ತದೆ. ಜೊತೆ ಕೂಡುವುದಿಲ್ಲ.

ಇತ್ತ, ಓದಿದ ಹೆಣ್ಣು–ಮಕ್ಕಳನ್ನು–ಮಕ್ಕಳೇನು ಬಂತು ಇವು ಎಂದಾರು ಲೌಕಿಕರು ಮದುವೆ ಮಾಡಿಕೊಳ್ಳಲು ಬಹು ಮಂದಿ ಗಂಡುಗಳಿಗೆ ಧೈರ್ಯ, ತಮ್ಮಲ್ಲಿಯೇ ವಿಶ್ವಾಸ ಇಲ್ಲ. ಹೇಗೊ ಏನೊ ಎಂದು, ಏನು ಕೆಲಸ ಕೆಟ್ಟೀತೊ ಎಂಬ ಭಯ. ಕಾಲೇಜುಗಳಲ್ಲಿ 'ಲವ್' ಮಾಡಲು, ರೊಮಾನ್ಸಿಗೆ ಓದಿದ–ಓದುವ ಹುಡುಗಿಯರ

ಒಡನಾಟ ಬೇಕೇ ಹೊರತು ಮದುವೆಗೆಂದರೆ ಅಪನಂಬಿಕೆಯೇ. ಅವರನ್ನು ಮಾಡಿಕೊಂಡರೆ ನಿರ್ಬಂಧ ಗಂಡಿಗೆ. ಬಯ್ಯೊ ಹಾಗಿಲ್ಲ, ಹೊಡೆಯೊ ಹಾಗಿಲ್ಲ ; ಶಕ್ಯವಿಲ್ಲ. ತವರು ಮನೆಗೆ ಸುಲಭವಾಗಿ ಅಟ್ಟೊ ಹಾಗಿಲ್ಲ. Damn ಎಂದರೆ ಅವರಿಗೆ ಕೋಪ. ಯು ರ್‍ಯಾಂಬಸ್, Elenchi, Octopus, Capricorn, You Torres Vedras ಮುಂತಾಗಿ ದೊಡ್ಡ ಗಂಟಲಲ್ಲಿ ನುಡಿದು ಸುಧಾರಿಸುವ ಹಾಗಿಲ್ಲ. ಜಯಿಸುವುದಂತೂ ಸುತರಾಂ ಶಕ್ಯವಿಲ್ಲ. ಯಾವ ಯಾವ ಮೂಲಗಳಿಂದ, ಶಾಸ್ತ್ರಗಳಿಂದ ತಂದ ಸಾಮಾನು ಅವು ಎಂಬುದು ಅವರಿಗೂ ಗೊತ್ತಿರುತ್ತದೆ. ಸಿಕ್ಕಿದ ವಾಕ್ಯಗಳನ್ನು ಉದ್ಧಾರ ಮಾಡಿ ಬೋಧೆ ಮಾಡಲಾಗುವುದಿಲ್ಲ. ಅದನ್ನೆಲ್ಲ ಓದಿ ನಾಲ್ಕು ಐದು ವಾದಗಳಲ್ಲಿ ಅವನ್ನು ಖಂಡಿಸಿ ತಮ್ಮ ಸಿದ್ಧಾಂತವನ್ನು ಹೇಗೆ ಮಂಡಿಸಬೇಕು ಎಂದು ಕಲಿತು ಅವರಿಗೂ ಪ್ಯಾಸಾಗಿರುತ್ತದೆ. ಹಾಗೆ ಮಾಡಿ ಪದವೀಧರರಾಗಿರುತ್ತಾರೆ. ಗ್ರಹಚಾರ, ಮದುವೆ ಮಾಡಿಕೊಂಡು ಸಂಸಾರ ಮಾಡಬೇಕಾಗಿರುವ ಹೆಂಡತಿಯೊಡನೆ ಇದೆಲ್ಲ ಹೇಳುತ್ತ ಕುಳಿತಿರುವುದಕ್ಕಾಗುತ್ತದೆಯೆ? ಅಥವಾ, ದಿನದ ಇಪ್ಪತ್ತು ನಾಲ್ಕು ಗಂಟೆಯೂ ಲವ್ ಮಾಡುತ್ತ ಇರುವುದಕ್ಕಾಗುತ್ತದೆಯೆ? ಪ್ರತಿ ಸಲವು I love you, I love you, my own dear ಎಂದೊ "ಮೇರೆ ಮೊಹಬ್ಬತ್" ಎಂದೊ ಹೇಳುತ್ತಿರುವುದಕ್ಕೆ ಆದೀತೆ ? ಹೆಂಗಸು ನಮ್ಮನ್ನು ಪ್ರೀತಿಸಬೇಕೇ ಹೊರತು ಎಂಥ ಗಂಡಸು ಆದರೂ ನಿರಂತರವಾಗಿ ಹೆಣ್ಣನ್ನು ಒಲಿಸುತ್ತ ಕೂತಿರುವುದಕ್ಕಾಗುತ್ತದೆಯೆ? ರುಸ್ತುಂ ಗಂಡಿಗೆ ಹೆಣ್ಣು ಕಾದು ಬಿದ್ದಿರಬೇಕು ; ಮೀಸೆ ಇರಲಿ, ಇಲ್ಲದೆ ಇರಲಿ. ನಪೋಲಿಯನ್ ಹೇಳಿರಲಿಲ್ಲವೆ ! – Woman is the occupation of the idle man. She is the relaxation of the warrior – ಎಂದು. ಹದಿನೆಂಟು 'ಆಜೆ'ಗೆ ಒಂದು ಮಾಣಿ ಸಾಕು ಎಂಬುದುಂಟು ತುಳುವರಲ್ಲಿ. ಹೆಣ್ಣಿಗೆ ಗಂಡು ಕಾದು ಕುಳಿತಿರುವುದೆ? ತುಂಬಾ ಕ್ಲೇಶದ ಪ್ರಸಂಗಗಳು. ನಿಜವೊ ಸುಳ್ಳೊ ಹೇಳಲಾರೆ : ಓದಿದ ಹೆಣ್ಣನ್ನು ಮದುವೆಯಾಗುವುದೆಂದರೆ ಗಂಡಸನ್ನು ಗಂಡಸೇ ಮದುವೆ ಮಾಡಿಕೊಂಡಹಾಗಿರುತ್ತೆ ದಾಂಪತ್ಯ, ಎನ್ನುತ್ತಾರೆ ತಜ್ಞರು. ಇದ್ದೀತು. ಎರಡನ್ನೂ ಬಲ್ಲವರು ಹೇಳಬೇಕು. ಈ ಪ್ರಕರಣಗಳನ್ನೆಲ್ಲ ನೆನಸಿಕೊಂಡರೆ ಯಾವುದು ಸ್ನಿಗ್ಧವಾಗಿ ಗಂಡು ಹೆಣ್ಣಿನ ಸವಿ, ಮೃದು, ನುಣುಜೀವನ ಎನ್ನುತ್ತಿದ್ದೇವೊ ಅದು ದಿನದಿನಕ್ಕೆ ತುಂಬಾ ಕಷ್ಟದ್ದಾಗುತ್ತಿದೆ. ನಾಳೆಯ ಗಂಡುಗಳ ಕಷ್ಟವನ್ನಂತೂ ನಾನು ಊಹಿಸಿಕೊಳ್ಳಲಾರೆ. ಬಲ್ಲೆ ; ಬೇಡ.

ಮದುವೆ ಮಾಡಿಕೊಳ್ಳದೆಯೇ ಇದ್ದುಬಿಡೋಣವೆಂದರೆ ಅದೂ ತರವಲ್ಲ. ಹೇಗರಿ ಇರೋದು ? ಇದು ನಿಸರ್ಗಕ್ಕೆ ಅಪಚಾರ ; ವಿರುದ್ಧ. ಯಾವ ಗಂಡು ತನ್ನ ಗಂಡುತನದ ಸಹಜ ಪ್ರವೃತ್ತಿ ವಿಲಾಸಗಳಿಗೆ ಎದುರು ನಡೆದಾನು? ನಡೆದರೆ ಏನೊ ಐಬು, ಭಯ ಇರಬೇಕು, ಎನ್ನಿಸುತ್ತೆ ; ಎಲ್ಲರಿಗೂ–ಒಳಗೊ ಹೊರಗೊ ಮನೆಯಲ್ಲಿಯೊ ಎಂಬ ಸಂಶಯಗಳು ಬರುತ್ತವೆ ಯಾರಿಗೂ. ತಮ್ಮೊಳಗೇ ಏನೇನೊ ಕಾಯಿಲೆಗಳನ್ನು

ಊಹಿಸಿಕೊಂಡು, ಬೇಡ ಸಮಾಜಕ್ಕೆ, ವಂಶಕ್ಕೆ ಕೇಡಾದೀತು ಎಂದು ಕೊಂಡರೂ ತಪ್ಪೇ. ಎಷ್ಟೋ ಜನ ಸರ್ವಾವಸ್ಥಾಂಗತೋಪಿ ವಾ ಎಂಬಂಥವರ ಮನೆಗಳಲ್ಲಿ ಹುಟ್ಟಿದ ಮಕ್ಕಳೂ ಚೆನ್ನಾಗಿಯೇ ಇರುತ್ತಾರೆ. ಆರೋಗ್ಯವಾಗಿ ಧಡಿಯರಾಗಿರುತ್ತಾರೆ. ೧೦ ಜಿಲೇಬಿ ೪–೬ ಚಪಾತಿ ತಿಂತಾರೆ; ಕಣ್ಣು ತುಂಬಾ ನಿದ್ರೆ ಮಾಡುತ್ತಾರೆ; ಸಾಹಸ ಮೆರೆಯುತ್ತಾರೆ .... ಮನೆಯ ಇನ್ನಾರಿಗೊ ಉಪಕಾರ ಆಗುತ್ತೆ ನಾನು ಒಣಕಲಾಗಿ ಹೀಗೇ ಇದ್ದರೆ ಎಂದು ಆಜನ್ಮ ಬ್ರಹ್ಮಚಾರಿಗಳಾಗಿ ಉಳಿಯುವವರುಂಟು : ಯಾವ ತಂದೆ ತಾಯಿಯ ಹಿತಕ್ಕಾಗಿ ಹಾಗೆ ಮಾಡಬೇಕು ಅನ್ನಾರೊ ಅವರಿಗೇ ಮಕ್ಕಳು ಹೀಗೆ ಇರುವುದು ಇಷ್ಟವಿರುವುದಿಲ್ಲ. ಮಗನನ್ನು ಒಣಗಿಸಿ ತಮ್ಮ ಸೇವೆಗೆ ಉಳಿಸಿಕೊಳ್ಳುವ ಅವ್ಯಾಪಾರ ಹಿಂದೆ ಎಲ್ಲೊ ಶಂತನುವಿಗೆ ಯಯಾತಿಗೆ ರುಚಿಸಿತೇ ಹೊರತು ಈ ಕಾಲದಲ್ಲಿ ಶಕ್ಯವಿಲ್ಲ. ಅಂದೂ ನ್ಯಾಯವಲ್ಲ, ಇಂದೂ ಆಗದು. ಅವರಿಗೂ ಮನೆಯಲ್ಲಿ ಸೊಸೆ ಮಗ ಹಾರಾಡುತ್ತ ಇದ್ದರೆಯೇ ನೆಮ್ಮದಿ; ದಿನಾ ಜಗಳವಾಡುತ್ತಿದ್ದರೂ ಸರಿಯೇ ; ತುಂಬಿದ ಹಾಗಿರುತ್ತದೆ. ನಾಲ್ಕು ಸೊಸೆಂದಿರು ಎಲ್ಲರಿಂದಲೂ ಮೊಮ್ಮಕ್ಕಳು ಆಗುವ ಕಾಲ ನೋಡುವ ಭಾಗ್ಯ ಅತ್ತೆಯರದಾಗಬೇಡವೆ? ಅದರಿಂದಾಗಿ ಸಮಾಜದಲ್ಲಿ ಅವರಿಗೆ ಅಭಿಮಾನ. ಬರಿಯ ಭೀಷ್ಮನಾದವನಿಂದ ತಾನೆ ಏನಾಯಿತು? ರಾಜ್ಯ ಉಳಿಯಿತೆ, ವಂಶ ಉಳಿಯಿತೆ; ತಾನು ಉಳಿದನೆ? ಸಾಯದೆ, ಸಾಯದೆ ಸತ್ತ; ದಿನ ಮುಂದೆ ಹಾಕಿ ಬಾಣಗಳ ಮಂಚಿಕೆ ಮೇಲೆ ಬಿದ್ದು. ತಾನು ಉಳಿಸುವೆನೆಂದು ಮಾತು ಕೊಟ್ಟಿದ್ದವನು ಎಲ್ಲಾ ನಾಶಮಾಡಿ ತಾನು ಸತ್ತ. ಮದುವೆಯಾಗದೆ ಒಣಗಿ ಓಟೆಗರಿ ಆದ್ದೊಂದೇ ಅವನ ಪಾಲಿಗೆ ಬಂದ ಮಹೋತ್ಸವ .... ಉಹುಂ ; ಸರಿಯಲ್ಲ, ಒಂದು ಮದುವೆ ಮಾಡಿಕೊಂಡು ಬಿಡಬೇಕು, ಆದಷ್ಟು ಬೇಗ. ಚೆಕೋಫನ ಸೀಗಲ್-ಕಡಲು ಕಾಗೆ-ನಾಟಕದಲ್ಲಿ ತಾಯಿಗೆ ಮಗನನ್ನು ಕಂಡರೆ ತಾತ್ಸಾರ ; ನಿನ್ನ ವಯಸ್ಸಿಗೆ ಇಬ್ಬರು ಹೆಣ್ಣುಗಳು ಪ್ರೀತಿಗಾಗಿ ಇರಬೇಡವಾಗಿತ್ತೆ? ನಿನ್ನ ಕಂಡರೆ ಅಸಹ್ಯವಾಗುತ್ತೆ ಎನ್ನುತ್ತಾಳೆ. ಅಥವಾ ೫ ಅಡಿ ೧೦ ಅಂಗುಲ ಆದರೂ ಬೆಳೆದು ೧೮೦–೨೦೦ ಪೌಂಡು ರೂಢಿಸುವಂತೆ ಹೆಣ್ಣು ಇದ್ದರೆ ಏನಪ್ಪ ನಾನು ನಿಭಾಯಿಸಿಯೇನೆ ಎಂದುಕೊಳ್ಳುವುದುಂಟು. ಇನ್ನು ಕೆಲವನ್ನು ಕಂಡು ಅವು ಹೆಣ್ಣುಗಳೆಂಬ ಕಲ್ಪನೆ ಕೂಡ ಕಟ್ಟುವುದಿಲ್ಲ; ಈ ಜಗನ್ನಾಥ ರಥಗಳು ಹೆಣ್ಣುಗಳೇ ಎಂದುಕೊಂಡು ಹಿಂಜರಿಯಬೇಕಾದೀತು. ಕಣ್ಣು ನಂಬಬೇಡವೆ ? ಮನಸ್ಸಿಗೆ ಧೈರ್ಯ ಬೇಡವೇ ? ಅವಕ್ಕೂ ಮದುವೆ ಆಗುತ್ತದೆ; ಅವನ್ನೂ ಮದುವೆಯಾಗುತ್ತಾರೆ. ಅವರ ಪಾಲ ಸುಖ ಅನುಭವಿಸುತ್ತಾರೆ. ನಮ್ಮ ಗದ್ದೆ ಅಲ್ಲ ಅದು.

ಮದುವೆ ಇಲ್ಲದ ಒಂಟಿತನ ನರಕ; ಮದುವೆ ಆಗಿ ಹೆಂಡತಿ ಕಾಟ ಪಡುವುದು ಪ್ಲೇಗು ಎನ್ನುವುದುಂಟು. ಆಗದವರು–ಬಾಯಿ ಮಾತಿನಲ್ಲಿ ಸೇಡುಗಳನ್ನು ತೀರಿಸಿಕೊಳ್ಳುವವರು; ಹೀಗೂ ಕಷ್ಟವೇ ಹಾಗೂ ಕಷ್ಟವೇ ಎನ್ನುತ್ತ. ಆದರೆ ನೋಡಿ, ನರಕದಿಂದ ಉದ್ಧಾರವಿಲ್ಲ; ಪ್ಲೇಗು ವಾಸಿಮಾಡಿಸಿಕೊಳ್ಳಬಹುದಾದ್ದು ; ಅದನ್ನು

ಇನ್ನಾವುದೊ ಒಂದು ರೋಗಕ್ಕೆ ತಿರುಗಿಸಿಕೊಳ್ಳಬಹುದು; ಈಗೆಲ್ಲಕ್ಕೂ ಚಿಕಿತ್ಸೆಗಳಿವೆ, ಚುಚ್ಚು ಮದ್ದುಗಳಿವೆ, ದಾರಿಗಳಿವೆ. ಫ್ಲೇಗೇ ಮೇಲು ಎಂದೇ ಸುಮಾರು ೧೦೦೦ಕ್ಕೆ ೯೯೯ ಮಂದಿ ಎಲ್ಲ ದೇಶಗಳಲ್ಲಿಯೂ ಎಲ್ಲ ಕಾಲಗಳಲ್ಲಿಯೂ ಮದುವೆ ಮಾಡಿಕೊಳ್ಳುತ್ತಾರೆ. ಇನ್ನು ಕೆಲವು ಕಡೆ ಮದುವೆಯೇ ರುಜೆಗೆ ಚಿಕಿತ್ಸೆ. ಹಲವು ಹೆಣ್ಣು–ಕನ್ಯಾ ರೋಗಗಳಿಗೆ ಪ್ರಖ್ಯಾತವಾದ ಮದ್ದು ಮದುವೆ. ಪ್ರಾಣಿಗಳನ್ನು ನೋಡಿ. ಯಾರಿಗೂ ಯಾವುದಕ್ಕೂ ಲಿಂಗಜೀವನ ಸಹಜ; ಅಗತ್ಯದ್ದು. ಅದರ ಒತ್ತಡ ಎಲ್ಲರಿಗೂ ಅರ್ಥವಾಗುವಂಥದು. ಅದರ ಬೇನೆ ನೋಡಿಯೇ ನರನಾರೀ ವ್ಯೂಹಕ್ಕೆ ಮೈಕಾಯುತ್ತೆ. ಇನ್ನೂ ಏನೇನೊ ಆಗುತ್ತೆ. ನಮ್ಮನ್ನು ಅನ್ಯಾಯವಾಗಿ ಬಳಲಿಸಿದ್ದೀರಿ; ತಡಮಾಡುತ್ತಿದ್ದೀರಿ; ಹೋ ಎಂದು ಕಿರಿಚಿಕೊಳ್ಳುತ್ತವೆ. ಹಸುವನ್ನು ನೋಡಿ; ಇನ್ನೂ ದಪ್ಪ ಚರ್ಮದ್ದನ್ನು ಯಾವ ಚತುಷ್ಪಾದಿಯನ್ನಾದರೂ ನೋಡಿ; ಗೊತ್ತಾಗುತ್ತದೆ. ಅದಕ್ಕೆ ನಯವೆ? ನಾಜೂಕೆ? ಲಜ್ಜೆಯೆ? ಮರೆಯೆ? ತಡೆಯೆ? ಪಬ್ಲಿಕ್. ಗಂಡಿಗೆ ಹೆಣ್ಣು, ಹೆಣ್ಣಿಗೆ ಗಂಡು ಬೇಕಾದಾಗ ಸಹಜತೆಗೆ ಲೋಪ, ಅಡ್ಡಿ ತಂದುಕೊಳ್ಳದೆ ಎಲ್ಲೆಂದರಲ್ಲಿ ಕೂಡುತ್ತವೆ. ಆದುದರಿಂದಲೇ ಹೊಸ ಕಾಲದ ಕವಿಗಳು, ಕಾದಂಬರಿಕಾರರು ಈ ಸಹಜತೆಗೆ ದಿಗಂಬರತೆಗೆ ಒಲಿದಿರುವುದು. ಇಲ್ಲದ ಹಮ್ಮು–ಬಿಮ್ಮು, ಮರೆ, ಚೇಷ್ಟೆ, ಅಲ್ಲ, ಸಲ್ಲ, ಇಲ್ಲ. ಇವೆಲ್ಲ ಮನುಷ್ಯರ ವಿಕಾರಗಳು. 'ಮುಹುರಂಗುಲಿ ಸಂವೃತಾಧರೋಷ್ಠಂ – ಪ್ರತಿಷೇಧಾಕ್ಷರ ವಿಕ್ಲವಾಭಿರಾಮಂ' ಎಂದು ಮಹಾಕವಿ ವರ್ಣಿಸಿರುವಷ್ಟು ಅರ್ಥ ಕಷ್ಟವಾದರೂ ಪ್ರೌಢಿ ಮೆರೆವ, ಆದರೆ ಸೊಗಸಾದ ಸ್ಥಿತಿ. ಎಷ್ಟು ಮೋಜು ಎಷ್ಟು ಬಿಂಕ-ಬಿಗುಮಾನ. ಇಂಥದರ ಆಟ ವರ್ಷಗಟ್ಟಲೆ ನಡಸಿ ನಡಸಿ ಸತಾಯಿಸ ಬಹುದಾದರೂ ಮಹಾಕವಿ ಕುವೆಂಪು ಹೇಳಿದ ಹಾಗೆ ಕಡೆಗೆ ಅಲ್ಲಿಗೇ, ಆದರೆ ಇಲ್ಲಿ ಮದುವೆಗೇ, ಇದು ನಡಸುತ್ತೆ. ಕವಿವಾಣಿಯಲ್ಲಿ ದುರ್ಭರ ದುರಂತಕ್ಕೆ ? ಇಲ್ಲಿ ದುರಂತ ಅಪರೂಪ. ಶುಭಾಂತವೇ–ಸರ್ವಸಾಧಾರಣ. ಮದುವೆ ಎಂದರೆ ಮಂಗಳ, ಪ್ರಸ್ಥ ; ಶುಭಶೋಭನ ಎಂದೇ ಸಾರ್ವತ್ರಿಕ ನಂಬಿಕೆ. ಇದೆಲ್ಲ ಸಂಸ್ಕೃತ, ನಿಮಗೆ ಗೊತ್ತೇ ಇದೆ.

ಚಿಕ್ಕಪುಟ್ಟ ವಯಸ್ಸಿನಲ್ಲಿ ಮದುವೆ ಮಾಡಿಕೊಂಡುಬಿಟ್ಟರೆ ಆ ರಂಗೇ ರಂಗು ! ಆ ಸಂತೋಷ ದೊಡ್ಡದು. ನಾಲ್ಕು ವರ್ಷಕಾಲ ಹುಡುಗರಂತೆ ಆಡಿಕೊಂಡು ಹಾಡಿಕೊಂಡು ಬೇಜವಾಬ್ದಾರಿಯಲ್ಲಿ – ದೊಡ್ಡವರು ಹೇಗೋ ಮನೆ ನೋಡಿಕೊಳ್ಳುತ್ತಾರೆ – ಜಾಗ್ರತೆ ಮದುವೆ ಮಾಡಿದ ಹೊಣೆ ಅವರದು, ಅನುಭವಿಸಲಿ! ಯಾಕೆ ಮಾಡಿದಿರಿ ಎಂದು ತಿರುಗಿ ಬಿದ್ದು ಕೇಳಬಹುದು. ಇತ್ತ, ಈ ತಾಯಿತಂದೆ, ಅತ್ತ, ಮಾವ ಅತ್ತೆಯರು ಕುತ್ತಿಗೆಗೆ ನೇಣುಹಾಕಿ, ಮಂಕುಬೂದಿ ಚೆಲ್ಲಿ ನಾಲ್ಕು ಕಾಲ ಹಾಯಾಗಿರಬಹುದು. ಆ ಚೆಲ್ಲಾಟ, ವಿನೋದ, ವಿಹಾರ ತುಂಬಾ ವಯಸ್ಸಾದ ಮೇಲೆ ಖಂಡಿತ ಒದಗುವುದಿಲ್ಲ. ಹುಡುಗಮುಂಡೇವು ಆಡಿಕೊಳ್ಳಲಿ ; ನಾವು ಮಾಡುತ್ತಿರಲಿಲ್ಲವೆ? ಅಥವಾ ನಮಗಂತೂ ಲಭಿಸಲಿಲ್ಲ – ಎಂದು. ಬಲಿತ ಹಿರಿಯ

ಕಾಯಂತೆ, ಒಣಗಿ ಸುಕ್ಕಿದ ಸೌತೆಯಂತೆ ಆದಾಗ ಸರಸ ಎಲ್ಲಿ ಉಳಿಯಬೇಕು ? ತರ್ಕಾರಿಗಳಾಗಿ ಬಾಳಬೇಕಾದ ಜೀವನ ಅದು. ಆದಷ್ಟು ಬೇಗ, ೧ಂದು ೧ಪ್ಪತ್ತರ ಒಳಗಾಗಿ ಹೆಣ್ಣು, ೧ಪ್ಪತ್ತೈದರ ಒಳಗಾಗಿ ಗಂಡು ಮದುವೆ ಮಾಡಿಕೊಂಡು ಬಿಟ್ಟರೆ,–ಆವರೆಗೂ ತಡೆಯುವುದೇ ಸರಿಯಲ್ಲ – (ಭಾರತದಲ್ಲಿ ದೇವತೆಗಳಿಗೆ ಚಿರಯೌವನ ಎನ್ನುತ್ತಾರೆ ; ಅಲ್ಲಿ ಗಂಡಿಗೆ ೨೫ ವರ್ಷ, ಹೆಣ್ಣಿಗೆ ಸರ್ವದಾ ೧೬) ಮನುವನ್ನು ಕೇಳಿ ಹೇಳುತ್ತಾನೆ – ಒಳಿತು. ೧ಹ, ೧ತಃಪರ ಎರಡೂ ಸಿದ್ಧಿಸುತ್ತವೆ ಎಂಬುದು ನನ್ನ ಸಿದ್ಧಾಂತ. ನಾನು ಎಲ್ಲರಿಗೆ ಹೇಳುತ್ತಿರುವುದೂ ಅದನ್ನೇ. ನಾನು ಮದುವೆ ಮಾಡಿಕೊಂಡು ಭದ್ರವಾಗಿರುವುದರಿಂದ ಎಲ್ಲರಿಗೂ ಅದನ್ನೇ ಹೇಳುವುದು. ಚಿಕ್ಕಪುಟ್ಟ ಎಂದು ಹಿಂದಿನ ಕಾಲದವರು ಮಾಡುತ್ತಿದ್ದ ಹಾಗೆ ತೊಟ್ಟಿಲ ಮಗುವಿಗೆ ತಾಳಿ ಕಟ್ಟುವುದೊ ನಗ್ನಿಕೆಗೆ ಕಿರಿಗೆ ಉಡಿಸಿ ಲಗ್ನ ಮಾಡುವುದೊ ಸರಿಯಲ್ಲವೆನ್ನಿ. ರಾಮ, ಅಭಿಮನ್ಯು, ಸೊಹ್ರಾಬ್ ಮುಂತಾದವರ ಉದಾಹರಣೆ ಹೇಳುತ್ತೀರೇನೊ. ಅವರೆಲ್ಲ ಹದಿನಾರು ವರ್ಷ ೧ನ್ನೂ ದಾಟದವರು ನಿಜ. ಅವೆಲ್ಲಾ ಅಪವಾದಗಳು. ಅಥವಾ, ಸರ್ವಾಂಶದಲ್ಲಿಯೂ ಅವರ ಹಾಗಿದ್ದೀರ? ನಿಮ್ಮ ಕೈಯಲ್ಲಾಗುತ್ತದೆಯೆ? ಶಿವಧನುಸ್ಸು ಎತ್ತಿ ಮುರಿದೀರ? ೧ನ್ನೂರು ಗಜ ಉದ್ದದ ಪಾಶವನ್ನು ಎಸೆದು ಹಗೆಯನ್ನು ಕಟ್ಟಿ ಎಳೆದೀರ? ಚಕ್ರವ್ಯೂಹವನ್ನು ಭೇದಿಸೀರ? ಏನು ಮಾಡೀರಿ?... ಮೊನ್ನೆ ಯಾರೊಡನೆಯೊ ಹೆಂಗಸಿನ ಕೈಯಲ್ಲಿ ಮಾತನಾಡುತ್ತ ೧ದ್ದೆ. ಆಕೆ ಐವತ್ತು ಮೀರಿದವರು; ವಿದೇಶಿಯರು. ಜೂಲಿಯೆಟ್‌ಗೆ ೧ನ್ನೂ ಹದಿನಾಲ್ಕು ತುಂಬಿರಲಿಲ್ಲ ಎಂದೆ. ಆಕೆ ಒಡನೆಯೇ ಅಂದರು. ಆ ಕಾಲದಲ್ಲಿ ಗಂಡಸಿನ ಜೀವಮಾನವೂ ಮುವ್ವತ್ತಕ್ಕೆ ಮೀರುತ್ತಿದ್ದುದು ಅಪರೂಪ ಎಂದು. ನನಗೆ ಹಿರಿಯರೊಬ್ಬರು ೧ನ್ನೊಂದು ಬೆಳಕು ಬೀರಿ ಹೀಗೆ ಹೇಳಿದರು-ನೀವೆನ್ನುವ ಜನ ವೀರರು-ಆ ಎಲ್ಲರೂ, ಹೌದು, ಎಲ್ಲರೂ ಯೋಧರು. ಯುದ್ಧಗಳಿಗೆ ಹೋಗಬೇಕಾಗುತ್ತಿತ್ತು. ತಮ್ಮ ವಂಶಕ್ಕೆ ಒಂದು ಕುಡಿ ಬೇಕೊ ೧ಲ್ಲವೊ, ಉಳಿಸಿ ಹೋಗಲಿ ಎಂಬುದು ಅವರ ಮನಸ್ಸು ಎಂದು. ಆ ಯೋಚನೆ ಹೊಳೆದಿರಲಿಲ್ಲ ನನಗೆ ಆವರೆಗೂ. ಬಾಳಲ್ಲಿ ಶಿಕ್ಷಣ ಮುಗಿಯುವುದೆಂದು? ಸುಧನ್ವನ್ನ ಕೇಳಿ. ಎರಡೂ-ಧರ್ಮ, ಕರ್ಮ, ಪ್ರೇಮ ಎಲ್ಲ ಒಟ್ಟಿಗೆ ಸಿದ್ಧಿಸುತ್ತವೆ ಎನ್ನೋಣ.

ನಮ್ಮೂರಲ್ಲಿ ಹಿಂದೆ ಶ್ಯಾನುಭೋಗರ ಮಗ ಗುಂಡ ಅಂತಿದ್ದ. ಅವನಿಗೆ ಹದಿನೆಂಟು ವಯಸ್ಸು. ಮೂರನೆ ಮಗ. ದೊಡ್ಡವನು, ಶ್ಯಾನುಭೋಗಿಕೆಗೆ ತಂದೆಗೆ ನೆರವಾಗುತ್ತ ಆಸ್ತಿ ಪಾಸ್ತಿ ನೋಡಿಕೊಳ್ಳುತ್ತಿದ್ದ. ಎರಡನೆಯವನಿಗೂ ಅವನಿಗೂ ನಡುವೆಯವರು ೩–೪ ಮಂದಿ ಅಕ್ಕಂದಿರು. ಎರಡನೆಯವನಿಗೆ ೧ಪ್ಪತ್ತಕ್ಕೆ ಮದುವೆ ಆಯಿತಂತೆ. ಪಕ್ಕದ ಊರಿಂದ ೧ನ್ನೊಬ್ಬರು ಶಾನುಭೋಗರ ಮನೆಯಿಂದ ಹೆಣ್ಣು ತಂದು 'ಅದ್ಧರಿ'ಯಿಂದ ಮದುವೆ ಮಾಡಿದರು. ಅವನು S.S.L.C. ಪಾಸು ಮಾಡಿ ನಿಷ್ಣಾತನಾಗಿದ್ದ. ಆ ಕಾಲದಲ್ಲಿ ೧೨ರೂ. ಪರೀಕ್ಷೆ ಎಂದರೆ ಡಾಕ್ಟೋರೇಟ್

ತೆಗೆದುಕೊಂಡದ್ದಕ್ಕಿಂತ ಅಧಿಕ. ಆವೂರಲ್ಲಿ ಓದಿದ್ದ ಇಬ್ಬರಲ್ಲಿ ಅವನು ಎರಡನೆಯವನು. ಮನೆಯ ಗೌರವಕ್ಕೆ ಸಾಕಿತ್ತು. ಅವನಿಗೂ ಪ್ರಾಪ್ತವಯಸ್ಸು, ಕಾಲ ಆಗಿದ್ದುದರಿಂದ ೧೨–೧೩ ವಯಸ್ಸಿನ ಹೆಣ್ಣನ್ನು ತಂದು-ಆ ಕಾಲಕ್ಕೆ ಅದೇ ಮೀರಿದ ವಯಸ್ಸು, ಸಮಗೆಲ್ಲ ಆದ್ದು ಹಾಗೇ-ಮದುವೆ ಮಾಡಿದರು. ಮದುವೆಯ ವೈಭವ ನೋಡಿದ ಗುಂಡ. ನಿತ್ಯ, ಏಳೆಂಟು ದಿನ, ಊಟ ಉಪಚಾರ-ರೂಪಾಯಿಗೆ ೧೦ ಸೇರು ಅಕ್ಕಿ, ನಾಲ್ಕು ರೂಪಾಯಿಗೆ ಟಿನ್ನು ಬೆಣ್ಣೆ ಬರುತ್ತಿದ್ದ ಕಾಲ ; ಎರಡು ರೂಪಾಯಿಗೆ ಅಡಿಗೆಯವರು ಸಿಕ್ಕುತ್ತಿದ್ದರು. ಮೇಲೆ ಊರ ಶಾನುಭೋಗರು ಬೀಗ-ಬೀಗರು ; ಚಿರೋಟಿ, ಮಂಡಿಗೆ, ಫೇಣಿ, ಗೂಳೂರಿಗೆ..... ಭೇಷ್. ಆರತಿ, ಉರುಟಣೆ, ನಾದಿನಿಯರೊಡನೆ ಸಲ್ಲಾಪ, ಗುಬ್ಬಿ ಆಟ : ಕಾಶಿ ಯಾತ್ರೆಯ ಠೀವಿ. ಶ್ಯಾನುಭೋಗ ಮಾವನವರು ನಾಲ್ಕು ರಸ್ತೆ ಸೇರಿದ ಕಡೆ ಅಳಿಯನನ್ನು ನಿಲ್ಲಿಸಿಕೊಂಡು ಜೊತೆ ಓಲಗದವರು ಮಂಗಳ ಊದುತ್ತಿರಲು ಸುರುಟಿಯೊ ಶ್ರೀರಾಗವೊ ನುಡಿಸುತ್ತಿರಲು ಬೆಳ್ಳಿ ತಟ್ಟೆಯಲ್ಲಿ ಕಾಲು ತೊಳೆಯುವುದು, ಗುಂಡನ ಅಣ್ಣ ಸೀನನ ತೊಳೆದ ಕಾಲನೀರನ್ನು ಮಾವ-ಶಾನುಭೋಗರು ಪ್ರೋಕ್ಷಣೆ ಮಾಡಿಕೊಳ್ಳುವುದು, ಕಿವಿಗೆ ಕೋಡಬಳೆ ತೂಗು ಹಾಕಿದ ಅಲಂಕಾರ, ಕುತ್ತಿಗೆಗೆ ಚಿನ್ನದ ಸರ, ತೋಳಿಗೆ ವಂಕಿ, ಬಂದಿ, ರಕ್ಷೆ ಕೆನ್ನೆಗೆ-ಮೈಗೂ ಬಣ್ಣದ ಚಿತ್ತಾರ. ಛತ್ರಿ ಹಿಡಿಯುವವರು, ಬೀಸಣಿಗೆ ಹಾಕುವವರು, ಆಮೇಲೆ ಮೂರು ದಿನ ಕಳೆದು, ಮೂರನೆಯ ದಿನದ ಹರಿಬೂಮದ ಸಮಾರಂಭ ದಾಟಿ ನಾಗವಲ್ಲಿ ಏರ್ಪಾಡು, ಮೆರವಣಿಗೆ ದಿನವಂತೂ ನೋಡು ನೋಡುತ್ತ ಆಸೂಯೆಯಿಂದ ಹಸುರುಗಟ್ಟಿ ಹೋಗುವಂತಾಯಿತು. ತಡೆಯಲಾರದೆ ತಿಂಗಳ ನಾಗೋಲಿಯ ದಿನವೇ ತಂದೆಯ ಬಳಿ ಹೋದ ಗುಂಡ ಅಪ್ಪ 'ನನಗೆ ಯಾವೊತ್ತು ಮಾಡುತೀಯ ಮದುವೆ' ಎಂದು ಕೇಳಿದನಂತೆ. 'ನಿನ್ನ ಮುಂಡು ಮೋಚಿತು, ನಿನಗೆ ಮದುವೆ! ಓ ಎಂದರೆ ಠೊ ಎನ್ನಲು ಬರುವುದಿಲ್ಲ. ನಿನ್ನ ಯೋಗ್ಯತೆಗೆ ಒಂದು ಲೋವರ್ ಸೆಕೆಂಡರಿ ಕೂಡ ಇಲ್ಲ. ನನ್ನ ಎದುರಿಗೆ ನಿಂತುಕೊಬೇಡ, ಹೋಗು' ಎಂದುಬಿಟ್ಟರು. ಮರ್ಮಸ್ಪೃಕ್ ವಾಕ್ಕು ನಾಟಿತು. ಶ್ರೀರಾಮನದಾದರೂ ತಪ್ಪೀತು, ಇಂಥ ಬಾಣ ಹೇಗೆ ಗುರಿ ತಪ್ಪೀತು ? ಗುಂಡನಿಗೆ ಎರಗಿ ಚುಚ್ಚಿತು. ಮೊನೆ ಬೆನ್ನಲ್ಲಿ ಕಾಣಿಸುವಷ್ಟು ನಾಟಿತು. ನೇರ ತಪ್ಪಲಿಲ್ಲ. ಈ ಮದುವೆ ಮಗಿದ ಎರಡನೆಯ ದಿನವೇ ಯಾರಿಗೂ ಹೇಳದಂತೆ ದಿನನಿತ್ಯ ಮೇಸ್ಟ್ರು ಕೃಷ್ಣಪ್ಪನವರಲ್ಲಿ ಪಾಠಕ್ಕೆ ಕುಳಿತ. ಆ ವರ್ಷ ಪರೀಕ್ಷೆಗೆ ಕೂತ. ಲೋವರ್ ಸೆಕೆಂಡರಿ ಪ್ಯಾಸು ಮಾಡಿದ. ಶ್ಯಾನುಭೋಗರ ಹತ್ತಿರ ಹೋಗಿ ನಿಂತ ; ಅಪ್ಪ, ಲೋವರ್ ಸೆಕೆಂಡರಿ ಪ್ಯಾಸು ಮಾಡಿದ್ದೇನೆ ಎಂದು ಕೇಳಿದ ಒಂದು ತಿಂಗಳಲ್ಲೆ ಮದುವೆ ಮಾಡಿಸಿಕೊಂಡ ಧೀರ ಲಲಿತರಿದ್ದಾರೆ, ಧೀರ ಪೋಕರಿಗಳಿದ್ದಾರೆ. ನಮ್ಮ ಕಾಲ ಕಂಡಿದ್ದರೆ ಗೊತ್ತಾಗುತ್ತಿತ್ತು. ಈಗ ಅವನಿಗೆ ೭–೮ ಮಂದಿ ಮಕ್ಕಳಿದ್ದಾರೆ ! ಇಂಥ ವಿದ್ಯಾವೀರ ಅಲಂಕಾರ ಪ್ರಪಂಚಕ್ಕೆ ಏಕೊ ಏನೊ ಬರಲಿಲ್ಲ.

ಏಕೆ ಹೇಳಿದೆ ಎಂದರೆ ಇಷ್ಟು ಸಾರ್ವತ್ರಿಕ, ಸ್ವಾಭಾವಿಕ ಮದುವೆಯ ಯೋಚನೆ ಎಂದು ತಿಳಿಸಲು. ಕೆಲವೇಳೆ ಈ ಹೆಣ್ಣು ಬೇಡ, ಆ ಗಂಡು ಬೇಡ ಎಂದು ಮೊಂಡಾಟ,

ಮೂರ್ಖತನ ಮಾಡುವುದುಂಟು. ಪ್ರತಿ ಗಂಡಿಗೂ ನನಗೆ ಚೀಫ್ ಮಿನಿಸ್ಟರ ಮಗಳೇ ಬೇಕೆಂದೊ, ತಮ್ಮ ಕೋಮಿನಲ್ಲಿ ಯಾರು ತುಂಬಾ ಶ್ರೀಮಂತರೊ ಖ್ಯಾತರೊ ಅಲ್ಲಿಂದಲೇ ಹೆಣ್ಣು ಬರಬೇಕೆಂದೊ ಆಸೆ ಇರುತ್ತದೆ. ಪ್ರತಿ ಹೆಣ್ಣಿಗೂ ಮನ್ಮಥನೇ ಬೇಕೆಂದೊ ಮೋಟರಲ್ಲಿ ವಿಮಾನದಲ್ಲಿ ಸಂಚಾರ ಮಾಡುವವನೇ ಬೇಕೆಂದೊ ಒಳ ಆಸೆ ಬಲಿದಿರುತ್ತದೆ. ಚಿರರಾತ್ರೇಪ್ಸಿತಂ ಕಾಮಂ. ಎಷ್ಟೊ ಕನಸುಗಳಲ್ಲಿ ನೆನೆದ ಗುಲಾಬ್ ಜಾಮೂನು, ರಸಗುಲ್ಲ ಅದು. ಇನ್ನೆಷ್ಟೊ ಭೀಮನ ಅಮಾವಾಸ್ಯೆಗಳ ಪ್ರಾರ್ಥನೆಯ ಫಲ. ಇಂಥಲ್ಲಿಯೊ ಡಿಮ್ಯಾಂಡ್ ಹೆಚ್ಚು, ಸಪ್ಲೈ ಕಡಮೆ ! ಆ ಪದಾರ್ಥಗಳಿಗೆ ಏಕಾಧಿಪತ್ಯವಿರುವುದರಿಂದ ಬೆಲೆ ಜಾಸ್ತಿ. ಎಲ್ಲರಿಗೂ ದೊರೆಯುವುದಲ್ಲ, ಅವರೂ ಉತ್ತಮ, ಶ್ರೇಷ್ಠ ಎಂಬುದನ್ನೇ ಹುಡುಕುತ್ತಾರೆ ; ಅಲ್ಲಿಯೂ ಮುದಿ ಹೀರೇಕಾಯಿಗಳಾಗುವುದೊ ಹದ್ದಿನ ಕೈಗೆ ಸಿಕ್ಕುವುದೊ ಯಾವುದೊ 'ತತ್ತ ಬಡಕಲ' ಕೈಸೇರುವುದೊ ಅಸಂಭವವೇನಲ್ಲ. ಆದ್ದರಿಂದ ಅತಿಯಾಗಿ ಆಸೆ ಸರ್ವತ್ರ ಸರ್ವದಾ ವರ್ಜ್ಯವಾಗಬೇಕು. ಇಷ್ಟಲ್ಲದೆ ಹಿರಿಯರು, ಪ್ರಾಜ್ಞರು ಹೇಳಿದರೆ 'ಮಧ್ಯಮಾರ್ಗ ಸರಿ; ಮಾ ಗೃಧಃ'– ಎಂದು? ಅವರವರ ಪಾಲಿಗೆ ಬಂದುದನ್ನು ಅನುಭವಿಸಬೇಕು ಎಂಬುದು ಚಿರಂತನ ಧರ್ಮ. ಎಲ್ಲ ಹೆಣ್ಣು ರತಿ, ಎಲ್ಲ ಗಂಡು ಕಾಮಣ್ಣ ಆಗುವುದು ಶಕ್ಯವಾಗದು. ಸಾಧಾರಣದ ಗತಿಯೂ ಕಾಣಬೇಕಲ್ಲ. ಅವರದೇ ಬಹು ಸಂಖ್ಯೆ. ಇನ್ನು ಕೆಲವು ಕಡೆ ತಮಗೆ ಎಲ್ಲಿ ಕೆಲಸ, ಕಾರ್ಯ, ಹುದ್ದೆ, ಬಡತಿ ಸಿಕ್ಕೀತೊ ಎಂದು ನಿರೀಕ್ಷಿಸುವ ಬಾಬುಗಳು ಅವು. ಇನ್ನಾವ ವಾದಕ್ಕೂ ಬಗ್ಗದವು, ಇಂಥ ಆಮಿಷಗಳಿಗೆ ಬಾಯಿ ಬಿಡುವುದುಂಟು. ಹಣಕ್ಕೆ, ವಿದೇಶಿ ವಿದ್ಯಾಭ್ಯಾಸಕ್ಕೆ ಆಸೆಪಟ್ಟು ನೆರವು ದೊರಕೀತೆಂದು ಮಂಗಗಳನ್ನೊ ಮಂಜಿಷ್ಟಗಳನ್ನೊ ಕಟ್ಟಿಕೊಳ್ಳುವ ಪರಿಪಾಠಿ ಉಂಟು. ಈ ಹುಡುಗಿಯನ್ನು ಮದುವೆ ಮಾಡಿಕೊಂಡರೆ ಮೂವತ್ತು ಸಾವಿರ ಕೊಡುತ್ತೇವೆ ಎಂದು ಯಾವ ಕೊರೆ ತುಂಬಲೊ, ಏತರಿಂದ ಪಾರಾಗಲೊ ಭರ್ತಿ ಮಾಡಿಕೊಡುವ ಪ್ರಸಂಗಗಳಿರುತ್ತವೆ. ಹಣ ಬೇಕಿರುವಾಗ ಹೆಣ್ಣೂ ಜೊತೆಗೆ ದೊರೆತರೆ ಅಷ್ಟಷ್ಟೂ ಸೈ. ಆಮೇಲೆ ಹೆಣ್ಣನ್ನು ಹೇಗೆ ಬೇಕಾದರೂ ನಡಸಿಕೊಳ್ಳಬಹುದಲ್ಲ ! ಎಂದಿಗೂ ಗಂಡಿನ ಅಧಿಕಾರ ಹಾಗೆ ನಡೆಯುತ್ತದೆ ! ಇವೆಲ್ಲ ಇವೆ. ಇದನ್ನೇ ಆಚಾರ್ಯರು ಲೋಕಸ್ವರೂಪ ಎಂದು ಕರೆದದ್ದು ಇರಬೇಕು. ಸಾರ ಅಂಶ ಇದು : ಒಂದು ಗಂಡಿಗೆ ಒಂದು ಹೆಣ್ಣು ಲೆಕ್ಕಾಚಾರವಾಗಿ ದಕ್ಕಿದಾಗ ಒಪ್ಪವಾಗಿ ಮದುವೆಯಾಗಿ ಸಂಸಾರ ಮಾಡುವುದು ಒಳಿತು. ಹೆಚ್ಚು ಎರಡೂ ಕಡೆ ಕಸರೆ ; ಕ್ಲಿಷ್ಟ ವ್ಯಾಪಾರ : ಶ್ಲಿಷ್ಟ ಕರ್ಮ. ಹಲವು ಬಗೆ ಪೀಡೆ-ಕೇಡು ಕವಿಯುತ್ತವೆಯಾಗಿ ಒಂದೊಂದು ಸಲಕ್ಕೆ ಒಬ್ಬೊಬ್ಬರು....ಸಾಕು. ಮುಸಲ್ಮಾನರಲ್ಲಿಯೂ ಒಮ್ಮೆಗೆ ನಾಲ್ಕೇ. ಅವರಲ್ಲಿ ಬೇಕಾದವರನ್ನು ಘಟಸ್ಫೋಟ ಮಾಡಿಕೊಂಡು ಹೊಸ ಹೊಸತನ್ನು ಪಡೆದುಕೊಳ್ಳಬಹುದು. ಇಷ್ಟರ ಮೇಲೆ Black Market, private practice ಹೇಗೂ ಉಂಟು. ಇದನ್ನು ತಪ್ಪಿಸುವುದು ಯಾರ ಕೈಯಲ್ಲಿದೆ ?

ಗಂಡು ಮೋಹ ಹೆಣ್ಣಿಗೆ, ಹೆಣ್ಣಿನದು ಗಂಡಿಗೆ ತಪ್ಪಿದ್ದಲ್ಲ – ಲೋಕ ಹುಟ್ಟಿದಂದಿನಿಂದ. ದೇವತೆಗಳಿಗೂ ತಪ್ಪಿಲ್ಲ. ಶಿವ ವಿಷ್ಣುಗಳಿಗೇ ಇಲ್ಲವಾದ ಮೇಲೆ

ಹುಲುಮನುಜರ ಪಾಡೇಂ? ಮೋಹಿನೀ ಅವತಾರ ತಾಳಿ ವಿಷ್ಣು ಅಮೃತದ ಬಟವಾಡೆ ಮಾಡುತ್ತ ರಾಕ್ಷಸರಿಗೆ ಟೋಪಿ ಹಾಕಿದಾಗ ಶಿವನಿಗೆ ತಡೆದುಕೊಳ್ಳಲು ಆಗದೆ ಹೋಯಿತು. ಶಿವನಿಗೆ ಮೋಹಿನಿಯಲ್ಲಿ ಲೋಕ ಕಂಟಕನಾದ ಒಬ್ಬ ಅಸುರನೇ ಹುಟ್ಟಬೇಕಾಯಿತು ಎಂಬ ಕಥೆ ಕೇಳಿಲ್ಲವೆ? ಅಸಂಯಮದ ಮಗು ಅಸುರ ತಾನೇ ಆದಾನು !....ಆ ಮಾತು ಹಾಗಿರಲಿ ; ಚೆಲುವಿನ, ಅಲ್ಲ, ಹೆಣ್ಣಿನ ಮೋಹ ದುರ್ವಾರ್ಯ ಎಂಬ ಸಂಗತಿ ಇದರಿಂದ ಗೊತ್ತಾದೀತು...ಇದನ್ನು ಮಾಡಿಕೊಳ್ಳಲೊ ಅದನ್ನೊ. ಹೀಗೊ ಹಾಗೊ ಎಂದು ಮೀನ ಮೇಷ ಎಣಿಸುತ್ತಿದ್ದರೆ ಇನ್ನೊಂದು ತೊಂದರೆ. ಕಡೆಗೆ ಯಾವುದೂ ಆಗದೆ ಉಳಿಯಬಹುದು. ಪ್ರತಿದಿನ ಗೊತ್ತುಗುರಿ ಉದ್ದೇಶ ಪ್ರಯೋಜನ ಇಟ್ಟುಕೊಳ್ಳದೆ ಮನೆಯಿಂದ ಹೊರಟವರು ಪ್ರತಿ ಚೌಕದಲ್ಲಿಯೂ ನಿಂತು ಯಾವ ದಿಕ್ಕಿಗೆ ತಿರುಗಲಿ, ಮುಂದುವರಿಯಲಿ ಎಂದು ಪ್ರಶ್ನೆ ಕೇಳಿಕೊಳ್ಳುತ್ತ ನಡೆಯ ತೀರ್ಮಾನ ಮಾಡಲಾಗುತ್ತದೆಯೆ? ಕುದುರೆಗೆ ಕಣ್ಣ ಪಟ್ಟಿ ಹಾಕಿದಂತೆ ಯಾವ ಕಡೆ ಹೋಗಬೇಕೊ ಮೊದಲೇ ಗೊತ್ತು ಮಾಡಿಕೊಂಡು ಆ ಕಡೆ ನೇರ ಹೋಗಬೇಕು. ಇಲ್ಲವಾದರೆ ಕೆಲಸವಿರುವ ಎಡೆಗೆ ಸಮಯಕ್ಕೆ ಹೋಗಲಾಗುವುದಿಲ್ಲ. ಎದುರಿಗೆ ಹುಲ್ಲು ಬಂತು; ಎದುರಿಗೆ ಇನ್ನೊಂದು ಕುದುರೆ ಕಂಡಿತು; ಇನ್ನೇನೊ ಆಕರ್ಷಣೆ, ಭೀತಿ ಎಂದು ಕುದುರೆ ನಿಂತುಬಿಟ್ಟರೆ ಗಾಡಿಯಲ್ಲಿನ ನಿಮ್ಮ ಗತಿ ಏನು? ಸರಿಯಾದ ಕಾಲಕ್ಕೆ ನಿಮ್ಮ ಕಾರ್ಯಕ್ರಮ ಕೈಗೂಡೀತೆ? ಯಾವುದೊ ಒಂದು ಆಗಿ ಬಿಡಬೇಕು. ಅದಕ್ಕೇ ನಮ್ಮ ಕೊರಳಪಟ್ಟಿ ಏರ್ಪಾಡು. ನಮ್ಮ ಕೊರಲಿಗೆ ಅದರದು ಬಿದ್ದರೆ ಫೈಸಲಾಯಿತು. ಇನ್ನು ಮುಂದೆ ನನ್ನ ನಾಯಿ ಇದು; ಅದರದು ನಾನು ಎಂದು. ಇನ್ನೊಬ್ಬರು ನಡುವೆ ಕೈಯಿ, ಬಾಯಿ ಹಾಕದಂತೆ ನಾತಿ ಚರಿತವ್ಯಂ, ನಾತಿ ಚರಾಮಿ-ಎಂಬ ಗೊತ್ತು ನಿರ್ಬಂಧಗಳನ್ನು ಹಾಕಿಕೊಂಡರೆ ಸರಿ. ಇಲ್ಲವಾದರೆ ಎಲ್ಲ ಅಲಾಲ್‌ಟಪ್ಪಿ ಆಗುತ್ತದೆ. ಯಾವುದರಲ್ಲಿಯೂ ಸ್ತಿಮಿತವಿರದು; ಯಾವುದಕ್ಕೂ ಅಶಾಂತಿ, ಉದ್ವೇಗ ಉಂಟಾಗುತ್ತದೆ. ಅದು ರಾಗದ್ವೇಷಗಳ ಹುತ್ತವೂ ಆಗುತ್ತದೆ. ದಿನಕ್ಕೆ ಒಂದರಂತೆಯೊ ತಿಂಗಳು ವರ್ಷವೊಂದಕ್ಕೊ ಇದು ಅದನ್ನು ಬಿಟ್ಟು ಇನ್ನೊಂದನ್ನು ಹುಡುಕಿಕೊಂಡು ಹೋಗುವ ವಾಡಿಕೆಯಾದರೆ ಎಷ್ಟು ದಾಹ, ಊಹಾಪೋಹ, ಆಸೆ, ಸಂಮೋಹ, ಸಂದೇಹ, ಅನಿಶ್ಚಯ? ಎಷ್ಟು ಧಾವತಿ ಜೀವಕ್ಕೆ? ಸಿಕ್ಕಿದರೆ ಆಯಿತು, ಇಲ್ಲವಾದರೆ? ಅಥವಾ ತನ್ನದಕ್ಕೆ ಇನ್ನಾವುದು ಎರಗುತ್ತದೆಯೊ! ಇನ್ನೊಂದರಿಂದ ಮತ್ತೊಂದನ್ನು ಮರೆಮಾಡುವುದು ಹೇಗೆ? ನನ್ನದನ್ನು ಮುಟ್ಟಿದರೆ ನೋಡೋಣಂತೆ. ನಾನು, ಅದು, ಆ ಇನ್ನೊಂದು; ಮೂರರಲ್ಲಿ ಯಾವುದೂ ಉಳಿಯುವುದು ಶಕ್ಯವಿಲ್ಲ ಎಂಬ ಅಂಧಕ್ರೋಧ ಕವಿದೀತು. ರಾಗದ್ವೇಷಗಳ ಪ್ರಪಂಚ ಅದು. ಇಂಥ ತಲ್ಲಣಗಳೇಕೆ ಜೀವಕ್ಕೆ? ನನಗೆ ಅನ್ನಿಸಿದೆ-ಮದುವೆ ಎಂಬುದನ್ನು ಸಮಾಜ ಯಾವ ದಿನ ನಿಶ್ಚಯ ಮಾಡಿತೊ ಅಂದು ಮಾನವ ಜನ್ಮದಲ್ಲಿ ಅತಿ ದೊಡ್ಡ ಶಿಸ್ತು, ಘಟ್ಟ, ಸಂಸ್ಕಾರ ಕ್ರಿಯೆ-ಅಷ್ಟೇ ಏನು, ಒಂದು ಹೊಸ ಯುಗವೇ ಆರಂಭವಾಯಿತು. ಏರ್ಪಟ್ಟಿತು. ಮದುವೆ ಆದ ದಿನವೇ

ಪ್ರತಿ ಮನೆಯಲ್ಲಿಯೂ ಯುಗ ಏರ್ಪಡುತ್ತದಲ್ಲವೆ? ಅಂದು ಇಟ್ಟ ಹೆಜ್ಜೆ ಸಮಸ್ತ ಹಿತಗಳನ್ನೂ ಸಂಗತಿಗಳನ್ನೂ ಸಾಧಿಸುವುದಕ್ಕೆ ಒದಗಿತು ಎಂದು. ನರಜಂತುವಿನ ತಾಪ ತಂಪಿ ಜೀವ ತಣ್ಣಗಾಯಿತು. ಸಂತತ ಒಲವರಕೆ, ಭಿಕ್ಷೆ ; ಬೇಟೆ, ಬೇಟ-ದೇಹಕ್ಕೆ, ಮನಸ್ಸಿಗೆ ಜೇಬಿಗೆ ; ಉಳಿದೆಲ್ಲ ಕೆಲಸಕ್ಕೆ, ಕಾಲಕ್ಕೆ ಎಲ್ಲಕ್ಕೂ ತೊಂದರೆಯೇ ; ನಷ್ಟವೇ, ಕಷ್ಟವೇ.

ರಕ್ತದ ಒತ್ತಡ ಕಡಮೆಯಾಯಿತು. ತಳಮಳ ಅಶಾಂತಿ ನಿಂತಿತು. ಒಂದಕ್ಕೆ ಒಂದು ಗೊತ್ತಾಯಿತು. ಯಾವಾಗೆಂದರೆ ಆಗ, ಎಷ್ಟೆಂದರೆ ಅಷ್ಟು ತೃಪ್ತಿ ನೆಮ್ಮದಿ ಪಡೆಯುವ ಅವಕಾಶ ಸಿಕ್ಕಿತು. ಅಲ್ಲಿಯವರೆಗೆ ಲೋಕದ ಕಣ್ಣು ಅದರ ಮೇಲೆ ಇರುತ್ತದೆ. ಮದುವೆಯಾಗದವರ ಬೇಟವನ್ನು ಕುರಿತೇ ಎಲ್ಲರ ಲಕ್ಷ್ಯ ; ಆಕ್ಷೇಪಣೆ ಮಾತು, ಟೀಕೆ. ಅಯಿತೆನ್ನಿ. ಈಗ ಮುಗಿಯಿತು. ಲೋಕ ಅದನ್ನು ಅದರಷ್ಟಕ್ಕೆ ಕೈಬಿಟ್ಟು ಇನ್ನೊಂದಕ್ಕೆ ತೊಡಗುತ್ತದೆ.

ಇತ್ತ ಈ ಜೊತೆಗೆ ಇನ್ನೊಂದನ್ನು ಅರಸಬೇಕಾದ ಅಗತ್ಯವಿಲ್ಲವಾಯಿತು. ಮುಂದೆ ಇದಕ್ಕಾಗಿ ಬದುಕಿಯೇನು; ಇದನ್ನು ಬೆಳಗಿಯೇನು; ಉಡುಗೆ ತೊಡುಗೆ ಇದಕ್ಕಾಗಿ ಸಂಗ್ರಹಿಸಬೇಕು; ಮನೆ ಮಾಡಿ ಆಸ್ತಿ ಮಾಡಿಯೇನು; ಅದಕ್ಕೆ ಕೈಕಾಲು, ಸೊಂಟ, ಕುತ್ತಿಗೆ ಎಲ್ಲಕ್ಕೂ ಬಳೆ, ಚೈನು, ಘಟ್ಟರು ಹಾಕಿಯೇನು. ಮುತ್ತು ರತ್ನ ಚಿನ್ನವಾದರೆ ಅದೇ ತೊಡವಾಗುತ್ತದೆ. ನನಗಾಗಿ ಅದು, ಪಾಪ, ನಿರೀಕ್ಷಿಸುತ್ತ ಕಾದು ಬಿದ್ದಿರುತ್ತದೆ; ನನಗಾಗಿ ಬದುಕುತ್ತದೆ, ಶುಚಿಯಾಗಿರುತ್ತದೆ. ನಾನೊಂದೇ ಅದಕ್ಕೆ ಗತಿಮತಿ ; ನನ್ನೊಬ್ಬನಿಗೇ ಇದರ ಪ್ರಯೋಜನ ಎಂದು ತೀರ್ಮಾನವಾಗುತ್ತದೆ. ಒಂದರಿಂದ ಒಂದಕ್ಕೆ ಸಂತೋಷ, ತೃಪ್ತಿ ; ಹೌದು, ತೃಪ್ತಿ : ನೆತ್ತರಲ್ಲಿ, ಬಗೆಯಲ್ಲಿ, ಎದೆಯಲ್ಲಿ. ಎಂದ ಕೂಡಲೇ ಎಲ್ಲ ಭಕ್ತಿಗೂ ಪ್ರೀತಿಗೂ ನಿರ್ವಂಚನೆಯಿಂದ ಕೂಡ, ಸ್ವನಿವೇದನೆಗೂ ಅವಕಾಶವಾಗುತ್ತದೆ. ದಿನ ಬೆಳಗಾದರೆ ಕಾಮಸಾಧನೆಯ ಚಿಂತೆಯಿಲ್ಲದೆ, ಬೇರೊಂದನ್ನು ಹುಡುಕುವ ಅಗತ್ಯವಿಲ್ಲದೆ, ಒಡಲು ಸಮಧಾತುವಿನಲ್ಲಿ ನಡೆಯುತ್ತದೆ. ಸ್ವಲ್ಪ ತಂಗಳಾದೀತು, ಅಲ್ಪವಾಗಿ ಬೇಸರವಾದೀರೇನೊ. ಒಂದಕ್ಕೇ ಕಚ್ಚಿಕೊಂಡ, ಒಂದಕ್ಕೇ ಅಂಟಿಕೊಂಡ ಮನಸ್ಸು ಅಷ್ಟೇನೂ ನವನವೋನ್ಮೇಷವಾದ ಜಾಗ್ರತೆಯಲ್ಲಿರುವುದಿಲ್ಲ ನಿಜ. ಮನೆ ಅಡಿಗೆ ಎಷ್ಟು ರುಚಿಯಾಗಿದ್ದರೂ ರುಚಿಯಲ್ಲ ; ಮನೆ ಹೆಂಡತಿ ಗಂಡ ಹಾಗೇ ಅನ್ನಾರೆ. ಆದರೆ ಅದರ ಸಮಧಾತು ದೊಡ್ಡ ಭಾಗ್ಯ. ಯಾವ ವ್ಯಗ್ರತೆ, ತೀವ್ರತೆ, ವೇದನೆ, ಯಾವ ಭಂಗವೂ ಇರುವುದಿಲ್ಲ. ಸಪ್ಪೆ ಎಂದೀರಿ. ಇನ್ನಾವುದನ್ನೊ ಸಾಧಿಸುವುದಕ್ಕಾಗಿ ಸಪ್ಪೆಯನ್ನೂ ಸಹಿಸಬೇಕು: ದೇಹ ಮನಸ್ಸುಗಳ ಆರೋಗ್ಯಕ್ಕಾಗಿ. ಹೆಚ್ಚು ಉಪ್ಪು, ಹುಳಿ, ಕಾರ ಮೈಗೆ ಒಳ್ಳೆಯದಲ್ಲವೆನ್ನುತ್ತಾರೆ. ಚಪಲ, ಚಂಚಲ, ವೈವಿಧ್ಯಗಳ ಚಿಂತೆ ಯಾವುದೂ ಸಲ್ಲ. ದೇಹದ ಆಸೆ ಒಂದು ನಂದಿ ತಣ್ಣಗಾದರೆ ಜೀವನದ ಸಂಪತ್ತಿಯಾದ ಇನ್ನಷ್ಟು ಶಾಸ್ತ್ರ, ವಿದ್ಯೆ, ಕಲೆ, ದರ್ಶನ, ವಿಜ್ಞಾನ,

ಶಿಲ್ಪ, ತಂತ್ರ, ವ್ಯಾಪಾರ, ವ್ಯವಹಾರ ಎಲ್ಲ ನಮ್ಮ ಇಷ್ಟದಂತೆ ಒದಗುತ್ತದೆ ; ಫಲಿಸುತ್ತದೆ. ಮನೆಯಲ್ಲಿ ಕಾದಿರುವ ಜೀವ ಗುರಿಯ ಕಡೆ-ಮನೆಯ ಕಡೆ ನಡಸಿದರೆ ಮನಸ್ಸು ವ್ಯವಹಾರದಲ್ಲಿ ಬೇಕಾದಂತೆ ನಡೆದು ಸಂಪನ್ನವಾಗಲೂ ಫಲಸಾಧನೆ ಮಾಡಲೂ ಶಕ್ಯವಾಗುತ್ತದೆ. ಅದರಿಂದ ಇದಕ್ಕೆ, ಇದರಿಂದ ಅದಕ್ಕೆ ಸ್ಥಾನ ಗೌರವ ಎಲ್ಲ ಬರುತ್ತವೆ, ಶಕ್ಯವಾಗುತ್ತವೆ. ಆದುದರಿಂದಲೇ ಮದುವೆ ಒಂದು ಸಂಸ್ಕಾರಕ್ರಿಯೆ ಎಂದದ್ದು. ಹೆಂಡತಿ ಇಲ್ಲದ ಮುದಿ ಬ್ರಹ್ಮಚಾರಿಗೆ ಯಾರು ದಿಕ್ಕು? ರೋಗ-ರುಜಿನಕ್ಕೆ ನೋಡಿಕೊಳ್ಳುವವರು ಯಾರು? ಸತ್ತರೆ ಅಳುವವರು? ದಫನ್ ಮಾಡಲು ಹೇಳುವುದು ಯಾರಿಗೆ? ಮುನಿಸಿಪಾಲಿಟಿ ಹೆಣವಾಗೋದೆ? ಆಸ್ಪತ್ರೆಯದೊ : ಗತಿ? ನಾಳೆ ತಿಥಿ? ಇವನ ಪಿತೃಗಳ ಶಾಪ? ಅವರು "ಧೌತಾಶ್ರು ಶೇಷಮುದಕಂ ಪಿತರಃ ಪಿಬಂತಿ" – ಕಣ್ಣೀರು ಕುಡಿಯಬೇಕಾಗುವುದಂತೆ. ಸರಪಳಿ ಇದು.

ವ್ಯವಹಾರಕ್ಕೆ ಮಾತ್ರವೇ ಏನು, ಸಮಾಜ ಧರ್ಮವೆಲ್ಲ ಮದುವೆ ಮನೆಗಳ ಮೇಲೆ ನಿಂತದ್ದು. ಕುಟುಂಬಿಯಿಂದ ತಾನೆ ಆಸರೆ, ಆತಿಥ್ಯ? ಹತ್ತು ಮಂದಿಯ ಸಂತೋಷಕ್ಕೆ ಎಡೆ ಮಾಡಿಕೊಡಬೇಕಾದ ಸೌಕರ್ಯ ರಚನೆ, ಬಂಧು ಬಳಗ ಗೋಷ್ಠಿ, ಗಾನ, ಪೂಜೆ, ಪುರಸ್ಕಾರ ಎಲ್ಲವೂ ಇದರಿಂದ ಹುಟ್ಟಿದ್ದು ; ಅಥವಾ ಇದಕ್ಕಾಗಿ. ಸಂಸಾರ ನಿತ್ಯಕರ್ಮವಾಗಿ ಲೋಕವನ್ನು ಹಿಡಿದು ನಿಲ್ಲಿಸಿದೆ. ಕರ್ಮ ತಪ್ಪೆಂದವರು ಯಾರು ? ಶ್ರೌತ ಸ್ಮಾರ್ತರಲ್ಲಿ ಇದರಿಂದ ಬಿಡಿಸಿಕೊಳ್ಳುವ ಅಗತ್ಯ ಯಾರಿಗೆ ? ಕರ್ಮ ಯಾರಿಗೆ ಬೇಸರವೊ ಕಷ್ಟ ನಷ್ಟ ಅವರಿಗೆ. ನಮಗೆ "ನಹಿ ಕಶ್ಚಿತ್ ಕ್ಷಣಮಪಿ ಜಾತುತಿಷ್ಠತಿ ಅಕರ್ಮಕೃತ್" -ಎಂದು ವಿಶ್ವಕುಟುಂಬಿ ಕೃಷ್ಣನೇ ಹೇಳಿರುವಾಗ ಹುಟ್ಟು, ಮದುವೆ, ಸಾವು ಅಪರ್ಯಂತವಾದ ನೆಲಸು. ಇದಿಲ್ಲವಾದರೆ ಪ್ರಪಂಚವಿಲ್ಲ! ಕ್ರಿಮಿ ಕೀಟಗಳಿಂದ ಹಿಡಿದು ಸಮಸ್ತ ಜೀವಲೋಕವೂ ವ್ಯಾಪಿಸಿದ ಈ ದಾಂಪತ್ಯದಿಂದಲೇ ಪ್ರಪಂಚ ಪ್ರಪಂಚವಾಗಿರುವುದು, ತುಂಬಿರುವುದು. ಈ ತುಂಬನ್ನು ಕಂಡು ನಿರ್ಭಾಗ್ಯರಿಗೆ ಅಸೂಯೆ.

ಕಾಮಕ್ಕೆ ಕಣ್ಣಿಲ್ಲವೆನ್ನುವುದು ಒಂದು ಅರ್ಥದಲ್ಲಿ ಮಾತ್ರ ನಿಜ. ಕಣ್ಣು ಸೆಳೆ ನಡಸಿದಂತೆ ಮೋಹ ಬೆಳೆಯುತ್ತದೆ. ಆದರೆ ಇಂದಿನ ಕಾಲದಲ್ಲಿ ಸ್ವಭಾವಗಳನ್ನು ಅರಿಯಲು ನಮ್ಮ ದೇಶದಲ್ಲಿಯೂ ಅವಕಾಶಗಳಿರುತ್ತವೆ. ಒಂದು ಹೆಣ್ಣೊ ಗಂಡೊ ತನಗೆ ಒಪ್ಪೀತೆ ಎಂದು ಅರಿತುಕೊಳ್ಳಲು ಸೌಕರ್ಯಗಳಿರುತ್ತವೆ. ಇಷ್ಟರ ಮೇಲೆ ಇದನ್ನು ಅಳೆದು ಸುರಿದು ನೆರವೇರಿಸುವುದು ಸಭ್ಯವಲ್ಲ. ಮಾಡಬೇಕಾದ್ದೇನು ? ತುಂಬಾ ಯೋಚನೆ ಮಾಡಬಾರದು ಕೂಡ. ಸ್ವಲ್ಪ Speculation, ಸ್ವಲ್ಪ Risk ಇರಲಿಯೇಳಿ. ಜೀವ ಒಂದು ಬಳಂಗ್ ಆಟ, ಉಂಗುರವೆಸೆದೆವು. ಗುರಿಗೆ ತಾಕಿತೇ, ತಾಕಿತು ; ಗೂಟಕ್ಕೆ ಬಿತ್ತೇ ಬಿತ್ತು. ಇಲ್ಲವೇ ಇಲ್ಲ. ಏನು ಮಾಡುವುದು? ನೂರಕ್ಕೆ ನೂರು ಪೈಸೆ

ಸುಖ ಸಿಕ್ಕದಾದರೆ ಜಿಂಪ್ಸಿಗೆ ಸಿಕ್ಕದೆ? ಜಿಂ ಸೆಕಂಡ್ ಕ್ಲಾಸ್. ನಮ್ಮಲ್ಲೆಷ್ಟು ಜನಕ್ಕೆ ಸೆಕಂಡ್ ಕ್ಲಾಸ್ ಕೇಳದೆ ಕೂಡ ಸಿಕ್ಕುತ್ತದೆ? ಹಲವರಿಗೆ ೬-೭ ಅಂಥ Grace ದುಡಿಸಿ ಪಾಸ್ ಮಾಡಿಸುವುದಿಲ್ಲವೆ? ಅಷ್ಟಾದರೂ ತೃಪ್ತಿಯೇ- ಲೋಕದ ಹೆಚ್ಚು ಜನಕ್ಕೆ ಹೆಚ್ಚು ತೃಪ್ತಿಯನ್ನು ತಂದಿರುವ ಮದುವೆಯ ಉಪಕಾರ ಅಳತೆಗೆ ಮೀರಿದ್ದು.

ಅತಿಗೆ ಹೋಗಬಲ್ಲವರು ಕೆಲವರಿರುತ್ತಾರೆ-ಅದೊಂದು ಅದಿ ಭೌತಿಕ ಶ್ರೀಮಂತ ವರ್ಗ. ಕೆಲವರು ಸಹಜ ಅನಾಸಕ್ತರು, ಮುಕ್ತರು, ಅತೀತರು. ಅವರಿಗೆ ಏನೂ ಬೇಡ. ಬೇಕಾಗಿರುವ ಸ್ಥಿತಿ ಒಳ್ಳೆಯದು ಒಬ್ಬರಿಗೆ, ಕೆಟ್ಟದ್ದು ಇನ್ನೊಬ್ಬರಿಗೆ. ಅವರಲ್ಲಿ ಒಂದು ವರ್ಗ ಲೋಕಕ್ಕೆ ಆದರ್ಶರು. ಅವರ ನಿಲವಿಂದಾಗಿಯಲ್ಲ, ಕೋಟಿ ಮಂದಿ ತಾವು ಗೆಲ್ಲಲಾಗದ ಕಡೆ ಇಂಥ ಒಬ್ಬರು ಇಬ್ಬರು ನಿರ್ಮೋಹರಾಗಿರಬಲ್ಲರಲ್ಲ ಎಂದು. ಯತಿ ಋಷಿ ಸಮಾನರು ಅವರು; ಇನ್ನೊಬ್ಬರಿಗೆ ಯಾವುದೂ ಎಷ್ಟೂ ಯಗ್ಗಿಲ್ಲ. ಎಷ್ಟು ಹೆಣ್ಣು ಎಷ್ಟು ಗಂಡಾದರೂ ಸಾಲದು; ಅದರ ಬಯಕೆ ಒಂದು ಗೀಳು; ಜ್ವರ; ಒಂದು ರೋಗ ; ಆ ಬಗೆಯಲ್ಲಿ ಒಂದು ಕಲಾವಂತ ವರ್ಗವುಂಟು; Don Juan, Casanova, Lucrezia Borgia, Fanny Hill, Cleopatra ಮುಂತಾದವರ ತಂಡ. ಎಷ್ಟು ಮಂದಿಯನ್ನು ಎಂಥೆಂಥವರನ್ನು ತಮಗೆ ಒಳಗುಮಾಡಿಕೊಂಡಿದ್ದೇವೆ, ಕೊಳ್ಳಬಲ್ಲೆವು ಎಂದು ತಮ್ಮ ಗೆಲವನ್ನು ಗುರುತಿಸಿಕೊಳ್ಳುವವರು ಅವರು. ಅವರಲ್ಲಿ ಹೃದಯವುಂಟೊ ಇಲ್ಲವೊ ಸುಖ ಕೊಳ್ಳುವಾಗ, ಕೊಡುವಾಗ. ಆ ಮನಸ್ಸಿನಲ್ಲಿ ಯಾವ ಅಂಶ ಆಧಿಪತ್ಯ ಮಾಡುವುದೊ ಗೊತ್ತು ಹಚ್ಚುವುದು ಕಷ್ಟ. ಆದರೂ ಅದೊಂದು ಜಾತಿ ನರದಿನಿ ವರ್ಗ. ತನಗೆ ಬೇಕೆಂಬವರನ್ನು ತನಗೆ ಮಾಡಿಕೊಂಡು ಹಿಂಡಿ ಹೀರಿ ಹಿಪ್ಪೆ ಮಾಡಿ, ಉತ್ತರಕ್ಷಣದಲ್ಲಿ ತಾವು ನಾಶ ಮಾಡಿದುದರ ಕಡೆ ಮಾನವೀಯ ಒಂದು ಕಟಾಕ್ಷ ಬೀರಲು-ಹಕ್ಸ್‌ಲಿ ಕಾದಂಬರಿಯೊಂದರಲ್ಲಿ ಒಂದು ಗಂಡು 'Spandrell' ಒಂದು 'Lucy' ಮಾದರಿ ಸಿಕ್ಕುತ್ತದೆ-ಮನಸ್ಸು ಬಾರದ ವರ್ಗ; ಇಂಥವರಿಂದ ಸಮಾಜವನ್ನು ಕಾಪಾಡಬೇಕಾದ ಅಗತ್ಯವುಂಟು. ಅವು ತೋಳಗಳು, ನಕ್ರಗಳು. ಇವೆರಡು ಉತ್ಕಟ ವರ್ಗಗಳು – ಗಂಡು ಹೆಣ್ಣಿನ ಬಾಂಧವ್ಯದ ಅತ್ಯರ್ಥದಲ್ಲಿ-ಧ್ರುವ ರೇಖೆಗಳು. ಅದಕ್ಕೆ ಯಾರು ಶಾಸನ ಮಾಡಬಲ್ಲರು? ಒಂದಕ್ಕೆ ಶಾಸನ ಬೇಡ; ಶಾಸನಕ್ಕೆ ಮೀರಿದ್ದು ಅದು. ಇನ್ನೊಂದು ಶಾಸನಕ್ಕೆ ಬಗ್ಗದು; ಒಗ್ಗದು: ಎಲ್ಲವನ್ನೂ ಮುರಿವ ಪ್ರವೃತ್ತಿಯದು. ಕಾನೂನು, ಕಟ್ಟಳೆ ಸಭ್ಯರಾದ ನಿಮಗೆ ನಮಗೆ, ಸಾಮಾಜಿಕರಿಗೆ. ಯಾವುದು ಕಟ್ಟು ಕಟ್ಟಳೆ, ಅದಕ್ಕೆ ಸಂಬಂಧಿಸಿದಂತೆ? ನೀತಿ, ಒಡಂಬಡಿಕೆ, ನಂಬಿಕೆ, ವಿಶ್ವಾಸ ಸಾಕು. ಅದು ಒದಗಿಸಿ ಕೊಡುವ ಸಂತೋಷ, ನೆಮ್ಮದಿ ಬೇರಿನ್ನಾವ ಏರ್ಪಾಡಿನಿಂದಲೂ ಬರತಕ್ಕದ್ದಲ್ಲ, ಸಾಮುದಾಯಿಕ ಜೀವನದಲ್ಲಿ ಇಷ್ಟು ಯಥೇಷ್ಟ. ಇದೊಂದು ತರಕಾರಿಯ ಬದುಕು ಎನ್ನುವವರು ಎಂದುಕೊಳ್ಳಲಿ.

Be married and damned ಎಂದೀರಲ್ಲ ; – Don't be, be no less damned ಎನ್ನುವುದಕ್ಕಿಂತ ಮೇಲಲ್ಲವೆ ಆ ಸ್ಥಿತಿ? ಹಲವೇಳೆ ಆ ಸ್ಥಿತಿಯನ್ನು ಬಯಸಿ, ಕಾದು, ಸಮಯ ಒದಗಿದಾಗ ಅದಕ್ಕೆ ಅರಳಿ, ಹಿಗ್ಗಿ ಅದರ ಹರ್ಷಗಳನ್ನು ಉಂಡು, ಆ ಬಾಳಿನೆಲ್ಲ ನೆಮ್ಮದಿಗಳನ್ನೂ ಪಡೆವ ಬದುಕಿನ ವಿಲಾಸ ತುಂಬಾ ಹಿತ, ತುಂಬಾ ಆಪ್ಯಾಯಕರವಾದ್ದು. ಜೀವನದ ಭೋಗಭಾಗ್ಯದ ಒಂದು ಹೊನಲು ತುಂಬಿ ಅಂಥಲ್ಲಿ ಹರಿಯುತ್ತದೆ. ದಾಹಗಳಾರಲು, ಜೀವಪೋಷಣೆ ಆಗಲು; ಲಹರಿ ಪ್ರವಾಹಗಳನ್ನು ನಡಸಲು; ಸುರಕ್ಷಿತವಾಗಿ ಕಡೆಗೆ ಹಾಕಲು; ಉದ್ಧಾರ ಮಾಡಲು.

# ಬದನೆಕಾಯಿ

ತಾಯಿ ಸರಸ್ವತಿ, ನೀನು ಹಿಂದೆ ಇಂಥ ಕೆಲಸ ಮಾಡಿದ್ದೆಯೊ ಇಲ್ಲವೊ. ಇಂದಂತೂ ನಿನ್ನ ಹರಕೆ ನನ್ನ ಈ ಕಾರ್ಯಕ್ಕೆ ಒಲಿಯಬೇಕು. ಇಲ್ಲವಾದರೆ ಇದು ಸುಗಮವಾಗದು. ಅಷ್ಟು ಅಗಾಧ ಇದರ ಮಹಿಮೆ; ಅಷ್ಟು ವಿಶಾಲ ಇದರ ವ್ಯಾಪನೆ. ನಮ್ಮ ದೇಶದಲ್ಲಂತೂ ಎಷ್ಟೊ ಮಂದಿ ಇದಕ್ಕೆ ಮಾರು ಹೋಗಿದ್ದಾರೆ; ಎಷ್ಟೊ ಬಗೆಯ ರಸಾಸ್ವಾದನೆ ನಡೆದು ಇದು ಸ್ವಾದು ಹರಿಸಿದೆ. ಆದರೂ ಮೈಲಿಗೆ, ಅಪಥ್ಯ, ಅಷ್ಟು ದಿವ್ಯವಲ್ಲದ ಪ್ರಸಂಗವೆಂದು ತಿಳಿಯದ ಅನೇಕರಿಗೆ ಅದರಲ್ಲಿ ಅಸಡ್ಡೆ. ಆದ್ದರಿಂದ ಇಂದು ನನ್ನ ಮನಸ್ಸಿಗೆ, ಲೇಖನಿಯ ಮಸಿಗೆ, ಅಲ್ಲಿಂದ ಈ ಅಕ್ಷರಕ್ಕೆ ನಿನ್ನ ಕೃಪೆ ತಿರುಗಿದರೆ, ಉದ್ದಕ್ಕೂ ಸುಳಿದು ಜೀವ ತುಂಬಿದರೆ ಈ ಬದನೆಯ ಲೇಖನ ದಿವ್ಯವಾಗುತ್ತದೆ. ಇದೇನು ಬದನೆಕಾಯಿ ಬರೆದಿದ್ದಾನೆ ಎಂದು ಯಾವ ಕಿರುಕುಳರೂ ಆಗ ಮೂಗು ಮುರಿಯದಂತೆ ಆಗುತ್ತದೆ.

ಇನ್ನೊಂದು ಕಾರಣ : ಅದನ್ನು ನಿನ್ನ ಗಂಡ ಬ್ರಹ್ಮ ನಿರ್ಮಾಣ ಮಾಡಿದನೊ ಇಲ್ಲವೊ ನಾನರಿಯೆ : ವಿಶ್ವಾಮಿತ್ರನ ಸೃಷ್ಟಿ ಎಂಬುದು ಅದು. ಆದರೆ ಗುಣಕ್ಕೆ ಮತ್ಸರವೆ? ನಿನ್ನ ಗಂಡ ಮತ್ಸರಿಯಾದರೆ ನೀನು ಹಾಗೆ ಆಗಲಾರೆ ; ಸೃಷ್ಟಿಗೆ ಪ್ರತಿ ಸೃಷ್ಟಿ ಮಾಡಬಲ್ಲ ತಪಸ್ಸಿಗೆ, ಅಭಿಮಾನಕ್ಕೆ ನಿನಗೂ ಅಭಿಮಾನವೇ ಬರಬೇಕು. ನೀನು ಅವನ ಬಾಯಿಂದ ಹೊರಟ ಮೊದಲ ಸೃಷ್ಟಿ. ಈ ಸಂಗತಿಯನ್ನು ನಾನು ಬಲ್ಲೆ. ಯಾವುದು ತೇಜಸ್ಸಾಧನೆಗೆ ಮೂಲ ಮಂತ್ರವೊ ಆ ಗಾಯತ್ರಿಯ ಋಷಿ ವಿಶ್ವಾಮಿತ್ರ. ಮಾನವ ವ್ಯಕ್ತಿಗೆ ನಮ್ಮಲ್ಲಿ ಎಂದಾದರೂ ಪ್ರಾಧಾನ್ಯ ಯಾರಿಂದಲಾದರೂ ಬಂದಿರುವುದಿದ್ದರೆ ಅದು ಆತನಿಂದ ಮಾತ್ರ. ವಸಿಷ್ಠರ ಪ್ರಾಧಾನ್ಯ ಬೆಳೆದು ವಿಶ್ವಾಮಿತ್ರನ ಕೀರ್ತಿ ಮರೆಯಾಗಿ ನಮ್ಮ ನಾಗರಿಕತೆ ಕುಂದಿದೆ ಅನ್ನಿಸಿದೆ ನನಗೆ. ಆದ್ದರಿಂದ ಮನುಷ್ಯನ ಸೃಷ್ಟಿಯನ್ನು ನೀನು ಒಪ್ಪಿಕೊ. ಅದು ಆಟಗಾರಿಕೆಯ ಧರ್ಮವೆಂದಾದರೂ ಎಣಿಸು. ಈ ಒಂದಕ್ಕೆ ಅವನಿಗೂ ನನಗೂ ಅದಕ್ಕೂ ಒಲಿ. ನಿನ್ನ ಗಂಟೇನೂ ಹೆಚ್ಚಾಗಿ ಖರ್ಚಾಗುವುದಿಲ್ಲ. ನಿನ್ನ ಕೀರ್ತಿ ಅತಿಶಯವಾಗುತ್ತದೆ. ನಿನಗೆ ಹೇಗೆ ಗೊತ್ತು ಎಂದು ಕೇಳಬೇಡ. ನನಗೆ ಗೊತ್ತು.

ನಿನ್ನ ಗಂಡ ಅದನ್ನು ಸೃಷ್ಟಿಸಲಿಲ್ಲವೆಂದೊ, ಅದು ವಿಶ್ವಾಮಿತ್ರ ಸೃಷ್ಟಿಯೆಂದೊ ಅದಕ್ಕೆ ಮಡಿ, ಪವಿತ್ರತೆ ಬಂದಿಲ್ಲ ಎಂಬುದನ್ನು ಬಲ್ಲೆ. ಎಂದಿನಂತೆಯೇ ಇಂದೂ : ಇಲ್ಲಿ ಬಲಿತಿರುವುದು ಸಂಪ್ರದಾಯದ ಕಾರ್ಪಣ್ಯ. ಋಷಿಗಳಲ್ಲಿ ಹೇಗೊ ಪಿತೃಗಳಲ್ಲಿಯೂ ಹಾಗೇ ; ಪಕ್ಷಪಾತ. ಋಷಿಪೂಜೆ ಮಾಡುತ್ತಿದ್ದವರ ರುಷೆ, ಮುನಿವು, ಬೇಗೆ ಈ

ಪಿತೃಗಳಿಗೂ ಬಂದರೆ ನಾವೇನು ಮಾಡುವ ಹಾಗಿದೆ ? ನಮ್ಮ ಕೈ-ಲೋಕ, ಮೀರಿ ಹೋಗಿದ್ದಾರೆ ಎಲ್ಲಿಗೋ ಅಲ್ಲಿಗೆ. ಋಷಿಗಳೇ ಕೆಲವರು ರೂಕ್ಷರಾಗಿ, ಪ್ರಾಕೃತರಾಗಿ, ಕರ್ಕಶರಾಗಿ ಇರುತ್ತಿದ್ದರು – ಇವರೂ ಹಾಗೆಯೇ ಆದರೆ ನಾವು ತಡೆವುದು ಹೇಗೆ? ಅವರ ಸಂತೋಷ, ಗತಿ ಅವರಿಗೆ. ಅವರು ಸತ್ತು-ಸ್ವರ್ಗದಲ್ಲಿಯೊ –ಸ್ವರ್ಗದಲ್ಲಿಯೇ ಇರಬೇಕು. ನಮ್ಮ ಪಿತೃಗಳಲ್ಲವೆ, ಬೇರೆಲ್ಲಿಗೆ ಹೋದಾರು ? –ಇದ್ದಾಗ ಬದನೆಯ ವ್ಯಂಜನ ಅವರಿಗೆ ಸಲ್ಲದಂತೆ. ಅದು ಅವರ ಇಷ್ಟವೊ, ಋಷಿನೇಮವೊ, ಬ್ರಾಹ್ಮಣಾರ್ಥದ ಪುರೋಹಿತರ ಶಾಸನವೊ-ಅಂತೂ ಬದನೆ ಪಲ್ಯ, ಹುಳಿ, ಭಾತು ಅವರಿಗೆ ಕೂಡದೆಂದು ನಿಷೇಧ ಮಾಡಿದ್ದಾರೆ. ಗಡ್ಡ, ಜಡೆ, ಉಪವಾಸ, ಸಮಾಧಿಗಳ ಸಂಧಾನ, ಆ ಕೆಂಗಣ್ಣು, ಆ ನಿಷ್ಠುರ – ನಮಗೆ ಭಯವಪ್ಪ. ಪಿತೃಗಳಿಗೆ ಸ್ವಯಂ ಜೀವಕಾಲದಲ್ಲಿ – ಈಗಲೂ ಏನೊ – ಇಷ್ಟವಿದ್ದರೂ ಇವರು ಬೇಡವೆಂದರೆ ಬೇಡ... ಬದುಕಿರುವ ನಮಗೆ ಮಾತ್ರ ಅಂಥ ಅಡ್ಡಿ ಬೇಡ. ಪಿತೃಕಾರ್ಯಗಳಿಗೆ ಆಗದಿದ್ದರೆ ಹೋಗಲಿ. ನಷ್ಟವೇನು ? ಕಷ್ಟವೇನು? ದಿಂಡು, ಗೆಣಸು, ಮುಳ್ಳು ಹಲಸು, ಅಂಟು ಬೆಂಡೆ, ಕಹಿಹಾಗಲ, ಬಾಳೆ, ದಂಟು, ನಾಲಿಗೆ ತುರಿಸುವ ಕೆಸವೆ ತಿನ್ನಲಿ; ಅವರ ಹಣೆಯಬರಹ. ನಮ್ಮ ಕಾಲಕ್ಕೆ ವಿಶ್ವಾಮಿತ್ರನ ಮಹಾಕೃತಿಯಾಗಿ ಬದನೆ ಬಂದಿದೆ. ಬಲ್ಲವರೇ ಬಲ್ಲರು ಬದನೆಯ ರುಚಿಯ. ಅದನ್ನು ನಾಲ್ಕು ಪುಟಗಳಲ್ಲಿ ವರ್ಣಿಸಿ, ಆ ಋಷಿಗೆ ವಂದನೆ ಸಲ್ಲಿಸುವ ಅವಕಾಶವನ್ನು ನೀನು ಮಾಡಿಕೊಡು, ತಾಯಿ. ಎಂದಿಗಿಂತ ಹೆಚ್ಚಿನ ಔದಾರ್ಯ, ಸಂಪನ್ನತೆ ಬೇಡುವವನಲ್ಲ. ಇದು ಪದ್ಯವಲ್ಲ, ನಾಟಕವಲ್ಲ; ವಿಮರ್ಶೆ ಮೊದಲೇ ಅಲ್ಲ. ಮಾಗೃಧಃ ಎಂಬ ವಾಣಿ ನಮ್ಮ ಹೃದಿಸ್ಥ ; ಗೃಧೆ ನನಗಂತೂ ಎಂದೂ ಇಲ್ಲ. ನೀನು ಹರಸಲಾರೆನೆಂದರೆ ಹೋಗಲಿ; ಅಡ್ಡಿಯಾಗಬೇಡ. ಅಷ್ಟು ಮಾತ್ರ ನಡಸಿಕೊಡು. ಇದು ಬದನೆಕಾಯಿ ಪುರಾಣವೆಂದು ಉದ್ಗರಿಸಿ ಹಲ್ಲು ಕಿರಿಯುವವರು ಕಿರಿಯಲಿ. ಹಲ್ಲಿರುವುದು ಏತಕ್ಕೆ ? ಕಿರಿದರೆ ತಾನೆ ಅದು ಕಾಣಿಸುವುದು? ಕಡಿಯುವುದಕ್ಕಿಂತ ಕಿರಿಯುವುದು ಲೇಸು. ಅಷ್ಟೇ ಉಪಕಾರ.

ಭರತಖಂಡದ ಹಲವಾರು ಕಾಯಿಪಲ್ಲೆಯಗಳಲ್ಲಿ ಬದನೆಗಿರುವ ವೈಶಿಷ್ಟ್ಯ ಇನ್ನಾವುದಕ್ಕೂ ಇಲ್ಲ. ಇದು ಖಚಿತ ಸತ್ಯ. ಬಣ್ಣ, ಗಾತ್ರ, ರುಚಿ, ಆಕೃತಿ, ಬೀಜ, ಬೀಜರಹಿತ ಚರಮಜನ್ಮಧಾರಿತ್ವ ಎಲ್ಲವೂ ಅದರ ವಿವಿಧತೆಯ ಪರಾಕಾಷ್ಠೆಯನ್ನು ತೋರಿಸುತ್ತದೆ. ಪಡವಲ, ಹೀರೆ, ಹಾಗಲ, ಹುರುಳಿ, ಅವರೆ, ಬೆಂಡೆ, ಕಡೆಗೆ ಮೂಲಂಗಿ ಎಲ್ಲಿಗೇ ಹೋಗಿ, ಒಂದೇ ಬಗೆಯವು; ಎಳಸಿರಬಹುದು; ಬಲಿತಿರಬಹುದು; ಟೊಳ್ಳಿರಬಹುದು ; 'ಮಾಂಸಲ' – ರಾಮ ರಾಮ, ನಾನು ಶಾಕಾಹಾರಿ, ಶಾಂತಂ ಪಾಪಂ–ವಾಗಿರಬಹುದು; ನಾರು, ಜುಂಗು ಇರಬಹುದು. ಹೊರ ಒಳ ಗುಣಗಳು ಸುಮಾರು ಒಂದೇ. ಆ ಬಡವುಗಳಲ್ಲಿ ಹೇಗೆ ವೈವಿಧ್ಯ ಬರಬೇಕು? ಜಡನಾದ ಬ್ರಹ್ಮನ ಸೃಷ್ಟಿಯಲ್ಲಿ ಎಲ್ಲಿಯೂ ಸಮಧಾತು, ಏಕತಾನ, ಏಕನಾದಕ್ಕೆ ಬೆಲೆಯಂತೆ ; ಅವುಗಳಲ್ಲಿಯೂ ಅದೇ ಲಕ್ಷಣದ ಪ್ರಕಾಶ ಬಂದೀತು ತಾನೆ ? ಬದನೆಯಲ್ಲಿ ಹಾಗಲ್ಲ.

ಲೋಕದಲ್ಲಿ ಎಷ್ಟು ಬಗೆಯ ಬಣ್ಣಗಳಿವೆಯೊ ಅಷ್ಟೂ ಅದರಲ್ಲಿ ಉಂಟು. ತಾಮ್ರವೆ, ರಕ್ತವೆ ? ಹರಿತವೆ, ಹಸಿರೆ? ಬಿಳುಪೆ, ನರೆಯೆ, ಕರಿಯೆ? ಮುಳ್ಳೆ, ನುಣುಪೆ, ಸಸಿನೆಯೆ ? ವಾಮವೆ? ಸಿಹಿಯೆ? ಕಹಿಯೆ? ನಿಡಿಯೆ, ಗುಂಡೆ? ಸಮಸ್ತವಾಗಿ ಬೂದಿಗುಂಬಳದ ತಿರುಳಂತಿರುವ ಒಳಹದವೆ? ಕೋಟಿ ಬಿತ್ತದ ಬೇಸರಿಕೆ ಓಡಿಸುವ ಜಟಿಲತೆಯೇ? ಒಂದೊಂದು ಊರಲ್ಲಿ ಒಂದೊಂದು ರೀತಿ; ಒಂದರಲ್ಲಿಯೇ ನಾಲ್ಕು, ಆರು ರೀತಿ. ಈ ಹೊಲ ತೋಟದಲ್ಲಿ ಇಂಥದು; ಮತ್ತೊಂದರಲ್ಲಿ ಬೇರೊಂದು; ಬೆಳಸಿದ ಹಾಗೆ, ಬಿತ್ತಿದ ಹಾಗೆ; ಕಸಿ ಮಾಡಿದ ಹಾಗೆ. ಬೇಸಾಯದ 'ಸೆಬ್ಬಿ' ಬಳಸಿದ ಹಾಗೆ ; ಬ್ಯಾಗನ್, ವಾಂಗಿ, ಮುಳ್ಳುಬದನೆ, ಹೊಲಬದನೆ .; ಬೆಂಡೆಯಂತೆ, ಸೋರೆಯಂತೆ ಉದ್ದಕ್ಕೆ ಒಂದು ಮೊಳ ಎಳಪಡವಲದ ಉದ್ದ–ದೂರ ಸುಳ್ಯದಲ್ಲಿ ಬೆಳೆದದ್ದು ನೋಡಿ ಹೋಗಿ – ಅಥವಾ, ಹೆಬ್ಬೆಟ್ಟಿಗಿಂತ ಅಡಕವಾದ್ದು; ನಾನಾ ಬಗೆಯ ತೋರ, ಹತ್ತು ಬಣ್ಣ, ಗೆರೆ, ಗೀರು, ಬುಡುಬುಡುಕೆಯವನ ಬಟ್ಟೆಯ ಚೌಕಳಿಯದು! ಮೊದ್ದು ತುಂಬು; ಸೀಯಾಳ ಗಾತ್ರದ ಉತ್ತರ ಪ್ರದೇಶದ ಅಥವಾ, ಕಲಿಕತ್ತೆಯ–ಆಶ್ರಮದ ಬಳಕೆಯದು. ಘನತೆವೆತ್ತ ಆಚಾರಶೀಲ ಸಂನ್ಯಾಸಿಗಳಿಗೆ ಮೋಹ ಕವಿಸಿ, ಪ್ರೀತಿ ಊಡಿದ ವಾದಿರಾಜ ಗುಳ್ಳ; ನಮ್ಮ ಮನೆಯಲ್ಲಿ ಒಂದು ಕಾಲದಲ್ಲಿ ಬೆಳಸಿದ್ದ ಹೊಳೆವ ನವಿಲು ನೀಲಿಯ ಅತಸೀಪುಷ್ಪಸಂಕಾಶದ ನಗೆಹೂ ಬಿಡುತ್ತಿದ್ದುದೆ? ವೃಂತಾಕವೆ? ಎಷ್ಟು ಬೇಕು ಬಗೆ? ಸೃಷ್ಟಿಗೆ ವಿಶಾಲತೆ ತಂದಿರುವ ಗುಣ ವಿವಿಧತೆ; ವಿಪುಲತೆ. ಒಂದರ ಹಾಗೆ ಒಂದಿಲ್ಲ ; ಆದ್ದರಿಂದಲೇ ನಮ್ಮದು ಪ್ರಪಂಚ. ಇಲ್ಲಿನ ಯಾವುದೂ ಸುಂದರವೇ, ಗ್ರಾಹ್ಯವೇ, ಆಸ್ವಾದಾರ್ಹವೇ, ಬೆಲೆಯುಳ್ಳದ್ದೇ. ಒಬ್ಬರಿಗೆ ಪಥ್ಯವಾಗದ ಕಾರಣದಿಂದ ಇನ್ನೊಬ್ಬರಿಗೆ ಆಗಕೂಡದು ಎನ್ನುವುದು ಯಾವ ನ್ಯಾಯ? ಆ ಪ್ರಯೋಜನವಿಲ್ಲವಾಗಿದ್ದರೆ ಅದು ನಿರ್ಮಾಣವೇಕಾಗುತ್ತಿತ್ತು ? ಯಾವುದೊ ಗಹನತತ್ತ್ವ ಎಲ್ಲದರ ಆಳದಲ್ಲಿಯೂ ರಚನೆಯಲ್ಲಿಯೂ ಉಪಯುಕ್ತಿಯಲ್ಲಿಯೂ ಇರುವುದರಿಂದಲೇ ಅದು ಹುಟ್ಟಿದುದು. ಇರುವುದು. ಅದನ್ನು ನಾವು, ನೀವು ಬೇಡುವುದು. ಅದಕ್ಕೆ ಬೆಲೆಯಿರುವುದು. ಬದನೆಗಂತೂ ಹಾಗೆ, ಉಳಿದುದು ನಿಮ್ಮ ನಿಮ್ಮ ರುಚಿಯಂತೆ. ಇಲ್ಲಿ ಯಾರ ಮೂದಲೆ ಸಲ್ಲುತ್ತದೆ? ನಮ್ಮಿಷ್ಟ.

ಇದರಿಂದ ಮಾಡುವ ಪದಾರ್ಥಗಳು ಇದರ ಬಗೆಗಳಿಗಿಂತ ವಿವಿಧ. ಬಜ್ಜಿಗಳೆ, ಗೊಜ್ಜೆ, ಪಲ್ಯವೆ? ತಾಳದವೆ ? ಪಳಿದ್ಯವೆ? ಕೂಟೆ? ಭಾತೆ, ಬೋಂಡವೆ? ಉದ್ದ ಬಾಳೆಯೊಡನೆ ಸ್ಪರ್ಧಿಸಿ ಗೆಲ್ಲುವ ಬುರಬೂರಿಯೆ? ತುಂಬುಗಾಯಿ? ಗುಜರಾತಿಯವರು ಸಮೆವ ಇಡಿಗಾಯೆ? ಪೂರಿಗೆ, ಚಪಾತಿಗೆ ಎಂಥ ಸಾಹಿತ್ಯ? ಸಕ್ಕರೆ, ಬೆಲ್ಲ, ಕೇಸರಿ, ದ್ರಾಕ್ಷಿ ಮುಂತಾದ ಶ್ರೀಮಂತಿಕೆಯನ್ನು ಬದನೆ ಧಿಕ್ಕರಿಸೀತೇ ವಿನಾ ಪ್ರಜಾಸತ್ತೆಯ ನ್ಯಾಯ, ಸಮತೆ, ಸ್ವಾತಂತ್ರ್ಯ, ಸೌಹಾರ್ದಗಳ ಪ್ರಪಂಚದಲ್ಲಿ ಇದರ ರಸ್ಯಮಾನತ್ವಕ್ಕೆ ಮಿತಿಯಿಲ್ಲ. ಬದನೆ ಪ್ರಜಾಸತ್ತೆಗೆ ಪ್ರತಿಮೆ.

ಒಂದು ಸಲ ಯಾರೊ ಬದನೆಯ ಅನ್ನವನ್ನು ವಾಂಗೀಭಾತ್ ಎಂದುದಕ್ಕೆ ಕುಚೋದ್ಯ ಮಾಡಿದರಂತೆ. ಅವರು ಸಂಸ್ಕೃತರು ; ನ, ವಾಂಗೀಭಾತ್ ಎಂದು ; ನಮ್ಮವರೆಂದರು; ನವಾಂಗೀಭಾತ್ ಎಂದು. ಅವರು ತಿರುಗಿ ಸ್ಪರ್ಧಿಸಿದರಂತೆ 'ಇಭಾತ್' ಎಂದು ಆ ಮಾತನ್ನು ಮುರಿದು ; ನಮ್ಮವರು ಪ್ರತಿಭಟಿಸಿದರು ; ನಿಮ್ಮ 'ಇ' ಭಾತಿಗೆ ನಮ್ಮ ಕೇಸರೀಭಾತಿದೆ ಬಿಡಿ. ವಾಂಗೀಭಾತನ್ನು ಕುರಿತು ಮಾತಾಡಿ ; ಅದು ವಾಕ್ಯಾರ್ಥದ ಪ್ರಪಂಚ. ಸಕ್ಕರೆ, ಸಿಹಿ ಬೇಕಾದರೆ ಆ ಕೇಸರಿಭಾತನ್ನೊ ನಮ್ಮ ಸಕ್ಕರೆ ಪೊಂಗಲನ್ನೊ ಶಾಲ್ಯಾನ್ನವನ್ನೊ ಕ್ಷೀರಾನ್ನವನ್ನೊ ಬಿರಿಯುತ್ತೇವೆ. ವಾದವಿಷಯ ವಾಂಗೀಭಾತ್ ; ತಿಂದು ನೋಡಿ ; ಎಷ್ಟು ಹದವಾಗಿ ಪುಡಿ ಬಿದ್ದಿದೆ, ಒಣಕೊಬ್ಬರಿ ತುರಿ, ಪಚ್ಚಡಿ ಸೇರಿದೆ ; ಆ ಪರಿಮಳ, ನಾಲಗೆಗೆ ರುಚಿಕೊಟ್ಟು ನೋಡಿ. ಇನ್ನಷ್ಟು ಇದೊ ಈ ಹಸುವಿನ ತುಪ್ಪ ಹಾಕುತ್ತಿದ್ದೇನೆ ; ಹಾಕಿಸಿಕೊಳ್ಳಿ ; ಅದರ ಗೋರೋಚನ ಬೇರೆ ಸೇರಿತು. ಇಷ್ಟು ಸುಭೋಜ್ಯವಾದ್ದು ಬಿಸಿಬಿಸಿಯಾಗಿ, ಸಿಕ್ಕಿರುವಾಗ ಇನ್ನಾವ ಭೋಗ ಬೇಕು ನಿಮಗೆ? ಮುಂದಿನದು ಆಮೇಲೆ. ಅದನ್ನು ಸವಿವಾಗ ಅದರ ಭೋಗ. ಈ ಭಾತಿನ ಸೌಭಾಗ್ಯ ನರಕ್ಕಿಳಿಯಲಿ ಎಂದರು. ಮುಂದೆ ಮಾತೆಲ್ಲಿ ಬರಬೇಕು ? ವಾದ ನಿಂತಿತು ; ಬಿರಿಯ, ಭಾತಿಳಿಯಿತು ಒಡಲಿಗೆ.

ಅದರ ಅಪಥ್ಯಕಾರಿತೆಯನ್ನೊ ಉಷ್ಣಪ್ರಕೋಪವನ್ನೊ ಹೆಚ್ಚು ಸೇವನೆಯಿಂದ ಬರುವ ಮೈ ತುರಿತವನ್ನೊ ಕುರಿತು ನಾನು ಏನನ್ನೂ ಆಡುವುದಿಲ್ಲ. ಅತಿ ಸೇವನೆ ಎಲ್ಲಿಯೂ ಕೆಡುಕೇ. ಇದು ಲೋಕತತ್ವ. ಯಥಾಸುಖಂ ಎಂಬುದು ಪಥ್ಯಕಾರಿ ಯಾವುದರಲ್ಲಿಯೂ. ಗುಣಗಣನೆ ಮುಖ್ಯವೇ ಹೊರತು, ಅವಗುಣ ಯಾವುದಕ್ಕಿಲ್ಲ? ಎಲ್ಲಿಲ್ಲ ? ದೇವರ ಸೃಷ್ಟಿ ಎಲ್ಲ ಸಮರ್ಪಕವಾಗಿದೆಯೊ ? ಅದರ ಎಲ್ಲವೂ ನಿಮಗೆ ಒಪ್ಪಿತವೊ ? ಅವನ ಕೈಯಲ್ಲಾದಷ್ಟು ಮಟ್ಟಿಗೆ ಸಮರ್ಪಕವಾಗಿ ಅವನು ಈ ವಿಶ್ವವನ್ನು ಮಾಡಿದ ; ಮಾಡಿದ್ದಕ್ಕಾಗಿ ನಿಮ್ಮ ನಮ್ಮ ಬಾಯಿಗೆ, ಕೈಗೆ ಶತಶತಮಾನಗಳಲ್ಲಿ ಸಿಕ್ಕಿ ಎಷ್ಟು ಪೇಚಾಡಿದ್ದಾನೆಂದು ನಮಗೆ ಸಾಕಾದಷ್ಟು ವರದಿಗಳು ಬಂದಿವೆ. This best of all possible worlds ಎಂದ ಲೈಬ್ನಿಟ್ಸ್ : ಅವನ ಶಕ್ತಿಗಿಂತ ನಿಮ್ಮದು ದೊಡ್ಡದಲ್ಲವಲ್ಲ ! ಇದಂತೂ ಕೇವಲವಾಗಿ ಅತಿಶಯವಾಗಿ ಮಾನವ ಸೃಷ್ಟಿ : ಇಂಥುದರ ಗುಣಗಾನ ಮಾನವರಾದ ನೀವು ನಾವು ಮಾಡದಾದರೆ ಅನ್ಯಾಯವಾದೀತು.

ನನಗಂತೂ ಒಂದು ಬದನೆಯ ಜಾತಿ ತುಂಬಾ ಹಿಡಿಸಿದೆ; ಅದಕ್ಕಿಂತ ರೂಪವಂತವಾದ್ದನ್ನು ನಾನು ಇನ್ನೆಲ್ಲಿಯೂ ಕಾಣೆ. ಧಡಿಯ ಗಾತ್ರ ಇದ್ದರೆ ಆಯಿತೆ? ರೀತಿ, ರಂಗು, ಒಪ್ಪ, ಮಿರುಗು ಬೇಡವೆ ? ಮೈಸೂರಿನ ಈರನಗೆರೆಯ ಮೊಗರು ಬದನೆ ಎಂಬುದನ್ನು ಕೇಳಿದ್ದೀರಲ್ಲ? ಒಂದೊಂದು ಮಾತೂ ಇಲ್ಲಿ ಗಣ್ಯ ; ಮೈಸೂರಿನದು; ಈರನಗೆರೆಯದು – ಹಳ್ಳಿಯದಲ್ಲ; ಅದನ್ನು ಬೆಳಸಿ ಬೆಂಗಳೂರಲ್ಲಿ ಬೆಳೆವ ಮಾರುವ ನಕಲಿ ಬದನೆಯಲ್ಲ; ಅಸಲಿ; ಅದರಲ್ಲಿ ಎಳಮೊಗರು – ಕಣ್ಣಿಗೆ ಮೋಹ, ಆ ಮೃದು

ನಾಗಾಬು–ಅಪ್ಪಾಯಮಾನ; ಪಂಚೇಂದ್ರಿಯ ಪರಿತೃಪ್ತಿ ತರುವ ಆ ಪದಾರ್ಥದ ಒಂದಿಷ್ಟು–ಕಡೆಗೆ ಕುಲಾವಿ ತೊಟ್ಟು – ಇವುಗಳಿಂದ ಹುರಿದು, ಒಣಕೊಬ್ಬರಿ ಹಾಕಿ ಮಾಡಿದ ಬಜ್ಜಿ – ಯಾವುದೂ ಹೋಲಾಗಲಾರದು; ಅದನ್ನು ತಿಂದು – ಹಾಯ್, ಅದರ ವರ್ಣನೆ ನಿಮ್ಮ ವಾಣಿಗೂ ಮೀರಿದುದೆಂದರೆ ಕೋಟಿಹಾಡೇನು–ಇದು ಮೆಚ್ಚಿಕೆಯ ಸಹಜ ಪಕ್ಷಪಾತ –ನಾನು ಕವಿಯಲ್ಲ, ಅದು ಕವಿತೆಗೆ ತಕ್ಕ ವಸ್ತು; ನನ್ನ ಸ್ಫೂರ್ತಿ ಮಾತ್ರ ಮೂಕಂಕರೋತಿವಾಚಾಲಂ. ಇಂಥಲ್ಲಿ ಸಂಯಮ, ಉಪದೇಶ ಅನ್ಯಾಯ. ಅಭಿಮಾನವಿಲ್ಲದ ಮನುಷ್ಯ ಹುಳುವಲ್ಲವೆ? – ನೀನೇ ಹೇಳು – ಹುರಿದು ಪಲ್ಯ, ಎಣ್ಣೆಗಾಯಿ, ವಾಂಗೀಭಾತ್ ಮಾಡಿ ತಿನ್ನಬೇಕು. ಆಗ ನಿಮಗೇ ಗೊತ್ತಾಗುತ್ತದೆ: ಆ ರುಚಿ ಎಷ್ಟು ಸುಖದವೆಂದು. ಕಮ್ಮಿದುದೆಂದು. ಈ ತಿಂಡಿ, ಮುನ್ನೂರು ಮೈಲಿ ದೂರದಲ್ಲಿ, ಅದರ ಆಸೆ ಬಿಟ್ಟು, ಕೇವಲ ಚಾಪಲಾಯ ಪ್ರಚೋದಿತಂ, ಇದನ್ನು ಬರೆಯುತ್ತಿದ್ದೇನಲ್ಲ – ಶೃಂಗಾರದಲ್ಲಿ ಇದನ್ನು ವಿರಹವೆನ್ನುತ್ತಾರೆ- ವಿಪ್ರಲಂಭ ಸುಖವೆನ್ನುವರು ಕಾವ್ಯಜ್ಞಾದರೂ ಈ ಬದನೆಯ ವಿಪ್ರಲಂಭವನ್ನು ಅರುಚಿಗಳು ಅಂಗೀಕಿಸಿಯಾರೆಂಬ ಭೀತಿಯಿಂದ ಮಾತ್ರ ತಡೆದುಕೊಳ್ಳಬೇಕಾಗಿದೆ. ಅದನ್ನು ಬೆಳೆದವರು ಧನ್ಯರು, ಮಾನ್ಯರು. ನಂಜನಗೂಡಿನ ರಸಬಾಳೆ ತಿಂದು ತೃಪ್ತರಾದವರು. ಬರಿಯ ರಸಸಾರ, ನರ ಮಾನವರ ಸಾರಗಳ ಬೇಸಾಯ ಸಾಲದೆಂದು ಹಳೆಯ ಕಾಲದ ರಸಬಾಳೆಯ ಸಿಪ್ಪೆಯನ್ನು ಇದರ ಸಾರ ಪೋಷಣೆಗಾಗಿ ಸೇರಿಸಿರುವವರು ಅವರು. ರಸಬಾಳೆ ರುಚಿಯಲ್ಲವೆಂದಲ್ಲ, ಅದನ್ನು ಸವಿವಾಗ ಅದರದು ರುಚಿ ; ಅದನ್ನು ತಿಂದು ಬೆಳಸಿದ ಈ ಮೊಗರುಬದನೆಯ ರುಚಿ ಈವರೆಗಾಗಲೆ ಒಳಗೆ ಹೋಗಿ ರಕ್ತವಾಗಿ, ಅಸ್ಥಿಯಾಗಿ, ಮಜ್ಜೆಯಾಗಿ ಹೋಗಿರುವ ಈಗ ಮರೆತ ಅದಕ್ಕೆಲ್ಲಿ ಬರಬೇಕು? ಬಾಳೆಗೆ ಒಂದೇ ರುಚಿ. ವಾಂಗೀಗೆ?

ಕಳೆದ ವರ್ಷ ಕಡಲನ್ನು ನೆನೆದೆ ; ಅದರ ಘೋಷ, ಅದೇ ಮಹಾಮಂದ್ರದಲ್ಲಿ ಈಗಲೂ ಕಿವಿಯಲ್ಲಿ ಘೂರ್ಣಿಸುತ್ತಿದೆ. ಅಂದಿನಿಂದಿಗೆ ಹನ್ನೆರಡು ತಿಂಗಳು ಕಳೆದಿವೆ. ಈ ಕಾಲವನ್ನೆಲ್ಲ ಬದನೆಗೆ ಮೀಸಲಿಟ್ಟು ಇದರ ಸ್ಮರಣೆಗೆ ನನ್ನ ಕಾಣಿಕೆ ಅರ್ಪಿಸುತ್ತಿದ್ದೇನೆ. ಎಷ್ಟಾದರೂ ಕಡಲು ಹೊರಗಿನ ಸತ್ವ ; ಒಳಕ್ಕೆ ಬಂದೀತೆ ? ಅದರ ಅಮಾನಸ ಸಂತೋಷ ಬೇರೆ ಬಗೆಯದು. ಹೊರಗಿಂದ ಬದನೆ ಒಡಲಿಗೆ ಸೇರುವಾಗ ಆ ತೃಪ್ತಿಯನ್ನು ಕಡಲೇನು ಕೊಟ್ಟೀತು ? ಬದನೆಯಕಾಯನ್ನು ಬ್ರಹ್ಮರಾಕ್ಷಸವಾಗಿ ಮಾಡಿದ್ದಾನೆ ಎಂದು ಮಾತ್ರ ನೀವಾರೂ ಅನ್ನಲಾರಿರಿ. ತೇನಾತ್ಯಕ್ತೇನ ಭುಂಜೀಥಾ..

# ಕಡಲ ಕರೆ

ಮೂರು ನಾಲ್ಕು ಸಾವಿರ ಮೈಲಿಯಾದರೂ ಕಡಲು ಮುತ್ತಿಡುವ ಕರೆ ಭಾರತಕ್ಕಿದೆ. ಎಷ್ಟೋ ಶತಮಾನಗಳಿಂದ ಈ ಜನ ಅದರ ನೆಲಸನ್ನು ಕಂಡಿದ್ದಾರೆ. ಅದರ ಅಗಾಧತೆಗೆ ಭೀತಿಪಟ್ಟರೂ ಅದರ ಚಾಟು ಚಪಲತೆಗೆ ಮೈ ಒಡ್ಡಿದ್ದಾರೆ. ಅದರ ಒಳಗಿನ, ಮೇಲಿನ ಸಾಹಸಗಳನ್ನು ಕೇಳಿದ್ದಾರೆ ; ಓದಿದ್ದಾರೆ. ಅದಕ್ಕೆ ಅವರು ಪುಳಕಗೊಂಡಿಲ್ಲವೆಂದು ಯಾರು ಹೇಳಬಹುದು? ಅದನ್ನು ಗಮನಿಸದೆ, ಅದಕ್ಕೆ ಉದಾಸೀನವಾಗಿರಿಸಬಲ್ಲ ಸತ್ವವೆ ಅದು ? ಹಗಲು, ಇರುಳು ಅದರ ಮೊರೆ ಒಂದು ಮಹಾ ಮೂಲಾಧಾರ ಶ್ರುತಿ; ಮಹಾಮಂದ್ರ. ಯಾವುದಕ್ಕಾದರೂ ಮಹತ್ ಶಬ್ದದ ಬಳಕೆ ನ್ಯಾಯವಾದರೆ ಕಡಲಿಗೆ ಅದು ದಕ್ಕಬೇಕು. Not the still small voice ಎಂಬಂತೆ ಸಣ್ಣ ತಗ್ಗಿನ ಅರವ ದನಿಯಲ್ಲ, ಅದರದು; 'ವೃಷಭ ದುರ್ಲಭ.' ಕಣ್ಣು ದಣಿವಂತೆ ನೆಲಸಿ ಕಾಣಿಸುತ್ತದೆ; ಕಿವಿಗೆ ಕೇಳಿಸುತ್ತದೆ ; ಮುಟ್ಟಲು, ಆಳಲು ಬರುತ್ತದೆ ; ನಾಲಗೆಗೆ ಉಪ್ಪೆರೆಯುತ್ತದೆ ; ಅದರ ಹಸಿ ತಂಪು ವಾಸನೆ ಮೂಗನ್ನು ಬಡಿಯುತ್ತದೆ. ಹೀಗೆ ಪಂಚೇಂದ್ರಿಯ ತೃಪ್ತಿ ತರಬಲ್ಲದ್ದು ಕಡಲು. ಬರತದಲ್ಲಿ, ಇಳಿತದಲ್ಲಿ ಬೆಳುದಿಂಗಳ, ಕದ್ದಿಂಗಳ ಹೊಮ್ಮುಗೆಗಳಲ್ಲಿ, ಅದರ ಉತ್ಸವವೊ ಸೊರಗೊ ಕಟ್ಟುತ್ತದೆ ; ಉತ್ಸಾಹ ಮೂಡಿಸುತ್ತದೆ. ಹಿರಿದಾವುದು ಹೊಳ್ಳಾವುದು ಎಂಬುದನ್ನು ತಿಳಿಸಬಲ್ಲದು. ಯಾವುದೂ ಅದರಲ್ಲಿ ತೇಲೀತೆ ಹೊರತು ಮುಳುಗಿ ಬದುಕುವ ಶಕ್ತಿ ಭೂಲೋಕದ ಜೀವಕ್ಕಿಲ್ಲ. ನಮ್ಮ ಕವಿತೆಯಲ್ಲಿ, ನಾಟಕದಲ್ಲಿ, ಕಾವ್ಯವೆನ್ನುವುದರಲ್ಲಿ ಇಂಥ ಕಡಲ ಪ್ರಾಧಾನ್ಯ –ಸುಳಿವೇ ಎಂದರೂ ಸಂದೀತು – ಈಚಿನವರೆಗೂ ಸೊನ್ನೆಯಾಗಿತ್ತು. ಅಲ್ಲಲ್ಲಿ ಒಂದು ದೋಣಿ ಹಾಡಿನ ಬಿನದವೊ ನೌಕಾಯಾನ ವೈಭವವೊ ಮೆರೆದಿರುವುದುಂಟು. ಸಾಗರಸಂಗೀತ ಕಡಮೆ. ಬಹು ಹಿಂದೆ ಸಾಗರ ಪ್ರಯಾಣವನ್ನು ನಿಷೇಧಿಸಿದುದರಿಂದ ಹೀಗಾಯಿತೊ ಏನೊ ; ಜನಕ್ಕೆ ಅದನ್ನು ದಾಟುವ 'ಉಮೇದು' ಇಲ್ಲವಾಯಿತೊ– ಭಾರತಕ್ಕೆ ಮುಕ್ಕಟ್ಟು ಕಡಲಿದ್ದರೂ ನೆಲದ ನಾಲ್ಕು ಮೂಲೆಗೆ ನಾಡಾಗಿದ್ದಿದ್ದರೆ ಕಟ್ಟಿ ಬಿದ್ದ ಹೇಗೊ ಹಾಗೆ ಅದಕ್ಕೆ ಮಿಡುಕದೆ ಉಳಿಯಿತು. ಕರೆಯಲ್ಲಿಯೇ ಕಡಲ ಮೊರೆ ಕೇಳಿಸದಾದ ಮೇಲೆ ಇನ್ನೆಲ್ಲಿ ಕೇಳಿಸಬೇಕು? ನೀರು ಕಂಡರೆಯೇ ಹೆದರುವ ನಾಗರಿಕರಿಗೆ ಕಡಲ ನೀರ್ಮೂಡದಲೆ ಬೆಚ್ಚಾಗಿರಬೇಕು!

ಹಿಂದೆ ವಾಯುವ್ಯದ ಕಣಿವೆಗಳಿಂದ ಒಂದು ಜನವರ್ಗ ನಾಡನ್ನು ದಾಳಿಟ್ಟರೆ ಬೇರೆ ಕಾಲದಲ್ಲಿ ಕಡಲ ಮೇಲೆ ಬಂದು ಇನ್ನೊಬ್ಬರು, ಇಬ್ಬರು, ಮೂವರು ಇದನ್ನು

ಆಕ್ರಮಿಸಿಕೊಂಡರು. ಏಟಿಗೆ ಪೋಟಿಗೆ ಸಿಕ್ಕದೆ ನೀರಾಸರೆಗಳನ್ನು ನಂಬಿ ಅರಮನೆ ಮಾಂಡಲಿಕ ಮನೆಗಳನ್ನು ತಮ್ಮ ನೌಕಾಬಲದ ನೆರವಿಂದ ಕಟ್ಟಿ ಆಳಿ, ಕಡೆಗೆ ಕಡಲು ಹಾರಿ ತಪ್ಪಿಸಿಕೊಂಡು ಹೋಗಲು ಅನುಕೂಲವಾಗುವಂತೆ ಕರೆಯ ಕೊನೆಗೆ ಅರಮನೆಗಳನ್ನು ಕಟ್ಟಿಕೊಂಡಿದ್ದರು. ಅವರ ಬಣ್ಣ, ಸಾಹಸ, ಸಾಧನೆ ಇಲ್ಲಿನ ಜಾಡ್ಯವನ್ನೂ ಅನೈಕಮತ್ಯವನ್ನೂ ಪರಸ್ಪರ ಅಸೂಯೆಗಳನ್ನೂ ದುಡಿಸಿಕೊಂಡು, ನಾಡನ್ನು ಕಬಳಿಸಿದವು. ಆದರೆ ಅವರ ರೀತಿ, ರಂಗು, ಸಾಹಿತ್ಯ, ಕಲೆ, ವಾಸ್ತುನಿರ್ಮಾಣ ತಂತ್ರ ಮಾತ್ರ ನಮ್ಮ ಕಿವಿಗೆ, ಕಣ್ಣಿಗೆ, ಮನಸ್ಸಿಗೆ, ರಕ್ತಕ್ಕೆ ಇಳಿದು ನಮ್ಮನ್ನು ಜಾಗರಿಸಿವೆ. ಅಂದಿನಿಂದ ಸಾಗರ ಒಂದು ಸತ್ವವಾಗತೊಡಗಿತು. ಸಾಗರ ಪಾಶ್ಚಿಮಾತ್ಯರು ನಮ್ಮ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಎನ್ನುವ ಮಟ್ಟಿಗೆ ಅವರ ದಾನವಾಯಾತು.

ಇಲ್ಲಿ ಸಮುದ್ರ ಮಂಥನವಾದ ಕಾಲದಿಂದ ಕಡಲಿನ ಅಮೃತ ಹಾಲಾಹಲಗಳು, ಅಸುರಗಣ, ದೇವಗಣ ಮೆರೆದಿವೆ. ಶೈವ ವೈಷ್ಣವಗಳ ವೈರ ಮಸೆದು ಕಡಲು ಬೆಟ್ಟಗಳ ಸರಿಸವನ್ನು ಪ್ರತಿಫಲಿಸಿದೆ. ರಾಮಾಯಣದಲ್ಲಿ ಸಾಗರಲಂಘನ ನಡೆಯಿತು; ಕಪಿಗಳಿಂದ ಸೇತುಬಂಧವಾಯಿತು. ಅದರ ಗರ್ಜನೆ, ಸಹಜ ಗೌರವಕ್ಕೆ ತಕ್ಕಂತೆ ಉಕ್ಕಲಿಲ್ಲ ಕವಿ ಮನಸ್ಸು. ಶತ್ರುಘ್ನಾದಿಗಳು ಸಾಗರವನ್ನು ಗೆದ್ದರಂತೆ. ರಘು, ಭರತ, ಎಲ್ಲರೂ ದಿಗ್ವಿಜಯ ಮಾಡಿದವರೇ. ನಮ್ಮ ಚಕ್ರವರ್ತಿಗಳೆಲ್ಲ ಆ ಚತುಃ ಸಮುದ್ರ ಮುದ್ರಾಂಕಿತ ಸಕಲ ಧರಿತ್ರೀಕಾಂತರೇ. ಸಮುದ್ರರಶನೆಯಾದ ಉರ್ವಿಯ ಒಡೆಯನಾದ ದುಷ್ಯಂತನಿಗೆ ಪ್ರಥಮ ಪ್ರತಿಷ್ಠೆ ಅದರಿಂದ. ಆದರೆ ಆ ರಶನ ಆಭರಣ ಮಾತ್ರ ; ಉಕ್ತಿ ಚಮತ್ಕೃತಿ; ಸಾಹಿತ್ಯ ವಿಲಾಸ ; ಸಮಯ. ಪ್ರಕೃತಿಯ ಮೂಲ ಸತ್ವವಾಗಿ, ಸೃಷ್ಟಿಗೆ ಮೊದಲ ಧಾತುವಾಗಿದ್ದು ಏಕೊ ಮೊದಲಿಂದಲೂ ಕಡಲಿಗೆ ಪ್ರಾಶಸ್ತ್ಯ ಬರಲಿಲ್ಲ. ಹಲವು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸಾಗರಕ್ಕೆ ಜನಜೀವನ ಕನಲಿದಂತೆ ಇಲ್ಲಿಯೂ ಆಗಿದ್ದಿದ್ದರೆ ಇಲ್ಲಿಯ ಜೀವನಸೌಂದರ್ಯಕ್ಕೂ ಉತ್ಸಾಹಕ್ಕೂ ಇನ್ನೊಂದು ಬಗೆಯ ಮಿರುಗು ಉಂಟಾಗುತ್ತಿತ್ತು. ಸ್ಥಿರಪ್ರಪಂಚವನ್ನೇ ಮಾಯೆಯೆಂದವರು ಈ ಚಲಮಾಯೆಯನ್ನು 'ಯಾ ನಾ ಸಾ ಮಾಯಾ' ಎನ್ನದೆ ಬಿಡುತ್ತಿದ್ದರೆ ?

'Two voices are there, one is of the sea,/One of the mountains, each a mighty voice : In both from age to age thou didst rejoice/They were thy chosen music, Liberty !'

–'ಎರಡು ದನಿಗಳಿವೆ; ಒಂದು ಕಡಲಿನದು; ಇನ್ನೊಂದು ಪರ್ವತಗಳದು; ಒಂದೊಂದೂ ಪ್ರಚಂಡ ಧ್ವನಿಯೇ ; ಎರಡರಲ್ಲಿಯೂ ಯುಗಯುಗದಲ್ಲಿ ನೀನು ಹಿಗ್ಗಿ ಸಂತೋಷಪಟ್ಟೆ – ಓ ಸ್ವಾತಂತ್ರ್ಯವೇ, ನೀನು ಆಯ್ದ ಸಂಗೀತಗಳು ಅವು.' ಎರಡೂ ಸ್ವಾತಂತ್ರ್ಯ ಆಯ್ದ ನೆಲೆಗಳೇ. ಧ್ವನಿ ಬೆಟ್ಟಗಳಾಗಿದೆಯೊ ಇಲ್ಲವೊ. ಸಮುದ್ರಕ್ಕಂತೂ ನಿತ್ಯವಾದ ಉದ್ದಂಡ ಧ್ವನಿ ಇದೆ. ಹಿಮಾಲಯದಂಥ ಪರ್ವತ ಪಂಕ್ತಿ ಇದ್ದು ಕಾಳಿದಾಸ ಕೂಡ ಏನೊ ಬಡಕಲು, ಕೃತ್ರಿಮ ಕಾವ್ಯಾಲಂಕಾರದ ದೇವತಾತ್ಮನನ್ನು

ವರ್ಣನೆಮಾಡಿ ಮುಗಿಸಿದನೇ ಹೊರತು ನಿಜವಾಗಿ ಹಿಮಾಲಯದ ಮೂಡು ಪಡುವಲ ೨೫೦೦ಮೈಲಿ ನೆಲಸನ್ನು ಕಂಡಿದ್ದನೊ ಇಲ್ಲವೊ. ಕಂಡವನು ಹಾಗೆ ಕಿನ್ನರ ಮಿಥುನಗಳನ್ನೊ ಬೊಂಬಿನ ಮಳೆಯನ್ನೊ ಅದರ ಕೀಚಲು ಕೊಳಲ ನುಡಿತವನ್ನೊ ವರ್ಣಿಸುತ್ತ ಕೃತಿಯನ್ನು ಆರಂಭಿಸಬೇಕಿತ್ತೆ? ಇನ್ನು ಸಾಗರಸಂಗೀತ ರಾಜಧಾನಿಯ ಕವಿಗೆ ಕೇಳಿಸಬೇಕು ಹೇಗೆ? ನಮ್ಮ ಕಾಲದ ಪುರಸ್ಕರಣೆಗಾಗಿಯೇ ಆ ಎರಡೂ ಕಾದಿರುವಂತಿದೆ. ಎರಡೂ ನಮ್ಮ ಕಾಲವನ್ನು, ಅದರ ಗಂಡನ್ನು, ಸಾಹಸವನ್ನು ಇಂದು ಮೂದಲಿಸುತ್ತಿವೆ. ಒಂದು ಕಡೆ ಸಾಗರ, ಇನ್ನೊಂದು ಕಡೆ ಹಿಮಾಲಯ. ಅವು ದುರ್ಗವೇ; ಅಗಳೇ. ಆದರೂ ಆ ಮೂಲಕವೂ ರಕ್ಷಣೆ ಬೇಕು. ನಮ್ಮ ಕಾಲದ ಸಾಹಿತ್ಯಕ್ಕಾದರೂ ಅವುಗಳ ಮಹಿಮೆ ಇಳಿದೀತೊ ಇಲ್ಲವೊ ನೋಡೋಣ. ಸಮುದ್ರ ಸತ್ವರೇ ಬೇಕು ಅಂಥ ಘೋಷವನ್ನು ಕೇಳಿಸಬಲ್ಲರೆ. ಅವರು ಹುಟ್ಟಬೇಕು; ಕಡಲಾಳದಿಂದ ಹಿಮಗಿರಿಯವರೆಗೂ ಸಮಗ್ರತೆಯನ್ನು ತಮ್ಮಾತ್ಮದಲ್ಲಿ ಮೊದಲು ರೂಪಿಸಿಕೊಂಡು ತೂಗಿದವರು.

ನನಗಂತೂ ಹಗಲೂ ಇರುಳೂ ಅದರ ವರ್ಣನೆಯನ್ನು ಬೇರಲ್ಲಿ ಓದಿ ಮೊದಲಿಂದಲೂ ಅಶಾಂತಿ. ಇಪ್ಪತ್ತನೆಯ ವಯಸ್ಸು ತುಂಬುವವರೆಗೂ–ಅದರ ದರ್ಶನಭಾಗ್ಯ ದೊರೆಯಲಿಲ್ಲ–ಪೌರತ್ವ ಸಿದ್ಧಿಯ ವಯಸ್ಸಾದ ಹೊರತು ಆ ಅಧಿಕಾರವಿಲ್ಲವೆಂದೊ ಏನೊ ! ನಮ್ಮಲ್ಲಿ ಬಹುಮಂದಿಗೆ ಹಾಗೆ. ನಮ್ಮ ಕಾಲದಲ್ಲಂತೂ ಅದನ್ನು ಕಾಣದೆ ದೊಡ್ಡ ಪ್ಯಾಸ್, ದೊಡ್ಡ ನೌಕರಿ ಮಾಡಿ, ಮಕ್ಕಳು ಮರಿ ಹೆತ್ತು, ವಿಶ್ರಾಂತಿ ಹೊಂದಿ, ಕಣ್ಣು ಮುಚ್ಚಿಕೊಳ್ಳುತ್ತಿದ್ದ ಮಹನೀಯರ ಸಂಖ್ಯೆ ಅನೇಕವಾಗಿರುತ್ತಿತ್ತು. ಒಂದು ಭತ್ತದ ಗದ್ದೆಯನ್ನು ಕಾಣದೆ ಎಂ.ಎಸ್. ಸಿ. ಪ್ಯಾಸು ಮಾಡಿ ಮುವ್ವತ್ತಕ್ಕೆ ಮುನ್ನೂರು, ನಾಲ್ಕು ನೂರು ರೂಪಾಯಿ ಸಂಬಳ ದುಡಿದ ವಿಜ್ಞಾನ ಪದಕ ವಿಜೇತರು ಹಲವರಿದ್ದರು. ಆ ಸಂತೋಷ ದೊರೆಯದೆ ಕಾತರ, ನೋವು, ಕೊರತೆ ಪಟ್ಟವರು-ಅದು ಒಂದು ಸಂತೋಷವೆಂದು ಭಾವಿಸಿದವರು ಕೂಡ – ಇರಲಿಲ್ಲ. ಹುಡುಗತನದಲ್ಲಿ–

The sea, the sea, the open sea !
The blue, the fresh, the ever free !

ಎಂದೊ Roll on thou dark, deep, blue ocean, Roll ಎಂದೊ ಓದಿದಾಗಲೆಲ್ಲ ನನ್ನಾಸೆಗೆ ಸೆಳೆ ಬರುತ್ತಿತ್ತು. ನಿಜವಾದ ಕಡಲ ಚಿತ್ರ ಹೇಗೊ ! ಅರ್ಥ ಸ್ಪಷ್ಟ. ಆ ಸ್ವರವ್ಯಂಜನ ವೈಭವವಂತೂ ತೆರೆದದ್ದು. ಆ ನವನೀಲ ನಿರಂತರ ತೆರೆ, ಆ ಬಿಡುಗಡೆಯ ಅಪಾರತೆ ನೆತ್ತರನ್ನು ಕೆರಳಿಸುತ್ತಿತ್ತು. ಕಡಲು ಹೇಗಿರಬಹುದು? ನಮ್ಮೂರ ಕೆರೆ, ಅಥವಾ ಪಕ್ಕದೂರು ಹೊಸಕೋಟೆಯ ಅಥವಾ ಭದ್ರನ ಕೆರೆಯ–ನಾನು ಕಂಡಿದ್ದವು ಅವು, ಎರಡೂ ಬೆಂಗಳೂರು ಜಿಲ್ಲೆಯವು! – ವಿಸ್ತಾರ ರೋಮಾಂಚಕಾರಿಯೇ

ಅಲ್ಲವೆ ? ನನ್ನ ತೆಳು ಗಣಿತ ಅದನ್ನು ಗುಣಿಸುತ್ತಿತ್ತು. ಅಲ್ಲಿನ ಕಿರು ಅಲೆ, ಕಡಲಲ್ಲಿ ಆನೆಗಳಷ್ಟಾದೀತು. ಆನೆ ನೋಡಿದ್ದೆನಲ್ಲವೆ ? ಸರ್ಕಸುಗಳಲ್ಲಿ ? ಮಠದ ಸ್ವಾಮಿಗಳ ಪಲ್ಲಕ್ಕಿ ಮೆರವಣಿಗೆಗಳಲ್ಲಿ? ಮಹಾರಾಜರ ದಸರಾ ಸವಾರಿಯಲ್ಲಿ? ನರನಿಗೆ ಮಣಿವ ತೊತ್ತುಗಳು 'ಕರಂ ಸಾದು'! ಆ ಆನೆಗಳು ನಿಜವಾಗಿ ಆನೆಗಳೇ ಅಲ್ಲವೆ ? ಕಾಡಿನ ಸಲಗಗಳನ್ನು ಆಗೆಲ್ಲಿ ಕಂಡಿದ್ದೆ? ಅಂತೂ ಕಡಲ ನೆಲಸಿನ ವಿಸ್ತಾರ, ಅಲೆಯ ಗಾತ್ರಗಳನ್ನು ನನ್ನ ಜಳ್ಳುಕಲ್ಪನೆ ರೂಪಿಸಿಕೊಳ್ಳುತ್ತಿತ್ತು. ಅದರ ಚಲನ, ಉರುಳು, ಹೊರಳು ಹೇಗೆ ಗೊತ್ತಾಗಬೇಕು? ನಮ್ಮ ಕೆರೆಯವುಗಳ ಸಾವಿರದಷ್ಟು, ಲಕ್ಷದಷ್ಟು ಎನ್ನಿ-ಸೊನ್ನೆಗಳಿಗೆ ಬರವೆ ? ವಿಸ್ತಾರಕ್ಕೆ ಮಿತಿಯಿಲ್ಲವಂತೆ ! ಅಲೆಯ ಎತ್ತರ ಆನೆಗಳಷ್ಟು -ಪುಸ್ತಕಗಳಲ್ಲಿ ಪದ್ಯಗಳಲ್ಲಿ ದಪ್ಪ ಮಾತಿನ ಆಡಂಬರದ ವೃತ್ತಗಳನ್ನು ಓದಿದ್ದೆ. ನೊರೆ, ಮೀನು, ಶಂಖ, ನಳ್ಳಿ, ಆವೆಗಳ ನಿತ್ಯ ಶಬ್ದಸಾಂಗತ್ಯ ಅಲ್ಲಿ. ಲಕ್ಷ್ಮಿ, ಚಂದ್ರ, ತಿಮಿತಿಮಿಂಗಿಲ, ಆ ಅಮೃತ ಹಾಲಾಹಲ, ಷಡಕ್ಷರಕವಿಯ ಪ್ರಖ್ಯಾತವಾದ ಪದ್ಯ 'ಅಂಭಃ ಕುಂಭೀನ ಶಬ್ದ ತಾಂಡವವಾಡದೆ, ಜಲಜನಾಭ ಕಟಾಹವಾರೊಡಲೊಳಗಿಹುದೊ ತದ್ವಿಭು ಮದಾಶ್ರಯದೊಳಗಿಹನು ಮನೆಯಳಿಯನಾಗಿ ಅನಂತ ಭೋಗದಲಿ' ಎಂಬ ಸಮುದ್ರರಾಜನ ಹೆಮ್ಮೆ -ಈ ಬಗೆಯ ಪೂರ್ಣಕಥಾ ತಾಂಡವ ಅಲ್ಲಿ ಮಾತ್ರ ನಮಗೆ ದಕ್ಕಿದ್ದು.

ಇನ್ನೂ ನಿನ್ನೆ ಮೊನ್ನೆ ನಡೆದಂತಿದೆ. ಏತಕ್ಕೊ ಉತ್ತರಕ್ಕೆ ಹೋಗಿದ್ದವನು ೧೯೨೧ರ ಜನವರಿಯಲ್ಲಿ ಮದರಾಸಿಗೆ ಇಳಿದು ಬಂದಿದ್ದೆ. ಎರಡು ರಾತ್ರಿಗಳಿಗೆ ಹಿಂದೆ ಹತ್ತಿದ್ದ ಹೌರ ರೈಲು ಬೆಳಿಗ್ಗೆ ಹತ್ತು ಗಂಟೆಯ ಸುಮಾರಿಗೆ ಅಲ್ಲಿಗೆ ಬಂದಿತ್ತು ; ಹಗಲ ಹಲವು ಗಂಟೆ ಕಾಲ ಆ ಊರಲ್ಲಿ ಉಳಿವ ಅವಕಾಶ ದೊರಕಿತ್ತು. ನಾನು ಮೊದಲು ಕಾಣಲು ಧಾವಿಸಿದ್ದು ಕಡಲಿಗೆ. ಸ್ಟೇಷನ್ ಬಳಿ ಯಾವುದೊ ರಾಮಸ್ವಾಮಿ ಮೊದಲಿಯಾರ್ ಎಂಬ ಸುಮಾರು ಹೆಸರಿನವರ ಛತ್ರ. ಅಲ್ಲಿ ನಾಲ್ಕಾರಾಣೆಗೆ ಬಾಳೆಲೆ ಊಟಮಾಡಿ, ಜೊತೆಗೆ ಕರೆತಂದಿದ್ದ ಸೋದರಿಗೆ ವಿಶ್ರಾಂತಿ ಪಡೆಯ ಹೇಳಿ ಓಡಿದೆ ಟ್ರಿಪ್ಲಿಕೇನ್ ದಾರಿ ಹಿಡಿದು ; ವೈವಸ್ವತ ಮನುವಿನ ದೋಣಿಯಂತಿರುತ್ತಿದ್ದ ಮದರಾಸಿನ ಟ್ರಾಂ ಹತ್ತಿ, ಮೌಂಟ್ ರೋಡ್ ಎಡಕ್ಕೆ ತಿರುಗಿ, ಅದು ಕಡಲು ಮುಟ್ಟದೆ ತೆಂಕಲಿಗೆ ತಿರುಗುವ ಮೂಲೆಯಲ್ಲಿ ಇಳಿದೆ. ಜನದ ಜಂಗುಳಿ ಅಲ್ಲಿಗೆ ಮುಗಿದಿತ್ತು. ಆಗಾಗಲೆ ದೂರದ ನೀರ ಮೊರೆ ಕೇಳತೊಡಗಿತ್ತು. ಎದುರಿಗೆ ಅಡ್ಡಲಾಗಿ ದೊಡ್ಡ ಕಟ್ಟಡವೊಂದು ಬಿಳಿಯ ಪಟ್ಟೆಗಳ ಅಲಂಕರಣ ಹಾಕಿದ್ದ ಮಾಸಲು ಕೆಂಪು ಬಣ್ಣದ ಎರಡೊ ಮೂರೊ ಮಹಡಿ ಉಳ್ಳ ಭೂತವಾಸ್ತು. ಹಿಂದೆ ಆರ್ಕಾಟ್ ನವಾಬನ ಅರಮನೆಯಂತೆ. ಮುಂದೆ ದಾರಿಯಿದೆಯೆ ಎಂಬ ಸಂಶಯ. ಸಣ್ಣ ರಸ್ತೆ ಹಿಡಿದು ಅದು ಆಚೆ ಕಡೆಗೆ ದಾಟಿ-ಸೀತೆಂದು ಊಹಿಸಿ ನಡೆದೆ. ಮೊರೆ ಮತ್ತಷ್ಟು ಸ್ಪಷ್ಟವಾಯಿತು. ಅದು ನೀರ ಅಪ್ಪಳಿಕೆಯದು. ಅರಮನೆಯ ಆಚೆಯಿಂದ ಆಚೆಗೆ ದೊಡ್ಡ ಮರೀನ ರಸ್ತೆ ; ಆ ರಸ್ತೆಯ ಸೊಬಗೊ ; ಒಂದು ಕಡೆ ಎತ್ತರದ ಮಹಾಸೌಧಗಳು. ಇನ್ನೊಂದು ಕಡೆ ಅದೋ ! ಮಳಲೊಟ್ಟಿಲು, ಆಚೆಗೆ ನನ್ನ ಗಮ್ಯವಾದ ಕಡಲು ; ಸಮಸ್ತ ಭೋರ್ಗರೆಯ

ಮೂಲ. ಕಣ್ಣು ತುಂಬುವ ನೀಲ ನೆಲಸು ಉದ್ದಕ್ಕೆ ; ಮುಂದೆ ಇನ್ನೇನೂ ಇಲ್ಲ. ಅದೇ ; ಚಲ, ಅಚಲ ನೀಲ. ಮೇಲೆ ಆಕಾಶ; ಕೆಳಗೆ ಕಡಲು. ಆ ಮೊದಲ ಅಚ್ಚರಿ ಅದ್ಭುತ ರಮ್ಯ. ತಡೆಯಲಾಗಲಿಲ್ಲ. ಆ ರಾವ, ಆ ರಂಗು ರಕ್ತಕ್ಕಿಳಿಯಲು ಒಂದು ಕ್ಷಣಕಾಲವೂ ಬೇಕಾಗಲಿಲ್ಲ. ಸ್ವವಶತೆ ತಪ್ಪಿತ್ತು; ಜನವರಿಯಲ್ಲಿಯೂ ಸುಡುವ ಬಿಸಿಲಲ್ಲಿ, ಕಾದ ಮಳಲಲ್ಲಿ, (ಹೂತ ಕಾಲು ತಡೆಯುವುದನ್ನು ಲೆಕ್ಕಿಸದೆ, ವೇಗ ಕುಂಠಿಸುತ್ತಿದ್ದರೂ) ನೀರ ಬಳಿಗೆ ಧಾವಿಸುವ ಚೇತನಕ್ಕೆ ಬೇರಾವ ಪರಿವೆ ಇತ್ತು ! ಕರೆ ಸೇರಿದರೆ ಅದು ನೀರೇ ಅಷ್ಟೂ ! ಬಣ್ಣ ನೀಲವೆ, ಕಪ್ಪೆ? ಹಸುರೆ ? ನರೆಯೆ ? ಬೆಳಕು ಹೇಗೆ ಬಿದ್ದರೆ ಹಾಗೆ-ತಿಳಿ, ಆಳ, ಹೊಳಪು-ಆಗುವ ಆ ಬೂತಾಟ ಕಡಲಿಗಲ್ಲದೆ ಬೇರಾವುದಕ್ಕುಂಟು. ಮುಗಿಲಾಡುವಾಗ ಹಗಲ ಬೆಳಗಿನ ಬಾನಿಗುಂಟೇನೊ. ಅಲೆಯ ಸಾಲು ನೊರೆ ಹೊತ್ತು ದೂರ ದಿಗಂತದಿಂದ ಉಬ್ಬೆದ್ದು ಒಂದು ಇನ್ನೊಂದರ ಮೇಲೆ ಜಿದ್ದು ಮಾಡುವಂತೆ ಬರುವಾಗ ಬೇರೆಲ್ಲ ಮರೆಯಾಗುತ್ತಿತ್ತು. ನೀರ ಸೊಕ್ಕು ಮೈಗಿಳಿಯಿತು. ಭಯವಾದರೂ ಅಲೆಯನ್ನು ಮುಟ್ಟಲು ನೀರ ಬಳಿಗೆ ಹೋದೆ. ನೂಕಿ ಬಂದ ಅಲೆ ಕಾಲನ್ನು ಅಪ್ಪಳಿಸಿತು. ಕಾಲ್ತಳದಿಂದ ಮಳಲು ಕೊರೆದು ಬೀಳುವಂತಾಯಿತು. ಹಿಂದಕ್ಕೆ ಎಗರಿ ಪಾರಾದೆ. ಪುನಃ ಹೋಗಿ ಆ ನೀರನ್ನು ಬೊಗಸೆಯಲ್ಲೆತ್ತಿಕೊಂಡರೆ ಅಂಟು ನಿಜ–ಎಷ್ಟು ತಿಳಿ ನೀರು ! ಒಂದಿಷ್ಟು ನಾಲಗೆಗೆ ಹಾಕಲೆ ? ರಾಮ ರಾಮ ! ಎಷ್ಟು ಕ್ಷಾರ ; ಕಹಿ ಎನ್ನುವಷ್ಟು ಉಪ್ಪು.

ಎಷ್ಟು ಹೊತ್ತು ಅಲ್ಲಿದ್ದೆನೊ ಅರಿಯೆ ; ತಲ್ಲೀನತೆ ಆನಂದವೆಂಬ ಮಾತುಗಳ ಅರ್ಥ ಸಾಮಾನ್ಯನಿಗಾಗಬೇಕಾದರೆ ಕಡಲೊ, ವರ್ಷಾಕಾಲದ ಮುಗಿಲೊಡ್ಡೊ, ಮಹಾ ಪರ್ವತ ಪಂಕ್ತಿಯೊ ಬೇಕು. ಆಗಿನ ರಕ್ತದ ಓಟ, ಸ್ಪಂದನ ಈಗ ಪುನಃ ತಟ್ಟುವಂತಿದೆ. ನೆನಪಿನಲ್ಲಿ ಮುದ್ರಿತವಾದ ಕಡಲ ಮೊದಲ ಸಮಾಗಮ ನನಗೆ ಅದು. ಅಲ್ಲಿಂದೀಚೆಗೆ ಎಷ್ಟೋ ಬಾರಿ ಕಡಲ ದರ್ಶನ ನನಗಾಗಿದೆ. ವರ್ಷ ವರ್ಷವೂ ಒಮ್ಮೆಯಾದರೂ ಮಾಡಬೇಕೆಂಬ ಆಸೆ ಆರಿಲ್ಲ ಮಾತ್ರ. ಪಡುಗಡಲನ್ನು ಮೂಡುಕಡಲನ್ನು ನಾನೆಂದೂ ದಾಟಿಲ್ಲ. ಆದರೆ ನಮ್ಮ ಕರೆಯಲ್ಲಿ ಬೊಂಬಾಯಿಂದ ಮಂಜೇಶ್ವರದವರೆಗೆ, ವೈಸಾಗಿಂದ ಮದರಾಸ್‌ವರೆಗೆ ತಿರುಗಾಡಿದ್ದೇನೆ. ಭಟ್ಟಕಳ ಬಂದರಾಗುತ್ತದೆಂದು ಎಣಿಸಿ ಅಲ್ಲಿನ ಬಂಡೆಗಳ ಮೇಲೆ ನಿಂತು ಅಲ್ಲಿ ಕಟ್ಟಬಹುದಾದ ನೌಕಾನಿಲಯಗಳನ್ನು-ಅಯ್ಯೋ ಬಯಲಾಸೆಯೆ ! – ಅಲ್ಲಿಯ ನೌಕಾಭ್ಯಾಸ ಗೋಷ್ಠಿಗಳನ್ನೂ ಸೈನ್ಯ ಕ್ರೀಡೆಗಳನ್ನೂ– ಅದು ನಮ್ಮ ಇಪ್ಸಿಚ್, ನ್ಯೂಪೋರ್ಟ್ ಆದೀತೆಂದು-ಕಲ್ಪಿಸಿಕೊಂಡಿದ್ದೇನೆ. ಉತ್ತರ ಕನ್ನಡದ ಕಡಲು ಬೆಟ್ಟಗಳ ಸಂಘಟ್ಟನೆ ನನ್ನ ಮನಸ್ಸಿಗೆ ನಿಯಮ ಸ್ವಾತಂತ್ರ್ಯಗಳ ಜೀವನದ ಎರಡೂ ಮುಖಗಳ ಆಪ್ತಪರಿಚಯ ಮಾಡಿಕೊಟ್ಟಿದೆ : ಮುರುಡೇಶ್ವರ, ಗೋಕರ್ಣ, ಕಾರವಾರ, ಬಯಲು, ಕರೆ, ಗದ್ದೆ, ತೋಟ, ಅಳಿವೆ ; ಹಾಯಿ ಹೊಯಿಗೆ ; ಕಪ್ಪಲು, ಕೂವೆ, ಜಂಗಲಿ, ದೋಣಿ ಹಾದು ಪರಿಚಯವಾಗಿದೆ. ಗಂಗೊಳ್ಳಿಯಲ್ಲಿಯೂ ಶರಾವತಿಯಲ್ಲಿಯೂ ಬರತ ಏರುವಾಗ ಉತ್ಸಾಹ ಉಬ್ಬಿ ಎದೆ ನಡುಗುತ್ತಿರುವಾಗ

ಉಸಿರು ಮೇಲಕ್ಕೆ ಬಂದು ದೋಣಿಗಳಲ್ಲಿ ಅವನ್ನು ಏರಿಳಿದು ಹಾದ ಸಂತೋಷಗಳನ್ನು ನೆತ್ತರು ಉಂಡಿದೆ. ಮಳೆಗರೆ, ತೆರೆ, ಬಿರುಗಾಳಿ, ನಿರ್ವಾತ ಪ್ರಸನ್ನತೆ, ನಡುಹಗಲು, ಬಿರುಬಿಸಿಲು, ಬೆಳಗು ಸಂಜೆಗಳ ಹಬ್ಬ, ಮಂಜುಮೋಡ-ಚಂದ್ರಸೋಲಗ, ಗ್ರಹಣ ಪರ್ವ ಕಾಲ – ಒಡ್ಡಿರುವಾಗ - ಒಂಟಿಯಾಗಿ, ಪ್ರಿಯರೊಡನೆ, ಅಥವಾ ದಿಕ್ಶೂನ್ಯನಾಗಿ ಅದರ ಸಾಂಗತ್ಯ ಪಡೆದಿದ್ದೇನೆ. ಯಾವ ದಿನ ನೋಡಿದರೂ ಅದೇ ಮೋಹಕತೆಯೇ; ಒಂದೊಂದು ಸಮಯದಲ್ಲಿಯೂ ವಿಶೇಷವೇ–

'ನಿಚ್ಚಂ ಪೊಸತು : ಅರ್ಣವಂ'

ತೆರೆ ಎದ್ದಾಗ ಒಂದು ಸೊಬಗಾದರೆ ಇಲ್ಲದಾಗ ಎಷ್ಟು ನುಣುಪು ಅದರ ಏರು! ಕಣ್ಗೆ ಹಾಸಿದ ಅದರ ಮಟ್ಟ ನೆಲಸು ; ಆಟದ ತೂಗು-ಬಾಗು, ಆಗಿನ ಬಳುಕು ಅಡಕ, ತುಳುಕದ ತುಂಬು ನೋಡುವಂಥವು. ಅನಂತ ಶಕ್ಯತೆ ಅದರ ಮಡಿಲಲ್ಲಿ. ವಿಶ್ರಾಂತಿಗೊಂಡು ಗಾಳಿಯ ಕಡೆಗೂ ಮೋಡದ ಮೂದಲೆಗೂ ಒಳ ಆವೇಶಗಳ ಕೆರಳಿಗೂ ಗೊರಸಿನಿಂದ ಜೂಜಿನ ತೊಡಗಿನ ಗೆರೆ ಕೆರೆಯುತ್ತ ಕುದುರೆಗಳು ನಿಂತಿರುವಂತೆ ತಲೆ ಆಡಿಸುತ್ತಿರುವಂತೆ ಇರುತ್ತದೆ. ಅಷ್ಟು ಉಪ್ಪಿನ ರಸ ಆವಿಯಾಗಿ ಲೋಕಕ್ಕೆ ಸಿಹಿ ನೀರನ್ನು ಹೇಗೆ ಕರೆಯುತ್ತದೆಯೊ ಅದು ಪ್ರಕೃತಿಯ ಪವಾಡ. ಎಷ್ಟು ಉಪಕಾರಕ ?

ಆದರೆ ಉದಾರ ಚರಿತೆ ಹೇಗೂ ಇರಲಿ. ಚಲಿಸುವ ಬಾನಿಗೆ, ನಟ್ಟ ನೀಲಾಕಾಶಕ್ಕೆ ಸಮನಾದ ಸತ್ವವೆಂದರೆ ಕಡಲೊಂದೇ. ಒಂದರಲ್ಲಿ ಚಂದ್ರ ಸೂರ್ಯ, ತಾರಾಗಣ ಪಂಜರದ ಬಿನ್ನಾಣ ನೆಲಸಿರುತ್ತದೆ. ಅವುಗಳ ಮಸುಕು ಪ್ರತಿಫಲನವೂ ಕಡಲ ಕುಂದಣದಲ್ಲಿ ಕನ್ನಡಿಯಲ್ಲಿ ಮಿನುಗುತ್ತದೆ. ಹಲಗೆಮಿಂಚೊ ಬಳ್ಳಿಮಿಂಚೊ ಆಕಾಶವನ್ನು ತಿವಿವಾಗ ಮುಗಿಲ ಮೋಹರಗಳನ್ನು ಉರಿಸಿದಾಗ ಆ ಪ್ರತಿಬಿಂಬನ ವಿಸ್ಮಯಕರವಾದ್ದು; ಭೀಷಣ ಗಂಭೀರವಾದ್ದು. ನಿನಗೆ ನಾನೇನು ಕಡಮೆ, ನೀನು ಗುಡುಗಿದರೆ ನಾನು ಮಾರ್ಮಲೆತು ಗರ್ಜಿಸುತ್ತೇನೆ ; ನಿನ್ನ ಸಿಡಿಲು ನನ್ನ ನೀರೊಡಲನ್ನೇನು ಮಾಡೀತು ? ನಾನು ಗಿಡವಲ್ಲ, ಮನೆಯಲ್ಲ, ಗೋಪುರವಲ್ಲ, ಹುಲು ಮನುಷ್ಯನಲ್ಲ ಬೆದರಿಸುವುದಕ್ಕೆ, ಅಬ್ಬರಿಸು ; ನಿನ್ನ ಒಣಕೋಪವನ್ನು ಕಾರಿ ಹೋಗು ಎನ್ನುತ್ತದೆ ಕಡಲು. ಅದರ ಗರ್ಭದಲ್ಲಿ ಅಶನಿಪಾತ ಮುಳುಗಿ ಮಾಯವಾಗುತ್ತದೆ. ಹಕ್ಕಿ ಬಾನಲ್ಲಿ ಹಾರೀತು. ರೆಕ್ಕೆ ಬಡಿದೊ ಬಡಿಯದೆಯೊ ಒಂಟಿಯಾಗಿಯೊ ಸಾಲ್ಗಟ್ಟಿಯೊ ಬಾನಯಾನ ಮಾಡೀತು. ಆಕಾಶ ಶೂನ್ಯ. ಎಂಥ ಹಕ್ಕಿಯೂ ನೆಲಕ್ಕೇ, ಮರಕ್ಕೇ, ಗೂಡಿಗೇ ಬರಬೇಕಲ್ಲವೆ ? ಅವು ನೀರ ಮೇಲಾಡುವಾಗ ಎರಡಕ್ಕೂ ಸೇರಿದ ಜೀವ, ಚಲನೆ, ಗಮನ, ರೂಪಣ ಅದರ ಮೇಲೆ ತಿದ್ದುತ್ತದೆ. ಅದು ಕನ್ನಡಿ ಅವಕ್ಕೆ. ಕಡಲ ಕಾಗೆ, ಕೊಕ್ಕರೆ, ಬೆಳ್ಳಕ್ಕಿಗಳ ಪಂಕ್ತಿ ಇದರ ವಕ್ಷದಲ್ಲಿ ನಿರಂತರವಾಗಿ ಆಕೃತಿಗೊಳ್ಳುತ್ತಿರುತ್ತವೆ. ಮೇಲಿಂದ ಯಾವುದೊ ಹದ್ದು ಕಾದಿದ್ದು ಮೀನಿನ ಮೇಲೆ ಅಮೋಘವಾಗಿ ಎರಗಿ ಅದನ್ನು ತುಡುಕುವ ಚಾಣಾಕ್ಷತೆ ದಕ್ಷತೆ ಅಣುಕ್ಷಿಪಣಿಗಳಿಗಿದ್ದೀತೊ ಇಲ್ಲವೊ. ಆ ಆಹಾರ ಬೇಟೆ ಮೂರು ಪ್ರಪಂಚಗಳ

ಆಟವನ್ನೂ ಲೋಕಜೀವನದಷ್ಟೇ ಹುಸಿ ಎನಿಸುತ್ತದೆ. ಇನ್ನೊಂದೆಡೆ ಒಳಗಿನ ಯಾವುದೊ ಜೀವಲೋಕ ಕರೆಯಲ್ಲಿನ ತನ್ನ ಜೀವನವನ್ನೊ ತನಗೆ ಪರಿಚಿತವಾದ ಕೆಳೆಬಾಳನ್ನೊ ಮಳಲ ಮೇಲೆ ಬರೆದು ಕೇಸರಿಕೆ, ನಳ್ಳಿ, ಶಂಖ, ಚಿಪ್ಪು, ತೆಂಗು, ತಾಳೆಗಳ ಚಿತ್ರವನ್ನು ಮುಂಜಾವದಲ್ಲಿಯೇ ಬರೆದಿಟ್ಟು ಹೋಗಿರುತ್ತದೆ. ಇವುಗಳ ರೂಪಣ, ಸಾದೃಶ್ಯ ಲೇಖನಿಗಾಗಲಿ ಕುಂಚಕ್ಕಾಗಲಿ ಶಕ್ಯವಲ್ಲ.

ಇದರ ಕಾರೊಡಲೊಳಗೆ ಏನಿಲ್ಲ ? ಯಾವ ಸತ್ವಗಳ ತಾಂಡವ, ವಿಲಾಸ, ಭೀಷಣತೆ, ಕ್ರೌರ್ಯ ಇಲ್ಲ ? ಯಾವ ಮೃದುತೆ ಇಲ್ಲ ? ಪಾಚಿಯ ತಿಪ್ಪುಳು ನಯ–ನೀರು ಎಷ್ಟು ನುಣುಪು ! ಹಿಡಿದರೆ ಒಡೆವುದು, ಹನಿವುದು, ಸುರಿವುದು. ಅದುಮಿದರೆ ಅಂಗೈಯನ್ನು ಎತ್ತಿ ಹಾಕುವುದು. ಅದರ ಒತ್ತಡವನ್ನೂ ಒದೆತವನ್ನೂ ಲೋಕದ ಯಾವ ವಸ್ತು, ಯಾವ ಒಡಲು ಕಾಣದು ? ತೇಲುವ ದೋಣಿ ಕಾಣಿಸದೆ ? ಹತ್ತು ಇಪ್ಪತ್ತು ಸಾವಿರ ಟನ್ ಭಾರದ ಹಡಗು ಅದರ ಮೇಲೆ ತೇಲುತ್ತದೆ. ಮುಳುಗಿದ ಆನೆ, ತಿಮಿಂಗಿಲ, ಮೊಸಳೆ ಹಿಂಡಿ ಹಿಪ್ಪೆಯಾಗಿ ಕರೆಗೆ ಉಜ್ಜಿ ಬೀಸಿ ಬರುತ್ತವೆ. ಲೋಕದ ಮೇಲೆ ಜೀವರಾಶಿಯ ಎಷ್ಟು ಬಗೆಯ ಗತಿ, ಮತಿ, ಭ್ರಮಣ, ವ್ಯಾಪಾರ ಇವೆಯೊ ಅವಕ್ಕೆ ಕಡಮೆಯಲ್ಲದ ಸಂಖ್ಯೆಯ ರೌದ್ರಾದಿ ವೈಖರಿಗಳಿವೆ. ಅದರ ಆಳವನ್ನು ಆಳಿದವರಾರು?

ನನ್ನನ್ನು ಕಡಲ ಪಕ್ಷಪಾತಿ, ಇವನಿಗೆ ಪರ್ವತದ ನಿಷ್ಠುರ ಔನ್ನತ್ಯ ಸೊಗಸದು, ನಿಯಮಕ್ಕೆ ವಿರೋಧಿ ಎಂದವರುಂಟು. ಪ್ರೀತಿ ಇಷ್ಟು ನಿಜವಾಗಿರುವಾಗ ಅಸಮಾಧಾನವೇಕೆ ? ಪರ್ವತಪಕ್ತಿಯ ಶಿಲಾದರ್ಪಕ್ಕೆ, ಕರ್ಕಶ ಏರಿಗೆ ನಮಸ್ಕಾರ. ನನ್ನ ಕೆಳೆ, ಪ್ರೀತಿ, ಕಡಲ ಮುಚ್ಚಟೆಗೆ. ಒತ್ತಲಿ, ತಡೆಯಲಿ, ಎತ್ತಿ ಹಾಕಲಿ, ತಳಕ್ಕೆ ನೀರು ತಿದ್ದಲಿ, ತೇಲಿಸಲಿ, ಮುಳುಗಿಸಲಿ, ಅದರ ಗೆಡೆಯಾಟ ನನಗೆ ಒಗ್ಗಿದುದು. ಅದರಲ್ಲಿ ಚಲನೆ ಇದೆ ; ಲಯತಾನವಿದೆ. ಶಕ್ತಿಯಿದೆ, ಮೃದುತೆಯಿದೆ ; ದುರ್ದಮ್ಯತೆಯಿದೆ, ಬಿಡುಗಡೆ ಇದೆ ; ಸ್ವಚ್ಛಂದತೆಯಿದೆ, ಶಾಂತಿ ಇದೆ ; ರಭಸವಿದೆ, ಕ್ರೌರ್ಯವಿದೆ ; ಕಾರುಣ್ಯವಿದೆ. ತಂಪೊ ಸೆಳೆಯೊ ಹತ್ತಿರ ಹೋಗಿ ನೋಡಿ-ಎಂಥದೆಂಬುದು ತಿಳಿದೀತು. ಒಳಗೆ ಏನೊ ಎಂತೊ ; ಗೂಢಂ ; ಗಾಢಂ ; ಗಹನಂ, ಗಭೀರಂ : ಗಂಭೀರಂ ಎಲ್ಲ. ಸಾಹಸಿಗಳಾಗಿ ತಕ್ಕ ಸಜ್ಜಿಂದ ಹೋದರೆ ತನ್ನ ಒಳಮರ್ಮಗಳನ್ನೆಲ್ಲ ಕಾಣಿಸುತ್ತದೆ. ಹಗೆಯನ್ನು ಹತ್ತಿಕ್ಕಲು ಜಲಾಂತರ್ಗಾಮಿಗಳಿಗೆ ಅವಕಾಶ ಕೊಡುತ್ತದೆ. ಮುತ್ತು ಹವಳಗಳ ಗ್ರಾಹಕರಿಗೆ ಸಂಪತ್ತನ್ನು ಹೇರಿ ಕಳಿಸುತ್ತದೆ. ವಿರೋಧ ಕಟ್ಟಿಕೊಂಡರೆ ಮುರಿಯುತ್ತದೆ. ಅವರ ಹೆಣ ಮಾತ್ರ ಹೊರಕ್ಕೆ ತೇಲೀತು. ಅಬ್ಬರದ ಹಡಗು ಮುರಿದು ಚೂರಾಗಿ ಅಲ್ಲೊಂದು ಇಲ್ಲೊಂದು ಭಗ್ನಾವಶೇಷ ಚೆಲ್ಲಾಡೀತು.

ಮುತ್ತು, ಹವಳ ಕಡಲ ಬೆಳಸು. ಖನಿಯ ಯಾವ ರತ್ನ, ವಜ್ರ, ಇವಕ್ಕೆ ಸಾಟಿ? ಒಂದು ಬೊಗಸೆ ಕೆಂಪು, ವಜ್ರ, ವೈಡೂರ್ಯ, ನೀಲ, ಪಚ್ಚೆ, ನವರತ್ನಗಳಲ್ಲಿ

ಇತರ ಯಾವುದನ್ನಾಗಲಿ ಬೆಳಕಲ್ಲಿ ಹಿಡಿದು ನೋಡಿ. ಆಮೇಲೆ ಒಂದು ಬೋಗಸೆ ಮುತ್ತನ್ನು ಹಿಡಿದು ಅದರ ಮೋಡಿ ನೋಡಿ. ಆ ಲಾವಣ್ಯ ಎಷ್ಟು ಮಾದಕ ; ಎಷ್ಟು ರಶ್ಮಿಯ ಉರುಳು ತರಿಸಬಲ್ಲದು, ಹುಚ್ಚು ಹಿಡಿಸುವಂಥದು ಎಂಬುದು ಗೊತ್ತಾಗುತ್ತದೆ. ಆ ನುಣುಕಾಂತಿ ಬಿಳುಪಲ್ಲ, ನರೆಯಲ್ಲ, ಹಾಲಲ್ಲ, ದಂತವಲ್ಲ. ಅದು ಮುತ್ತು-ಮುಕ್ತ – ಬಿಡಿ ಬಿಡಿ – ಸುರಿದು ಓಡುತ್ತಿರುತ್ತದೆ. ದುಂಡು, ನುಣುಪು, ನೀರೋಟ. ಬುದ್ಧಿ ಕೆಡಿಸುವಷ್ಟು ಮೋಹಕ. ಆದ್ದರಿಂದಲೇ ಏನೊ ಚಂದ್ರ ಅದರ ಅಧಿದೇವತೆ. ಎಲ್ಲ ಅರೆನೋಟದ ಚೆಲುವೂ ಅಲ್ಲಿ ಮೈಗೊಳ್ಳುತ್ತದೆ. ನಿಂತಲ್ಲಿ ನಿಲ್ಲದೆ ಸುರಿವ ದುಂಡು ಚಲನೆ ಅದರದು. ಏನನ್ನಾದರೂ ತಾಳಿಯೇವು. ಮುತ್ತನ್ನು ಸೈರಿಸಬಲ್ಲೆವೆ ? ಅದಕ್ಕೆ ಕರಗದಿರಬಲ್ಲೆವೆ? ಸೋಲದಿರಬಲ್ಲೆವೆ ? ಮಾತಾಡಿದರೆ ಮುತ್ತು ಸುರಿಯುತ್ತದೆಂಬುದು ಗುಣವೊ ದೋಷವೊ ನಾನು ಅರಿಯೆ. ಸುರಿಯಬೇಕೇಕೆ ? ಅದರ ನೆನಪು ಕಾಲದೇಶಗಳ ಎಷ್ಟೇ ದೂರದಿಂದಲೂ ಪ್ರಲೋಭನವನ್ನು ಉಂಟುಮಾಡುತ್ತವೆ. Perdition catch my soul, I do love thee ; ಸರ್ವನಾಶ ನನ್ನಾತ್ಮವನ್ನು ಹಿಡಿಯಲಿ, ಇನ್ನೂ ನಿನ್ನ ಮೇಲೆ ಪ್ರೇಮ ಉಳಿದಿದೆ.

ಕನ್ನಡದಲ್ಲಿ 'ಶ್ರೀ'ಯವರು ಪ್ರಗಾಥಗಳ ರಚನೆಯನ್ನು ಮೊದಲಿಟ್ಟ ಕಾಲ ಒಂದಿತ್ತು. ಇತರ ಹುಲು ಮನುಷ್ಯರಿಗೂ ಅಂಥವನ್ನು ರಚಿಸುವ ಗೀಳು ಬಂದಿತು ಆಗ. ಪ್ರಗಾಥವೊ ಉದ್ಗೀತವೊ ಒಂದೊ ಎರಡೊ ನಿರ್ಮಿಸಬೇಕೆನ್ನಿಸಿತು ನನಗೂ. ವಸ್ತು ಅದಕ್ಕೆ ತಕ್ಕುದಾಗಬೇಕಾದರೆ ಸಾಗರ ಮಾತ್ರವಲ್ಲವೆ ? ಸಾಗರ ಸಂಸ್ಕೃತ ; ಕನ್ನಡದ ಹೆಸರು ಕಡಲು. ಅದರ ಸಂಬೋಧನೆ ಹೇಗೆ ? ಹತ್ತಿಪ್ಪತ್ತು ಸಾಲುಗಳನ್ನು ರಚಿಸಿದೆ. ಆವಾಹನೆ ಹೇಗೆ ? ಸಮುದ್ರವೆ, ಸಾಗರವೆ ? ಅಲ್ಲ ಕಡಲು. ಕಡಲೇ ಕನ್ನಡ. ಕನ್ನಡಕ್ಕೆ ತಕ್ಕುದು. ಹೇರಾಳದ್ದು. ಅನಂತ ವಿವಿಧತೆಯದು ; ನುಣ್ಪು ಗುಣ್ಪೆನದು. ಪ್ರಕ್ಷುಬ್ಧವೊ ಅಂತಃಪ್ರಸನ್ನವೊ ಆಗಬಲ್ಲದು. ಅದರ ಚಪಲತೆಯನ್ನು ಹಿಡಿಯಬೇಕು. ಆದರೆ ಇಂದು ಈ ಗದ್ಯದಲ್ಲಿ ಹೇಗೊ ಅಂದು ಛಂದದಲ್ಲಿ ಹಾಗೇ ಹೊರನೋಟ ಹೊರಸಂಪರ್ಕ ಮಾತ್ರ ಸಿಕ್ಕಿತು, ಜೀವ ಸಿಕ್ಕಲಿಲ್ಲ. ಬೇಲೂರ ದೇವಾಲಯದಲ್ಲಿ ಹೊರಗೋಡೆಗಳ ಚಿತ್ರಶಿಲ್ಪದಲ್ಲಿ ಶಿಲಾಬಾಲಿಕೆಯರನ್ನು ನೋಡುತ್ತ ಆ ಮತ್ತಿನಲ್ಲಿ ಚೆನ್ನಕೇಶವನನ್ನೇ ಕಾಣದೆ ಹೋಗುತ್ತೇವೆಯಲ್ಲವೆ ! ಹಾಗೆ. ಹೇಗೊ ಆಗಲಿ ಸಂಬೋಧನೆ ; ಆ ಬಳುಕು, ಮಾಲೆ, ಒಯ್ಯಾರ ; ಆ ಹೊರಳು ; ಧಡಲ್ ಬಡಲ್ ಎಂದು ನೀರಭಾರ ದೂರ ದಿಗಂತದಿಂದ ಬಂದು ಒಡೆವ, ಕರೆಯನ್ನು ಬಡಿಯುವ, ತಳದ ಮಳಲನ್ನು ಬಗಿದು ನಿಮ್ಮ ಸ್ತಿಮಿತವನ್ನು ತಪ್ಪಿಸುವ ಆ ಶಕ್ತಿಯನ್ನು ಏನೆಂದು ಕರೆಯುವುದು ?

ಓಹೊ ಬಂತು, ಬಂತು. ಈ ಅಲೆ ಉಳಿದವಕ್ಕಿಂತ ದೊಡ್ಡದು ಎಂಬುದು ಬಳಿಗೆ ಬರುವ ಹತ್ತು ಗಜ ಮುಂಚೆಯೇ ಇನ್ನೊಂದರಲ್ಲಿ ಕಲೆತು ಮಾಯವಾಯಿತು. ಇಲ್ಲವೊ : ಕೋಟೆಯ ತೆನೆ ಬುರುಜುಗಳಂತೆ ವ್ಯೂಹ ರಚಿಸಿ, ಚಕ್ರಪಟ ಯಂತ್ರದಂತೆ (Cyclorama) ಬಗೆಬಗೆಯ ವಿನ್ಯಾಸಗಳನ್ನು ಕಾಣಿಸಿತು. ಇಲ್ಲವೆ : ಸಾವಿರವಾಗಿ

ಮುರಿದ ಅಲೆ ನಿರಿನಿರಿಯಾಗಿ ಉಜ್ಜಿ ಬರುವಾಗ ಯಾವ ನರ್ತಕನ ನೃತ್ಯದ- ಲಂಗದ ನಿರಿ, ಚಿಮ್ಮು, ದೋತರದ ಬಂಗಾಳಿ ಚುಂಗು ಹಾಗೆ ಚಿಮ್ಮೀತು, ಎರಚೀತು ! ಅಂಚು ರೇಸಿಮೆಗಿಂತ ತೆಳು : ಬಲೆ ಜರಡಿ ; ಅಂಚಿಗೆ ಕಟ್ಟಿದ ನೊರೆ ಬುದ್ಬುದಗಳ ಮುತ್ತು ಗೆಜ್ಜೆಗಳನ್ನು ಹಾಗೆ ಎತ್ತಿ ವೇದಿಕೆಯ ಮೇಲೆ ಯಾವ ಗತಿ, ಧಾವತಿ ಹರಹೀತು? ಇದು ಲಾಸ್ಯವಲ್ಲ ; ಗಂಡುನೃತ್ಯ ; ತಾಂಡವ. ಪ್ರಕೃತಿಯ ಕ್ರೀಡನ. ಇಂಥದನ್ನು ಎತ್ತಿ–

ತಾಯ ಚೊಚ್ಚಿಲ ಕುವರಿ, ತೆರೆಯೊಡಲ, ಹೆರೆ ನೊಸಲ ದೇವಿ,
ಕಡಲೆ, ಓ ಕಡಲೆ, ಹೆಗ್ಗಡಲೆ –

ಎಂದು ಬರೆದೆ. ಕೂಡಲೆ, ಇದಾವ ಕಡಲೆ? ಬಂಗಾಳದ್ದೊ ಪಂಜಾಬಿನದೊ ಎಂದರೆ ನೀವು? ಹುರಿಗಡಲೆಯೊ ನೆಲಗಡಲೆಯೊ ಎಂದರೆ ಇನ್ನಾರೊ ? –ನಾನು ಮಾಡಬೇಕೇನು? ಹೇರಾಸೆ ಮಣ್ಣಾಯಿತು. ನನ್ನ ಕಡಲಗೀತೆ ನೀರುಪಾಲಾಯಿತು. ಸಾಗರದ ಮಹಾಸತ್ವ ಅಲ್ಪ ಪ್ರಾಣಿಯ ಎದೆಗಾರಿಕೆಯನ್ನು ಮುರಿದು ಮುಯ್ಯಿ ತೀರಿಸಿಕೊಂಡಿತು. ಇನ್ನೆಲ್ಲಿ ನನಗೆ ಕಡಲ ಸಂಬೋಧನೆ; ನನ್ನ ಕರೆಗೆ ಆಸರೆ?

ಮೂಡುಕಡಲ ಮೇಲೆ ಉದಯಿಸುವ ಸೂರ್ಯ ಚಂದ್ರರ ಸೊಬಗು ಲೋಕ ಮೋಹಕವಾದ್ದು. ರಕ್ಕಸ ರಾತ್ರಿಯ ನುಂಗಿನಲ್ಲಿ ಇನ್ನಾವ ಖಂಡದಲ್ಲಿ ಎಲ್ಲಿತ್ತೊ ನಿರ್ಬಂಧದಲ್ಲಿ –ಈ ಬೆಳಕಿನ ಕಣ. ಕತ್ತಲನ್ನು ಭೇದಿಸಿ ಮೇಲೆ ಬರುತ್ತದೆ ಬೆಳಕು. ಚುಕ್ಕೆ ಚುಕ್ಕೆಯಾಗಿ; ಚಕ್ಕೆ ಚಕ್ಕೆಯಾಗಿ; ಸಾಲ್ಗೆರೆಗಳಾಗಿ, ಪಟ್ಟಿಪಟ್ಟಿಯಾಗಿ ಕೆಂಪಿಟ್ಟು-ಹೂ ನಗೆ, ಹಳದಿ ಉಟ್ಟು : ಬಿಳಿಯನ್ನು ಎರಚಿ ಚಿಮ್ಮಿ ; ಕಾಂತಿ ಉಕ್ಕಿಸುತ್ತ ; ಹಗಲ ಒಸಗೆಯನ್ನು ಸಾರುತ್ತ. ನಸುವಾಗಿ ಹರಡಿದ ಹಗಲು ಕಡೆಗೆ ಉಕ್ಕೇಳುತ್ತದೆ-ಕರೆಯಲ್ಲಿ ನೋಡುತ್ತ ನಿಂತ ನಿಮ್ಮ ತಲೆಯ ಮೇಲೆಲ್ಲ ಬೆಳಕೆರಚಿ. ಹಿಂದಿನ ಬೆಟ್ಟದ ಸಾಲನ್ನು ಎಚ್ಚರಿಸಿ ನಗಿಸಿ. ಉದಯದಲ್ಲಿ ಎಳತೇಜಸ್ಸು ಬೆಳೆ ಬೆಳೆಯುತ್ತ ವಿಕ್ರಮಗಳನ್ನು ಸ್ಥಾಪಿಸುತ್ತಿದೆ. ತಪ್ಪಲಲ್ಲಿ, ಕಿಬ್ಬಿಯಲ್ಲಿ ಕಣಿವೆಗಳನ್ನು ಕೂಡಿಸಿ ಪರದೆ ಕಟ್ಟಿದಂತೆ, ಮೌಂಜಿ ಕಟ್ಟಿದಂತೆ, ಜನಿವಾರ ಹಾಕಿದಂತೆ ಇದ್ದ ಯಾವುದೊ ಮಂಜಿನ ಮರಿ ಗದ್ದೆಗಳ ಮೇಲೆ ಹಾದು ಅಳಿವೆಯಲ್ಲಿಗೆ ಸಾರಿದಾಗ ತಾನೊಲಿಯಲಾರದ ಅಳಿವೆಯ ಮಳಲ ಕರೆಗೆ ಓಲದೆ ಕಡಲ ಮೇಲಕ್ಕೇರಿ ಹೋದಾಗ ಅದರ ಮೇಲಾಡುವ ಮುಗಿಲಲ್ಲಿ ಸೇರಿ ಅದರಂತೆಯೇ ಕಡಲಿಗೆ ಓಲಗ ಸಲ್ಲಿಸುತ್ತದೆ.

ಎಲ್ಲಕ್ಕೂ ಚೈತನ್ಯ, ಕಾಂತಿ, ಕಾವು, ಶಕ್ತಿ ತರುತ್ತ, ದುಡಿಸುತ್ತ, ನಡಸುತ್ತ ಏರುವ ಪ್ರಭಾವ ಸೂರ್ಯನದು. ಅದರ ಮೂಡು, ಏರು, ನಡು ಹಗಲ ನೆತ್ತಿ ನಿಲವು, ಇಳಿವು ಮುಳುಗುಗಳ ಆವರ್ತ ಸಮಸ್ತ ಸಂಸಾರದ ಸಂಕೇತ. ಲೋಕಕ್ಕೆ ಪ್ರಕೃತಿ ದಿನಾ ನುಡಿದು ಕಾಣಿಸುವ ಸಂದೇಶ ಕಾಣಿಕೆ. ಎಲ್ಲ ಬಾಳೂ ಹೀಗೇ : ಇದು ಸಂಸ್ಕೃತಿ. ಅದರ ಚಿರಂತನ ವಿಧಾನ ; ನಿರಂತರ ಪುನರ್ನವೀಕರಣ; ಕಾಲಮಾನ, ಭಾಗ್ಯಮಾನ ಇಲ್ಲಿ ಹೇಗೆ ಸೂತ್ರಗೊಳ್ಳುತ್ತವೆ ನೋಡಿ ಎನ್ನುತ್ತದೆ. ವಿಶಾಖಪಟ್ಟಣದಲ್ಲಿಯೊ

ಮದರಾಸಿನಲ್ಲಿಯೊ ಉದಯಕ್ಕೆ ಕಾಣಿಕೆ ಕೊಟ್ಟರಿ; ಮಂಜೇಶ್ವರದಲ್ಲಿಯೊ ಮಲಪೆಯಲ್ಲಿಯೊ ಧಾರೇಶ್ವರದಲ್ಲಿಯೊ ಗೋಕರ್ಣದಲ್ಲಿಯೊ ಮುಳುಗನ್ನು ನೋಡಿ. ತುಂಬಾ ದೂರಬಿಟ್ಟದ ಮೇಲಿಂದ, ಅದೃಷ್ಟವಿದ್ದ ದಿನ, ಆಗುಂಬೆಯಿಂದ ದಿಗಂತವನ್ನು ರಂಜಿಸಿ ಒಂದು ವೈಭವ ಕಂಡೀತು. ನೆಚ್ಚಿಕೆಯೇನು? ಕಂಡರೆ ಕಾಣಬಹುದು, ಇಲ್ಲವಾದರೆ ಇಲ್ಲ. ಇಲ್ಲಂತೂ ಹೆಚ್ಚು ಶಕ್ಯ. ಕರೆಯಲ್ಲಿ ಕಾಯುತ್ತ ನಿಲ್ಲಬಹುದು. ಒಂದು ದಿನವಲ್ಲದಿದ್ದರೆ ಮತ್ತೊಂದು ಸಂಜೆಯ ಅಸ್ತದ ದಿವ್ಯೋತ್ಸವ ಕಣ್ಣಿಗೆ ಖಂಡಿತ ಇಂಬಾಗುತ್ತದೆ. ಹಗಲು ಬೇಗೆಯಿಂದ ತಾಪಕೊಟ್ಟು ರಕ್ತವನ್ನು ಹೀರಿದ್ದ ಸೂರ್ಯನದು ಹಗ್‌ಕಾಂತಿ ಆಗ. ವೃದ್ಧಾ ನಾರೀ ಪತಿವ್ರತಾ ಎನ್ನುತ್ತಾರೆ : ಆಗಲಾದರೂ ಆದಳಲ್ಲ. ಅದೂ ಪುಣ್ಯವಲ್ಲವೆ ? ಜನ ಏಕೆ ಹಲ್ಲು ಕಿರಿಯುತ್ತಾರೆಯೊ! – ಅವಳ ಪಾತಿವ್ರತ್ಯಕ್ಕೆ ಭಂಗ ತಂದವರೇ ಹಲವೇಳೆ. ವೃದ್ಧೋ ಪುರುಷಃ? ಅವರನ್ನು ಏಕನ್ನಬಾರದು?.... ಕಾದ ಹೊನ್‌ಕಾಂತಿ, ಕಿತ್ತಳೆ, ಕೆಂಪು, ಪಿಂಗಲ, ನೇರಿಲದ ಒಳಮೈವರ್ಣ. ಪಲ್ಲಂಗಕ್ಕೆ ಪರದೆ ಕಟ್ಟಿದಂತೆ ಪಡುವಲಲ್ಲಿ ಆ ಮುಳುಗಿಗೆ ಮೇಲ್ಗಟ್ಟು ಕಟ್ಟಿರುವುದನ್ನು ಕಂಡಾಗ ಜೀವ ಧನ್ಯವೆನ್ನಿಸುತ್ತದೆ. ಖಚಿತ ದಿಗಂತದಲ್ಲಿ ತೂಗಿ ಪೂರ್ತಿ ಎರಡು ನಿಮಿಷಕಾಲ ಕ್ರಮಕ್ರಮವಾಗಿ ಆ ಬಿಂಬ ತಾಯೊಡಲೊಳಕ್ಕೆ ಮುಳುಗಿದಾಗ ನಿರಂಕುಶ ಶೋಷಕನ ವಿಷಯದಲ್ಲಿಯೂ ಸಮಾಧಾನ ತರುವ ಪೂರೈಕೆ ಕಾಣುತ್ತದೆ. ಆ ತರುವಾಯ ಇಳಿವುದು ಕತ್ತಲು. ಶಬ್ದವೊಂದನ್ನುಳಿದು ಎದುರಿನ ಕಡಲನ್ನೇ ಕಾಣಿಸದಾಗಿಸುವ ಗಾಢ 'ಘೋರ ತಿಮಿರ ಘನನಿಬಿಡ ನಿಶೀಥ'.

ಕಡಲ ಸೌಮ್ಯತೆ ನಿಜವಾಗಿ ನೋಡುವಂಥದು. ಎಷ್ಟು ಬೆಳಕಲ್ಲಿ, ಹತ್ತಿರ, ದೂರ ನಿಂತು ನೋಡಲಿ ಕ್ಷಣ ಕ್ಷಣ ಬದಲಾಯಿಸುವ ಆ ನೆಲಸು, ಚಲನೆ, ವಿಶೇಷ. ಆ ವಕ್ಷದ ಮೇಲೆ ಒಮ್ಮೆಗೇ ಆಡುವ ನೆಳಲು ಬೆಳಕಿನಾಟ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯದು. ಒಂದು ಕಡೆ ನೆಳಲು ಕವಿದರೆ, ಇನ್ನೊಂದೊ ಎರಡೊ ಕಡೆ ಬಗೆಬಗೆಯ ಬಿಸಿಲು ಬಿದ್ದು ಸತು ತವರಗಳ ಮೇಲೆ ಹರಡಿದ ಪ್ರಭೆಯಂತೆಯೊ ಎರಕದ ಗಾಜಿನ ಮೇಲೆ ಎರಚಾಡಿ ಚೆಲ್ಲಿದ ಉರಿವ ಜ್ವಾಲೆಯಂತೆಯೊ ಕಾಣಬಲ್ಲದು. ಮೋಡವಿಳಿದೊ ಮಂಜು ಮುಸುಕಿಯೊ ಮಳೆ ಕರೆಯುತ್ತಲೊ ಇರುವಂದು ನಿರ್ವಿಶೇಷವಾದ ಒಂದು ನರೆಮುಸುಕು, ಕರಿಮುಸುಕು ನೆಲದಿಂದ ಬಾನವರೆಗೂ. ಬಾನಾವುದು ಕಡಲಾವುದು ಎಂಬುದು ಅರಿಯದಂತೆ ಲಂಬಿಸಿರುತ್ತದೆ. ಅನಂತಾ ವೈ ಜಾಲಾಃ. ಈಗಿನ ಈ ಎತ್ತರದಿಂದ ಬಿಲ್ಲಕಮಾನಿನಂತೆ ಪಡುವಲಲ್ಲಿ ಅಖಂಡವಾಗಿ ಹಬ್ಬಿದೆ. ಉಗಿನಿ, ಹಲಸು, ಮಾವು, ತೆಂಗು, ಗೋಡಂಬಿ ಗಿಡಗಳಾಚೆ, ಹೆಂಚಿನ ಕಾರ್ಖಾನೆಯ ಹೊಗೆ ಕೊಳವಿಯ ಗುಂಗುರು ಹೊಗೆಯುಗಿತದ ಆಚೆ, ಸರುವೆಯ ತೋಪಿನ ಸಾಲುಗಳ ನಡುವೆ ಮಿನುಗುವ ಬಿಡುವಾದ ಹೊಯಿಗೆಯಾಚೆ ಅಪಾರ ಜಲವ್ಯಾಪ್ತಿ. ಒಂದೊಂದು ಜಾವ ಒಂದೊಂದು ಬೆಡಗಿನಲ್ಲಿ. ಮುಗಿಲು ಕಡಲುಗಳ ಮಿಲನ ಒಂದೊಂದು ಸಲ ತೆರೆದರೆ ಇನ್ನೊಂದು ಸಲ ಒಂದರ ಸ್ತಬ್ಧತೆ ಇನ್ನೊಂದರ

ಏಳುಬೀಳು ಕಣ್ಣು ತುಂಬುತ್ತದೆ. ಅಥವಾ ಉದ್ದನ್ನ ನೊರೆಯ ಸಾಲೊಂದೇ ಇದು ಕಡಲು, ಇದು ಬಾನು ಎಂಬ ವ್ಯತ್ಯಾಸವನ್ನು ಕಾಣಿಸುವಂಥದು. ಇದ್ದಕ್ಕಿದ್ದಂತೆ ಬಿಸಿಲಾಡಿತೆನ್ನಿ ; ಆ ನೊರೆಯ ಹಸರ ಹಿಮಾಲಯದ ಮೇಲೆ ನೆಲಸಿದ ಮಂಜಿನ ಮೆಟ್ಟಿಲ ಘಟ್ಟದಂತೆ ಒಡ್ಡಿರುತ್ತದೆ. ಹತ್ತಿರ ಎದುರಿಗೆ ನಿಂತಾಗಲಂತೂ ಅದೆಷ್ಟೋ ಅಪಾರವಾಗಿ ಕಾಣಲಿ ದಾಟಬೇಕು, ಆಚಿನ ಖಂಡಗಳನ್ನು ತುಳಿಯಬೇಕು, ಇದರ ಆಳವನ್ನು ಬೆದಕಿದರೆ ಏನೇನು ವಿಚಿತ್ರಗಳು ಕಾಣುವುವೊ ನೋಡಬೇಕು ಎಂಬ ಆಲೋಚನೆ, ಆಕಾಂಕ್ಷೆ ಬರುತ್ತವೆ. ಮುಳುಗಿದರೆ ಮುಳುಗಿದೆ. ತೀರ ಸಿಕ್ಕದಾದರೆ ? ಎಂದಿಗೂ ಸಿಕ್ಕದೆಯೇ ಹೋದೀತೆ ? ಯಾನ ಮಾಡಲೇಬೇಕು, ಮುಳುಗಲೇಬೇಕು ಎನ್ನಿಸುತ್ತದೆ.

ಒಮ್ಮೆ ಹೀಗಾಯಿತು : ಸೂರ್ಯಗ್ರಹಣಕಾಲ ; ಬೊಂಬಾಯಲ್ಲಿ ನಮ್ಮ ಕೊಠಡಿಯಲ್ಲಿನ ನಾಲ್ವರು ಮಿತ್ರರೊಡನೆ ಈಗ ಚರ್ಚ್ ಗೇಟ್ ನಿಲ್ದಾಣವಿರುವಲ್ಲಿಗೆ ಹೋದೆವು. ೧೯೨೨ ಆಗ. ಇನ್ನೂ ಅದೆಲ್ಲ ನೆಲವಾಗಿ ಅಷ್ಟು ಮಂದಿರಗಳಾಗಿರಲಿಲ್ಲ. ಕೊಲಾಬದವರೆಗೂ ಬಿ.ಬಿ. ಅಂಡ್ ಸಿ.ಐ. ಚರಮನಿಲ್ದಾಣದ ಕರ್ಮಾಗಾರಗಳಿರುತ್ತಿದ್ದವು. ಸ್ನಾನಕ್ಕೆ ಅನುಕೂಲವೆಂದು ಹೋದೆವು. ಈಗ ಸ್ಟೇಷನ್ ಇರುವಲ್ಲಿಂದ ೧–೧೩/೪ ಫರ್ಲಾಂಗ್ ದೂರದಲ್ಲಿತ್ತು ಅಲ್ಲಿಗೆ ನಾವು ಹೋಗಿ ಸೇರಿದಾಗ ನೀರು. ನಡುವೆ ಮಳಲ ಹರಹು. ನೆಲ ಒಣಗಿತ್ತು. ಕರೆಯಲ್ಲಿ ವಕ್ರವಾಗಿ ಮೊನೆಯಾಗಿ ಗುಳ್ಳೆ ಗುಳ್ಳೆ ಒಡೆದ ಸಣ್ಣ ದೊಡ್ಡ ಕಲ್ಲು ತುಂಡುಗಳ ಒಟ್ಟಿಲು ; ತೆಪ್ಪಗೆ ಗೋಡೆಗೆ ಹತ್ತಿರ ; ಒಂದು ಕಡೆ ಸುರಿದಿದ್ದಂತೆ. ಕಡಲೆಯಬೇಳೆ ಪಾಯಸವೂ ಇತರ ಪಾಯಸಗಳಷ್ಟೇ ಚೆನ್ನ, ಮಾಡುವಂತೆ ಮಾಡಿದರೆ ಎಂದು ನಾನು ಪಂಥ ತೊಟ್ಟಿದ್ದೆ ; ಅಂದು ಅಡಿಗೆಯ ಸರದಿ ನನ್ನದು. ಗಸಗಸೆಯ ಕಣ್ಣಾಮದಿನ ಭಕ್ತರು ಆ ನಾಲ್ವರು ಗೆಳೆಯರು ; ನಾನು ಕಡಲೆಬೇಳೆ ಕೋಸಂಬರಿಯ, ಹಯಗ್ರೀವದ ಪಕ್ಷಪಾತಿ ಅಲ್ಲ. ಆದರೆ ಗುಣಕ್ಕೇನು ಮಾತ್ಸರ್ಯ ? ಬೇಳೆಯನ್ನು ತುಪ್ಪದಲ್ಲಿ ಕರಿದಿಟ್ಟು, ಪಲ್ಯಕ್ಕಾಗಿ ಪಡವಲಕಾಯನ್ನು ಹದವಾಗಿ ಹೆಚ್ಚಿಟ್ಟು ಬಂದಿದ್ದೆ. ಹತ್ತು ನಿಮಿಷದಲ್ಲಿ ಕಡಲು ನಮ್ಮ ಕಡೆಗೆ ಚಲಿಸತೊಡಗಿತು. ೧೦೦ ಗಜ ಮುಂದೆ ಹೋದೆವು. ಅಲೆ ನುಗ್ಗಿ ಬಂತು. ದೊಡ್ಡದು, ಅದಕ್ಕಿಂತ ಗಡಸು, ಭೀಷಣ. ಆವರೆಗೆ ಅಲೆಗಳಲ್ಲಿ ಸ್ನಾನಮಾಡುವ ವಿಧಾನವನ್ನು ಕಲಿತಿದ್ದ ತಂತ್ರಗಳೆಲ್ಲ ಎರಡು ನಿಮಿಷದಲ್ಲಿ ವ್ಯರ್ಥವಾದವು. ಅಲೆ, ಅಲೆ, ಅಲೆ ; ಅಲೆಯ ಮೇಲೆ ಅಲೆ; ನುಗ್ಗು ಅಲೆ ; ಆಳೆತ್ತರದ ಅಲೆ ಒಂದೊಂದಾಗಿ ಉಬ್ಬಿ ಅಲುತ್ತಾ ಬಂತು-ಇಲ್ಲಿ ನೋಡಿ! ಸ್ನಾನ ಸಾಕಾಯಿತು; ಮೈನಡುಕ; ಕೆಳಗೆ ಮಳಲು ಕೊರೆಯುತ್ತಿದೆ. ಹೆಜ್ಜೆ ಸೋತು ಆಸರುತ್ತಿದೆ. ಕಾಲು ತತ್ತರಿಸುತ್ತಿದೆ. ಕರೆಯಲ್ಲಿ ಜಡವಾಗಿ ಬಿದ್ದಿದ್ದ ಕಲ್ಲು ಅಲೆ ಬಡಿದಾಗ ಅದರೊಡನೆ ಹಿಂದಕ್ಕೆ ಬಂದು, ಮುಂದಕ್ಕೆ ಸಾರಿ ಕಾಲನ್ನು ಬಡಿದು ರಕ್ತ ಕಾರಿಸತೊಡಗಿತು. ನೆತ್ತರಗಾಯದ ಮೇಲೆ ಕಡಲ ಉಪ್ಪು ನೀರು ಟಿಂಕ್ಚರ್ ಹಚ್ಚಿದಂತೆ, ಕಟ್ಟಿರುವೆ ಕಚ್ಚಿದಂತೆ ಉರಿ, ಬೇನೆ ಉಂಟು ಮಾಡುತ್ತಿತ್ತು.

ಸಾಕಪ್ಪ ಈ ಪರ್ವದ ಸಹವಾಸ ಎಂದು ಜೀವದ ಒರಸೆ ದಡಕ್ಕೆ ಬಂದು ಮೈ ಒರಸಿಕೊಂಡು ಮನೆಗೆ ಬಂದೆವು. ನೋವು, ಭೀತಿ, ಎದೆಯ ತಲ್ಲಣ ಮರೆಯುವುದಕ್ಕಾಗಿ ಪಲ್ಯ, ಪಾಯಸ ಸಮಸ್ತವನ್ನೂ ಮುಗಿಸಿದೆವು. ಅಟ್ಟ ಪಾತ್ರೆಗಳು ಬರಿದಾದವು. ಗೆಳೆಯರ ಪ್ರಶಂಸೆಯಲ್ಲಿ ಗಾಯದ ನೋವು ಸ್ವಲ್ಪ ಮರೆಯಿತು. ಮುಂದೆ ಮೂರು ದಿನ ಹಿಡಿಯಿತು ಬೋರಿಕ್, ವ್ಯಾಸಲೀನ್ ಹಚ್ಚಿ ಕಾಲನ್ನು ಹದಕ್ಕೆ ತರಲು. ಎಷ್ಟು ಸಾಧುವಾಗಿ ನಿರ್ಜೀವವಂತೆ ಬೆಂಡು ಬಡಕಲಾಗಿ ಕಾಣುತ್ತಿದ್ದ ಕಡಲ ಹಿತ್ತಿಲ ಕೊಲ್ಲಿ ಎಷ್ಟು ಬೇಗ ಭೀಷಣವಾಯಿತು ! ಅದರ ನಿಯಮ, ಚೆಲ್ಲಾಟ ತಂಪು ಹುಯಿಲು ಅದಕ್ಕೆ, ನಮ್ಮ ಪಾಡು ನನಗೆ.... ಗುರುಹಿರಿಯರೊಡನೆ ಗೋಕರ್ಣದಲ್ಲಿ ಬೇಲಿಕೆರೆಯ ಪ್ರವಾಸಿ ಮಂದಿರದ ಹಿಂದಿನ ಟೆನ್ನಿಸ್ ಅಂಗಳದಂತಹ ಕಡಲತಡಿಯಲ್ಲಿ ಮಾಡಿದ ಸ್ನಾನಗಳ ನೆನಪು ಬಂಗಾರದಂಥದು. ಆ ಪ್ರಸನ್ನತೆ, ಹಿತಮಿತ ನೆಲಸು ಬೇರೆಲ್ಲಿಯೂ ಕಾಣವು. ಇನ್ನು ನಾಲ್ಕಾರು ದೀವಿಗಳನ್ನು ಸುತ್ತಿ ಊರೊಳಕ್ಕೆ ನುಗ್ಗಿ ಊರ ಪಡುವಲಿಗೆ ಚೆಲುವಿನ ವೇಲೆಯನ್ನು ಹಾಕಿ ಅಲಂಕಾರಗೊಳಿಸಿರುವ ಕಾರವಾರದ ಚಿತ್ರ ಸೌಂದರ್ಯ ನಮ್ಮಲ್ಲಿ ಹೆಚ್ಚು ಕಡೆ ಕಾಣದು. ಒಟ್ಟಿನಲ್ಲಿ: ನನಗೇನೊ ಕಡಲ ಹುಚ್ಚು. ಪಡುಗಡಲದು. ಅಲ್ಲಿ ಎಲ್ಲಿಯಾದರೂ ನನ್ನ ತವರು ರಾಜ್ಯದಲ್ಲಿ, ಒಂದೆರಡು ಎಕರೆ, ಕಡೆಗೆ ನಾಲ್ಕಾರು ಗುಂಟೆ ನೆಲ ಕೊಂಡು, ಒಂದು ಗುಡಿಸಲು ಹಾಕಿ ವರ್ಷಕ್ಕೆರಡು ಸಲ ಒಂದೆರಡು ತಿಂಗಳು ಕಳೆಯೋಣ– ಕಡಲಿಗೆ ಮುಖಮಾಡಿ – ಲೋಕಕ್ಕೆ ಬೆನ್ನು ತಿರುಗಿಸಿ, ನಿರ್ಯೋಚನೆಯಿಂದ – ಎನ್ನಿಸಿದೆ, ಎಷ್ಟೋ ಸಲ. ಅದು ನನಗೆ ದಕ್ಕಬಲ್ಲ ಸೌಭಾಗ್ಯವಾಗಿಲ್ಲ. ಯೋಚನೆ, ಕನಸು ಕಲ್ಪನೆಯಾಗಿಯೇ ಉಳಿದಿದೆ. ರಸದೃಷ್ಟಿಯಲ್ಲಿ ಮನಸಾ ಆಸ್ವಾದನೆ ತಾನೆ ಸಾರಾಂಶ ? ಹೀಗಿರುವುದೇ ಒಳಿತೇನೊ. ಭಾಗ್ಯ ದೊರೆತರೆ ಆಸೆಯ ಮೊನೆ-ಏಕೆ, ಆಸೆಯೇ–ಇಂಗಿಹೋದರೆ?

ಇಲ್ಲ : ಉದ್ದಕ್ಕೆ ಹೊಯಿಗೆ ನೆಲಸಿನಲ್ಲಿ ಎಡಕ್ಕೆ ಕಡಲನ್ನು ಮಾಡಿಕೊಂಡು ಭೂತ ಹಿಡಿದಂತೆ ನಡೆಯುತ್ತಿರಬೇಕೆನ್ನಿಸುತ್ತದೆ. ಎಡಕ್ಕೇಕೆ ಎಂದೀರಿ. ನನ್ನ ಎಡ ಕಣ್ಣು ಪ್ರಬಲವೊ ಅಥವಾ ಅದು ಎಲ್ಲರಿಗೂ ಸಹಜವಾದ ರೀತಿಯೊ ಕಾಣೆ. ಕಡಲು ಬಲಕ್ಕಿರುವಾಗ ನನಗೆ ಅದರ ಮೇಲೆ ಏಕಾಗ್ರತೆ ಬಾರದು. ಲೋಕ ಸೆಳೆಯುತ್ತದೆ. ಜನ, ಮರ, ಮನೆ, ಹೆಣ್ಣು ಗಂಡು, ವ್ಯಾಪಾರ–ಇತರ ನೋಟಕ್ಕೆ ಆಗ ಕಣ್ಣು ಸೆಳೆಯುತ್ತದೆ. ಹೀಗೆ ಬುದ್ಧಿಗೆಟ್ಟು ನಡೆಯುತ್ತಿರುವಾಗ ಇವನ ಗತಿಯೇನು ಎಂದು ಗೆಳೆಯ ಪೈಗಳು ನನ್ನ ಮೇಲೆ ಕಾವಲು ಹಾಕುತ್ತಿದ್ದುದುಂಟು. ಕಾವಲವನ ಮಾತನ್ನು ಈತ ಕೇಳುವವನಲ್ಲವೆಂದು ಹಿಂದೆಯೇ ಬಿಳಿಗೌಸಿನ ಅಥವಾ ಬಣ್ಣ ತೇಲಿದ ತಮ್ಮ ಚತ್ರಿ ಹಿಡಿದು ನಡೆದು ತಾನೇ ಬಂದು ರೈಲಿನ, ಊಟದ, ತಮ್ಮ ಹೊಟ್ಟೆ ಹಸಿವಿನ ನೆವ ಹೇಳಿ ಮನೆಗೆ ತಿರುಗಿಸಿದುದೂ ಉಂಟು. ಇದರಲ್ಲಿ ಹಿರಿಮೆಯೇನೂ ಇಲ್ಲ; ಸ್ವಭಾವ ಚಿತ್ರ: ಒಂದು ಕಯಾಲಿ, ಅಷ್ಟೇ. ಪೂರ್ವಗ್ರಹಕ್ಕೆಂತೊ ಭಾವಪಕ್ಷಪಾತಕ್ಕೂ ಅಂತೇ ಕಾರಣವೇನನ್ನು ಕೊಡಲಾದೀತು?

ನೆಲಸು ಹೋಗಲಿ; ಉದಯಾಸ್ತ ಇರಲಿ; ಸಂಗಾತಿತನವೂ ಒತ್ತಟ್ಟಿಗಿರಲಿ. ಜಲಪ್ರಕೃತಿಯ ರೌದ್ರವನ್ನು ಮುಂಗಾರ ಕೆರಳಲ್ಲಿ ಕಾಣಬೇಕು. ದೋಣಿಯವರಾರೂ-ಕಡಲ ಮೇಲೆ ಹೋಗಲಿ, ಕಡಲ ಹತ್ತಿರಕ್ಕೆ ನದಿಯ ಮೇಲೆ ಆಗ ನಿಮ್ಮನ್ನು ಒಯ್ಯರು. ಯಾವಾಗ ಅದು ಹೇಗೆ ನುಗ್ಗುವುದೊ ಹೇಗೆ ಗಾಳಿ ಬೀಸುವುದೊ ಹೇಳತೀರದಾದ್ದರಿಂದ ಎದುರಿಗೆ ಆ ಕಾಲದಲ್ಲಿ ಏನೂ ಕಾಣದು. ಒಂದು ರಂಪು, ಹುಚ್ಚು ಅದು. ಒಂದು ಬಂಡಾಯ. ದೆಯ್ಯಗಳ ಕುಣಿತ-ಬೆಟ್ಟಕ್ಕೆಲ್ಲಿ ಬರಬೇಕು ಈ ಕ್ಷೋಭೆ ! ಕೂಟಸ್ಥಂ ಬ್ರಹ್ಮ ಎಂಬಂತೆ ಬೆಟ್ಟ ನಿಷ್ಠ ; ಸ್ಥಗಿತ ; ಸ್ಥಿರ. ಅದು ಕಲ್ಲು ಮುಳ್ಳಿನ ಘನ ; ಕುರುಡು. ಆಷಾಢದ ಗಾಳಿ ಬೀಸಿ ಬೀಸಿ ಆಗಿರುತ್ತದೆ ; ಶ್ರಾವಣ ಸುರಿಯಲಾರಂಭಿಸಿರುತ್ತದೆ. ಕಾರ್ಮುಗಿಲ ಸಾಲು ಹುಚ್ಚು ಹುಚ್ಚಾಗಿ ಉರುಳಿ ಹೊರಳಿ ಮೈಮೇಲೆ ಬವಳಿ ಬಂದಂತೆ ತೆಂಗಿನ ತೋಪುಗಳನ್ನೂ ಸರುವೆಯ ತೋಟಗಳನ್ನೂ ನಡುವಿನೆತ್ತರಕ್ಕೆ ಬಾಗಿಸಿ ಅಲ್ಲಾಡಿಸಿ ಗುಡುಗು ಮಿಂಚು ಕಾರುತ್ತ ಎರಗುತ್ತಿರುತ್ತದೆ. ಇಲ್ಲವೇ, ಈ ಊರಿನಲ್ಲಂತೆ ಒಂದು ಗುಡುಗಿಲ್ಲ, ಒಂದು ಮಿಂಚಿಲ್ಲ, ಮಳೆ ಸುರಿತವೇ ಗಾಳಿಯ ಬಿರುಸಿನ ಶಬ್ದವಾಗಿರಲು ಮಳೆ ಕರೆಯುತ್ತಿರುತ್ತದೆ. ಹಗಲು ಇರುಳು ; ಇರುಳು ಹಗಲು; ದಿನಾ ಐದು–ಹತ್ತು ಅಂಗುಲ ಕಾರು. ಹೊರಗೆ ಮಳೆ; ಒಳಗೆ ಬೆವತ. ಉದ್ದಕ್ಕೆ ಹತ್ತು ಮೈಲಿಯ ತೆಂಗು, ಸರುವೆ ಒಮ್ಮೆ ತಲೆ ಅಲ್ಲಾಡಿಸಿತು. ಅಲೆಮಾಲೆ ಕೆರಳಿ ಆನೆಗಳ ಗುಂಪು ಮದಿಸಿ ಮುತ್ತಿ ಬಂದವು. ಅವುಗಳ ಮೇಲೆ ಆಕಾಶವನ್ನೆಲ್ಲ ಕವಿದ ಮೋಡ ಕೆಚ್ಚಲಿಳಿಸಿ ಅವನ್ನಿವು, ಇವನ್ನವು ಮಸೆವುವು. ಗಾಳಿ ಜಿದ್ದು ಹೂಡಿ ತೀಡಿತು; ಜಾಡಿಸಿತು; ಹಿಂಡಿತು; ಮಸೆಯಿತು; ಚಾಟಿಪೆಟ್ಟು ಕೊಟ್ಟಿತು; ಕೆರಳಿಗೆ ಕಿಚ್ಚಿಕ್ಕಿತು. ಬೆಳ್ಳಗೆ ಹುಟ್ಟಿದಂತೆ ಕಂಡ ಮಿಂಚು ಕೆಂಪು ತಿರುಗಿ ಹುಚ್ಚಿನಲ್ಲಿ ಅಡಗಿ ಮಾಯವಾಯಿತು. ದಿಕ್ಕು ಕತ್ತಲಿಟ್ಟು ಭೀತಿ ಬಿತ್ತಿತು; ರೌದ್ರ ಕಣ್ಣಿಗೆ ಕತ್ತಲಿಡುತ್ತದೆ. ನೆಲವಾವುದು, ನೀರಾವುದು, ಬಾನಾವುದು, ಗಿಡವಾವುದು? ಒಂದು ಭೂತಾವೇಶದಲ್ಲಿ ಸಿಕ್ಕಿಕೊಂಡು ಸೆಣಸುವ ಕಾಲ್ಚೆಂಡಿನ ಜಗ್ಗಾಟ; Scrimmage! ಎಲ್ಲಿಂದಲೊ ಗಾಳಿಯೆಸೆತದಲ್ಲಿ ಬಂದು ಅಪ್ಪಳಿಸಿತು ಮುಖಕ್ಕೆ ಒಂದು ನೊರೆಯ ಚೆಂಡು! ಇನ್ನೂ ಹತ್ತು ಹಾರಿಹೋಗಿ ತೆಂಗುಗಳ ಮೇಲೆ ಏರಿ ಕುಳಿತವು. ದೂರದಲ್ಲಿ ನಿಂತು ನೋಡುವ ನಮಗೇ ಒಳಗೆ ನಡುಕ. ತೆಂಗಿನ ಗುಡಿಸಿಲಲ್ಲಿ ಅಲ್ಲಲ್ಲಿ ಕೋಳಿಗಳು ಮುದುರಿ ಕುಳಿತು ಕ್ರು ಕ್ರು, ಕ್ರು ಕ್ರು ಎಂದು ನರಳಿದವು. ಶಾಂತಿಯ ಮಾತು ಸತ್ಯ ಯುಗದ್ದು, ವಾಸ್ತವವಲ್ಲ. ಒಂದು ಸಣ್ಣ ಬಿರುಗಾಳಿ ಬೀಸಿದರೆ ಕರೆಯಲ್ಲಿ ಹೊಯಿಗೆಯ ಸಾವಿರ ಕಣ ಒಂದೊಂದೂ ಎದ್ದು ಎರಚಿ ಸೂಜಿ ಮೊನೆಗಳಿಂದ ತಿವಿದಂತೆ ಬೀರುತ್ತವೆ. ಮುಳ್ಳು ಹಂದಿಯ ಮುಳ್ಳುಗಳಂತೆ ಮೈಯ ಅಂಗಾಂಗವನ್ನೆಲ್ಲ ಚುಚ್ಚುತ್ತಿರಲು ಎರಡು ನಿಮಿಷ ಅದರೆದುರಿಗೆ ನಿಲ್ಲಲಾದೀತೆ? ಶ್ರಾವಣದ ಕಡಲಕರೆಯ ಭೀಷಣತೆಯನ್ನು ಸಾಧಾರಣ ಬಾಳು ಭರಿಸಲಾರದು. ಬೇಗ ಗೂಡು ಸೇರಿಕೊಳ್ಳಬೇಕು. ಅದರ ರೌದ್ರ ತಾನಾಗಿ ಇಳಿವವರೆಗೂ. ವ್ಯಪೇತಭೀಃ ಪ್ರೀತಮನಾಃ ಎಂದು ಭಗವಾನ್ ಶ್ರೀ ಕೃಷ್ಣನು ಉಪದೇಶ ಮಾಡಬಹುದು : ಉಪದೇಶ ಮಾಡುವುದು ಸುಲಭ. ದರ್ಶನವೊ–

ದಂಷ್ಟ್ರಾ ಕರಾಲಾನಿ ಚ ತೇ ಮುಖಾನಿ
ದೃಷ್ಟ್ವೈವ ಕಾಲಾನಲ ಸನ್ನಿಭಾನಿ.
ದಿಶೋ ನ ಜಾನೇ ನ ಲಭೇ ಚ ಶರ್ಮ!–
ಪ್ರಸೀದ,–

ಎನ್ನಬೇಕಾಗುತ್ತದೆ ತತ್ತರಿಸುವ ಜೀವರಾಶಿ.

ಒಂದೇ ಎರಡೇ ಕಡಲ ಭಾವ; ಪ್ರಭಾವ! ಅದರ ಶೃಂಗಾರ ಗಂಭೀರ ; ಅದ್ಭುತ ಅದರ ಉದ್ಧಾರಕಾರ್ಯ, ವಿನಾಶಕ್ರಿಯೆ. ಯಾವ ಸ್ಥಿತಿಯಲ್ಲಿಯೂ ಅದು ಮಹಾಭೂತವೇ. ಅದರೊಡನೆ ಸರಸ ಭೂತದೊಡನೆಯ ಸರಸ. ಸರಸಕ್ಕೂ ಅವಕಾಶ ಕೊಡಬೇಕಾದ್ದು ಅದು. ಸೆಣಸೂ ಹಾಗೇ. ಆದರೆ ನಾಲ್ಪೇ ಸುಖಮಸ್ತಿ ; ಭೂಮೈವ ಸುಖಂ-ಎಂಬುದು ಅರಿವಾಗಬೇಕಾದರೆ ಸೌಂದರ್ಯದ ಸಣ್ಣ ಚಿಟ್ಟೆಯಾಟಗಳಲ್ಲಿ ತೃಪ್ತಿ ಪಡುವ ಚೇತನಕ್ಕೆ ಶಕ್ಯವಿಲ್ಲ. ಚಿಟ್ಟೆ ಚಿಟ್ಟೆಯೇ, ಗರುಡ ಗರುಡನೇ. ವಯೊಲೆಟನ್ನು ಹೂವಲ್ಲವೆಂದವರು ಯಾರು? ಆದರೆ ಗುಲಾಬಿ, ಡೇಲಿಯ, ತಾವರೆಗಳ ವಿಕಸಿತವಿಲಾಸದ ಮುಂದೆ ಅದು ಬೆಳಗೀತೆ? ಸೃಷ್ಟಿಯಲ್ಲಿ ಅಸಮತೆ ನಟ್ಟಿದೆ; ಎಷ್ಟು ಹಿಗ್ಗಿಸಿ ವರ್ಣಿಸಿದರೆ ಸಣ್ಣದು ದೊಡ್ಡದಾದೀತು? ಲೋಕದಲ್ಲಿ ಎಲ್ಲಕ್ಕೂ ಸ್ಥಾನವುಂಟು. ಬೆಲೆ ಉಂಟು. ಅನಂತ ವಿವಿಧತೆ ಉಂಟು. ಆದರೆ ಕಿರುಮೀನು ತಾನು ಮೊಸಳೆಯೆಂದೊ ತಿಮಿಂಗಿಲವೆಂದೊ ಮೆರೆದರೆ ತಾರತಮ್ಯ ಕೆಡುತ್ತದೆ ; ನಗೆಪಾಡಾಗುತ್ತದೆ. ಸತ್ಯಕ್ಕಂತೂ ಅಪಚಾರ. ಗುಣಕ್ಕೂ ಗಾತ್ರವುಂಟು, ಪ್ರಮಾಣವುಂಟು. ಗುಣ್ಪಿಗೂ ನುಣ್ಪಿಗೂ ನಣ್ಪಿಗೂ ಹಾಗೇ.

ಹೇಗೇ ನೋಡಲಿ, ಕಡಲನ್ನು ಕಾಣದವನಿಗೆ ಲೋಕದ ಮಹಾಪ್ರಮಾಣದ ಅರಿವಾಗದು. ಏಕೆ? ಸತ್ಯದ ಒಂದು ಮುಖದ ದರ್ಶನವೇ ಆಗದು ; ಸಮಸ್ತ ಭಾವಗಳಿಗಿಂತ ಮೇಲಾಗಿ ಕಡಲ ಎದುರಿಗೆ ಭಯ ಭಕ್ತಿಭಾವ ಮಾತ್ರ ಸಂದೀತು.

# ಹೊನ್ನು

ಹೊನ್ನು, ಚಿನ್ನ, ಬಂಗಾರ-ಯಾವುದೆಂದರೂ ಒಂದೇ. ಮಾತು ಬೇರೆಯೇ ಹೊರತು ಸತ್ತ್ವ, ಧಾತು ಒಂದೇ; ಮಾನವರಿಗೆಲ್ಲ ಬಯಕೆಯ ಭಾಗ್ಯ. ಮೊದಲಿಂದಲೂ ಹಾಗೆಯೇ. ಲೋಕದ ಎಲ್ಲ ಮೂಲೆಗಳಲ್ಲಿಯೂ ಅಷ್ಟು ಹೊಳಪು, ಬೆಲೆ ಅದರದು. ಸಣ್ಣ ಗಾತ್ರದಲ್ಲಿ ಅದಕ್ಕೆ ಹೆಚ್ಚು ಬೆಲೆ; ಎಲ್ಲರಿಗೂ ಕೊಡುವಷ್ಟು ಸಿಗುವಷ್ಟು ಸಿಕ್ಕದು ನಿಜ. ಆದರೆ ಅತ್ಯಪರೂಪವಲ್ಲ. ಎಲ್ಲೆಲ್ಲಿಯ ಚಿನ್ನವೂ ಒಂದೇ ತೆರ. ಒರೆಯಿಕ್ಕಿ, ಬಣ್ಣದಿಂದ, ತೂಕದಿಂದ ಪತ್ತೆ ಹಚ್ಚಬಹುದು. ಹೇಗೆಂದರೆ ಹಾಗೆ ಬಾಗುತ್ತದೆ, ಉಬ್ಬುತ್ತದೆ, ತಗ್ಗುತ್ತದೆ, ನಿಡಿದಾಗುತ್ತದೆ, ಹಾಳೆಯಾಗುತ್ತದೆ, ಆಕೃತಿ ತಾಳುತ್ತದೆ. ಕೊರೆ, ಕುತ್ತು, ಕೊಳ್ಳುತ್ತದೆ. ಅದರ ಮೇಲೆ ಎಂಥ ಅಕ್ಷರ ಆಕೃತಿ ಕೆತ್ತನೆ ಕೇವಣ ಆದರೂ ನಿಲ್ಲುವುದು. ಅಕ್ಕಸಾಲಿಗರು ಅಡಿಗಲ್ಲಿನ ಮೇಲೆ ಅದನ್ನಿಟ್ಟು ಮೇಲೆ ಕಿತ್ತುಳಿ ಆಡಿಸಲು ಸುತ್ತಿಗೆಯ ಪೆಟ್ಟಿಗೆ ಏಳುವ ಶಬ್ದ ಯಾವ ಗಾನದ ಯಾವ ತಾಳಕ್ಕೆ ದೊರಕೀತು? ಕಲೆ ಕುಶಲತೆಗಳಿಗೆ ಅದು ದೊರಕಿಸುವ ಇಂಬು ಮತ್ತಾವುದಕ್ಕೂ ಬಂದದ್ದಲ್ಲ. ಎಷ್ಟು ಬಗೆಯ ರತ್ನಗಳು ಬಣ್ಣ ಕಾಂತಿಗಳಿಂದ ಬೀಗಲಿ ಅವಕ್ಕೆ ಕುಂದಣವಾವುದು? ಅವನ್ನು ಒಪ್ಪವಾಗಿ ಹಿಡಿದು ಪ್ರಕಟಿಸಬೇಕಾದರೆ ಹೊನ್ನಿಲ್ಲದೆ ಆಗುತ್ತದೆಯೆ? ನರ್ತಕಿಗೆ ಆಂಪ್ರೆಸಾರಿಯೊ ಇದ್ದ ಹಾಗೆ; ನಿರ್ದೇಶಕ, ಪ್ರಕಾಶಕ ಚಿನ್ನವೇ. ಚಿನ್ನದ ದರ್ಪ, ಹಿರಿಮೆ ಅದು.

ಆದರೂ ಏಕೊ ಏನೊ ನನಗೆ ಮೊದಲಿಂದಲೂ ಅದರಲ್ಲಿ ಪ್ರೇಮ ದ್ವೇಷ ಎರಡೂ ಒಟ್ಟಿಗೆ ಉಂಟು. ಪ್ರೇಮ, ಅದರ ಹೊಳಪಿಗೆ ; ಚೆಲುವಿಗೆ ; ಆ ಹೆಸರಿಗೆ ; ಆ ವಸ್ತು ಸತ್ತ್ವಕ್ಕೆ. ದ್ವೇಷ, ನನಗೆ ಅದು ಎಂದೂ ದೊರೆಯದ್ದಕ್ಕೆ. ಮಂಗಳವೆಂದಿಟ್ಟು ಕೊಂಡ ಬೆರಳುಂಗುರ ದಕ್ಕದೆ ಹೋಯಿತು. ಅದರ ಮರ್ಯಾದೆ ಕಟ್ಟಿಕೊಂಡು ನನಗೇನಾಗಬೇಕಿದೆ? ಲೋಕಕ್ಕೆ–ಅದು ಲಕ್ಷ್ಮಿಯ ಕಳೆ. ಸಕಲ ಪ್ರಾಪ್ತಿಗಳ ಲಕ್ಷಣ. ಎಲ್ಲ ವ್ರತಗಳಿಗಿಂತಲೂ ವರಮಹಾಲಕ್ಷ್ಮಿಯ ವ್ರತ ಅತ್ಯಂತ ಭಕ್ತಿಯುದು. ವಿಜೃಂಭಣೆಯದು. ನನಗೇಕೊ ಅವಳನ್ನು ಆರಾಧಿಸಲು ೧೦೦ಕ್ಕೆ ನೂರು ಪೈಸೆ ಮನಸ್ಸಿಲ್ಲ. ಕೊರೆಯೇ. ಅದು ಇಲ್ಲದ ಕೊರತೆ ಕೊರತೆ. ಸ್ವಂತಕ್ಕಿಲ್ಲವಾದರೂ ನನಗೆ ಸೇರಿದವರಿಗೆ ? ಅಜ್ಜಿಗೆ, ಅಮ್ಮನಿಗೆ, ಹೆಂಡತಿಗೆ, ಮಗಳಿಗೆ? ಹೆಣ್ಣನ್ನು ಮದುವೆಯಾಗಿ, ನಿರ್ಬಂಧಿಸುವುದು ಮಾತ್ರ ನಿಮಗೆ ಬೇಕು, ರುಚಿಸುತ್ತದೆ; ನಿಮ್ಮ ಸೆರೆಯ ಸೂಚಿಕೆಯಾಗಿ–ಒಂದು ಚಿನ್ನದ ಸರಪಳಿ ಹಾಕುವುದಕ್ಕೆ ನಿಮಗೆ ಇಲ್ಲದೆ ಹೋಯಿತು ಎಂದು ಮೂದಲೆ ಬರುತ್ತದೆ; – ನನಗೆ ಚಿನ್ನಕ್ಕೆ ಪ್ರೀತಿಯಿಲ್ಲವೆಂದರೆ, ಅಲ್ಲವೊ:

ಹಾಗಲ್ಲವೊ ಮಗು, ಮೈ ಮೇಲೆ ಚಿನ್ನದ ನೀರು ಬೀಳಬೇಕಪ್ಪ ಎನ್ನುತ್ತಾರೆ ಹಿರಿಯರು. ನಿಮ್ಮ ಏಳಿಗೆಯನ್ನು ಕೋರುವ ಜನಕ್ಕೆ ಅದಿಲ್ಲದಿದ್ದರೆ ದೊಡ್ಡ ಕೊರತೆ. ಹೀಗೆ ವಿರುದ್ಧಗಳ ಹೋರಾಟಸ್ಥಾನ, ಕಾರಣ-ಚಿನ್ನ. ಅದಕ್ಕಾಗಿ ಜೀವ ಕೊಟ್ಟಾರು, ಜೀವ ಕೊಂಡಾರು ಜನ.

ನನ್ನ ಮಾತು ಬಿಡಿ : ನಾನೊಬ್ಬ ಯಃಕಶ್ಚಿತ್ ವ್ಯಕ್ತಿ. ಗಂಡಸಿಗೆ ಹೆಂಗಸಿಗೆ ಇಬ್ಬರಿಗೂ ಚಿನ್ನದ ಆಸೆಯೇ. ಸಾರ್ವತ್ರಿಕವಾಗಿ ಇಂದು ಎಷ್ಟೊ ಮಂದಿ ಕೊರಳಿಗೆ ಚಿನ್ನದ ಸರ ಹಾಕಿಕೊಂಡಿರುತ್ತಾರೆ-ಗಂಡಸರು ಕೂಡ. ಕೋಟಿಗೆ ಕುರತಕ್ಕೆ ಚಿನ್ನದ ಗುಂಡಿ ; ಅವಕ್ಕೆ ಸರಪಳಿ, ಗಡಿಯಾರ, ಅದರ ಮುಂಗೈ ಕಟ್ಟು ಚಿನ್ನದವು. ಒಮ್ಮೆ ಒಂದು ಹೆಣ್ಣನ್ನು ನೋಡಿದೆ. ಹಂಗರಿ, ಆಸ್ಟ್ರಿಯ, ರುಮೇನಿಯ ಕಡೆಯದಿರಬೇಕು. ಬೆಂಗಳೂರು ಕಾಫೀ ಬಾರಿಗೆ ಬಂದು ಕುಳಿತಿತ್ತು. ತನ್ನ ಗಂಡಿನೊಡನಿರಬೇಕು. ಇನ್ನೇನೂ ಇಲ್ಲ ಮೈ ಮೇಲೆ ಒಡವೆ, ಎಡಗೈಗೆ ಒಂದು ಗಟ್ಟಿ ಸರಪಳಿ ಮಾತ್ರ ಇತ್ತು : ಹಗ್ಗದಂತೆ ನುಲಿದ ಒಳಗಟ್ಟು ಮಾಟ; ಉದ್ದಕ್ಕೆ ಮೂರು ಕಡ್ಡಿ ಕಟ್ಟು; ನಡುವೆ ಮುಂಗೈಯಿಂದ ಇಳಿದು ಒಂದು ಸಣ್ಣ ಚಮರಿಯಂಥ ತೂಗು ಕುಚ್ಚು. ಕುಚ್ಚಿನ ಹಿಡಿಯಲ್ಲಿ ನಾಲ್ಕು ಮುತ್ತು, ರತ್ನ: ಏನು ಸೊಗಸು ಮಾಟ! ಅದನ್ನು ಹಾಕಿದ್ದವಳಿಗೆ ಅದನ್ನು ಮೆರಸಬೇಕೆಂದಿಲ್ಲ. ಅಲ್ಲದೆಯೊ ಬಲುದಿನದ ಬಳಕೆಯಿಂದ ಆ ಕಡೆ ಗಮನವಿಲ್ಲ ವಾಗಿದ್ದೀತು! ಕೊಳ್ಳುವ ಮುಂಚೆ, ತೊಡಿಸುವ ಮುಂಚೆ ಗಂಡಿಗೆ ಆಟವೇ ಕಾಟವೇ ಆಗಿದ್ದಿರಬೇಕು; ಚೆಲುವೆಯಾದ ಅವಳಲ್ಲಿನ ಮೋಹವೇ ಆಡಿಸಿರಬೇಕು ಅದನ್ನು-ಸಹಜವಾಗಿ. ನೋಡುವವರ ಕಣ್ಣು ಅದರ ಮೇಲೆ ಬೀಳುತ್ತಿದೆಯೆಂದು ಅರಿತಾಗ ಆ ಬಿಮ್ಮು ಬೀಗು ನೋಡುವಂಥದು; ತೋರದಂತೆ ತೋರುವ ಆ ತೃಪ್ತಿ; ಅದನ್ನು ನೋಡಿ ಹರ್ಷೋತ್ಫುಲ್ಲವಾದ ಅವಳ ಗಂಡಿನ ಮುಖಭಾವ ; ಅದೂ ಅವಳೂ ತನ್ನ ಸೊತ್ತು ಎಂಬ ಗರ್ವ: ತುಂಬಾ ಚಿತ್ರ. ಅಂಥ ಒಡವೆಯ ಮಾಟವನ್ನು ನಮ್ಮಲ್ಲಿ ಕಂಡಿಲ್ಲ. ಅಂಥದಕ್ಕೆ ಧಾತುವನ್ನು ಒದಗಿಸಿದ್ದುದು ಚಿನ್ನ.

ಹೆಂಗಸಿಗಿರುವಷ್ಟು ಚಿನ್ನದಾಸೆ ಗಂಡಸಿಗಿಲ್ಲವೇನೊ. ಗಂಡಸಿಗೆ ಬೇರೆ ಆಸೆಗಳುಂಟು. ಬೇಟ, ಬೆಡಗು ಉಂಟು. ತನ್ನ ಮನಸ್ಸಿಗೆ ಬರುವಷ್ಟು ತೂಕದ ಚಿನ್ನವನ್ನು ತಂದುಕೊಟ್ಟರೆ ಹೆಣ್ಣಿಗಂತೂ ತೃಪ್ತಿ ಖಂಡಿತ. ಅಲ್ಪಕಾಲಮಟ್ಟಿಗಾದರೂ. ಅದಕ್ಕಾಗಿ ಹೆಣ್ಣೂ ಗಂಡೂ ಏನು ಮಾಡಲೂ ಸಿದ್ಧರಿರುತ್ತಾರೆ ಸಾಮಾನ್ಯವಾಗಿ. ಮಾನಮರ್ಯಾದೆಯ ಎಣಿಕೆ ನಡೆಯದು ; ಪಾಪ ಪುಣ್ಯ ಬೇಡ. ಅವನ್ನು ಕಂಡವರು ಯಾರು? ಹೊನ್ನ ಆಭರಣವನ್ನು ತಂದುಕೊಟ್ಟು 'ಚಿನ್ನಾ' ಎಂದು ಕರೆದರೆ ಯಾವ ನಲ್ಲೆಯೂ ನಲ್ಲನಿಗೆ-ನಲ್ಲನಲ್ಲದವನಿಗೂ -ಒಲಿದಾಳು ಎಂದು ಕುಹಕ ನುಡಿದವರುಂಟು.-ಅದಿಲ್ಲದ ರಂಜನೆ ಪದ್ಯಕ್ಕೆ, ಕವಿಹೃದಯಕ್ಕೆ ಮಾತ್ರ ತುಂಬ ಸೊಗಸು. ಪದ್ಯ ವಾಸ್ತವವಲ್ಲವಲ್ಲ ! ಅದರದು ಧ್ಯೇಯ ಜೀವನ ; ಸತ್ಯಕ್ಕೆ ಪ್ರತ್ಯಾಮ್ನಾಯ.

ಕಲ್ಪನೆಯ ಸುಖವಿದ್ದು ಕವಿತೆ. ಆ ಸುಖ ಸುಖವಲ್ಲವೆಂದಲ್ಲ; ನಿಜದ ತೂಕಕ್ಕೆ ತೂಗಿದರೆ ವಾಸ್ತವ ಲೋಕದಲ್ಲಿ ಮರ್ಯಾದೆ ತಾಳಿಕೆ ಜಾಸ್ತಿ. ಒಲಿದವರಿಗೆ ಕವಿತೆಯಲ್ಲಿ-ಏಕೆ ಬಾಳಲ್ಲಿಯೂ-ಒಲವು ತೋಳಿಗೆ ತೋಳ ಬಂದಿಯಾಗುವುದು- ಎರಡರ್ಥದಲ್ಲಿಯೂ. ತೋಳಬಂದಿಯೂ ಒಡವೆಯಾಗಿ ಇದ್ದಿದ್ದರೆ? ಇನ್ನು, ಕೆನ್ನೆ ತುಂಬಾ ಮುತ್ತು ; ಹೌದು: ಆ ಸವಿ ಬಲ್ಲೆವು. ಕೆಲವು ಮುಖಗಳಿಗಿಂತ ಕೆನ್ನೆಯ ತುಂಬು ಹರವು ಹೆಚ್ಚಾದಾಗ ಆ ಸುಖ ಅನುಭವವೇದ್ಯ. ಕಂಚಿ, ಚಿದಂಬರಗಳ ಕಡೆ, ಆಂಧ್ರದಲ್ಲಿ ಕೊಬ್ಬಿ ಬೆಳೆದ, ಮಾವಿನ ಮಾಟದ ಹೆಣ್ಣು ಮುಖಗಳೂ ಕೆನ್ನೆಗಳೂ ಇರುತ್ತವೆ. ಅವನ್ನು ನೋಡಿದರೆ ಸಣ್ಣ ಮುಖಗಳಿಗೆ ಅಲ್ಲಿ ಎಷ್ಟು ಮಾನ್ಯತೆ ದಕ್ಕೀತೊ ! ಭಾವ ! ಎಷ್ಟು ಭವ್ಯ ಆದರೂ- ಇದು ಇಷ್ಟೇ ಆದರೆ? – ನಾಲ್ಕು ದಿನ ನಡೆದೀತು, ನಾ–ಲ್ಕು–ದಿ–ನ? ಕಾವು ತಂಪಾದ ಮೇಲೆ? ಒಲವುಂಡು ಹಸಿವಾದಾಗ? ಹಿಟ್ಟು, ಸೊಪ್ಪು, ಅಂಬಲಿಯೊ ಗಂಜಿಯೊ-ಅನ್ನ, ಬಟ್ಟೆ ಇಲ್ಲದಾಗ ? ದೇಹ ಸೋತಾಗ ? ನಾಳೆಗೆಲ್ಲಿ, ಹೇಗೆ ಎಂಬ ಚಿಂತೆ ಬಂದಾಗ? ಈ ವಿರಸನನ್ನು ಏನು ಮಾಡಲಿ ಎಂದುಕೊಳ್ಳಬೇಡಿ. ಇದು ಅನ್ನಮಯ ಪ್ರಾಣ ; ಅನ್ನದಿಂದ ಪುಷ್ಟವಾಗುವ ದೇಹವೇ ಪ್ರೇಮದ್ದು ಕೂಡ. ನಮ್ಮ ಕಾಲದವರು ಒಲಿದವರನ್ನು ಚಿನ್ನಾ ಎಂದು ಕರೆಯುವ ಭಾಗ್ಯ ಪಡೆದವರಲ್ಲ. ಪ್ರಿಯೆಯೆನ್ನುವುದು ಕೂಡ ಪುಸ್ತಕದ ಮಾತು, ನಾಟಕದ ನುಡಿ ; ಕಾಗದಗಳ ಕನಸಿನದು ಕೂಡ ಅಲ್ಲವೇನೊ. ಹೆಸರು ಹಿಡಿದು ಕೂಗುವುದು ಸಾಹಸವಾಗುತ್ತಿತ್ತು : ಪುಣ್ಯಶಾಲಿಗಳಿಗೆ, ಶ್ರೀಮಂತರ ಗಳಿಕೆಗೆ ಲಭ್ಯವಾಗಿದ್ದುದು ಮಾತ್ರ. ಪ್ರೀತಿಯಾದರೂ ಇರುತ್ತಿತ್ತಲ್ಲವೆ ಎಂದೀರಿ. ಶಾಂತಂ ಪಾಪಂ. ಮಣಗಟ್ಟಳೆ ಇರುತ್ತಿತ್ತು. ಪ್ರಕಟಿಸುವ, ಮೆರಸುವ, ಸಿನಿಮಾಗೆ ಮೆರೆದು ಹೋಗಿ ವುಡ್‌ಲ್ಯಾಂಡ್ಸ್‌ನಲ್ಲಿ ಊಟ ಮಾಡಿ ಹಿಂತಿರುಗಿ ಬರುವ ಅವಕಾಶ ಪ್ರಾಚೀನ ಯೌವ್ವನಿಗರಿಗೆ ಅಷ್ಟಾಗಿ ಇರುತ್ತಿರಲಿಲ್ಲ ಮಾತ್ರ. ಹಿರಿಯರ ಕಣ್ಣಂಕೆಯಲ್ಲಿ ಕೂಡುಕುಟುಂಬದಲ್ಲಿರಬೇಕಾದ ಜನ, ಹಗಲು ಒಬ್ಬರನ್ನೊಬ್ಬರು ಕಾಣುವುದೇ ಕಷ್ಟವಾಗುತ್ತಿತ್ತು. ಮಾತನಾಡುವುದು ದುಸ್ತರವಿರುವಾಗ ಪ್ರಿಯತಮೆ, ಚಿನ್ನಾ,'ನನ್ನ ಹೃದಯದ ಏಕನಾದವೇ, ತಂಬೂರಿಯೇ' ಎನ್ನುವುದು ಇನ್ನಾವಾಗ ? ನಿಮ್ಮದು ಸ್ವಾತಂತ್ರ್ಯದ ಕಾಲವಾದ್ದರಿಂದ ಕಾದಂಬರಿಯಲ್ಲಂತೂ ಆ ಚಿನ್ನ ರೂಢಿಸಿದೆ ನಿಮ್ಮ ಪಾಲಿಗೆ. ಇದು ಒಳ್ಳೆಯ ಕಾಲ, ನಿಜವಾಗಿ. ಅದಿಲ್ಲದೆ ನಿಟ್ಟುಸಿರುಬಿಟ್ಟ ಕಾಲ ಮರೆತು ಅರೆಶತಮಾನವಾಗಿದೆ.

ಚಿನ್ನ ಅಷ್ಟು ಬೆಲೆಯುಳ್ಳ ಪದಾರ್ಥವಾದ್ದರಿಂದಲೇ ಒಡವೆ, ವಸ್ತ್ರ, ಪಾತ್ರೆ, ಪದಾರ್ಥ, ತಾಳಿ, ಉಂಗುರ, ಸರ, ಉಡಿದಾರ ಎಲ್ಲವನ್ನೂ ಅದರಲ್ಲಿಯೇ ಮಾಡಿಸುತ್ತಿದ್ದರು. ಹೆಣ್ಣು ಕೇಳಲು ಹೋದರೆ – ಈಗ ತದ್ವಿಪರೀತ, ಗಂಡಸಿಗೆ ತೋರಿಸಲು ಹೆಣ್ಣನ್ನು ತರಬೇಕು – ಎಷ್ಟು ಬಂಗಾರ ಹಾಕುತ್ತೀರಿ ಎಂದು ಕೇಳುತ್ತಿದ್ದ ಕಾಲ ಅದು. ಇವೊತ್ತಿನ ಆಳತೆ ಬೇರೆ. ಮಗಳಿಗೆ ವಜ್ರದ ಓಲೆ, ಮೂಗುತಿ: ಕೆಂಪಿನ ಜೊತೆ ಬಳೆ. ಅಳಿಯನಿಗೆ ಒಂದು ರೇಡಿಯೊ ಗ್ರಾಂ; ಒಂದು ಫಿಯಟ್ ಇಲ್ಲವಾದರೆ

ಕಡವೆಯೆಂದರೆ ಅಂಬ್ಯಾಸಡರ್ ಕಾರು ಬೇಡವೆ? ವಾಸವೀ ಕಲ್ಯಾಣ ಮಂದಿರದಲ್ಲಿಯೊ, ಕುಚಲಾಂಬಾ ಮಂಟಪದಲ್ಲಿಯೊ ವೈಕುಂಠದ, ಇಂದ್ರಸಭೆಯ ವಿದ್ಯುದಲಂಕಾರ ಮಾಡಿದ ಮಹಾ ರಿಸೆಪ್‌ಷನ್, ಐನೂರು ಮಂದಿಗೆ ಫೇಣೆ ಭೋಜನ ಬೇಡವೆ? ಈ ಕಾಲದ ವಿತರಣೆ ಭೂರಿವೈಭವ ಬೇರೆ ಬಗೆಯದು, ಬಿನ್ನಾಣದ್ದು. ಆಗಿನ ಅಳತೆ ಗಟ್ಟಿ ಚಿನ್ನದ್ದು.

ಒಳ್ಳೇ ಹುಡುಗ ಹುಡುಗಿ ಸಿಕ್ಕಿದರು; ಚಿನ್ನದಂಥ ಹುಡುಗ, ಚಿನ್ನದಂಥ ಹುಡುಗಿ ಅವರು. ಯುಗ ಸ್ವರ್ಣಯುಗ. ಕಾಲ ಚಿನ್ನದಂಥ ಕಾಲ. ಯಾರಿಗೆ ಏನು ಬೇಕಾದರೂ ಅದು ದೊರೆಯುತ್ತಿದ್ದ ಕಾಲ. ಎಲ್ಲ ನೆರೆ ಗಂಗಾಪ್ರವಾಹ, ಕಾಮಧೇನು, ಕಲ್ಪವೃಕ್ಷಗಳ ಭೂರಿಮೆಯದು : ನೆನಸಿದರೆ ಸಾಕು-ಚಿಂತಾರತ್ನ ಒದಗಿಸುತ್ತಿತ್ತು. ಈ ಅಂಶದಲ್ಲಿ ನಿಮ್ಮದು ನಿರ್ಭಾಗ್ಯರದು. ಆ ತಪಸ್ಸಿನ ದಿವ್ಯತೆಯ ಕಾಲ ಕೃತಯುಗದ ವೈಭವ. ಆಯುಸ್ಸು, ಯೌವನ, ಭೋಗ ಭಾಗ್ಯ, ಮಳೆ ಬೆಳೆ ಯಥೇಷ್ಟ. ಕಳ್ಳರಿಲ್ಲ, ಸುಳ್ಳರಿಲ್ಲ. ಮನೆಗೆ ಬೀಗ ಹಾಕಬೇಕಿರಲಿಲ್ಲ ; ಪೆಟ್ಟಿಗೆಗಳಂತೂ ತೆರೆದೇ ಇರುತ್ತಿದ್ದವಂತೆ. ತಮ್ಮಲ್ಲಿಲ್ಲದಿದ್ದರೆ ತಾನೆ ಮತ್ತೊಬ್ಬರದನ್ನು ಬಯಸುವುದು. ಆ ಯುಗವೇ ಹಾಗೆ. ನೆಲದವರು ಬಾನಿಗೆ ತವರಿಗೊ ನರ್ಸಿಂಗ್ ಹೋಮಿಗೊ ಹೋಗುವಂತೆ ಹೋಗಿ ಸುಧಾರಿಸಿಕೊಂಡು ನಾಲ್ಕು ತಿಂಗಳಿದ್ದು ಬರುತ್ತಿದ್ದರು ; ಅಲ್ಲಿ ಬೇಸರವಾದವರು ಇಲ್ಲಿಗೆ ಇಳಿದು ಬಂದು ನಮ್ಮ ಅಡಿಗೆ ಮನೆಗಳಲ್ಲಿ ಮಾಡಿದ ಗೊಜ್ಜು, ಮಜ್ಜಿಗೆ ಹುಳಿ, ಹುಣಿಸೆಯ ತೊಕ್ಕು ತಿಂದು ತೇಗುತ್ತಿದ್ದರು ; ಸ್ವರ್ಗದಲ್ಲಿ ಎಲ್ಲಿ ಸಿಕ್ಕಬೇಕು-ಹಾಗಲದ, ಬೇವಿನ ಹುವ್ವಿನ, ದ್ರಾಕ್ಷಿಯ ಗೊಜ್ಜು ; ಅಮಟೆ, ನೆಲ್ಲಿ, ಮಾಕಳಿ ಬೇರಿನ ಉಪ್ಪಿನಕಾಯಿ-ಅವರಿಗೆ? 'ಕಿಂ ವಾ ಸ್ವರ್ಗೇ ಸ್ಮರ್ತವ್ಯಂ ? ನ ತತ್ರ ಖಾದ್ಯತೇ, ನ ಪೀಯತೇ, ಕೇವಲಂ ಅನಿಮಿಷೈಃ ಅಕ್ಷಿಭಿಃ ಮೀಲಿತಾವಲಂಬ್ಯತೇ' -ತನ್ನ ಪಾತ್ರಗಳ ಬಾಯಲ್ಲಿ ಎನ್ನಿಸಲಿಲ್ಲವೇ ಕಾಳಿದಾಸನೆ ? ಮಹಾಕವಿಯ ಖ್ಯಾತಿಗಿಂತ ಪ್ರಮಾಣ ಬೇಕೇ ? ಎಷ್ಟು ಜಡರೂ ಜಾಡ್ಯರೂ ಆದರೂ ಬರಿ ಅಮೃತವನ್ನು ಕುಡಿದು ಕುಡಿದು ದೇವರಿಗೂ ಬೇಸರ ಬಾರದೆ ? ನಿರಂತರ ೨೫ ವರ್ಷದ ಯುವಕರಾಗಿರುವುದು ಮನುಷ್ಯನ ಆಸೆ ; ಇರುವ ದೇವರಿಗೆ ಬೇಸರವಾಗಬೇಕೆ. ಇಲ್ಲಿ ಅವರ ಮಕ್ಕಳು ಗ್ರೀಕ್ ದೇವತೆಗಳಿಗಿರುವಷ್ಟು ಮಕ್ಕಳಿಲ್ಲ ನಿಜ; ಇವರು Vasectomy ಇಂದಲೊ ಅಥವಾ ಯಾವುದೋ ರಹಸ್ಯದ ಸಂತಾನ ನಿರೋಧಕ ಮಾರ್ಗದಿಂದಲೊ ಮಿತಸಂತಾನ ವುಳ್ಳವರಾಗಿದ್ದಾರೆಂಬುದು ಭಾರತದ ಮುನ್ನಡೆಯ ಲಕ್ಷಣ. ಹೆಣ್ಣಿಗೂ ಹಾಗೇ ಗಂಡಿಗೂ ಹಾಗೇ. ನಮ್ಮ ಅರ್ಜುನರೊ ಪುರೂರವರೊ ಹೋದರೆ ಅಲ್ಲಿ ರಂಭೆ, ಉರ್ವಶಿ, ಮೇನಕೆ, ತಿಲೋತ್ತಮೆಯರ ಅನುಗ್ರಹ ದೊರಕುತ್ತಿತ್ತು. ನಮ್ಮ ವೀರರು ಅಲ್ಲಿಗೆ ಹೋಗುತ್ತಿದ್ದುದೇ ಅದಕ್ಕೆ. ಇಂದು ಲಂಡನಿಗೆ, ಪ್ಯಾರಿಸಿಗೆ, ಲೋಸ್ ಎಂಜಲಿಸಿಗೆ ಹೋದಂತೆ. ಇಂದ್ರನ ಕೈಯಲ್ಲಾಗದಿದ್ದ ಕೆಲಸಗಳನ್ನು ನೆಲದ ವೀರರು ಮಾಡಿಕೊಡುತ್ತಿದ್ದರು. ಅಷ್ಟು ಅನ್ಯೋನ್ಯ, ಪಾರಸ್ಪರ್ಯ, ಸ್ವರ್ಗಕ್ಕೂ ಭೂಮಿಗೂ.

ಆ ಸ್ವರ್ಣಕಾಲ ಈಗಿಲ್ಲ. ಇನ್ನಿಲ್ಲ, ಕಳೆದುಹೋಯಿತು – ಎಂಬ ನಿರಾಶಾವಾದಿಗಳು ಮಾತ್ರ ಮನಸ್ಸಿಗೆ ಕ್ಲೇಶ ತರುತ್ತಿದ್ದಾರೆ. ಏಕೆ ಇಂಥ ನಗೆಗುಲಿಗಳು ವಿಜೃಂಭಿಸುತ್ತಾರೊ ಕಾಣೆ. ಕೃತ ಕಳೆದು, ತ್ರೇತೆ ಕಳೆದು, ದ್ವಾಪರ ಕಳೆದು, ಕಲಿ ಬಂದಿದೆ. ಅದರಲ್ಲಿ ಒಂದು ಪಾದ ಕಳೆಯುತ್ತಿದೆ. ಇನ್ನೂ ಮೂರುಕಾಲು ಭಾಗ ಉಳಿದಿದೆ; ಈ ಕಲಿವತ್ಸರಗಳೂ ಸಾವಿರ ಸಾವಿರಗಳು ಕಳೆಯಬೇಕು ನಿಜ. ಆಗ ನಾವಾರೊ ನೀವಾರೊ ಎಂದೀರಿ. ಕೆಲವರ ಮಾತಿನಿಂದಂತೂ ನಿರಾಸೆಯೇ ಸರಿ. ಇದು ಮುಗಿದ ಕೂಡಲೆ ಬರುವುದು ಕೃತ ಎಂದು ಭರವಸೆ ಇದೆಯಲ್ಲ, -ಅದಕ್ಕೇಕೆ ಹಾರಯ್ಯಬಾರದು? ಆ ಯುಗ ಆಗಿಹೋಯಿತೆಂದರೆ ನಿಟ್ಟುಸಿರಿಡಿಸುವವರ ಮಾತೇ ಮಾತು. ಕಷ್ಟಪಡುವವರದೇ ಲೋಕದಲ್ಲಿ ಬಾಯಿ. ಕಾಲ ಚಕ್ರವಲ್ಲವೆ ? ಚಕ್ರ ಉರುಳದೆ, ಕೆಳ ಅರ ಮೇಲೆ, ಮೇಲಿನ ಅರ ಕೆಳಗೆ ಬಾರದಿರುತ್ತವೆಯೆ? ಏಕೆ ಅವಾಂತರ ಎನ್ನುವ ಚಿಂತನ, ತಾಳ್ಮೆ ಇಲ್ಲದೆ ಹಿಂದೆ ಮುಗಿದುಹೋದುದೇ ಸ್ವರ್ಣಯುಗ, ಅದನ್ನು ನೆನಸಿಕೊಳ್ಳಬಹುದೇ ಹೊರತು ಅದಕ್ಕಾಗಿ ಹಂಬಲಿಸಿ ಫಲವಿಲ್ಲ ; ಅದಕ್ಕೆ ಕಾದರೆ ಬರುವುದೇನು ಎಂಬ ಮಾತು ಅಲ್ಪಜೀವಿಗಳಾದ ನಮಗೆ ಉಬ್ಬಸ ತರಿಸುತ್ತದೆ. ಭರವಸೆಯ ಮಾತಿಗಾಗಲಿ ಏಕೆ ಬರ !

ಈ ಚಿನ್ನಕ್ಕೆ ಈ ಬೆಲೆ, ಈ ಆಸೆ ಬಂದಿರುವುದು ವ್ಯಾವಹಾರಿಕವಾಗಿ ಇನ್ನೊಂದು ಕಾರಣದಿಂದ. ಅದಿದ್ದರೆ ಉಳಿದದ್ದೆಲ್ಲ ಸಿಕ್ಕುತ್ತದೆ ! ಅದು ಅರ್ಥ, ಸಾಧನ ; ಆದ್ದರಿಂದ ಅದಕ್ಕೆ ರುಚಿ ಹುಟ್ಟುವುದು ಸಹಜ, ಸಾಮಾನ್ಯ. ಜೊತೆಗೆ ಚಿನ್ನ ಕಣ್ಣ ಬೆಡಗೂ ಹೌದು. ಬೆರಳಿಗೆ ಅದರ ಸೋಂಕು, ಹಾ ! ಎನ್ನಿಸುವುದು. ಆದ್ದರಿಂದಲೇ ತನಗೆ ಒಲಿದ ದೇವತೆಗೆ ಪ್ರಾರ್ಥನೆ ಮಾಡಿ ಮೆಚ್ಚಿಸಿ ಮೈಡಾಸ್ ಮಹಾರಾಜ ವರಕೊಡೆಂದು ದೇವರನ್ನು ಕೇಳಿದ್ದು: ನಾನು ಮುಟ್ಟುವುದೆಲ್ಲ ಚಿನ್ನವಾಗಲೆಂದು. ದೇವರಿಗೆ ತೃಪ್ತಿ ಉಂಟಾಗಿ ಸಮಾಹಿತ ಮನನಾದ -ಅವನಿಗೇನು ಕಷ್ಟ ? ವರ ಕೊಟ್ಟ. ಏಕೊ ಏನೊ ದೇವರು ಕೊಡುವ ವರಗಳ ಹಣೆಯಬರಹ ವಿಚಿತ್ರ ಪರಿಣಾಮ ಉಳ್ಳದ್ದು. ಕೊಂಡವರ ನಾಶಕ್ಕೇ ಕಾರಣವಾಗುವುದು. ದೇವಮಾನವ ಸಂಬಂಧದಲ್ಲಿ ಒಂದು ಅನ್ಯಾಯ. ಅದನ್ನು ಪಡೆದವರಿಗೆ ಮದ ಉಂಟಾಗುತ್ತದೆ. ದೇವರನ್ನು ಮೆಚ್ಚಿಸಿದೆನೆಂದು ಸೊಕ್ಕು. ಅವರು ಯತ್ನದಿಂದ ಗಿಟ್ಟಿಸಿಕೊಂಡ ವರ ಎಂಬುದು ಇನ್ನೊಂದು ಆ ಸೊಕ್ಕಿನೊಡನೆ ಸೇರುತ್ತದೆ. ದುರ್ಮದವಾಗುತ್ತದೆ. ಆ ವರ ಅವನಿಗೆ ಶಾಪವಾಗುತ್ತದೆ. ಮೈಡಾಸ್ ಮುಟ್ಟಿದ್ದೆಲ್ಲ ಚಿನ್ನವಾಗುತ್ತ ಬಂತು. ಪೆಟ್ಟಿಗೆ, ಪದಾರ್ಥ, ಸೌದೆ, ಕನ್ನಡಿ, ಚಮಚ, ಕುಗ್ಗಿ ಕಡ್ಡಿ, ಕುಟ್ಟಾಣಿ, ಹಾಸಿಗೆ, ಕ್ಷೌರದ ಸಾಮಾನು, ಶಾಸನ ಬರೆವ ಲೆಕ್ಕಣಿಕೆ, ಬಳಿಗೆ ಆಡಲು ಬಂದ ಬೆಕ್ಕು, ಚಕ್ಕುಲಿ, ಮಕ್ಕಳಾಟದ ಚೆಂಡು, ಪ್ರಾಣ ಇದ್ದದ್ದು, ಇಲ್ಲದ್ದು ಎಲ್ಲವೂ ಚಿನ್ನವಾಯ್ತು. ಅಷ್ಟು ಚಿನ್ನ ತನ್ನೆದುರಿಗೆ, ನೋಡಿದಲ್ಲೆಲ್ಲ ಆ ಆಕಾರ ತಾಳಿ ಕಾಣಿಸಿತು. ಎಲ್ಲ ಚಿನ್ನದವು. ಒಂದು ನಿಮಿಷವೂ ಅವನಿಗೆ ಭೀತಿ, ಶಂಕೆ ವಿಚಿತ್ರಬೋಧೆ ಆಗಲಿಲ್ಲ. ಯಾವ ವಿಪರೀತಕ್ಕೆ ನಡಸುವುದೊ ಎನಿಸಲಿಲ್ಲ

ಮೊದಮೊದಲು. ಕೈಗೆ ಸಿಕ್ಕಿದ ಎಲ್ಲವೂ ಚಿನ್ನವಾಗುವ ಸಂತೋಷ ಮಾತ್ರ ಮಹಾ ಸಂಭ್ರಮವಾಯ್ತು. ಈ ಕತೆ ಕಿವಿಗೆ ಬಿದ್ದಿದ್ದುದರಿಂದ ಜನ ತನ್ನಿಂದ ದೂರ ಸರಿದುದು ಅರ್ಥವಾಗಲಿಲ್ಲ. ಕಡೆಗೆ ಹೆಣ್ಣುಗಳು ತನ್ನ ಬಳಿಗೆ ಬಾರದಾದರು. ಅವನ ಸೋಂಕಿಗೆ ದೂರಬಿದ್ದವರು ಬದುಕಿದರು. ಒಂದು ದಿನ ಹೀಗಾಯಿತಂತೆ : ಅವನಿಗಿದ್ದ ಒಬ್ಬಳೇ ಮಗಳು ತಂದೆಯ ಹತ್ತಿರ ಬಂದು ಅವನ ಕುತ್ತಿಗೆಯನ್ನು ಕಟ್ಟಿಕೊಂಡಳಂತೆ ಸಂತೋಷದಿಂದ. ತಂದೆ ಅವಳನ್ನು ಅಪ್ಪಿಕೊಂಡ. ಕೂಡಲೇ ಆ ಮಗಳು ಚಿನ್ನದ ಪ್ರತಿಮೆಯಾಗಿಬಿಟ್ಟಳಂತೆ. ಆಗ ಕಣ್ತೆರೆಯಿತು. ಅದರ ನೋವು, ಅದರ ಗೋಳು ಹೇಳುವುದಕ್ಕಿಲ್ಲ. ನೋವನ್ನು ಅನುಭವಿಸಿದ ಮೇಲೆ ತನ್ನನ್ನೇ ತಾನು ಮುಟ್ಟಿಕೊಂಡು ತಾನು ಚಿನ್ನವಾಗಿದ್ದಿದ್ದರೆ ಲೋಕದ ಇನ್ನಾರಿಗೊ ಆಸ್ತಿಯಾಗುತ್ತಿದ್ದ. ನಿಜವಾಗಿ ಏನು ಮಾಡಿದನೊ- ಏನಾದನೊ ನನಗೆ ಗೊತ್ತಿಲ್ಲ. ಚಿನ್ನದ ಆಸೆ ಮನುಷ್ಯನನ್ನು ಎಷ್ಟು ಮದಗೊಳಿಸುತ್ತದೆ ! ದಾನವನನ್ನಾಗಿಸುತ್ತದೆ. ಅವನ ಮನಸ್ಸು ಕಲ್ಲಾಗುತ್ತದೆ ! ಅವನ ನಾಶಕ್ಕೆ ಕಾರಣವಾಗುತ್ತದೆ-ಎಂಬುದು ಸಾಧಾರಣ ದೃಶ್ಯ.

ಪ್ರೀತಿ ಆಸೆಯಾಗುವುದು ; ಆಸೆ ಗೃಧೆಯಾಗುವುದು; ಗೃಧೆ ಗೃಧ್ರವಾಗುವುದು. ಮಾಗೃಧಃ ಎಂದು ಉಪದೇಶವಾದುದೂ ಈ ಕಾರಣದಿಂದಲೇ. ಅತಿಗೆ ಹೋಗುವ ಮುಂಚೆ ಆಸೆ, ಕಾಮನ ಏಳು ಸುತ್ತಿನ ಮಲ್ಲಿಗೆಯ ಅರಳು, ರೋಮಾಂಚಕಾರಿ. ಚಿನ್ನವನ್ನು ನೋಡುತ್ತ, ಎಣಿಸುತ್ತ, ಮುಷ್ಟಿಯಲ್ಲಿ ಹಿಡಿದು ಅಮುಕುತ್ತ, ಸೇರೆಯಲ್ಲಿ ಆಡಿಸುತ್ತ, ಬೊಗಸೆಯಲ್ಲಿ ತೂಗುತ್ತ ಹರ್ಷ ಅನುಭವಿಸುವುದು ಎಷ್ಟು ಜನರ ಪಾಲಿಗೆ ಬಂದೀತು! ಇದ್ದವರನ್ನು ನೋಡಿ ಇಲ್ಲದವರಿಗೆ ಕರುಬು. ಒಳಗೆ ಉರಿ, ದ್ವೇಷ. ಇದರಿಂದ ವಿಪರೀತ ಪರಿಣಾಮ ಉಂಟಾಗಿದೆ.

ಎಲ್ಲಿಯೊ ಗಣಿಯಿದೆಯಂತೆ ; ಯಂತ್ರ ತಂತ್ರ ಆ ಕಡೆಗೆ ಹೊರಟಿದೆ. ಅಗಿಯಲು ಹಣ ಹೂಡಿ ಆಗಿದೆ ಎಂದು ಗಾಳಿಸಮಾಚಾರ ಬಂದ ಕೂಡಲೆ ಸಾವಿರ ಸಾವಿರ ಮಂದಿ ಗಂಡು ಹೆಣ್ಣು, ಒಳ್ಳೆಯವರು ಕೆಟ್ಟವರು, ಸಾಹಸಿಗಳು ಮೋಸಗಾರರು ಧಾವಿಸಿ ಹೋಗುತ್ತಾರೆ. ಕುಡಿತ, ಜೂಜು ಅಲ್ಲಿ. ಜಾರ, ಜಾರಿಕೆ ಎಲ್ಲೆಲ್ಲೂ. ನೆಲವನ್ನು ಅಗೆದು ಸಾವಿರಾರು ಅಡಿ ಡೊಗರು ಮಾಡಿ ಕಲ್ಲು ಕಡಿದು ಎತ್ತಿ ಮೇಲಕ್ಕೆ ಸಾಗಿಸಿ, ಪ್ರಾಣಾಪಾಯವನ್ನು ಲೆಕ್ಕಿಸದೆ ಬೆವರು ಸುರಿಸುತ್ತಾರೆ. ಅದು ಮೇಲೆ ಬಂತು. ಕಲ್ಲನ್ನು ಕುಂಕುಮದಂತೆ ನುಣ್ಣಗೆ ಅರೆದು ಸ್ಯಾನೈಡು ವಿಷ, ಪಾದರಸ ಸೇರಿಸಿ ಕಲ್ಲುಪುಡಿ ಬೇರೆ ಚಿನ್ನ ಬೇರೆ ಮಾಡಿ ಅದರ ಗಟ್ಟಿಗಳನ್ನು ಮಾಡುತ್ತಾರೆ. ವಿಂಗಡವಾದ ಚಿನ್ನವನ್ನು ಕೂಡಿಸಿ, ಇಟ್ಟಿಗೆ ಮಾಡುವುದು ಒಂದು ದೊಡ್ಡ ಹಿಗ್ಗು. ಆ ಇಟ್ಟಿಗೆಗಳನ್ನು ನೀವು ನೋಡಿರಬೇಕು. ನಾಲ್ಕುನೂರು ತೊಲೆ ಅಥವಾ ಔನ್ಸುಗಳ ತೂಕವಿರುತ್ತದೆ ಒಂದೊಂದು. ಬಿರುಕು, ಗೂಡು ಇಲ್ಲದೆ ಮೈಸೂರು ಪಾಕಂತೆ ಕತ್ತರಿಸಿದರೆ, ಅದು ಗಟ್ಟಿ ನುಣುಪಾದರೆ ಆ ಗಾತ್ರದ್ದು, ಆಕೃತಿಯದು-ಚಿನ್ನದ ಇಟ್ಟಿಗೆಗಳು. ಯಾರೆಂಥವರ ಹಿಡಿಗೂ ಸಿಕ್ಕದ, ಅಳವಡದ ನುಣುಪು ಅದರದು. ನಿಮ್ಮ ಕೈಯಲ್ಲಾದರೆ ಹಿಡಿಯಲ್ಲಿ ಎತ್ತಿಕೊಂಡು

ಹೋಗಿ ; ಹೋದರೆ ಅದು ನಿಮಗೆ ನಿಮಗೇ ಎನ್ನುತ್ತಾರೆ ಉತ್ಪಾದಕರು. ಈವರೆಗೂ ಯಾರಿಗೂ ಸಾಧ್ಯವಾಗಿಲ್ಲ. ನನಗೇನೊ ಎನ್ನಿಸಿದೆ. ಸನಾತನಿಗಳ ನಂಬಿಕೆಯಂತೆ ಪುನರ್ಜನ್ಮವೆಂಬುದು ನಿಜವಾದರೆ ಅಂಥ ಶಕ್ತಿ ಬರುವಂತಹ ಮನುಷ್ಯನಾಗಿ ಮುಂದಿನ ಹುಟ್ಟಲ್ಲಿ ಹುಟ್ಟಬೇಕೆಂದು. ದೇವರ ವರವಾದರೆ ದೇವರ ವರ ಬರಲಿ. ಮೈಡಾಸಂತೆ ನಾನು ಹುಚ್ಚು ಆಸೆ ಪಡುವುದಿಲ್ಲ. ಇನ್ನಾವ ನಿರ್ಬಂಧಕ್ಕೂ ಒಳಪಡುವುದಿಲ್ಲ. ಇಲ್ಲವಾದರೆ ತೀವ್ರ ಏಕಾಗ್ರತೆಯಿಂದ ಬಯಸುವುದೆಲ್ಲವೂ ಆಗುತ್ತದೆ. ರೂಪ ರಚನೆ ಗುಣ ಬಲ ಕ್ರಿಯೆ ಎನ್ನುತ್ತಾರೆ- ಪರಿಣಾಮವಾದ ವಿಜ್ಞಾನಿಗಳು ಕೂಡ. ಅಂತಹ ಮಾರ್ಪಾಡು ನನ್ನ ಪಾಲಿಗೆ ಏಕೆ ಬರಬಾರದು ? ಒಂದೇ ಒಂದು ಇಟ್ಟಿಗೆ ಹಾಗೆ ಎತ್ತಿ ತಂದುಬಿಟ್ಟರೆ ನನ್ನ ಸಾಲ ಸೋಲ ತೀರೀತು. ಮನೆಯ ತಾಯಮ್ಮಗಳಿಗೆಲ್ಲ ತೃಪ್ತಿ, ತುಷ್ಟಿ, ಹೃಷ್ಟಿ ತಂದುಕೊಟ್ಟೀತು. ಆಮೇಲೆ ನೆಮ್ಮದಿಯಾಗಿ ಬೇಕಾದರೆ ನಾನು ಕಾಡಿಗೆ ಹೋಗಬಹುದು ; ಕಣ್ಣೇ ಮುಚ್ಚಿಕೊಳ್ಳಬಹುದು. ಅಷ್ಟು ಸಾಕು.

ಇಟ್ಟಿಗೆಗಳನ್ನು ಮಾಡಿದ ಇವರೊ ಬ್ಯಾಂಕುಗಳಿಗೆ ರಾಜ್ಯಗಳಿಗೆ ಮಾರುತ್ತಾರೆ. ಕೊಂಡವರು ? ಅವರು ಬ್ಯಾಂಕುಗಳಲ್ಲಿ ಭೂಮಿಯನ್ನು ಆಳವಾಗಿ ಅಗೆದು ಕಬ್ಬಿಣದ ಪಂಜರಗಳನ್ನು ನಿರ್ಮಿಸಿ ಯಾರ ಕಣ್ಣಿಗೂ ಕೈಗೂ ಅದು ಸಿಗದಂತೆ ವಿದ್ಯುತ್ತಿನ ಪ್ರಾಕಾರಗಳನ್ನು ಕಟ್ಟಿ ಪುನಃ ಹೂಳಿಡುತ್ತಾರೆ. ಪರಮ ಅವಿವೇಕ ! ಕತ್ತಲ ಭೂಕುಹರದಿಂದ ಎತ್ತಿ ಮನುಷ್ಯ ನಿರ್ಮಿತವಾದ ಹೊಸ ಕತ್ತಲ ಸೆರೆ ಇಡುವ ಈ ಭಾಗ್ಯಕ್ಕೆ ಇಷ್ಟು ಶ್ರಮವೇಕೊ? ಈ ವೆಚ್ಚ, ಕ್ರಿಯಾತಂತ್ರ, ಈ ಕೋಲಾಹಲ, ಸ್ಪರ್ಧೆ, ಕೋಟಲೆ, ಭ್ರಷ್ಟತೆ, ಒಡಲ ಮಾರಾಟ, ವೈಷಮ್ಯ, ಅವಿವೇಕ ಎನ್ನಿಸುತ್ತದೆ. ಮೇಲಕ್ಕೆ ಎತ್ತಿ ತಂದುದನ್ನು ಹೆಣ್ಣುಗಳಿಗೆಲ್ಲಾ ಹಂಚಿಬಿಡುತ್ತೇನೆಂದರೆ–ಹಂಚಿ ಬಿಟ್ಟರೆ–ಲೋಕದ ಅರ್ಧ ಆಸೆ ಅಡಗೀತು. ಚಿನ್ನ ದೊರಕಿದ ಕಾರಣದಿಂದ ಹೆಣ್ಣುಗಳು ಗಂಡರ ಪಾಲಿಗೆ ನೆಮ್ಮದಿಯಿಂದ ಆಡಿಕೊಂಡಿದ್ದಾರು... ಅದೊಂದೇ ಅವರ ಒಲವನ್ನು ಪಡೆಯುವ ರೀತಿಯಲ್ಲವಾಗಿರುವುದು ದೇವರ ದಯೆ. ಲೋಕಕಲ್ಯಾಣದ ಯಾವುದೊ ದೊಡ್ಡ ಅದೃಷ್ಟ ; ಸೌಭಾಗ್ಯ. ಆದರೂ ಮನುಷ್ಯರಾದ್ದರಿಂದ ಅದಿಲ್ಲದೆಯೂ ಎಷ್ಟೋ ಸಜ್ಜನಿಕೆ ಉಳ್ಳವರೇ. ಅದೂ ಇದ್ದಿದ್ದರೆ ? ಲೋಕಪೀಡೆಯ ಒಂದು ಕಾರಣ ವಿಸ್ತರಿಸಿದರೆ ಅಷ್ಟು ಪುಣ್ಯದ ಆರ್ಜನೆಯಾಗುತ್ತಿತ್ತು. ನರನಿಗೆ ಇನ್ನೂ ಅಂಥ ಪುಣ್ಯ ಹತ್ತಿರಿಸಿಲ್ಲ.

ಇತರ ಯಾವುದಕ್ಕೂ ಇಲ್ಲದ ಕೀರ್ತಿ ಚಿನ್ನದ್ದು. ಮುತ್ತಿಗಿಲ್ಲ, ರತ್ನಕ್ಕಿಲ್ಲ, ವಜ್ರಕ್ಕಿಲ್ಲ, ಪಚ್ಚೆನೀಲ, ವೈಡೂರ್ಯ ಮುಂತಾದ ಇತರ ಮಣಿಗಳಿಗಿಲ್ಲ. ಅವು ಮಸುಕಾಗುವುವು, ದಕ್ಕದಾದಾವು; ಬೆಲೆ, ಹೊಳಪು ಕೆಟ್ಟಾವು. ಕೆಲವರಿಗೆ ಕೆಲವು ಆಗಿಬಾರವು. ಚಿನ್ನ ಹಾಗೆಂದೂ ಆಗದು. ಅದನ್ನು ಪಡೆದವರಿಗೆ, ಒಲಿದವರಿಗೆ ತಪ್ಪದೆ ಒಲಿಯುತ್ತದೆ. ಅತಿ ಪ್ರೀತಿ ತಪ್ಪೇನೊ. ಅತಿ ಯಾವುದು ತಪ್ಪಿಲ್ಲ ? ಅನ್ನ ಬಟ್ಟೆ, ಮಾತು, ಯಾವುದು ಅತಿಯಾದರೂ ಬಾಳಿಗೆ ವಿಷವೇ, ಅಪಾಯವೇ. ಚಿನ್ನವೂ ಹಾಗೇ ಸರಿ. ನಿರಾಭರಣ ಸೌಂದರ್ಯವೆನ್ನುವುದು ಸತ್ತ್ವಕ್ಕೆ ನಿಜವಿರಬಹುದು. ಜಿನರಂಥವರಿಗೆ ; ಲೋಕವನ್ನು

ಗೆದ್ದವರಿಗೆ, ಒದ್ದವರಿಗೆ-ಆ ಲಕ್ಷಣ ಗೌರವ ತಂದೀತು. ಅಂಥದು ಬ್ರಹ್ಮಸೃಷ್ಟಿಯಲ್ಲಿ ಎಷ್ಟಿದೆ? ಕೋಟಿಯಲ್ಲಿ ಒಂದಕ್ಕೆ ರೂಢಿಸದು. ಆದ್ದರಿಂದಲೇ ಅದಕ್ಕೆ ಗಣ್ಯತೆ, ಗೌರವ. ಉಳಿದಲ್ಲಿ ಒಡವೆ ಅಲಂಕಾರವಾಗಬಲ್ಲದು ; ಹಿತವಾಗಿ ಮಿತವಾಗಿ ಬಳಸಿದರೆ. ಆ ಮೈಗೆ ತಕ್ಕಷ್ಟು, ಒಪ್ಪುವಷ್ಟು ; ಹೆಚ್ಚಾದರೆ ಎಲ್ಲಿಯೂ ವಿಕಾರವೇ. ಹಾಳತವೊಂದೇ ಗುಣಕ್ಕೆ ಮಹಾಲಕ್ಷಣ. ಒಡವೆ ಹಾಕಿಕೊಂಡವರು ಮನುಷ್ಯರೊ ಜಾನುವಾರುಗಳೊ ಎನ್ನಿಸಬಾರದು. ವಿದೇಶಗಳವರು ಒಡವೆ ಇಳಿಹಾಕಿಕೊಂಡ ನಮ್ಮ ಕೆಲವರನ್ನು ಕಂಡು ಈ ಹೆಣ್ಣುಗಳು Walking Safe Deposits ಎಂದುದುಂಟು. ಕಾಲ ಚೆನ್ನಾಗಿದ್ದರೆ, ಸುರಕ್ಷಣೆ ಕೂಡಿ ಬಂದರೆ ಈ 'ಡಿಪಾಸಿಟ್ ಸೇಫ್' ಆಗಬಲ್ಲದು. ಈ ಕಾಲದಲ್ಲಿ ಒಂದನ್ನೂ ಹೇಳುವ ಹಾಗಿಲ್ಲ. ಡಿಪಾಸಿಟ್ ಡಿಪಾಸಿಟ್ ಆಗದು ; ಸೇಫ್ ಗುಣವಾಚಿ ಅಲ್ಲ ; ಕ್ಷಣಭಯ, ಜೀವಭಯ. ಚಿನ್ನಕ್ಕಾಗಿ ಜೀವಕ್ಕೆ ಸಂಚಕಾರ ಕೊಟ್ಟಂತಾಗುತ್ತದೆ ಮಾತ್ರ..... ದೇವರು ಕೊಟ್ಟದ್ದನ್ನು ಮುರಿಸಿ, ಕೀಳಿಸಿ ಹೊಸ ಚಿನ್ನದ ಹಲ್ಲು ಕಟ್ಟಿಸಿಕೊಳ್ಳಬಹುದು. ಕನ್ನಡಕ, ಕೈ ಬಳೆ, ಗಡಿಯಾರ, ಅದರ ಮುಂಗೈ ಪಟ್ಟಿ, ಕೊರಳ ಸರಿಗೆ, ಜೋಮಾಲೆ, ಬೆರಳ ಉಂಗುರ ಮಾಡಿಸಿಕೊಳ್ಳಬಹುದು. ಬೇರೆ ರತ್ನಗಳಿದ್ದರೂ ಕುಂದಣಕ್ಕೆ ಅಕೃತಿ ರಚನೆಗೆ ಚಿನ್ನವೇ ಬೇಕು. ಚಿನ್ನದ ಭಸ್ಮ ನಾಲ್ಕಾರು ದೊಡ್ಡ ರೋಗಗಳಿಗೆ ರಾಮಬಾಣ. ಬರ್ಫಿ, ದಂರೋಟುಗಳ ಮೇಲೆ ಹೊದಿಸಿದ ಚಿನ್ನದ ಹಾಳೆ ತಿನ್ನಲು ಬರುತ್ತದೆ. ಬೀಡ ಮಾರುವವರು ಕೂಡ ಕೇಸರಿ, ಕಸ್ತೂರಿ, ಪಚ್ಚಕರ್ಪೂರ, ಕಾಮಸಂವರ್ಧಕ ಸಂಭಾರ ತುಂಬಿ ಮೇಲೆ ಸುತ್ತುವ ಚಿನ್ನದ ಹಾಳೆ ಮಿರು ಮಿರು ಮಿಂಚುತ್ತಿರಲು ಅದನ್ನು ಕೊಂಡು ಸುಖಕ್ಕೆ ಸವ್ವಾರಿ ನಡೆಯುವ ವೈಖರಿ ನಾಲ್ಕು, ಆರು ಕಣ್ಣುಗಳ ಗ್ರಹಿಕೆಗೆ ಮೀರಿದ್ದು. ಮೇಲಾಟಗಳಲ್ಲಿ ದೊರೆಯುವ ಪ್ರಶಸ್ತಿ ಚಿನ್ನದ್ದು; ಗೆಲವು ಗುರಾಣಿ ಚಿನ್ನದ್ದು ; ಫೌಂಟೆನ್‌ಪೆನ್ ನಿಬ್ ಚಿನ್ನದ್ದು ; ದೇವರಿಗೆ ಬೆಸೆದುದು ತಗಡಿನ ಆಕೃತಿ. ಗುಡಿಯ ಗೋಪುರಕ್ಕೆ ಚಿನ್ನದ ಕಲಶ. ಚಿನ್ನವೇ ಅಲ್ಲವಾದರೆ ಚಿನ್ನದ ಮುಲಾಮಾದರೂ ಆಗಬೇಕು. ನೀವೂ ನಿಮ್ಮವರೂ ಆಡುವ ಮಾತು ಚಿನ್ನ. ಆಡದ ಮೌನ ಚಿನ್ನ. ಪ್ರೀತಿಯ ಭರದಲ್ಲಿನ ಅತಿಶಯವೆಲ್ಲ ಚಿನ್ನ. ಮೌನದ ಒಲುಮೆಗೆ ಚಿನ್ನದ ಹೆಸರು ಕಾಣಿಕೆ. Lips sing when they cannot – ಅಥವಾ Do not ಒ!– kiss ಎನ್ನುವುದುಂಟು. ಮುದ್ದುಗಾರಿಕೆ ಚಿನ್ನ. ಜೇನು ಮಧುವನ್ನು ಹೀರುವಾಗ ಹೀರುವ ಮದವೆ ಹೊನ್ನು. ಉಳಿದ ಲೋಕ ಆಗ ಅದಕ್ಕಿಲ್ಲ ; ಅದಕ್ಕೆ ಉಳಿದ ಲೋಕವಿಲ್ಲ. ಕಿತ್ತರೆ ಅದರ ಒಡಲು ಕಿತ್ತು ಬರುವುದೇ ಹೊರತು-ಮುಖವಲ್ಲ, ತುಟಿಯಲ್ಲ. ಅವು ಅಲ್ಲಿ ಲಗ್ನ.

ನಮ್ಮವರ ದೇವರಿಗೆ ನಾಳಿದ್ದು ಚಿನ್ನದ ತೊಟ್ಟಿಲು ಹಾಕುತ್ತಾರೆ. ಬಾಲ ಗೋಪಾಲನನ್ನು ದೇವಕಿ ತೂಗಿದಂತೆ ಪರಕಾಲಮಠದ ದೇವಾಲಯದಲ್ಲಿ ಗೋಪಾಲ ಕೃಷ್ಣನನ್ನು ತೂಗುತ್ತಾರೆ. ಚಿನ್ನದ ದೀಪಾರತಿ ಮಣ ಮಣ ಗಾತ್ರದ ಆಳಾಳೆತ್ತರದ ಚಿನ್ನದ ಬೆಳ್ಳಿಯ ದೀಪಸ್ತಂಭದ ತೇರು ನಿಲ್ಲಿಸಿರುತ್ತದೆ. ಅವುಗಳ ಆಕರವಾಗಿ ೬-೮

ಪ್ರಣತಿಯ ಕುತ್ತು ಕೊನೆಗಳಿಗೆ ಬತ್ತಿಸೂಡಿ, ಶ್ರೀಗಂಧದ ತೈಲ ಎರೆದು, ಆ ಬೆಳಕಲ್ಲಿ, ಸುಗಂಧದಲ್ಲಿ ತೊಟ್ಟಿಲ ಸೇವೆ ಮಾಡಿಸುತ್ತಾರೆ. ಅದನ್ನು ನೋಡಲು ಎಷ್ಟು ನೂಕು ನುಗ್ಗಲು. ದೇವರಿಗೆ ಹೆಚ್ಚಳ ತರುವುದು ಈ ಬಂಗಾರದ ಶೃಂಗಾರ ; ಅಂಥ ಮಹಾಟ್ಟಹಾಸ. ನಮ್ಮೂರು ಕಾಳಮ್ಮನಿಗೆ ಈ ಸಂಜೆ ಸವರನ್ ಅಲಂಕಾರ ಎಂದು ಡಂಗುರ ಹೊಡಸಿದರೆ ಸಾಕು, ಊರೂರೇ ಕಣ್ಣ ಹಬ್ಬಕ್ಕಾಗಿ ಹೊರಡುತ್ತದೆ. ದಿನ ನಿತ್ಯದ ಬಡಕಲು ಕಾಳಮ್ಮನನ್ನು ಆ ದಾರಿ ಹಾಯುವವರು ನೋಡರು. ನೋಡುವುದು ಏನನ್ನು ? ಸುತ್ತಲ ಶೆಟ್ಟರು, ಸೇಠರು ಸವರನ್ನು ಕೊಡುತ್ತಾರೆ. ಅದನ್ನು ಕಾಯಲು ಬಂದೂಕು ಬಾರ್ ಮಾಡಿ ಒಳಗೆ ಕಾದಿರುವ ಕಾವಲು ಪಡೆ ಹೊರಗೆ ಕಾಣಿಸದೆ ಇರುತ್ತಾರೆ. ಉಸಿರು ಕಟ್ಟಿಕೊಂಡು ನೋಡುವ ಜನದ ಕಣ್ಣು ಕೋರೈಸುತ್ತದೆ.... ಕಾಶಿಯ ಪೀತಾಂಬರದ ಜರತಾರಿ ನೆಯ್ಗೆ, ಅಂಚಿಗೆ, ಸೆರಗಿಗೆ ಒಂದು ರೀತಿಯಾದರೆ ಬಡಲಿಗೆ ಎಷ್ಟು ಹೂ, ನಾಣ್ಯ, ಚಿತ್ತಾರ–ಮೋಟರು, ವಿಮಾನ, ನವಿಲು, ಹೂ, ಗಿಡ, ಮಾವಿಕಾಯಿ, ಗಿಣಿ, ಬೈಸಿಕಲ್ಲು ಎಲ್ಲ ಕಾಣುವಂತೆ ನೇಯಿಸುವುದುಂಟು– ಉಡುವ ವಸ್ತ್ರ ರಾಜರಿಗೆ ರಾಜಮಹಿಷಿಯರಿಗೆ ಜರಿಯ ಸಿಂಗಾರದ್ದು. ಒಂದೆಳೆ ರೇಶಿಮೆಗೆ ಒಂದೆಳೆ ಜರಿ. ಮಣಭಾರವನ್ನಾದರೂ ಇವರು ಹೊತ್ತಾರು. ಮಹಿಷಿ ಹೊರಬೇಕು ? ಅರಸುತನ ಬಿಟ್ಟೀಯೆ ? ಕಷ್ಟ, ಬೆವರು ಸುರಿಸಲಿ, ಸಹಿಸಲಿ. ಇಲ್ಲವಾದರೆ ಶ್ರೀಮಂತಿಕೆ ಲೋಕದ ಕಣ್ಣಿಗೆ ಹೊಡೆಯುವುದಾದರೂ ಹೇಗೆ?

ಎಲ್ಲ ಪದಾರ್ಥಗಳಿಗೂ ಬೆಲೆ ಹಣದಲ್ಲಿ. ಹಣಕ್ಕೆ ಬೆಲೆ ಅದರ ಕಾವಲಿಗಿರುವ ಚಿನ್ನದ ಪ್ರಮಾಣಕ್ಕೆ ಎನ್ನುವ ಕಾಲವಿನ್ನೂ ಲೌಕಿಕತೆಯಾದರೂ ಲೋಕದಲ್ಲಿದೆ. ಉತ್ಪತ್ತಿಯಿಂದ, ವ್ಯಾಪಾರಗಳಿಂದ, ಸೇವೆಗಳಿಂದ ತೀರಿಸಲಾಗದೆ ನಿವ್ವಳವಾಗಿ ಉಳಿಯುವ ಸಾಲದ ಹೊರೆಯನ್ನು ತುಂಬಲು ಹೊನ್ನು ಸುರಿಯಬೇಕು. ಕೆಲ ರಾಜ್ಯಗಳವರಿಗಂತೂ ಚಿನ್ನದ ದಾಹ ಕೆಟ್ಟ ಜ್ವರದ ಕಾವುಗಳಿಗೆ ಮೀರಿದ್ದು. ಅದರ ಬೆಲೆಗಳಲ್ಲಿ ನಡೆವ ಸಟ್ಟಾ ವ್ಯಾಪಾರ ಲೋಕವನ್ನು ಹೀರಿ ಗಾಸಿಪಡಿಸುವಷ್ಟು ಬೇರಾವುದೂ ಪಡಿಸದು. ಹೊರಪೇಟೆಯಲ್ಲಿ ಚಿನ್ನಕ್ಕೆ ಇರುವ ಬೆಲೆಯ ಎರಡರಷ್ಟು ಮೂರರಷ್ಟು ಕೊಟ್ಟು ನಮ್ಮ ದೇಶಗಳಂಥ ಹೆಣ್ಣುಗಳೂ ಹದ್ದುಗಳೂ ಅದನ್ನು ಕೊಳ್ಳುತ್ತಾರೆ. ಹೊರಗಿನ ಬೆಲೆಗೆ ಚಿನ್ನವನ್ನು ಕೊಂಡು ಇಲ್ಲಿ ಮಾರುವುದು ಶಕ್ಯವಾಗಿದ್ದರೆ ತಂದ ಸಾಲ ತೀರಿಸಿ, ಸಮಕ್ಕೆ ಸಮ ಬೆಲೆ ಲಾಭ ಗಳಿಸಿ ನಮ್ಮ ಸರ್ಕಾರ ಆದಾಯ ಪಡೆಯಬಹುದಿತ್ತು. ಸರ್ಕಾರಕ್ಕೆ ಹಾಗೆ ಚಿನ್ನ ಕೊಡುವವರಿಲ್ಲ. ಹೆಚ್ಚು ಬೆಲೆಗೆ ಕೊಳ್ಳುವ ಹಾಗಿಲ್ಲ. ಒಳಪೇಟೆಯಲ್ಲಿ ಕಂಡ ಹಾಗೆ ಸಿಕ್ಕುವ ಲಾಭಕ್ಕೆ ಮಾರುವ ಹಾಗಿಲ್ಲ. ಅಕ್ಕಿ, ಗೋಧಿ, ಪೆಟ್ರೂಲ್ಪು, ಸೀಸ, ಗಂಧಕ, ಗೊಬ್ಬರ ಸಾಲ ದೊರೆಯುವ ಹಾಗೆ ರಷ್ಯವೊ ಕೆನಡವೊ ಚಿನ್ನದ ಸಾಲ ಕೊಡಬಾರದೆ, ಹತ್ತು ವರ್ಷದ ಅವಧಿ ಹಾಕಿ ? ಎನ್ನಿಸುತ್ತದೆ. ಕೇಳುವ ಧೈರ್ಯ ನಮಗಿಲ್ಲ ; ಕೊಡುವ ಧಾರಾಳ ಅವರಿಗಿಲ್ಲ. ಎಲ್ಲಾದರೂ ಉಂಟೆ! ಚಿನ್ನ ಕೇಳುತ್ತಾರಲ್ಲಾ ಎಂದುಕೊಳ್ಳುತ್ತಾರೆ. ಚಿನ್ನದ ಮಾತೆತ್ತಲು ಯಾರಿಗೂ ಗಂಟಲು

ಕುಟ್ಟುತ್ತದೆ : ಅಷ್ಟು ಭಯ ಭಕ್ತಿಭರಿತಭಾವ. ರಕ್ತನಾಳ ಬಿಗಿಯುತ್ತದೆ, ಎದೆಯ ನರ ಗಡುಸಾಗುತ್ತದೆ. ಆಡುವ ಮಾತಿಗೆ ತೊದಲು ಬರುತ್ತದೆ. ಚಿನ್ನದ್ದು ಎಲ್ಲಿಯೂ ಅಷ್ಟು ಅದಬ್.

ಕೇನ್ಸ್ ಒಮ್ಮೆ ಹೇಳಿದರು : ಇದರದು ಬಂಜೆ ವ್ಯವಹಾರ. ಈ ಭ್ರಾಂತಿ ಜನಕ್ಕೆ ಏಕೊ. ಇದನ್ನು ಇಟ್ಟುಕೊಂಡವರಿಗೆ ದುಗ್ಗಾಣಿ ಬಡ್ಡಿ ಗಳಿಕೆಯಾಗದು. ಇದರ ಮೇಲಿನ ವಿಶ್ವಾಸ ವ್ಯರ್ಥ ಮೋಹ. ಎಲ್ಲ ಸರ್ಕಾರಗಳ ಹಣದ ಬೆಂಗಾವಲಿನ ಚಿನ್ನವನ್ನೂ ಒಟ್ಟು ಗೂಡಿಸಿದರೆ ೩೦ ಘನ ಅಡಿ ಗಾತ್ರವಾಗದು-ಇಂದು ಇನ್ನೊಂದಡಿ ಹೆಚ್ಚಾದೀತೆ? ಇದನ್ನೆಲ್ಲ ನಡುಗಾತ್ರದ ಒಂದು ಹಡಗು ರಾತ್ರೋರಾತ್ರಿ ಎತ್ತಿಕೊಂಡು ಹೋಗಿ ಶಾಂತಸಾಗರದ ಒಂದು ಕಾಣದ ಆಳದಲ್ಲಿ ಮುಳುಗಿಸಿಬಿಟ್ಟರೆ ಯಾವ ನಷ್ಟವೂ ಹಣಕ್ಕಾಗಲಿ, ಬೆಲೆಗಳಿಗಾಗಲಿ, ವ್ಯಾಪಾರಕ್ಕಾಗಲಿ, ಲೋಕಕ್ಕಾಗಲಿ ಆಗದು. ಒಂದೇ ಕಂಡಿಷನ್ : ಸಂಗತಿ ಯಾರಿಗೂ ತಿಳಿಯಬಾರದು. ತಿಳಿದರೆ ಲೋಕಕ್ಕೆ ಹುಚ್ಚು ಹಿಡಿಯುತ್ತದೆ. ದಡ್ಡಜನ! .... ಮಸಲ, ನೀರಲ್ಲಿ ಹಾಕಿದಿರಿ. ಯಂತ್ರಸಿದ್ಧಿ, ವಿಜ್ಞಾನ ಸಿದ್ಧಿಯಿಂದ ಎಲ್ಲಿದ್ದರೂ ಅದನ್ನು ಮೇಲಕ್ಕೆ ಪುನಃ ತರಬಹುದು. ಆ ಪ್ರಯೋಗ ಪರೀಕ್ಷೆ ಮಾಡಲು ಯಾರೂ ಸಿದ್ಧರಿಲ್ಲ. ಎಲ್ಲರಿಗೂ ಭಯ. ಅದಕ್ಕಿಂತ ಅಧಿಕ ಮಾತು ಪರಸ್ಪರ ಸಂಶಯ.

ಸೂಕ್ತಿ ಚಿನ್ನ – ಮಧ್ಯಮ ಚಿನ್ನ ; Golden Rule–Golden Mean ಕೇಳಿರಬೇಕು. ಹೊನ್ನ ಕೀರ್ತಿ ಅಮರ. ಉಳಿದುದು ಎಷ್ಟು ಮರವೊ ಕಾಣೆ. ಅದನ್ನು ಇಟ್ಟುಕೊಂಡರೆ ನೂರಕ್ಕೆ ಒಂದು ಪೈಸಾ ಲಾಭ ಬಾರದು. ತಿಂದರೆ ಹಸಿವಡಗದು, ಅರಗದು. ಅದನ್ನು ಕುಡಿಯುವವರು ? ಜೀವ ಹೋಗಬಹುದು. ಕೀರ್ತಿ ಅಜರಾಮರ. ಹೊನ್ನಿದ್ದರೆ ಹೆಣ್ಣು, ಮಣ್ಣು ; ನೀವೊಬ್ಬ ಕುಳ ; ಉದ್ಧಿ. ಇಲ್ಲವಾದರೆ ನಿಮ್ಮನ್ನು ಕೇಳುವವರು ಯಾರು? ಹೊನ್ನಿರಬೇಕು ಇಲ್ಲವೆ ಪದವಿಯಿರಬೇಕು. ಇಲ್ಲವಾದರೆ ಆಸ್ಪತ್ರೆಗಳಲ್ಲಿ ಕೂಡ ನಿಮ್ಮನ್ನು ಯಾರೂ ಮಾತನಾಡಿಸರು. ಒಂದಿದ್ದರೆ ಇನ್ನೊಂದು ದೊರೆತೀತು; ಕೊಳ್ಳಬಲ್ಲ ಎಲ್ಲವೂ ದೊರಕೀತು. ಅದನ್ನು ದೊರಕಿಸಿಕೊಳ್ಳಲು, ಒಲಿಸಿಕೊಳ್ಳಲು ಶ್ರಮಿಸಬೇಕು. ನೀವೆಷ್ಟೇ ಚಿನ್ನ ಬರಡು ಎನ್ನಿ : ಅದರ ಹೆಸರು ಹೇಳಿದರು ಆಯಿತೇ. ಅದು ಮಾಡಲಾಗದ, ಅದರಿಂದ ಆಗಲಾರದ ಕೆಲಸವಿಲ್ಲ. Saint seducing gold ಎಂದ ವಿಲಿಯಂ ಷೇಕ್ಸ್ ಪಿಯರ್. ತಿರುಪತಿ ತಿಮ್ಮಪ್ಪನ್ನ ಕೇಳಿ : ಚಿನ್ನದ ವೈಭವ ನಿಜವೊ ಅಲ್ಲವೊ ಗೊತ್ತಾಗುತ್ತದೆ. ಗೋವಿಂದಾ, ಶ್ರೀನಿವಾಸಾ, ಬಾಲಾಜೀ ಎಂದು ತಂದುತಂದು ಸುರಿಯುತ್ತಾರೆ-ಡೇರೆ ಬಟ್ಟೆಗಳಿಂದ ಮಾಡಿದ್ದು ಆತನ ಕೋಶಭಂಡಾರ. ನಿಜದಲ್ಲಿ ಚಿನ್ನದ್ದೇ ನೆಲಗಟ್ಟು, ಕಲಶ ಎಂದು. ಸ್ವಪ್ನ ಆಕಾಂಕ್ಷೆ ಕಲ್ಪನೆಗಳಿಗೂ ಅದೇ ಅಳತೆ. ಅದರದೇ ಪ್ರಮಾಣ. ಪರೀಕ್ಷೆ ಮಾಡಲು ಪೋರ್ಷಿಯ ಚಿನ್ನ ಬೆಳ್ಳಿ ಸೀಸಗಳ ಪರೀಕ್ಷೆಯನ್ನು ಹೂಡಿದಳು. ಅವಳ ಮನಸ್ಸಿಗೆ ಒಪ್ಪಿದವನು ಸರಿಯಾಗಿ ಆಯ್ದು ತೇರುವನೊ ಇಲ್ಲವೊ ಎಂಬ ಚಿಂತೆ ಅವಳಿಗೆ. ಬಸ್ಸಾನಿಯೊ

ತೀರದಿದ್ದರೆ ಆಕೆಯ ನಿರೀಕ್ಷಾಭಂಗ ದುರ್ಭರವಾಗುತ್ತಿತ್ತು. ಅದು ಜೂಜಲ್ಲವಾದರೆ ಇನ್ನು ಯಾವುದು ?

ನನಗಂತೂ ಅದರಲ್ಲಿ ವ್ಯಾಮೋಹವಿಲ್ಲ. ಏಕೆಂದರೆ ಅದು ಎಂದಿಗೂ ನನಗೆ ದಕ್ಕಿಲ್ಲ. ಆದುದರಿಂದ ಅದರ ಮೇಲೆ ಒಂದು ಬಗೆಯ ವೈರವೇ, ತಿರಸ್ಕಾರವೇ. ಯಾವುದು ನಮ್ಮ ಪಾಲಿಗೆ ಇಲ್ಲವೊ ಅದನ್ನು ಕುರಿತು ತೆಗಳಿಕೆ ಸಹಜ. ಸವರನ್ನಿಗೆ ೮-೧೦ ರೂಪಾಯಿ ಇದ್ದಾಗಲೇ ನಮಗೆ ರೂಪಾಯಿ ಕ್ಷಾಮ. ಇನ್ನು ೧೫೦ ರೂಪಾಯಿಗೆ ಏರಿ ಅಟ್ಟದ ಮೇಲೆ ಕೂತಿದೆ ಅದು. ಅದರ ಗೋಜೇಕೆ ನಮಗೆ ? ಅನ್ಯಾಯ. ಎಲ್ಲ ಪದಾರ್ಥಗಳಿಗೂ ಲಾಭಾಳಿ ಮನುಷ್ಯ ಏರಿಸಿದ ಬೆಲೆಗಳೇ ಎಲ್ಲೆಲ್ಲೂ. ಉತ್ಪತ್ತಿಕಾರರು, ಮಾರಾಟಗಾರರು, ಸಾಗಣೆಕಾರರು, ಸರ್ಕಾರ ಎಲ್ಲರೂ ಸೇರಿ ತಿನ್ನುವ ಜನಕ್ಕೆ, ಬಳಸುವವರಿಗೆ ಬೆಲೆಗಳನ್ನು ಹೆಚ್ಚು ಕೊಬ್ಬಿಸಿದ್ದಾರೆ. ಜೀವಕ್ಕಿಂತ ಜೀವನದ ವೆಚ್ಚವನ್ನು ಹೆಚ್ಚಿಸಿ. ಕೊನೆಗೆ ಚಿನ್ನದ ಬೆಲೆ ಹಾಗೇ ಆದ್ದು. ನಾಡಿಗೆ ಇದರಿಂದ ಲಾಭ ಉಂಟೆ ? ಚಿನ್ನ ಉಳ್ಳವರಿಂದ ದೇಶಸೇವೆಯಾದೀತೆ ? ನಾಡಿನ ದ್ರೋಹವಲ್ಲವೆ ? ನಾಡು ಉಳಿಯುವ ಮಾರ್ಗ ಅದೊಂದೇ ಎಂದು ಘೋಷಿಸಿ ಪ್ರಧಾನಿ, ರಾಷ್ಟ್ರಾಧ್ಯಕ್ಷರು, ಪಾರ್ಲಿಮೆಂಟು ಅವರೆದುರಿಗೆ ಧೋರಣೆ ಹೂಡಿ ನಾಲಿಗೆ ಕಿತ್ತುಕೊಳ್ಳಲಿ. ನೇಣು ಹಾಕಿಕೊಳ್ಳುತ್ತೇನೆನ್ನಲಿ. ಚಿನ್ನ ಉಳ್ಳವರು ಕರಗಿಸಿಯಾರೆ ? ಕರಗಿಯಾರೆ ? ದೇಶ ನಾಶವಾದರೆ ಆಯ್ತು, ಪ್ರಧಾನಿ ಅಧ್ಯಕ್ಷರು ಇಲ್ಲವಾದರೆ ಬೇರೆಯುವರನ್ನು ಆಯ್ದುಕೊಳ್ಳಬಹುದು. ಕಾಸಿಗೊಂದು ಕೊಸರಿಗೊಂದು ಸಿಕ್ಕುತ್ತಾರೆ. ನೀವೇ ಹೇಳಿ ನೋಡಿ ; ನಾವು ಚಿನ್ನ ಕೊಡುವವರಲ್ಲ, ಬಿಡುವವರಲ್ಲ ಎನ್ನುತ್ತಾರೆ ಖಂಡಿತವಾಗಿ. ಸದ್ಯ ಇಂತಹ ದೇಶಘಾತಕತನಕ್ಕೆ ಹೊರಗು ನಾನು. ಹೊನ್ನಿದ್ದರಲ್ಲವೆ ನನಗೆ! ೬೦ ವರ್ಷಗಳ ಕಾಲದ ಅಭಾವ ನನಗೆ ಅದರಲ್ಲಿ ಅನಾಸಕ್ತಿ ತಂದಿದೆ. ಹೆಂಗಸರಿಗೆ ಒಡವೆ ಮಾಡಿಸಿಕೊಟ್ಟು ತೃಪ್ತಿಪಡಿಸಲಾರೆ ನಿಜ ! ದೇವರ ದಯದಿಂದ ಅವರಿಗೆ ನಮ್ಮಲ್ಲಿ, ನಮ್ಮನಮ್ಮಲ್ಲಿ ಪೂರ್ತಿ ಅನಾಸಕ್ತಿ ಬಂದಿಲ್ಲ ಈವರೆಗೆ. ನನಗಂತೂ ನಿಚ್ಚಳವಾದ, ಸ್ಥಿರವಾದ, ನಿರಾಳವಾದ ವೈರಾಗ್ಯ ಉಂಟಾಗಿದೆ ಚಿನ್ನದ ವಿಷಯದಲ್ಲಿ. ಸ್ವರ್ಣಮುಕ್ತಿ ಜೀವನ್ಮುಕ್ತಿ ತರಬಲ್ಲದಾದರೆ, ವಿಧಾನ ಯಾವುದೇ ಇರಲಿ, ವಾಸ್ತವವಾಗಿರುವ ಈ ಅನಾಸಕ್ತಿ ನನ್ನಂತಹವನಿಗೆ ಮುಕ್ತಿಯನ್ನು ತರಲೇಬೇಕು. ಈ ಬಗೆಗೆ ನನ್ನ ಚಿತ್ತವೃತ್ತಿ ಅಮಲ ; ಅಚಲ.

# ಹೆಣ್ಣು

(ಮುಂದುವರಿದುದು)

ಮುಂದುವರಿದ ಹೆಣ್ಣನ್ನೆಲ್ಲ ಕುರಿತು ಇಲ್ಲಿ ಬರೆಯುತ್ತಿರುವುದು. ಆ ಭಾರತ ಭಾಗವತಗಳಿಗೆ ಇನ್ನಷ್ಟು ಕಾಲ ಕಾಯಬೇಕು. ಅವಿನ್ನೂ ರೂಪಗೊಳ್ಳುತ್ತಿವೆ. ಹಿಂದೆ ಹೆಣ್ಣನ್ನು ಕುರಿತು ನಾಲ್ಕು ಪುಟ ಬರೆದಿದ್ದೆ ; ಅದನ್ನು ಕೆಲವು ಗೆಳೆಯರು ಮೆಚ್ಚಿಕೊಂಡರು. ಕೆಲವರು ಟೀಕಿಸಿದರು. ಟೀಕೆ ಮೆಚ್ಚಿಕೆಯೊಡನೆ ಬಂದ ಒಂದು ಸಂದರ್ಭ ವಿಶೇಷವಾದ್ದು. ಮಾಡಿದವರು ಸುಮಾರು ನನ್ನ ವಯಸ್ಸಿನವರೇ ಒಬ್ಬ ಗೆಳೆಯರು. ಬಹುಕಾಲದ ಪರಿಚಯ, ಸಹಚಾರ ನಮ್ಮನ್ನು ವಿಶ್ವಾಸದಲ್ಲಿ ಬಿಗಿದಿದೆ. ಅವರು ತುಂಬ ಹೆಚ್ಚಿನ ರಸಿಕರೆಂದೂ ಹೇಳುವ ಹಾಗಿಲ್ಲ ; ಪ್ರಕಟವಾಗಿ. ಆದರೆ ಯಾವ ಹಾವಲ್ಲಿ ಯಾವ ಹುತ್ತವಿದೆಯೊ ಯಾರು ಬಲ್ಲರು ? ನನಗಿಂತ ಅವರಿಗೆ ತೆಲುಗು ಸಾಹಿತ್ಯದ ಆಲೋಡನೆ ಅಧಿಕ. ತೆಲುಗರು ನಮಗಿಂತ ಹೆಚ್ಚು ರಂಗು ಜೀವನದವರು ; ಹೆಚ್ಚು ಚುರುಕು. ಕರ್ನಾಟಕ ಠೇಂಕಾರ ಎನ್ನುತ್ತಾರೆ ; ಠೇಂಕಾರ ತೆಲುಗರದು. ಅವರ ಮುಂದೆ ನಾವು ಸೊನ್ನೆ. ನನ್ನ ಲೇಖನವನ್ನು ಓದಿ ಅವರಿಗೆ ಯಾವ ಲೋಪ ತೋರಿತೊ ಯಾವುದಕ್ಕೆ ಇದನ್ನು ಹೋಲಿಸಿ ಲೋಪವನ್ನು ಕಂಡರೊ ನಾನು ಹೇಗೆ ಹೇಳಲಿ ? ಹೆಣ್ಣು ಚೆಲುವಿನ ಸಾಮಗ್ರಿ ; ಬಯಕೆಯ ಸಂಪತ್ತು. ಕತೆ ಕವಿತೆ, ನಾಟಕಗಳಲ್ಲಿ, ವರ್ಣನೆಗಳಲ್ಲಿ, ಪತ್ರಿಕೆಗಳ ಮೇಲ್ಕವಚದಲ್ಲಿ, ಡಬ್ಬ ಪೊಟ್ಟಣಗಳ ಮೇಲುಹೊದಿಕೆಯಲ್ಲಿ ಕೂಡ ಅದರದು ತಾನೆ ಆಟ ? ಆದರೂ ಎಲ್ಲ ಹೆಣ್ಣೂ ಚೆಲುವಲ್ಲ. ಗಂಡಿನಲ್ಲಿ ಕಂತೆ ಬೊಂತೆ ಹೇಗೊ ಹೆಣ್ಣಲ್ಲಿಯೂ ಸಾರಣೆ ಕಾರಣೆ, ಲಾವಣ್ಯ ಇಲ್ಲದ್ದು ಎಷ್ಟೊ ಉಂಟು. ಗಂಡೆಲ್ಲ ಮನ್ಮಥರಲ್ಲ; ಹೆಣ್ಣೆಲ್ಲ ರತಿಯರಲ್ಲ ಅಲ್ಲವೆ ? ಇದು ಲೋಕ ಸತ್ಯ ! ಚೆಲುವಿದ್ದಾಗಲೂ ಅದು ಸಾಮಗ್ರಿ ಹೌದು. ಅನೇಕರ ಎಣಿಕೆಯಲ್ಲಿ ಗಂಡು ಹೆಣ್ಣು ಎರಡೂ ಸಾಮಗ್ರಿಗಳೇ. ವಧೂವರರ ನಿರ್ಣಯದಲ್ಲಿ ಈಡು ಜೋಡು ಅಳೆವಾಗ ತೂಕ, ಗಾತ್ರ, ಎತ್ತರ, ಬಣ್ಣ, ಕುಲ, ಗುಣ, ಕೂಟ ಒಪ್ಪುತ್ತವೆಯೆ ಇಲ್ಲವೆ ಎಂಬುದನ್ನು ಮೊದಲು ನೋಡುತ್ತಾರೆ. ಇದು ಮರ್ಯಾದೆಯ ಲೋಕ. ಬಹುಕಾಲದಿಂದ ಎರಡೂ ಕೊಳ್ಳಬಲ್ಲ, ಬೇಡಬಲ್ಲ, ಕೆಡಿಸಬಲ್ಲ, ಉಳಿಸಬಲ್ಲ ಸಾಮಗ್ರಿ. ವಧೂವರರ ಮಾರುವೆಯಲ್ಲಿ ಒಂದು ಬಗೆಯ ಪೇಟೆಯಿದ್ದರೆ ರಂಜನಾವಿಲಾಸವುಳ್ಳ ಎಲ್ಲ ಬದುಕಿನಲ್ಲಿಯೂ ಪ್ರಕಾರಾಂತರವಾಗಿಯಾದರೂ ಇದು ಸಾಮಗ್ರಿಯೇ. ಬಹುಮೋಹಕವಾದ ಬೇಟ, ವೇದನೆ ಇಲ್ಲಿ ನೆಲಸಬಲ್ಲದು; ಹರಡಬಲ್ಲದು. ಎದೆ ತಿದಿ ಒತ್ತಬಲ್ಲದು. ಬಗೆಗುದಿಯಂತೂ ಆ ಸೌಭಾಗ್ಯದಲ್ಲಿ ವಿದಿತ.

ನಮ್ಮ ಶೃಂಗಾರ ಕಾವ್ಯಗಳಲ್ಲಿ ಹಿಂದೆ-ಈಗ-ಹಲವು ಬಿನ್ನಾಣಗಳ ಬೆರಗು ಕಾಣುತ್ತವೆ. ಆಧುನಿಕರಲ್ಲಿಯೂ ಸಾಮಗ್ರಿಯಾಗಿ ಹೆಣ್ಣಿಗೆ ಬೆಲೆಕೊಡುವುದು ರೂಢಿ. ಗೌರವ ಸ್ವಲ್ಪ ಕಡಮೆ ; ಅಷ್ಟೆ. There is many a lip between the cup and the sip ಎಂದೂ ಅದರ ವ್ಯತಿರೇಕವಾಗಿ many a sip between the cup and the lip ಎಂದೂ ಮುಂತಾಗಿ ಬೆಡಗು ನುಡಿಸುವುದುಂಟು. ಗೆಳೆಯರಿನ್ನೊಬ್ಬರು ಒಂದು ಸಲ ಏನೊ ಹೇಳಿದಾಗ ನಾನು ಬೆಚ್ಚಿದ್ದೆ. 'ನೀವೇನೇ ಹೇಳಿ : ಹೆಣ್ಣು ತಿನ್ನುವ ಒಂದು ಪದಾರ್ಥ. ನನಗಂತೂ ಆ ಸಂಬಂಧದಲ್ಲಿ ಮೊದಲ ಭಾವನೆ ಹಾಗೆ; ಕಡೆಯ ಭಾವನೆಯೂ ಅದೇ' –ಎಂದಿದ್ದರು. ಅಲ್ಲಿದ್ದ ಜಂತುಶಾಸ್ತ್ರದ ಮಹಾಪ್ರಾಚಾರ್ಯರೊಬ್ಬರು ವೀಳೆಯ ಅಗಿಯುತ್ತಿದ್ದ ಬಾಯಿ ತುಂಬಾ ಆ ಮಾತಿಗೆ ತಮ್ಮ ಸಮ್ಮತಿ ಇತ್ತಿದ್ದರು. ಬಹು ಜನರ ಅಡಗಿದ ಅಂತಃಕರಣಗಳಲ್ಲಿ ಸುಪ್ತವಾಗಿಯೊ ಅಸ್ಪಷ್ಟವಾಗಿಯೊ ಇದೇ ಅಭಿಪ್ರಾಯವಿರುವುದನ್ನು ಕಂಡಿದ್ದೇನೆ. ಹೂ, ಚಿಗುರು ಕಂಡಾಗ ದನ, ಕತ್ತೆ ಏನು ಮಾಡುತ್ತವೆ ? ಬಾಯಿ ಹಾಕುತ್ತವೆ. ಸಿಕ್ಕಿದರೆ ತಿನ್ನುತ್ತವೆ. ಇಲ್ಲವಾದರೆ ಕಂಗೆಟ್ಟೊ, ಭಂಗಪಟ್ಟೊ, ಪೆಟ್ಟುತಿಂದೊ ಹಿಂದಿರುಗುತ್ತವೆ. ಇಲ್ಲಿಯೂ ಹಾಗೆಯೇ. ಮಾಯಕವಾಗಿ ಕಂಡುದಕ್ಕೆ ಕೈ ಬಾಯಿ ಹಾಕುವುದೇ ಮಾರ್ಗ. ಹೆಣ್ಣು ಕಂಡಾಗ, ಬಳಿಗೆ ಬಂದಾಗ, ಎದುರಿಗೆ ಹಾದಾಗ ಅದರ ಹೆಣ್ಣುತನದ ಗೋಜೇ ಗೋಜು. ಕೊಂಡಂತ ರೆಡ್ಡಿವಚ್ಚಿ ಕೊಂಗುಪಟ್ಟಿತೆ ವದ್ದನೇದೆಟ್ಲು-ಎಂದು ಧಾರಾಳದ ವಿಲಾಸ ಮೆರೆಯುವುದು ಕೇಳಿದ್ದೇವಲ್ಲವೆ? ಕರಣಗಳೆಲ್ಲ ಅದನ್ನು ಅಂದಾಜು ಮಾಡಿಕೊಳ್ಳುತ್ತವೆ. ನಡತೆಯನ್ನು ಸಮಂಜಸಮಾಡಿಕೊಳ್ಳ ಬಯಸುತ್ತವೆ. ಉಳಿದ ಯಾವ ಗುಣ, ಬೆಲೆಗಳೂ ಮೊದಲು ತೋರವು. ಇದು ಕಣ್ಣಿಗೆ ಹೊಡೆಯುತ್ತದೆ, ಕೆರಳಿಸುತ್ತದೆ ; ಆಗಿ, ತನಗಾಗಿಸಿಕೊಳ್ಳಲು ತವಕಿಸುತ್ತದೆ. ಅಂಥವರ ಗೊಡವೆ ಬೇಡವೆಂದು ಬಿಟ್ಟಾಗಲೂ ಬಹು ಸಂಖ್ಯಾಕರನ್ನು ಬಿಡದ ಅಪರಾಧವದು ಎಂಬ ಅರಿವಾದೀತು. ಅಷ್ಟು ಜನ ಬೇಡುವಾಗ, ಅದರ ಸಾಧನೆಗಾಗಿ ಬೇಕಾದ್ದನ್ನು ಮಾಡಲು ಸಿದ್ಧರಿರುವಾಗ ಬೇಡವೆನ್ನುವುದಕ್ಕೆ ನಾವಾರು ? ಆದರೆ ೫೦ ವಯಸ್ಸಿನ , ನನ್ನ ತಲೆಗೂದಲಿಗಿಂತ ಹೆಚ್ಚಾಗಿ, ಅದಕ್ಕಿಂತ ಬಹುಮುಂಚೆಯೇ ನರೆತ ನವಿರಿನ ಈ ಗೆಳೆಯರಿಗೆ ಹೆಣ್ಣಿನ ಚೆಲುವು, ಶೃಂಗಾರ, ಭೋಗಗಳಾವುದನ್ನೂ ವರ್ಣಿಸದ ನನ್ನ ಲೇಖನವನ್ನು ನೋಡಿ ಸೋಜಿಗವಾಯಿತಂತೆ.

ಬಾಯೊಳಗೆ ಅಲ್ಲೊಂದು ಇಲ್ಲೊಂದು ಮಾತ್ರ ಹಲ್ಲು; ಉಳಿದುದು ಖಾಲಿ. ಚೇಷ್ಟೆಯನ್ನು ಆ ಬಾಯಿ ಕಿರಿದು ತೋರಿಸುವಂತಿತ್ತು. ನೀವು ಪ್ಯೂರಿಟನ್–ಮಡಿ ಎನ್ನೋಣವೆ? – ಎಂದರು. ಟೀಕೆ, ಅಣಕ, ಚುರುಕಾದ್ದು. ನನ್ನ ಗಂಡುತನಕ್ಕೇ ಮೂದಲೆಯಂತಿತ್ತು.

ಮಡಿ ಅಲ್ಲವೆಂದು ತೋರಿಸುವುದಕ್ಕಾದರೂ ಇನ್ನೊಂದು ಲೇಖನ ನಿರ್ಮಿಸಬಾರದೆ ಎಂಬಂತೆ ಕೇಳಿಸಿತು ಮಾತಿನ ಕಾಕು. ಕೆಲವರು ಸ್ವಭಾವತಃ ಮಡಿ;

ಕೆಲವರು ಮಡಿ ಹಿಡಿಯುತ್ತಾರೆ. ಇನ್ನು ಕೆಲವರಿಗೆ ಮೂರೇ ವಯೋಧರ್ಮಗಳು: ಬಾಲ್ಯ, ಕೌಮಾರ, ವಾರ್ಧಕ್ಯ; ಯೌವನ ಅವರ ಪಾಲಿಗೆ ಸೊನ್ನೆ. ನನ್ನದು ಸ್ವಭಾವತಃ ಬಂದ ಮಡಿಯಲ್ಲವೆಂಬುದು ಗೆಳೆಯರಿಗೆ ಗೊತ್ತು. ನಾನು ಹೇಳಿ ಕೇಳಿ ಸಂಸಾರಿ. ಯಾವ ಅನಿವಾರ್ಯತೆಯೂ ನಷ್ಟವೂ ನನ್ನನ್ನು ಮಡಿ ಹಿಡಿಸಿಲ್ಲ. ಬಹುಕಾಲ ಯೌವನ ಕುದಿಸದಿದ್ದರೂ ಅದರ ತಾಪ ಪಟ್ಟಿದೆ. ಅದರ ಮದ ತಾಕಿದೆ. ಬಹು ಜನ ಲೇಖಸದ ಈ ಲೋಪವನ್ನು ಕಂಡಿರಬೇಕಾಗಿ ವಿಷಯವನ್ನು ಮುಂದುವರಿಸಿದ್ದೇನೆ. ಎಂದರೆ ಹೆಣ್ಣನ್ನು ಕುರಿತ ಅಂದಿನ ಲೇಖನವನ್ನು ; ನನ್ನ ನಿವೇದನೆಯನ್ನು.

ಆ ಗೆಳೆಯರು ಬಯಸುವ ರಂಗು, ವಿಲಾಸ, ಕಾವು, ಮಾದಕತೆ, ಬಣ್ಣನೆ-ಇಲ್ಲಿಯೂ ಬರುವುವೊ ಇಲ್ಲವೋ ! ಯತ್ನ ನನ್ನದು. ಅಥವಾ, ಊಃ, ಯತ್ನವೂ ಅದಲ್ಲವೇನೊ. ರಂಗು ನನಗೆ ಕಾಣಿಸಿಲ್ಲವೆಂದಲ್ಲ; ಅದರ ಸಂತಸ ಬಾಳಿಗೆ ಸುಳಿದಿದೆ; ತೃಪ್ತಿಯುಂಟುಮಾಡಿದೆ. ಭಾವಕ್ಕೆ, ರಕ್ತಕ್ಕೆ ಅದರ ಉನ್ಮಾದ ತಟ್ಟಿಲ್ಲವೆಂದೂ ಅಲ್ಲ. ಲೋಕದ ಅರ್ಧಕ್ಕೆ ಹೆಚ್ಚಿನ ಸಾಹಿತ್ಯವೂ ಕಲೆಯೂ ಹೆಣ್ಣಿಗೂ ಶೃಂಗಾರಕ್ಕೂ ಮೀಸಲಾದ್ದು ಎಂಬುದನ್ನು ಬಲ್ಲೆ. ಆದರೆ ಏಕೊ ಏನೊ ಅದರ ಗೊಡವೆ ತುಂಬಾ ಹಚ್ಚಿಕೊಂಡು ಜನ ಬಾಳಸಾಧನೆಯನ್ನು ಕಡಮೆ ಮಾಡಿದ್ದಾರೆನ್ನಿಸಿ ನನ್ನ ಮನಸ್ಸು ಅಂಥುದೇ ಗೊಡವೆಯಿಂದ ಹಿಮ್ಮೆಟ್ಟುತ್ತಿದೆ. ಆರೋಗ್ಯವಂತ ಗಂಡಿಗೆ ೨೦ ರಿಂದ ೨೫ ರವರೆಗೆ ಸಂಗದ ಬಯಕೆ ಬಿಗಿದು ಜೀವ ಹಾತೊರೆಯುತ್ತದೆ. ಹೆಣ್ಣಿಗೆ ಈ ಸ್ಥಿತಿ ಇನ್ನೂ ಸ್ವಲ್ಪ ಮುಂಚೆ ಬಂದೀತು. ಆಗ ಆ ಬಗೆಗಳು ಕುರುಡು. ಆ ಒತ್ತಡಗಳಲ್ಲಿ ಅವು ತೀರಿದರೆ ಜೀವದ ತಲ್ಲಣ ಕಡವೆುಯಾದೀತು. ಆಗ ಸಂತೋಷವುಣದ ಜೀವ ಬಡವಾಗುತ್ತದೆಂಬುದು ನನ್ನ ಭಾವನೆ. ಯಾವುವೊ ಅಯುಕ್ತ ಕಾರಣಗಳಿಂದಾಗಿ ಇಂದು ಹಲವು ಹೆಣ್ಣು, ಗಂಡು ಈ ಕಾಲವನ್ನು ಬಂಜೆ ಮಾಡಿಕೊಳ್ಳುತ್ತಾರೇನೊ ಎನ್ನಿಸುತ್ತದೆ. ಮದುವೆಯನ್ನು ಸೃಷ್ಟಿಸಿ ಹೆಣ್ಣು ಗಂಡುಗಳ ಬಾಂಧವ್ಯವನ್ನು ಒಂದು ಸ್ತಿಮಿತಕ್ಕೆ ತಂದಾಗ ಸಂಸ್ಕೃತಿ ಒಂದು ಹೆಜ್ಜೆ ಮುಂದಿಟ್ಟಿತು. ದನವಾಗಬಹುದಿದ್ದ ಮನವನ್ನು ಮನುಷ್ಯನನ್ನಾಗಿಸಿತು. ಅದರ ಹಸಿಯನ್ನು ಹೋಗಲಾಡಿಸಿತು; ಸ್ವಭಾವವನ್ನು ಸಾಧುಗೊಳಿಸಿತು; ನಯಗೊಳಿಸಿತು. ಪ್ರತಿ ಜೀವವೂ ದಿನಾ ಒಂದಲ್ಲ ಇನ್ನೊಂದನ್ನು ಅರಸುತ್ತ ಅನಿಶ್ಚಯದಲ್ಲಿ, ತಳಮಳದಲ್ಲಿ ತೊಳಲುವ ಗಾಸಿ, ನೋವು, ಜೀವದ ಪೋಲು, ಎಷ್ಟಾದೀತೆಂಬುದನ್ನು ಊಹಿಸಿದರೆ ಈ ಉಪಕಾರ ಸಮಾಜಕ್ಕೆ ಎಷ್ಟು ದೊಡ್ಡದು ಎಂಬುದರ ಅರಿವಾಗುತ್ತದೆ. ದಾಂಪತ್ಯಜೀವನ–ಸಾಮಾಜಿಕ ಜೀವನ– ಈ ಸಂಬಂಧದ ನಿಯಂತ್ರಣಕ್ಕೆ ಒದಗಿಸಿದ ನೆರವು ಎರಡು ಜೀವಗಳನ್ನು ನರಕಗಳಿಂದ ಉದ್ಧಾರಮಾಡಿದೆ. ಲೋಕದ ವಂಧ್ಯತೆಯನ್ನು ನಿವಾರಿಸಿದ್ದು ಅದು. ಒಂದು ಪಾಲು ನಿಯಮಕ್ಕೆ ಒಳಪಟ್ಟ ಧಾರಾಳದಲ್ಲಿ ಸುಖಸಂತೋಷಗಳನ್ನು ಒದಗಿಸಿ, ತಣಿಸಿ, ಸಫಲಗೊಳಿಸಿದೆ.

ಬಾಯಿ ಚಪ್ಪರಿಸುವಂತೆ, ನೆತ್ತರ ಓಟ ಚುರುಕಾಗುವಂತೆ, ರೋಮಾಂಚ ವೇಪಥು ಹೊಮ್ಮುವಂತೆ ಕಣ್ಣು, ಹುಬ್ಬು, ಕೆನ್ನೆ ನವಿರೇಳುವಂತೆ ವ್ಯವಸಾಯ ಮಾಡಿ ಸಾಹಿತ್ಯವನ್ನು ಕವಿಗಳು ಏಕನಾದವಾಗಿಯೊ ವೆಗಟಾಗಿಯೊ ಮಾಡಿದ್ದಾರೆ. ಸಾಹಿತಿಗಳನ್ನು ಕಂಡರೆ ಲೋಕದ ಶಕ್ತರಿಗೂ ಕಾರ್ಯಕಾರಣಿಗಳಿಗೂ ತಿರಸ್ಕಾರ. ಇದು ಬಿಟ್ಟರೆ ಇವರಿಗೆ ಬೇರೆ ಕೆಲಸವೇ ವಿಷಯವೇ ಇಲ್ಲವೆನ್ನುವಂತೆ ಅವರ ಮಾತು. ಅವರಿಗೂ ಹೆಣ್ಣು ಬೇಡವೆಂದಲ್ಲ. ಅವರು ಕಾರ್ಯಜ್ಞರು; ಕಲ್ಪನೆಯಲ್ಲಿ ಕಾಲ ಕಳೆಯರು. ಬರೆವುದರಲ್ಲಿ, ವರ್ಣನೆಯಲ್ಲಿ ಬದುಕನ್ನು ಬಳಲಿಸರು. ಹಸಿದಾಗ ಉಂಡು, ಬಾಯಾರಿದಾಗ ಕುಡಿದು ಬೇಗೆಯನ್ನು ಆರಿಸಿಕೊಳ್ಳುವ ನಾಯಕ ಸ್ವಭಾವ ಅವರದು. ಅವರು ಗೆದ್ದವರು; ಭೋಗ ಅವರದು. ಗೆಲ್ಲದವರದು ಬಣ್ಣನೆ, ಹಾಡು. ಬಾಳಿಗೆ ಪ್ರತ್ಯಾಮ್ನಾಯ ತಾನೆ ಸಾಹಿತ್ಯ? – ಎನ್ನುವ ಮಟ್ಟಿಗೆ ತಾರತಮ್ಯ ಈ ಇಬ್ಬರಲ್ಲಿ. ಅವರಲ್ಲಿ ಅನೇಕರು ಬಹು ಗಮನದವರು; ರತ್ನಶೇಖರರು; ಸಂಗ್ರಾಹಕರು ; ವ್ಯಾಪಾರಿಗಳು. ಇನ್ನು ಕೆಲವರಿಗೆ ನಿರಂತರ ಬಾಯಿ ಚಪ್ಪರಣೆ ಬೇಕು,–ಬಾಳ ಬೇಸರವನ್ನು ಕಳೆಯಲು; ಯಾವುದೊ ಸೇಡಿಗಾಗಿ; ತಲೆಯ ಶೂನ್ಯತೆಯನ್ನು ತುಂಬಲು ; ಮರೆಯಲು, ಪೆಪ್ಪರಮೆಂಟು, ಹುಳಿ ಮಾವು, ಓಟೆಹುಣಿಸೆ, ಚ್ಯೂಯಿಂಗ್ ಗಂ ಅಂತೆ. ಅವರ ನಾಲಿಗೆಗೆ ಅಷ್ಟಿಷ್ಟು ಎಂಥದೊ ರುಚಿಯಿಳಿಯುತ್ತಿದ್ದರೆ ಸಾಕು. ಆದರೂ ಇಷ್ಟು ಮಾತ್ರ ಸರ್ವ ಕಾಲದಲ್ಲಿಯೂ ನಿಜ : ಎಲ್ಲರ ಮನಸ್ಸನ್ನೂ ನಲಿಸಿರುವುದು, ಒಲಿಸಿರುವುದು ಶೃಂಗಾರ, ಹೆಣ್ಣ ಸಂಧಾನ ; ಅಲ್ಲಿನ ವಿಲಾಸ ; ಭೋಗ ... ದೇವರ ಕತೆಗಳಲ್ಲಿ ಕೂಡ ಅದೇ. ನಮ್ಮಂತೆಯೇ ನಮ್ಮ ದೇವರೂ. ಅವರಿಗೆ ಪ್ರತಿವರ್ಷವೂ ಮದುವೆ ಸಲ್ಲುತ್ತದೆ ; ಅಂದಿನ ಅದೇ ಉತ್ಸವದ ಪುನರಾವರ್ತನೆ ...ಲಫಂಗನಂತೆ ನಾನು ಹೆಣ್ಣನ್ನು ವರ್ಣಿಸಲಾರೆ. ಮನಸ್ಸು, ಲೇಖನಿ ಹಿಮ್ಮೆಟ್ಟುತ್ತವೆ. ನನಗೂ ತಾಯಿ, ತಂಗಿ, ಅಕ್ಕ, ಮಗಳುದಿರು, ನೆರೆಯ ಕಂಡ ಕಾಣದ ಸೋದರಿಯರು ಇದ್ದಾರಾಗಿ ಯಾವುದನ್ನೂ ಹಸಿಯಾಗಿ ಅಥವಾ ಕೆನ್ನೆಗೆ ಮುಳ್ಳು ಬರುವಂತೆ ವರ್ಣಿಸಲಾರೆ. ಅಲ್ಲದೆಯೊ : ತಾಯಾಗಲಿ, ತಂಗಿಯಾಗಲಿ ಸಂತತವಾದ ಏಕಾಂತ ಹೆಣ್ಣಿನೊಡನೆ ಸಲ್ಲದು. "ಬಲವಾನ್ ಇಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ" ಎಂದು ಮನು ಮಹರ್ಷಿಗಳು ಕೂಡ ಎಚ್ಚರಿಕೆ ಹೇಳಿದ್ದಾರೆ. ಯಾರಿಗೂ ಹೆಣ್ಣಿನ ಅತಿ ಸಾನ್ನಿಧ್ಯ ಭಯವಾಗಬೇಕು. ಒಂದು ಮಗುವನ್ನು ಕಂಡಕೂಡಲೆ ಅದರ ತಾಯ ನೆನಪು, ಲಾಲನೆ ಪಾಲನೆ ನನ್ನ ಮನಸ್ಸಿಗೆ ಬರುತ್ತದೆ. ತಾಯ, ಸಾಕಿದವರ ಅಂಗಾಂಗ ವರ್ಣನೆ ಮಾಡಿ, ಅದು ಹೀಗೆ, ಇದು ಹಾಗೆ ಎಂದು ರುಚಿರುಚಿಯಾಗಿ ತುಟಿ ತೇವ ಮಾಡಿಕೊಂಡು ಬಣ್ಣಿಸಲಿ ಹೇಗೆ ?

ಬಗೆಬಗೆಯಾಗಿ ಅದನ್ನು ಮಾಡಿರುವ ಸಾವಿರ ಕವಿಗಳಿದ್ದಾರೆ ; ಇಂದಿನವರು, ಹಿಂದಿನವರು ; ಇಲ್ಲಿಯವರು, ಎಲ್ಲೆಲ್ಲಿಯವರು ಕಾವ್ಯ ರಚಿಸಿದ್ದಾರೆ. ಒಂಬತ್ತು ಅಂಗಗಳನ್ನು ಹೆಸರಿಸಿ ಇವುಗಳಲ್ಲಿ ಮೂರು ಅಸಿಯವು, ಮೂರು ದೊಡ್ಡಿದುವು, ಮೂರು ಎಡೆತೆಳ್ಳಿತಾದುವು ಅಂಬುಜಾಕ್ಷಿಯಾ-ಎಂದು ಕ್ರಮವಾಗಿ ವಿಂಗಡಿಸಿ ನಮ್ಮ

ಆದಿಪಂಪ ವರ್ಣಿಸಿದ್ದಾನೆ. ಅಂಥವರು ಕೊಡದ ಹೋಲಿಕೆಗಳು ಸೃಷ್ಟಿಯಲ್ಲಿ ಬೇರೆ ಇವೆಯೊ? ನಮ್ಮ ಅನುಭವದಲ್ಲಿ? ಕೊಡಬಾರದೆಂಬುದನ್ನೂ ಹೀಗೆ ಹಾಗೆ ವರ್ಣನೆ ಮಾಡುವುದಿಲ್ಲ ಎಂದು ಹೇಳಿ ಹೇಳಿ ಪರ್ಯಾಯವಾಗಿ ಅಸಭ್ಯವಾದ್ದನ್ನೆಲ್ಲ ವರ್ಣಿಸಿದವರಿದ್ದಾರೆ. ಗಜನಾಸೋರು, ವರಾರೋಹೆ ಎಂಬ ಮಾತುಗಳನ್ನು ಸೀತೆಯನ್ನು ಕುರಿತು ಆಡಿರುವುದುಂಟು. ಅಥವಾ, ಬರಿಯ ಈ ರೂಪಶೃಂಗಾರದಲ್ಲಿ ಏನುಂಟು? ಒಬ್ಬೊಬ್ಬರ ಒಂದೊಂದು ಚೆಲುವನ್ನು ವಿಶೇಷವಾಗಿ ವರ್ಣಿಸುವ ಕಲೆಗಾರಿಕೆ ಮಾತ್ರ ಈ ನಾಡಿನಲ್ಲಿಲ್ಲವೇ ಹೊರತಾಗಿ ಸಾಮಾನ್ಯ ವರ್ಣನೆ ತೊಕ್ಕಡೆಯಾಗಿದೆ. ಹತ್ತಕ್ಕೆ ಒಂಬತ್ತು ಮಂದಿಯ ಚರ್ಯೆ, ಭಾವಪ್ರಕಾಶನ ಸುಮಾರು ಒಂದೇ ಬಗೆಯದು. ಸೂಕ್ಷ್ಮಗಳು ಕಾಣುವುದು ಸೂಕ್ಷ್ಮದಲ್ಲಿ; ಸೂಕ್ಷ್ಮರಿಗೆ, ಮಾತ್ರ. ಪ್ರಕರಣಕ್ಕೊ ಶೀಲಕ್ಕೊ ಪ್ರಯೋಜನಕ್ಕೊ ಚರಿತ್ರೆ ಸಂಸ್ಕಾರಗಳಲ್ಲಿಯೊ ಸರಸವಿರಸಗಳಲ್ಲಿಯೊ ತೂಗುವಾಗ, ಹೆಣ್ಣ ಹಾವ, ಭಾವ, ವಿಲಾಸ–ಇವು ಬಹುವಾಗಿ ಬರಿಯ, ಸವೆದ ಮಾತುಗಳಾಗಿವೆ – ಹೇಗೆ ಮೂಡಿ ಕಾರ್ಯಕಾರಿಯಾಗುತ್ತವೆ? ಅಥವಾ ಮುಳುಗಿ ಮಾಯವಾಗುತ್ತವೆ ಎಂಬುದನ್ನು ಅರಿವ ಯೋಗಿಜನ ಅಪೂರ್ವ. ಮನಸ್ಸಿನಲ್ಲಿ, ಚಹರೆಯಲ್ಲಿ, ಚೇಷ್ಟೆಯಲ್ಲಿ, ಸ್ಫುಟಾಸ್ಫುಟ ವ್ಯಂಜನೆಯಲ್ಲಿ ಅವನ್ನು ಕಾಣಿಸುವ, ಕಾಣುವ ಜಾಣ್ಮೆಯನ್ನೆಲ್ಲಿಂದ ತರಬೇಕು? ಕಾಣಿಸುವ ಶಕ್ತಿ ಹಲವರಿಗಿಲ್ಲ. ಅಂಥ ಪ್ರಸಂಗಗಳ ಆಯ್ಕೆ, ನಿರ್ವಹಣೆ ನಮಗೆ ಮೀರಿದ್ದೇನೊ. ಇರುವುದರಲ್ಲಿ ಆಳವಿಲ್ಲ, ಪದರವಿಲ್ಲ, ನವುರಿಲ್ಲ, ಧ್ವನಿಪೂರ್ಣತೆಯಿಲ್ಲ, ಅಂಗಸಂಪುಷ್ಟಿ ಹೊರಕಾಣ್ಕೆಯದು : ದನಗಳಿಗೂ ದೊರಕುವ ಭಾಗ್ಯ.

ಕಣ್ಣು, ಕೈ, ಮೈ ಏರಿಳಿವು, ಬಾಗು ಬಳುಕು, ನುಣುಪು ಮೃದುತೆ, –ಸೋಂಕು ಯಾರಿಗೆ ಆಗದು ? ಎಷ್ಟು ಸಾವಿರ ಕವಿಪುಂಗವರು ತೋಳು, ತೊಡೆ, ಕಚ ಕುಚ, ಹೆರಳು ತುಟಿ ಮೂಗು ಕಣ್ಣು ಕೊರಲು, ಹಣೆ ಹುಬ್ಬು ಕಂಡಿಲ್ಲ? ಆಸ್ವಾದಿಸಿಲ್ಲ? ಪುಂಗವತೆ ಇಲ್ಲದಾಗ ವರ್ಣನೆ ಬಡಬಡಕಲು ಆಯಿತು. ರಕ್ತಿ, ಅನುಭವ ಇಲ್ಲವಾಗಿ ಸುಮ್ಮನೆ ಒಡಲನ್ನು ಬಳಲಿಸುವವರಿಗೆ ಗಂಡುತನವೇ ಇಲ್ಲವೇನೊ ಎಂಬಷ್ಟು ಸಂದೇಹ ಸುಳಿಸಿ–ನವುರು ಸೂಕ್ಷ್ಮಗಳನ್ನು ಕಾಣುವ ನಯಬೇಕು ಮನಸ್ಸಿಗೆ ; ಕಲೆಗೆ. ನೀವೇಕೆ ಸರಿಯಾಗಿ ಮಾಡಬಾರದು ಎಂದೀರೇನೊ : ನಾನು ಬಾಣಸಿಗನಲ್ಲ ; ಊಟಕ್ಕೆ ಬಂದ ಅತಿಥಿ ; ರುಚಿ ಅರುಚಿ ಸುಖಾಸುಖಗಳನ್ನು ಬಯಸುವವ; ಅದಕ್ಕೆ ಬೆಲೆಗಟ್ಟುವವ. ಸಂಭಾರ ಒದಗಿಸುವ, ಅಡುವ, ಬಡಿಸುವ ಪುಣ್ಯ ಇನ್ನೊಬ್ಬರದು. ಮಾಲೆ ಮಾಡುವವನಲ್ಲ ನಾನು ; ಮುಡಿಯುವವನು.

ಹೆಣ್ಣನ್ನು ಮೆರಸು ಎಂದು ಸ್ಪಷ್ಟವಾಗಿ ಹೇಳಿದಾಗ ಕೂಡ ಈ ಬ್ರಾಹ್ಮಣ ಇನ್ನೇನೇನನ್ನೊ ಗಳಹಲು ತೊಡಗಿದ, ಇವನು ಅಪ್ರಯೋಜಕ, ಜಳ್ಳು– ಷಂಢತಿಲ– ಎಂದರೆ ನಾನೇನು ಮಾಡುವಹಾಗಿದ್ದೇನೆ ? ಪುರಾಣ, ಇತಿಹಾಸ ಓದಿ; ಕಥೆ ಕಾದಂಬರಿಗಳನ್ನು ಓದಿ; ಚಿತ್ರ, ಶಿಲ್ಪ ನೋಡಿ. ಒಂದೆಡೆ ಬಣ್ಣದ ಆ ಬಳುಕುಗಳ

ಮೋಹನ, ಇನ್ನೊಂದೆಡೆ ಕಲ್ಲಲ್ಲಿ ಕಡೆದ ವಕ್ರಭಂಗಿಗಳ ಮದನಕೈ ವಿಗ್ರಹಗಳು-ಕಣ್ಣಿಗೆ ತಂಪು ಮಾಡುತ್ತವೆ. ಬೀದಿಯಲ್ಲಿ, ರಸ್ತೆಯಲ್ಲಿ, ಅಂಗಡಿಗಳಲ್ಲಿ, ನಾಟಕಶಾಲೆಗಳಲ್ಲಿ, ಸಂಗೀತ ನೃತ್ಯಮಂದಿರಗಳಲ್ಲಿ ಬೆಡಗಿಯರು ಬರುವ, ನಿಲುವ, ನುಡಿವ ಅಲಂಕಾರಗೊಂಡಿರುವ ವೈಖರಿಗಳನ್ನು ನೋಡಿ. ಎಷ್ಟು ಬಗೆಯ ಒನಪು, ಹೊಳಪು, ಸವಿ ! ರಕ್ತಕ್ಕಿಳಿಯುವ ಸಿಂಗಾರ!

ಕೆಲವು ವಿಲಾಸಗಳು ಮಿನುಗಿ ಮಾಯವಾಗುತ್ತವೆ; ಕೆಲವು ಮನಸ್ಸಿನಲ್ಲಿ ನಿಂತು ಅಶಾಂತಿಗೊಳಿಸುತ್ತಿರುತ್ತವೆ. ಕಥೆಯ ಒಬ್ಬ ಹೆಣ್ಣು ತೊಟ್ಟ ಕುಪ್ಪುಸದ ಮೇಲಂಚಿನ ಜಲ್ಲಿ ಗಾಳಿಗೆ ಅಲುಗುತ್ತಿತ್ತಂತೆ; ಅದು ಅವಳ ವ್ಯವಹಾರವನ್ನು ವಿಚಾರಿಸುತ್ತಿದ್ದ ವೃದ್ಧ ನ್ಯಾಯಾಧೀಶನ ಕಣ್ಣಿಗೆ ಬಿದ್ದುದಷ್ಟೇ ಅಲ್ಲ ; ಅದರ ಅಲ್ಪ ಪಟಪಟಶಬ್ದ ಕಿವಿಗೆ ಬೇರೆಂದೋ ಕೇಳಿಸಿತಂತೆ. ಅವನೆದೆ ಜಲ್ಲೆಂದಿತಂತೆ. ಆತನು ನಿವೃತ್ತನಾದ ಬಹುಕಾಲದ ಮೇಲೂ ಅದು ಅವನ ಮನೋಮಂದಿರದಲ್ಲಿ ನೆಲೆಮಾಡಿಕೊಂಡು ಅವನಿಗೆ ಶಾಂತಿ ಭಂಗವಾಗುತ್ತಿತ್ತೆಂದು ವರ್ಣಿಸಿರುವುದುಂಟು. ಕೆಲವು ಕಾಮವನ್ನು ಕೆರಳಿಸುವ ತುಟಿ, ಬಳುಕು, ಸೆಡಕು, ಕೊರಲು ಉಳ್ಳವು ; ಕೆಲವು ದಾಹವನ್ನು ಕೆರಳಿಸುವವು ; ಸಂಗ್ರಹಣಕ್ಕೆ ಪ್ರಚೋದಿಸುವವು. ಕೆಲವು ಉಕ್ಕಿನ ಅಲಗು ; ಅಥವಾ, ಬಿಲ್ಲು ಬಾಣ. ಅವನ್ನು ಬಾಗಿಸಿ ಪ್ರಯೋಗಿಸಬೇಕು, ಪ್ರಯೋಜನ ಸಿದ್ಧಿಗೆ ; ಗುರಿ ಇಳಿಸಲು. ಇನ್ನು ಕೆಲವು "ಇದೆ ಕೋ ಬೇಕಾದರೆ, ನಾನಿಲ್ಲಿದ್ದೇನೆ" ಎನ್ನುವವು. ಕೆಲವು ಮರ್ಯಾದೆಯನ್ನೊ ಶುಚಿಯನ್ನೊ ಗಾಂಭೀರ್ಯವನ್ನೊ ಹಾಯಿಸುತ್ತ ಸರಿಯುತ್ತವೆ. ನೋಡದಂತೆ ನೋಡುತ್ತಿರುತ್ತವೆ. ಇನ್ನು ಕೆಲವನ್ನು ಕಂಡರೆ ನಮಗೆ ಭಯ. ನಮ್ಮ ಅಯೋಗ್ಯತೆಯ ಅರಿವಾಗಿ ಅದನ್ನು ಹೆಣ್ಣೆಂದು ಭಾವಿಸಲು ಕೂಡ ಅಧೈರ್ಯವಾಗುತ್ತದೆ. ಒಬ್ಬ ಪಠಾಣಿ, ಒಬ್ಬ ರಷ್ಯನ್, ಒಬ್ಬ ಜರ್ಮನ್ ಹೆಣ್ಣು ಅರಡಿ ಎತ್ತರ, ೨೦೦-೩೦೦ ಪೌಂಡು ತೂಕದವು ; ನೀವು ಅದಕ್ಕೆ ಸಾಕೆ ಎನ್ನಿಸುತ್ತದೆ. ಹೆಣ್ಣೊ ತರಕಾರಿಯೊ ಎಂಬಂಥವು ಕೆಲವು. ಕೆಲವು ಗುಬ್ಬಿ, ಗಿಳಿ, ಜಿಂಕೆ, ಕುದುರೆಮರಿ ; ಮಲ್ಲಿಗೆ, ಗುಲಾಬಿ ಅಥವಾ ಡೇಲಿಯ, ತಾವರೆ; ಕೋಳಿಜುಟ್ಟು ! ಕೆಲವು ವ್ಯಾಘ್ರಿ, ಭೂತ. ಆಹ, ಎಂಥ ಚೆಲುವೆ ಎಂದುಕೊಂಡಿರಲು ಕ್ಷಣದಲ್ಲಿ ಬಾಯಿ ತೆರೆದು ನಕ್ಕರೆ ಪಿಶಾಚದಂತೆ ಕಾಣುತ್ತ, ನುಡಿದರೆ ನಾಲ್ಕು ಬೀದಿ ಅದರ ಕರ್ಕಶತೆಗೆ ಬೆಬ್ಬರಿವಂತೆ ಆಗುತ್ತದೆ. ಆ ಹಲ್ಲೊ, ಆ ಆಕಳಿಕೆಯೊ! ಅಥವಾ, ಓಪೋ ಲಾವಣ್ಯಂ ! ಅಮೃತ, ಅಸ್ಪೃಷ್ಟ. ಕೈತೊಳೆದು ಮುಟ್ಟಬೇಕಾದ್ದು ; ಕಣ್ಣೆಂಜಲು ಸೋಕಬಾರದ್ದು. ಹಳಬೀಣದಲ್ಲಿ ರತ್ನದ ಸುಖ ಅನುಭವಿಸುವಾಗ ನೀರಲ್ಲಿ ಬೆರಳದ್ದಿ ಅದನ್ನು ಮುಟ್ಟುವುದು ವಾಡಿಕೆಯಾಗಿತ್ತಂತೆ ; ಪ್ರೀತಿಯ ನುಣುಪು ನೀರಲ್ಲಿ ಸಂಪರ್ಕಗೊಂಡಾಗ ಆ ಹರ್ಷ ತುಂಬಾ ಹಿತವಾದ್ದು. ಆದ್ದರಿಂದಲೇ ಜಲಕೇಳಿ ತುಂಬಾ ಪ್ರಖ್ಯಾತ. ನಮ್ಮಲ್ಲಿಯೂ ಮೊದಲು ಮೊದಲು ನೀರಿನ ಪಾತ್ರೆಯಲ್ಲಿ ಮುತ್ತು ಹವಳ, ರತ್ನ ಹಾಕಿ, ಹೊಸದಾಗಿ ಗುರುತಾಗಿ ಜೊತೆ ಸೇರಬೇಕಾಗಿರುವ ಗಂಡು ಹೆಣ್ಣು ಅದರಲ್ಲಿ ಒಟ್ಟಿಗೆ ಕೈಹಾಕಿ ಮುತ್ತು ಕಂಡೆವು, ಹವಳ ಕಂಡೆವು, ಎಂದು ಹೇಳುತ್ತ ;

ಅವಕ್ಕಿಂತ ಪರಸ್ಪರ ಬೆರಳ ಸ್ಪರ್ಶ ದೊರೆಯುವಂತೆ ಒಂದು ಕ್ರಿಯಾ ವ್ಯಾಪಾರ ಮದುವೆಕೂಟಗಳಲ್ಲಿ ಏರ್ಪಡುತ್ತಿತ್ತು. ತೇಹಿ ನೋ ದಿವಸಾ ಗತಾ. ಎಷ್ಟು ಬಗೆ !

ಆದರೆ ಅಪೇಕ್ಷಣೀಯವಾದ್ದನ್ನೆಲ್ಲ ಬಯಸಬಹುದೊ? ಅಲ್ಲಿ ಆ ತಲೆಗೂದಲು ನೋಡಿ. ಯಾವ ತಾವರೆ ನೂಲಿಗುಂಟು ಆ ನವುರು? ಅದು ಪಾಶ, ಹುಷಾರ್– ಬೇರೆಯವರದು; ನಿಮಗೇ ಏಕೆ? ಯಾವ ಇತರರಿಗೂ ದುರ್ಲಭ; ನಾಲ್ಕು ಔನ್ಸ್ ಸೀಸ ಹೊಕ್ಕೀತು ಒಡಲನ್ನು; ಕೊರಡೆ ಪೆಟ್ಟು ಬಿದ್ದೀತು.... ಸೌಂದರ್ಯಾರಾಧನೆ ಕಲೆಗಾರನಿಗೆ ಸರಿಯೇ. ಆದರೂ ಪ್ರಕಟವಾಗಿ ಮಾಡುವ ಹಾಗಿಲ್ಲ–ಒಡೆಯನ ಅಪ್ಪಣೆಯಿಲ್ಲದೆ ರೂಪಾಂತರಗೊಳಿಸಿಯಾದರೂ ಅದನ್ನು ಸವಿಯುವ ತಂತ್ರ ಲಾಗಾಯ್ತಿನಿಂದ ಉಂಟನ್ನಿ. ಎದುರಿಗೆ ನಿಂತು ನೋಡುವ ಹಾಗಿಲ್ಲ ; ಬೇಡುವ ಹಾಗಿಲ್ಲ; ಕಾಡುವ ಹಾಗಿಲ್ಲ. ದೂರದಿಂದ ಚಪಲಗಳನ್ನು ತೀರಿಸಿಕೊಳ್ಳಬಹುದು. ಮದುವೆಯಾದ ಮಸಣಿಯೇ ಚಿತ್ರದ, ಕೇರಳದ, ಲಾಳದ, ರಾಗಿಣಿಯೆಂದುಕೊಂಡು ಸುಖಿಸಬಹುದು. ಕಲ್ಪನೆಗೆ ಕಾಲಿಲ್ಲ, ನೇಮವಿಲ್ಲ, ನಿರ್ಬಂಧವಿಲ್ಲವಲ್ಲ! ಸಮಾಜ ಬೇಲಿ ಹಾಕಿದರೇನು? ಒಡೆಯರ ಬೆದರಿಕೆ ಗೊಡ್ಡು ಇಲ್ಲಿ. ಅಲ್ಲಿ ನಾವೆಲ್ಲ ಸರ್ವತಂತ್ರ ಸ್ವತಂತ್ರರು. ಫ್ಲಾರೆನ್ಸ್‌ನ ಒಂದು ಬೆಳುದಿಂಗಳ ರಾತ್ರಿಯಲ್ಲಿ ಕಲಾಪ್ರೇಮಿ ಒಬ್ಬನು ತೋಟದ ನಡುವೆ ನಿಂತ ಅಮೃತ ಶಿಲೆಯ ವಿಗ್ರಹದ ಚೆಲುವಿಗೆ ಮನಸೋತು, ಮರುಳಾಗಿ ನಡು ನಿಶೀಥದಲ್ಲಿ ಹೋಗಿ ಅದನ್ನು ಅಪ್ಪಿಕೊಂಡು ಚುಂಬಿಸಿದನೆಂಬ ವರ್ಣನೆ ಹೈನೆ ಕೃತಿಯೊಂದರಲ್ಲಿ ಬರುತ್ತದೆ ! ಆದರೆ ಅಂಥಲ್ಲಿ ನಮ್ಮ ಒಳಗು ಕೊರೆಯುತ್ತದೆ ; ಹುಳು ತಿಂದು ನಾಶವಾಗುತ್ತದೆ. ಗಂಗಾರಾಮನ ನೆನಪು ತಂದುಕೊಳ್ಳಿ-ಸೀತಾರಾಮ ಕಾದಂಬರಿಯಲ್ಲಿ ; ಆ ಹುಳುಕು ಎಲ್ಲಿಗೆ ನಡಸುತ್ತದೆಂಬುದು ಗೊತ್ತಾಗುತ್ತದೆ.

ಇಂದು ನಮ್ಮ ಸಿನೆಮಾ ತಾರೆಯರ ಚೆಲುವು ಲೋಕಕ್ಕೆ ತಟ್ಟಿರುವಷ್ಟು ಬೇರಾವುದೂ ಇಲ್ಲ. ಯಾವ ರಂಭೆ, ಊರ್ವಶಿ, ಅವರಿಗೆ ತಿಲ ಉತ್ತಮೆಯರೊ ಯಾವ ಹೆಲೆನ್, ಐರೀನೇ, ಅನ್ನಾ ಅವರಿಗೆ ಮೀರಿದವರೊ ಯಾರು ಹೇಳಬಲ್ಲರು? ೮-೧೦ ವರ್ಷಕಾಲ ನೆಳಲ ಚಿತ್ರದ ತಾರಾಪಥದಲ್ಲಿ ತಾರಾಡಿ ಬಿಳಿ ಹಲಗೆಯ ಮೇಲೆ ಬೆಡಗು ಚೆಲ್ಲಿ ಮಾಯವಾಗುತ್ತಾರೆ–ಈ 'ಶೃಂಗಾರವಲ್ಲರಿ'ಯರು, ಪ್ರಣಯ ಪ್ರರೋಹೆಯರು. ಮುಗ್ಧರ ಎದೆಗಳ ಮೇಲೆ ? ಬಗೆಗಳನ್ನು ತೊತ್ತಳ ತುಳಿದು ಅದ್ವೈತದ ಯಾವ ಮಾಯಾವಾದವನ್ನೂ ಪ್ಲೇಟೊವಿನ ಯಾವ ಆದರ್ಶದ 'ಎರ್' ದರ್ಶನಗಳನ್ನೂ ಸ್ಥಾಪಿಸುವ ಸಾಧನಗಳು ಇವರು. ಇವರ ಪ್ರಭಾವ ಅಲ್ಪವೆ ? ಸಮಾಜ ಜೀವನದಲ್ಲಿ ಇವರು ಎಷ್ಟು ಮಂದಿಗೆ ತಳಮಳ ತಂದಿಲ್ಲ ? ಅವರನ್ನು ಬಯಸಿ ಎಷ್ಟು ಜನ ಹುಚ್ಚಾಗಿಲ್ಲ? ಅನುಕರಿಸಿ, ಎಷ್ಟು ಬಗೆಯ ಕೋತಿತನ, ವೇಷ ಭೂಷ, ಹೆಣ್ಣು ಮುಖಗಳನ್ನು ಹಾಳು ಮಾಡಿಲ್ಲ? ರಾಮರಾಮ, ಆ ಜುಮಕಿ, ಆ ಜಡೆ ಹೂ ! ಕರಗಗಳು ಇವರು. ಆ ಟಿಸ್ಯು ಉಡೆ, ಆ ಉಗುರಂಟು, ತುಟಿಗೋಂದು, ಮುಖದ

ಹಿಟ್ಟು, ಬಳಿದ ಒಂದಂಗುಲ ಸುಣ್ಣ, whitelead, ಹೇಳತೀರದು. ಆದರೆ ಎಷ್ಟು ಬೇಗ ಮಾಸುವುವು ? ಮರೆಯುವುವು ? ತನ್ನ ಹುಣ್ಣಿಮೆ ಕಾಣಿಸುವ ಹೊಸ ತಾರೆ ಮಿನುಗುವವರೆಗೂ ; ಆಮೇಲೆ ಇದನ್ನು ಮೂಸುವವರು ಯಾರು ? ಬೀದಿಯಲ್ಲಿ ಕಂಡು ಗುರುತಿಸುವವರಾರು? ಅಗಿದು ಉಗಿದ ಸಿಪ್ಪೆ. ಅದರ ಹೆಣ್ತನಕ್ಕೆ ಕೂಡ ಬೆಲೆಯಿಲ್ಲದಷ್ಟು ಅಸಡ್ಡೆ ಲೋಕಕ್ಕೆ.

ಹೆಣ್ಣಿಂದಲೇ ಮನೆಯ ಎಲ್ಲ ಶುಚಿ, ರುಚಿ, ಮೃದು, ಕಮನೀಯತೆ, ಒಪ್ಪ ಓರಣ. ಮನೆ ಮನೆಯಾಗುವುದು ಅದರ ಕೈವಾಡದಿಂದ. ಮಾನ, ಅಪಮಾನ, ಕೊಲೆಪಾತಕತೆ ಅದರಿಂದ. ಎಷ್ಟು ನಾಜೂಕು, ಅಚ್ಚುಕಟ್ಟೊ ಅಷ್ಟು ಕೊಲೆ, ಅಸೂಯೆ, ಮನೆಯೊಡಕು ; ಬಿರುಸು. ಇದೆಲ್ಲ ಬಹುತರ ರಕ್ತಕ್ಕೆ ಇಳಿವ ಭಾವ ; ಬುದ್ಧಿಗೆ ಇಲ್ಲಿ ಪ್ರವೇಶವಿಲ್ಲ ; ಇದ್ದಾಗಲೂ ಈ ರಾಗಕ್ಕೆ ಬಂದಿಯಾಗಿ. ಇಲ್ಲಿ ಅನಾಸಕ್ತಿ, ತಾಟಸ್ಥ್ಯ ಹೇಗೆ ಬರಬೇಕು ? ಹೆಣ್ಣೇ ಕುಟುಂಬ ; ನಿಮ್ಮ ಸಂಸಾರ ಎಂದರೆ ಅದೇ.

ಗಂಡುಲೋಕಕ್ಕೆಲ್ಲ ನಿರಂತರವಾಗಿ ಹೆಣ್ಣ ಗಮನವುಂಟು : ಅದು ಹೋಗಲಿ ; ಹೆಣ್ಣು ಮಗು ಹುಟ್ಟಿದಂದಿನಿಂದ "ತಲೆಮಾಸಿ"ದ ಯಾವನ ಕೈಗೊ ಅದನ್ನು ಒಪ್ಪಿಸುವವರೆಗೂ ಅದರ ಹೊಣೆ. ಅವನಿಗೆ ಸಾಯುವವರೆಗೂ ಅದರದೇ ಎಚ್ಚರಿಕೆ. ನಾಗರಿಕತೆ ಅದರ ಎಲ್ಲ ಸಾಕಣೆಯನ್ನೂ ನಾಜೂಕು ಮಾಡುತ್ತದೆ. ಈಗಲೂ ಹತ್ತಕ್ಕೆ ಒಂಬತ್ತು ಮಂದಿ ಸಂಸಾರಿಗಳಾಗುವವರೇ ಹೆಚ್ಚು. ಸ್ಯಾಂಡೊ ಆಗುತ್ತೇವೆ ; ಗಣಿಗಳಿಗೆ ಇಳಿದು ಕಬ್ಬಿಣ, ಕಲ್ಲಿದ್ದಲು ಎತ್ತುತ್ತೇವೆ ; ಟ್ರಕ್, ಲಾರಿ ನಡಸುತ್ತೇವೆ. ಯಾವುದರಲ್ಲಿಯೂ ನಿಮಗೆ ನಾವು ಸಮ : ಪ್ರತಿಸ್ಪರ್ಧಿಗಳು ಎಂದಾಗಲೂ ಹೆಣ್ಣು ಹೆಣ್ಣೇ. ಕುದುರೆಗಳ ಹಿಂದೆ ಜೂಜುಗಳಿಗೆ ಬರುವ ಹೆಣ್ಣುಗಳ ತಲೆ ಸಮೆ, ಪಜಾಮ ಉಡೆ, ಸಿಗರೇಟ್ ಸೇವನೆಯನ್ನು ನೀವು ನೋಡಿರಬಹುದು; ಅವರ ಕೆಮೆರಾಗೆ ತುತ್ತಾಗಿರಬಹುದು; ಅಲ್ಸೇಷಿಯನ್ ತೋಳಗಳನ್ನು ಮೆರಸಿ, ಹುಲಿಗಳನ್ನು ಆಡಿಸಿ, ಪ್ರದರ್ಶನಗಳಲ್ಲಿ ಸರ್ಕಸುಗಳಲ್ಲಿ ಅಚ್ಚರಿಗೊಳಿಸಬಹುದು ; ಗಡೆ ಹತ್ತಿ ನೂರು ಗಜ ಶೂನ್ಯದಲ್ಲಿ ಒಡಲನ್ನು ಬೀಸಿ, ಆಚೆಯ ತೋಳಿಗೆ ಸೇರಿ ಸಾಹಸ ಮೆರಸಬಹುದು ; ನೂರಡಿ ಎತ್ತರದಿಂದ ನೀರಿಗೆ ದುಮುಕಿ ಈಸಿ ಅಚ್ಚರಿಗೊಳಿಸಬಹುದು : ಆದರೂ ಚೆಲುವು ಚೆಲುವೇ ; ಹೆಣ್ಣು ಹೆಣ್ಣೇ. ಅಂಥ ಸಂದರ್ಭಗಳಲ್ಲಿಯೂ ಯಾವ ದುಷ್ಯಂತನದೊ ಪುಣ್ಯ ಭಾಗವಾಗಿ ಅದೂ ಕಾದಿದೆ. ಅವನಿಗೆ ಅದರ ಮೇಲೆ ಬೀಸುವ ಗಾಳಿಯೇ ಖಲುಕೃತೀ. ಅದು ದೊರೆಯುವ ಬಯಕೆ, ಬೇಗೆ ತತ್ವಾನ್ವೇಷಿಗಳಾದ "ವಯಂ... ಹತಾಃ". ಲೋಕದಲ್ಲಿ ಆ ಗೀಳು ಮುಗಿಯದು ; ಅಳಿಯದು. ಹೆಣ್ಣಿಗೂ ಗಂಡಿನ ಮೋಹ ಹೀಗೇ ಇರಬೇಕು. ನಾನು ಕಾಣೆ ; ನಿಮ್ಮ ಪ್ರೀತಿಯ ವಸ್ತು ನಿಮ್ಮನ್ನು ಅರಸಿ ಬಂದಾಗ ನಿಮಗೂ ಹಾಗೆನ್ನಿಸಿತಾಗಲಿ ಸದ್ಯಕ್ಕಂತೂ ಆ ಕಡೆಯಿಂದ ನೋಡಬೇಕಿಲ್ಲ. ಮಾಯೆ ಸ್ತ್ರೀಯ ಮುಂದೆ ಪುರುಷನೆಂಬ ಅಭಿಮಾನವಾಗಿ ಕಾಡುತ್ತದೆಯಂತೆ ; ಅದು ಹೆಣ್ಣಿನದೇ ನುಡಿ.

ಇವನ ನಿಲವು, ಕಟ್ಟುಮಸ್ತು, ನಡೆ, ನಗೆ, ಹಲ್ಬೆಡಗು, ಮೀಸೆ, ಮೂಗು, ತೋಳತಿರುವು, ಬಲ, ಜಾಣತನದ ಬೆಡಗು, ಸಾಹಸ, ಅದರ ಕಣ್ಣೇನೆಯಂತೆ ! ಹಾಡಿಗೆ ತನ್ನನ್ನು ಪಸಾಯದಾನವಾಗಿ ತೆತ್ತುಕೊಂಡಳು ಅಮೃತಮತಿ. In those lips lie my soul ಎಂದಿತಂತೆ ಬೈರನ್ನನ್ನು ಕಂಡ ಒಂದು ಹೆಣ್ಣು. Had my eyes seen till now ? – ಎಂದು ಹೇಳಲಿಲ್ಲವೆ ಜ್ಯೂಲಿಯೆಟ್ಟನ್ನು ಕಂಡ ರೋಮಿಯೊ ಕಣ್ಣು ? ಇದು ಎರಡೂ ಕಡೆಯ ಅರಕೆ.

ಹೆಣ್ಣಿಗಿಂತ ಗಂಡು ಹೆಚ್ಚೆಂದು ಕಲ್ಪಿಸಿದ ಸಮಾಜದಲ್ಲಿಯೂ ಗಂಡು ದುಡಿಯುವುದು ಹೆಣ್ಣಿಗಾಗಿಯೇ. ಮನೆ, ಮಾನಬಿಟ್ಟು ಹುಚ್ಚಲೆಯುವುದೂ ಅದಕ್ಕಾಗಿಯೇ. ಜಾತಿ, ಬಣ, ಬಣ್ಣಗಳ ಭೇದವಿಲ್ಲ, ಅಂತರವಿಲ್ಲ. ಒಲಿದರಾಯಿತು, ಪ್ರೀತಿಯ ವಸ್ತುವಿನಿಂದ ಬೇಡುವುದು ಕೂಡ ಬಹಳವಲ್ಲ. ಪ್ರೇಮವೇ ಸಾಕೆನ್ನಿಸುತ್ತದೆ "ಅದಕೂ ಇದಕೂ ಎದಕೂ". "ತೋಳ ತುಂಬ ತೋಳಬಂದಿ, ಕೆನ್ನೆ ತುಂಬ ಮುತ್ತು"-ಸಾಕು. ಬೇರೆ ಅಲಂಕಾರವೇಕೆ?.... ಯಾರಿಗೆ ಯಾವುದು ಚೆಲುವೊ ಯಾವುದಲ್ಲವೊ ಅದು ನಿಶ್ಚಯವಲ್ಲ. ಅವರವರ ಕಣ್ಣಿಗೆ, ಬಗೆಯೆಣಿಕೆಗೆ ವಸ್ತು ಅದು. ಸಾವಿರ ಗಿಡದ ಗುಂಪುಗಳಲ್ಲಿ ನೋಡಿ–ಇದು ಕಾಣುತ್ತದೆ. ಸಂಗೀತ ಕೇಳಲೊ ನೃತ್ಯ ನೋಡಲೊ ಉತ್ಸವಕ್ಕೊ ಬಂದಿಲ್ಲ ಇವರು. ಒಬ್ಬರ ಕಣ್ಣಿಗೆ ಬೀಳಲೇ ಇನ್ನೊಬ್ಬರು ಬಂದಿರುವುದು. ಯಾರಿಗೆ ಯಾರು ಬೇಕೊ – ಅವರ ನೋಟವೊ ತುಟಿತಿರುವೊ ಬೆರಳ ಮಿಡಿತವೊ ಕೈಬಳೆಯ ಸರಿತವೊ ಸನ್ನೆ ಮಾಡುತ್ತದೆ ; -ಒಡನೆಯೇ ಇವರು ಎದ್ದರೇ. ಇಬ್ಬರೂ ಹೇಗೊ ನಿಷ್ಕ್ರಮಿಸಿದರೇ. ಒಂದು ರಾಗದ ಸಂಚಾರ, ಭಾವ ಇನ್ನೊಬ್ಬರ ಮೇಲೆ ಏನು ಪರಿಣಾಮ ಉಂಟುಮಾಡುತ್ತಿದೆಯೆಂಬುದನ್ನು ನೋಡುವುದೇ ಪ್ರಯತ್ನ. ತರಗತಿಗಳ ಪಾಠದಲ್ಲಿ ಕೂಡ ಹಾಗೆ. ಉಪಾಧ್ಯಾಯನ ಒಂದು ಮಾತು, ವಿನೋದ ಕ್ಲಾಸಿನ ಆ ಕಡೆಯವರ ಕೆನ್ನೆಗೆ ಯಾವ ರಂಗು ಹಾಯಿಸಿತು, ಹೇಗೆ ತುಟಿ ತೆರಸಿತು, ಕುರುಲನ್ನು ಹಾರಿಸಿತು, ತಲೆಕೂದಲನ್ನು ಬೆರಳು ನೇವರಿಸಿತು ಎಂದು ನೋಡುವುದೇ ಕಾರ್ಯ. ಪಾಠ ಮುಗಿಯಿತು ; ಒಂದು ಇನ್ನೊಂದನ್ನು ಅರಸಿ ಹೊರಟು, ಕಾಂಪೌಂಡ್ ಗೋಡೆಗೊ ಗೇಟಿಗೊ ಬೈಸಿಕಲಿಗೊ ಒರಗಿ ಗಂಟೆಗಟ್ಟಲೆ ಮಾತನಾಡುತ್ತಿರುವುದೂ ಕೆಲಸ. ಅಥವಾ, ಚಿಗರಿನಡೆ ನಡೆಯುತ್ತ ಒಂದಕ್ಕೊಂದು ಹಾಡಿಕೊಳ್ಳುತ್ತ ಕಣ್ಗೆ ಕಣ್ಣು ವಿಲಾಸವನ್ನು ಮೆರೆಯುತ್ತಾ ದಾರಿ ನಡೆಯುತ್ತವೆ. ತಕ್ಷಣದ; ಬಾಳಿನ.

ಉತ್ತರದಲ್ಲಿ ಕುರುಜಾಂಗಣದ ವೀರ ಅರ್ಜುನನು ವರ್ಣಿಸುವ ನಂದನವನಾಳಿ ಬನವಾಸಿಯದು; ಅದು ವಿಯೋಗಿ ಜನಕ್ಕೆ ಬೇಟವನ್ನು ಬೆಳೆವುದಂತೆ. ಅದರ ಬೆಟ್ಟುಗಳಲ್ಲಿಯೂ ನಂದನಗಳಲ್ಲಿಯೂ ಒಳ್ಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ಅಂತೆ. ಅದು ಪಂಪನ ಮಾತು. ಇದಕ್ಕೆ ಅದು, ಅದಕ್ಕೆ ಇದು–ನಂಟು, ಗಂಟು. ಸರಸ, ವಾದ್ಯ; ವಿನೋದ, ಗೀತಿ; ಚಂದನ, ಅತ್ತರು; ತಿಂಗಳು, ತಾರೆ;

ಉಪವನ, ಸರೋವರದ ದಂಡೆ; ಕ್ರೀಡೆ; ವಸ್ತ್ರ, ಒಡವೆ; ಯಾನ, ವಾಹನ; ಬೀಸಣಿಗೆ, ಮಖಮಲ್ ಮೊಚ್ಚೆ ಎಲ್ಲ ಇದಕ್ಕಾಗಿಯೇ; ಮಧು ಮಧುರವಾಗುವುದು ಈ ಸಂಪರ್ಕದಲ್ಲಿ; ಎಲ್ಲೆಲ್ಲಿಯೂ ಇದರದೇ ವಿಲಾಸ. ತಾಂಡವಕ್ಕೆ, ಲಾಸ್ಯಕ್ಕೆ. ಆದರೆ ಇದನ್ನು ಯಾರೂ ಮರೆಯಬಾರದು – ಹೆಣ್ಣಿಗೆ ಗಂಡು ಗಂಡೇ; ಗಂಡಿಗೆ ಹೆಣ್ಣು ಹೆಣ್ಣೇ. ಒಂದು ಬೆಣ್ಣೆ, ಒಂದು ಬೆಂಕಿ. ಅದು ಕರಗಿಸುತ್ತದೆ, ಇದು ಕರಗುತ್ತದೆ. ಬೇಡವೆಂದರೆ ಬಿಟ್ಟಾವು ಹೇಗೆ? ಇದು ಪ್ರಕೃತಿ. ಯಾವ ಸಂಸ್ಕೃತಿ ಬೆಳೆದು ಯಾವ ವಿಕೃತಿ ಹೇಗೇ ಸಾಧಿಸಲಿ, ಈ ಸತ್ಯ ನಿತ್ಯ. ರೀತಿಯನ್ನೊ ವಿಧಾನವನ್ನೊ ನಯ, ಒರಟು, ಆತುರ, ತಾಳ್ಮೆ ಅಲ್ಪ ಸ್ವಲ್ಪ ಮಾರ್ಪಡಿಸಬಹುದೇನೊ. ಧಾತುವನ್ನಲ್ಲ.

ಕಾಮ ಪ್ರೇಮವಾದಾಗ ಈ ಕಾಮನ ದೊಡ್ಡದಾಗುತ್ತದೆ. ಪ್ರೇಮ ಹಣ್ಣಾದಾಗ ಅದರ ಸವಿ ಬೇರೆ ಬಗೆಯದು. ಕಾಮ ದೇಹದ ಆಸೆ ; ಅದರ ದಾಹ ಹಿಂಗಬೇಕು. ಚಿಗುರು ಹೂಗಳಿಗೆ ತಾನೇ ಹಕ್ಕಿ ದುಂಬಿ ಮುತ್ತಿ ಹಾರಾಡುವುದು ? ಮಿಡಿಗೆ, ದೋರೆಗೆ ಕೂಡ ಅಷ್ಟಿಲ್ಲ. ಪುನಃ ಹಣ್ಣಿಗೆ ಎಲ್ಲ ಜೀವಜಂತುಗಳ ಆಸೆ ಹಾತೊರೆಯುತ್ತದೆ. ಆ ತಿರುಳು, ಆ ರಸ, ಬಣ್ಣ, ಸುಗಂಧ. ಒಡಲು ಬಿರಿದು ಹೃದಯದ ರಂಗು ರಂಜನೆಯನ್ನು ಕಾಣಿಸುವ ಆ ಸಂತೋಷ ಒಂದು ವರ್ಷದ ಬೆಳಸು. ಅದರಿಂದಲೇ ಬಿತ್ತು; ಸೃಷ್ಟಿಗೆ ಪುನಃ ಮಾರ್ಗ. ರವೀಂದ್ರರ ಒಂದು ಚುಟುಕದಲ್ಲಿ ಹೂ ಕೇಳುತ್ತದೆ : 'ಹಣ್ಣೆ, ನೀನು ಇನ್ನೂ ನನಗೆ ಎಷ್ಟು ದೂರದಲ್ಲಿದ್ದೀಯೆ?' – ಎಂದು. ಉತ್ತರ ಬರುತ್ತದೆ; 'ನಿನ್ನ ಹೃದಯದಲ್ಲಿಯೇ ಅಡಗಿದ್ದೇನೆ' ಎಂದು. ಒಂದು ಮೊದಲು, ಇನ್ನೊಂದು ಕಡೆ! ಒಂದು ಮಾದಕ; ಇನ್ನೊಂದು ಸಾರ್ಥಕ, ಪೋಷಕ; ಒಂದು ಹಸಿವು, ಇನ್ನೊಂದು ತೃಪ್ತಿ. ಎರಡರ ಆಸ್ವಾದನೆಯೂ ಸಿಹಿಯೇ. ಹೆಣ್ಣು ಗಂಡುಗಳ ಸಂಬಂಧದಲ್ಲಿ ಎರಡೂ ಧ್ರುವಗಳು ಸೇರುತ್ತವೆ. ನಡುವಣ ದಾರಿಯನ್ನು ನಡೆದರೆ. ಹಾಗೆ ಫಲಿಸಬೇಕು ಪಾರಸ್ಪರ್ಯ. ಇದು ಒಡನಡತೆಯಾದಾಗ, ಆ ರುಚಿ ಬಹು ಸುಖದ್ದು. ನಡುವೆ ಎಷ್ಟು ಬೇಸರವೊ ನಿಟ್ಟುಸಿರೊ ಯಾರು ಹೇಳಲಿ? ನೆರವೇರಿಕೆಯ ಭೋಗವೊ ಸಂತೋಷವೊ ಅಸಾರವಾಗಿದ್ದಿದ್ದರೆ ನರಲೋಕ ಅದಕ್ಕಾಗಿ ಇಷ್ಟು ಹಾತೊರೆಯುತ್ತಿತ್ತೆ ? ಸಾವಿರ ಭಂಗ, ಕೋಟಲೆ, ಕೀಟಲೆ, ವಿರಸ ಮನಸ್ಸನ್ನು ಕೆಡಿಸುತ್ತಿದ್ದರೂ ಒಂದು ನಿಮಿಷದ ಸಫಲತೆಯ ಸೌಭಾಗ್ಯ ಅದನ್ನೆಲ್ಲಾ ಮರಸುತ್ತದೆ ; ಅಳಿಸುತ್ತದೆ. ಪ್ರತಿ ಪ್ರೇಮಿಯ ಪ್ರೇಮವೂ ತನ್ನ ಬಳಕೆಯಲ್ಲಿ, ಕನಸಿನಲ್ಲಿ, ಕಾವಿನಲ್ಲಿ – "And men that love lightly may die– but we?" ಎಂದುಕೊಳ್ಳುತ್ತಿರುತ್ತದೆ ; ನಡೆವಾಗ, ಗಾಢವಾಗಿದ್ದಾಗ; Heart hand-fast in heart! – ಪ್ರೇಮ ನಿಜವಾದಾಗ. ಅಚಲವಿಶ್ವಾಸದಲ್ಲಿ ಏನೇ ಬರಲಿ, ತನ್ನನ್ನು ತೆತ್ತುಕೊಂಡಾಗ. ಇವರನ್ನು ಅವರು ಕಂಡದ್ದಿಲ್ಲ, ಕೇಳಿದ್ದಿಲ್ಲ. ಎಲ್ಲಿನವರೊ ಯಾರೊ. ಕಣ್ಣು, ಮನಸ್ಸು, ಮಾತು ಕೂಡಿದವು; ಹೊಂದಿದವು. ಬೀದಿಯಂಚಿನ ಕೊನೆಯಿಂದ ಈ ಸೆಳೆನೋಟ ಹಾಯಿತು, ಆ ತುಟಿ ಸಿಳ್ಳೆ ಊದಿತು. ಒಂದರ ಹಿಂದೆ ಒಂದು ಹೊರಟಿತು. ಆಯಿತು. ಯಾವ ಲೀಲೆಯೊ ಮಾಯವೊ

ಆಕರ್ಷಣೆಗೆ ಬಂದಿಯಾಗಲು ಸೆರೆಸಿಕ್ಕಿ ಧನ್ಯವಾಯಿತು. ಆಮೇಲೇನು ಎನ್ನುವಿರೊ? ಅದರ ಚಿಂತೆ ನಮಗೆ ಏಕೆ ? ಅವಕ್ಕೇ ಇಲ್ಲದಿರುವಾಗ ನಿಮ್ಮನ್ನೂ ನಮ್ಮನ್ನೂ ಕೇಳುವವರು ಯಾರು ?

ಚಿಂತೆ ಆಗಿ ಅಲ್ಲ ಅದು ಅಷ್ಟು ಮುಖ್ಯ. ಆದುದಾಗಲಿ, ದೇಹದ ಹಸಿವು ಹಿಂಗಿ ಕೃತಜ್ಞತೆಯಲ್ಲಿ, ಗೌರವದಲ್ಲಿ, ತೃಪ್ತಿಯಲ್ಲಿ ಎರಡು ಜೀವಗಳು ಒಂದು ಗೊನೆಯ ಎರಡು ಹಣ್ಣುಗಳಂತೆ, ಜೊತೆಗೆ ಬೆಳೆದರೆ ಅದು ನಿಜವಾಗಿ ಬದುಕಿನ ಪುಣ್ಯ. ಆಗ ಗಂಡು ಹೆಣ್ಣು ಪರಸ್ಪರ ಪೂರಕ ; ಪೂರ್ಣ. ಆಗ ನಾರಿ ಮಾರಿಯಲ್ಲ ; ಬಿಲ್ಲಲ್ಲ ; ವಿಷವಲ್ಲ, ಮಾದಕವಲ್ಲ. ದುರ್ಗತಿಗೊ ಸೋಲಿಗೊ ಪತನಕ್ಕೊ ಕಾರಣವಲ್ಲ. ಅಮೃತದ ಬಿತ್ತು; ತಾನು ಬದುಕಿ ತಾನೊಲಿದುದನ್ನು ಬಾಳಿಸುವ ಸತ್ವ. ಒಂದು ಪ್ರೇಮದ ಬೆಸುಗೆ-ಎರಡು ಜೀವಗಳನ್ನು, ಒಂದು ಮನೆಯನ್ನು, ಜೀವಂತವಾಗಿ ಮಾಡುತ್ತದೆ. ಅಂಥ ಬದುಕು ಫಲಿಸಿದಾಗ ಜಗತ್ತಿಗೇ ಒಂದು ಭಾಗ್ಯದ ಗಳಿಕೆಯಾಗುತ್ತದೆ. ಆಗ ಹೆಣ್ಣು ಬರಿಯ ಹೆಣ್ಣಲ್ಲ ; ಬಾಳ ಹಣ್ಣು. ಆಕೆಯೇ ತಾಯಿ, ಶಕ್ತಿ, ದೇವಿ. ಇದು ಇಲ್ಲಿಗೇ ನಿಂತೀತೆ? ಮುಂದುವರಿಯುವುದು. ಲೋಕ ಮುಗಿಯುವವರೆಗೂ.

# ಮಣ್ಣು

ಹೊನ್ನ ಮೇಲೆ ಬರೆದ; ಹೆಣ್ಣ ಮೇಲೆ ಬರೆದ; ಮಣ್ಣ ಮೇಲೇಕೆ ಬರೆಯಲಿಲ್ಲ ಅಂದರು. ಬರೆಯಬೇಕಿತ್ತು. ಏಕೆ ಈವರೆಗೂ ಬರೆಯಲಿಲ್ಲವೊ ಕಾಣೆ. ಪೃಥ್ವಿಯಷ್ಟು ವಿಸ್ತಾರವಾದ್ದು ವಿಷಯ. 'ಬರೆದ' ಏನು! 'ದೆ'. ಅವು ಮೂರೂ ಲೋಕಕ್ಕೆ ಪ್ರಿಯ! ಒಟ್ಟಿಗೆ ಜನ ಬಾಯಲ್ಲಿ ಆಡುತ್ತವೆ. ಜನ ಅವಕ್ಕಾಗಿ ಆಸೆ ಪಡುತ್ತಾರೆ. ಏನು ಪಾಡು ಪಡಲೂ ಸಿದ್ಧರಿರುತ್ತಾರೆ. ಮೂರೂ ದೊರಕಿದರೂ ತೃಪ್ತಿ ಸಾಲದಾದರೂ ಒಂದಾದರೂ ದೊರಕಿದರೆ ಅವರ ಹೊಟ್ಟೆ ಆ ಮಟ್ಟಿಗೆ ತುಂಬಿ ತಣ್ಣಗಾಗುತ್ತದೆ. ಯಾವುದೂ ದೊರಕದಾದಾಗ ಆಗುವ ಉರಿ ಹೇಳತೀರದು. ಎಳನೀರು, ಪಾನಕ, ಐಸ್‌ಕ್ರೀಂ, ನೀರುಮಜ್ಜಿಗೆ ಕೊಟ್ಟು ಆ ಹೊಟ್ಟೆಗಳನ್ನು ತಂಪು ಮಾಡುವುದು ಶಕ್ಯವಿಲ್ಲ. ಶೃಂಗಾರ ಪ್ರಪಂಚದ ಶೈತ್ಯೋಪಚಾರ insult. ಹೊನ್ನು ಬೇಕಾದವರಿಗೆ ಅದೇ ಬೇಕು. ಬದಲಾಗಿ ಬೇಕಾದರೆ ನಾಲ್ಕು ದೊಡ್ಡ ನೋಟುಗಳ ಕಂತೆ ಕೊಡಿ; – ಹೇಗೋ ಸಮಾಧಾನವಾಗುತ್ತದೆ. ಹೆಣ್ಣು ಬೇಡುವವರಿಗೆ ಇನ್ನೇನು ಆಸೆ ತೋರಿಸೀರಿ? ಮಣ್ಣು ಎಂದರೆ ನೆಲ, ಭೂಮಿ, ಜಮೀನು. ಪ್ರತ್ಯಾಮ್ನಾಯವಿಲ್ಲ. ತುಂಬಾ ಮೋಹ ಜನಕ್ಕೆ ಅವನ್ನು ಕುರಿತು. ಉಚ್ಚರಿಸಲು ಕಷ್ಟವಾದ ಹಕಾರದಿಂದ ಎರಡು ಮೊದಲಾಗುತ್ತವೆ. ಮೂರೂ ನಕಾರ ಣಕಾರಗಳಿಂದ ಉಚ್ಚಾರಗೊಳ್ಳುತ್ತವೆ ; ಮೂಗಿನಲ್ಲಿ ಆದರೂ ಆಕರ್ಷಕವಾಗಿ. 'ನ' ಕರ್ಕಶತೆಯಲ್ಲಿ ಹೆಚ್ಚೊ, 'ಣ' ಹೆಚ್ಚೊ ಹೇಳುವಷ್ಟು ವರ್ಣಸ್ವಾನ ಶಾಸ್ತ್ರವನ್ನು ನಾನರಿಯೆ. ಎರಡೂ ಪೆಡುಸೇ. ನಿಷ್ಠುರವೇ, – ನಿಮಿರಿ ನಿಮಗೆ ಇದಿರು ನಿಂತರೆ. ಎರಡೂ ಎರಡೆರಡೊ ಎರಡೂವರೆಯೊ ಅಕ್ಷರ ಪರಿಮಿತಿ ಉಳ್ಳ ಮಾತು.

ಆದರೆ ಅವು ಅಡಗಿಸಿಕೊಂಡಿರುವ ಪ್ರಪಂಚ–ಲೌಕಿಕ–ಅದ್ಭುತ. ಮಾತುಗಳಂತೂ ತುಂಬಾ ಅಪ್ಯಾಯಮಾನ. ಹಣ್ಣು, ಕಣ್ಣು ಜೊತೆಗೆ ಸೇರಬಹುದಿತ್ತು. ಸೇರಲಿಲ್ಲ. ಬೆಲೆ ಗೌರವ, ಹಲಕಾಲ ಬಾಳುವ ಆ ಯೋಗ್ಯತೆ ಹಣ್ಣಿಗಿಲ್ಲ. ಕಣ್ಣು? ಕಣ್ಣು ಕಾಣದ ಜನ ಎಷ್ಟು ಮಂದಿಯಿಲ್ಲ? ಈ ಮೂರರಲ್ಲಿ ಲೋಕಕ್ಕೆ ಹುಟ್ಟುವ ಮೋಹ ಅವಕ್ಕೆ ಬಾರವು? ಹಣ್ಣು ತಿನ್ನದೆ ನಡೆಯುತ್ತದೆ; ಕಣ್ಣಿಲ್ಲದಿದ್ದರೆ ಇಲ್ಲ. ಎಷ್ಟೋ ಇಲ್ಲ ಜನಕ್ಕೆ ; ವಿದ್ಯೆ, ಬುದ್ಧಿ, ಧರ್ಮ ಇತ್ಯಾದಿ ಇಲ್ಲ : ನಡೆಯುತ್ತದೆಯೊ ಲೋಕ! ಆದರೆ ಹೊನ್ನು ಬೇಡವೆಂಬ ಪ್ರಾಣಿ? ಹೆಣ್ಣೊಲ್ಲದ ಗಾಂಪ? ಯಾರಿದ್ದಾರೆ? ಅಂಥದು ಅಪವಾದದ, ಒಣಕಲು ಗಂಡಸು. ಅದನ್ನು ಯಾರ್ ಮುಟ್ಟುವರೊ !

ಮಣ್ಣೂ ಹಾಗೆಯೇ. ನೀವು ಒಲ್ಲೆ ಅಂದೀರಿ, ನಿಮಗೆ ಅದರ ರುಚಿ ಹಿಡಿಸಿಲ್ಲ; ನಿಮ್ಮಪ್ಪ ಅದನ್ನು ಆಳುತ್ತಾ ಕುಳಿತಿದ್ದಾರೆ. ಎಲ್ಲರದನ್ನೂ ತಾವೇ ಹಾಕಿಕೊಂಡು. ಅವರ

ತರುವಾಯ ತಿಳಿಯುತ್ತದೆ ನಿಮಗೂ ಅದರ ರುಚಿ. ಅವನ್ನು ಬಿಟ್ಟು ಜನಕ್ಕೆ ಗತಿ ಎಲ್ಲಿ? ಸುಖವೆಲ್ಲಿ? ಮಣ್ಣಿ ಪ್ರೇಮವೋ : ಹುಟ್ಟು ಪಂಚಭೂತಗಳಿಂದಲೇ ಆದ್ದು. ಪಂಚೀಕರಣದಿಂದಲೇ ಮುಗಿಯಬೇಕಾದ್ದು ವಿಧಿ. ನೀವು ಪುನಃ ಒಂದು ಹಿಡಿ ಮಣ್ಣಾಗುವವರೆಗೂ ಅದರದೇ ಪ್ರಾಜಾಪತ್ಯ. ಎಷ್ಟೆಷ್ಟೋ ಪ್ರಕಾರಗಳಲ್ಲಿ ನಿಮಗೆ ಬೀರುತ್ತದೆ. ನೀವೇ ಅರಿಯದಂತೆ. ಆದ್ದರಿಂದಲೇ ದಾಸರಾಯರು ಅಂದದ್ದು. 'ಮಣ್ಣಿಂದ ಕಾಯ, ಮಣ್ಣಿಂದ' ಎಂದು. ಲೋಕದ ಸಾರ ಅಲ್ಲಿದೆ. ಇಷ್ಟು ದೊಡ್ಡ ವಿಷಯ ನನಗೆ ತಟ್ಟಲಿಲ್ಲವೆಂದಲ್ಲ. ಅದರ ಹಿರಿಮೆ ನನ್ನನ್ನು ಹಿಮ್ಮೆಟ್ಟಿಸಿತ್ತು. ವೈಕುಂಠ, ಕೈಲಾಸ ಎರಡೂ ಮಣ್ಣು ಎಂದಾಗ ಯಾವ ದನಿ ಹಿಡಿದು ಅದನ್ನು ಕೀರ್ತಿಸಲಿ ಎನ್ನಿಸಿತ್ತು. ಮಣ್ಣಿನ ತೂಕಕ್ಕೆ ತೂಗಿ ಅದರ ಜೀವವನ್ನು ಹಿಡಿಯದಿದ್ದರೆ ಅಪಚಾರವಾಗುತ್ತದೆ. ಕಾಲಲಬ್ಧಿ ಬಂತು. ಇದೇ ಈ ನಾಲ್ಕು ಬಡ ಸಾಲುಗಳು. ತೃಪ್ಯತು, ತೃಪ್ಯತು.

ಈ ಮೂರಕ್ಕೂ ಲೋಕ ಮೋಹಗೊಂಡಿದೆ. ನಿರಂತರವೂ. ಲೋಕವ್ಯಾಪಾರವನ್ನೆ ಸಂಗ್ರಹಿಸಿ ಇವುಗಳ ಸಾಧನೆಯಲ್ಲಿ ಅಡಗಿಸಿಬಿಡಬಹುದು ಎನ್ನುವಷ್ಟು ವ್ಯಾಪಕ ಅವು. ಲೋಕದ ಬಡಾಯಿ ಎಷ್ಟು ? ಎಷ್ಟು ಲಡಾಯಿ ನಡೆದಿದೆ ಇವಕ್ಕಾಗಿ ? ಹೊಂಚು, ಹಗೆತನ ಹಬ್ಬಿವೆ ! ರಕ್ತಗಳ ಕೋಡಿ ಹರಿದಿದೆ ! ಈ ಹಿಡಿ, ಈ ಗಡಿ, ಈ ಮುಡಿ ನಮ್ಮವು ; ಅಲ್ಲ ನಮ್ಮವು –ಎಂದೇ ಕೋಟಲೆ. ನಮ್ಮ ನೆಲವನ್ನು ಆಕ್ರಮಿಸಿದ ಪಾಕಿಸ್ತಾನದ ಮೇಲೆ, ಚೀನದ ಮೇಲೆ ನಮಗೆಷ್ಟು ಛಲವಿಲ್ಲ ! ಅವರೊಡನೆ ಪುನಃ ಕಾದಾಟ ಬಿದ್ದರೆ ಒಂದುಸಿರು ಉಳಿಯದಂತೆ ಕಾದಲು ನಾವು ಸಿದ್ಧರಾಗುತ್ತಿದ್ದೇವೆ. ಅನ್ನ ಬಿಟ್ಟು, ಕಬ್ಬಿಣ, ಸೀಸ, ಗಂಧಕಗಳನ್ನು ಶೇಖರಿಸುತ್ತಿದ್ದೇವೆ. ನಮ್ಮ ನೆಲ, ನಮ್ಮ ಮಣ್ಣು, -ಹುಷಾರು, ಕಾಲಿಟ್ಟೀರಿ. ನನ್ನ ಹೆಣ್ಣು ಇದು ; ಎಚ್ಚರಿಕೆ ; ನನ್ನ ಹೆಸರ ಕೊರಲಪಟ್ಟಿ ಹಾಕಿದ್ದೇನೆ, ಜೋಕೆ ; ನನ್ನ ಹಣ ಮುಟ್ಟೀರಿ ; -ಜೈಲಿಗೆ ಹಾಕಿಸಿಯೇನು; ಏಳು ಕೋರ್ಟು ಹತ್ತಿಸಿ. ಏಳೂರು ನೀರು ಕುಡಿಸುತ್ತೇನೆ. ಶತಾಯು, ಗತಾಯು, ಇದು ವೀರವಾರ್ತೆ. ಇಲ್ಲಿ ಯಾವುದೂ ಬೆಂಡು ತೇಲುವುದಿಲ್ಲ. ಪಕ್ಕದ ಮನೆ ಮಾದಯ್ಯನ ಮನೆ, ಮಠ ಎಲ್ಲ ಹೋದವು ; ಹೆಂಡತಿಯ ತಾಳಿ ಬಿಟ್ಟು ಕೈ ಬಳೆ ಕಾಣದಾದವು. ಮಕ್ಕಳು ತಬ್ಬಲಿಯಾಗಿವೆ. ೨೦ ವರ್ಷದಿಂದ ಕೋರ್ಟು ಹತ್ತಿ ಕಾದಿದ್ದಾನೆ. ಎಲ್ಲ ಕೋರ್ಟಲ್ಲೂ ಇವನ ವಿರುದ್ಧ ತೀರ್ಮಾನ ಆಗಿದೆ. ಕೈಯಲ್ಲಿ ಬಿಡಿಗಾಸಿಲ್ಲ. ನೆಲ ಸ್ವಾಧೀನ ಮಾಡಿಕೊಳ್ಳಲು ತಿಮ್ಮಯ್ಯ ಹೇಗೆ ಕಾಲಿರಿಸುತ್ತಾನೆಯೊ ನೋಡಿಬಿಡುತ್ತೇನೆ. ಇಲ್ಲ ಅವನ ತಲೆ, ಇಲ್ಲ ನನ್ನದು ಬೀಳಬೇಕು ಎಂಬ ಹಟ ಬಂದಿದೆ. ಮೂರೆಕರೆ ಮಣ್ಣಿಗಾಗಿ. ಅಂಥದು ಬೇರೆ ಇರಲಿಲ್ಲವೊ? ಅವನಿಗೆ, ಇವನಿಗೆ? ಇಬ್ಬರಿಗೂ ಇತ್ತು. ಇಬ್ಬರ ಕೈಯೂ ಬರಿದಾಗಿವೆ. ಹೇವ ಮುರಿಯಲಿಲ್ಲ ; ದಾಹ ಅಡಗಲಿಲ್ಲ. ಇಬ್ಬರೂ ಎಲ್ಲವನ್ನೂ ಕಳೆದುಕೊಂಡು ಹಗೆಯನ್ನು ಮಾತ್ರ ಹಿಂಡುತ್ತಿದ್ದಾರೆ. ಮಣ್ಣು ಕವಿಸುವ ಕಣ್ ಕುರುಡು ಹೀಗೆ.

ಕೆಲವೇಳೆ ಕೇಳುವುದುಂಟು : ಇವು ಪ್ರಿಯವಲ್ಲವೆ ಎಂದು? ಅಲ್ಲದೆ ಉಂಟೆ? ದೊರೆತರೆ ಉಳಿದರೆ ಮೃದು, ಸವಿ, ಪ್ರಿಯವೇ. ಇವುಗಳಲ್ಲಿ ಕಹಿ, ಕರ್ಕಶ, ಕಠಿನವೂ ಇವೆ. ಯಾವುದರ ಬೆಲೆ ಹೆಚ್ಚು ಎಂದೂ ಪ್ರಶ್ನೆ ಎದ್ದಿರುವುದುಂಟು. ಯಾರು ಹೇಳಬಲ್ಲರು? ಕವಿಗಳೆ ? ಪ್ರಿಯರೆ? ಸಾಧಿಸಿದವರೆ ? ಸೋತವರೆ? ಲೋಕಕ್ಕೆ ಇವುಗಳ ಕಹಿ, ಸಿಹಿ, ನುಣುಪು ಮೃದು ನಿರ್ಘೃಣತೆ ಲಾಭ, ಲೋಭ, ಇವಿಡುವ ಬೇನೆಗಳಿಂದ ಕಾಲದ ರಾಜಮಾರ್ಗ ರಕ್ತಪ್ಲಾವಿತವಾಗಿದೆ. ಕೋಟಿ ಕಂಕಾಳ ನೆಲದಲ್ಲಿ ಹಾಸಿ ಸವೆದಿವೆ. ಒದವಿದ ಪ್ರೇಮಗಳ ಸೌರಭ ಕಾಲದೇಶಗಳನ್ನು ಅಳಿಸಿ ಪರಿಮಳಿಸಿದೆ. ಆದರೂ ಒಂದಕ್ಕೊಂದು ಸರಿಮಿಗಿಲು ಎನ್ನುವಂತಿಲ್ಲ. ಯಾವುದಕ್ಕೆ ಯಾವುದೂ ಕಡಮೆಯಲ್ಲ; ತಾಪಕಾರಿತೆಗೆ. ತರುವ ಆತುರ ಉಬ್ಬಸಗಳಿಗೆ ; ನಿರೀಕ್ಷೆ ನೈರಾಶ್ಯಗಳಿಗೆ; ಊಡುವ ಸಂತಸಗಳಿಗೆ. ಇವುಗಳ ಸತ್ವ ಸಮಸತ್ವ. ಮೂರು ಅಮರ ಸತ್ವಗಳೇ.

ಮಣ್ಣೆಂದರೆ ಎಷ್ಟು ಪ್ರೀತಿ? ಎಷ್ಟು ಬಗೆಯ ಮಣ್ಣು? ಎಷ್ಟು ಮೃದು, ಬಣ್ಣ? ಚಂದ? ಅಗೆದರೆ ಒಂದು. ನೆನಸಿದರೆ ಬೇರೊಂದು; ಒಣಗಿದರೆ ಒಂದು; ಹರಡಿದರೆ ಮತ್ತೊಂದು. ಗಡ್ಡೆ ಕಟ್ಟಿತೆಂದರೆ ಒಂದು. ನೆಲ ಬಿರಿದರೆ ಬೇರೊಂದು. ಈ ಹುಡುಗನ ಬುದ್ಧಿ ಮಣ್ಣು ಹೆಂಟೆಯಂಥದು ಎಂದು ನನ್ನನ್ನು ಮೂದಲಿಸಿದ ಕಾಲವಿತ್ತು. ಹೇಗೊ ತೇರಿ ಮನುಷ್ಯನ ಸಾಲಿಗೆ ಬರುವ ಯತ್ನ ನಡೆದು ನಾನು ದಡಹಾಯ್ದೆ. ಈ ಮಣ್ಣು ದೂರದಿಂದ ನೋಡಿದರೆ ಆಹಾ ಕಸ್ತೂರಿ; ಅದೋ ಕುಂಕುಮ; ಇದು ಚಂದ್ರ, ಕಾವಿ; ಕಂದು, ಬೂದು– ಒಂದೊಂದರದು ಒಂದೊಂದು ಬಣ್ಣ. ಸ್ತರಗಳ ಬಣ್ಣ ಬಗೆ ಬಗೆಯದು. ಬಾಂಬಿಲ್ಲುಗಳ ಎಣಿಕೆ ತುಂಬಾ ಖಚಿತ ;. ಇವುಗಳದು ಬೆರೆತುಕೊಂಡಿರುತ್ತದೆ ಅಷ್ಟೇ. ಆದರೆ ಅಷ್ಟೇ ಸೊಗಸು : ನವುರು.

ಗಂಗೆಯ ಮಣ್ಣನ್ನು ಮುಟ್ಟಿ ನೋಡಬೇಕು. ಮೈಗೆ ತಿಕ್ಕಿದರೆ ಯಾವ ಸೀಗೆಪುಡಿ, ಯಾವ ಸೋಪು, ಹೆಸರುಹಿಟ್ಟು ಅದರಂತೆ ಕೊಳೆ ತೆಗೆದೀತು. ಪಾತ್ರೆಗಳನ್ನು ಬೆಳಗಿದರೆ ಇನ್ನಾವುದು ಆ ಹೊಳಪು ಕೊಟ್ಟೀತು! ಅದು ಗಂಗಾಮೃತ್ತಿಕೆ. ಅದರ ಪವಿತ್ರತೆ ಏನು ಹೇಳೀರಿ-ಅಂತೀರೇನೊ. ಸಂಸ್ಕೃತ ಮಾತನ್ನು ಬಳಸದಿರಿ ಮಾತ್ರ. ಸಾದಾ ಮಣ್ಣು ಮೃತ್ತಿಕೆಯಾಗುತ್ತದೆ ಆ ಶ್ರೀವಾಣಿಯಲ್ಲಿ. ಆ ಮೃತ್ತಿಕೆಯನ್ನು ನೀರಲ್ಲಿ ಕದಡಿ ಕುಡಿಯಿರಿ,-ಎರಡು ಚಮಚ. ಸಮಸ್ತ ರುಜಾ ಪರಿಹಾರಕ ಅದು ಎಂದರು ಕುಹಕ ನುಡಿದ ಗೆಳೆಯರು. ಕುಹಕಕ್ಕೇನು ಮುಟ್ಟಬೇಕು ಎನ್ನುವುದು ಸಲ್ಲದೇನೊ. ನನ್ನ ಮಾತು ಇಷ್ಟು : ನಿಜ. ಹಾಗಿದ್ದರೆ ಅದನ್ನು ಕುಡಿದು ಜೀವವನ್ನೇಕೆ ಬಿಡಬೇಕು ? ಗುಣಗ್ರಹಣ ಅಷ್ಟು ಸುಲಭವಾಗಿದ್ದಿದ್ದರೆ ಲೋಕ ಎಂದೋ ಸ್ವರ್ಗವಾಗಿ ಬಿಡುತ್ತಿತ್ತು. ನಮ್ಮ ನಿಮ್ಮಂಥವರು ಕಷ್ಟಪಡಬೇಕಿತ್ತೆ.

ಆದರೆ ಎಲ್ಲರ ಗುಣ ಎಲ್ಲಿ, ನಮ್ಮದೆಲ್ಲಿ? ನಾವು ಸಾಧಾರಣರೆ? ಎಂದರೆ ನಮ್ಮಲ್ಲಿಗೆ ಯಾತ್ರೆ ಬಂದು – ಎಂದರೆ ನಾಲ್ವರೊ ಎಂಟು ಮಂದಿಯೊ ಡೆಪ್ಯುಟೇಷನ್

ಬಂದು ಕಾದು ನಮ್ಮ ಕಾಲು ತೊಳೆದು, ಆಚಮನ, ನೈವೇದ್ಯ ಅರ್ಪಿಸಿ, ಕಾಣಿಕೆ ಇತ್ತು, ನಾವು ಒಪ್ಪದಾದರೆ ಲೋಕಕ್ಕೆ ಅನ್ಯಾಯವಾಗುತ್ತದೆ ಎಂದು ತಿಳಿಸಿ, ಲೋಕಾನುಗ್ರಹಾರ್ಥವಾಗಿ ಅವರು ಮಾಡುವ ಮರ್ಯಾದೆ ಸ್ವೀಕರಿಸಿ ಮಂತ್ರಿಗಳೊ ಆಚಾರ್ಯರೊ ಅಧಿಕಾರಿಗಳೊ ಒಡೆಯರೊ ಆಗಬೇಕಾಗಿ ಬರುತ್ತದೆ. ಗ್ರಹಚಾರವಶಾತ್ ನಮ್ಮ ಕಾಲಿಗೆ ಬಿದ್ದು ಅದರ ಹುಡಿ ತಲೆಗೆ ಹಾಕಿಕೊಳ್ಳುತ್ತಿರುವಾಗ ಒಲಿಯೆವೆಂದರೆ ಹೇಗೆ? ಪೂಜೆ ಅಲ್ಲಿಗೆ ಮುಟ್ಟಿದರೆ ಸರ್ವಥಾ ಸ್ವೀಕರಿಸಬೇಕಾದ್ದೇ.

ಶ್ರೀಯವರು ಒಂದು ಕವಿತೆಯಲ್ಲಿ ಬರೆದರು : "ಹೊಸ ಉತ್ತಮಣ್ಣು" ಎಂದು. ಅದು ಇಂಗ್ಲಿಷ್ ಕವಿತೆಯ ಭಾಷಾಂತರ. ಇಂಗ್ಲಂಡಿನಲ್ಲಿಯೂ ನೆಲ ಇದೆ. ಅದನ್ನು ಉಳುತ್ತಾರೆ. ಅಲ್ಲಿ ಹೊಸ ಉತ್ತಮಣ್ಣು ಇರುತ್ತದೆ-ಎಂದು ಮೊದಲು ನಾನೆಣಿಸಿರಲಿಲ್ಲ. ಆದರೆ ಆ ಪದ ಅಲ್ಲಿ ಬರುವವರೆಗೂ ಆಹಾ ಎಷ್ಟು ಚೆನ್ನಾಗಿದೆ ಎನ್ನಿಸಿರಲಿಲ್ಲ. ಕಣ್ಣಿಗೆ, ಮೂಗಿಗೆ, ಮನಸ್ಸಿಗೆ ತೃಪ್ತಿ ತಂದ ಆ ಮಾತು ಭೇಷೆನ್ನಿಸಿತು. ಅವರೆಗೆ ನಾನು ಹೊಸ ಉತ್ತಮಣ್ಣನ್ನು ನೋಡಿರಲಿಲ್ಲವೆ ? ನೆಲ ಉತ್ತು, ಗಂಟು ಗಡ್ಡೆ ಎಬ್ಬಿ, ಅದು ಒಡೆದು ಮಣ್ಣು ತಿರುವಿ ಹುಡಿಹುಡಿಯಾಗಿ ಅದು ಮೇಲೆ ಬಂದಾಗ ಆ ಬಣ್ಣವೊ ಹಬೆಯೊ ಹೊಸ ಕಂಪೊ ಅನುಭವಿಸುವಂಥವು. ರಾತ್ರಿ ಮಳೆ ಬಿದ್ದು ಮಾರನೆಯ ಬೆಳಿಗ್ಗೆ ನೆಲದ ಸೊಗಸನ್ನೂ ನುಣು ನೆಲಸನ್ನೂ ನೋಡಬೇಕು. ನೆಲ ಉತ್ತು, ಬಿತ್ತಿ ಬೇಸಾಯ ಮಾಡಿ ಹಸುರು ಹುಲ್ಲು, ಪಯಿರು, ತೆನೆ ಕಟ್ಟಿದಾಗ, ಹಣ್ಣ ಭಾರದಿಂದ ಸಸ್ಯ ಬಾಗಿದಾಗ, ಆ ವೈಭವವನ್ನು ಹೇಳತೀರದು. ಮಣ್ಣು ತನ್ನ ಸಾರವೆರೆದಿರುತ್ತದೆ, ಆ ಪಯಿರಿಗೆ ಹಸುರಿಗೆ; ಕಾಳ ತಾಳಿಗೆ. ಆ ಹಣ್ಣು ಜೊಂಪಕ್ಕೆ ; ಜೊಂಪದ ರಸಕ್ಕೆ. ಗಾಳಿಯಲ್ಲಿ ಅವು ತೂಗಿದಾಗ. ಮಣ್ಣಾಟದಲ್ಲಿ ಆ ಮಧುರಿಮೆಗೇ ದಿಬ್ಬಣ.

ಈಚೆಗೆ ನೆಲವನ್ನು ಮೀರಿ, ನೇರ ೧೩,೦೦೦ ಅಡಿ ಎತ್ತರದಲ್ಲಿ ಬಾನಯಾನ ಮಾಡುತ್ತ ಕೆಳಗೆ ನೋಡಿದ್ದೇನೆ. ನೆಲವನ್ನು ಉತ್ತು ಒಂದೇ ಸಮನೆ ಜನ ಹರಗಿ ಹಸನುಮಾಡಿರುವ ಹದವನ್ನು ಕಂಡಿದ್ದೇನೆ. ಯಾವ ಯಂತ್ರವೂ ಖಚಿತವಾಗಿ ನೇರ ಮಾಡಲಾರದೇನೊ. ಯಾವ ಕ್ಷೌರ ಕತ್ತಿ ಯಾವ ತಲೆಯನ್ನೂ ಹಾಗೆ ನೇರ ಮಾರವಾರಿ ಪಟ್ಟೆ ಕೆರೆಯಲಾರದು. ಹಾಗೇ ಒಂದರ ಪಕ್ಕದಲ್ಲಿ ಒಂದು ನಾಲ್ಕು ಬಣ್ಣದ ಭೂಮಿಯ ನೆಲಸು ಹಬ್ಬಿರುವುದು ಕಂಡಿದೆ. ಆ ಪಟ್ಟ ಪಟ್ಟೆ ಬಣ್ಣದ ಭೂನೆಲಸು ಯಾವ ಬೆನ್ ನಿಕಲ್‌ಸನ್, ಯಾವ ಸದರ್‌ಲಂಡ್ ಚಿತ್ರಕ್ಕೂ ಕಡಮೆ ಚೆಲುವಿನದಲ್ಲ ಎನ್ನಿಸಿದೆ. ದೇವರು ಪ್ರಕೃತಿಯನ್ನು ಸೃಷ್ಟಿಸಿ ಎಷ್ಟು ಉಪಕಾರ ಮಾಡಿದ್ದೇನೆಂದು ಸಂಪನ್ಮೂಲಗಳನ್ನು ಒದಗಿಸಿದ್ದಾನೆಯೊ ಅದನ್ನು ರೂಪಾಂತರಗೊಳಿಸಿ ಮನೆ, ಹಳ್ಳಿ, ಪಟ್ಟಣ, ಹೊಲ, ಗದ್ದೆ, ಕೋಡಿ, ಕೆರೆ, ಕಾಲುವೆ, ಕಟ್ಟೆ, ದಾರಿ, ತೋಪು, ಸಾಲ್ಮರ, ಕೋಟೆ, ದೇಗುಲ, ಶಾಲೆ, ಮಸೀದಿ, ಆಸ್ಪತ್ರೆ, ಶ್ಮಶಾನ–ಒಂದೇ ಎರಡೇ – ಮಾಡಿಕೊಂಡಿರುವಲ್ಲಿ ಕಾಣಿಸಿರುವ ಸಂಸ್ಕೃತಿಕಾರ್ಯ ಯಾವ ಅಂಶದಲ್ಲಿಯೂ ಒಂದು ಗೆರೆ, ಗೆರೆಯ

ಒಂದು ಎಳೆ, ಎಳೆಯ ಒಂದು ನೆಳಲು ಸುಳಿಗೆ ಕಡಮೆ ಅಲ್ಲ ಮನುಷ್ಯನ ಪ್ರತಿಸೃಷ್ಟಿ. ಅಷ್ಟು ಚೆಲುವನ್ನೂ ಫಲವನ್ನೂ ಪ್ರಯೋಜನವನ್ನೂ ದುಡಿದಿದ್ದಾನೆ ಮನುಷ್ಯ. ದೇವ ಮಾನವರ ಈ ಪೈಪೋಟಿ ಯುಗ ಯುಗಾಂತರಗಳಿಂದ ನಡೆದಿದೆ. ಆದ್ದರಿಂದಲೇ ದೇವರಿಗೆ ತೃಪ್ತಿಯಿಲ್ಲ ಈ ಲೋಕವನ್ನು ಮುಗಿಸಿಬಿಡಲು. ತಾನೇ ನಿರ್ಮಿಸಿದ ಈ ಹುಲುಮನುಜನು ತನ್ನೊಡನೆ ಹುರುಡಿಂದ ಸ್ಪರ್ಧಿಸಿ ಹೇಗೆ ಚೆಲುವನ್ನೂ ಶಕ್ತಿಯನ್ನೂ ಪುಷ್ಟಿಯನ್ನೂ ಮಾಡಿಕೊಂಡಿದ್ದಾನೆ ಎಂದು ಅವನಿಗೇ ಇವನಲ್ಲಿ ಮೋಹವುಂಟಾಗಿದೆ ಯೆಂಬ ಸಂಗತಿ ಈಚೆಗೆ ತಿಳಿದುಬಂದಿದೆ. ಈ ನರಜಾತಿ ಮುಗಿದು ಹೋದರೆ ತನ್ನ ಬೇಸರ ಹೇಗೆ ಕಳೆದೀತು ಎನಿಸಿದೆಯಂತೆ. ತನ್ನ ಗ್ರಹತಾರಾ ನೀಹಾರಿಕೆಗಳಲ್ಲಿ ಯಾನ ಮಾಡಿಕೊಂಡು ಬರಲಿ ಎಂದು ಹೊಸ ಚೈತನ್ಯವನ್ನು ಅವನಿಗೆ ಕೊಟ್ಟಿದ್ದಾನಂತೆ. ಅವನ ಚಿಂತೆ ಕಟ್ಟಿಕೊಂಡು ನಮಗೇನು. ಮಣ್ಣಿಗೆ ಕಚ್ಚಿಕೊಂಡಿರುವ ಮಾನವನು ಗುಬ್ಬಿಯಲ್ಲ. ಕಾಲಯಾನಿ, ಆಕಾಶಯಾನಿ, ನಿತ್ಯ ಸಾಹಸಿ ಎಂದು ಅವನ ಕರ್ತೃವಿಗೇ ಮನವರಿಕೆ ಮಾಡಿಕೊಟ್ಟಿದ್ದಾನೆಂಬುದು ಮಾತ್ರ ನನ್ನ ಮಾತು.

ಅವರವರ ಮನೆ, ಊರು, ಅವರವರಿಗೆ ಪ್ರಿಯ. ಇದು ನಮ್ಮ ಊರು-ಅರ್ಧ ಶತಮಾನದ ಹಿಂದೆ. ಇಂದು ಅಲ್ಲಿ ನಮ್ಮದೇನೂ ಇಲ್ಲ ; ಉಳಿದಿಲ್ಲ. ಅಲ್ಲಿರುತ್ತಿದ್ದ ಬಾವಿಯೊಂದು ಬಾಯಿ ಅರೆಬಿಟ್ಟುಕೊಂಡಿದೆ : ಕಲ್ಲಚಪ್ಪಡಿ ಒಂದು ಒಳಗೆ ಕಳಚಿಕೊಳ್ಳುತ್ತಿದೆ. ಮನೆಯೆದುರಿನ ನಾಗರಕಟ್ಟೆ ಪಾಳುಬಿದ್ದು ನಾಗರಕಲ್ಲು ಹಾಗೂ ಹೀಗೂ ಗಾರೆಗಚ್ಚು ಇಲ್ಲದೆ ನಿಂತಿದೆ. ಅರಳಿ, ಬೇವು ಬಡಕಲಾಗಿ ಒಣಗಿ ಉಳಿಕೆಯಂತಿವೆ. ಸುತ್ತಲೆಲ್ಲ ಅಗೆದು ನೆರೆಯವರು ಮಣ್ಣನ್ನು ಕೂಡ ಮಾರಿಕೊಂಡಿದ್ದಾರೆ. ತಮ್ಮ ಕಸವನ್ನು ತಿಪ್ಪೆ ಹಾಕಿದ್ದಾರೆ. ಆದರೆ ಇಲ್ಲಿತ್ತು ನಮ್ಮ ಮನೆ. ನಮ್ಮ ತಾತನದು. ಹಿಂದೆ ಸಣ್ಣ ವಯಸ್ಸಿನಲ್ಲಿ ಒಮ್ಮೆ ಬಂದಿದ್ದೆ. ತಾತಂದಿರು ತೀರಿಕೊಂಡು ಅವರ ಕರ್ಮಾಂತರ ನಡೆಯುತ್ತಿದ್ದ ಕಾಲ ಅದು. ಮನೆಯಲ್ಲಿ ಆರೆಂಟು ಹಸು ; ನಾಲ್ಕು ಕಪಿಲೆ ಕರೆಯುತ್ತಿದ್ದವು. ತುಂಬಾ ಜನ. ಮಕ್ಕಳ ಆಟ ; ಹಟ, ಚೀರು ಹುಯಿಲು;– ದೊಡ್ಡವರದು ಚಿಕ್ಕವರದು. ಏತೇತಕ್ಕೊ ಸಂತೆಯಂತಿತ್ತು. ಬತ್ತಲ ಮಕ್ಕಳು ಬಟ್ಟೆ ಬಿಸುಟು ರಂಪ ಮಾಡುತ್ತಿರುವರೇ. ಕೊಟ್ಟ ತಿಂಡಿ ಒಲ್ಲದೆ, ಕೈಗೆ ಹಾಕಿದ ತುತ್ತನ್ನು ಎಸೆದು, ನಾನೂ ಏತಕ್ಕೊ ಮುನಿಸಿಕೊಂಡಿದ್ದ ನೆನಪು. ತಾಯಿ ಸಮಾಧಾನ ಮಾಡುತ್ತಿದ್ದರು. ಅಲ್ಲಿಂದ ಪಕ್ಕದ ಮನೆಯ ಕಮ್ಮಸಂದ್ರದ ಮುನಿಯಕ್ಕನ ಮನೆಗೆ ನನ್ನನ್ನು ಒಯ್ದರು. ಅಯ್ಯೋ ನನ್ನಪ್ಪ, ನಮ್ಮ ಎಂಟ್ರಾಮಪ್ಪನ ಮಗನಾ ನೀನು ? ಬಾ ಮಗ, ಎಂದವಳೇ ಆಗತಾನೇ ಹಚ್ಚಗೆ ಕಾಯಿಸಿಟ್ಟಿದ್ದ ಕೆನೆಹಾಲನ್ನು ಕಂಚಿನ ತುಂಬಾ ತಂದುಕೊಟ್ಟ ನೆನಪು ಹಾಯೆನಿಸುತ್ತದೆ. ಅವಳಾರೊ ನಾನ್ಯಾರೊ. ಮಧ್ಯಾಹ್ನ ೩ ಗಂಟೆಗೆ ಊಟ. ೫೦-೬೦ ಜನ ತುಂಬಿದ ಅಂಗಳ. ಪಡಸಾಲೆ. ತುಪ್ಪದ, ಬೆಲ್ಲದ, ತುಪ್ಪದಲ್ಲಿ ಬೆಲ್ಲವನ್ನು ಕರಿದ ವಾಸನೆ. ಮಡಿ, ಸಡಗರ. ಆ ಚಿತ್ರಗಳು ಮರುಕಳಿಸುತ್ತಿವೆ. ಆ ನೆಲ, ಆ ಹರ್ಷದ ಭೂಮಿ ಇಂದು ರುದ್ರಭೂಮಿ. ಅದನ್ನು ಇಂದು ಕಾಣುತ್ತಿದ್ದೇನೆ.

ಈ ಹಾಳನ್ನು ; ನಿಟ್ಟುಸಿರು ತರುವ ಈ ಒಣ ನೆಲವನ್ನು. ಆದರೂ ಮನಸ್ಸು ತುಯ್ಯುತ್ತಿದೆ. ಅಲ್ಲಿಯೇ ಸ್ವಲ್ಪ ಕುಳಿತು ಬಾಗಿ ಯಾರೂ ಕಾಣದಿರುವಾಗ ಅದನ್ನು ಮುದ್ದಿಡಬೇಕೆಂದು. ಬಿಟ್ಟು ಹತ್ತು ಇನ್ನೆಷ್ಟೊ ವರ್ಷದ ಬಳಿಕ ಯೂಲಿಸಿಸ್ ಹಿಂದಿರುಗಿದ ದಿನ ಇಥಾಕಾ ನೆಲವನ್ನು ಮೊದಲು ಹಾಗೆ ಮುತ್ತಿಟ್ಟನಂತೆ. ಅವನದು ಹೆಚ್ಚೇನು ? ನನ್ನದು ಕಡಮೆಯೇನು ? ನಮ್ಮ ಮಣ್ಣಿ ನೆಲದ ಪ್ರೀತಿ ಅರಸಿಗೂ ಒಂದೇ ಆಳಿಗೂ ಒಂದೇ ಅಲ್ಲವೆ ? ಅಮೃತ ಶಿಲೆಯ ಗೋಪುರ ಕಳಶ ಕಟ್ಟಿದರೆ ಹೆಚ್ಚೇನು? ನಾಲ್ಕಡಿ ಆಳ ತೆಗೆದು ಹೂಳಿದರೆ ಕಡಮೆಯೇನು? ಎಲ್ಲರನ್ನು ಮಾಡುವುದೂ ಮಣ್ಣೇ. ಎಲ್ಲರದೂ ಕುಳಿಯೇ.

ದಾನಗಳಿವೆ. ಭೂದಾನಕ್ಕೆ ಸಮನಾದ್ದು ಅನ್ನದಾನ ಒಂದು ಮಾತ್ರ ಎನ್ನಿಸುತ್ತದೆ. ನೆಲವಿಲ್ಲದವರಿಗೆ ನೆಲ ಕೊಟ್ಟರೆ ಬೇಸಾಯ ಮಾಡಿಕೊಳ್ಳುತ್ತಾರೆ ; ಮನೆ ಕಟ್ಟಿಕೊಳ್ಳುತ್ತಾರೆ; ಜೀವ ಉಳಿಯುತ್ತವೆ...... ನೆಲ ಉಳಿಸುತ್ತೆ. ನಿಲ್ಲಿಸುತ್ತದೆ. ವಿನೋಬಾ ಎಷ್ಟೋ ಮಂದಿ ನೆಲವಿಲ್ಲದವರಿಗೆ ಭೂದಾನ ಮಾಡಿಸಿ ದಿಕ್ಕು ತೋರಿಸಿದರು. ನೆಲ ಮಾಡಿಕೊಟ್ಟರು; ಆಸರೆ ಉಂಟಾಯಿತು. ಕೆಲವು ಸಲ ದಾನವಾಗಿ ಕೊಟ್ಟದ್ದು ಒಟ್ಟಿಗೆ ಒಮ್ಮೆಗೇ ಸೊಮ್ಮಾಗಿ ಬಿಡುತ್ತದೆ. ಬೇರೆ ರೀತಿ ಕೊಡಲು ಕಷ್ಟವಾದ್ದನ್ನು ಮಗಳ ಮದುವೆಯಲ್ಲಿ ತಂದೆ ತಾಯಿ ಕನ್ಯಾದಾನ ಸಮಯದಲ್ಲಿ ಧಾರೆಯೆರೆದು ಕೊಡುತ್ತಿದ್ದರು. ಮದುವೆ ಕಾಲಗಳ ಆ ರಂಗೆಲ್ಲ ಇಂದು ಹೋಯಿತು. ಆಗ ಕೊಟ್ಟ ಭೂದಾನ ಶಾಶ್ವತ. ನಿಮಗೆ ಭೂಮಿ ಬೇಕಾದರೆ ಹಾಗೆ ಮಾಡಿಸಿಕೊಳ್ಳಿ. ಕೋರ್ಟಿನ ವ್ಯಾಜ್ಯಕ್ಕೆ ಸಿಕ್ಕಿದುದು ನಿಮ್ಮ ಪಾಲಿಗೆ ಬೀಳದಿದ್ದರಾಯಿತು.

ಬೇರೆ ಯಾವುದನ್ನೂ ಕೊಟ್ಟು ತೃಪ್ತಿಪಡಿಸಲಾಗದಾಗ ಬೇಡಿದವರಿಗೆ ಅನ್ನ ನೀಡಿ ತೃಪ್ತಿಪಡಿಸಬಹುದು. ನೀವು ತಿಂದದ್ದನ್ನು ಇನ್ನೊಬ್ಬನಿಗೆ ಇಡುವುದು ಲಾಗಾಯ್ತಿನಿಂದ ಬಂದ ಧರ್ಮ, ಕರ್ಮ. ನಮ್ಮ ಅನ್ನಕ್ಕೇ ಕಷ್ಟಮಾಡಿ ಸರ್ಕಾರ ಈ ದಾನಕ್ಕೆ ಅಡ್ಡಿ ಬಂದು ಕ್ರಾಂತಿಯನ್ನು ಬಿತ್ತಿ ಬೆಳೆಯುತ್ತಿದೆ. ಅನ್ನದಾನವೊಂದು ನಡೆದರೆ ಕ್ರಾಂತಿಯೂ ಇಲ್ಲ ಭ್ರಾಂತಿಯೂ ಇಲ್ಲ. ಇವರಿಗೆ ಯಾರು ಹೇಳುವವರು! ಕಿಲೋ ಅಕ್ಕಿಗೆ ನಾಲ್ಕು ರೂಪಾಯಿ ಆದರೆ ಕೊಂಡು ತಿನ್ನಿ ಎನ್ನುತ್ತಾರೆ. ನಾವೇನು ಮಾಡೋಣ. ಅನ್ನ ತಿನ್ನಬೇಡಿ ಎನ್ನುತ್ತಾರೆ. ಬೇರೇನು ತಿನ್ನಬೇಕು? ಮಣ್ಣನ್ನೆ? ಅಕ್ಕಿಗೆ ಮಣ್ಣು ಕಲ್ಲು ಬೆರಸಿ ಮಾರಿದರೆ ತಾನೆ ಸರ್ಕಾರ ಏನು ಮಾಡೀತು? ಅವರು ಎಲ್ಲೆಲ್ಲಿಂದಲೊ ತರಿಸಿ ಮಾರುವುದು ಸಾಲದಾದರೆ ನಾವೇನು ಮಾಡುವುದೆನ್ನುತ್ತಾರೆ. ನೆಲವಿದೆ, ಜನವಿದೆ, ತೋಳಲ್ಲಿ ತ್ರಾಣವಿದೆ. ದೇವರು ಕರಸಿದ ಮಳೆ ಬರುತ್ತದೆ. ಅದನ್ನು ಕೆರೆ ಕಟ್ಟಿ ನಿಲ್ಲಿಸಿಕೊಳ್ಳುವುದಾಗುತ್ತದೆ. ನಾವೇ ಮಾಡಬಲ್ಲ ಗೊಬ್ಬರವಿದೆ. ಇವನ್ನು ಹೂಡಿ ಬೆಳೆ ಬೆಳೆದರೆ ಅನ್ನಕ್ಕೆ ಕಷ್ಟವಾಗಬೇಕೆ? ಏನೇನೊ ಗೊಂದಲಕ್ಕೆ, ಗಾಸಿಗೆ ಜನವನ್ನು ಈಡುಮಾಡಿ ತಿನ್ನುವವರಿಗಿಲ್ಲದೆ, ಮಾರುವವರ ಕಬಳ ಮಾಡಿ ಮಾರಿಯನ್ನು ಸರ್ಕಾರ ನಿವಾರಿಸದಾದರೆ ಅನ್ನವನ್ನು ಯಾರಿಗಿಡುವುದು? ಬೇರೆಲ್ಲಿಗೊ ನಾಡು ತಿರಿಪೆಗೆ

ಹೋಗಬೇಕು? ಲಕ್ಷ ಲಕ್ಷ ಎಕರೆ ಭೂಮಿ ತೇರುತ್ತದೆ. ನೀರಾವರಿ ಕಟ್ಟೆಗಳು ಕಟ್ಟಿ ಸಾವಿರಾರು ಎಕರೆಯನ್ನು ಸರ್ಕಾರವೇ ಉಳುಮೆಗೆ ಬೇಸಾಯಕ್ಕೆ ತರಿಸಲಿ. ನೂರುಕೋಟಿ ರೂಪಾಯನ್ನು ಇನ್ನೊಬ್ಬರಿಗೆ ಕೊಡುವುದನ್ನು ಇಲ್ಲಿಯೇ ವೆಚ್ಚಮಾಡಿದರಾಯಿತು. ಪೌರುಷವಿಲ್ಲದ ದೇಶದಲ್ಲಿ ಭೂತಾಯಿ ಏನು ಫಲವನ್ನು ಕೊಟ್ಟಾಳು! ದುಡಿದ ಬೆವರಿಗೆ ಫಲವಿಲ್ಲವಾದೀತೆ? ನಮ್ಮ ಮಣ್ಣು ವಸುಂಧರೆ. ನಮ್ಮ ನೆಲ ಅನ್ನಪೂರ್ಣೆ. ಆ ಅರಿವು ಅಳಿಯದಿರಲಿ. ಆದರೆ ಭೂಮಿಯ ನಿಮ್ಮುಸಿರು ಆಳುವವರಿಗೆ ಆಳುವವರಿಗೆ ಕೇಳಿಸದು.

ರಸ್ತೆಮಾಡಿ ಕಲ್ಲರೆ ಸುರಿಯಿತು. ಬುಡದಲ್ಲಿ, ಪಕ್ಕದಲ್ಲಿ ಮೃದುವಾದ ಮಣ್ಣು ಬಿತ್ತು. ಹೊಚ್ಚ ಹೊಸ ಮಣ್ಣು. ಒಂದಕ್ಕೆ ನೂರು ಕೊಡುವ ನಂದನ ಕಟ್ಟುತ್ತದೆ. ಕಲಸಿ ಇಟ್ಟಿಗೆ ಮಾಡಿ, ಮನೆ, ಮಳಿಗೆ, ದೇವಾಲಯ ಕಟ್ಟುತ್ತವೆ. ಚಿತ್ತರದ ಕೆಲಸಕ್ಕೆ ಒದಗುತ್ತದೆ! ಎಷ್ಟು ಎರೆಯಿಂದ ಎಷ್ಟು ವಿಗ್ರಹ ಮಾಡಬಹುದು? ಹೇಗೆ ತೀಡಿದರೆ ಹಾಗೆ ತಿರುಗಿ ಮೊಗೆ, ಹರವಿ, ಹಂಡೆ ಆದೀತು. ಯಾವ ಆಕೃತಿಗೆಂದರೆ ಅದಕ್ಕೆ ಎಡೆಗೊಟ್ಟು ಶಾಶ್ವತ ಸೌಂದರ್ಯವಾಗುವ ಮೂರ್ತಿಶಿಲ್ಪವೇಳುತ್ತದೆ. ಟೀ ಸೆಟ್ ಮಣ್ಣಿನದೇ ಅಲ್ಲವೆ ? ವಿದ್ಯುತ್ತಿನ ತಂತಿಗಳನ್ನು ಬಿಗಿವ ಬಟ್ಟಲು ಮಣ್ಣೇ. ನಿಮ್ಮ ನಮ್ಮ ತಲೆ ಮಣ್ಣೇ ಅಲ್ಲವೇ ಎನ್ನಬೇಡಿ. ಮಣ್ಣೆಂದರೆ ಮಣ್ಣು, ಬಣ್ಣವೆಂದರೆ ಬಣ್ಣ, ಕಲ್ಪ ಆಗಬಲ್ಲದು. ಹದವಾಗಿ ಸೋಸಿ ಬಳಿದರೆ ಯಾವ ಆಂಟಿಫ್ಲೋಜಿಸ್ಟಾನ್ ಕೂಡ ಅದರ ರಂಗಳಿಕೆಗೆ ಸಮನಲ್ಲ. ಶ್ವಾಸಕೋಶಕ್ಕೆ ಬಲಕೊಟ್ಟು ಕಾಯಿಲೆಯನ್ನು ವಾಸಿಮಾಡಬಲ್ಲುದು ಎಂದರು ಗಾಂಧೀಜೀ. ಮಣ್ಣಿಂದ ನೆಲ, ನೆಲಗಟ್ಟು. ಇದು ಧಾತ್ರಿ. ಇದು ಸ್ಥಿರಾ. ಇದಿಲ್ಲದೆ ಲೋಕಕ್ಕೆ ಯಾವ ನೆಲೆಯೂ ಇಲ್ಲ. ಸಾರವೂ ಇಲ್ಲ ; ಗತಿಯೂ ಇಲ್ಲ. ಇಹ ಇದೇ. ಆದ್ದರಿಂದ ಪರಕ್ಕೆ ಮೂಲವೂ ಇದೇ. ತಾಯಿ ನೆಲಕ್ಕಿಂತ ಪವಿತ್ರವಿನ್ನಾವುದಿದೆ ? ನಿಮಗಾವುದು ಬೇಕು? ಅದೆಲ್ಲ ಇದರ ರೂಪಾಂತರವೇ. ದೇಹ, ಚೆಲುವು, ಮಣ್ಣಿಂದಾದವೇ. ಆಹಾರ ಅದರಿಂದ ಆದ್ದು. ವಸ್ತ್ರ ಅದು ಬೆಳೆದು ಕೊಟ್ಟದ್ದು. ಮನೆಯ ದಿಮ್ಮಿ, ನಿಮ್ಮೂರ ದೇವರ ರಥದ ಚಕ್ರ ಅದು ಒದಗಿಸಿದ್ದು. ದೋಣಿ, ಪೀಠ, ಆಸನ, ಅದು ಒದಗಿಸಿದುದು. ಆಯುಧ ಸಜ್ಜು ಅದು ಬಡಿದು ಆದುದು. ವಸ್ತು ಅದರಿಂದ ನಿರ್ಮಾಣ. ಕಲ್ಲು, ಲೋಹ ಎಲ್ಲ ಅದರ ರೂಪಾಂತರ. ಅದಿಲ್ಲದೆ ಯಾವುದಕ್ಕೆ ಏನಿದೆ ? ಜನಕ್ಕೆ ಬರಿಯ ಭ್ರಾಂತಿ. ನಾಲ್ಕು ದಿನ ಮೆರೆಯುತ್ತಾರೆ ಅಹಂಕಾರದಲ್ಲಿ; ಪ್ರತಿಷ್ಠೆಯಲ್ಲಿ. ನಮ್ಮ ಕೈ ಮನಸ್ಸು ನಡೆಯುತ್ತವೆಂದು. ಏನು 'ಕಡಿ' ದಾರು! ಸೊಕ್ಕೆಂಬುದು ಎರಡು ದಿನ ತಿಳಿಯದು. ದಬ್ಬಾಳಿಕೆ ನಡಸಿಯಾರು. ಎಷ್ಟು ದಿನ ನಡದೀತು. ದೇವರೆಷ್ಟು ದಿನ ನಡಸಿಯಾನು. ಗರ್ವಚ್ಯುತರಾಗಿ ಅವರ ಅಹಂಕಾರ ಮಣ್ಣು ಮುಕ್ಕೀತು. ಆದರೆ ನೋಡಿ, ಇದು ನಿಜ: ಮಣ್ಣನ್ನು ನಂಬಿದರೆ ಚ್ಯುತಿಯೆಂಬುದಿಲ್ಲ. ಅದನ್ನು ಹಳಿದರೆ, ಹೀನಾಯ ಮಾಡಿದರೆ ನಿಮಗೆ ಬರುವುದೇನು, ಮಣ್ಣು!

# ಸಾವು

ಸಾವು ನೋವು; ಹುಟ್ಟು ಸಂತೋಷ; ಸಾಮಾನ್ಯವಾಗಿ ಇದಕ್ಕೆ ವಿಪರೀತ ಎಲ್ಲೋ ಕೆಲವರಿಗೆ. ಕಾರಣ ಇಷ್ಟೇ: ಹುಟ್ಟುವುದು ಎಂದರೆ ದುಃಖ, ಕಷ್ಟ ಅನುಭವಿಸಬೇಕಾಗುತ್ತದೆ. ಸಾವು ಎಲ್ಲದರಿಂದಲೂ ಬಿಡುಗಡೆ ತರುತ್ತದೆ ಅಥವಾ ಸ್ವಾಮಿಯ ಪಾದಕ್ಕೆ ಸೇರಿಸುತ್ತದೆ ಎಂದು. ನೋವೊ ಸಂತೋಷವೊ ನಿಶ್ಚಯವಲ್ಲ. ಸಾವು ಅನಿವಾರ್ಯ. ಎಲ್ಲಕ್ಕೂ ಎಲ್ಲರಿಗೂ ಬರುತ್ತದೆ. ಬೇಗಲೊ ತಡವಾಗಿಯೊ : ಇನ್ನಾವುದೂ ಅಷ್ಟು ನಿಶ್ಚಯವಲ್ಲ. ಸಣ್ಣದಕ್ಕೂ ಅಷ್ಟೇ ದೊಡ್ಡದಕ್ಕೂ ಅಷ್ಟೇ. ಪ್ರಪಂಚಕ್ಕೆ ಸಾವುಂಟೆ ಎಂದು ಕೇಳಬೇಡಿ. ಯಾರಿಗಾಗದು? ಆದರೆ ಅದಿನ್ನೂ ಬಹು ದೂರವಿದೆ. ಅದರ ರೀತಿ ಬೇರೆಯಾಗಬಹುದು. ಸದ್ಯಕ್ಕೆ ಅದರ ಚಿಂತೆ ಬೇಡ. ಹುಟ್ಟಿದುದೆಲ್ಲ ಸಾಯಲೇಬೇಕು. ತಾನು ಹುಟ್ಟಲೇ ಬೇಕಿರಲಿಲ್ಲ. ಹುಟ್ಟಿದ ಮೇಲೆ ಒಂದಲ್ಲ ಒಂದು ದಿನ ಸಾಯಲೇಬೇಕು.... ಸಾಯುತ್ತಾನೆ. ನಾನು ಈಗ ಮನುಷ್ಯನ ಸಾವನ್ನು ಕುರಿತು ಮಾತನಾಡುತ್ತಿರುವುದು. ಸೃಷ್ಟಿಯಲ್ಲಿ ಇಂದು ಉಳಿದುದೆಲ್ಲಕ್ಕಿಂತ ಮನುಷ್ಯನಿಗೆ ಪ್ರಾಧಾನ್ಯ; ಎರಡನೆಯದರ ಎಣಿಕೆಯಿಲ್ಲ. ಎಲ್ಲವೂ ಅವನಿಗೆ ಪ್ರಯೋಜನವಾಗಬೇಕು; ಇಲ್ಲವಾದರೆ ಅದನ್ನು ನಾಶಮಾಡುತ್ತಾನೆ ಮನುಷ್ಯ. ದೌಲತ್ ಅವನದು. ಆದ್ದರಿಂದ.

ಎಷ್ಟೆಷ್ಟೊ ಪ್ರಯತ್ನಗಳು ನಡೆದಿವೆ. ಸಾವನ್ನು ಮುಂದೂಡಬೇಕೆಂದು. ಕೆಲವು ಪ್ರಯತ್ನಗಳು ನೆರವೇರಬಹುದು. ನೂರು ಬಾಳಬೇಕು, ೧೨೫ ಇದ್ದೇನು, ೩೦೦ ಆದರೆ ಒಳಿತು.... ಈ ಮಾತುಗಳು ಜನದ ಮನದಲ್ಲಿ ಬಹುಕಾಲದಿಂದ ಇವೆ. ಚಿರಂಜೀವಿಯಾಗು ಎಂದು ಹರಸಿದಾಗ ಬಹುಕಾಲ ಬಾಳು ಎಂದು ಅರ್ಥವೇ ಹೊರತು ಗೂಟಬಡಿದುಕೊಂಡು ಯಾವಾಗಲೂ ಬದುಕಿಯೇ ಇರು, ಸಾಯಲೇಬೇಡ ಎಂದಲ್ಲ. ಗೂಟ ತಾನೇ ಎಂದಿಗೂ ಇದ್ದಂತೆಯೇ ಇರುತ್ತದೆಯೆ? ಏನು ಮಾತು ಜನದ್ದು ! ಅಂಥವರು ಯಾರೊ ಇದ್ದರಂತೆ–ಅಶ್ವತ್ಥಾಮನಂಥವರು–ಅದು ಕತೆ. ಇನ್ನು ಕೆಲವರು ಇಚ್ಛಾಮರಣಿಗಳು – ಭೀಷ್ಮನಂತೆ. ಅವರ ಅವರ ಇಚ್ಛೆ ಬಂದಾಗ ಸಾಯಬಹುದು. ಅಲ್ಲಿಯೂ ಮರಣದ ಮಾತಂತೂ ಇತ್ತು. ಇಚ್ಛೆಗೆ ಲಗ್ನವಾಗಿ; ಒಳಪಟ್ಟು ಎಂಬುದು ಮಾತ್ರ ವಿಶೇಷ. ಆದರೂ ಏಕೊ ಏನೊ ಲೋಕದಲ್ಲಿ ಬೇಗ ಸಾವು ಬರಲೆಂದು ಬಯಸುವ ಜನ ಕಡಮೆ. ನೋವಿರುವಾಗ, ಅಪಮಾನ ಬಂದಾಗ ಹಾಗೆಂದುಕೊಳ್ಳ ಬಹುದು – ಇರುವ ಕಷ್ಟವನ್ನು ಸಹಿಸಲಾರದೆ. ಕಷ್ಟದಿಂದ ಬಿಡುಗಡೆಯಾದಾಗ ಮನಸ್ಸಿಗೆ ನೆಮ್ಮದಿ. ಹೊರ ಅಡ್ಡಿ ಆತಂಕಗಳಿಲ್ಲದಾಗ ಸಾವನ್ನು ಬಯಸುವವರಾರೂ ಇಲ್ಲ. ಇದ್ದ ಹಾಗೆಯೇ ಇರಬೇಕೆನ್ನಿಸುತ್ತದೆ. ಯೌವನ ಬೇಕು, ಸುಖಸಲ್ಲಾಪ ಬೇಕು;

ಮನೆ, ಮಡದಿ ಬೇಕು; ಐಶ್ವರ್ಯ ಬೇಕು; ಪ್ರತಿಷ್ಠೆ ಬೇಕು-ಎಂಬುದು ಸರ್ವಸಾಮಾನ್ಯ ನಿಯಮ.

ಯೇ ಯೇ ಕಾಮಾ ದುರ್ಲಭಾ ಮರ್ತ್ಯಲೋಕೇ
ಸರ್ವಾನ್ ಕಾಮಾಂಶ್ಛಂದತಃ ಪ್ರಾರ್ಥಯಸ್ವ
ಇಮಾ ರಾಮಾಃ ಸರಥಾಃ ಸತೂರ್ಯಾ ನಹೀದೃಶಾ
ಲಂಭನೀಯಾ ಮನುಷ್ಯೈಃ
ಆಭಿರ್ಮತ್ಪ್ರತ್ತಾಭಿಃ ಪರಿಚಾರಯಸ್ವ ನಚಿಕೇತೋ
ಮರಣಂ ಮಾನುಪ್ರಾಕ್ಷೀಃ

ಎಂದು ಯಮನು ಆಸೆ ತೋರಿಸಿದಾಗ ಅರಿಯದ ವಟು ನಚಿಕೇತನೊಬ್ಬನು ಅದನ್ನೆಲ್ಲ 'ಶ್ವೋಽಭಾವಾ' ಎಂದು ಉತ್ತರಕೊಟ್ಟು

ನ ವಿತ್ತೇನ ತರ್ಪಣೀಯೋ ಮನುಷ್ಯೋ

ಇತ್ಯಾದಿ ಎಂದುಬಿಟ್ಟನು.

ಸಾಮಾನ್ಯವಾಗಿ ಯಾವ ಯಾವುದು ಹರ್ಷ ತರುತ್ತದೆಯೊ ಅದೆಲ್ಲ ಬೇಕೆಂಬ ಬಯಕೆ ಒಡ್ಡುವಾಗ ಸಾವಿನ ಚಿಂತೆ ಅಸುಖ, ಅಶುಭ ಹೌದು. ಶುಭಾಶುಭಗಳ ಯೋಚನೆ ಮಾಡುವಾಗ ಕೂಡ ಸಾವಿನ ಮಾತನ್ನು ಎತ್ತಬಾರದು. ಒಳ್ಳೆಯದನ್ನು ಕೊಳ್ಳಬೇಕೆಂದಾಗ ಯಾರಾದರೂ ಸತ್ತ ಸುದ್ದಿ ಬಂದರೆ ನನಗೆ ಆಗಿ ಬರುವ ಹಾಗಿಲ್ಲ, ಪ್ರಸ್ಥ ಪ್ರಯೋಜನಗಳನ್ನು ಮುಂದೆ ಹಾಕೋಣ ಎಂಬುದು ವಾಡಿಕೆ. ಯಾವ ನೆಪವೂ ಆಗಬಹುದಿತ್ತು-ಇಲ್ಲಿಗೆ ಸಾವು ಅಡ್ಡ ಬಂದಿತು.... ನಾನಾಡುತ್ತಿರುವುದು ಸಂಸಾರಿಗಳ ಮಾತನ್ನು.

ಎಲ್ಲವೂ ಸಾಯುವುದು ಎಂದಾಗ, ಸಾವಿಗೆ ಸಮೀಪಿಸುವಾಗ, ಮುಪ್ಪು ಬರುತ್ತದೆ. ಶಕ್ತಿ ಸಡಿಲವಾಗಿ, ರಕ್ತ ತಿಳಿಯಾಗಿ, ತಂಪಾಗಿ, ಚರ್ಮ ಸುಕ್ಕಾಗಿ, ಹಲ್ಲು ಬಿದ್ದು, ಕಣ್ಣ ನೋಟ ಕದಡಿ, ನಡೆ ನಿಲವು ಸ್ತಿಮಿತ ಸ್ಥೈರ್ಯ ಕಳೆದುಕೊಂಡು, ದಿನದ ಊಟ ಅಜೀರ್ಣವಾಗಿಸಿ, ಸಾವಿನತ್ತ ಸರಿಯುವ ಸ್ಥಿತಿ ಅದು. ಮುಪ್ಪೂ ಜನಕ್ಕೆ ಬೇಡ. ಸಾವು, ಮುಪ್ಪು, ರೋಗ ಇಂಥವು ಮನುಷ್ಯನಿಗೆ ಪೀಡೆಗಳು. ಇವುಗಳಿಂದ ತಪ್ಪಿಸಿಕೊಳ್ಳಲಾಗದೆ? ಇದಕ್ಕೆ ಉಪಾಯ ಯಾವುದು? ಇವು ದುಃಖ – ಈ ದುಃಖಗಳಿಂದ ಬಿಡುಗಡೆ ಹೇಗೆ ಎಂಬುದರ ಚಿಂತೆಯಲ್ಲವೆ ಸಿದ್ಧಾರ್ಥನನ್ನು ಬುದ್ಧನನ್ನಾಗಿ ಮಾಡಿದುದು? ಅಜರ, ಅಮರ ಎಂಬ ಮಾತುಗಳಿಗೆ ವ್ಯವಹಾರ ಬಂದುದೂ ಈ ಮುಪ್ಪು ಸಾವುಗಳ ಕಾಟವಿಲ್ಲದ ಒಂದು ಸ್ಥಿತಿಯನ್ನು ಕಂಡು. ಅಜರ, ಅಮರ ಎನ್ನುವುದು ನಾವು ದೇವತೆಗಳಿಗೆ ಕೊಟ್ಟ ಹೆಸರು. ಅವರಿಗೆ ಸಾವಿಲ್ಲ, ನೋವಿಲ್ಲ, ಮುಪ್ಪಿಲ್ಲ; ನಿತ್ಯ ಯೌವನ, ಹಸಿವಿಲ್ಲ; ಬಹುಶಃ ನಿದ್ರೆಯಿಲ್ಲ. ಕಣ್ಣು ಮುಚ್ಚುವ ಹಾಗಿಲ್ಲ. ಏನಿದೆ? ಮಾಡಲು ಕೆಲಸ ಕೂಡ ಇಲ್ಲ.

ಅವರಲ್ಲಿ ಅಮೃತತತ್ವ ಸಿದ್ಧಿಸಿರುವುದು ನಿರಂತರವಾಗಿ ಎಲ್ಲರನ್ನೂ ನೋಡುತ್ತಿರುವುದಕ್ಕೆ; ನಿರಂತರ ಯೌವನದ ಅನುಭವಕ್ಕಾಗಿ; ನಿತ್ಯಭೋಗ ಅವರದು. ಸಾವಿಲ್ಲದ ಅನಂತ ಭೋಗವನ್ನು ಅನುಭವಿಸುವುದು ಸಂತೋಷವೊ ಅಲ್ಲವೊ ಅವರಾರೂ ಬಂದು ನಮಗೆ ಹೇಳುವುದಿಲ್ಲ. ಅವರಿಗೆ ಇನ್ನೊಂದು ಸ್ಥಿತಿ ಗೊತ್ತಿಲ್ಲವಾಗಿ ಏನು ಹೇಳಿಯಾರು? ಮನುಷ್ಯರಂಥ ಮನಸ್ಸು ದೇವರುಗಳಿಗೆ ಇದ್ದರೆ ಅದು ಬೇಸರದ ಸ್ಥಿತಿ. ಬೇಕಾದುದೆಲ್ಲವೂ ಬೇಕಾದಂತೆ ದೊರೆವಾಗ ಅವಕ್ಕೆ ಬೆಲೆಯೆಲ್ಲಿ ? ಏಕೆ ಬದುಕಬೇಕು ? ಬೇಸರವಲ್ಲವೆ? An Eternity of Boredom, ಥೂ ಒಲ್ಲೆ ! ಎಂದು ಗ್ರೀಕ್ ದೇವತೆಗಳಲ್ಲಿ ಅಪಾಲೊ ಇಂದ ಆಡಿಸಿದ ಲೇಖಕರುಂಟು. ಸ್ವರ್ಗದಲ್ಲಿ ಎಲ್ಲ ಸಿಕ್ಕಿದರೂ Aerated water ಸಿಕ್ಕದ ಲೋಪಕ್ಕಾಗಿ ಅಪಾಲೊ ದೇವತೆಗೆ ತುಂಬಾ ಬೇಸರವಾಯಿತಂತೆ. ಸ್ವರ್ಗದ ನಿರ್ಮಾಣವಾಗುವಾಗ ಅದರ ನಿರ್ಮಾಣ ಆಗಿರಲಿಲ್ಲ ! ಅಥವಾ ನಮ್ಮ ದೇವತೆಗಳ ಹಾಗೆ ನೆನಸಿದುದನ್ನು ನೆನಸಿದಾಕ್ಷಣ ನಿರ್ಮಾಣ ಮಾಡಿಕೊಳ್ಳಬಲ್ಲ ಸತ್ಯ ಸಂಕಲ್ಪರಲ್ಲದಿರಬಹುದು ಅವರೆಲ್ಲ. ಅಥವಾ, ಅಂಥ ದೇವಶಕ್ತಿಯನ್ನು ಬಳಸಬೇಕೆಂದು ಅಪಾಲೊಗೆ ಆ ಸಮಯ ತೋಚಿತೊ ಇಲ್ಲವೊ. ಅಮೃತತತ್ವದ ಆಸೆ ಲೋಕ ಸಾಮಾನ್ಯರಿಗೆ. ಲೋಕ ಮರ್ತ್ಯವೆಂದು ಅಮೃತತತ್ವದ ಸಿದ್ಧಿಗೆ ಹಾತೊರೆಯುವ ವೇದಾಂತಿಗಳಿಗೆ ಬೇಕೇ ಹೊರತು ಮೃತಿಯೇ ಬೇಡ ಎಂದು ಹಟ ಹಿಡಿಯುವ ಜನ ಬಹುಶಃ ಕಡಮೆ....

ಯೋಚನೆ ಮಾಡಿ; ಹುಟ್ಟಿದ ಯಾವುದೂ ಸಾಯದೆಯೇ ಇದ್ದರೆ ಲೋಕದ ಗತಿ ಏನು? ಹುಟ್ಟುವುದೇ ಬೇಡ; ಹುಟ್ಟುವವರ ಸಂಖ್ಯೆ ಕಡಮೆ ಮಾಡಿ ಎನ್ನುವ ಜನಕ್ಕೆ ಇವೆಲ್ಲ ಎಂಥ ಮಾತುಗಳು? ಹುಟ್ಟಿದ ಯಾವುದಕ್ಕೂ ಮುಪ್ಪು, ಸಾವು ಬಾರದಾದರೆ, ಯೌವನ ಸುಖ ಸಂತುಷ್ಟಿ ಇರುವುದಾದರೆ ಬದುಕಿನಲ್ಲಿ ಯಾವ ಬಯಕೆ ಬಂದೀತು? ಬಯಕೆ ಇಲ್ಲದೆ ಚುರುಕಿಲ್ಲ. ಚುರುಕಿಲ್ಲದೆ ಕ್ರಿಯೆಯಿಲ್ಲ. ನಿಷ್ಕ್ರಿಯೆ ಜಡಸ್ಥಿತಿ. ಇದು ಯಾವ ಬದುಕು ? ಅಲ್ಲದೆಯೊ : ಅಷ್ಟು ಜನಕ್ಕೆ ಸ್ಥಳವೆಲ್ಲಿ ತರಬೇಕು ? ಇರುವವರೆಲ್ಲ ಬದುಕಿಯೇ ಇದ್ದರೆ ಲೋಕದಲ್ಲಿ ಕ್ರಾಂತಿ ಉಂಟಾದೀತು. ತಾತ ಸತ್ತರೆ ಮಾತ್ರ ಅಪ್ಪನಿಗೆ ಯಜಮಾನಿಕೆ; ಅವನು ಸತ್ತರೆ ತಾನೆ ಮಗನಿಗೆ? ಅವನು ಬಿಟ್ಟರೆ ಈತನಿಗೆ ಆಧಿಪತ್ಯ! ಒಡೆತನ ಯಾಜಮಾನ್ಯ ಸಂಪತ್ತು ಪದವಿಗಳ ಭೋಗ ಒಬ್ಬರ ತರುವಾಯ ಇನ್ನೊಬ್ಬರಿಗೆ ಎಂಬ ಬಳಿ ನಿಂತರೆ ಚಿಕ್ಕವರಿಗೇನಿದೆ ? ಬಹಳ ವಿಚಿತ್ರವಾಗುತ್ತದೆ ಜೀವನ. ಅಧಿಕಾರ ಸ್ಥಾಪನೆಗೆ ಕೋಟಲೆಗಳು ಹುಟ್ಟಬಹುದು. ಬಹುದೇನು? ಹುಟ್ಟಲೇ ಹುಟ್ಟುತ್ತವೆ. ಇಂದು ನಡೆಯುತ್ತಿರುವ ಎಲ್ಲ ಪದ್ಧತಿಗಳೂ ವ್ಯವಹಾರಗಳೂ ಬೇರ್ಪಡಬೇಕಾಗುತ್ತದೆ. ಎಷ್ಟು ದಿನ ಈ ಹಾಳು ಮುದುಕ ಬದುಕಿದ್ದಾನೆ, ಈ ಮುದುಕಿ ಗುಂಡು ಕಲ್ಲಂತೆ ಬದುಕಿದ್ದಾಳೆ? ನನ್ನ ಗಡ್ಡ ನರೆಯಿತು, ಹಲ್ಲು ಬೀಳಲಾರಂಭಿಸಿತು, ಹೆಂಡತಿ ಆಕ್ಷೇಪಣೆ ಮಾಡುತ್ತಿದ್ದಾಳೆ; ಮಕ್ಕಳು ಮೊಮ್ಮಕ್ಕಳು ಬೆಳೆದಿದ್ದಾರೆ. ಅಪಹಾಸ್ಯ ಮಾಡುತ್ತಾರೆ ; ನನ್ನ ಮೊಮ್ಮಕ್ಕಳ ಎದುರಿಗೆ ಈ ಅಪ್ಪ

ನನ್ನನ್ನು 'ಮಗು' ಎಂದು ಕರೆಯುತ್ತಾನೆ, ನನಗೆ ರಾಜ್ಯ ಇನ್ನೆಂದು? ಎಂದು ಎಡ್ವರ್ಡ್ ವಿಕ್ಟೋರಿಯಾ ಮೇಲೆ ಆಕ್ರೋಶ ಮಾಡಿದನಂತೆ. ಇನ್ನೂ ಏನೇನೊ ಮಾಡಿದನಂತೆ ; ಸಹಜ. ಒಂದು ಕೋತಿ ಹಾಗೆ ಲಡಾಯಿ ಮಾಡಿ ಯಜಮಾನಿಕೆ ಸಂಪಾದಿಸಿಕೊಳ್ಳುತ್ತದೆ, ಮನುಷ್ಯ ಸಂಪಾದಿಸಬೇಡವೆ? ವಯಸ್ಸಾದಂತೆಲ್ಲ ದೇಹಶಕ್ತಿ ಮನಃಶಕ್ತಿ ಕಡಮೆಯಾಗುತ್ತಿರುವಾಗ ತಮ್ಮ ಕಾಗದಪತ್ರಗಳನ್ನು, ಕಬ್ಬಿಣದ ಪೆಟ್ಟಿಗೆಯ ಬೀಗದ ಕೈಯನ್ನು, ಲೇವಾದೇವಿಯ ಗುಟ್ಟುಗಳನ್ನು ಮಕ್ಕಳಿಗೊ ಉತ್ತರಾಧಿಕಾರಿಗಳಿಗೊ ಕೊಟ್ಟು ಬಿಟ್ಟು ಯಾತ್ರೆ ತೀರ್ಥ ಆರಸಿ ಹೋಗುವ ವಾಡಿಕೆ ನಿಜವಾಗಿ ತುಂಬಾ ಆರೋಗ್ಯಕರ. ಸತ್ತು ಹೋಗುವುದು ಇನ್ನೂ ಹೆಚ್ಚು ಆರೋಗ್ಯಕರ. ಹಳತಾದ್ದು, ದುರ್ಬಲವಾದ್ದು, ಶಿಥಿಲವಾದ್ದು ಹೆಚ್ಚು ದಿನ ಬದುಕಿ ಏನು ಪ್ರಯೋಜನ? ಅಗಿದು ಕೋಡಬಳೆ ತಿನ್ನಲಾಗುವುದಿಲ್ಲ, ನಿಶ್ಚಿಂತವಾಗಿ ಹಿದುಕುಬೇಳೆ ಕೂಟು, ಈರುಳ್ಳಿ ಪಕೋಡ ತಿಂದರೆ ಏನೊ ಹೇಗೊ ಎಂಬ ಭಯ. ಅವರ ಕಡೆ ಇವರ ಕಡೆ ನೋಡುವ ಹಾಗಿಲ್ಲ. ಆ ಸ್ಥಿತಿಗಿಂತ ಇಲ್ಲದಾಗುವುದು ಮೇಲು. ಹಳತರ ಅಧಿಕಾರ ಹೋಗಿ ಹೊಸತರದು ಬರುವುದು ಲೋಕವನ್ನು ಹೊಸಹೊಸತಾಗಿ ಮಾಡುವ ಪ್ರಕಾರ. ಗಿಡ ಮರಗಳಲ್ಲಿ ಇದು ಕಾಣುತ್ತದೆ. ತೆಂಗು, ಅಡಕೆ ನೋಡಿ. ವರ್ಷ ವರ್ಷಕ್ಕೂ ಮಡಲನ್ನು ಕಳಚಿ ತಾಳಿಗೆ ಒಂದು ಉಂಗುರ ತೊಡಿಸಿ ಗಿಡ ಮೇಲೇಳುತ್ತದೆ. ಹೊಸ ಗರಿ ಹುಟ್ಟಿಕೊಳ್ಳುತ್ತದೆ. ಹಾವು ಪರೆ ಕಳಚುತ್ತದೆ. ತಾಯ ಹೊಟ್ಟೆಯಲ್ಲಿ ಇಷ್ಟು ಮಕ್ಕಳಾದುವೆಂದು ರೇಖನ ಸಿಕ್ಕುತ್ತದೆಯಂತೆ. ಆಕೆಯ ಗರ್ಭಕೋಶದಲ್ಲಿ ಇದು ಒಂದು ಗೊತ್ತಾದ ಗಣಿತಿ. ಪೂರ್ಣಫಲಶಕ್ತಿ ಮುಗಿದಾಗ ಅದಕ್ಕೆ ಮುಪ್ಪು. ಸಾವಿಗೆ ಸಿದ್ಧವಾಗಬೇಕು ಅದು ಎಂಬಂತೆ ಲೋಕಜೀವನ ನಡೆದಿದೆ. ರೈಲು ಬಿಡುವ ಮುಂಚೆ ಒಂದೊ ಎರಡೊ ಬೆಲ್ ಹೊಡೆದ ಹಾಗೆ ನೋಟೀಸ್, ಮುನ್ನೆಚ್ಚರಿಕೆ. ನಿಜವಾಗಿ ಸಾವೆಂಬುದನ್ನು ನಿರ್ಮಾಣಮಾಡಿ ಸೃಷ್ಟಿಶಕ್ತಿ ಹೊಸತಿನ ಹುಟ್ಟಿಗೆ, ಆಳಿಕೆಗೆ, ಆರೋಗ್ಯಕ್ಕೆ, ಪ್ರಚಾರಕ್ಕೆ, ಆಧಿಪತ್ಯಗಳಿಗೆ ಅವಕಾಶ ಮಾಡಿಕೊಟ್ಟಿರಬೇಕು. ಸಾವು ಹೀಗೆ ಪ್ರಕೃತಿಯ ಒಂದು ವಿಧಾನ ಕ್ರಿಯೆ. ಹಳತು ಹೋಗಲಿ, ಹೊಸತು ಬರಲಿ ಎಂಬುದು ಉದ್ದೇಶ. ಸಾಯುವುದು ಹುಟ್ಟುವುದರ ಸಲುವಾಗಿ ಎಂದ ಹಾಗಾಯಿತು. ಇದು ತಲೆಕೆಳಗು ಮಾತು ಅಂತೀರ? Make Room ! ಸ್ಥಳ ಬಿಟ್ಟುಕೊಡಿ.

ಇರುವವರೆಗೂ ಸುಖವಾಗಿ, ಇನ್ನೊಬ್ಬರಿಗೆ ಅಧೀನರಾಗದೆ, ದೈನ್ಯವಿಲ್ಲದೆ ಬದುಕಿರಬೇಕು, ಅನಾಯಾಸವಾಗಿ ಸಾಯಬೇಕು ಎಂಬುದು ಒಂದು ಪ್ರಾರ್ಥನೆ- ಸರಿಯೇ. ಬದುಕು ಸಾವುಗಳ ನಿಯಂತ್ರಣಕ್ಕೆ ಸಂಬಂಧಿಸಿದ ಒಂದು ಸೂತ್ರ. ಅಭಿಲಾಷೆ ಅದು. ಎಲ್ಲ ಆಸೆಗಳಂತೆ ಇದು, ಇಂಗ್ಲಿಷಿನಲ್ಲಿ ಹೇಳಿದಂತೆ, ಭಿಕಾರಿಯ ಬಯಕೆ ಕುದುರೆ. ಫಲಿಸುವುದು ಎಷ್ಟು ಮಂದಿಗೆ? ಮರಣ ಸುಲಭವಾಗಿ ಬರುವುದಿಲ್ಲ. ನಾಲಿಗೆ ಕಿತ್ತುಕೊಂಡರೂ ಕೆಲವೇಳೆ ಸಾಯುವುದಿಲ್ಲ. ಕಿತ್ತು ನೋಡಿ, ಪ್ರಯೋಗಪರೀಕ್ಷೆಗಾಗಿ. ಎಷ್ಟೊ ಬಡತನಕ್ಕೂ ತಬ್ಬಲಿತನಕ್ಕೂ ದೀನತೆಗೂ ಬದುಕು ಈಡಾಗಿರುತ್ತದೆ. ಇವುಗಳಿಂದ

ತಪ್ಪಿಸಿಕೊಳ್ಳುವುದು ಸಾಧಾರಣವಾಗಿ ಅಶಕ್ಯವಾಗಿರುವುದೇ ರೂಢಿ. ಆದುದರಿಂದ ಈ ಪ್ರಾರ್ಥನೆ. ಏಕೆ ಚಿಂತೆಯೊ. ನಾವಂತೂ ಹುಟ್ಟಬೇಕೆಂದೇ ಬಯಸಿದವರಲ್ಲ. ಇಂಥಲ್ಲಿ, ಹೀಗೆ ಹುಟ್ಟಬೇಕೆಂದೂ ಬೇಡಿಕೊಂಡವರಲ್ಲ. ಖಂಡಿತವಾಗಿ ಜನ್ಮಾಂತರ ಕರ್ಮಪಾಕಗಳ ವಾದವನ್ನು ಒಪ್ಪದು ಎಲ್ಲ ಲೋಕ. ಇನ್ನಾರೂ ನಮ್ಮಂತೆ ಅದನ್ನು ಪುರಸ್ಕರಿಸರು. ಅವರ ವಾದಗಳು ಸರಿಯೊ ತಪ್ಪೊ ನಮ್ಮವೇ ಸರಿಯೊ ನಾನರಿಯೆ. ಹೀಗೆಂದರೆ ನಮ್ಮ ಧರ್ಮ ನನಗೆ ಅರಿತಿಲ್ಲ, ಅರಗಿಲ್ಲ ಎಂದು ವಿದ್ವಾಂಸರು ಹಂಗಿಸಿಯಾರು. ಹಂಗಿಸಲಿ. ನಡೆಯುವ ಈ ಒಂದು ಹುಟ್ಟು ನಿಶ್ಚಯ. ಮರಣದ ತರುವಾಯದ ಯಾವುದಕ್ಕೂ ಸಾಕ್ಷಿ ಪ್ರಮಾಣ ಇಲ್ಲ ; ಸ್ಥಾಪಕ ಪುರಾವೆಗಳಿಲ್ಲ. ಅದಕ್ಕೆ ಮುಂಚೆ ಏನೊ, ಆಮೇಲೆ ಹೇಗೊ ನಾವರಿಯೆವು. ನಾಳೆ ಏನಾಗುತ್ತೇವೆಂಬುದು ಗೊತ್ತಿಲ್ಲ. ಗೊತ್ತಾಗಿ ಹೇಳುವರಂತೆ ಯೋಗಿಗಳು, ಕಣಿಗಾರರು, ನಾಡೀಗ್ರಂಥಗಳವರು; ಹೇಳಬಹುದು. ಅವರವರಲ್ಲಿ ಭಿನ್ನಾಭಿಪ್ರಾಯ ಉಂಟಾದರೆ ತೀರ್ಮಾನ ಹೇಗೆ? ದಿನಫಲ, ವಾರಫಲಗಳನ್ನು ಪತ್ರಿಕೆಗಳಲ್ಲಿ ದಿನಾ ಓದುತ್ತೀರಲ್ಲ ; ನೀವೇ ಹೇಳಿ. ಅವೆಲ್ಲ ನಿಜವೊ? ಆ ಗೊಡವೆ ತುಂಬಾ ಗೋಜು. ಈ ಒಂದು ಜನ್ಮ ಇದೆ, ಇದರ ವಿಚಾರ ಗಟ್ಟಿ. ಅದು ನಮ್ಮ ಕೈಯಲ್ಲಿದೆ. ನಾವು ನಮ್ಮ ಕೈಯಲ್ಲಿಯೊ ಇನ್ನಾರ ಕೈಯಲ್ಲಿಯೊ ಇದ್ದೇವೆ. ಇದರ ಸುಖಾಸುಖ ಅನುಭವಿಸಿಯೇ ತೀರಬೇಕಾದವು. ಅವನ್ನು ಮಾರ್ಪಡಿಸಿಕೊಳ್ಳುವ ಶಕ್ತಿ ಬಹುಮಂದಿಗೆ ಇಲ್ಲವಾಗಿ ಬಂದುದನ್ನು ಅನುಭವಿಸಿಯೇ ತೀರಬೇಕು ಎಂಬ ವಾದ ವಿಧಿವ್ಯಾಪಾರದಂತೆ ಮನುಷ್ಯನ ಮೇಲೆ ಒಡ್ಡಿದೆ. ಇರುವ ತನಕ ಚೆನ್ನಾಗಿರಬೇಕು, ಹೋಗುವ ಕಾಲ ಬಂದರೆ ನೆಮ್ಮದಿಯಿಂದ ಹೋಗಬೇಕು ಎಂಬುದು ಎಲ್ಲರ ಆಸೆಯಾಗುವುದು ಸಹಜ. ಎಲ್ಲರಿಗೂ ಸಾಧಿಸುವುದು ಹೇಗೆ ? ಇದರ ಸಿದ್ಧಿ ನಮ್ಮ ಒಳ ಹೊರ ಎಷ್ಟೊ ಸಂಗತಿಗಳ ಮೇಲೆ ಹೊಂದಿರುತ್ತದೆ. ಎಲ್ಲರ ಮೇಲೆಯೂ ನಮ್ಮ ಇಚ್ಛೆ, ಅಧಿಕಾರ ನಡೆಯದು. ಯಾತಯಾತರವೊ ನಿರ್ಣಯಿಸುತ್ತವೆ ; ಗತಿ, ರೂಪ ತರುತ್ತವೆ. ಕೆಲವರು ಹೀಗೆ ಬೇಕು, ಹಾಗೆ ಬೇಡ ಎಂಬುದರ ಚಿಂತೆಯಿಲ್ಲದೆ ನಡೆದು ನಿರ್ಗಮಿಸುವವರು.

Lo ! the lilies of the field, they toil not neither do they spin ಎಂಬ ವಾಕ್ಯ ಒಂದು ಪರಮ ಸಹಜತೆಯ ಚಿತ್ರಣ. ಯದೃಚ್ಛಾ ಲಾಭಸಂತುಷ್ಟಾ : ಎಂದೊ,

Ever with a welcome frolic took thunder and sunshine ಎಂದೊ,

I was ever a fighter, so ; one fight more ; The best and the last ! ಎಂದೊ,

Under the bludgeonings of chance my head is bloody, but unbowed ಎಂದೊ,

I am the master of my Fate and the Captain of my soul ಎಂದೊ,

I came like Water, and like Wind I go ಎಂದೊ,

ಗಚ್ಛಾಮಿ ಯಥಾ ಸುಖಂ ಎಂದೊ-ಹೇಗೆ ಹೇಗೊ ಅಂದುಕೊಂಡು ಜೀವನದ ಆದರ್ಶಗಳನ್ನು ಕಟ್ಟಿಕೊಂಡು ಬದುಕುವುದುಂಟು. ಯಾವುದೊ ಕಷ್ಟ ನಿಷ್ಠುರಗಳ ನಡುವೆ ಬಾಳಬೇಕಾದ್ದು ಮನುಷ್ಯನ ಪಾಡು. ಯಾವುದನ್ನೂ ಚಿಂತಿಸದೆ ನಿತ್ಯದ ಸಂತೋಷಗಳನ್ನು ಹೀರಿ ಸಾಯುವ ಒಂದು ಪ್ರಕೃತಿ ವಿಲಾಸ ಕೂಡ ಉಂಟು. ಚಾರುವಾಕರನ್ನು ಕೇಳಿ; ಮಹಾಬಳ ಚಕ್ರವರ್ತಿಯ ಮೂವರು ನಾಸ್ತಿಕ ಮಂತ್ರಿಗಳನ್ನು ಕೇಳಿ.

ಇವೆಲ್ಲ ಗಂಡಸರ ಆದರ್ಶಗಳು–ಹೆಣ್ಣಾಗಿ ಹುಟ್ಟಿದೆನ್ನೊಳಪರಾಧಮುಂಟು ಎಂಬ ಕರುಳಿರಿಯುವ–ಮಾಮೇಸ್ತ್ರೀತ್ವಂ, ಮುಂತಾದ ಮಾತುಗಳನ್ನಾಡಬೇಕಾಗಿರುವ ಹೆಣ್ಣಿನದಲ್ಲ. ಹೆಣ್ಣು ಲೆಕ್ಕಕ್ಕಿಲ್ಲ. ಸುಮಾರು ಬುದ್ಧಿವಂತನೆನ್ನಬಹುದಾದಾತನು ಮಾಡಿಕೊಂಡ ಉಪಾಯಗಳು, ಸಾಧನೆಗಳು. ತನಗೇ ಧೈರ್ಯ ತಂದುಕೊಳ್ಳುವುದಕ್ಕೆ, ನಡೆಯನ್ನು ಸುಗಮವಾಗಿಸಿಕೊಳ್ಳುವುದಕ್ಕೆ. ಬಂದುದನ್ನು ಸ್ಥಿರವಾಗಿ ಎದುರಿಸುವುದಕ್ಕೆ. 'ವಿಧಿಯಣಕಿಪುದ ಕಂಡು ಹೆದರುವರು ನಾವಲ್ಲ। ಅದನಿದಿರುಗೊಳ್ಳುವೆವು ವಿನಯದಿಂದೆ। ಹೃದಯದೊಳಗಿಹುದೆಮಗೊಂದು ಸುಧೆಯ ಸಾರದ ಬಿಂದು। ಅದ ಸವಿಯುತಳುಕದಿಹೆವೈ ಸಖರೇ,-ಎನ್ನುವಾಗಲೂ ವಿರುದ್ಧ ಶಕ್ತಿಯ ಪ್ರಭಾವ ಕವಿದೇ ಇದೆ. ಕ್ಷೋಭೆಗೊಂಡು ಮಹಾಸಾಗರದ ಅಲೆಗಳಲ್ಲಿ ಒದ್ದಾಡುವ ಜೀವಿ ಯಾವುದಾದರೂ ಆಸರೆ ಸಿಕ್ಕೀತೆ ಎಂಬಂತೆ ತನ್ನನ್ನು ತಾನು ರಕ್ಷಿತನಾಗಿ ಕ್ಷೇಮವಾಗಿ ನಿಲ್ಲಿಸಿಕೊಳ್ಳುವಂತೆ ಆಡಿಕೊಂಡ, ತನಗೇ ತಾನು ಧೈರ್ಯ ತಂದುಕೊಳ್ಳುವ ಮಾತುಗಳವು. ದರ್ಶನಗಳೂ ತತ್ತ್ವವಿಧಿಗಳೂ ಹಾಗೆಯೇ. ಅಲೆಗಳು ಅಪ್ಪಳಿಸಿ ಮುಳುಗಿಸುವಂತಿರುವಾಗ ಸಮುದ್ರದ ನಡುವೆ ಅಲಲ್ಲಿ ಬಿದ್ದ ತೇಲು ತೆಪ್ಪಗಳು (Floats; Buoys) ಅಥವಾ ಸುತ್ತು ಪಟ್ಟಿಗಳು (Life–Belts) ತೇಲುತ್ತವೆ. ಅವನ್ನು ಹಿಡಿದು, ಆಶ್ರಯಿಸಿ ನಾವು ಹೇಗೊ ಕ್ಷೋಭೆ ಇಳಿಯುವವರೆಗೂ ಉಳಿದುಕೊಳ್ಳುತ್ತೇವೆ, ಅಷ್ಟೇ. ಇದರಿಂದ ಶಾಶ್ವತವಾದ ಯಾವುದೊ ಪರಮಸೌಭಾಗ್ಯ ದೊರಕಿದಂತಾಗುವುದೆಂಬುದು ಅವರವರ ಮನಸ್ಸಿಗೆ ಸಂಬಂಧಿಸಿದುದು.

ಲೋಕದ ಸ್ಥಿತಿ ಈವರೆಗೆ ಇದ್ದಂತೆಯೇ ಇರುತ್ತದೆ. ಮೃತ್ಯುವನ್ನು ಕಂಡರೆ ಹೆದರುತ್ತ ಅದನ್ನು ಪ್ರಾರ್ಥಿಸಿಕೊಂಡು 'ಹೇ ಮೃತ್ಯವೇ' ಇತ್ಯಾದಿ ಆ ದೇವತೆಯನ್ನು ಒಲಿಸಿಕೊಳ್ಳುವ ಪ್ರಯತ್ನಗಳು, ಕಾಂಡಗಳು, ಮೃತ್ಯುಂಜಯ ಜಪ, ಹೋಮ ಉಂಟು. ಮೃತ್ಯುವನ್ನು ಜಯಿಸಿದರೆಂಬ ಸಾವಿತ್ರಿ, ಮಾರ್ಕಂಡೇಯರಂಥವರ ಕತೆಗಳುಂಟು. ಯಾವುದೊ ನಿಷ್ಠೆ, ವ್ರತ, ನೇಮ, ಸೇವಾಕಾರ್ಯಗಳಿಂದ, ಭಕ್ತಿಯ ದೃಢಗಳಿಂದ ಅವರು ತಕ್ಷಣಕ್ಕೆ ಮೃತ್ಯು ಭೀತಿಯನ್ನು ತಪ್ಪಿಸಿಕೊಂಡರು. ಇನ್ನಾರಿಗೊ ತಪ್ಪಿಸಿದರು. ಅಷ್ಟೇ ಹೊರತು

ಈಗ ಸಾವಿತ್ರಿ ಇದ್ದಾಳೆಯೆ ? ಅವಳು ಬದುಕಿಸಿದ ಸತ್ಯವಾನ್ ಇದ್ದಾನೆಯೊ? ಶಿವನನ್ನು ನೆಮ್ಮಿ ಯಮನನ್ನು ನಿಗ್ರಹಿಸಿದ ಮಾರ್ಕಂಡೇಯನು ಇದ್ದಾನೆಯೆ? ಇಂಥವರೆಲ್ಲಿ ಎಂದು ಕೇಳಿದರೆ ಎಲ್ಲರೂ ಮೃತರಾಗಿದ್ದಾರೆ ಎಂಬುದು ತಾನೆ ಉತ್ತರ? ಯಾವ ಅರ್ಥದಲ್ಲಿ ಅಂದು ಅವರು ಬದುಕಿದ್ದರೊ ಆ ಅರ್ಥದಲ್ಲಿ ಈಗ ಅವರಿಲ್ಲ. ಅವರ ಕಥೆಯಿದೆ. ಈ ಜೀವನದ ಸ್ಮೃತಿಗಳಿಂದ ಯಾವುದೊ ಧೈರ್ಯವನ್ನೂ ಸ್ಥೈರ್ಯವನ್ನೂ ಶುಚಿಯನ್ನೂ ಶುದ್ಧಿಯನ್ನೂ ಸಂತೋಷವನ್ನೂ ನಾವು ತಂದುಕೊಳ್ಳಬೇಕೆಂದು ಆಶಿಸುತ್ತೇವೆ, ಅಷ್ಟೇ. ಗೀತಾಚಾರ್ಯನು ಹನ್ನೊಂದನೆಯ ಅಧ್ಯಾಯದಲ್ಲಿ ನಮಗೆ ತೋರಿಸಿದ ಚಿತ್ರ 'ಕಾಲೋಸ್ಮಿ' ಎಂಬುದಲ್ಲವೆ? ಈಚೆಗೆ ನಮ್ಮ ವಿಚಾರಕ ಸ್ನೇಹಿತರೊಬ್ಬರು – ಶಂ.ಬಾ. – ಆ ಸಂಗತಿ ನಮ್ಮ ಸಂಸ್ಕೃತಿ ಚರಿತ್ರೆಗೇ ಮೂಲಭೂತವಾದ್ದು ಎಂದರು. ವಾಸ್ತವವಾಗಿ ಮರಣದ ತತ್ತ್ವವೇ ಅದರ ಮೂಲ ತತ್ತ್ವ, ಸತ್ಯದ್ದಲ್ಲ, ಅಸ್ತಿತ್ವದ್ದಲ್ಲ ಎಂದು ಅವರು ಪ್ರತಿಪಾದಿಸಿದಾಗ ಅಲ್ಲಿನ ದುರ್ಧರ್ಷತೆಗೆ ಮನಸ್ಸು ಅಶಾಂತವಾಯಿತು. ಆದರೆ ಹುಟ್ಟಿದುದೆಲ್ಲ ಸಾಯಲೇಬೇಕು ಎಂಬುದು ನಿಜವಾದರೆ ಅದರಲ್ಲಿ ಕಠೋರತೆ ಏನು ಬಂತು ? ಬೇರೆ ಬೆಲೆಗಳಿವೆ ನಿಜ. ಬೆಲೆಗಳು ಶೀಲದಲ್ಲಿ, ಸ್ಮರಣೆಯಲ್ಲಿ ಉಳಿಯುತ್ತವೆಂಬುದೂ ನಿಜ. ಆ ಜೀವಗಳು ?

ಸಾಯಲೇಬೇಕಾದರೆ ಹೇಗೆ ಸಾಯುವುದು ಮೇಲು, ಹೇಗೆ ಅಲ್ಲ ? ಹುಳುವಿನ ಹಾಗೆ ಸಾಯುವುದೆ? ಧೀರನ ಹಾಗೆ, ಸಂತನ ಹಾಗೆ ಸಾಯುವುದೆ? ತಕ್ಕತನದ ವಿವೇಚನೆಗಳಿಲ್ಲವೆ ಎಂಬ ಯೋಚನೆ ಬಂದು ಧರ್ಮ, ಕರ್ಮ, ಯುಕ್ತ, ಆದರ್ಶ, ಗಮ್ಯ ಎಂಬ ಮಾತುಗಳ ಪ್ರಾಧಾನ್ಯ ಲೋಕದಲ್ಲಿ ಹುಟ್ಟಿಕೊಂಡಿತು. ಸಾಧುವಿನ ಬೆಲೆಯನ್ನು ಸಾವಿನಲ್ಲಿ ಕಾಣು; ಚೆನ್ನಾಗಿ ಬಾಳು ; ಮೇಲಾದ ಸಾವು ತಂದುಕೊ ಎಂಬ ಉಕ್ತಿಗಳಿಗೆ ಮನಸ್ಸು ಒಲಿಯುತ್ತದೆ. ಮಾನವನ ಸಂಸ್ಕಾರಕ್ಕೆ ಮೆರುಗನ್ನೂ ಮಾರ್ಗವನ್ನೂ ಅದು ಕಲ್ಪಿಸಿಕೊಟ್ಟಿತು. ಇದನ್ನು ನೀತಿಯೆನ್ನಿ, ಸಂಸ್ಕಾರವೆನ್ನಿ, ಸಾಧನೆಯೆನ್ನಿ, ಸಿದ್ಧಿಯೆನ್ನಿ ; ಸಾವನ್ನು ಒಪ್ಪಿ ಅದನ್ನು ಸಮಾಧಾನದಿಂದ ಎದುರಿಸಿ, ಲೋಕಕ್ಕೆ ಪ್ರವೇಶ ಮಾಡಿದಾಗ ಹೇಗೆ ನಾವರಿಯದೆ ಬಂದೆವೊ-ಹೆತ್ತ ತಾಯಿಗೆ ಎಷ್ಟೇ ಬೇನೆಯಿರಲಿ-ಸಾಯುವ ಕಾಲದಲ್ಲಿ ತುಂಬಾ ತೃಪ್ತಿಯಿಂದ, ಸಮಾಧಾನದಿಂದ, ನಿಶ್ಚಿಂತೆಯಿಂದ ಸಾಯಲು ಮನಸ್ಸನ್ನು ಹೊಂದಿಸಿಕೊಳ್ಳುವುದು ಒಂದು ಮಹಾಭಿಲಾಷೆಯಾಯಿತು. ಇದಕ್ಕಾಗಿ ಜೀವವನ್ನು ಹದಗೊಳಿಸಿಕೊಳ್ಳುವ ಮನಸ್ಸು, ವ್ಯಾಪಾರ ಲೋಕದ ಎಲ್ಲೆಡೆಯಲ್ಲಿಯೂ ಬೆಳೆದಿದೆ. ಪುಣ್ಯವಂತರಾದವರು ಯಾವ ಸಮಯದಲ್ಲಿ ತಾವು ನಿಷ್ಕ್ರಮಿಸುತ್ತೇವೆಂಬುದರ ಲಗ್ನವನ್ನು ಅರಿತವರೆಂಬಂತೆ ಆ ಸಮಯಕ್ಕೆ ಎಲ್ಲವನ್ನೂ ಅಣಿಮಾಡಿಕೊಂಡು ಬೇಕಾದವರನ್ನು ಸುತ್ತ ಕೂಡಿಸಿಕೊಂಡು ಸಾಂತ್ವನದ ಧೈರ್ಯದ ಮಾತಾಡಿ ತೀರಿಕೊಂಡಿರುವುದುಂಟು. ಹದವಾದ ಹಣ್ಣಾಗಿ ನೆಲಕ್ಕೆ ಉದುರಿ ಬೀಳುವರು – Like Ripe fruit fall to the earth. ಈ ಜೀವ ಅಲ್ಲಿಗೆ ಮುಗಿಯಿತು. ಅಲ್ಲಿ ಮೃತಿಗೆ ವಿಷದ ಮೊನೆ ಹೋಗಿರುತ್ತದೆ. ಹಿರಿಮೆ

ಬಂದಿರುತ್ತದೆ. ಅದೂ ಅಲ್ಲ; ಸಹಜಸ್ಥಿತಿ ಬಂದಿರುತ್ತದೆ. ಹತ್ತು ಜನಕ್ಕೆ ಅದು ಸಂಸ್ಕಾರಕಾರಿಯಾದ ದೃಶ್ಯವೊ ಅನುಭವವೊ ಆಗುತ್ತದೆ. ಸತ್ತರೆ ಹೀಗೆ ಸಾಯಬೇಕು ಎಂಬಂತಹ ಚಿತ್ರವನ್ನೂ ನೆನಪನ್ನೂ ಉಳಿಸಿ. ಕೆಲವು ಜಾಡ್ಯಗಳಲ್ಲಾಗುವಂತೆ ರಕ್ತಚಲನೆ ನಿಂತು, ಹೃದಯ ಸ್ತಂಭನೆ ಆಗಿ ಯಾರಿಗೂ ತಿಳಿಯದಂತೆ ಪ್ರಾಣ ಬಿಡುವುದಲ್ಲ ಇಂಥ ಮೃತಿ. ಅದು ಜಾಡ್ಯದ ಲಕ್ಷಣ; ಅಲ್ಲಿರುವುದು ಸಾಯುವಾಗ ಮುಪ್ಪಿನ ವಿಸ್ಮೃತಿ; ಸಾಯುವವನ ಇಷ್ಟಕ್ಕೆ ಸಂಬಂಧಿಸಿದುದಲ್ಲ ಆಗ ಸ್ಥಿತಿ-ಮತಿ. ಆ ಜಾಡ್ಯ ಇರುವವರಿಗೆ ನಿತ್ಯ ಸಾವು. ಕ್ಷಣಗಂಡ; ನಿತ್ಯಗಂಡ. ಸಾಯುವ ಒಂದು ಕ್ಷಣ ಮಾತ್ರ ಅದರ ಅರಿವಿಲ್ಲದಾಗುವುದೇ ಹೊರತು ಅದು ತುಂಬಾ ಕಷ್ಟದ ಸ್ಥಿತಿ. ಯಾರಿಗೂ ಬೇಡ. ನಾನೆನ್ನುವ ಮರಣ ತಪಸ್ವಿಗಳೆನ್ನುವವರ ಸಮಾಧಿಮರಣದಂಥದು. ಅವರು ಅಲ್ಲಿ ಯೋಗಾದಿ ಕ್ರಿಯೆಗಳಿಂದ ಇಂಥ ಶಕ್ತಿಯನ್ನು ಪಡೆದುಕೊಂಡು ಸಮಾಧಿ ಪಡೆಯುತ್ತಾರಂತೆ. ಹಾಗೆ ಮಾಡಿಕೊಳ್ಳಬಹುದಂತೆ. ನನ್ನದು ಇನ್ನೂ ಸುಲಭ, ಸರಳ; ಇನ್ನೂ ಸುಂದರ ; ಇನ್ನೂ ಹಿತ ; ಶಾಂತ, ಪ್ರಸನ್ನ. ಎಲ್ಲರಿಗೂ ಇಂಥ ಗತಿ ಬರಬಾರದೆ? – ಎಂಬಷ್ಟು ಮೋಹಕ ಅದು. ಇರುವ ತನಕ ಇದ್ದೆ ; ಇರವು ಬೇಡವೆನ್ನದೆ. ಸಾಯುವ ಕಾಲ ಬಂತು ; ಬೇಡವೆನ್ನದೆ ಸಾಯುತ್ತೇನೆ. ಅದು ಬೇಕೆನ್ನೆ; ಇನ್ನೊಂದನ್ನು ಬೇಡವೆನ್ನೆ. ಯಾವ ಹಂಗು ಏಕೆ ? ಆಯಿತು, ಹೋಯಿತು ಅಷ್ಟೇ. ಎಲ್ಲಕ್ಕೂ ಕಣ್ಣು ತೆರೆದಿದ್ದು ಎಲ್ಲದರ ಬೆಲೆಗಳನ್ನೂ ತಿಳಿದು ಕಾಲ ಬಂದಾಗ ತೇರಿಕೊಳ್ಳುತ್ತೇನೆ.

ಇಲ್ಲಿಯೂ ದೇಹಕ್ಕೆ ಮಾತ್ರ ಮೃತಿ. ಈವರೆಗೆ ಇದ್ದ ಹಾಗೆ ಇನ್ನಿಲ್ಲ ಅಷ್ಟೇ. ಅವರೇನಾದರು? ನಮ್ಮ ಸ್ಮೃತಿಯಲ್ಲೇನೊ ಉಳಿದಿದ್ದಾರೆ. ಸತ್ತ ಮೇಲೇನು? –ಎಂದು ಪ್ರಶ್ನೆ ಹುಟ್ಟಿಕೊಂಡು ಲೋಕ ಹುಟ್ಟಿದಂದಿನಿಂದ ಈವರೆಗೂ ಚರ್ಚೆ ನಡೆದೇ ಇದೆ. ನಚಿಕೇತನು ಯಮನನ್ನು ಕೇಳಿದ ಪ್ರಶ್ನೆ ಅದು. ಅದೊಂದನ್ನು ಕೇಳಬೇಡ ನಿನಗೆ ಬೇರೆ ಏನು ಬೇಕಾದರೂ ಕೊಡುತ್ತೇನೆ ಎಂದನಂತೆ ಯಮ. ಅವನಿಗೂ ಅದರ ರಹಸ್ಯ ಯದಿ ವಾ ನ ವೇದ ಎಂಬಂತೆ ಗೊತ್ತಿತ್ತೊ ಇಲ್ಲವೊ ? ನಚಿಕೇತನು ತೃಪ್ತಿ ಪಟ್ಟಿರಬೇಕೇನೊ ಅಲ್ಲಿ ದೊರೆತ ಉತ್ತರದಿಂದ? ನನಗೆ ಆ ಸಂದೇಹ ಉಳಿದಿದೆ. ಹಿಂದಿನ ಕಾಲದವರು ಅಲ್ಪ ತೃಪ್ತರು. ಮನುಷ್ಯನು ಮಾಡಿದ 'ಮೃತ್ಯೋರ್ಮಾ ಅಮೃತಂ ಗಮಯ' ಎಂಬ ಪ್ರಾರ್ಥನೆಯಲ್ಲಿ ಯಾವುದೊ ಅಮೃತತ್ವ ಸಿದ್ಧಿಗೆ ದೊಡ್ಡ ಮನಸ್ಸು ಹಾತೊರೆದಿದೆ. ದಿವ್ಯ ಕಲ್ಪನೆಯನ್ನು ಮಾಡಿಕೊಳ್ಳುತ್ತ ಯಾವುದೊ ಸಮಂಜಸತೆಯ ತತ್ತ್ವವನ್ನು ನಿರ್ಮಾಣ ಮಾಡಿಕೊಂಡು 'ಯಸ್ಯ ಛಾಯಾ ಅಮೃತಂ ಯಸ್ಯ ಮೃತ್ಯುಃ' ಎಂದು ವರ್ಣನೆ ಮಾಡಿಕೊಂಡಿದೆ. ಆದರೆ ಆ ಸ್ಥಿತಿ ಏನೊ, ಮೃತಿಯ ಆಚೆ ಬಂದಿಲ್ಲ, ಈವರೆಗೆ ಮೃತಿ ಮಿತಿ. ಬಳಿಕ ಏನೊ ಹೇಗೊ.

ಅದನ್ನು ಕಟ್ಟಿಕೊಂಡು ತಾನೆ ನಮಗೇನು ? ಇಲ್ಲಿರುವಷ್ಟು ತನಕ ಜೀವ ಚೆನ್ನಾಗಿ ಉತ್ತಮವಾಗಿ ಬಾಳಿದರಾಯಿತು. ಇದನ್ನು ನೋಡಿಕೊಳ್ಳೋಣ. ಅದರ ಪಾಡಿಗೆ

ಆದಿರಲಿ. ಇಲ್ಲಿ ಸಂದರೆ ಅಲ್ಲೂ ಸಲುಗೆ ಉಂಟೆನ್ನೋಣ. ಈ ತತ್ವ ಕೂಡ ಜೀವನವನ್ನು ನಡಸಿದೆ. ಇಲ್ಲಿರುವಾಗ ಒಂದು ಯಾವುದೊ ಬಗೆಗೆ ಮನಸ್ಸನ್ನು ಹೊಂದಿಸಿಕೊಳ್ಳುವ ಯತ್ನವಿದೆ. ಮುಖ್ಯವಾಗಿ ಮನುಷ್ಯನ ನಿಯಮಿತ ಜೀವನದ ವ್ಯಾಪಾರಗಳಲ್ಲಿ ಒಂದು ಹದವನ್ನು ವಿವೇಕವನ್ನು ಒಂದು ಶಾಂತಿ ಸಂತೋಷವನ್ನು ಪಡೆದುಕೊಂಡು ಬದುಕನ್ನು ಕೃತಾರ್ಥ ಮಾಡಿಕೊಳ್ಳಬೇಕೆಂಬುದು ದೊಡ್ಡವರೆಂಬವರೂ ದೊಡ್ಡದಾಗಿ ಬದುಕಿದರೆಂದ ಜನರೂ ಆಡಿದ ಮಾತು ; ಮಾಡಿದ ಮಾಟ ; ನಡೆದ ನಡೆ ; ದಾರಿ. ಬದುಕಿನ ಒಂದು ಹದ.

ಮೃತಿ ನಿಜವಾಗಿರುವಾಗ ದುಃಖವೇಕೆ, ಕರ್ಮವೇಕೆ ? ಶೌಚವೇಕೆ ಶುದ್ಧಿಯೇಕೆ? ಎಂದು ಕೇಳಿಕೊಳ್ಳಬಹುದು. ಹೂಳಿದರೇನು, ಸುಟ್ಟರೇನು ? ಪ್ರೇತಕರ್ಮ ಮಾಡಿದರೇನು, ಬಿಟ್ಟರೇನು ? ಸ್ಮಾರಕಗಳನ್ನು ರಚಿಸಿದರೇನು, ರಚಿಸದಿದ್ದರೇನು ? ಇವೆಲ್ಲ ಉಳಿದವರು ತಮ್ಮನ್ನು ತೇರಿಕೊಳ್ಳಲು ಮಾಡಿದ ಕಾರ್ಯಗಳಾಗಿರಬೇಕು. ಅದರ ಪರವಾಗಿ ನಡೆದುಕೊಂಡ ನಡತೆ. ಪಂಚ ಭೂತದಿಂದ ಮಾಡಿದ ದೇಹ ಹುಡಿಯಾಗಿ ಬೂದಿಯಾಗಿ ಪುನಃ ಪಂಚಭೂತಗಳಲ್ಲಿ ಸೇರಿಕೊಳ್ಳುತ್ತದೆ. ಇವರು ಪ್ರತ್ಯೇಕವಾಗಿ ಮಾಡಬೇಕೇನು ? ಈ ದೇಹ ಇರುವಾಗ ದೇಹವೇ ನಾವಲ್ಲವೆಂಬ ಒಂದು ವಾದ ಎದ್ದು ಅದಕ್ಕೆ ಜನ್ಮ, ಜನ್ಮಾಂತರ, ಅದಕ್ಕೆ ಅಮೃತತ್ವ, ಅದಕ್ಕೆ ದಿವ್ಯದೇಹ, ಅದಕ್ಕೆ ಅಗತ್ಯವಾದ ಸತ್ಕಾರ ಎಂಬುದನ್ನು ಮಾಡಿಕೊಂಡಿರಾದೀತು. ನಾವು ಮಾಡುವ ಕರ್ಮ ವಿಶೇಷಗಳಿಂದ ಅವರಿಗೆ ಸುಖವೊ ಸಂತೋಷವೊ ಯಾರು ಬಲ್ಲರು ? ನಮ್ಮ ನೆನಪಿಗೆ, ಭಕ್ತಿಗೆ, ಕೃತಜ್ಞತೆಯ ಸೂಚನೆಗೆ ಇದು ಕರ್ಮ, ಕಾರಣ ಎಂದುಕೊಂಡು ಇಂಥ ಕ್ರಿಯೆಗಳಲ್ಲಿ ವಿಶ್ವಾಸ ಬೆಳೆದಿದೆ. ಹತ್ತಿರವಿದ್ದ ಜೀವಕ್ಕೊ ಅದರಿಂದ ಸಂತೋಷವನ್ನೊ ಬೆಳಕನ್ನೊ ಸುಖವನ್ನೊ ಕಾವನ್ನೊ ಕೊಂಡ ಜೀವಕ್ಕೊ ಅಗಲಿಕೆ. ಬಾಂಧವ್ಯ ಕೆಲಕಾಲ ಬಾಧಿಸುತ್ತಿರುತ್ತದೆ. ಒಡನಿದ್ದುದು ಕಳೆದುಹೋಯಿತೆಂಬ ನೋವು, ನಷ್ಟ ಕಲ್ಪನೆ ಸಾವಿನಷ್ಟೇ ಅದಕ್ಕೆ ಖಚಿತ. ಇದ್ದಾಗಿನ ಸಂತೋಷವನ್ನು ನೆನೆನೆನೆದು ಇಲ್ಲದ ನೋವನ್ನು ಹೆಚ್ಚು ಮಾಡಿಕೊಳ್ಳುತ್ತದೆ. ದುರ್ಮಾರ್ಗದ ನೆನಪು 'ಶನಿ ತೊಲಗಿದ' ಎಂದು ಸಂತೋಷ ಪಟ್ಟುಕೊಳ್ಳಬಹುದು. 'ಸತ್ತರ್, ಇನ್ ಪುಟ್ಟಿರ್' ಎನ್ನಬಹುದು ಚಲಗಾರ. He helped to bury whom he helped to die ಎಂಬ ಘಾತಕತೆಗಳನ್ನು ಮೆರಸಬಹುದು. ಅಥವಾ ಇದ್ದುದನ್ನು ನೆನಸಿಕೊಳ್ಳಲು ಎಷ್ಟೆಷ್ಟೊ ಏರ್ಪಾಡುಗಳನ್ನು ಮಾಡಿಕೊಂಡು ನೆನಪುಳಿಯಲು, ಅದು ಪ್ರಭಾವವಾಗಲು, ಅದರ ಸಂದೇಶವನ್ನು ಪ್ರಚಾರ ಮಾಡಲು ಉದ್ಯತವಾಗಬಹುದು. ಒಂದು ಭಕ್ತಿಯ ಕಾಂಡ, ಶ್ರದ್ಧೆ ವಿಶ್ವಾಸಗಳ ಕಾಂಡ ; ಇನ್ನೊಂದು ರಾಗದ್ವೇಷಗಳ ಪ್ರಪಂಚ.

ಇನ್ನೊಂದು ಮನುಷ್ಯನ ಮನಸ್ಸಿನಲ್ಲಿ ಅಭಿಮಾನವಾಗಿ ಕಾಡುತ್ತಿರುತ್ತದೆಯಾದೀತು. ಅದಕ್ಕೆ ಪ್ರೀತಿ ಬೇಕಿತ್ತು. ಸಾಕಷ್ಟು ದೊರಕಲಿಲ್ಲ. ದೊರಕಿದುದು ತೃಪ್ತಿ ತರಲಿಲ್ಲ. ಇದ್ದಾಗ

ಸಂತೋಷಪಟ್ಟವರಿಲ್ಲ, ಸತ್ತರೆ ಅಳುವವರಿಲ್ಲ ಎಂದು ವ್ಯಥೆಪಡುವ ಜಾತಿ ಅದು. ಅಳುವವರನ್ನು ನೇಮಿಸಿಕೊಂಡು ಆ ಕೊರೆಯನ್ನು ತುಂಬಿಕೊಳ್ಳುವುದುಂಟು. ಗೋರಿಗಳನ್ನೊ ಸಮಾಧಿಗಳನ್ನೊ ಮಾಡಿಸಿ ಅಮೃತಶಿಲೆಯ ವಾಸ್ತು, ಚಿತ್ತಾರ ಗೋಪುರ ಕಲಶ ಕಟ್ಟಿ, ಅದಕ್ಕೆ ಚಿನ್ನವನ್ನು ಲೇಪಿಸಿ ; ತಗಡು ಹೊಡಿಸಿ ; ಸುತ್ತ ಅಲಂಕರಣಕ್ಕೆ ಹಸಿರು ಹುಲ್ಲು ಹೂವು ಹಣ್ಣು ಬಿಡುವ ಗಿಡಗಳನ್ನು ಹಾಕಿ ; ಅದನ್ನು ಅಲಂಕರಿಸಲು ಬೆಡಗಿನ ದೀವಿಗೆಗಳನ್ನು ಉರಿಸಿ ಉತ್ಸವಾದಿಗಳನ್ನು ನಡಸಿ, ಸಾಂಬ್ರಾಣಿ ಗುಗ್ಗುಳಗಳ ಪರಿಮಳ ಹಾಯಿಸಿ ; ಕೇಸರಿ ಕಸ್ತೂರಿ ದಾನಮಾಡಿ ; ನೆರವು ಒದಗಿಸಿ ನೆನಪು ಅಮೃತವಾಗುವುದಕ್ಕೆ ಏರ್ಪಾಡು ಮಾಡಿಕೊಳ್ಳುವುದು ಉಂಟು. ಉಳಿದವರು ಕೃತಜ್ಞರು, ಗುಣಜ್ಞರು ಬೇರೆ ರೀತಿಯಲ್ಲಿ. ತಮಗೆ ತಾವೇ ಮಾಡುವ ಗುಣಕ್ರಿಯಾ ವಿಶೇಷ ಬೇರೆ. ಇದು ಇವರು, ಇವರ ಹತ್ತಿರದವರು ಮಮತೆಯ ಉದ್ರೇಕಗಳಲ್ಲಿ ಮಾಡಿಕೊಳ್ಳುವುದು. ಅವರೇ ಮಾಡಿಕೊಂಡರೆ ಕಾರ್ಪಣ್ಯವಾಗಬಹುದಾದ್ದು ಅವರಿಗೆ ಸಂಬಂಧಿಸಿದವರು ಮಾಡಿದರೆ ಭಕ್ತಿಕ್ರಿಯೆ, ಒಂದು ಋಣ, ಅನುಬಂಧದ ವಿಲಾಸ, ಮುಡಿಪು, ಕಾಣಿಕೆ ಎಂಬಂತೆ ಆಗುತ್ತದೆ. ಮೃತಿಗೊಂಡ ಜೀವಕ್ಕೆ ಉಳಿದ ಒಂದು ಜೀವಿತ ಕಾಲವೆಲ್ಲ ತನ್ನನ್ನು ಸವೆದುಕೊಂಡು ಅದರೊಡನೆ ಉಂಡ ಸಂತೋಷವನ್ನು ಬಿಟ್ಟು ಇನ್ನಾವುದನ್ನೂ ಒಲ್ಲದೆ ವಿಧುರ, ವಿಧವಾ ವ್ರತಗಳಲ್ಲಿ ಜೀವವನ್ನು ಒಣಗಿಸಿಕೊಳ್ಳುವ ತೇದುಕೊಳ್ಳುವ ಕ್ರಿಯೆಗಳೂ ಮೃತಿಗೆ ಕಾಣಿಕೆಯೇ. ತನ್ನ ಸಂತೋಷದಲ್ಲಿ ಸಹಜವಾಗಿ ಅನುಸರಿಸುವ ಇಂತಹ ನಿಷ್ಠೆ ನಿಜವಾಗಿ ಸುಂದರವಾದ್ದೇ ಸರಿ. ಸಂನ್ಯಾಸಿಯಾಗಬೇಕಾದವರು ಆತ್ಮಶ್ರಾದ್ಧವನ್ನು ಮಾಡಿಕೊಂಡು ಮುಂದಿನ ಆಶ್ರಮಕ್ಕೆ ಸಲ್ಲುವುದು ಎಷ್ಟು ಚಿತ್ರವಾಗಿ ಕಾಣುತ್ತದೆ ! ಆದರೆ ವೈಧವ್ಯಕ್ಕಾಗಿ ಮಾಡಿಕೊಳ್ಳುವ ವಿಕಾರ, ನಿಗ್ರಹಕ್ಕಾಗಿ ಮಾಡಿಕೊಳ್ಳುವ ದಂಡನೆ-ಇವು ತನಗೆ ಕಷ್ಟವನ್ನೂ ಇತರರಿಗೆ ಕಷ್ಟ ನಿಷ್ಠುರಗಳನ್ನೂ ಮಾಡಿಕೊಂಡಾಗ, ಮೃತರಿಗೆ ಇದಾವ ಉಪಚಾರ ಎನ್ನಿಸುತ್ತದೆ.

ಆದರೆ ಸತ್ತರೆಂದು ಸಂತೋಷಪಡಿರೆನ್ನೋಣವೆ ? ಎಲ್ಲರಿಗೂ ಕಾಲ ಬರುತ್ತದೆ. ಇಂದು ಅವರು, ನಾಳೆ ನಾವು. ಆ ಜೊತೆಗೆ ತಕ್ಕಂತೆ ಬದುಕಿ ನಾವದರಲ್ಲಿ ಉಂಡ ಸುಖವನ್ನು ಇನ್ನೊಬ್ಬರಿಗೆ ಹಂಚಿ, ವಿಸ್ತರಿಸಿ, ಆ ಜೀವದ ಗುಣ ನಮ್ಮನ್ನು ಹೇಗೆ ಸಂತೋಷಗೊಳಿಸಿತೊ ಆ ಸಂತೋಷದ ಸುಧೆಯನ್ನು ಲೋಕಕ್ಕೆ ದೊರಕಿಸೋಣವೆಂಬ ಕ್ರಿಯೆ ಉಪಕಾರಕ್ರಿಯೆ ಆಗಬಲ್ಲದು. ರೀತಿಯನ್ನು ಅವರವರೇ ನಿರ್ಣಯಿಸಿಕೊಳ್ಳಬೇಕು ಮಾತ್ರ. ಶಾರದಾಮಣಿ ದೇವಿಯವರು ಕುಂಕುಮ, ಕೈಬಳೆ ತೆಗೆಯದಿದ್ದಾಗ ಸುತ್ತಲವರೆಲ್ಲ ಅವರನ್ನು ತೆಗಳಿದರಂತೆ, ಸಮಾಜ ಗೋಳುಹುಯಿದುಕೊಂಡಿತಂತೆ. ಮದುವೆಗೆ ಮುಂಚೆ ಅವಿದ್ದವು. ಆಕೆ ದಾಂಪತ್ಯವನ್ನು ಉಂಡುದೆಂಬುದು ಸೊನ್ನೆ. ಗಂಡನೆಂದಿದ್ದ ಪರಮಹಂಸ ಬರಿಯ ದೇಹವೆ ? ಅವರದು ಗಂಡಹೆಂಡಿರ ಸಂಸಾರವೆ ? ಅವರು ಬೋಧೆ ಮಾಡಿದುದು ದೇಹದ ತತ್ವವೆ ? ಏನು ಲೋಕವೊ ! ಆ ನೋವಿನಲ್ಲಿ ಆಕೆ ಅದನ್ನು

ತೆಗೆಯಲು ಹೋದರಂತೆ. ಒಡನೆಯೇ ರಾಮಕೃಷ್ಣರು ಕಂಡಂತಾಗಿ 'ಆಗ ನಾನಿದ್ದೆನೆ? ಈಗ ಇಲ್ಲವೆ, ಇದೇಯೆ ನೀನು ನನ್ನಲ್ಲಿ ಕಂಡದ್ದು, ಕಲಿತದ್ದು ? ಏನು ಬಂತು ನಿನಗೂ ಈ ಭ್ರಾಂತಿ, ಚಾಂಚಲ್ಯ ?' ಎಂದಂತಾಯಿತಂತೆ. ಆಕೆ 'ಏನು ಮಾಡಲಿ, ಹೃದಯ ಒಪ್ಪಿದ ಸತ್ಯಕ್ಕೂ ಲೋಕ ಬಿಗಿಯುವ ನಿಷ್ಕರುಣೆಗೂ ನಡುವೆ ಜೀವ ದುರ್ಭರವಾಗುತ್ತಿದೆ' ಎಂದುಕೊಂಡರಂತೆ. ಷಾ ನಾಟಕದಲ್ಲಿ ತನ್ನಲ್ಲಿ ಉಂಟಾದ ಅನುರಾಗದಿಂದ ತನ್ನ ಗಂಡನನ್ನು ಬದುಕಿಸಲೊಲ್ಲೆನೆಂದ ಡಾಕ್ಟರ್ ರಿಜ್ಜನ್, ಜೆನ್ನಿಫರ್ ಡುಬೇಡಾಟನ್ನು ಒಲಿಸಲು ಯತ್ನಿಸಿದಾಗ ಆಕೆ ಕಲೆಗಾರನಾದ ತನ್ನ ಗಂಡ 'ನನಗಾಗಿ ಕಣ್ಣೀರು ಹಾಕಬೇಡ, ಮರುಗಬೇಡ, ವೈಧವ್ಯದ ವೇಷ ತೊಡಬೇಡ ; ನೀನು ಸಂತೋಷವಾಗಿದ್ದರೆ ನನ್ನ ನೆನಪಿಗೆ ನೀನು ಕಾಣಿಕೆ ಕೊಟ್ಟಂತೆ, ನಿನ್ನ ಚೆಲುವಿನಲ್ಲಿ ಸಂತೋಷದಲ್ಲಿ ಇದೆ ನನ್ನ ಅಮೃತತ್ವ ಎಂದು ಹೇಳಿದ್ದ, ನಾನು ಉಲ್ಲಾಸದಿಂದಿದ್ದೇನೆ' ಎನ್ನುತ್ತಾಳೆ. ಹೃದಯದ ವ್ಯಾಪಾರಗಳು ವಿಚಿತ್ರ. ಸಾವು ಸಹಜವಾದ ಒಂದು ಘಟ್ಟವಾಗಿ ಇದ್ದರೂ ಸಾವಿನ ಭಯ, ಸಾವಿನ ದೃಶ್ಯ, ಸಾವು ತರುವ ಚಿಂತೆ, ಅದು ನಿರ್ಮಾಣ ಮಾಡುವ ವಿಚಾರ ಪ್ರಪಂಚ, ಅದರಿಂದ ಹುಟ್ಟುವ ಲೋಕವ್ಯಾಪಾರ ವ್ಯವಹಾರ, ನೀತಿ ನಿರ್ಣಯ, ಸಂಸ್ಥೆ ಸಂಪ್ರದಾಯ, ಅದನ್ನು ಮೀರುವುದು ಶಕ್ಯವೇ ಎಂಬ ಯೋಚನೆ, ಆಮೇಲೆ ಏನೊ ಎನ್ನುವ ಮೀಮಾಂಸೆ-ಲೋಕದ ಸಂಸ್ಕೃತಿಯನ್ನು ತೂಗಿವೆ. ಎಲ್ಲೆಲ್ಲಿಗೊ ಎತ್ತಿವೆ, ಸಾಗಿಸಿವೆ; ಉರುಳಿಸಿವೆ ; ಹೊರಳಿಸಿವೆ. ಪರಸ್ಪರ ವಿರುದ್ಧವಾದ ಎಷ್ಟೊ ವ್ಯಾಪಾರಗಳಿಗೂ ವಿಧಾನಗಳಿಗೂ ತಂತ್ರಗಳಿಗೂ ಮನುಷ್ಯನನ್ನು ನಡಸಿವೆ. ಇವೆಲ್ಲ ದೊಡ್ಡ ಯೋಚನೆಗಳು. ಯೋಚನೆಗೆ ಕಾಲಿಲ್ಲ, ಕೊನೆಯಿಲ್ಲ, ತೀರ್ಮಾನ ಇಂತೆಂಬುದಿಲ್ಲ. ಎಲ್ಲರಿಗೂ ಒಂದೆಂಬುದಿಲ್ಲ.

ಹಲವೇಳೆ ಜನ ಬರುತ್ತಾರೆ, ಮಾತನಾಡುತ್ತಾರೆ, ಗೋಳುಕರೆ ಕರೆಯುತ್ತಾರೆ, ನಿಷ್ಠುರ ಮಾಡುತ್ತಾರೆ, ಕರುಬನ್ನು ಬಿತ್ತುತ್ತಾರೆ, ಇನ್ನೊಂದನ್ನು ಕುರಿತು ನೀತಿಯಿಲ್ಲ,ಇನ್ನೊಬ್ಬರನ್ನು ಕುರಿತು ಕರುಣೆ ಸಹನೆ ಇಲ್ಲ ; ಇದೊ : ಇವನನ್ನು ನೋಡಿ, ಬೇಡವೆಂದರೆ ಬರುತ್ತಾನೆ, ಮಾಡಬೇಡವೆಂದುದನ್ನು ಮಾಡುತ್ತಾನೆ ; –ಇನ್ನೊಬ್ಬ ಇವ: ೪೦೦ ರೂ. ಪೆನ್ಶನ್ ಬರುತ್ತಂತೆ; ಹೆಂಡತಿ ಮಕ್ಕಳು ಸೊಸೆ ಮೊಮ್ಮಕ್ಕಳು ಎಲ್ಲ ಚೆನ್ನಾಗಿದ್ದಾರಂತೆ. ಮಗ ಐ.ಎ.ಎಸ್. ಅಲ್ಲಿ ಮೇಲ್ಮಟ್ಟದ ಅಧಿಕಾರಿ. ಅವನ ಚಿಂತೆ ಮಾತ್ರ ಒಂದೇ. ಎಲ್ಲಾ ಇದೆ ನೋಡಿ, ನನಗೆ ಕೋಡುಬಳೆ, ಹುರಿಗಾಳೆಂದರೆ ಪ್ರಾಣ, ತಿಂದರೆ ಆಗುವುದಿಲ್ಲ ಎಂಬುದೊಂದೇ ಇವನ ನಿರಂತರ ಗೋಳು. ಎಲ್ಲರಿಗೂ ಹೇಳುತ್ತಾನೆ. ದಿನಾ ಹೇಳುತ್ತಾನೆ–ಇದು ಲೋಕದಲ್ಲಿ ದಿನದಿನದ ಸಾವು. ಇಂಥದರಿಂದ ಉದ್ಧಾರವಿಲ್ಲ. ಇದು ನಿತ್ಯನಾರಕಿಯ ಸ್ಥಿತಿ. ಇಂಥ ಮೃತ್ಯುವಿಂದ ಅಮೃತಂ ಗಮಯ ಎಂಬ ಪ್ರಾರ್ಥನೆ ಫಲಿಸಬಾರದೆ ಎನ್ನಿಸುತ್ತದೆ.

# ಮಾವು

ಮೇಲಿನ ಹೆಸರನ್ನು ಓದಿ ಚೀಣದ ಮಾವು-ತ್ಸೆ-ತುಂಗರ ವಿಚಾರ ಬರೆಯುತ್ತಿದ್ದೇನೆಂದುಕೊಳ್ಳಬೇಡಿ. ಬರೆಯಬಾರದೆಂದಲ್ಲ. ಅಷ್ಟು ನನಗೆ ಅವರ ವಿಷಯ ತಿಳಿಯದು. ಸದ್ಯಕ್ಕೆ ಅಗತ್ಯವೂ ಇಲ್ಲ. ಅಂಥ ಆಧುನಿಕ ಸತ್ವಗಳನ್ನು ಕುರಿತು ಬರೆಯಬೇಕಲ್ಲವೇ ಎಂಬುದೂ ಇಲ್ಲ. ನಾವು ಲೋಕವಿವೇಕವನ್ನು ಸಂಪಾದಿಸಬೇಕಾದರೆ ಅಂಥದೆಲ್ಲ ನಮಗೆ ಪರಿಚಿತವಾಗಿರಬೇಕು, ನಿಜ. ಆದರೆ ಈಗ ನನ್ನ ಉದ್ದೇಶದಲ್ಲಿರುವುದು ನಮ್ಮ ಮಾವು: ಒಂದು ಸಸ್ಯವಿಶೇಷ. ಗಿಡ, ಚಿಗುರು, ಹೂ, ಕಾಯಿ, ಹಣ್ಣು ಉಳ್ಳದ್ದು. ಅವುಗಳಲ್ಲಿಯೂ ಮುಖ್ಯ ಭಾಗ ಅಷ್ಟು, ಮುಖ್ಯವಲ್ಲದ್ದು ಅಷ್ಟು. ಮುಖ್ಯವೆಂದರೆ ನನಗೆ. ನಿಮಗೂ ಅದೇ ಮುಖ್ಯವಾದರೆ ಸಂತೋಷ. ಇಲ್ಲವಾದರೆ ನುಂಗಿಕೊಳ್ಳಿ. ಮಧುರೇಣ ಸಮಾಪಯೇತ್ ಎನ್ನುತ್ತಾರಾದ್ದರಿಂದ ಅಷ್ಟು ಮಧುರವಲ್ಲದ್ದನ್ನು ಮೊದಲು ಹೇಳಿ ಮುಗಿಸಿಬಿಡೋಣ. ವೇದಾಂತಿಗಳ ಅರಕೆಯ ರಮ್ಯವಾದ ಅಂತಿಮ ಮಾಧುರ್ಯದ ದೃಷ್ಟಿಯಿಂದ ಅವು ಮಧುರವಲ್ಲವೇ ಹೊರತು, ಉಳಿದ ಹಲವುಗಳಿಗಿಂತಲೂ ಅವೂ ಮಧುರವೇ : ಕಲ್ಪನೆಗೆ, ಕಣ್ಣಿಗೆ, ಬಾಯ್ಗೆ, ಪಂಚೇಂದ್ರಿಯ ತೃಪ್ತಿಗೆ. ದಕ್ಷಿಣ ದೇಶದ ನಮ್ಮನ್ನು ಕುರಿತು ಅಕ್ಕಿ, ಬಾಳೆ, ಹಸುಗಳ ದೇಶದವರು ಎನ್ನುವುದುಂಟು. ಏಕಾಗಬಾರದು? ಇದರಿಂದ ಕಡಮೆಯೇನು ? ಗೋಧಿ, ಬಟಾಟೆ, ಮೀನು, ಮೊಸಳೆಗಳ ಪ್ರಾಧಾನ್ಯದಿಂದ ಅವರು ಗಳಿಸಿರುವ ಹೆಗ್ಗಳಿಕೆಯೇನು? ಅಕ್ಕಿಯವರ ಲಘಿಮೆಯೇನು ? ನಮ್ಮವರ ಮೆದುಳು ಚುರುಕು. ಗೋಧಿ ಜಡ. ಅವರನ್ನೇ ಕೇಳಿ. ಹೇಳುತ್ತಾರೆ-ಜಡ ಹೌದೊ ಅಲ್ಲವೊ ? ಜೊತೆಗೆ ತೆಂಗು, ಮಾವು, ಮಲ್ಲಿಗೆ ಸೇರಿಸಿದರೆ ನಮ್ಮ ಶಿಸ್ತು ಸಜ್ಜುಗಳಿಗೆ ಬೆಲೆ ಕೊಟ್ಟ ಹಾಗಾಗುತ್ತದೆ. ಯಾರು ಒಪ್ಪಲಿ ಯಾರು ಬಿಡಲಿ, ಸತ್ಯಕ್ಕೆ ಚ್ಯುತಿ ಬಾರದಲ್ಲ! ನಮ್ಮ ವ್ಯಕ್ತಿತ್ವ ನಮ್ಮದು ; ಗುರುತಿಸುವ ಅಂಶಗಳು ಹತ್ತಿದ್ದರೆ ಗುರುತಿಸದವು ನೂರು ಒಳಗಿರಬೇಕು. ಅವುಗಳಲ್ಲಿ ಮಾವು ಸೇರುವುದಾದರೆ ಸಂತೋಷ.

ಚೈತ್ರ ಬಂದಿತು ಮೊನ್ನೆ-ಪ್ರತಿವರ್ಷದಂತೆಯೇ. ಅದಕ್ಕೂ ಮುಂಚೆ ನಮ್ಮ ಮಧುಕರಿಕೆ ಅದನ್ನು ಕಂಡಳು,-'ಆತಾಮ್ರಹರಿತ ಪಾಂಡರ ವಸಂತ ಮಾಸಸ್ಯ ಜೀವ ಸರ್ವಸ್ವ'ವಾದ ಮಾವಿನ ಚಿಗುರನ್ನು. ಮನ್ಮಥನ ಆರನೆಯ ಬಾಣವಾಗು ಎಂದು ಹರಸಿ ಅರ್ಪಿಸಿದಳು. ಅರ್ಪಣೆ ಸಾರ್ಥಕವಾಯಿತು. ಎಳ ಮಿಡಿಯ ವಾಸನೆ ದೂರದಿಂದ ಬಂತು. ಇವಳು ಮದಿಸಿ ಸ್ವಾಗತ ಕೊಟ್ಟಳು ; ಮುದ್ದಿಸಿದಳು. ನಾವು

ಹೆಬ್ಬಾಗಿಲಿಗೆ, ಒಳಬಾಗಿಲುಗಳಿಗೆ ಮಾವಿನ ತೋರಣ ಕಟ್ಟಿದೆವು. ಮನೆಗೆ ಪುರೋಹಿತರು ಬಂದರು ; ಸೂರ್ಯ ನಮಸ್ಕಾರ ಮಾಡಿಸಿ-ಏನು, ಮಾಡಿ-ಹೋದರು. ತಾಮ್ರದ ಪಂಚಪಾತ್ರೆಯಲ್ಲಿ ವಸಂತವನ್ನು ತುಂಬಿ ಮಾವಿನ ಚಿಗುರನ್ನು ಅದರಲ್ಲಿಟ್ಟು ಪೂಜೆ ಮಾಡಿ ಅದನ್ನು ಮನೆಗೆಲ್ಲ ತಳಿದು ಚೆಲ್ಲಿದರು. ಮಾವಿನೆಲೆಯಿಂದ ನಮ್ಮ ತಲೆಯ ಮೇಲೆ ಪ್ರೋಕ್ಷಣೆ ಮಾಡಿದರು. ಆ ರಸ ಸಂಪರ್ಕದ ಓಕುಳಿಯ ತೀರ್ಥವನ್ನು ತೆಗೆದುಕೊಂಡು ಹೊಸತಾದೆವು.

ಚೈತ್ರ ಮುಗಿದು ವೈಶಾಖ ಬಂದೂ ಎಷ್ಟೊ ಕಾಲವಾಗಿದೆ. ಅಲ್ಲಿಂದ, ವಸಂತೋತ್ಸವಗಳ ಸಂಭ್ರಮ ಮುಗಿದಿದೆ. ಆಗಿನ ಮಾವಿನ ನೆನಪು, ಮಾತು ಬೆಸೆದು ನಿಂತಿವೆ ಮನಸ್ಸಿನಲ್ಲಿ. ಮಾವಿನ ಚಿಗುರು, ಮಾವಿನ ಹೂಗಳ ಮೇಲೆ ಆಡುವ, ಎಲೆಯಿಂದ ಜೇನು ತೊಟ್ಟಿಕ್ಕುವ ಮಧು ರಸ, ಇವು ಕಣ್ಣಿಗೆ ಕಟ್ಟಿವೆ. ಗಿಡಗಳ ಕೆಳಗೆ ಹೋಗುತ್ತ, ಮಾದಕವಾದ, ಆ ಕೆಳಗೆ ಆಡುವ, ಆಡದ ಗಾಳಿ ಘನಿಸಿದಂತಿತ್ತು. ಗಿಡದಲ್ಲಿ ಸೂರ್ಯನ ಬೆಳಕಿಗೆ ಪ್ರವೇಶವಿಲ್ಲದಷ್ಟು ದಟ್ಟ ಪತ್ರರಾಜಿ. ಲಾಲ್‌ಬಾಗಿನ ನಡುಗಡ್ಡೆಯ ಜೊತೆ ಸುರಹೊನ್ನೆ ಹೆಚ್ಚು ಕತ್ತಲೊ ಈ ಮಾವೇ ಹೆಚ್ಚು ಕತ್ತಲೊ ನಿರ್ಣಯ ಕಷ್ಟವಾಗುವಷ್ಟು. ಅತ್ತ ಇತ್ತ ಕಣ್ಣು ಹೊರಳಿಸಿ ಯಾರೂ ಇಲ್ಲವೆಂದು ಖಚಿತ ಮಾಡಿಕೊಂಡು ನಾಲಿಗೆಗೆ ಇಳಿದು ಬರುವಂತಿರುವ ಆ ಚಿಗುರಿನ ತೊಂಗಲನ್ನು ನೆಕ್ಕಿ ಮಧುವನ್ನು ಆಸ್ವಾದನೆ ಮಾಡಿದ್ದು ಮರೆಯುವ ಹಾಗಿಲ್ಲ. ಇನ್ನೂ ಇದೆ ಆ ರುಚಿ ನಾಲಗೆಯ ಮೇಲೆ-ಸಿಹಿಯೊ, ಅದರ ಜೊತೆಯ ಹಸಿರು, ಹಸಗು, ಕಂಪು ಒಳಮನಸ್ಸಿನಲ್ಲಿ ಕನಲಿವೆ. ಇಷ್ಟು ವಯಸ್ಸಾದರೂ ಈ ಚೊಲ್ಲುತನ ಹೋಗಿಲ್ಲ. ಆದರೆ ಆ ಕಾಲ, ಈ ವರ್ಷ ಇನ್ನಿಲ್ಲ. ರಾಮನವಮಿಯ ಕೋಸಂಬರಿಗೆ ಮಾವನ್ನು ತುರಿದು ಹಾಕಿದ್ದರು. ತಾಯಿ ತೀರಿಕೊಂಡ ವರ್ಷದಲ್ಲಿ ಮೊದಲ ಬಾರಿಗೆ ತೊಕ್ಕು, ಚಿತ್ರಾನ್ನ ಸೇವನೆ ಆಯಿತು. ಆಗ ತಾನೆ ಗಾಣ ಆಡಿಸಿ ತಂದ ಎಳ್ಳೆಣ್ಣೆ ಜೊತೆಗೂಡಿ ರುಚಿಗೆ, ಸ್ನಿಗ್ಧತೆ ಕೊಟ್ಟಿತು.

ಎಷ್ಟು ಬಗೆಯ ಮಾವೊ ಅಷ್ಟು ಬಗೆಯ ಚಿಗುರು ; ಅಷ್ಟು ಬಗೆಯ ಹೂ. ಗಿಡದ ರಚನೆಯೂ ಹಾಗೆಯೇ. ಬಲಿತ ಮೇಲೆ ಅದೇನು ಅಂಥ ಚೆಲುವಾದ ನಯವಾದ ಮರವಲ್ಲ. ಆದರೆ ನನ್ನ ಮರದ ಕವಲುಗಳಲ್ಲಿ ನಲ್ಲನಲ್ಲೆಯರು ಕುಳಿತು ಸರಸವಾಡುವ ಸೌಲಭ್ಯವಿದೆ ; ಕೈಗೆಟುಕುವಂತೆ ಚಿಗುರೊ ಹೂವೊ ತೂಗುತ್ತಿರುತ್ತದೆ. ಮೈ ಕೈ ಸಡಿಲ ಮಾಡಿಕೊಳ್ಳಲು ತೂಗಾಡುವ ಕೆಳಗೊಂಬೆ, ಒಳಗೊಂಬೆ ಇವೆ. ಇನ್ನಷ್ಟು ಏರಿದರೆ ಯಾರಿಗೂ ಕಾಣದಂತೆ ಇಬ್ಬರು ಕೂಡಬಹುದು. ಎಷ್ಟು ಬಗೆಯ ಮಾವೊ ಅಷ್ಟು ಬಗೆಯ ಆಕೃತಿ, ರಂಗು, ಚುಂಗುಗಳ ತೇರು ಕಟ್ಟುತ್ತದೆ-ಅದರ ಹೂ ಗೊಂಚಲು. 'ತಳಿರೊಳ್ ನೀನೆ ಬೆಡಂಗನಯ್' ಎಂಬ ಕವಿವಾಣಿ ಸಾಮಾನ್ಯೋಕ್ತಿ. ಶೃಂಗಾರದ ಸಾರವೇ ಅದಾದರೂ ಅಂಥ ವರ್ಣನೆ ಅದಕ್ಕೆ ಸಾಧಾರಣ ಲಕ್ಷಣ....

ಸತ್ವವಾಕ್ಕಾದ್ದರಿಂದ. ಎಷ್ಟು ಸೊಕ್ಕಿದ್ದಾನೆ ಪಂಪ; ಎಷ್ಟು ಸೊಕ್ಕುತ್ತಾರೆ ಹಿಂದಿನ ನಮ್ಮ ಕವಿಗಳು ಮಾವಿಗೆ; ಮಲ್ಲಿಗೆಗೆ ? ಅವರೆಡಕ್ಕೂ ಎಷ್ಟು ಸಲ ಮದುವೆ ಮಾಡಿದರೂ ಅವರಿಗೆ ತೃಪ್ತಿಯಿಲ್ಲ. ಅದಕ್ಕೆ ಸೊಕ್ಕಿ ಎಷ್ಟು ಕುಕಿಲಿದರೂ ನಮ್ಮ ಕೋಗಿಲೆಗೆ ತಣಿವಿಲ್ಲ; ದಣಿವಿಲ್ಲ. ಕೋಗಿಲೆಗೊಂದಕ್ಕೇ ಅಲ್ಲ ಉನ್ಮಾದ. ನಮ್ಮ ಕವಿಗಳನ್ನು ಕೇಳಿ; ಚಿತ್ರಕಾರರನ್ನು ಕೇಳಿ, ಹೇಳುತ್ತಾರೆ. ಒಡವೆಯವರನ್ನು ಕೇಳಿ ; ಜರತಾರಿಯವರು, ನೆಯ್ಗೆಯವರು ಹೇಳಲಿ. ಕೋಗಿಲೆ ಕೂಗಿ ಕೂಗಿ ಅದರ ಗಂಟಲು ಗಾರಾದೀತು. ನಮ್ಮ ಕವಿಗಳ ಗಂಟಲು ಗಾರಾಗದು; ಹಿಂದಿನವರದಾಗುತ್ತಿತ್ತೊ ಏನೊ. ಇಂದಿನವರನೇಕರು ಬರೆವ ಕವಿಗಳು ಹಾಡುವವರಲ್ಲ, ಆದ್ದರಿಂದ. 'ಕುಸುಮಶರನ ತೇರಂತೆ ಚೆಲ್ವಾಯ್ತು ಚೂತಂ' ಎಂದು ಬರೆದ ಷಡಕ್ಷರನ ಪದ್ಯ ಎಷ್ಟು ಚೆಲುವೊ ವಿವರವೊ ನೀವು ಬಲ್ಲಿರಿ ; ಆ ಪಾಪಿ ಆ ಪದ್ಯ ಬರೆದು ನಮ್ಮ ಗೋಳು ಹುಯಿದುಕೊಂಡ. ಅದನ್ನೆಲ್ಲ ನೆನಪಿನಲ್ಲಿಟ್ಟುಕೊಂಡು ಮಹಾಮಹೋಪಾಧ್ಯಾಯ ಕೊಟ್ಟ ೫.೨ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಸರಿಯಾಗಿ ಉತ್ತರ ಬರೆದು ಎರಡು ನಂಬರು ಪಡೆಯಲು ೫-೧೦ ನಿಮಿಷ ಕಳೆದುದಾಯಿತು. ಇಂಥ ಕೊಲೆಕೃತ್ಯಗಳನ್ನು ನೆನೆಯುವುದೇನು ಬಿಡಿ. ಪರೀಕ್ಷೆಯಲ್ಲಿ ನಂಬರು ಬಾರದಿದ್ದರೆ ಮಾವಿನ ಚಿಗುರಿಗೆ, ಹೂವಿಗೆ ಯಾವುದು ಊಣೆಯ ? ಕಣ್ಣಿಗೆ ಬಣ್ಣ, ಕುಸುರಿ, ಕಲ್ಪನೆಗೆ ಕನಸು ಎಷ್ಟು ಬಗೆ ಬೇಕು ? ಎಷ್ಟು ಎಷ್ಟು ಪ್ರಕಾರದ ಆಕೃತಿ ನಿಡಿ, ನವುರು, ರಂಗು ಬೇಕು-ಎಲೆಗೆ ಕುಡಿಗೆ ? ಗಾಳಿಯಲ್ಲಿ ಜೋಲಿ ಯಾವ ಅಶೋಕೆಯ ತೊಂಗಲಿಗೆ ಸೋಲು ತಾರದು ಮಾವು ಸ್ಪರ್ಧೆ ಹೂಡಿ? ರಕ್ತದ ಕುಡಿಯಂತಿರುವ ಆ ಚಿಗುರ ಪಕ್ಕದಲ್ಲಿ ಸನ್ಯಾಸಿಯ ಕಾವಿರೇಷ್ಮೆ ಸಾಟಿಯೆ ? ಎಳ ಕಂದನ ಅಂಗಾಲಗೆಂಪು ಎನ್ನಲೆ ? ಮರಮರದ ಜಾತಿ ಲಕ್ಷಣ, ವೈಶಿಷ್ಟ್ಯ ಉಂಟು. ಎಷ್ಟು ದಟ್ಟ, ಕೋಮಲ, ಬೆಡಗು ಆ ಹೂವಿನ ತೇರು ! ಒಂದೊಂದರಲ್ಲಿಯೂ ಎಷ್ಟು ದುಂಬಿಗಳ ಮೇಳ, ಝುಂಕಾರ!

ಆ ಕಾಲವೂ ಮುಗಿಯಿತು. ಒಂದು ಚೆಲುವಿಗೆ ಆಶ್ರಯಕೊಟ್ಟು ಬೇಸರ ಪಡಿಸುವ ಸತ್ವ ಏನು ಮಹಾ ಸತ್ವ! ಹೂ ಬಿದ್ದು ಮಿಡಿಯಿಟ್ಟು, ಹುಸಿಕಾಯಿ ಬಿದ್ದು, ನೈಜವಾದ ಕಾಯಿಗೊಂಚಲು ಜೋಲಿತು; ತೂಗಿತು ; ತೊನೆಯಿತು. ಅದರದೇ ಮಾಟ. ನಿಮ್ಮ ಮಗುವಿನ ಗಲ್ಲ ; ನಿಮ್ಮ ಮಡದಿಯ ಕುಪ್ಪಸದ ಅಂಚಿನ ಚಿತ್ರನೆಯ್ಗೆ ; ಉದ್ದಕ್ಕೂ ಅದೇ ಹುಲಿಯುಗುರೊಡನೆ, ಮುತ್ತು ರತ್ನಗಳೊಡನೆ ಆಡುವ ಚಿನ್ನದ ಆಭರಣವೂ ಅದೇ. ಹೇಳಿ ಮಾಡಿಸಿಕೊಂಡಿತಲ್ಲವೆ ಓಜನಿಂದ ಆ ಮಾಗಾಯಿ ಆಕೃತಿಯನ್ನು? ಆ ದರ್ಪ, ಆ ಬೆಡಗು ಅದರದು. ಕಾಯಲ್ಲಿ ತಿರುಳಿಟ್ಟಿತು, ಬಲಿಯಿತು. ಒಗಚು ಹೋಗಿ ಹುಳಿ ಹೂಡಿ, ಆ ಹುಳಿ ಮುರಿದು ಸವಿಯಿಟ್ಟು ದೋರೆಹಣ್ಣು, ಪಾಕಕ್ಕೆ ಬರುತ್ತಿರಲು ನೋಟ ನೂರು ಕಣ್ಣುಗಳಿಗೆ ಹಬ್ಬ ; ಸಾವಿರ ಕಣ್ಣುಗಳಿಗೆ ಕೀಸರು. ದಿನವೂ ತೋರವಾಗುತ್ತಿತ್ತು, ಹಸುರು, ಕೆಂಪು, ಕಪ್ಪು, ಹಳದಿ, ಮಿಶ್ರ ಸಂಯೋಗದಲ್ಲಿ ಅದು ಬಲಿವ ಕಣ್ಕೆಣಕು ಸವಿಮೋಹದ್ದು. ಆ ಮಾಟ, ಅದರ ನುಣುಪು ಕಣ್ಣಿಂದ ಅಂಗೈಗೆ,

ಅಂಜಲಿಗೆ ಇಳಿದು ಅದನ್ನು ಸೋಕಬಯಸುವ ಆತುರ ದುರ್ವಾರ್ಯವಾದ್ದು. ಎಷ್ಟೋ ದಿನ ಮನೆಯ ಕೋಣೆಯಲ್ಲಿ ಕುಳಿತು ಬಯಕೆಯ ಆ ಬೇನೆಯನ್ನು ಅನುಭವಿಸಿಯಾಗಿದೆ. ಏನು ಮಾಡಿದರೂ ತೊಲಗದೆ, ಅದೇ ಅದೇ ಆಡುತ್ತದೆ : ಆ ಮಾಟ, ಆ ನುಣುಪು, ಆ ಸೋಕು, ಆ ಬಗೆಯ ಬಯಕೆ.

ಇದನ್ನೆಲ್ಲ ನೀವೂ ಅನುಭವಿಸಿರಬೇಕು. ಎಲ್ಲರೂ ಅನುಭವಿಸಿಯೇ ತೀರಬೇಕೆಂದಲ್ಲ. ಹಾಗೆ ಮಾಡದಿದ್ದರೆ ನೀವು ಕೀಳರೆಂದೂ ಅಲ್ಲ. ಒಬ್ಬೊಬ್ಬರಿಗೆ ಒಂದೊಂದು ಹುಚ್ಚು; ನೀವು ಅನಾನಸ್ ಹುಚ್ಚರಿರಬಹುದು. ಹಲಸಿನ ಅಂಟು, ಮುಳ್ಳು ನಿಮಗೆ ಪ್ರಿಯವಿರಬಹುದು; ಅವರವರ ಹುಚ್ಚು ಅವರಿಗೆ ಆನಂದ. ನಮಗೆ ಮಾವಿನದು.

....ಇಷ್ಟು ಹೊತ್ತಿಗೇ ಬೇಕಾದಷ್ಟು ಹಣ್ಣು ಬಂದಿರಬೇಕು, ಪೇಟೆಗೆ. ನಾನಿನ್ನೂ ಪೇಟೆಗೆ ಹೋಗಿ ನೋಡಿಲ್ಲ. ಅಲ್ಲಿ ಇಲ್ಲಿ, ಈಚೆಗೆ ಆಚೆಗೆ ಹಣ್ಣುಗಾಡಿಗಳು ಓಡಿಯಾಗುತ್ತಿವೆ. ಯಾವ ಯಾವುವೊ ಬೇರೆ ಪ್ರಾಂತಗಳ ಹಣ್ಣನ್ನು ಹೊತ್ತು ತಂದವು; ಬಲವಂತದಿಂದ ಮಾಡಿಸಿದ ಹಣ್ಣುಗಳು,-ರುಚಿಯಿಲ್ಲ, ಶುಚಿಯಿಲ್ಲ ; ಸವಿಯಿಲ್ಲ, ಪಕ್ವವಲ್ಲ, ಹೊಟೇಲುಗಳವರು ಡಬ್ಬಗಳಲ್ಲಿ ಸಂಗ್ರಹಿಸಿದ್ದ ಹೋಳನ್ನು ಸೇರಿಸಿ ಸೀಕರಣೆ ಮಾಡಿ ಕೊಡುತ್ತಿದ್ದಾರೆ. ಹೊಸ ಹಣ್ಣೆಂದು ಭ್ರಾಂತಿ ನಿಮಗೆ ಬರುವಂತೆ ಹತ್ತು ಹಣ್ಣನ್ನು ನಿಮ್ಮ ಕಣ್ಣೆದುರಿಗೆ ಸೇರಿಸಿ ಕಾಣಿಸಿ ದೃಷ್ಟಿ ಪರಿಹಾರ ಮಾಡುತ್ತಿದ್ದಾರೆ. ನಿಮ್ಮಂಥ ಸತ್ವಕಾಮಿಗಳ ತೃಪ್ತಿಗಾಗಿ ಅದರಿಂದಲೇ ರಸವನ್ನೋ ಹೋಳನ್ನೋ ಮಾಡಿಕೊಡುತ್ತಾರೆ.

ಆದರೆ ಇವೆಲ್ಲ ಕಾಲ ನೆರೆಯುವ ಮುಂಚಿನ ಹಣ್ಣು. ಆತುರಕ್ಕೆ ಒದಗುವ ಫಲ. ಹಣ್ಣು ಮಾಡಿಸಿದ್ದು. ನಿಜವಾದ ಫಲ ಬೇಕಾದರೆ ಅದರ ಕಾಲಕ್ಕೆ ಕಾಯಬೇಕು. ಅವಸರಪಟ್ಟರೆ ಅರೆತೃಪ್ತಿ ಮಾತ್ರ ಆದೀತು.

ಇದನ್ನೆಲ್ಲ ಕಟ್ಟಿಕೊಂಡು ನಮಗೇನು ಎಂದೀರೇನೊ. ನಿಮಗೆ ಬೇಕಾದ್ದೂ ಹಣ್ಣು; ನಮಗೂ ಅಷ್ಟೇ. ಮಾವು ಎಂದರೆ ಮಾವಿನಹಣ್ಣು. ಹಣ್ಣು ತಿರುಳು. ಶಾಕಾಹಾರಿಗಳಲ್ಲದವರು ಅದನ್ನು ಖಂಡ, ಮಾಂಸ ಎನ್ನುತ್ತಾರೇನೊ. ಆ ರಕ್ಕಸತೆಯನ್ನು ಅವರಿಗೆ ಬಿಡಿ. ರಸಿಕತೆ ನಿಮ್ಮದು, ನಮ್ಮದು. ಸಿಪ್ಪೆಯೊಲ್ಲದ, ನಾರಿಗೆ ಅಸಹನೆ ತೋರುವ, ಈ ಆತುರ ತವಕ ನಿಮ್ಮದು, ಬಲ್ಲೆ, ಯಾವುದೋ ಒಂದು, ಆದರಾಯಿತು ತಿಂದರಾಯಿತು ಎಂಬ ಅರಸಿಕತೆ ನಮ್ಮಿಬ್ಬರಿಗೂ ಮೆಚ್ಚಲ್ಲವಾದ್ದರಿಂದ ನಿಮಗೆ ಇದನ್ನು ಹೇಳುತ್ತಿದ್ದೇನೆ. ನಮಗೆ ಬೇಕಾದುದು ಮಾವಿನ ನಾಗರಿಕತೆ. ನಗರಗಳಲ್ಲಿರುವ ನಮಗೆ ಅಲ್ಲದೆ ಗ್ರಾಮಗಳವರಿಗೆ ಅದು ಹೇಗೆ ಸಿಕ್ಕೀತು? ನೀವೇ ಹಣ್ಣನ್ನು ಮೊದಲು ಪಡೆವವರು: ನಿಮಗೆ ಸಿಕ್ಕುವಷ್ಟು ಬಗೆಗಳು, ಪಾಪ, ಹಳ್ಳಿಯವರಿಗೆ ಹೇಗೆ ಸಿಕ್ಕಬೇಕು ? ನಿಮಗೆ ಸಿಕ್ಕುವಷ್ಟು ಕಾಲವಾದರೂ ಅವರ ಪಾಲಿಗೆ ಹಣ್ಣು ಹೇಗೆ ಉಳಿದೀತು ? ಲೋಕವೆಲ್ಲ ನಿಮಗೆ ದುಡಿಯುವುದಾದ್ದರಿಂದ ನಿಮ್ಮ ಅದೃಷ್ಟ ಹಿರಿದು. ಯಾವುದೊ ವಿಜಾತಿ,

ಕುಲಗೆಟ್ಟ, ಬಲವಂತರದಲ್ಲಿ ಹಣ್ಣು ಮಾಡಿಸಿದ ದಪ್ಪಸಿಪ್ಪೆಯ ಹಣ್ಣಿಂದ ಹಿಡಿದು ರಸಪುರಿ, ಬಾದಾಮಿ, ಮಲಗೋವ, ಬಂಗಾನಪಲ್ಲಿ, ನೀಲಂ, ಬಂದರೆ ತೋತಾಪುರಿ, ಲಂಗ್ಡಾ ಎಷ್ಟೋ ಬಗೆಯವು, ಗಾತ್ರದವು, ಆಕೃತಿಯವು, ರುಚಿಯವು, ರಸದವು, ಬೆಲೆಯವು, ಸೌಖ್ಯದವು. ಬೆಂಗಳೂರಲ್ಲಿ ಹಿಂದೆ ಒಂದು ಸಲ ದೊಡ್ಡ ಮಾವಿನ ಪ್ರದರ್ಶನವೊಂದಾಯಿತು. ಚಿಲ್ಲರೆ ನೂರನ್ನು ಬಿಡಿ, ಗಟ್ಟಿ ಹಣ್ಣಿನ ಜಾತಿ ೧೦೦-೧೫೦ ಅಂದು ನೋಡಿದ್ದುಂಟು. ಬಗೆಗಳೂ ಎಷ್ಟೋ. ಬಹುರತ್ನಾ ವಸುಂಧರಾ ಎಂಬಂತೆ ರತ್ನಾಕ್ಕೆ ಬದಲು ಬಹ್ವಾಮ್ರಾ ಎನ್ನಬಹುದೇನೊ. ವ್ಯಾಕರಣ, ಸಂಧಿ, ಸಮಾಸ, ಲಿಂಗ, ರೂಪ ಏನನ್ನುವುದೊ ಅದನ್ನು ಕಟ್ಟಿಕೊಂಡು ನಮಗೇನು ಮಾವಿಂದ ಮತ್ತರಾದವರಿಗೆ? ಸಿಕ್ಕುವಾಗಲೂ ಬಡಬಗ್ಗರಿಗೆ ಸಿಕ್ಕುವುದು ಸೀಕಲು, 'ಕಂತ್ರಿ' ತಾನೆ. ಬೆಂಗಳೂರೆಲ್ಲ ಗುಜರಾತಿಗೆ, ಸಿಂಧಿಗೆ, ಪಂಜಾಬಿಗೆ, ಪರಂಗಿಯವರಿಗೆ ಮೀಸಲು. ಅವರು ಚೆಲ್ಲುವಷ್ಟು ಹಣ ನೀವೆಲ್ಲಿ ಚೆಲ್ಲಿ ಕೊಂಡೀರಿ? ಅವರಿಗೆ ಹಣ್ಣು ದಿನದ ವಾಡಿಕೆಯಂತೆ ನಡೆಯುವುದಾದರೆ ನಿಮಗೇಕೆ ಆಗದೋ! ಇಲ್ಲಿನ ಹಣ್ಣಲ್ಲಿ ಆರಿಸಿದ ಭಾಗ ಬೊಂಬಾಯಿಗೆ, ದೆಹಲಿಗೆ, ದ್ವೀಪಾಂತರಕ್ಕೆ ಹೋಗತಕ್ಕದ್ದು ಹೋಗುತ್ತದೆ. ಅವೆಲ್ಲ ರಫ್ತು ಬೆಲೆಗಳವು, ಸಾಗಣೆಗೆ. ಶೇಷಭೋಗಿಗಳು ನಾವು. ಇತರರು ಕಳೆದು ಉಳಿದುದನ್ನು ತಿಂದು ತೃಪ್ತರಾಗಬೇಕಾದವರು. ಅಲ್ಲಿಗೂ ಸರಿಯೆ. ಆದರೆ ಬೆಂಗಳೂರಲ್ಲಿಯೂ ಲಂಗ್ಡಾ ಆಮ್ ಸಿಕ್ಕುವುದು ಅಪರೂಪ. ಗ್ರಾಂಡ್ ಟ್ರಂಕ್ ಎಕ್ಸ್‌ಪ್ರೆಸ್ಸಿನಲ್ಲಿಯೊ ಫ್ರಾಂಟಿಯರ್ ಮೆಯಿಲ್‌ನಲ್ಲಿಯೊ ಮೊದಲ ತರಗತಿಯಲ್ಲಿ ಪ್ರಮಾಣ ಮಾಡುವವರಾದರೆ, ಅಥವಾ ರಾಜಮಹಾರಾಜರ ಯೋಗ್ಯತೆಯವರಾದರೆ ಅಂಥದು ಎಂದಾದರೂ ಎಲ್ಲಿಯಾದರೂ ಸಿಕ್ಕೀತು. ಆದರೂ ನಿರಾಶೆಪಡದೆ ಹುಡುಕುವವರಿಗೆ, ಸಾಧಿಸುವವರಿಗೆ, ನಮ್ಮೂರಲ್ಲಿಯೂ ಸಿಕ್ಕುತ್ತದೆ ಒಳ್ಳೆಯದು. ಸಾಹೇಬರನ್ನೂ ತಿಗಳರನ್ನೂ ಖುಷಿ ಮಾಡಿಟ್ಟುಕೊಂಡಿದ್ದರಂತೂ ಖಂಡಿತ.

ಅವುಗಳಲ್ಲಿ ತುಂಬಾ ರಸಪುಷ್ಟಿಯುಳ್ಳದ್ದು, ಅದರ ಹೆಸರೇ ಹೇಳುವಂತೆ, ರಸಪುರಿ (ಪೂರಿಯೊ?), ಬಾದಾಮಿ, ಮಲಗೋವ. ನಾಡಿನದಾದರೆ ಊರೂರಿನ ದೇಸಿ ಹಣ್ಣು. ಆ ಊರುಗಳಲ್ಲಿಯೂ ಕೆಲವು ಹೆಸರಾದ ಮರಗಳುಂಟು. ಗೌಡರ ಮರದವು, ನರಸಪ್ಪನ ಹೊಲದ್ದು; ನಮ್ಮ ಗೆಳೆಯರು ತೀ.ನಂ.ಶ್ರೀ. ತೀರ್ಥಪುರದಿಂದ ನಮಗೆ ಮದಲಿಂಗನ ಕಣಿವೆಗೆ ತಂದುಕೊಟ್ಟದ್ದು; ಪಂಜೆಯವರಿಗೆ ಹಣ್ಣಿನ ಕಾಲದ ಪೂರ್ತಿ ದೊರಕುತ್ತಿದ್ದ ದುಂಡು ನಾಡಹಣ್ಣು; ದೊಡ್ಡದಲ್ಲದ ಚಿಕ್ಕದಲ್ಲದ ಹದವಾಗಿ ಬಿಟ್ಟ ಹಣ್ಣು, ನಾರಿನದು; ನಾರಿಲ್ಲದ್ದು.... ನಮಗೆ ಊರಿಲ್ಲ, ತೋಟವಿಲ್ಲ, ವರ್ತನೆ ಇಲ್ಲವಾಗಿ ನಾವು ಮಾರ್ಕೆಟ್ಟಿನ ಮರ್ಜಿ ಕಾಯಬೇಕಾದವರು. ಬಹುಜನ ನಮ್ಮಂತಹವರೇ ಆದ್ದರಿಂದ ನಾವೇ ಪ್ರಾತಿನಿಧಿಕ ಸತ್ವಗಳು. ಯದೃಚ್ಛಾಲಾಭಸಂತುಷ್ಟಃ ಎಂಬುದನ್ನು ಕೃಷ್ಣ ಪರಮಾತ್ಮನು ನಿರ್ದೇಶಿಸಿದುದು ನಮ್ಮಂತಹವರನ್ನು ಎಂದುಕೊಳ್ಳಬಹುದು ಕೂಡ.

ಆದರೆ ಏನು ದುರ್ಭಾಗ್ಯವೊ ಆಸೆ ಇರುವಷ್ಟು ಆರಾಧನೆ, ಸೇವೆ ನಡೆಯುವ ಹಾಗಿಲ್ಲ. ಚಿಕ್ಕಂದಿನಿಂದ ಭೀತಿ, ಆತಂಕ. ಒಂದು ತರಹದ್ದಲ್ಲ, ಎಳತರಲ್ಲಿ ಹಿರಿಯರ ಭೀತಿ; ಬೆಳೆದಾಗ ಡಾಕ್ಟರ ಭೀತಿ. ವಯಸ್ಸಾದಾಗ ಜನ ಆಡಿಕೊಂಡಾರು ಎಂಬ ಭೀತಿ. ಕಿಸೆಯಲ್ಲಿ ದಿನವೂ ಹಣ ಊರದ ಭೀತಿ. ಧ್ವನಿ ವ್ಯಂಗ್ಯಗಳಲ್ಲಿ ಮನೆಯವರೊ ಗೆಳೆಯರೊ ಕುಕ್ಕಿ ಕುಕ್ಕಿ ನುಡಿಯುವ ಭೀತಿ. ಅಂತೂ ಇಂತೂ ಬೇಕಾದಷ್ಟು ಅವನ್ನು ಕೊಳ್ಳುವ, ತಿನ್ನುವ ಅವಕಾಶವಿಲ್ಲವಾದಾಗ, ಯಾರೊ ಹಿರಿಯರ ನೆಪವಿಟ್ಟು, ಅತಿಥಿ ಅಭ್ಯಾಗತರ ನೆಪವಿಟ್ಟು, 'ಬಾಯಿ ಏಕೊ ಅರೋಚಕವಾಗಿದೆ, ನಾಲ್ಕು ಹಣ್ಣು ತರಿಸಿದರಾಗುತ್ತಿತ್ತು' ಎಂದು ಕಳ್ಳದನಿಯಲ್ಲಿ ಪೀಠಿಕೆ ಹಾಕಿ, 'ಮಂಡಿಗೆ ಹೋಗಿ ಒಂದಷ್ಟು ತಂದು ತಿನ್ನಿ' ಅನ್ನಿಸಿಕೊಂಡು, ಅವನ್ನು ಮನೆಗೆ ತರುವ ಕಲ್ಪತಂತ್ರ ಹೂಡಬೇಕಾಗುತ್ತದೆ. ಎಲ್ಲರೂ ಸುಖವಾಗಿದ್ದರೆ ಸರಸವಾಗಿ ಕುಳಿತು ಚಕ್ಕಂದವಾಡುತ್ತ, ಜೊತೆಗೆ ಸೇವಿಸಬಹುದು. ಇಲ್ಲವಾದರೆ ಏನೊ ತುರ್ತು, ಕೆಲಸದ ನಟನೆ ಮಾಡಿ ಸ್ವಂತ ಕೋಣೆಯ ಏಕಾಂತದಲ್ಲಿ ಫಲಸೇವೆ ನಡಸುವುದು ಅಸಾಮಾಜಿಕ ವೃತ್ತಿಯಾದರೂ ಅಗತ್ಯವಾಗಿರುತ್ತದೆ. ಗೋಷ್ಠಿಯೋಗವಿಲ್ಲವಾದರೆ–ತಪ್ಪು ನಿಮ್ಮದು. ಆದ್ದರಿಂದ ಇಲ್ಲಿ ಅಂತರಾತ್ಮನ ಕಾಟ ಸಲ್ಲದು. ಕನಕದಾಸರಂತೆ ನಾವು ಭಕ್ತರಲ್ಲದ್ದರಿಂದ ನಮಗೆ ದೇವರ ಕಾಟವೂ ಇಲ್ಲವಾಗಿ ಮಾರ್ಗವೆಲ್ಲ ಸುಮಾರ್ಗ.

ಮನೆಯಲ್ಲಿ ನೀವೊಬ್ಬರೇಯೆ? ತಂದುದನ್ನೆಲ್ಲ ನೀವೊಬ್ಬರೇ ಮುಗಿಸಿಬಿಟ್ಟರೆ ಉಳಿದವರು ಏನನ್ನುತ್ತಾರೆ ? ನಿಮ್ಮ ರಾವಣಾಭಿಲಾಷೆ ಹೇಗೇ ಒತ್ತಲಿ, ಮನೆಯ ಮಡದಿ ಹಂಗಿಸುವ ಹಾಗೆ ಮಾಡಿಕೊಳ್ಳಬಾರದಲ್ಲ ! ಹುಡುಗರಿಗೆ, ಮಕ್ಕಳಿಗೆ, ಹೊಸದಾಗಿ ಮನೆಗೆ ಬಂದ ಸೊಸೆಗೆ ಅಣಕಿಸುವ, ಆಡಿಕೊಳ್ಳುವ ನಡತೆಯಾಗಬಾರದು. ಅವರಿಗೆಲ್ಲ ಮೇಲ್ಪಂಕ್ತಿ ನೀವು. ಅವರ ಅಭ್ಯಾಸಗಳು ಉದಾತ್ತವಾಗಿ ಶಿಸ್ತು ಉಳಿಯುವಂತೆ ಮನೆಯವರಿಗೂ ನೀವು ಹಿತಮಿತವಾಗಿ ನಡೆದುಕೊಂಡರೆ ತಾನೆ ನಾಳೆ ಅವರು ಸರಿಯಾಗಿ ನಡೆದುಕೊಂಡು ನಿಮಗೂ ಹೆಸರು ತರುವುದು ! ಹೀಗೂ ಬಂತೇ ಅಡ್ಡಿ; ನಿರ್ಬಂಧ. ಏನು ಇವರಪ್ಪನ ಗಂಟು ಹೋಗುತ್ತದೆ ? ನಾವಲ್ಲವೇ ಸಂಪಾದಿಸುವವರು? ಬೇಕೆನ್ನುವಷ್ಟನ್ನು ಕೊಂಡು ತರುವವರು ? ಇವರೂ ತಿನ್ನಲಿ. ನಾವು ನಾಲ್ಕು ಹಣ್ಣು ಹೆಚ್ಚು ತಿನ್ನಬೇಕೆಂದರೆ ಎಷ್ಟೆಲ್ಲ ರಂಪ, ಆಕ್ರೋಶ ! ಬಾಯಿ ತಪ್ಪಿ ಈ ಮಾತನ್ನು ಆಡಿದಿರೊ : 'ಹೌದು, ನಿಮಗೆ ಬೇಕಾದ್ದಕ್ಕೆ ನೀವು ಆಸೆಪಡುವಂತೆ ನಮಗೂ ನಮ್ಮಾಸೆ ಇಲ್ಲವೊ ? ಈಗ ನೋಡಿ : ಮಗನಿಗೆ ಷೂ ಇಲ್ಲವಂತೆ. ತಮ್ಮನಿಗೆ ರಿಸ್ಟ್‌ವಾಚು; ಚಿಕ್ಕವಳಿಗೆ ಜುಮುಕಿ ; ತನಗೆ ಜಾರ್ಜೆಟ್ಟು, –ಈ ವಯಸ್ಸಿನಲ್ಲಿ ಅಥವಾ, ಪ್ರತ್ಯಾಮ್ನಾವಾಗಿ ಇನ್ನೆರಡು ಬಳೆಯೊ ಸರವೊ–ತವರಿಗೆ ಬಂದ ಮಗಳಿಗೆ ತಟ್ಟೆ, ಬಟ್ಟಲು ; ಅಳಿಯನ ಅಕ್ಕಸಾಲೆ ಬಿಲ್ಲು, ಎಷ್ಟಿಲ್ಲ ? ಅದಕ್ಕೆಲ್ಲ ನಿಮ್ಮ ಮನಸ್ಸು ಹರಿಯುವುದೇ ಇಲ್ಲವಲ್ಲ' ಎಂದು ಆಕ್ಷೇಪ ಬೀರುತ್ತ, ಇಪ್ಪತ್ತು ಮುವ್ವತ್ತು ವರ್ಷ ಜೊತೆಯಲ್ಲಿ ಸಂಸಾರ ಮಾಡಿದ ಮಡದಿಯ ಮೂದಲೆಯಿಂದ ಹೊಗಲೆಲ್ಲಿ ? 'ದಿನಾ

ಇಂದು ಮಾವು, ನಾಳೆ ಕಿತ್ತಿಳೆ ಎಂದು ನಿಮ್ಮೊಬ್ಬರ ರುಚಿ ಮಾತ್ರ ನೋಡಿಕೊಂಡುಬಿಟ್ಟರೆ, ನಾಳೆ ಇಬ್ಬರ ಮುಂಜಿ, ಮೂವರ ಮದುವೆ ಪ್ರಸ್ತ ಪ್ರಸಂಗ, ಇನ್ನೂ ಏನೇನೊ ಬೇರೆಯ ಚಿಂತೆಯೇ ಬೇಡವೆ ನಿಮಗೆ' ಎಂದರೆ ಏನು ಮಾಡುವುದು? ಇವೆಲ್ಲ ನಿಜ, ನಾನು ಅಲ್ಲವೆಂದೆನೆ ? ಆದರೆ, ನಾಲ್ಕು ಮಾವಿನ ಹಣ್ಣು ತರುವಷ್ಟು ಇವುಗಳಲ್ಲಿ ಯಾವುದು ಅಗ್ಗ, ನೀವೇ ಹೇಳಿ. ಅಷ್ಟು ಓರ್ಪು, ಯೋಚನಾಶಕ್ತಿ, ಕ್ಷಮೆ ಅವರಿಗಿರಬೇಕಲ್ಲ. ಅವರು ಆಡುವಷ್ಟು ಹಣವನ್ನು ಅಷ್ಟು ಜನರ ಅಗತ್ಯಕ್ಕಾಗಿ ಒಟ್ಟಿಗೆ ಎಲ್ಲಿಂದ ತರುವುದು ? ಅಷ್ಟೂ ಜನಕ್ಕೆ ರುಚಿಸಬಲ್ಲ ಹಣ್ಣನ್ನು ತಂದುಕೊಟ್ಟು ಎಲ್ಲರೂ ಸಮವಾಗಿ ಸುಖಪಡಿ, ಸಂತೋಷಪಡಿ, ನಮ್ಮ ಹರ್ಷದಲ್ಲಿ ಬೆರೆದು ಇದನ್ನೂ ಬೆಳಸಿ ಎಂದರೆ ಇದು ಕೇಳುವ ಜನವಲ್ಲ.

ಎರಡಕ್ಕೊ ಮೂರಕ್ಕೊ ನನಗೊಂದೆರಡು ಹಣ್ಣು ತಂದುಬಿಡಿ ; ಉಳಿದಂತೆ ನೀವು ಏನಾದರೂ ಮಾಡಿಕೊಳ್ಳಿ ಎಂದರೆ ಆದೀತೆ ? ನೀವು ತಿನ್ನುವಾಗ ಮಕ್ಕಳ ಪಾಡೇನು? ಅಜ್ಜಿ, ಮುದುಕಿ ಇದ್ದಾರೆ ; ಅವರಿಗೆ ಹೇಗೆ ? ತಮಗೂ ಬೇಡವೆನ್ನುವಷ್ಟು ನಿಟ್ಟನಾಸಕ್ತವಲ್ಲ ಮನೆಯವರ ಮನಸ್ಸು. ನಿಮಗೆರಡು ಬೇಕಾದರೆ ಮನೆಯಲ್ಲಿ ಇತರರಿಗೆ ತಲಾ ಒಂದೊಂದಾದರೂ ಬೇಡವೆ ? ಒಂದು ಡಜನ್ ಸಾಕಾಗುತ್ತದೆಯೆ ? ಹಣ್ಣು ತಿಂದು ಹಾಲು ಕುಡಿ, ಇಲ್ಲವಾದರೆ ಮೈಗೆ ಒಳ್ಳೆಯದಲ್ಲ ; ಆಮ್ ತಿಂದು ಆಮ ಬಲಿಯಗೊಡಬಾರದು ಎನ್ನುತ್ತಾರೆ ವೈದ್ಯರು. ಬೆಳಗ್ಗೆ ಹಣ್ಣನ್ನು ತಿನ್ನುವುದು ನಮ್ಮಲ್ಲಿ ವಾಡಿಕೆ ಇಲ್ಲ. ಊಟ ಆದಮೇಲೆ ಆಫೀಸಿಗೆ ಹೋಗುವ ಅವಸರದಲ್ಲಿ ಹಾಲು ಕುಡಿಯುವುದು ಆಗದು. ಇನ್ನು ರಾತ್ರಿಗೆ ತಾನೆ ? ಶನಿ ಎಲ್ಲಕ್ಕೂ ರಾತ್ರಿಗೇ ಕಾಯಬೇಕು. ಸಾಂಸಾರಿಕ ಜೀವನ ಇಷ್ಟು ನಿರ್ಬಂಧಕ್ಕೆ ಸಿಕ್ಕಿ ಯಾವ ಸಂತೋಷಕ್ಕೂ ಮಾರ್ಗವಿಲ್ಲವಾಗಿದೆ. ಧಾರಾಳವಿಲ್ಲ. ಸಮಾಜವಾದೀ ಸರಕಾರಗಳಾದರೂ ಈ ಕಡೆ ಗಮನ ಕೊಟ್ಟಾವೆಂದರೆ ಅವರ ಸಂಸಾರ ಮತ್ತಷ್ಟು ಗೋಜು. ಹರ್ಷದ ಸೆಲೆ ಬತ್ತಿದೆ; ಅದರ ಕೊಲೆಯೇ ಕೊಲೆಕೂಗೇ ಎಲ್ಲೆಲ್ಲಿಯೂ.

ಮನೆಯ ಎಲ್ಲರೂ ಮಾವಿಗೆ ಒಲಿದರು ಎನ್ನಿ. ಅಲ್ಲಿಗೂ ಒಬ್ಬೊಬ್ಬರಿಗೆ ಒಂದೊಂದು ಬಗೆಯದರಲ್ಲಿ ರುಚಿ. ಪೇಟೆಗೆ ನೀವೇ ಹೋದಾಗ ನಿಮ್ಮ ಬಗೆಯದನ್ನು ತರಬಹುದು. ಬೇಕಾದ ಹಾಗೆ ಆರಿಸಬಹುದು,-ಅಂಗಡಿಯವನು ಅವಕಾಶ ಕೊಟ್ಟರೆ. ಹುಡುಗರೊ ತಮ್ಮನೊ ನಿಮ್ಮ ಯಜಮಾನಿತಿಯೊ ಹೋದರೆನ್ನಿ. ಪ್ರತಿಸಲವೂ ನಿಮ್ಮ ಪ್ರೀತಿಯನ್ನೇ ನಡಸುತ್ತಾರೆನ್ನುವುದು ಹೇಗೆ ? ಬೇಕೆಂದು ಬೇರೊಂದು ಬಗೆಯದನ್ನು ತಂದು ನೇವಣದಿಂದ ನಿಮ್ಮ ಮುಂದಿಟ್ಟು 'ಈ ಹಣ್ಣು ಬಹು ರುಚಿಯಾಗಿದೆ ನೋಡಿ. ಹೋಳು ಬೇಕಾದರೆ ಇದೊ ಕೊಳ್ಳಿ' ಎನ್ನುತ್ತ ಹಾಗೆ ಹೀಗೆ ಬಿನ್ನಾಣದಿಂದ ಸುಳಿದು, ಅಥವಾ ನಿಮ್ಮೆದುರಿಗೇ ಠಿಕಾಣಿ ಹಾಕಿ ಕುಳಿತು ಸಿಫಾರಸು ಮಾಡುತ್ತ 'ಊಂ ಕೊಳ್ಳಿ ಮತ್ತೆ ' ಎಂದರೆ ಬೇಡವೆನ್ನುವುದಕ್ಕಾಗುತ್ತದೆಯೆ ? ಅವರಿಗೇಕೆ ಈ ಹಟ, ಕಡ್ಡಾಯ

ಎಂದು ಕೇಳುವ ಸ್ವಾತಂತ್ರ್ಯ ಕೂಡ ಉಳಿಯದ ಸ್ಥಿತಿ ನಿಜವಾಗಿ ದುಃಸ್ಥಿತಿ. ನಿಮಗೆ ವಯಸ್ಸಾದಷ್ಟೂ ಈ ಜನದ ಕಿರುಕುಳ ದೌಲತ್ತು ಕಟುವಾಗುತ್ತದೆ.

ಈಗ ನೋಡಿ : ಕತ್ತರಿಸಿ ತಿನ್ನುವ ಹಣ್ಣುಂಟು ; ಉಂಡೆ ತಿನ್ನುವುದುಂಟು. ರಸ ಹೀರುವ ಜಾತಿಯುಂಟು. ಊಟ ಮಾಡುವಾಗ ಎಲೆಯಲ್ಲಿ ಹಾಕಿದರೆ ಕೆಲವು ರುಚಿ; ಎಲ್ಲಿ, ದ್ರಾಕ್ಷಿ ತಿನ್ನುವಂತೆ ಮಲಗೋವ ತಿನ್ನಿ ನೋಡೋಣ ? ಆನೆಯನ್ನು ಮರುಳು ತಿಂದಾವು. ಗೇಂಡಾಮೃಗವನ್ನು ಶ್ರೀರಾಮನು ತಿಂದಾನು. ಮಲಗೋವ ಹಾಗೆ ತಿನ್ನುವುದಕ್ಕಾಗುವುದಿಲ್ಲ. ಬಾದಾಮಿಯನ್ನು ಉತ್ತರಕರ್ಣಾಟಕದವರು ಆಫೂಸ್ ಎನ್ನುತ್ತಾರಂತೆ. ಅಧ್ವಾನ್ನದ ಹೆಸರು. ನಮ್ಮ ಹೆಸರು ನಮಗೆ ಚೆನ್ನ. ನಾವು ಹಾಗೆ ಕರೆಯುತ್ತೇವೆಯೆ. ಒಂದು ಸಲ ಅದನ್ನು ಟೀಕಿಸಲು ಅವರು ಮಲಗೋವ, ಕೂಡೋವ, ನೋಡೋವ ಎಂದು ಅಣಕಿಸಿದರು. ಮಲಗೋವ ಕೂಡ ಆ ಕಡೆಯ ಗೋವದ್ದೇ ಆದ್ದರಿಂದ ಬೈಗಳು ಅವರಲ್ಲಿಗೇ ಚಕ್ರಬಾಣದಂತೆ ತಿರುಗುತ್ತವೆ ಅನ್ನಿ. ಸದ್ಯಕ್ಕೆ ನಾವು ಯಾವುದನ್ನು ಬಾದಾಮಿ ಎನ್ನುತ್ತೇವೊ ಅದು-ಹುಳಿಯಿಲ್ಲದ್ದು, ಹುಳ ಬೀಳದ್ದು. ಯಾವುದು ಉತ್ತಮವೆಂದು ಬಯಸುತ್ತೇವೊ ಅದಕ್ಕೆ ಮೊದಲು ಹುಳ ಹೊಡೆಯುತ್ತದೆ! ಆಯ್ದು, ತೊಳೆದು, ತೊಟ್ಟುಕಿತ್ತು, ಎಲೆಗೆ ಹಾಕಿಸಿಕೊಂಡರೆ ಊಟ ಸಂಪೂರ್ಣವಾಗುತ್ತದೆ. ಒಳ್ಳೆಯ ರಸಪುರಿ-ತುಂಬಾ ಗಟ್ಟಿಯಾದ್ದಲ್ಲ, ಮೆತುವಾದ್ದಲ್ಲ ಹದವಾದ್ದು-ಹೊಂಬಣ್ಣದ ಚೆಂಬಣ್ಣದ್ದು-ಎಲೆಗೆ ಬಿದ್ದರೆ-ಮೊಸರಿನ ಊಟ ಆದ ಮೇಲೆ ಯಥಾಶಕ್ತಿ ತಿಂದು ಕೈ ತೊಳೆಯಬಹುದು. ಇದು ಕೆಲವರಿಗೆ ಸೊಗಸದು. ಕೆಲವರಿಗೆ ಅದು ಮರ್ಯಾದೆಗೆ ಕಡಮೆ; ನೋಡಲು, ಮಾಡಲು, ಸುಖವಲ್ಲ. ಕೆಲವರಿಗೆ ಅಭ್ಯಾಸವಿಲ್ಲ. ಸರಿಯಾಗಿ ತಿನ್ನಲು ಬಾರದು. ಅಂಥವರ ಪಡುಪಾಟಲನ್ನು ನೋಡುವ ಹಾಗಿಲ್ಲ– ಬಳಿಯಲ್ಲಿ ಕುಳಿತವರು, ಬಡಿಸುವವರು, –ಮೈ ಕೈ ರಾಡಿ ಮಾಡಿಕೊಳ್ಳುತ್ತಾರೆ. ಅಂಥವರಿಗೆ ಹೋಳು ಮಾಡಿಯೊ ರಸ ತೆಗೆದೊ ಕೊಡುವುದು ಮೇಲು. ಅಥವಾ, ಅಂಥವರನ್ನು ಬೇರೆ ಕಡೆ ಕೂಡಿಸಿ ಟೇಬಲ್ ಸಪ್ಲೈ ಮಾಡಿಸುವುದು ಒಳ್ಳೆಯದು. ಅವರ ನವೀನತೆಗೂ ಗೌರವ ಕೊಟ್ಟ ಹಾಗಾಗುತ್ತದೆ–ಎಂದು.

ಇಡಿ ಹಣ್ಣು ತಿನ್ನುವಾಗ ಆಯ್ದ ಹಣ್ಣು ಬೇಕು. ತಿನ್ನುವುದರಲ್ಲಿ ಒಂದು ನಾಜೂಕು, ಕಲೆಗಾರಿಕೆ, ನಿಷ್ಣಾತತೆ ಬೇಕು ಎಂಬುದನ್ನು ನಾನು ಪಂಜೆಯವರೊಬ್ಬರಲ್ಲಿ ಮಾತ್ರ ಕಂಡಿದ್ದೇನೆ. ಬಹುಶಃ ಇನ್ನಾರೂ ಅವರಂಥ ಮಾವಿನ ರಸಿಕರಲ್ಲ. ಎಂಥ ಉತ್ತಮ ಕಸಿ ಹಣ್ಣು ತಂದರೂ ನಿಮ್ಮ ತೃಪ್ತಿಗೇನೊ ತಿನ್ನುತ್ತಿದ್ದರು ಮಾತ್ರ. ಅವರು ಒಂದು ಬಗೆಯ ಹಣ್ಣನ್ನು ಆರಿಸುತ್ತಿದ್ದರು ; ತಮ್ಮ ಮನೆಗೆ-ತಮಗೆ- ವರ್ತನೆ ಮಾಡಿಕೊಂಡಿದ್ದರು. ಹಣ್ಣು ಎಂಥದೇ ಆಗಲಿ, ಅವರು ಅದನ್ನು ನಿರ್ವಹಿಸಿ, ಮುಗಿಸುವ ವೈಖರಿ ಅವರದೇ. ತಮ್ಮ ಊರಿನ ಹಣ್ಣನ್ನು ತಿನ್ನುವಾಗಂತೂ ರಸ ಹೀರಿ ಅದನ್ನು ಸವಿಯುವಾಗ ರಸ ಒಂದು ತೊಟ್ಟು ಕೆಳಗೆ ಬೀಳಬೇಕಲ್ಲ ! ಬೆರಳು ಕೊಳೆ, ತೇವ ಆಗಬೇಕಲ್ಲ ! ಒಡನೆ

ಧಾರಾಳವಾಗಿ ಆಡುವ ಮಾತು, ಅದರ ರಸಿಕತೆ, ನಮ್ಮ ಅಕ್ಷಮತೆಯನ್ನು ಕುರಿತ ಚೇಷ್ಟೆ, ನಿಲ್ಲಬೇಕಲ್ಲ! 'ನನ್ನ ಪಾಲಿನ ಪಾಯಸ ಇವರಿಗೆ ಹಾಕಿಬಿಡು ; ನನಗೆ ಇನ್ನೆರಡು ಹಣ್ಣು ಹಾಕು' ಎಂದಾಗ ಅವರ ಮನಸ್ಸಿನ ಸವಿಗೆ ಕಾರಣ ಅವರು ತಿನ್ನುವ ಸಿಹಿ ಮಾವು– ಪಂಪ ಇದನ್ನೇ ಇಮ್ಮಾವು ಅಂದನೇನೊ ಎನ್ನಿಸುತ್ತಿತ್ತು. ಆ ಹಣ್ಣಿನ ರಸದ ಸವಿ ನಮ್ಮ ಕಸಿ ಹಣ್ಣಲ್ಲಿ ನಾನು ಕಂಡ ಹಾಗೆ ಯಾವುದಕ್ಕೂ ಇಲ್ಲ. ಒಳ್ಳೆಯ ಹಣ್ಣು ಸಿಕ್ಕಿ, ಇತರರ ಕಣ್ಣಿಗೆ ಬೇನೆ, ಹೇಸಿಕೆ ಆಗದಂತೆ ತಿನ್ನುವ ವಿದ್ಯೆ ಅವರಂತೆ ಅಭ್ಯಾಸದಿಂದ ಅಲ್ಲ, ಪೂರ್ವ ಪುಣ್ಯದಿಂದ ಬರಬೇಕು. ಪಂಚಶೂಲ, ಚಾಕು, ಬಾಕು, ಚಮಚ ಚಿಮಟಗಳಲ್ಲಿ ತಿನ್ನುವ ವಾಡಿಕೆಯವರಿಗೆ ಇದು ಹೇಗೆ ಅರ್ಥವಾದೀತು ?

ನಾಗರಿಕರಲ್ಲಿ ಇನ್ನೆರಡು ಮಾರ್ಗಗಳುಂಟು : ಒಂದು ಸಿಪ್ಪೆಯೊಡನೆಯೊ ಸುಲಿದೊ, ಹೋಳುಮಾಡಿ ಬೆರಳಲ್ಲೆತ್ತಿಯೊ ಚಮಚಗಳಿಂದಲೊ ಮಡಿಯಾಗಿ ತಿನ್ನುವ ರೀತಿ. ಇನ್ನೊಂದು : ಎರಡು ಕೆನ್ನೆಗಳನ್ನು ವಿಂಗಡಿಸಿಕೊಂಡು ಚಮಚಗಳಿಂದ ಬಗಿದು ತಿನ್ನುವುದು. ಸ್ವದೇಶಿ, ವಿದೇಶಿ ಎರಡು ವಿದ್ಯೆ. ನಮ್ಮಲ್ಲಿ ಎರಡೂ ಬಳಕೆಗೆ ಬಂದಿವೆ. ಬೆರಕೆಯ ಕಾಲ ಅಲ್ಲವೆ ಇದು ? ಯಾವುದು ಶುದ್ಧವಾಗಿದ್ದರೆ ಇದು ಶುದ್ಧವಾಗಿದ್ದೀತು? ಹೊಟೇಲುಗಳಲ್ಲಿ ಫ್ರೂಟ್ ಸಲಾಡ್ ಎಂದು ಹೇಳಿ ನಾಲ್ಕು ಹೋಳು ಮಾವನ್ನು ಸೇರಿಸಿ ಹಲ್ಲು ಕೆಣಕುವ ವೃತ್ತಿ ಸಾಧುವಲ್ಲ. ಅವರು ಹಣಕ್ಕೆ ಸವಿಯನ್ನು ಮಾರುವವರು. ಷಾ ಒಂದು ಸಲ ಕಾಕೆಟ್ ಎಂಬ ಬಿನ್ನಾಣಿಯನ್ನು ವರ್ಣಿಸುತ್ತ, ತೃಪ್ತಿ ಪಡಿಸಲು ಇಚ್ಛೆಯಿಲ್ಲದೆ ಬರಿ ಬಯಕೆಯನ್ನು ಕೆರಳಿಸುವ ಹೆಣ್ಣು (Who excites passions which she has no intention to gratify) ಎಂದರು. ಈ ವೃತ್ತಿ ಅಂಥದು. ನೀವೇ ಹತ್ತು ಬಗೆಯ ಹಣ್ಣು ಸೇರಿಸಿ, ಜೇನು ಬೆರಸಿ, ರಸಾಯನಮಾಡಿ ಹೊಸ ಬೆಣ್ಣೆ ಅಥವಾ ಒಳ್ಳೆ ಮಲಾಯ್ –ಕೆನೆ, Cream ಯಾವುದೋ ಒಂದು, ಒಂದೇ ಪದಾರ್ಥದ ಬೇರೆ ಬೇರೆ ಪ್ರಕಾರಗಳು–ಸೇರಿಸಿ ಮಂಜುಗಡ್ಡೆಯನ್ನು ಕಡೆದು ಹದವೆರೆದು ಬಡಿಸಿ. ಆದರೂ.....

ಆದರೂ ಮಾವು ಬೇಕಾದವರು ತನಿಯಾಗಿ ಅದನ್ನೇ ತಿನ್ನಬೇಕು. ಬೆರಸುವುದು ವಿಚಕ್ಷಣೆಯಿಲ್ಲದವರ, ಬುದ್ಧಿಯಿಲ್ಲವದರ ಕೆಲಸ. ಸಲಾಡು ಎಷ್ಟೇ ವಿತರಣೆಯಿಂದ ಮಾಡಲಿ, ಬೆರೆಯುವ ಹಣ್ಣುಂಟು ; ಬೆರೆಯದ್ದುಂಟು. ಸ್ವಲ್ಪ ಹೆಚ್ಚು ಕಡಮೆಯಾದರೂ ರಸಾಯನ ಕೆಡುವುದು. ಅಪಖ್ಯಾತಿ ಮಾವಿಗೆ ಬರುವುದು. ಅನ್ಯಾಯ.

ಈ ಹದ ಅರಿತರೆ ಉಂಟು. ಇಲ್ಲವಾದರಿಲ್ಲ. ಹಾಕುವ ಒಂದೆರಡು ಹಣ್ಣನ್ನೂ ರುಚಿಯರಿತೇ ಹಾಕಬೇಕು. ಇನ್ನೊಂದು ಮಾರ್ಗ ಅದರ ರಸದ ಸೇವನೆ ; ಸೇರು ನೀರು ಬೆರಸಿದ Fruit Juice ಗಿಂತ ಬಚ್ಚಲು ನೀರು ಮೇಲು. ಬೇಲದ ಪಾನಕ ಎಲ್ಲ ಚೆನ್ನವೇ. ಮಾವಿನ ವಾಸನೆ ಕಟ್ಟಿದ ಪಾನಕಗಳೂ ಹಾಗೆಯೇ. ಅಸಲು ಸತ್ವದಷ್ಟು ಹದ, ರುಚಿ, ಬೆಲೆ ನಕಲಿಗೆ ಹೇಗೆ ಬರಬೇಕು? ಮಾವಿನ ರಸ ತನಿಯಾದಷ್ಟೂ ಹದ

ಹೆಚ್ಚು. ಬೇರೆಯುವಕ್ಕೆ ಜೊತೆ ಸೇವನೆ ಸೇರುತ್ತದೆ; ಹೊಂದಿಕೆ ಉಂಟು. ಇನ್ನು ಕೆಲವು ಶ್ರೀಮದ್ಗಂಭೀರ. ಮಾವು ಇಂಥ 'ಅರಿಸ್ಟೋ'. ಏನು ಮಾಡುವುದು, ಅದರ ಸ್ವಭಾವ ಹಾಗೆ. ನಾನು ಯಾವುದನ್ನೂ ಖಂಡಿಸಿ ಹೇಳುವುದಿಲ್ಲ, ರುಚಿಯಲ್ಲಿ, ಕಲೆಯಲ್ಲಿ ಯಾವುದೂ ಹೀಗೆ ಮಾತ್ರವೇ ಸರಿ ಎಂದು ಹೇಳುವ ಪಾತಕಕ್ಕೆ ನಾನಂತೂ ಕೈಹಾಕುವವನಲ್ಲ. ಯಾರ ಕೈವಾಡ, ರಸಜ್ಞತೆ, ಪಾಕತಂತ್ರ ಹದದ ಪರಿಪಾಠಿ ಏನು ಮಾಡೀತೊ ? ಅದು ಆಯಾ ಸಂಬಂಧದಲ್ಲಿ ಮಾತ್ರ ಕಾಣಬೇಕಾದ್ದು : ಸವಿಯಬೇಕಾದ್ದು. ಅದಕ್ಕೆ ನಿರ್ಬಂಧ ಹಾಕುವುದಾಗಲಿ, ನಿಷೇಧ ವಿಧಿಸುವುದಾಗಲಿ, ಅಂಶ ಸಂಯೋಗ ಹೀಗೆ ಮಾತ್ರವೇ ಆಗತಕ್ಕದ್ದೆಂಬುದಾಗಲಿ ನನಗೆ ಒಪ್ಪದ ಮಾತು. ಒಂದೊಂದು ಸಲ ಉತ್ತರ ಕರ್ನಾಟಕದಲ್ಲಿ–ಅದಕ್ಕೆ ಶಿಕ್ಷಣಕೊಟ್ಟ ಪುಣೆಯಲ್ಲಿ– ಚಪಾತಿಯ ಜೊತೆಗೆ ಮಾವಿನರಸ ಬಡಿಸುತ್ತಾರೆ. ಚೆನ್ನಾದ ಕಡೆ ಕಲೆಪ ಸುಮಾರಾಗಿರಬಲ್ಲದು. ಅದಕ್ಕೆ ಕೇಸರಿ, ದ್ರಾಕ್ಷಿ, ಬಾದಾಮಿ, ಯಾಲಕ್ಕಿ, ಕೆನೆ ಹಾಕುವವರೂ ಅದನ್ನು ದಿವ್ಯಾನ್ನವಾಗಿ ಮಾಡಬಲ್ಲರು. ಆದರೂ ನೂರುಕಡೆ ಮಾಡಿದರೆ ಒಂದು ಮನೆಯಲ್ಲಿ ಹದ ಸಹ್ಯವಾಗುವುದು ಅಪರೂಪ. ನಾರು ಚೂರು ಬೇಸರಗೊಳಿಸವೆ? ಎಂಬುದು ಗಣ್ಯ. ನೀವು ವಿದಗ್ಧರಾದರೆ – ಸುಟ್ಟ ಮಾತು ! – ನಿಮಗೆ ಗೊತ್ತಾಗುತ್ತದೆ. ರಸೈಕವೇದ್ಯ ಅದು.

ಮಕ್ಕಳಿಗೆ ಹಣ್ಣು ಕೊಡುವಾಗ ಇಡಿಯ ಹಣ್ಣನ್ನು ಕೊಡುವ ಬಳಕೆ ಉಂಟು. ತಿರುಳುಳ್ಳ ಓಟೆ ಕೊಡುವ ಸಂಪ್ರದಾಯವುಂಟು. ಇಡಿಯ ಹಣ್ಣು ತಿನ್ನಬಾರದೆಂದಲ್ಲ. ತಿನ್ನುವವರ ಜೊತೆಯಲ್ಲೆಲ್ಲ ತಿನ್ನಬಯಸುತ್ತಾರೆಂದು ಸ್ವಲ್ಪ ಸ್ವಲ್ಪ ಕೊಟ್ಟು ಹಾಗೆ ಮಾಡುವುದು ರೂಢಿ. ಕೈಯಿಂದ ಬೀಳದಿರಲಿ, ಹಿಡಿಯಿರಲಿ ಎಂದು ಅಷ್ಟು ತಿರುಳು ಉಳಿಸಿ ಅವರಿಗೆ ಓಟೆ ಹಚ್ಚಿಕೊಡುವ ಪದ್ಧತಿ ನಡುಮಟ್ಟದ ಮನೆಗಳಲ್ಲಿದೆ. ಅವನ್ನೂ ಹಚ್ಚುತ್ತಿರುವಾಗ ಮಕ್ಕಳ ಕಣ್ಣನ್ನು ನೋಡಬೇಕು. ಮ್ಯೂರಿಲ್ಲೊ 'ಮೆಲನ್ ಈಟರ್ಸ್' ಚಿತ್ರ ಬರೆದಿದ್ದಾನೆ. ಮಾವಿಗೆ ಹೀಗೆ ಕಾಯುವ ಮುಗ್ಧ ಚಿತ್ರವನ್ನು ಬರೆದು ಆ ನೋಟವನ್ನು ಅಮರವಾಗಿಸುವ ಪುಣ್ಯವನ್ನು ನಮ್ಮ ಚಿತ್ರಗಾರರು ಯಾಕೆ ಕಟ್ಟಿಕೊಳ್ಳಲಾರರೊ! ಹಣ್ಣು ಹಂಚುವ ಸಂಚು ಗೊತ್ತಾಗಿ ಬಟ್ಟೆ ಹಾಕುವೆನೆಂದರೆ ನುಸುಳಿಕೊಂಡು ಹುಟ್ಟು ವೇಷದಲ್ಲಿ ಎದುರಿಗೆ ನಿಲ್ಲುವ ನಮ್ಮ ಮಗರಾಯನ ನಿಷ್ಠ ಭಂಗಿ ಯಾವ ಭಂಗಿಯೊ- ದಿವ್ಯ ವಾತ್ಸಲ್ಯಕ್ಕೆ ಮಾತ್ರ ವೇದ್ಯವಾಗಬಲ್ಲದ್ದು. 'ಮಾಂಸಲ!' ವಾದ ಓಟೆ ಸಿಕ್ಕಿದ ಕೂಡಲೆ ಅದನ್ನೆತ್ತಿ ಅಜ್ಜಿಗೆ, ಅಣ್ಣನಿಗೆ ತೋರಿಸುತ್ತ ಕುಣಿದೋಡುವ ಆತನ ಓಟ ಚಿಗರಿಯದು. ಬೆರಳಲ್ಲಿ ತಿರುಳನ್ನು ಹಿಳಿಯುತ್ತ, ಬಾಯಲ್ಲಿ ಸವಿಯುತ್ತ ಲೊಟ್ಟಿಗೆ ಹಾಕುತ್ತ ಕಣ್ಣ ಹೊಳಪು ಕೆನ್ನೆಯ ಮೇಲೆ, ತುಟಿಗಳ ಮೇಲೆ, ತುಟಿ ಬಿಡಿಸಿದ ಮುತ್ತಿನ ಸಾಲುಗಳ ಮೇಲೆ, ಜಂತದ ಆ ನುಣುಗಲ್ಲದ ಮೇಲೆ ಆಡುವ ಆಟ ಯಾರಿಗೆ ಸಿಗಬೇಕು?

ಕೆನ್ನೆಯೆನ್ನುವಾಗ ಜ್ಞಾಪಕಕ್ಕೆ ಬಂತು : ಮದರಾಸಿನಲ್ಲಿ ಹಿಂದೆ ನಡೆದ ಒಂದು ಸಂಗತಿ. ಕೈಲಾಸಂ ಸಮ್ಮೇಳನ ಕಾಲದಲ್ಲಿ : ಟ್ರಾಂ ಹತ್ತಿ ಒಂದು ಸಲ ಹೋಗಬೇಕಾಯಿತು. ದೊಡ್ಡ ಗಾಡಿಯಲ್ಲಿ ೫೦-೬೦ ಜನ. ಇಳಿವವರು ಇಳಿಯುತ್ತ, ಹತ್ತುವವರು ಹತ್ತುತ್ತಿರಲು ನಾವೂ ಒಂದು ನಿಲ್ದಾಣದಲ್ಲಿ ಗಾಡಿ ಹತ್ತಿದೆವು. ನಮ್ಮ ಮುಂದೆ ಇಬ್ಬರು ತರುಣರು: – ತಾರುಣ್ಯದ ಅಂಥ ವೈಖರಿಯೇನೊ ಇಲ್ಲದಿದ್ದರೂ ವಯಸ್ಸು, ಚೇಷ್ಟೆ ತರುಣರದು–ಸ್ವಲ್ಪ ದೂರ ಹೋಗುವುದರೊಳಗೆ ಒಂದು ಸಂಸಾರ ಗಾಡಿಯನ್ನು ಹತ್ತಿ ಕುಳಿತಿತು. ಒಬ್ಬಾಕೆ ಸುಮಾರು ೨೫ ವಯಸ್ಸಿನ ಹೆಣ್ಣು ಮಗಳು. ಚೊಕ್ಕ ಆರ್‍ಯೋಗದ, ದಿಟ್ಟ ಜವ್ವನದ, ತುಂಬು ಕದಪಿನವಳು. ಅಂಥ ಬಿಳುಪಲ್ಲ. ಡಬ್ಬದ ಹರಳೆಣ್ಣೆ ಬಣ್ಣ. ಕಣ್ಣನ್ನು ಅಪ್ಪಳಿಸುವ ಮಾಟದ್ದಾದರೂ ಮರ್ಯಾದೆಯದು. ಕಂಚಿ ಕಡೆಯ ಕಡೆದ ಮುಖ. ದುಂಡನ್ನ ತುಂಬುಮಾವು ಕೆನ್ನೆ. ಕಿರಿದಾಗಿ ಕೆಳ ಸೇರುವ ಗಲ್ಲ. ತೋರಮಾವಿನ ಆ ತುಂಬು ಈ ಹುಡುಗರಿಬ್ಬರ ಎರಡು ಅಂಗೈಗಳಿಗೆ ದೊಡ್ಡವೆಂಬ ನೆಲಸಿನದು. ಒಂದು ಅಂದಿತು, ಪಕ್ಕದಲ್ಲಿದ್ದ ಇನ್ನೊಂದರ ಕಿವಿಯಲ್ಲಿ; ಚಪಲಚೇಷ್ಟೆಯಲ್ಲಿ; ಅಯೋಗ್ಯ ಧಾರಾಳದಲ್ಲಿ; ಚುಂಬನಕ್ಕೆ ಎಷ್ಟು ಹದವಾದ ಮುಖ – What a face to kiss ಎಂದು. ಶೃಂಗಾರಸಾರದ ಮನೋಭೂಮಿ ಇದಕ್ಕೆ ಒಲಿಯತಕ್ಕದ್ದೇ ಸೈ. ಸತ್ಯಕ್ಕೆ–ಪ್ರಚೋದನೆಗೆ ಅದು ಅಂಥ ಕೆಣಕು! ಆದರೆ... ಈ ಎರಡು ಪದಾರ್ಥಗಳಲ್ಲಿ ಯಾವುದರ ಒಟ್ಟು ಮುಖವೂ ಎರಡೂ ಸೇರಿದರೂ ಬಹುಶಃ-ತೆಂಗಿನ ಹೀಚು ನೋಡಿದ್ದೀರಲ್ಲ, ನೆಲಕ್ಕೆ ಬಿದ್ದದ್ದು ಅಂಥವು-ಆ ಒಂದು ಕೆನ್ನೆಗೆ ಅರ್ಧ ಸಾಲದಾಗಿರುವಾಗ ಈ ಅವಿವೇಕ, ಧಾರ್ಷ್ಟ್ಯ ಏಕೆ ಎನ್ನಿಸಿತು. ಯಾವುದೋ ಮನೆಯ ಸಂಸಾರಿ ಹೆಂಗಸು ಆಕೆ. ಜೊತೆಯಲ್ಲಿ ಮಕ್ಕಳಿದ್ದಾರೆ. ಲೋಕನ್ಯಾಯವರಿಯದ ಭ್ರಷ್ಟ ಮನಸ್ಸಿನ ಈ ಎರಡು 'ಗಂಡು'ಗಳ ವಿರಸಿಕತೆಯನ್ನು ಕಂಡು ನನ್ನ ಗೆಳೆಯರು ರೇಗಿದರು. ಆ ಕಡೆ ತಿರುಗಿ, 'Shut up, you. The two of you together have no chance against a part of it' ( 'ಬಾಯಿ ಮುಚ್ಚಿರಿ ; ನಿಮ್ಮಿಬ್ಬರ ಮುಖವೆಲ್ಲ ಸೇರಿದರೂ ಅದರ ಒಂದು ಪಾಲು ಸಿಕ್ಕದು' ) ಎಂದರು. ತರುಣರು ಅಪ್ರತಿಭರಾದರು. ಒಂದು ಕಡೆ ರೋಷ ; ಇನ್ನೊಂದು ಕಡೆ ತಮ್ಮ ಅವಿವೇಕಕ್ಕೆ ತಲೆ ತಗ್ಗಿಸಬೇಕಾಗಿದೆ. ಜೋರು ಮಾಡುವ ಹಾಗಿಲ್ಲ, ಇವರು 'ವಸ್ತಾದಿ'ಗಳು. 'ನೀವ್ಯಾರ್‍ರೀ ಕೇಳುವುದಕ್ಕೆ' ಎಂದು ಅವರೆಂದರು: 'ನೀವು ಕೆಳಗಿಳಿಯುವ ತನಕ ಕಾದಿರುತ್ತೇನೆ; ಪುನಃ ಕೇಳಿ ಈ ಪ್ರಶ್ನೆಯನ್ನು' ಎಂದರು ಇವರು. ಮುಂದೆ ನಡೆದುದನ್ನು ಹೇಳಬೇಕಿಲ್ಲ. ಇವರ ಕಣ್ಣು ತಪ್ಪಿಸಿ ನಾವು ಇಳಿಯುವ ಮುಂಚೆಯೇ ಅವರೆಲ್ಲಿಯೊ 'ನಿಕಲಾಯಿಸಿ' ಬಿಟ್ಟಿದ್ದರು. ಒಂದು ಮಾವಿನ ಮಾಟ, ಅದರ ಒಂದು ಕೆನ್ನೆ ಎಂಥ ಕೋಟಲೆ ತರಬಹುದು ಎಂಬುದಕ್ಕೆ ಹೇಳಿದೆ.

ಮಾವು ಎರಡು ರುಚಿಗಳಿಗೆ ನಿದರ್ಶನ; ಹುಳಿಗೆ; ಸಿಹಿಗೆ. ಆ ಹುಳಿಯೇ ಒಂದು ರುಚಿ. ಆಮೇಲೆ ಹುಳಿಯೂ ಊರಿ ಊರಿ ಒಂದು ಬಗೆಯ ಹದವಾಗುತ್ತದೆ. ಸಿಹಿಯಾದ ರುಚಿ ಮಾವಿನದೇ, ಬೇರಾವುದಕ್ಕೂ ಆ ಸಿಹಿ ಇಲ್ಲ. ಹುಳಿಯದನ್ನೂ-

ದೋರೆ ಹಣ್ಣಲ್ಲಿ, ಇನ್ನೂ ಮುಂಚೆಯೇ ಬೇಕಾದರೆ-'ಒಪ್ಪು?' ಹೋಳು ಮಾಡಿ ತಿನ್ನಬಹುದು. ತನಿಯಾಗಿ–ಹಲ್ಲು ಗಟ್ಟಿಯಿದ್ದರೆ–ಇಲ್ಲವೆ ಉಪ್ಪುಖಾರ ಹಚ್ಚಿ, ಸಂಭಾರಗಳೊಡನೆ. ಉಪ್ಪಿನಕಾಯಿ, ತೊಕ್ಕು ಮಾಡಬಹುದು. ಹುಳಿ 'ಜ್ಯಾಂ' ಮಾಡಬಹುದು. ಎಷ್ಟು ಬಗೆಯ ಉಪ್ಪಿನಕಾಯಿ; ನಿಮ್ಮ ಜಾಣತನ ಕಲ್ಪಿಸಿದಷ್ಟು; ಊರಗಾ/ಹಾಯಿ : ನೀರಿನದು, ಇಡಿಯದು, ಚೂರಿನದು, ತಾಳಿನದು, ಸಿಪ್ಪೆಯದು, ಚೌಲ ಮಾಡಿದ್ದು, ಒಗ್ಗರಣೆ ಹಾಕಿದ್ದು ; ಇಲ್ಲದ್ದು ; ಸಾಸುವೆ ಮೆಂತ್ಯ ಹಿಂಗು ಹಾಕಿ ಪಕ್ವವಾದ್ದು, ಅಲ್ಲದ್ದು; ಎಣ್ಣೆಯಲ್ಲಿ ಮುಳುಗಿದ್ದು, ಎಣ್ಣೆ ಸೋಕಿಸದ್ದು ; ಹಸಿಯ ಮೆಣಸಿನಕಾಯದು; ಹಣ್ಣುಗಾಯದು, ರಾವಣ ಕೆಂಪಿನದು, ತಂಪು ಬಣ್ಣಗಳದು,– ಒಂದೆ? ಎರಡೆ! ಯಾವುದೇ ಆಗಲಿ ಬೇರೆ ಕಾಯಿ, ಬೇರೆ ನಾರುಗಳ ಸಂಪರ್ಕ ಬಹುತರ ಸಹಿಸಿದು. ಅದರ ಏಕಾಂತ ರೀವಿ ಅದರದೇ.

ಬೇವನ್ನು ಸವಿದ ಕಾಗೆಗೆ ಮಾವು ಇಳಿದಪ್ಪುದು ಎಂಬ ಹುಳುಕರ ಪ್ರಸಂಗಗಳಲ್ಲಿ ಹೊರತು ಮಾವಿನ ಸವಿ ಭಗವತ್ ಸೃಷ್ಟಿಯ ರಸಕಾವ್ಯದಲ್ಲಿ ಒಂದು ವಿಶಿಷ್ಟ ಧಾತುವಿನದು. ಅದರ ರುಚಿ ಬೇರೊಂದಕ್ಕಿಲ್ಲ. ಅದಕ್ಕಾಗಿ ಅದು; ಅದರ ಉಪಾಸನೆಯ ಸಮಯದಲ್ಲಿ ಅನ್ಯದ ಗೋಜು ಅನ್ಯಾಯ; ಹಿಡಿಸದು, ಸಹಿಸದು. ಬೆರಕೆಗಳ ರುಚಿ ಕೃತಕ. ಒಂದು ನಿಷ್ಠೆಗೆ ಒಳಪಡುವ, ಪಡಿಸುವ ಮಧುರ ಸಂಸ್ಕಾರ ಮಾವಿಗೆ ಸಲ್ಲುವಷ್ಟು ಚೆನ್ನಾಗಿ ಬೇರೆ ಹಣ್ಣು ಕಾಯಿಗಳಿಗೆ ಸಲ್ಲದೇನೊ. ಅಲ್ಲದೆಯೊ: ಅದರ ಹೆಸರೂ ಪೂರ್ತಿ ನಮ್ಮದೇ. ಯಾವ್ಯಾವುದೊ ಎಲ್ಲೆಲ್ಲಿಂದಲೊ ಬಂದು ಸೇರಿಕೊಂಡಿದೆ. ನಮ್ಮ ಎಲ್ಲ ಭಾಷೆಗಳಲ್ಲಿಯೂ ಅದಕ್ಕೆ ಜ್ಞಾತಿವಾಚಕಗಳಿವೆ. ಮಾವು, ಆಂ ಮುಂತಾಗಿ. ಇಂಗ್ಲಿಷಿಗೆ ಮ್ಯಾಂಗೊ ಕೊಟ್ಟದ್ದು ಮಾಂಗಾ–ಯ್ ಏನೊ : ತಮಿಳಿನದು; ಅಚ್ಚ ದ್ರಾವಿಡ. ಆಂ ಊಂ ಅಲ್ಲ ಅದು. ಮಾಂಗಾ. ಇಂಗ್ಲಿಷಿನಲ್ಲಿ ಅದಕ್ಕೆ ಬೇರೆ ಹೆಸರೆಲ್ಲಿಂದ ತರಬೇಕು? ಅಸಲು ಆ ನಾಡಲ್ಲಿ ಆ ವಸ್ತುವಿದ್ದರೆ ತಾನೇ ಹೆಸರು ಬರುತ್ತಿತ್ತು? ಸಂಪನ್ನವೆಂಬ ಇಂಗ್ಲಿಷಿಗೇ ಭಾಷೆ ನೀಡಿ ಬದುಕಿಸಿದ್ದು ಮಾವು. ಈ ನಾಡಿನ ಹಿರಿಮೆ. ಆದ್ದರಿಂದಲೇ ಆಗ ಈಗ ಒಬ್ಬ ಚಕ್ರವರ್ತಿನಿಗೊ ಮಹಾ ರಾಷ್ಟ್ರವೊಂದರ ಅಧ್ಯಕ್ಷರಿಗೊ ಕೋಟ್ಯಧೀಶ್ವರರ ಮೇಜಿನ ಭಾಗ್ಯಕ್ಕೊ ರುಚಿ, ಕಳೆ ಕೊಡಬೇಕಾದಾಗ ಭಾರತಕ್ಕೆ ಹೇಳಿಕಳಿಸಿ ಈ ಮ್ಯಾಂಗೊ ತರಿಸಿಕೊಳ್ಳುತ್ತಾರೆ. ಗಾಡಿಯಲ್ಲಿ ಹೋದೀತೆ, ರೈಲಲ್ಲೆ ? ಬೆಡಗಲ್ಲೆ ? ಅಲ್ಲಲ್ಲ; ವಾಯುಯಾನ, ಬಾನಯಾನ ಮಾಡಿಯೇ ಅವರ ಕೈ ಸೇರಬೇಕು. ಎಲ್ಲಿಯೂ ನೆಲ ಮುಟ್ಟದಂತೆ ಗಿಡದಲ್ಲಿ ಜೊಂಪೆ ತೂಗುವ ಆ ಸೊಬಗಿನಂತೆ. ಸೊಬಗಿನ ಆವರಣದಲ್ಲಿಯೇ ಮೆರೆಯಬೇಕು.

ಹಾಲುಂಡು ಮೇಲುಂಬರೆ ಎಂಬ ಮಾತನ್ನು ಕೇಳಿದ್ದೀರಿ. ಹಾಲುಂಬ ಮುಂಚೆ ಮಾವುಂಬುದು ಹಣ್ತು ಸಂಸ್ಕಾರದವರ ಒಂದು ಮಹಾ ಲಕ್ಷಣ.

# ಇವರಿಗೆ

ಮಾಂಗಲ್ಯವೆಂಬ ಒಂದು ಕೊರಳುಪಟ್ಟಿ ಕಟ್ಟಿ ಇದು ನನ್ನದು ಎಂದು ಒಡೆತನವನ್ನು ಪಡೆದು ಅದರ ಮೇಲಿನ ಎಲ್ಲ ಹಕ್ಕುಗಳನ್ನೂ ದಿಮಾಕಿನಿಂದ ಚಲಾಯಿಸುತ್ತಿರುವ ನಮ್ಮ ಯಜಮಾನರಿಗೆ. ಯಜಮಾನಿತಿಯಲ್ಲದಿದ್ದರೂ ಹೆಂಡತಿಯೆಂಬ ಹೆಸರಿಗೆ ಇನ್ನೂ ಕೊಕ್ಕರಿಸದ ನಾನು ನಿಮಗೆ ಬರೆಯದೆ ಬರೆಯದೆ ಈ ಕಾಗದ ಬರೆಯುತ್ತಿದ್ದೇನೆ. ನಿಮ್ಮ ಕ್ಷೇಮ ಸಮಾಚಾರ ತಿಳಿದು ಎಂಟು ದಿನಗಳಾದವು. ಇನ್ನೂ ನಿಮಗೆ ನಿಮ್ಮ ಆ ಜಸಿ ಮಾರವಾಡಿ, ಸಿಂಧಿ ವ್ಯಾಪಾರ ಬಿಟ್ಟಿಲ್ಲ ಎಂದು ಕಾಣುತ್ತದೆ. ಬಿಡುವು ಹೇಗೆ ಬಂದೀತು? ಜೊತೆಗೆ, ಇದಿಂಗೆ, ಪಕ್ಕದಲ್ಲಿ ನಾನಿಲ್ಲದೆ, ಎಷ್ಟೋ ಮೈಲಿಯ ದೂರದಲ್ಲಿ ನನಗೆ ಸಂಬಂಧಿಸಿದ ಒಂದು ಪದಾರ್ಥ ಎಷ್ಟು ಹಿಂಸೆ ಪಡುತ್ತಿದೆಯೊ ಎಂದು ಯೋಚಿಸುವುದಕ್ಕೆ ಕೂಡ ನಿಮಗೆ ಪುರುಸೊತ್ತಿರುವುದಿಲ್ಲ. ಬೆಳಗ್ಗಿಂದ ರಾತ್ರಿಯವರೆಗೆ ಮಾತು, ಸಂಧಾನ, ಸಂಪಾದನೆ-ಇಷ್ಟರಲ್ಲಿಯೇ ಜೀವ ತೇಯುತ್ತಿರುವ ನಿಮಗೆ ಹೆಂಡಿರೇಕೆ, ಮಗನೇಕೆ, ಮನೆಯೇಕೆ ? ಇಲ್ಲಿಯವರ ಮಾತೇಕೆ ? ಈ ಸಲ ತೀರ್ಮಾನ ಮಾಡಿಕೊಂಡು ಬಂದಿದ್ದೇನೆ. ದಿನಕ್ಕೆ ಎರಡು ಮೂರು ಘಂಟೆಗಳ ಕಾಲವಾದರೂ ನೀವು ಮನೆಯಲ್ಲಿ ನೆಮ್ಮದಿಯಾಗಿ ಕಳೆಯಲು ಒಪ್ಪದಾದರೆ ನಾನು ಹಿಂದಕ್ಕೆ ಬರುವುದಿಲ್ಲ. ನಿಮ್ಮ ಕೆಲಸವೇನೊ ಸಂಪಾದನೆಯೇನೊ ಲೆಕ್ಕಾಚಾರಗಳೇನೊ ಮಾಡಿಕೊಳ್ಳುತ್ತ ಒಂಟಿಯಾಗಿ ಕುಬೇರಗಾಣಿತಿ ಮಾಡಿಕೊಂಡಿರಿ. ನಿಮ್ಮಿಷ್ಟ. ನಾನು ಬರಿಯ ಹೆಂಡತಿ ; ಹೇಳಿದ ಹಾಗೆ ಕೇಳಿಕೊಂಡು ನಿಮ್ಮ ಅನುಗ್ರಹ ಯಾವಾಗಲೊ ಆದರೆ ಅಷ್ಟಕ್ಕೆ ತೃಪ್ತಿಪಟ್ಟುಕೊಂಡು ಕಾಲಹಾಕಬೇಕಾದ ಪ್ರಾಣಿ. ಬಂದ ಹಾಗೆ ಮನೆವಾಳ್ತೆ ನಡಸಿಕೊಂಡು ಮನೆಯ ಗುರುತಾಗಿ ಅಲ್ಲಿ ವಾಸಮಾಡುವವಳು. ಈವರೆಗಿನ ಸ್ಥಿತಿ ಅದು. ಇನ್ನು ಮುಂದೆ ಹಾಗಿರಲು ನನಗೆ ಶಕ್ಯವಿಲ್ಲ. ಇದು ಟಾಠದಾಢಣ.

ನನಗೆ ಬೇರೆ ಮನೆಯಿಲ್ಲವೆ? ತಂದೆ ತಾಯಿ ಇಲ್ಲವೆ? ತಿನ್ನುವುದಕ್ಕೆ, ಉಡುವುದಕ್ಕೆ, ಇರುವುದಕ್ಕೆ ಇಲ್ಲವೆ? ನನ್ನಂಥ ಹತ್ತು ಮಕ್ಕಳನ್ನು-ಈಗಾಗಲೆ ಐವರಿದ್ದಾರೆ-ಮೂರು ಹೆಣ್ಣು, ಅಣ್ಣ-ಸಾಕಲು ನಮ್ಮಪ್ಪನಿಗೆ ದೇವರು ಕೊಟ್ಟಿದ್ದಾನೆ. ನಿಮ್ಮ ಕೈಯೇ ಕಾಯಬೇಕೆಂಬ ನೇಮ, ಅಗತ್ಯ ಇಲ್ಲ. ಅಂದೂ ಇರಲಿಲ್ಲ; ಎಂದೂ ಇರೋದಿಲ್ಲ. ಹಿಂದೆ ಒಂದು ಕಾಲದ ನಿಮ್ಮ ಅಪೂರ್ವ ಪ್ರೀತಿಯಿಂದಾಗಿ ಹೊಟ್ಟೆಯಲ್ಲಿ ಬಿದ್ದ ಮಹಾರಾಯ ಮಗ ಹುಟ್ಟಿ ದಿನದಿನಕ್ಕೂ ಬೆಳೆಯುತ್ತಿದ್ದಾನೆ. ನೀವು ಅಲ್ಲಿಂದ ಕಳಿಸಿದ ಅಳತೆ ಬಟ್ಟೆಗಳು ಅವನಿಗೆ ಸಾಲದಾಗಿವೆ. ಬೇರೆ ಹೊಲಿಸಿದ್ದೇನೆ; ನೂರು ರೂಪಾಯಿ ಖರ್ಚುಮಾಡಿ; ನನ್ನ ಹಣದ ಬಡ್ಡಿಯಿಂದ. ನನಗಿನ್ನೇನು ಬೇಕು ಸ್ವಂತಕ್ಕೆ?

ಒಂದು ಕಾಲದಲ್ಲಿ ನಾವು ಕಾಲೇಜಲ್ಲಿ ಓದುತ್ತಿರುವಾಗ ನಿಮ್ಮ ಹುಮ್ಮಸು, ನೇವರಿಗೆ, ಬಿನ್ನಾಣ, ನನ್ನ ಬಾಳಸರ್ವಸ್ವ ನೀನು ಎಂದು ಯಾವುದೋ ಕಾದಂಬರಿಯಲ್ಲಿ ಹುಡುಕಿ, ಕಂಡ ಪದವನ್ನು ನನ್ನ ಮೇಲೆ ಪ್ರಯೋಗ ಮಾಡಿ ಕ್ಷಣಕಾಲ ನನಗೂ ಉತ್ಸಾಹ ಮಾಡಿದ್ದಿರಿ. ಒಂದೇ ತರಗತಿಯಲ್ಲಿ ಒಂದೇ ವಿಷಯ ಓದಿ ಪ್ಯಾಸು ಮಾಡಿದೆವು ; Practical Desk ಅಲ್ಲಿ ಎದುರು ಬದುರಿಗೆ, ಪಕ್ಕಪಕ್ಕದಲ್ಲಿ ಒಂದೇ ವರ್ಗದ ಮೇಷ್ಟರ ಕಣ್ಣಂಕೆಯಲ್ಲಿ ವಿದ್ಯೆ ಕಲಿತೆವು. ನಿಮಗಿಂತ ನನಗೇ ಮೂರು ನಂಬರು ಹೆಚ್ಚಾಗಿ ಬಂದದ್ದು ನಿಮಗೆ ನೆನಪಿರಬಹುದು. ಆದರೂ ನೀವೇನು ಬುದ್ಧಿಶಕ್ತಿಯಲ್ಲಿ ಅಂಥ ಹೀನರು ಎಂದುಕೊಳ್ಳಲಿಲ್ಲ. ನಂಬರು ಕಡಮೆಯಾದರೇನು, ದಡುವತ್ತಾಗಿದ್ದೀರಿ,-ಕಸರತ್ ಗಿಸರತ್ ಮಾಡಿ; ಧೈರ್ಯಶಾಲಿ, ಶಕ್ತ ; ಕ್ಲಾಸಿನ, ಏಕೆ ಊರಿನ, ಎಲ್ಲ ಹುಡುಗಿಯರಿಗೂ ನಿಮ್ಮ ಮೇಲೆ ಕಣ್ಣು ; ತರಗತಿಯ ಇತರ ವಿದ್ಯಾರ್ಥಿಗಳಿಗೆಲ್ಲ ಕರುಬು ಎನ್ನುವಂತೆ ಠಾಕುಠೀಕಾಗಿ ಇದ್ದವರು ಎಂದು ನಾನಾದರೂ ನಿಮ್ಮನ್ನು ಮದುವೆಯಾಗಲು ಒಪ್ಪಿದೆ. ನನಗೂ ಯಾವುದೂ ಕಡಮೆ ಇರಲಿಲ್ಲ ; ೨೦ಕ್ಕೆ ದೃಢವಾದ ಹೆಣ್ಣ ಮೈ ಕೈ ; ಅಮೃತಶಿಲೆ, ಜಂತ, ಗಾಜುಗಳಿಗೆ ನುಣುಪಲ್ಲಿ, ಕಾಂತಿಯಲ್ಲಿ ಹೋಲಿಸಬೇಕೆ ಹೊರತು ನಾನೇನು ಕಸ್ತೂರಿ ಅಲ್ಲ ; ಎಬೊನಿ, ರೋಸ್‌ವುಡ್ ಅಲ್ಲ ; ಕುರೂಪಿಯಲ್ಲ. ಚೆಲುವು, ಚೆಲ್ಲಾಟ, ಹಣ, ಮನೆತನ, ಶೀಲ, ಶೈಲಿ, ರುಚಿ, ಪಚಿ ಎಲ್ಲಾ ಇದ್ದವು. ಮದುವೆಯಾದರೆ ನಿಮ್ಮನ್ನು ಆಗುತ್ತೇನೆಂದು ತಂದೆಗೆ ಹೇಳಿ ಅವರನ್ನು ಒಪ್ಪಿಸಿ ನಿಮ್ಮ ಕೈ ಹಿಡಿದೆ. ಹಿಡಿದಿರಿ ; ಹಿಡಿದದ್ದು ಹೀಗೆ ಖಾಲಿ ಬಿಡುವುದಕ್ಕೆ ಎಂದು ಆಗ ತಿಳಿದಿದ್ದರೆ ನಾನು ಮದುವೆಯಾಗುತ್ತಲೇ ಇರಲಿಲ್ಲ. ಸ್ವಾತಂತ್ರ್ಯ ಎಂದುಕೊಂಡೆ ; ಸ್ವಯಂವರ ಎಂದುಕೊಂಡೆ. ಲೋಕದಲ್ಲಿ ನಿಮಗಿಂತ ಚೆಲುವರು ಯೋಗ್ಯರು ಇಲ್ಲ ಅಂತಲ್ಲ ; ನನ್ನ ಕಣ್ಣಿಗೆ ಹತ್ತಿರ ಇದ್ದು ಬಿದ್ದವರಲ್ಲಿ ನೀವು ಪರವಾ ಇಲ್ಲ ಎಂದುಕೊಂಡು.

ನನಗೆ ಫಾರಿನ್‌ಗೆ ಹೋಗುವ ಅವಕಾಶವಿತ್ತು ; ಮಹಿಳೆಯರ ಗೋಷ್ಠಿಯಲ್ಲಿ ಅಮೇರಿಕಕ್ಕೆ, ಫ್ರಾನ್ಸಿಗೆ, ಇಟಲಿಗೆ ಹೋಗಿ ಅಲ್ಲಿ ಸ್ತ್ರೀ ವಿಚಾರ ವ್ಯವಸ್ಥೆಗಳಲ್ಲಿ ಶಿಕ್ಷಣ ಪಡೆಯಲು ಕರೆಬಂದಿತ್ತು. ಅಲ್ಲೇನು ಹೋಗಿ ಕಲಿಯುವುದು ? ಇಷ್ಟವಿಲ್ಲದ ಮಹಿಳೆಯನ್ನು ಯಾವ ಮಹಾನ್ ಅದುಮಿ ಅಣಗಿಸಿಯಾನು ಎಂದವಳು ಅಲ್ಲಿಗೆಲ್ಲ ಹೋಗಲು ಒಪ್ಪದೆ ನಾನು ಹಿಂದೆಯೇ ಉಳಿದೆ. ನನ್ನ ಮನೆ ಇದೆ, ಗಂಡ ಇದ್ದಾರೆ ; ವಿದ್ಯೆ ಬುದ್ಧಿ ಇವೆ; ನಮ್ಮೂರುಗಳಲ್ಲಿ ಮಾಡೋಕೆ ಬೇಕಾದಷ್ಟು ಕೆಲಸ ಇದೆ ಅಂದುಕೊಂಡು. ಮನೆಯಲ್ಲಿ ತನ್ನ ಪ್ರೀತಿಯ ಗಂಡಸನ್ನು ಅನುಸರಿಸಲು ಅಭಿಮಾನ, ಹೀನಾಯ ಪಡುವವರು ಬೀದಿಯಲ್ಲಿ, ಕಚೇರಿಗಳಲ್ಲಿ ಎಷ್ಟು ಜನದ ಮರ್ಜಿ ಅನುಸರಿಸಬೇಕಾಗುತ್ತದೆ ಎಂಬುದು ನನಗೆ ಗೊತ್ತಿದೆ. ಸ್ವಾತಂತ್ರ್ಯವಂತೆ ! ಹುಚ್ಚು ಈ ಜನಕ್ಕೆ. ಕುಟುಂಬಗಳಲ್ಲಿರುವವರಿಗೆ ಸ್ವಾತಂತ್ರ್ಯವೆಂದರೇನ್ರಿ ? ಧೋರಣೆಯಲ್ಲಿ ಬಂದಿರುವ ಬೆಡಗಿನ ಮಾತು ಎನ್ನಿಸಿದೆ ನನಗೆ. ಆದರೂ ಎಷ್ಟೇ ಅನ್ನಿ, ಯಾವ ಗುಣ

ನಮ್ಮಲ್ಲಿರಲಿ, ಹೆಣ್ಣು ಪಾಡು ಹೀನವೇ ಎಂಬಂತೆ ನಡಸುತ್ತೀರಿ ನೀವು ಗಂಡಸರು. ಅದು ಇದು ನೇವಣವಾಗಿ ಮಾತನಾಡಿ ಕಣ್ಣೊರಸಿ ನಿಮ್ಮ ಪ್ರೀತಿಗೆ ಕಂಗಾಲಾಗಿರುವವಳನ್ನು ಬಳಲಿಸುತ್ತೀರಿ. ನಮಗಾಗಿ ತಾನೇ ಇದೆಲ್ಲ ಕಷ್ಟ, ಸಂಪಾದನೆ ಎಂದು ಬೇರೆ ನಿಮ್ಮ ವಾದ. ಇರಬಹುದು. ನಿಮಗೆ ಇನ್ನೆಷ್ಟು ಸಂಪಾದಿಸಿದರೆ ಸಾಕೊ?.... ನಮಗಿನ್ನೆಷ್ಟು ಬೇಕು ? ಎರಡೂ ಕಡೆ ಆಸ್ತಿ ಇದೆ. ಹುಳಿತು ಹೋಗುವಷ್ಟು ಇದೆ. ಇನ್ನಷ್ಟು ಹಣ ಬೇಕೆಂದರೆ ಹೇಳಿ. ನನ್ನ ಪಾಲಿಗೆ ನಮ್ಮಪ್ಪ ಕೊಟ್ಟಿರುವ ಜಮೀನು, ಮನೆ ಬಿಟ್ಟುಕೊಡು ಎಂದು ಹೇಳುತ್ತೇನೆ. ಈ ಒಂಟಿ ಕೈವಲ್ಯವನ್ನು ನಾನು ಇನ್ನು ಮುಂದುವರಿಸಲಾರೆ. ನನಗೆ ಸಾಕಾಗಿಹೋಗಿದೆ. ಇದನ್ನು ಓದುತ್ತಿದ್ದೀರ?

ಕೆಲಸ ಮುಗಿಯಿತೇನೊ ಬಂದರು ಮನೆಗೆ, ಎರಡು ನಿಮಿಷ ಜೊತೆಯಲ್ಲಿ ಕಾಲ ಕಳೆಯೋಣ ಎಂದರೆ ಒಂದು ಬೋಂಡ ಬಾಯಲ್ಲಿ ಹಾಕಿಕೊಂಡು ಅದರ ಬಿಸಿ ಆರಿ ಬಾಯಲ್ಲಿ ಅದು ಸುಖ ತರುವುದರೊಳಗೆ ಯಾರೊ ಬರುತ್ತಾರೆ. ಬ್ರಿಜ್ ಅಂತೆ, ಬಿಲಿಯರ್ಡ್ಸ್ ಅಂತೆ, ಬ್ರೇಕ್ ಅಪ್ ಸೋಷಲ್ಸ್ ಅಂತೆ. ಆಯಿತು ಹೊರಟಿರಿ. ತಿರುಗಿ ಮನೆಗೆ ಬರಬೇಕಾದರೆ ರಾತ್ರಿ ಹತ್ತೊ ಹನ್ನೊಂದೊ. ಗಂಡಹೆಂಡತಿಗೆ ನಡುವೆ ನದಿ, ಕಾಲುವೆ, ಕಡಲು ಹರಿಸಿ ಬ್ರಿಜ್ ಒಡೆಯುವ ಬ್ರಿಜ್ ಯಾವ ಲೋಕದ ಬ್ರಿಜ್‌ರೀ! ಕೈಹಿಡಿದ ಹೆಣ್ಣಿನ ಎದೆಯನ್ನು ಬ್ರೇಕ್ ಮಾಡಿ ನೆತ್ತರು ಕೋಡಿಹರಿಸುವ ನಡತೆ ಇನ್ನಾವ ಬ್ರೇಕ್ ಅಪ್ ಸೋಷಲ್ಸ್ ಆಗಲಾರದು ? ವಿಚಿತ್ರಲೋಕ, ವಿಚಿತ್ರ ಜನ ನೀವು. ಇಂಥದು ಒಂದು ಸಲಾನೂ ಗಂಡಸರ ಬುದ್ಧಿಗೆ ಹೊಳೆಯೋದೆ ಇಲ್ಲವೊ ಅಂತೇನೆ ?

ನಿಮ್ಮ ಬಾಳನ್ನೆಲ್ಲ ಕಣ್ಣಿಗೆ ಕಟ್ಟಿದಂತೆ ವರ್ಣಿಸಿ ನಿಮಗೆಲ್ಲ ಹುಚ್ಚು ಹಿಡಿಸುವಂತೆ ಒಂದು ನಾಟಕವನ್ನೊ ನಾಲ್ಕು ಕಾದಂಬರಿಗಳನ್ನೊ ಬರೆದು, ಮುಖದ ನೀರಿಳಿಯುವಂತೆ ಮಾಡಬೇಕು ಅನ್ನಿಸುತ್ತೆ ನನಗೆ. ಗಂಡಸರೇ ನೀವು ಕಾದಂಬರಿಗಳನ್ನು ಬರೆದೂ ಬರೆದೂ ಅವಿವೇಕಗಳನ್ನು ಅಲ್ಲಿ ತುಂಬುತ್ತಿದ್ದೀರಿ ; ಅರಿಯದ ಹೆಣ್ಣುಗಳಿಗೆ, ಅನ್ಯಾಯದ ಮೋಹಗಳನ್ನೂ ಆವೇಶಗಳನ್ನೂ ಹುಟ್ಟಿಸುತ್ತಿದ್ದೀರಿ. ನೀವು ವರ್ಣಿಸುವುದನ್ನೆಲ್ಲ ನಿಮಗೆ ಚೆನ್ನಾಗುತ್ತದೆಂದು ನಡಸಿಕೊಟ್ಟು ಕೊಟ್ಟು ನಮ್ಮ ಮೌಲಿಕ ಬುದ್ಧಿಯನ್ನು ಕಳೆದುಕೊಂಡಿದ್ದೇವೆ ನಮ್ಮ ದಾರಿಯಲ್ಲಿ ಯೋಚನೆ ಮಾಡೋದೇ ಬಿಟ್ಟು. ಆದರೆ ಬರೆಯಲು ಇಷ್ಟವಿಲ್ಲ. Gentlemen Prefer Blondes ಎಂದು ಅನಿಟಾ ಲೂಸ್ ಬರೆದು ಲಕ್ಷಾಂತರ ಡಾಲರ್ ಸಂಪಾದನೆ ಮಾಡಿದಳು. ನೀವು ಕೇಳಿರಬೇಕು. ಯಾಕೆ, ನೀವು ಓದಿದ್ದೀರಿ; ನನಗೆ ಗೊತ್ತಿದೆ. ಅವಳಿಗೆ ಬರೆಯುವ ಚಟ ಬಂದು ಸಂಸಾರ ಹೇಗೆ ರೂಪಿತವಾಯಿತೊ ಕಾಣೆ – And, Marry Brunettes ಎಂದು ಆಮೇಲೆ ಬರೆದಳು. ಅದೂ ಲಕ್ಷಾಂತರ ಸಂಪಾದಿಸಿತು. ಹಣದ, ಕೀರ್ತಿಯ ಗಳಿಕೆ ಬಾಳಿಗೆ ಬಿದ್ದರೆ ಗಂಡಿನ ಬಾಳೇ ಕೆಡುತ್ತೆ, ಇನ್ನು ಹೆಣ್ಣು ಜೀವನ ಹೊಲಸಾಗುತ್ತೆ

ಎಂದುಕೊಂಡವಳು ನಿಮ್ಮ ಗಂಡು ಕಾದಂಬರಿಕಾರರೊಡನೆ ಹುರುಡು ಮಾಡುವುದಕ್ಕೆ ನನಗೆ ಇಷ್ಟವಿಲ್ಲ. ಆ ಅಧ್ಯಾಯಗಳನ್ನೇ ಓದಿ ನೀವು ತೃಪ್ತಿ ಪಡಿ; ಹೆಣ್ಣಿ ಹೃದಯ, ಮನಸ್ಸು ಅಲ್ಲಿ ನಿಮಗೇನು ಸಿಕ್ಕೀತು? –ಇರುವುದನ್ನು ಬಿಟ್ಟು, ಹೊರಮೈ, ಹೊರ ಮಾತಿನ ಕಲಾಪಗಳನ್ನು ವರ್ಣಿಸಿ ತೃಪ್ತಿಪಡುವ ನಿಮಗೆ. ಮನಸ್ಸನ್ನು ಅರಿತುಕೊಂಡರೆ ತಾನೇರಿ ಮಾನ, ಮಾನವತೆ ಗೊತ್ತಾಗೋದು? ನಿಮಗೆ ಬೇಕಾದ್ದು ಪ್ರೇಮ ಅಲ್ಲ; ಒಂದು ಹೆಣ್ಣು ಬೊಂಬೆ; – ನಿಮ್ಮಿಷ್ಟದಂತೆ ಕುಣಿಯೋದು; ನೀವುಡಿಸಿದ ಬಟ್ಟೆ ಉಟ್ಟು, ಹಾಂ ಅಂದರೆ ಹುಂ ಅಂದುಕೊಂಡಿದ್ದರೆ ಆಯಿತು. ನಾವಲ್ಲ ನಿಜವಾಗಿ ನಿಮಗೆ ಬೇಕಾದ್ದು ; ನಮ್ಮ ಮೈ :-ನಮ್ಮ ಸಂಗ. ನೀವು ಕಾದಾಗ, ಕರೆದಾಗ, ಕರಗಿದಾಗ.

ನಮ್ಮ ಮನಸ್ಸಿನಲ್ಲಿ ಏನು ನಡೆಯಬಲ್ಲದು ಎಂಬುದನ್ನು ಒಂದು ದಿನ ನೀವು ಕಲ್ಪಿಸಿಕೊಳ್ಳುವುದಾದರೆ ಯಾವ ಆಸ್ಟಿನ್, ಜಾರ್ಜ್ ಎಲಿಯಟ್, ಸ್ಟೈನ್, ಜಾಯ್ಸ್, ಯಾವ ಪ್ರೂಸ್ಟ್, ವುಲ್ಫ್, ಲಾರೆನ್ಸ್, ಹೆಮ್ಮಿಂಗ್ವೆ ಅದನ್ನು ವರ್ಣಿಸಿಯಾರು ? ಇವರ ತಲೆ! ಆವೊತ್ತು ನೀವೇನೊ ಮಾತಾಡುತ್ತ ಮುದ್ದುಗಾರ ಹೆಣ್ಣು, ಇದನ್ನು ಬಿಟ್ಟು ಹಾಳು ಹೊಟ್ಟೆಯಾತುರದ ಕೆಲಸಕ್ಕೆ ಹೋಗಬೇಕಾಗಿದೆಯೇ ಎಂದು ಹೊರಟಿರಲ್ಲ, ನೆನಪಿದೆಯೆ? ಆಗ ನಿಮ್ಮನ್ನೇನು ಮಾಡಬೇಕು, ಮಾಡಿಸಬೇಕು ಎನ್ನಿಸುತ್ತೆ ಗೊತ್ತೆ ? ಹೇಳಿದರೆ ಭಾರತಪುತ್ರಿಯಾದ ಹೆಣ್ಣು, ಧರ್ಮಕ್ಕೆ ವಿರುದ್ಧವಾದ ಯೋಚನೆ-ಎಂದೀರಿ. ಕಾರ್ಯ ಪ್ರವೃತ್ತಿ ಉಂಟಾದದ್ದು ತಂಪಿತು. ಇನ್ನೊಂದು ದಿನ ಅಂದಿರಿ : ನಿಮ್ಮ ಕಾಟ ನಮಗೆ ಹೆಚ್ಚಾಯಿತು, ಇದರಿಂದ ಪಾರಾಗುವ ಬಗೆ ಹೇಗೆ ಎಂಬಂತೆ ಷಾ ಅನ್ನು ಉದ್ಧಾರ ಮಾಡಿದಿರಿ: The fairy angel of your dreams degenerates into a solid eleven stone wife ಎಂದು. ಅಟ್ಟುವವಳು ಹೆಣ್ಣು ; ಬಲಿ, ಬೇಟೆ ಗಂಡು ಎಂದು ಟ್ಯಾನರ್ ಅನ್ನ್‌ಗೆ ಅಂದನಂತೆ. ನಾನು ನಿಮಗೆಂದಾದರೂ ಅಪ್ಸರೆಯಾಗಿ ಕನಸಿನಲ್ಲಿಯಾದರೂ ಕಂಡೆನೊ ಬಂದೆನೊ ಇಲ್ಲವೊ ಹೇಳಲಾರೆ. ಹಾಗಂದಿದ್ದೀರಿ. ಕಾಗದಗಳನ್ನೂ ಬರೆದಿದ್ದೀರಿ. ಆದರೆ ಕೇಳುತ್ತೇನೆ ನಿಮ್ಮನ್ನ : ನಾನು ಇನ್ನೂ ಹನ್ನೊಂದು Stone ಆಗಿಲ್ಲ. ನಿಮ್ಮ ಉಪೇಕ್ಷೆ ಹೀಗೇ ನಡೆದರೆ ಹನ್ನೊಂದೇ ಏಕೆ, ಹದಿನೈದರ ರಾಕ್ ಆದೇನು! ಪಠಾಣಿಯರಿಲ್ಲವೆ? ಹಿಂದೆ ಗಾಂಧಾರಿ ಇದ್ದಳಲ್ಲ ; ಅವಳು ಇನ್ನೇನು? ಕುಂತಿ, ದ್ರೌಪದಿ, ಎಂಥ ಹೆಣ್ಣುಗಳು ಅವು? ಇಂದೊ ಪರಂಗಿಯವರು ಇಲ್ಲವೆ, ನಾವೇಕೆ ಆಗಬಾರದು?.... ಇನ್ನು ಡಿಜೆನರೇಟ್ ಅನ್ನೊ ಮಾತು ಅನ್ಯಾಯ. ನಿಮ್ಮ ಮಧುಸೂದನ ಎದುರಿಗೆ ಈಗ ಕೂತಿದ್ದಾನೆ; ನೀವು ಕಳಿಸಿದ ಸಣ್ಣ ಮೋಟರ್ ರಿಪೇರಿ ಮಾಡುತ್ತ. ಕುದುರೆ ಕಾಲು ಮುರಿದು ಮೂಲೆಯಲ್ಲಿ ಬಿದ್ದಿದೆ. ಡಿಜೆನರೇಟ್ ಹೇಗಾದೀತು. ನೀವಾಡುವ ಮಾತುಗಳಿಗೆ ಕೈಯಿಲ್ಲ, ಕಾಲಿಲ್ಲ, ಲಂಗಿಲ್ಲ, ಲಗಾಮಿಲ್ಲ. ಇಂಗ್ಲಿಷ್ ಓದಿದ್ದೇವೆ ಅಂದುಕೊಂಡು ಎಲ್ಲೆಲ್ಲೀದೊ ಯಾವ್ಯಾವುದೊ ಮಾತುಗಳನ್ನು ನಮ್ಮ ಮೇಲೆ ಬಳಸುವುದು. ಓದಿದ ನಮ್ಮಂಥವರ ಮೇಲೆ ಆ ಪ್ರಯೋಗ ಪ್ರಯೋಜನವಿಲ್ಲವಾಗಿ ನಿಮ್ಮ ಬಾಯಿ ಕಟ್ಟುತ್ತದೆ. ಕ್ಯಾಲಕ್ಯುಲಸಿನ, ಸೈಕಾಲಜಿಯ

ಆನೆಗಾತ್ರದ ಮಾತುಗಳನ್ನೆಲ್ಲ ಬಳಸಹೋದರೆ ಹೇಳಿಬಿಡುತ್ತೇನೆ-ಅದರ ಗುಟ್ಟು ನನಗೂ ಗೊತ್ತಿದೆಯಾದ್ದರಿಂದ, –ಇದು ಎಂಜಲು, ತಿರಿಪೆ ಎಂದು. ಅದಕ್ಕೆ ನಿಮಗೆ ಮಾರ್ಗವಿಲ್ಲವಾಗಿ ನಾನು ನಿಮ್ಮ ಕೈಯಲ್ಲಿ ಮಾನವಾಗಿ ಬಚಾಯಿಸಿಕೊಳ್ಳಲಾಯಿತು. ಇಲ್ಲವಾದರೆ ನುಂಗಿ ನೀರು ಕುಡಿಯುತ್ತಿದ್ದಿರಿ. ಅದಕ್ಕೇ ನೀವು ಗಂಡಸರು ಓದಿರೋರನ್ನ ಮದುವೆ ಆಗೋಕೆ ಹಿಂದೇಟು ಹೊಡೆಯೋದು. ರೊಮಾನ್ಸಿಗೆ ಕಾಲೇಜು ಹುಡುಗಿ ಬೇಕು ; ಮದುವೆಯಾಗೋಕೆ ಧೈರ್ಯ – ಗಟ್ಸ್ ಅಂತೀರಿ ನೋಡಿ, ಅದು–ಇಲ್ಲ. ಅವಳನ್ನು ಆಳೋದು ಕಷ್ಟ ಅಂತ ಅಲ್ಲವೆ? ಆಳೋದು ಏನ್ರಿ ಬಂತು? ಆಳು ಯಾರು? ಅರಸ್ಯಾರು? ಸಂಸಾರದಲ್ಲಿಯೂ ನಮ್ಮದು ಡೆಮೊಕ್ರಸಿ ಈಗ.

ಈಗೇನು ನಾನು ಅಲ್ಲಿಗೆ ಬಂದು ನಿಮ್ಮೊಡನೆ ಸಂಸಾರ ಮಾಡಿಕೊಂಡಿರ ಬೇಕೆಂಬುದು ನಿಮ್ಮಿಚ್ಛೆಯೊ ಇಲ್ಲವೊ? ನಾನು ಇಲ್ಲಿಯೇ ಬೇರೆ ಯಾವ ಏರ್ಪಾಡ ನ್ನಾದರೂ ಮಾಡಿಕೊಂಡು ಮನಸ್ಸನ್ನು ತುಂಬಿಕೊಳ್ಳಲೊ? ನನಗೆ ಜೀವ ಬೇಸರ ವಾಗಿದೆ. ಏತಕ್ಕಾಗಿ ಒಂದು ಗಂಡನ್ನು ಕಟ್ಟಿಕೊಳ್ಳುವುದು? ನಾವೇನು ಹಸುಗಳೆ, ನಾಯಿಗಳೆ, ಗಿಳಿಗಳೆ, ಆಟದ ಬೊಂಬೆಗಳೆ ? ಮನುಷ್ಯರಲ್ಲವೆ? ಕೈ, ಕಾಲು, ಕಣ್ಣು, ಕಿವಿ, ನಮಗಿಲ್ಲವೆ? ಅವುಗಳ ಚಲಾವಣೆ ತಪ್ಪು ಎಂದು ಗಂಡು ಸಮಾಜ, ಶಾಸ್ತ್ರ ಹೇಳುತ್ತವೆಯೇ ವಿನಾ, ತಾಯಿ ಪ್ರಕೃತಿದೇವಿ ಅದನ್ನು ಒಪ್ಪಿಯಾಳೆ? ಅದಕ್ಕೆ ಸ್ವಾತಂತ್ರ್ಯವಿಲ್ಲವೆ? ಒಂದು ಹೆಣ್ಣು, ಒಂದು ಕೊಂಕುನೋಟ, ತಡೆದು ಬದುಕೀರ ನೀವು? ದೊಡ್ಡ ಸಾಧನೆಗಳನ್ನು ಮರೆಯುತ್ತೀರಿ. ಭರತನಾಟ್ಯ ಮಾಡಿ ಹಾವಭಾವ ಹಾಯಿಸುವ ವೃತ್ತಿಯ ಹೆಣ್ಣು ಹಾಗಿರಲಿ, ಸಾಮಾನ್ಯ ಹೆಣ್ಣಿನ ಒಂದು ಮೂದಲೆಯನ್ನು ಜೀರ್ಣಿಸಿಕೊಂಡೀರ? ಈ ಮಾತು ಆಡಬಾರದುರೀ. ಆರೋಗ ದೃಢಕಾಯಳಾದ ಹೆಣ್ಣು, 'ಇಗೊ ಕೊಳ್ಳಿ' ಎಂದು ನಿಂತರೆ ನೀವು ಸಾಕಾದೀರ ? ನಮ್ಮ ಪ್ರೀತಿ, ವಿಶ್ವಾಸ, ಹೊಂದಿಕೆ ನಿಮ್ಮನ್ನು ಉಳಿಸಬೇಕು. I am dying Egypt ಎಂದು ಕಂಗಾಲಾಗಿ ಆ್ಯಂಟನಿ ಸತ್ತ ಕತೆ ಸಾಲದೆ ? ಊರು ಬಿಟ್ಟು, ಪದವಿ, ಕೀರ್ತಿ ಬಿಟ್ಟು, ಆವೊತ್ತು Unfinished Symphony ಗೆ ಹೋಗಿದ್ದೆವು. ಆ ಎಗ್ಗರ್ತ್ ಹುಡುಗಿ ಸಂಗೀತದ ಮೇಷ್ಟರನ್ನು ಹೊಲ ತೋಟ ಹಾದು ಹಿಡಿಯಲಾಗದಂತೆ ಓಡಿಸಿ, ಉಸಿರು ಮೇಲಕ್ಕೆ ತಂದು ದಣಿಸಿದ್ದು ನೋಡಿ, ನಮ್ಮಪ್ಪ !-ಎಂದಿರಿ. ಓದಿದ ಹೆಂಗಸು ಹಾಗೆ ಒಲಿಸು ಎಂದು ಕೇಳಿದರೆ ಅವಳನ್ನು ಹಿಡಿದಿಟ್ಟುಕೊಳ್ಳಲು ನೀವು ಎಷ್ಟು ತಪಸ್ಸು ಮಾಡಬೇಕು ತಿಳಿದೀತೆ ? ಅಂಥಾ ಮನಸ್ಸು ನಮಗಿಲ್ಲವೆ ? ಆಸೆ ಇಲ್ಲವೆ? ನಿರೀಕ್ಷೆಯ ಗೋರಿಗಳಾಗುತ್ತಿವೆ ಈ ಹೃದಯಗಳು ; ನಿಮ್ಮ ಅಲಕ್ಷ್ಯದಿಂದ. ಕೈ, ಕಾಲು, ಮನಸ್ಸು, ಆಸೆ, ಅಭಿಲಾಷೆ ಎಲ್ಲಾ ಕಟ್ಟಿ, ಭಾರತ ಮಹಿಳೆಗೆ ಒಂದು ಸಂಸ್ಕೃತಿ ಸಂಕೋಲೆ ಹಾಕಿ ಅವಳ ಬಾಳು ನೆಲಸಮ ಮಾಡಿದ್ದೀರಿ.

ನನಗೆ ಯಾವುದಕ್ಕೂ ನೀವು ಕಡಮೆ ಮಾಡಿಲ್ಲ ನಿಜ. ಆದರೆ ಆ ಅಷ್ಟರಿಂದ ಯಾವ ತೃಪ್ತಿ ಹೆಣ್ಣಿಗೆ ? ನಮ್ಮ ಪರವಾಗಿ ಮಹಾಭಾರತದ ಹೆಣ್ಣು ನುಡಿವಳಂತೆ :

–ಹಾಗಿದೆ ಕನ್ನಡ ಕಾವ್ಯವೊಂದರಲ್ಲಿ –'ಧನಕನಕ ವಸ್ತು ವಾಹನಂಗಳಿತ್ತು ಪೆಂಡಿರೊಲ್ವರೆ? ಗಂಡರ್ ಗುಣಮನೆ ಮೆರೆವುದು' ಎಂದು. ಭೀಮನಂತೆ ಏನನ್ನು-ಯಾರನ್ನು-ಇರಿದೀರಿ ನೀವಿಂದು? ಸಾಕಷ್ಟು ಕಾರಣವಿದ್ದು ಹಗೆಯನ್ನು ಇರಿದರೂ ಜೈಲಿಗೇ ಹೋಗಿ ಅಂದೇನೆ? ನಾನಾವತಿ ಕೇಸು ಓದಿದಿರೊ ಇಲ್ಲವೊ? ಹೆಣ್ಣಿ ಹೃದಯವನ್ನು ಮಾತ್ರ ಇರಿದೀರಿ; ಅವಳ ಹರ್ಷದ ಬಾಳನ್ನು ; ಅವಳ ಎಲ್ಲ ಕಾಮನ, ಹಾರೈಕೆಗಳನ್ನು ; ಅವಳ ನಗುವನ್ನು. ಹಣ, ಬಟ್ಟೆ, ಮೋಟರು, ಆಗ ಈಗ ಸಿನೆಮ, ಆಳು- ಕಾಳು ಇಷ್ಟರಿಂದ ಹೆಣ್ಣು ತೃಪ್ತಿಪಟ್ಟಾಳೆ? ಕೈ ಹಿಡಿದ ಗಂಡ ಬಾಳ ಜೊತೆಗಾರನಲ್ಲವೆ ಜೀವನದ ಎಲ್ಲ ಸಮಯದಲ್ಲೂ? ಕಾರ್ಯಗಳಲ್ಲೂ? ಜೊತೆ ಎಲ್ಲಿ, ಜೊತೆಯಲ್ಲಿನ ಸಮಾನತೆಯೆಲ್ಲಿ, ಧಾರಾಳವೆಲ್ಲಿ, ಸಾಹಸವೆಲ್ಲಿ? ಅವನಿಗೆ ಅವಳು ಸಹಧರ್ಮಚರಿಯಾದರೆ ಅವಳ ಧರ್ಮದ ಪಾಲುಗಾರನಾಗಬೇಡವೆ ಅವಳ ಗಂಡು ? ಅವನ ಧರ್ಮಕ್ಕೆ ಇವಳು ಜೊತೆಗಾತಿಯಾದರೆ ಇವಳದಕ್ಕೆ ಅವನು ಆಗಬೇಡವೆ? ಭರ್ತಾ ಹೀಗೂ ಆದರೆ ತಾನೆ ದಾಂಪತ್ಯಸಿದ್ಧಿ?

ಹೇಳಿ ಬೇಕಾದರೆ : ನಿಮ್ಮೆಲ್ಲ ಕಾರ್ಯಗಳಲ್ಲಿಯೂ ಜೊತೆಗೆ ಕೆಲಸ ಮಾಡುತ್ತೇನೆ. ಬ್ರಿಜ್ಜಲ್ಲ ; ಕೈಲಾಸ ವೈಕುಂಠಗಳ ತಲೆಯ ಮೇಲೆ ಹೊಡೆವ ಪ್ಲಾನ್ ಬರೆದುಕೊಡು ತ್ತೇನೆ ; ನಮ್ಮಪ್ಪ ಎಂಜಿನೀಯರು. ಪ್ಲಾನ್ ರೂಪಿತವಾಗುತ್ತಿದ್ದ ಹಾಗೆ ಅದನ್ನು ವಿಸ್ತರಿಸಿ ಅದೇ ಅಂದಾಜಿಗೆ ಅದರಪ್ಪನಂತಹ ಮಂದಿರ, ಮಹಲು ಕಟ್ಟಿ ಕೊಡುತ್ತೇನೆ. ಷೇರು ವ್ಯಾಪಾರ ಮಾಡುತೀರ-ನಮ್ಮಣ್ಣ ಷೇರು ವ್ಯಾಪಾರಿ, ನಿಮ್ಮ ಹತ್ತು ಸಾವಿರವನ್ನು ಇನ್ನೊಂದು ವರ್ಷದೊಳಗೆ ೨೦ ಮಾಡದಾದರೆ ನನ್ನನ್ನು ಕುರೊ ಕುರೊ ಎಂದು ಕರೆಯಿರಿ. ನನ್ನ ತಮ್ಮ ಲಚ್ಚಿ ಇಂಗ್ಲಂಡಿಗೆ ಮುತ್ತು ರಫ್ತು ಮಾಡುವವನು. ನಿಮ್ಮ ತೋಟದಲ್ಲಿ ಅಂಜೂರ, ಸೇಬು ಈಗ ಹೊರವಾಗಿ ಬೆಳಸುತ್ತಿದ್ದೇನೆ ಅಂತೀರಲ್ಲ ! ಒಂದು ಮರಕ್ಕೆ ಒಂದೇ ಗಾತ್ರದ, ತೂಕದ, ರಸಸಂಪತ್ತು ಉಳ್ಳ ಸಾವಿರ ಹಣ್ಣು ನಾನು ಬಿಡಿಸದೆ ಹೋದರೆ ನನ್ನ ತಲೆ ದಂಡ ! ಶಕ್ತಿ ಇಲ್ಲವೆ ? ಬುದ್ಧಿ ಇಲ್ಲವೆ, ತಿಳಿವಳಿಕೆ ಇಲ್ಲವೆ, ಉಮೇದಿಲ್ಲವೆ? ನಾನೇನನ್ನು ಮಾಡಿದರೂ ನಿಮಗೆ ಬೇಡ ; ನಿಮ್ಮ ಪಾಲಿಗೆ ಬಂದ ಹೆಣ್ಣನ್ನು ಹೇಗೆ ನಡಸಿಕೊಳ್ಳಬೇಕು ಎಂಬ ಯೋಚನೆ ನಿಮಗಿದ್ದಿದ್ದರೆ ಅದು ಬೇರೆ ಬಗೆ, ರೀತಿ ಆಗುತ್ತಿತ್ತು. ಈಗ ನಾವು ನಿಮಗೆ ಬರಿಯ ವಿಧೇಯರಾಗಿರಬೇಕಾದ ಹೆಂಡತಿಯರು ಮಾತ್ರ. ನಿನ್ನ ಕೈ ಯಾಕೆ ಒರಟು ಮಾಡಿಕೊಬೇಕು, ಬುದ್ಧಿ ಯಾಕೆ ಮದಡು ಮಾಡಿಕೊಳ್ಳಬೇಕು ನಾನಿರುವಾಗ ಅಂತೀರಿ. ಒರಟೇನು ಬಂತು, ಮದಡೇಕಾಗುತ್ತೆ ? ಮಾಡಿಕೊಂಡ ಹಾಗೆಲ್ಲ ಆಗುತ್ತೆ.

ಈಚೀಚೆಗೆ ನಿಮಗೆ ಸ್ವಲ್ಪ ಸುತ್ತಳತೆ ಹೆಚ್ಚುತ್ತ ಇದೆ. ಇದನ್ನು ನೀವೂ ಕಂಡು ಗೊಣಗಿದ್ದೀರಿ. ನೀವು ಹಗುರವಾಗಿದ್ದಾಗಲೂ ನಿಮಗಿಂತ ನಾನು ಹೆಚ್ಚು ದೂರ ಹಾರಿದ್ದು ಓಡಿದ್ದು ಕಂಡಿದ್ದೀರಿ. ಕುದುರೆ ದಣಿಯುವಂತೆ ನಾನು ಕುದುರೆಸವಾರಿ ಮಾಡಬಲ್ಲೆ; ನನ್ನೊಡನೆ ಅಗರದ ರಸ್ತೆಯಲ್ಲಿ ಸ್ಕೂಟರ್ ಪಂದ್ಯ ಹೂಡಿದಿರಿ ; ನೆನಪಿದೆಯೆ ?

ನೀವು ಗೆಲ್ಲಲಿಲ್ಲ. ನಿಮಗೆ ಗೊತ್ತಿದೆ. ಊಟಕ್ಕೆ ಕುಳಿತಿರಿ ; ಅವೊತ್ತು ನೀವೆಷ್ಟು ಜಿಲೇಬಿ ತಿಂದಿರಿ? ಹರಟೆ, ಸುಖ, ನಿಮ್ಮ ಬಡಾಯಿಗೆ ಬಣ್ಣನೆ ಬಂದೀತೆ ಹೊರತು, ನಮ್ಮೊಡನೆ ಪಂದ್ಯಹಾಕಿ ಯಾವುದರಲ್ಲಿಯಾದರೂ ಗೆದ್ದೀರ ನೀವು ? ಕಡೆಗೆ ನಾವು ಬಾಯಿ ತೆರೆದರೆ ನೀವು ಗಂಡಸರು ಬದುಕೀರ? ಹೀಗೆ ನೇರವಾಗಿ ಕೇಳಬಾರದು–ಸಾಧ್ವಿಯರಾದವರು, ನಿಜ. ಆದರೆ ಸಾಧ್ವಿಯರನ್ನು ನೀವು ಹೀಗೆ ಸತಾಯಿಸುತ್ತ ಇದ್ದರೆ ಸಾವಿತ್ರಿಯರಾದರೂ ಏನು ಮಾಡಿಯಾರು? ಗಂಡು ಸತ್ಯವಂತನಾಗಿದ್ದರೆ ಸಾವಿತ್ರಿ ಬದುಕಿಸಿಯಾಳು ; ಅದನ್ನು ಬಯಸಿಯಾಳು. ಅವನು ಬೇರೆ ಎಂಥವನೊ ಆದರೆ ? ಸಾವಿತ್ರಿಗೆ ಬಿಡುಗಡೆಯ ಧಾರಾಳ ಬೇಕು. ಕಾಲ ಎಂದಿನಂತೆಯೇ ಇಲ್ಲ. ಪುನಃ ಹೇಳುತ್ತೇನೆ–ಹೆಣ್ಣಿಗೆ ಸ್ವಾತಂತ್ರ್ಯ ಇದೆ ; ಇರಬೇಕು–ಅವಳೂ ಮನುಷ್ಯಳಾಗಿ ಹುಟ್ಟಿದ ಕಾರಣದಿಂದ.

ಇಲ್ಲವಾಗಿದ್ದರೆ : ಈ ಶಕ್ತಿಗಳೆಲ್ಲ ಅವಳಿಗೇಕೆ ಇರುತ್ತಿದ್ದವು? ಈ ಬಿಡುಗಡೆಯ ಆಸೆಯೆಲ್ಲ ಏಕೆ? ಕಾರ್ಯರೂಪಕ್ಕೆ ಬಾರದ, ಯಾವ ಶಕ್ತಿ ಸಾಮರ್ಥ್ಯ ಏನು ಫಲ? ಇಷ್ಟನ್ನು ಪೋಲು ಮಾಡಿ ಲೋಕ ಏನು ಸಾಧಿಸಬಲ್ಲದು ? ಅರ್ಧ ಪ್ರಪಂಚವನ್ನು ಜಡ ಮಾಡಿ; ತಡೆದು; ಅಣಗಿಸಿ, ಒಣಗಿಸಿ ; ಅದರ ಪ್ರಯೋಜನವನ್ನು ಹೀರಿ, ಹಿಂಗಿಸಿ?

ಅಯ್ಯೋ, ಏನು ಬರೆದು ಏನು ತಿಳಿಸಿ ಏನು ಸಾಧಿಸಬಹುದು-ನಿಮ್ಮಂತಹ ಜೇನುಗಳಿಂದ, ಇರುವೆಗಳಿಂದ ? ಏಕೆ ಕಟ್ಟುವಿರೊ ಗೂಡುಗಳನ್ನು? ಏಕೆ ದಣಿಯುವಿರೊ ಕಾಳು, ಸಕ್ಕರೆ, ಹೊತ್ತು ; ಒಯಿದು. ದುಡಿದು ದುಡಿದು. ಸಮುದ್ರದಷ್ಟು ಸಂತೋಷ ಎದುರಿಗೆ ತೆರೆದಿರುವಾಗ, ಅಲೆಅಲೆಯಾಗಿ ಮೊರೆದು ಕೈಚಾಚಿ ಹಾರೈಸುವಾಗ, ಕಾಲಿಗೆ ಬಿದ್ದು ಕಣ್ಣು ತಂಪಿಸಿ ಎದೆಗೆ ಕಾವು ತರುವಾಗ ! ಇದಾವುದನ್ನೂ ಒಲ್ಲದ ನಿಮ್ಮ ನೀರಸತೆ ಬೇಸರ ತರುತ್ತಿದೆ. ದುಡ್ಡು, ಕೆಲಸ, ದಣಿವು; ನಾಯ ಅಲೆತ. Ends, Means ಮಾತಾಡಿದ್ದೂ ಆಡಿದ್ದೇ. ನಿಮಗೆ ಮಾನವ ಗಣ್ಯಗಳೇ ಇಲ್ಲ. ಹೇಳಿದೆನೇ: ನೀವು ಗಾಡಿಗೆ ಕಟ್ಟಿದ ಕುದುರೆಗಳು; ಒಂದು ಬಾಡಿಗೆ ಮುಗಿದರೆ ಇನ್ನೊಂದಕ್ಕೆ ಕಾಯುವುದು. ಇಷ್ಟೇ ಬದುಕು.

ಈಗೇನು ನಾನು ನಿಮಗೆ ಬೇಕೆ ? ಬೇಡವೆ ? ಇಲ್ಲಿ ದೊಡ್ಡ ಚಿತ್ರಕಾರರು ಪಾಠ ಕಲಿಸುತ್ತೇನೆಂದು ಬೇಡುತ್ತಿದ್ದಾರೆ. ನಾನು ಬರೆದ ಜಿಂಕೆಯ ಚಿತ್ರ ಅವರಿಗೆ ತುಂಬಾ ಹಿಡಿಸಿರುವ ಹಾಗಿದೆ. ಅದನ್ನು ಈ ಸಲದ ಅಖಿಲಭಾರತ Exhibition ಗೆ ಕಳಿಸಿರೆಂದು ಹೇಳಿದ್ದಾರೆ. ಅಲ್ಲಿ ಇಲ್ಲಿ, ದೃಶ್ಯದ ಆಳ ವಿಸ್ತಾರಗಳನ್ನು, ನೆಳಲು ಬೆಳಕುಗಳ ಸುಳಿವನ್ನು ಅಲ್ಪ ಸ್ವಲ್ಪ ಮಾರ್ಪಡಿಸಿದರೆ ಅದು ಇಂದಿನ ಯಾರ ಚಿತ್ರಕ್ಕೂ ಕಡಮೆಯಾಗದೆನ್ನುವಷ್ಟು ಹೊಗಳಿದರಂತೆ, ನಮ್ಮ ತಂದೆಯವರೊಡನೆ ಮಾತನಾಡುತ್ತ ಯಾರಾರೊ. ತೊಡಗಿದರೆ ಇನ್ನೆರಡು ಮೂರು ವರ್ಷಗಳ ಕಲಿಕೆ ಅದು. ಬದುಕು

ಬಾಳಬೇಕೆಂಬುದು ನನ್ನ ಮನಸ್ಸು; ನೀವು ಸರಿಯಾಗಿ ಬಾಳಿಸಿದರೆ ; ನನಗಾಗಿ ದಿನಕ್ಕೆ ಎರಡು ಗಂಟೆಯಾದರೂ ಬಿಡುವಿಟ್ಟುಕೊಳ್ಳುವಿರಾದರೆ.

ಹಿಂದೆ ಒಂದು ದಿನ ದಾಂಪತ್ಯದ ಹೊಸತಿನಲ್ಲಿ ಬೆಳುದಿಂಗಳಲ್ಲಿ ಒಂದು ಹಾಡು ಕೇಳಿಸಿತು, ನಾವು ತಿರುಗಾಡಲು ಹೋದಾಗ ; ಒಂದು ಇಂಗ್ಲಿಷ್ ಹಾಡು ; ಅದರ ರಚನೆಯೇನು ಕವಿತೆಯೇನು ಮಹಾ ! ಆದರೆ ಎಳಮನಸ್ಸುಗಳಿಗೆ ಹಾಯೆನಿಸುವುದು. ಅಂಥವು ನೂರನ್ನು ಬರೆದೇನು ನಾನು ? 'ನೀನು ಹೋದಲ್ಲಿ ಹೋಗುತ್ತೇನೆ ; ನೀ ತಿಂದದ್ದು ತಿನ್ನುತ್ತೇನೆ ; ಕೊಟ್ಟದ್ದನ್ನು ತೆಗೆದುಕೊಳ್ಳುತ್ತೇನೆ ; ನನ್ನ ಪ್ರಿಯ, ನನ್ನ ಸಂತೋಷವೆ, ನನ್ನ ಹೃದಯಾಧಿಕ' ಎಂದು ಮುಂತಾಗಿ ಪ್ರೇಮನಿವೇದನೆ ಮಾಡಿದ್ದು. ಇಬ್ಬರ ಹಾಡು ಒಳ್ಳೆಯ ಹಿನ್ನೆಲೆಯ ಸಂಗೀತದಲ್ಲಿ ; ಅ ಅನ್ನು ಎ ಮಾಡಿದಿರಿ. ಅದನ್ನು ಕೇಳಿ ನಿಮಗೆಷ್ಟು ಉಲ್ಲಾಸ ಅಂದು ? ನನಗೆಷ್ಟು ? ನಾನೂ ಅದನ್ನು ಕುರುಕಿದೆ ; ಜೊತೆಗೆ ನೀವು ಕೊರಲು ಸೇರಿಸಿದಿರಿ. ನಿಮಗೆ ಹೆಣ್ಣು ದನಿ ಹೇಗೆ ಬರಬೇಕು ? ಆದರೂ ಅದರ ಗೂಳಿ ಗುಟುರ ಸ್ಥಾಯಿ ನನ್ನ ದನಿಗೆ, ನುಡಿತಕ್ಕೆ ಪೂರಕವಾಯಿತು. ಇಬ್ಬರೂ ಹಾಡಿ ಮೈಮರೆತೆವು.... ಆ ದಿನಗಳು ಇನ್ನೆಲ್ಲಿ ? ಶ್ರಾವಣದ ಮೋಡ ತುಂಬಿದ ಆಕಾಶ ; ಇಂದು ಮಳೆ, ಮಿಂಚು, ಗುಡುಗು, ಸಿಡಿಲು. ಜೊರೊ ಎಂದು ಮಳೆ ಸುರಿಯುತ್ತಿದೆ ಹೊರಗೆ. ಲೋಕಕ್ಕೆ ನೀರೆರೆವ ತಾಯಿ ಆದಿಮಾಯೆ ಹೊರಗೆ ಕವಿದಿದ್ದಾಳೆ; ಜೀವ ಕರೆಯುತ್ತಿದ್ದಾಳೆ ಬೆಳೆಗೆ, ಫಲಕ್ಕೆ. ನನ್ನ ಬಾಳಿಗೆ ಬರಿ ಮೋಡವೆ ? ಈ ಮೋಡವನ್ನು ನಗಿಸುವ ಮಿಂಚು ನೀವು ಮಾಯವಾಗಿದ್ದೀರಿ. ಸೊನ್ನೆಗೆ ಸೊನ್ನೆ ಸೇರಿಸುತ್ತ. ಯಾರಿಗೆ ಬೇಕೊ ಹಣ, ಏತಕ್ಕೊ ? ಆ ಹಾಳು ಕೆಲಸ ಮಾಡದಿದ್ದರೆ ನಿಮ್ಮ ಮನಸ್ಸು ತುಕ್ಕು ಹಿಡಿಯುತ್ತದೆಂದು ನಿಮ್ಮ ಭಾವನೆ ; ಬಾಳು ಬೇರೆಯಾಗಿ ತುಕ್ಕು ಹಿಡಿದು ಹೋಗುತ್ತಿದೆ; ಜೊತೆಯ ಇನ್ನೊಂದಕ್ಕೆ ತುಕ್ಕು ಹಿಡಿಸಿ. ಎಷ್ಟು ಪೋಲು, ಪಾಳು, ಒಡಕು.

ಇನ್ನೂ ಬರೆದು ಬೇಸರ ಮಾಡುವುದಿಲ್ಲ ; ಈ ಶುಕ್ರವಾರ ಇಲ್ಲಿ ಹೂವೀಳೆಯ ಮಾಡುತ್ತಾರೆ ; ಶನಿವಾರ ರಾಮನ ಪೂಜೆ. ಆವರೆಗೂ ನೋಡುತ್ತೇನೆ. ನಿಮ್ಮಿಂದ ಅನುಕೂಲವಾದ ಕಾಗದ ಬಾರದಾದರೆ.... ಮುಂದೆ ನಾನು ಚಿತ್ರವಿದ್ಯೆಯಲ್ಲಿ ತೊಡಗುತ್ತೇನೆ. ಇಲ್ಲವಾದರೆ ನಾಣಿ ಮನೆಯವರೆಲ್ಲ ಮೂರು ತಿಂಗಳು ಟ್ರಿಪ್ ಏರ್ಪಡಿಸಿದ್ದಾರೆ. ಬೇಸರ ಕಳೆದುಕೊಂಡು ಬರುತ್ತೇನೆ. ಮಧೂನ ಅಮ್ಮ ನೋಡಿಕೊಳ್ಳುತ್ತಾರೆ. ಇಲ್ಲ : ಅವನನ್ನೂ ಕರಕೊಂಡು ಹೋಗುತ್ತೇನೆ. ಎಲ್ಲೆಲ್ಲಿ ಜೀವ ಹೇಗೆ ಹೇಗಿದೆಯೊ ನೋಡಿಯಾದರೂ ಕಾಲ ಹಾಕೋಣ.

ಯಜಮಾನರಿಗೆ ನನ್ನ ಮೇಲೆ ಬರಿ ಯಜಮಾನಿಕೆ ಬೇಕೇ ವಿನಾ, ನಾನು ಬೇಡ. ಆಯಿತು. ನಿಮ್ಮ ಸಂತೋಷ.

ಇಂತೀ ನಿಮ್ಮ ಮನೆವಿ,

ನಾನು.

# ನಮ್ಮ ಅಜ್ಜಿಯ ಅಡಿಗೆ

ಅಡಿಗೆ, ಊಟ, ಯಾರಿಗೆ ಬೇಡ? ಮಾಡಿದ ಅಡಿಗೆ, ತೃಪ್ತಿತರುವ ಊಟ ಬಾಳಲ್ಲಿ ತುಂಬಾ ಸುಖ ತರುವಂಥವು. ಮಾಡಿದವರಿಗೆ ಹೆಸರು ; ನಾಲ್ಕು ಜನಕ್ಕೆ ಸಂತೋಷ ಬಡಿಸಿದವರು ಎಂದು; ತಿಂದವರಿಗೆ ಆ ದಿನದ ಪುಣ್ಯ ಫಲಿಸಿತು ಎಂದು ತುಷ್ಟಿ. ಊಟದ ವಿಚಾರ ಹಾಗಿರಲಿ. ಅದು ಭೋಗಭಾಗ. ನೆನಸಿಕೊಳ್ಳುತ್ತ ಹೋದರೆ ಯುಗ ಯುಗಗಳು ಸಾಕಾದಾವೆ ? ಅಲ್ಲದೆಯೊ, ಅದು ಮನಸ್ಸನ್ನು ಎಲ್ಲೆಲ್ಲಿಗೆ ಒಯ್ಯುತ್ತದೆಯೊ? ಆನಂದದಲ್ಲಿ ಪರಿಸಮಾಪ್ತವಾಗುವುದಾದರೆ ಮುಂದಿನ್ನೇನುಬೇಕು? ನಿದ್ರೆ ಮಾತ್ರ ಎಂದೀರಿ. ಸಹಜವೇ. ಚೆನ್ನಾಗಿ ಊಟ ಮಾಡುವುದು ಎಂದರೆ ಕೂಡಲೆ ನಿದ್ರೆ ಬೇಡುವುದು ಎಂದರ್ಥ. ದೇಹದ ಎಲ್ಲ ತೃಪ್ತಿಗೂ ಉತ್ತರಕ್ರಿಯೆ ನಿದ್ರೆ ಎನ್ನುವುದು ಪ್ರಾಣಿಶಾಸ್ತ್ರದ ರೂಢಿ. ಶಾಸ್ತ್ರವನ್ನು ಅಲ್ಲಗಳೆದು ಎಲ್ಲಿ ಹೋಗಬಲ್ಲೆವು ? ಆ ವಿಶ್ರಾಂತಿಯಿಲ್ಲದೆ ನೆಮ್ಮದಿಬಾರದು. ನೆಮ್ಮದಿಗೋಸ್ಕರ ತಾನೆ ಎಲ್ಲ ಯತ್ನ ? .... ಅಡಿಗೆ, ಅಡಿಗೆಮನೆ, ಅಡಿಗೆಯವರು ಎಂಬುದನ್ನು ಪಾಕ, ಪಾಚನ, ಪಾಚಕ ಮುಂತಾದ ಮಾತುಗಳಿಗೆ ಪ್ರತಿಯಾಗಿ ಬಳಸುವುದುಂಟು. ಆಗಬಹುದು. ಆದರೆ ಆ ಮಾತುಗಳ ಹಿಂದೆ ಬಗೆಬಗೆಯ ಪೂರ್ವರಂಗಗಳೇನು-ಪೂರ್ವಗ್ರಹಗಳೇ ಉಂಟು. ಅವಕ್ಕೇ ಹೊಂದುವ, ಬೇರೆಯವಕ್ಕೆ ಹೊಂದದ ರಹಸ್ಯ ಸಂಬಂಧ ಇದೆ. ಪಾಕವೆಂದರೆ ಪುನಃ ಇನ್ನಾವುದೊ ಪ್ರಪಂಚಕ್ಕೆ ಹೋಗಿ ಆಲಂಕಾರಿಕವಾಗಿ ತಲೆ ಕೆಡಿಸಿಕೊಳ್ಳುವಂತಾಗಬಾರದು. ಪಾಕವೂ ಬೇಡ ಶಯ್ಯೆಯೂ ಬೇಡ, ಸದ್ಯ. ವಯಸ್ಸಾದ ಮೇಲೆ ಶಯ್ಯೆಯ ಹಂಬಲ ತಪ್ಪು. ಕಾವ್ಯಮೀಮಾಂಸೆಯಲ್ಲಿ ಅವೆಲ್ಲ ಅಧಿಕರಣಗಳೆಂದು ಗೊತ್ತು. ಅವು ಹದಗಳು ಎನ್ನುತ್ತಾರೆ. ಒಗ್ಗರಣೆ, ಪರಿಮಳಗಳಿಗೆ ಹತ್ತಿರದವು ಅವು. ಆ ಪ್ರಕರಣಗಳೂ ಗೋಜಿನವೇ. ಅಲ್ಲಿಯೂ ಸಿಕ್ಕುಗಳಿಗೆ ಸಿಕ್ಕಿಹಾಕಿಕೊಂಡರೆ ಸುಲಭ ನಿಸ್ತಾರವಿಲ್ಲ. ಅಡಿಗೆ ಎಂದರೆ ದಿನ ನಿತ್ಯದ ಊಟಕ್ಕೆ ಅಟ್ಟು ಮಾಡಿದ ಪದಾರ್ಥ, ಅದರ ಬಗೆ ಬಗೆಯ ರುಚಿ ; ಆವೊತ್ತಿನ ಊಟದಲ್ಲಿ ಸುಳಿದ, ಹಿತಗೊಳಿಸಿದ ಯಾವುದೊ ಸಂಮಿತಿ ಎಂದಿಟ್ಟುಕೊಂಡರಾಯಿತು. ಅರ್ಥ ಶುದ್ಧಿ, ಪ್ರಕರಣಸಿದ್ಧಿ ಆದಲ್ಲದೆ ಯಾವುದರಲ್ಲಿಯೂ ತೊಡಗಬಾರದೆನ್ನುತ್ತಾರಾಗಿ ಈ ಪ್ರಸಂಗವನ್ನು ಬೆಳಸಿದ್ದಾಯಿತು. ಅಡಿಗೆಗೆ ಬಿದ್ದ ಸಾಮಗ್ರಿ, ಅನ್ನ ಬೆಂದ ರೀತಿ, ಅದು ಪಕ್ವವಾದ ಪ್ರಕಾರ, ಇವುಗಳಿಂದ ಅಂದಿನ ಆಹಾರ ಆಪ್ಯಾಯಕರವಾದರಾಯಿತು. ಅದರ ಹಿಂದಿನ ಕೈವಾಡದ ಪ್ರಭಾವ ಅದು. ಸಂಬಳಕ್ಕೆ ದುಡಿಯುವವರದಲ್ಲ ; ಮನೆಯ ಆಪ್ತರದು. ಸಂಬಳಕ್ಕೆ ದುಡಿವವನು ರುಚಿಯಾಗಿ

ಮಾಡಿಹಾಕಲೇ ಬೇಕು. ಅವನನ್ನಿಟ್ಟುಕೊಂಡಿರುವುದೇತಕ್ಕೆ ಇಲ್ಲವಾದರೆ? ಆದರೂ ಅಂಥವರು ಹೊರಗಿನವರು: ಅವರದು ವೃತ್ತಿ. ನಮ್ಮ ಮರ್ಜಿ ಅನುಸರಿಸಿ ಬೇಯಿಸಿದರೆ ಅವರು ಒಪ್ಪೇ ಆದರೂ ಅಲ್ಲಿನ ಮೆಚ್ಚಿಕೆ ಬೇರೆ. ಮನೆಯವರು ಅಟ್ಟಾಗ ಅದರಲ್ಲಿ ಅಡಗಿರುವ ಪ್ರೀತಿ ಬೇರೆ. ಹದಗಳಲ್ಲಿ ವ್ಯತ್ಯಾಸ ಉಂಟು.

ಮನೆಯ ಆಪ್ತವರ್ಗವನ್ನೇ ನಾನಿಲ್ಲಿ ಎಣಿಸುತ್ತಿರುವುದು. ಅಜ್ಜಿ, ತಾಯಿ, ಹೆಂಡತಿ, ಅಕ್ಕ, ತಂಗಿ, ಮಗಳು ಇವರಿಗೆ ಸಂಬಂಧಿಸಿದ ಪ್ರಪಂಚ ಇದು. ಮಗಳು ಇನ್ನೂ ಕಿರಿಯಳು; ಅಕ್ಕ ತಂಗಿಯರು ನಾಲ್ಕು ದಿನ ಮನೆಗೆ ಬಂದು ಹೋಗುವವರು; ಅವರಿಗೆ ಗಾಸಿ ಕೊಡಬಾರದಾಗಿ ಅವರಿಂದ ನಿತ್ಯ ಅಡಿಗೆ ಮಾಡಿಸಬಾರದು; ಹೆಂಡತಿಯ ಕೈ ಅಡಿಗೆ, ರುಚಿಯೇ, ಹೇಗೆ ಮಾಡಿದರೂ. ಅಲ್ಲವೆಂದರೆ ಸುಮ್ಮನೆ ಬಿಟ್ಟಾಳೆ ? ಆದರೆ ಅತ್ತೆಯ ಎದುರು ಆಕೆಯ ಕೈ ಕೆಳಗೇ, ಕೆಲಕಾಲವಾದರೂ. ಉಳಿದವರು ಅಜ್ಜಿ ತಾಯಿ. ತಾಯಿ ಮಗಳ ಕೈಯಲ್ಲಿ ಅಡಿಗೆ ಮಾಡಿಸುವುದಿಲ್ಲವಾಗಿ ಅಜ್ಜಿಯದೇ ಪ್ರಾಧಾನ್ಯ,– ಅವಳ ಕೈ ನಡೆಯುವವರೆಗೂ. ಅವಳು ದುರ್ಬಲಳಾದರೆ ಆ ಸ್ಥಾನ ತಾಯಿಯದು. ಇದು ಸಂಪ್ರದಾಯ. ಹಾಗೆ ಸಂಪ್ರದಾಯಬದ್ಧವಾದ್ದು ನಮ್ಮ ಅಜ್ಜಿಯ ಹಿರಿಮೆ. ನಡೆದೇ ನಡೆದದ್ದು ನಮ್ಮ ಮನೆಯಲ್ಲಿ. ಆಕೆಯ ಮೈ ಕೈ ಗಟ್ಟಿಯಾಗಿರುವವರೆಗೂ ಅಥವಾ ಇದೆಯೆಂದು ಆಕೆ ತಿಳಿದಿರುವವರೆಗೂ ಆಕೆಯ ಅಡಿಗೆಗೆ ಚ್ಯುತಿಯಿಲ್ಲ. ಇನ್ನೊಬ್ಬರು ಬೇಯಿಸಿದ್ದು ಆಕೆಗೆ ರುಚಿಸುವುದೂ ಕಷ್ಟವೇ. ತಾನು ತಿನ್ನಬೇಕಾಗಿರುವ ಒಂದು ಹೊತ್ತಿನ ಊಟ ಆಕೆಯದೇ ಆಗಬೇಕೆಂಬುದು ಆಕೆಯ ಹಟವೂ ಆಗಿರುತ್ತದಾಗಿ ಅದು ಹಾಗೆಯೇ ಸರಿ. ಆಕೆ ತನಗೆ ಬೇಕಾದಂತೆ ಶುಚಿ, ರುಚಿ ಕಟ್ಟಿಕೊಳ್ಳುತ್ತಾಳೆ. ಆದ್ದರಿಂದ ಆಕೆ ಇರುವಾಗ ಅಡಿಗೆಯ ಮನೆಯಲ್ಲಿ ನನ್ನ ತಾಯಿಗೇ ಎರಡನೆಯ ಸ್ಥಾನ. ಪರಿಚಾರಿಕೆ ಮಾಡಬಹುದು. ಕುಟ್ಟಿ, ರುಬ್ಬಿ, ಕಾಯಿಪಲ್ಲೆ ಹೆಚ್ಚಿಕೊಟ್ಟು, ಪಾತ್ರೆ ಪರಟೆ ತೊಳೆದು ತಂದು ಸೇವೆ ಸಲ್ಲಿಸಬಹುದು. ಭಾಂಡವನ್ನು ಬೇಕಾದರೆ ಇಳಿಸಿಕೊಡಬಹುದು. ಅಷ್ಟೇ ಹೊರತು ವಿಧಿವಿಧಾನದ ಸಮಸ್ತ ಕ್ರಿಯೆಯೂ ಅಜ್ಜಿಯದೇ. ಅಜ್ಜಿ ತನ್ನ ಮಗಳನ್ನು ದುಡಿಸಳು : ಈ ಮಗಳು ತನ್ನ ಸೊಸೆಗೆ ಅವಕಾಶ ಕೊಡಳು. ತಾವಿಬ್ಬರೂ ಇರುವಾಗ ಸೊಸೆಯು ನೆಳಲು ಒಳಗೆ ಸುಳಿದರೂ ಅಡಿಗೆಗೆ ದೃಷ್ಟಿಯಾಗುತ್ತದೆ ಎಂಬುದು ಕೂಡ ಸಿದ್ಧಾಂತ. ದೊಡ್ಡವರು ಅನುಭವಸ್ಥರು ಇರುವಾಗ ಹೆಂಡತಿ ಏಕೆ ಕಷ್ಟಪಡಬೇಕು ಎಂಬ ದೃಷ್ಟಿ ಹೆಂಡತಿಯ ಪರವಾದ ಒಂದು ಚಿಂತನೆ. ಆದ್ದರಿಂದ ಅಜ್ಜಿ ಅಜ್ಜಿ ; ತಾಯಿ ತಾಯಿ. ಅವರದೇ ಅಡಿಗೆಮನೆಯ ಆಧಿಪತ್ಯ ಸಾಮಾನ್ಯವಾಗಿ.

ನಮ್ಮ ಅಜ್ಜಿಯಂತೂ ಅನನ್ಯ ಸಾಧಾರಣಳು. ಆಕೆಗೆ ಗಂಡು ಮಕ್ಕಳಿಲ್ಲದ್ದರಿಂದ ಮಗಳ ಹೊಟ್ಟೆಯಲ್ಲಿ ಹುಟ್ಟಿದ ನಮ್ಮಲ್ಲಿ ಆಕೆಗೆ ಪ್ರಾಣ. ಆಕೆ ನಮಗೆ ಮಾಡದ ಉಪಚಾರವಿಲ್ಲ ; ತಿನ್ನಿಸದ ಪಕ್ವಾನ್ನವಿಲ್ಲ. ತಾನು ಕಲಿತದ್ದೆಲ್ಲಾ ನಮಗೆ ಮೀಸಲು.

ನಮಗೆ ರುಚಿಯಾದರೆ ಸಾಕೆಂದು ತಾನು ಮೂಗು ಮುಚ್ಚಿಕೊಂಡು ಏಕಾದಶಿ ಪರ್ವಕಾಲಗಳಲ್ಲಿ ನಮಗೆ ಈರುಳ್ಳಿ ಹುಳಿ ಮಾಡಿ ಹಾಕುವುದುಂಟು. ಆ ಪ್ರೀತಿಗೆ, ಸ್ವಸುಖ ನಿರಭಿಲಾಷೆಗೆ ಏನು ಪಡಿ ಕೊಟ್ಟೇವು. ಒಂದು ದಿನವಿದ್ದ ಹಾಗೆ ಇನ್ನೊಂದು ದಿನದ ತೆರನಿಲ್ಲ ಆಕೆಯ ಅಡಿಗೆಯಲ್ಲಿ. ಇದು ಆಕೆ ಅಟ್ಟುದು ಎಂಬ ಮುದ್ರೆ ಇರುತ್ತದೆ ಯಾದರೂ ದಿನವೂ ಯಾವುದೋ ಹೊಸರುಚಿ, ರೀತಿ, ಬಣ್ಣ. ಎಂತಹ ರಹಸ್ಯವೊ, ಎಲ್ಲಿ ಕಲಿತರೊ ಈ ನೂರು ಬಗೆಯ ರುಚಿಕಟ್ಟನ್ನು? ನಿಮ್ಮ ಅಜ್ಜಿ ಇವಳ ತಾತನ ಹಾಗೆ ಮಾಡುತ್ತಾಳೆ ಎಂದೀರಿ ನೀವು. ನಿಮಗೇನು ಗೊತ್ತು. ನಿಮ್ಮ ಅಜ್ಜಿ ಅಡಿಗೆ ನೋಡಿಲ್ಲ ; ನಾವೂ ಒಪ್ಪಬೇಕಲ್ಲ. ಆದರೆ ಆ ಇಬ್ಬರಿಗೆ ನಾನು ಸ್ಪರ್ಧೆ ಹೂಡಲು ತಯಾರಿಲ್ಲ. ಸಮದೊಡನೆ ಜೊತೆ ಕಟ್ಟಬಹುದು. ಒಂದು ಪಾಯಿಂಟ್ ಕೊಡದೆ ೬೦೦ ಗೆಲವು ಪಡೆಯಬಲ್ಲ ಈಕೆಯ ಇದಿರಿಗೆ ಇನ್ನೊಬ್ಬರನ್ನು ಸರಿಗಟ್ಟಿಯೇನೆ? ಈ ಶಕ್ಯವೂ ಇಲ್ಲ. ನಿಮ್ಮ ಪುಣ್ಯದಿಂದ ನಿಮ್ಮಜ್ಜಿ ಬದುಕಿದ್ದರೂ ಅವರ ಮೇಲೆ ಇವಳನ್ನು ಛೂ ಬಿಟ್ಟು ನಿಮ್ಮವರಿಗಿಂತ ಒಂದು ಮೊಳ ಎತ್ತರದ ಯೋಗ್ಯತೆಯವರು ನಮ್ಮಜ್ಜಿ ಎಂದು ಸೂಚಿಸಲು ನನ್ನ ದುರದೃಷ್ಟದಿಂದ ಈಕೆ ಬದುಕಿಲ್ಲ. ಇಲ್ಲವಾದರೆ ತೋರಿಸುತ್ತಿದ್ದೆ.

ಸಾಮಾನ್ಯವಾಗಿ ಎಲ್ಲರ ಅಜ್ಜಿಯೂ ಒಳ್ಳೆಯ ಅಡಿಗೆಯವರೇ ಆಗಿರುತ್ತಾರೆ. ಆದ್ದರಿಂದ ಅವರವರ ಮನೆಗೆ ಅವರು ಅಡುವುದು, ಬಡಿಸುವುದು ಪಂಚಾಮೃತ ವಾಗುವುದರಿಂದ ಆ ಮನೆಯವರೆಲ್ಲರ ರುಚಿಯ ಪ್ರಕಾರವೂ ಬೆಲೆಗಳೂ ಅವರ ಅಡಿಗೆಯಿಂದಲೇ ರೂಢಿಸಿರುತ್ತವೆ. ಎಷ್ಟು ಸುಖಕ್ಕೆ ಅವರು ಕಾರಣರೋ, ಅಷ್ಟೇ ರುಚಿಗಳು ಹುಟ್ಟಿ ಅವುಗಳಿಂದ ಜಗಳ ಹುಟ್ಟಲು, ಹಟ ಬೆಳೆಯಲು ಅವರು ಕಾರಣರಾಗುತ್ತಾರೆ. ಸಾತ್ವಿಕರಾದ ಉಪಕಾರಿಗಳಾದವರಿಂದ ಈ ದುಷ್ಟ ಪರಿಣಾಮ ಉಂಟಾಗುವುದು ಚೋದ್ಯ – ತಮ್ಮದೇ ಪರಮ ರುಚಿಯಲ್ಲವೇ. ಅದಕ್ಕೆ ಇನ್ನೊಬ್ಬರದು ಸಮವಾಗುವುದು ಹೇಗೆ ಶಕ್ಯ? ಪ್ರಮಾಣ ಅದೇ. ಪ್ರಕಾರ ಅದೇ. ಎಲ್ಲಕ್ಕೂ ಸಾಧನ, ಸಿದ್ಧಿ ಎಲ್ಲ ಅಲ್ಲಿಯೇ ಆಗಿ-ಇಲ್ಲಿ ಯಾವ ಮಧ್ಯಸ್ಥಿಕೆ ಒಡಂಬಡಿಕೆಗಳೂ ಸಾಮಾನ್ಯವಾಗಿ ಆಗವು. ಅಜ್ಜಿಯವರು ಸೋಲುವುದೂ ಅಡಿಗೆ ಕೆಡಿಸುವುದೂ ಅಶಕ್ಯವಾದ್ದರಿಂದ ಈ ವಿವಾದ ಬಗೆಹರಿವ ಉಪಾಯವೂ ಇಲ್ಲ. ಅರ್ಥಶಾಸ್ತ್ರಗಳು ಹೇಳುವಂಥ Non-Competing Groups ಇವರದು. ಪರಸ್ಪರ ಸ್ಪರ್ಧಾರಹಿತವಾದ ಪ್ರಪಂಚ ಇದು.

ಒಮ್ಮೆ ಒಬ್ಬರ ಮನೆಯಲ್ಲಿ ನಾಲ್ಕೈದು ಮಂದಿ ಊಟಕ್ಕೆ ಕುಳಿತಿದ್ದೆವು. ಮಜ್ಜಿಗೆ ಪಳಿದ್ಯ ಮಾಡಿದ್ದರು. ಹದವಾಗಿ ಪಾಕ ಇಳಿದಿತ್ತು. ಚೆನ್ನಾಗಿತ್ತು ಎಂದರೆ ಚೆನ್ನಾಗಿತ್ತು. ಒಮ್ಮೆಗೇ ಒಬ್ಬರು ಇದು ಸೌತೆಕಾಯಿ ಹಾಕಿದ್ದು ನೋಡಿ. ಬೂದಿ ಗುಂಬಳದ್ದು ಮಾರ್ತಾಂಡರಾಯರ ಮನೆಯಲ್ಲಿ ಅಟ್ಟಿದ್ದರು. ಅಂಥದನ್ನು ನಾನು ಜನ್ಮೇಪಿ ತಿಂದಿಲ್ಲ ಎಂದು ಹೇಳಿ ವಿರಸವಾಡಿದರು. ಹೀಗೆ ನುಡಿಯುವುದಕ್ಕಿಂತ ನಾಲಿಗೆ ಕಿತ್ತುಕೊಂಡು ಸಾಯುವುದು ಮೇಲು. ಅಷ್ಟು ಕೆಡಕುತನ ಬರ್ಬರತೆ ಅದು. ಅಂಥವರನ್ನು

ಸಭ್ಯಪ್ರಪಂಚದಿಂದ ಗಡಿಪಾರು ಮಾಡಬೇಕು. ಇವರಿಗೆ ಯಾರು ಮರ್ಯಾದೆ ಕಲಿಸಿದರೊ! ಇವರು ಕಲಿಯಬೇಕಲ್ಲ.- ವಕ್ರ ಸುಳಿಜನ. ಮಾಡಿದವರಿಗೆ, ಜೊತೆಗೆ ಊಟ ಮಾಡುವ ಇತರರಿಗೆ, ತಕ್ಷಣದ ಸುಖಾನುಭವಕ್ಕೆ ಒಟ್ಟಿಗೆ ಕಶಾಪ್ರಹಾರ ಇಂಥ ಮಾತು. ಅಲ್ಲಿಗೂ ಅದು ಹೇಗಿತ್ತೊ. ಈ ಎರಡನ್ನೂ ಒಟ್ಟಿಗೆ ತಿಂದಿದ್ದರೆ ಈತನ ರುಚಿ ಎಂಥ ದನದ ರುಚಿ ಎಂದು ಕಾಣುತ್ತಿತ್ತೊ! ನೆನಪಿನಲ್ಲಿ ಸವಿಯಾದ ಪದಾರ್ಥ ಸದ್ಯದ ಸುಖಕ್ಕಿಂತ ಏಕೆ ವಾಸ್ತವವಾಗಿ ಮೇಲಾಗಬೇಕೊ ಅರಿಯೆ.... ಇವರ ನಡವಳಿಕೆ ನೋಡಿ : ಬೇರೆಯವರ ಮನೆಯಲ್ಲಿ ಆ ಆಸ್ವಾದನೆಯ ನಡುವೆ ಎಂದಿನದನ್ನೊ ಎತ್ತಿ ಹೇಳಿ ಹೀಗೆ ಅವಿವೇಕ ಮಾಡಬಾರದು ಎಂಬುದು ತಿಳಿಯಲಿಲ್ಲ ಆತನಿಗೆ. ಕೆಲವೇಳೆ ತಾವು ಸತ್ಯ ನುಡಿಯುತ್ತಿದ್ದೇವೆ ಎನ್ನುತ್ತ ಇಂಥ ರೂಕ್ಷತೆಯನ್ನು ಜನ ಬೆಳಸುತ್ತಾರೆ. ಇಂಥವರದೇ ಬಹು ಸಂಖ್ಯೆಯಾದ್ದರಿಂದ ಯಾರಿಗೆ ಹೇಳಿತೀರೀತು.

ಪ್ರಕೃತ ಮನುಸರಾಮಃ. ಸಣ್ಣ ಹುಡುಗರಾಗಿದ್ದಾಗ ಬೆಳಿಗ್ಗೆ ಏಳುವ ಹೊತ್ತಿಗೆ ಒಲೆಯ ಕೆಂಡದಲ್ಲಿ ಹಿಟ್ಟು ತಟ್ಟಿ, ಎರಡೂ ಕಡೆ ಎಲೆಮುಚ್ಚಿ ಕಡ್ಡಿ ಹೊಲಿದ ಕೆಂಡದ ರೊಟ್ಟಿ ನಮಗೆ ಕೊಡುತ್ತಿದ್ದರು ಒಂದೊಂದು ದಿನ ನಮ್ಮ ಅಜ್ಜಿ. ಅಡಿಗೆ ಮಾಡುತ್ತ ಮಾಡುತ್ತ ಪಳಿದ್ಯಕ್ಕೆ ಅರೆಯುವ ಯಾವುದೊ ಹಸಿ ಅಕ್ಕಿ, ಜೀರಿಗೆ, ತೆಂಗಿನಕಾಯಿ, ಕಡಲೆಯದೊ ಉದ್ದಿನದೊ ಬೇಳೆ, ಇನ್ನೂ ಏನೇನೊ ಸೇರಿಸಿ, ಚೆನ್ನಾಗಿ ಅರೆದ ಆ ಹಿಟ್ಟಲ್ಲಿ ಸ್ವಲ್ಪ ತೆಗೆದು, ಸೌಟಿಗೆ ತುಪ್ಪ ಸುರಿದು ಬಟ್ಟಲಂತೆ ತಟ್ಟಿ ಅದು ಬೇಯುತ್ತಿರುವಾಗ ಇನ್ನಷ್ಟು ತುಪ್ಪವೆರೆದು ಗರಿಗರಿ ಬೇಯಿಸಿ ಆ ಸೌಟಿನ ರೊಟ್ಟಿಯನ್ನೇ ತಿನ್ನಲು ಕೊಡುತ್ತಿದ್ದ ಆ ವಾತ್ಸಲ್ಯ ಅಮೃತಕಲ್ಪ.

ಬಹುದಿನ ಪಳಗಿದ, ಸುಖಸಂತೋಷ ಅನುಭೋಗಿಸಿದ್ದ ಅವರಿಗೆ ನೂರಾರು ಬಗೆಯ ಅಡಿಗೆ ಗೊತ್ತು ; ತಮ್ಮ ತಾಯಿ, ಅತ್ತೆ, ನೆರೆಯವರು ಕಲಿಸಿದ್ದು, ಹೇಳಿದ್ದು, ತಾನು ಕಂಡದ್ದು, ತಾನೇ ಪ್ರಯೋಗ ನಡಸಿದ್ದು-ಹೀಗೆ ಸಂಪ್ರದಾಯ ಪ್ರತಿ ದಿನದ ಸುಭೋಜ್ಯಕ್ಕೆ ಸೇರುತ್ತಿತ್ತು. ಇದೇನು ಒಂದು ವರ್ಷ, ಒಂದು ಶತಮಾನದ ಸಂಸ್ಕಾರವೆ? ಪದಾರ್ಥವಿಜ್ಞಾನದ ಒಂದು ಶಕಲವೆ, ಖಂಡವೆ? ಎಷ್ಟು ತಲೆ ತಲಾಂತರದ ರುಚಿಗಳ ಸಾಮರಸ್ಯ ಇಲ್ಲಿ ? ಇದಕ್ಕೂ ಈಕೆಯೇ, ಈಕೆಯ ಪಕ್ವವಾದ ವಾತ್ಸಲ್ಯಗಳೇ ಬೀಳುತ್ತಿದ್ದವಾಗಿ ಇದರ ಅಖಂಡತೆಗೆ ಯಾವುದು ಸಾರಲಕ್ಷಣ? ಇನ್ನಾವುದು ಸಾಟಿ? ಅಡಿಗೆಗೆ ಅಜ್ಜಿಯೇ ಬೀಳುತ್ತಿದ್ದಳಾಗಿ ಆಕೆ-ಅಜ್ಜಿ-ನನ್ನವಳಾದ್ದರಿಂದ ಆಕೆಯ ಅಡಿಗೆ ಪರಮಾನ್ನ. ಅವರ ಮನಸ್ಸಿನಲ್ಲಿ ಕೈಯಲ್ಲಿ ನೂರಾರು ವಿಧಾನಗಳ ರಹಸ್ಯ ಆಳಾಗಿ ದುಡಿಯುತ್ತಿತ್ತಾಗಿ ಒಂದೊಂದು ದಿನ ಮಾಡಿದ ಸಾರು, ಹುಳಿ, ಪಲ್ಯ ಚಟ್ನಿ ಒಂದೊಂದು ರೀತಿ. ಆಕೆ ಕುಚ್ಚಲು ಕಡುಬು ಮಾಡಬೇಕು. ಯಾವ ಚಟ್ನಲಿ ಮೀನು ಹಾಗೆ ಹೊಳೆದೀತು? ಬಳುಕೀತು ? ಹಾಗಲದ, ಬೇವಿನ ಹುವ್ವಿನ ಗೊಜ್ಜು ಮಾಡಿದರೆ ಹೀಗೆ ಒಡ ಒಡಕಲು ನೀರು ನೀರು ಆಗಿ ಅದರ ಮೇಲೆ ಅರೆ ಅಂಗುಲ ಎಣ್ಣೆ

ತೇಲುತ್ತಿತ್ತೆ ಎಂದರೆ ಈಗ ಪಕ್ಕದಲ್ಲಿರುವವರಿಗೆ ನಿಜವಾಗಿ ರುಚಿಸದಾಗುತ್ತದೆ. ಅಥವಾ ಇಂಥ ರಾವಣಾ ಗೊಜ್ಜಾಗುತ್ತಿರಲಿಲ್ಲ. 'ಹೌದು, ನಿಜ. ನಿಮ್ಮ ಅಜ್ಜಿ ಮಾಡಿದ ಗೊಜ್ಜಿಗೆ ಸಮನಾಗುವುದಿಲ್ಲ ಬಿಡಿ' ಎಂದು ತಮ್ಮ ಸಮ್ಮತಕ್ಕೆ ಮೊದಲೇ ವಿಮಾ ಕ್ರಿಯೆಮಾಡಿ ಅವರು ಪಾರಾದರೆ ಅದು ಪುಣ್ಯವೇ. ಒಂದು ಗಂಡಾಂತರದಿಂದ ಪಾರಾದಷ್ಟು ಸದ್ಯೋಮುಕ್ತಿ. ನನಗೂ ನೆನಸಿಕೊಂಡಾಗಲೆ ಹದ, ಸುವಾಸನೆ, ಆ ರುಚಿ ನಾಲಗೆಗೆ ಬರುತ್ತದೆ; ಒಂದು ಪುಳಕ ಹೊಸತಾಗಿ ಮೂಡಿ ಸುಖ ತರುತ್ತದೆ.

ಒಂದು ಸಲ ಮೈಸೂರಿನಲ್ಲಿ ಹಟಮಾಡಿ ಮದುವೆಯ ಮನೆಯಿಂದ ಅಡಿಗೆಯವರಾದ ದೊರೆಸ್ವಾಮಯ್ಯ ಹೊರಟುಹೋದರು. ಇನ್ನೊಂದು ದಿನ ತಡೆದಿದ್ದರೆ ಆಗುತ್ತಿತ್ತು. ಅವರಿಗೆ ಬೇರೆಲ್ಲಿಯೊ ಒಪ್ಪಂದ; ಯಾವುದೊ ಬೇರೆ ಪ್ರಸ್ಥ, ಪ್ರಯೋಜನ. ತಮ್ಮಂತಹ ಇನ್ನಿಬ್ಬರ ಸಹಾಯ ತೆಗೆದುಕೊಂಡು ನಮ್ಮ ಅಜ್ಜಿಯೇ ಅಟ್ಟರು. ತಿಂಗಳು ನಾಗವಲ್ಲಿಯ (ನಾಕಬಲಿ ಎನ್ನಿ) ದಿನ. ದೊರೆಸ್ವಾಮಿ ೪-೫ ದಿನಗಳಿಂದ ಮೃಷ್ಟಾನ್ನ ಭೋಜನ ಮಾಡಿಸಿ ಮನೆಯ ಯಜಮಾನರಿಗೆ ಕೀರ್ತಿ ತಂದಿದ್ದ. ಅರಮನೆ ಗುರುಮನೆಗಳಲ್ಲಿ ಪ್ರಶಸ್ತಿ ಪಡೆದಿದ್ದವನು ಆತ. ಆ ಕಾಲದಲ್ಲಿ – ನಾನು ಹೇಳುತ್ತಿರುವುದು ಈಗ್ಗೆ ಅರ್ಧ ಶತಮಾನದ ಹಿಂದಿನ ಮಾತು – ದಿನಕ್ಕೆ ತನ್ನೊಬ್ಬನಿಗೇ ೧೦-೧೫ ರೂಪಾಯಿ ತೆಗೆದುಕೊಳ್ಳುತ್ತಿದ್ದ. ನಮ್ಮ ಅಜ್ಜಿಯ ಧಾರ್ಷ್ಟ್ಯವನ್ನು ಕಂಡು ಯಜಮಾನರಿಗೆ, ಸಂದೇಹವೇನು, ಶಂಕೆಯೇ ಆಗಿತ್ತು. ಆದರೂ ಆಕೆ ವಯಸ್ಸಾದವಳು; ನಾವು ಗಂಡಿನ ಕಡೆಯವರು. ಅವರನ್ನು ತೆಗೆದುಹಾಕುವ ಹಾಗಿರಲಿಲ್ಲವಾಗಿ ಹೇಗೋ ಒಪ್ಪಿಕೊಂಡರು. ಮೈಸೂರಿನ ನಯದ ಮಾತು ಒಳ ಅಸಮಾಧಾನ ಅತೃಪ್ತಿಗಳನ್ನು ಕಾಣಿಸದಂತೆ. ಅವೊತ್ತಂತೂ ಹಾಗಾಗಿರಬೇಕು. ಆವೂರ ಸಾಮಾಜಿಕರಲ್ಲಿ ನಾಯಕ ವ್ಯಕ್ತಿಗಳ ವರ್ಗಕ್ಕೆ ಸೇರಿದವರು ಆತ : ಸಕಲಾರ್ಥದಲ್ಲಿ ರಸಿಕ. ವಾರಕ್ಕೆ ಎರಡು ಸಲ ಭೃಂಗಾಮಲಕವಿಟ್ಟು ಅಭ್ಯಂಜನಸ್ನಾನ ಮಾಡಿಕೊಳ್ಳುತ್ತಿದ್ದರು. ಜಟ್ಟಿಯೊಬ್ಬ ಎಣ್ಣೆ ಒತ್ತಿ ಸಂವಾಹನಕ್ರಿಯೆ ನಡಸಿ, ಇಬ್ಬರು ಎರಡು ಕಡೆಯಿಂದ ಸುಡುವ ನೀರನ್ನು ಎರೆಯಬೇಕಿತ್ತು. ಆ ಅಭ್ಯಂಜನ ಇತಿಹಾಸಕಾಲದ ಒಂದು ಪುಣ್ಯ. ಆ ರಂಗು ಆ ಸೇವೆ ಆ ಬಾದಾಮಿ ಕೇಸರಿ ಹಾಲುಗಳ ಉಪಚಾರ, ಉತ್ತರಕ್ಷಣದ ವಿಶ್ರಾಂತಿ, ಆ ಕಾಲಕ್ಕೇ ನಿಂತುಹೋದ ಸಂಸ್ಕಾರ. ಕ್ರಾಪ್ ತಲೆಗೆ ಷಾಂಪು ಕೂಡ ಬೇಡವೆನ್ನುತ್ತಾರೆ. ಹೊಸ ಹೋರಿ ಇದ್ದ ಹಾಗೆ ಇದ್ದರು. ಮಾತು ಒಂದು ಗುಟುರೇ. ಆ ದಿನದ ಅಡಿಗೆ ಆತನಿಗೆ ಎಷ್ಟು ರುಚಿಸಿತು ಎನ್ನುವುದಕ್ಕೆ ಒಂದು ಪ್ರಮಾಣ ಸಾಕು. ದೊನ್ನೆಯಲ್ಲಿ ಹಾಕಿದ ತಿಳಿಸಾರನ್ನು ಕುಡಿದವರೇ ತೀರ ಮೇಲಕ್ಕೆದ್ದರು. ಬ್ರಾಹ್ಮಣ ಪರಿಷೇಚನೆ ಮಾಡಿದ ಎಲೆಯಿಂದ ಹಾಗೆ ಏಳಬಾರದು–ಆದರೆ ಇದು ಅಸಾಧಾರಣ ಸಂದರ್ಭ! –ಬಡಿಸುವವರ ಮೇಲ್ವಿಚಾರಣೆ ನಡಸುತ್ತಿದ್ದ ನಮ್ಮ ಅಜ್ಜಿಯ ಬಳಿಗೆ ಹೋಗಿ ಮೂರು ಸಲ ಪ್ರದಕ್ಷಿಣೆಮಾಡಿ, ಊಟಕ್ಕೆ ಕುಳಿತಿದ್ದ ೧೦೦-೧೫೦ ಜನರಿದಿರಿಗೆ ಉದ್ದಂಡ ನಮಸ್ಕಾರ ಹಾಕಿದರು. ಆ ಸಾರಿಗೆ ಸಾಷ್ಟಾಂಗ ನಮಸ್ಕಾರ ಒಂದು ಅತಿಶಯ

ಕೃತಜ್ಞತೆಯೇನಲ್ಲ. ನಾನಿನ್ನೂ ಮುಂಜಿಯಾಗದ ಹುಡುಗ; ಆಕೆನನ್ನು ಕಂಡರೆ ಭಯಭರಿತಭಕ್ತಿ. ಅಂಥವರಿಂದ ನಮ್ಮಜ್ಜಿಗೆ ಹೀಗೆ ಮರ್ಯಾದೆ ನಡೆಯುತ್ತಿದ್ದುದನ್ನು ಕಂಡು ನಿಜವಾಗಿ ಹಿಗ್ಗಿದ ನೆನಪಿದೆ.

ಉಳಿದವರಿಗೆ ಮಾಡಿ ಹಾಕಲಿ, ತಾವೊಬ್ಬರೇ ಇರಲಿ, ಆಕೆ ಕದ್ದು ತಿನ್ನುವವರಲ್ಲ. ಮೊದಲ ಮಹಾಯುದ್ಧದ ಕಾಲ. ಬೇಸಗೆಯ ರಜ ಬಂದು ಬೆಂಗಳೂರಿಂದ ನಾನು ನಮ್ಮ ತಾಯಿಯ ತವರು ಹಳ್ಳಿಗೆ ಹೋದೆ. ಮನೆಗೆಲ್ಲ ಆಕೆ ಆಗ ಇದ್ದವರು ಒಬ್ಬರೇ. ಹದಿನೈದು ಮೈಲಿ ರೈಲಲ್ಲಿ ; ಏಳು ಮೈಲಿ, ಅಲ್ಲಾಡುವ ಕುಲುಕಿ ಮೈನೋಯಲು ಲಟಕಟಿಸುವ ಜಟಕಾದಲ್ಲಿ ; ಐದು ಮೈಲಿ ಕಾಲ್ನಡಿಗೆಯಲ್ಲಿ ದಕ್ಷಿಣ ಪಿನಾಕಿನಿ ದಾಟಿ ಊರು ಸೇರಿದ್ದೆ, ಸುಮಾರು ನಡುಹಗಲಿಗೆ. ಅಜ್ಜಿ ಇನ್ನೇನು ಊಟಕ್ಕೆ ಕುಳಿತುಕೊಳ್ಳುವವರಿದ್ದರು. ನಾನು ಬರುವೆನೆಂಬ ಸಂದು ಸೂಚನೆ ಇರಲಿಲ್ಲ, ಅಂದಿನ ಅಡಿಗೆಯ ಪರುಠವಣೆ ನೋಡುವಂತಿತ್ತು. ಒಗ್ಗರಣೆಹಾಕಿ ಹೊಸದಾಗಿ ಅರೆದಿದ್ದ ಹುಣಿಸೆಯ ತೊಕ್ಕು ; ನಿಂಬೆಯ ಎರಡು ಹೋಳು ಉಪ್ಪಿನಕಾಯಿ ; ಪಡವಲದ ಹಸಿ ಎಳೆ ; ಚಪ್ಪರದವರೆಯ ಪಲ್ಯ; ಹುರಿದ ಬೆಂಡೆಯ ಹುಳಿ; ಸಾರು; ಕರಿದು ದುಂಡಗೆ ಉಬ್ಬಿದ ೪-೬ ಅರಳ ಸಂಡಿಗೆ; ಬೂದಿಗುಂಬಳದ 'ಒರುಗು' ಬಾಳಕ; ಹುರಿದ ಉಪ್ಪು ಮೆಣಸಿನಕಾಯಿ, ಮೊಸರು, ಮಜ್ಜಿಗೆ. ಇನ್ನೇನು ಕಾಕುಲಿ ಹಾಕಲು ಅಂಗಳಕ್ಕೆ ಬರುವುದರಲ್ಲಿದ್ದರು. ನಾನು ಬೇಕೆಂದು ಇದನ್ನು ವರ್ಣಿಸುತ್ತಿಲ್ಲ; ನನ್ನ ಮುಕ್ತಿಯ ಬೆಲೆಕೊಟ್ಟು ನುಡಿಯುತ್ತಿದ್ದೇನೆ. ನೂರಕ್ಕೆ ನೂರು ಪೈಸೆ ನಿಜ ಮಾತು. ಆಣೆ ಇಟ್ಟುಕೊಂಡೇನೆಂದರೆ ಆಣೆಯ ಕಾಲ ಮುಗಿದಿದೆಯಾದ್ದರಿಂದ ಅದಕ್ಕೆ ಬೆಲೆ ಬಾರದಾದೀತೆಂದು ಪೈಸೆ ಲೆಕ್ಕಾಚಾರ ಮಾಡುತ್ತಿದ್ದೇನೆ. ತಮ್ಮೊಬ್ಬರಿಗೆ ಇಷ್ಟು ಅಡಿಗೆ ಮಾಡಿಕೊಂಡದ್ದು ನಮ್ಮನ್ನು ಅವರು ಬೆಳಸಿ ಕಾಪಾಡಿದ ಲಕ್ಷಣ. 'ಹೊತ್ತೂ ಹೋಗಬೇಡವೇನಪ್ಪ. ಹಾಲು ಬೆಂಡೆಯಕಾಯಿ ಯಾರೊ ತಂದುಕೊಟ್ಟರು ; ಪಡವಲ, ಚಪ್ಪರದವರೆ ಅಂಗಳದಲ್ಲಿ, ಹಿತ್ತಿಲಲ್ಲಿ ಬೆಳೆಯುತ್ತಿವೆ. ದಿನಾ ಅವರಿಗೆ ಇವರಿಗೆ ಬೇಕಾದಷ್ಟು ಕೊಡುವುದಾಗುತ್ತದೆ. ಕಾವೇರಿ ಮೂರು ಪಾವು ಹಾಲು ಕರೆಯುತ್ತದೆಯಾಗಿ ಹಾಲು ಮೊಸರಿಗೆ ಚ್ಯುತಿ ಇಲ್ಲ. ನನ್ನೊಬ್ಬಳಿಗೆ ಸಾಕು. ಹಪ್ಪಳ ಸಂಡಿಗೆ ಮನೆಯಲ್ಲಿವೆ. ಅವು ಏಕೆ ಪೋಲಾಗಬೇಕು. ಬಳಸದಿದ್ದರೆ ಸುಮ್ಮನೆ ಮುಗ್ಗಿ ಹೋಗುತ್ತವೆ. ಮಕ್ಕಳು ನೀವಾರಾದರೂ ಮನೆಯಲ್ಲಿದ್ದರೆ ಇನ್ನೇನಾದರೂ ಮಾಡಬಹುದಿತ್ತು; ಒಬ್ಬಳಿಗೆ ಇನ್ನೇನು ಬೇಕು? ಏಳು, ಕಾಲುತೊಳೆದು ಬಾ ; ಊಟ ಮಾಡುವೆಯಂತೆ' ಅಂದರು. ಇದು ಆಕೆಯ ಅಚ್ಚುಕಟ್ಟು.

ಅವರು ಓದಿದವರಲ್ಲ. ಸ್ನಾನ, ಉಡಿಗೆ, ತೊಡಿಗೆ, ಊಟ, ಬಂದವರಿಗೆ ಮಾಡುವ ಉಪಚಾರ ಲಾಗಾಯ್ತಿನಿಂದ ಮನೆಗೆ ಬಂದದ್ದು. ಮಕ್ಕಳಿಗೆ ಪ್ರೋತ್ಸಾಹನ; ಬಂದವರು ಹೊಟ್ಟೆ ತುಂಬ ತಿನ್ನಲಿ ಎಂಬ ಆಸೆ. ಒಂದಕ್ಕೆ ನಾಲ್ಕು ತಿನ್ನಲಿ, ತೇಗಲಿ ಎಂಬಂತೆ ಆಡುವ ಮಾತು–ಜೀವನದಲ್ಲಿ ಒಂದು ವಿಶಿಷ್ಟ ಲಕ್ಷಣ ಆ ಕಾಲದ್ದು.

ನಾಡಿಗೆ ಕ್ರಾಂತಿ ತಂದಿರುವ ಇಂಥ ಕಾಲ ಅಲ್ಲ ಅದು. ಹೊತ್ತಿಗೆ ಬಂದವರಿಗೆ ಮಾಡಿದ್ದ ಅಂಬಲಿ ಗಂಜಿ ಕೊಟ್ಟು ಜನವನ್ನು ತೃಪ್ತಿಪಡಿಸುವುದು ಈ ನಾಡಿನ ಮನೆಮನೆಯ ಚಾರಿತ್ರ. ಹಸಿದವರಿಗೆ ಹೊಟ್ಟೆ ತುಂಬುವಂತೆ, ರುಚಿಯಲ್ಲಿ ಪಳಗಿದವರಿಗೆ ಮೆಚ್ಚಿಕೆಯಾಗುವಂತೆ, ಪುಷ್ಟಿ ತರುವಂತೆ, ಅಜೀರ್ಣವಾಗದಂತೆ ನಾಲ್ಕು ಬೇರೆ ಬೇರೆ ಬಗೆಯ ಹಸಿ, ಬಿಸಿ, ಕರಿ, ಹುರಿ, ನಂಚು ಸೇರಿಕೊಂಡ ಅಡಿಗೆಮಾಡಿ ಬಡಿಸುವುದು ರೂಢಿ. ಇಲ್ಲಿ ದ್ವೈತಾದ್ವೈತಗಳ ಕಾಟ ಕಷಾಯಗಳಿಲ್ಲ. ಇದ್ದುದರಲ್ಲಿ ಸಮೃದ್ಧಿ. ಪದಾರ್ಥ ಎರಡಾಗಲಿ ನಾಲ್ಕಾಗಲಿ. ಮತ್ತೆಯೊ ಎಲ್ಲಕ್ಕೂ ಆ ಕಾಲದಲ್ಲಿ ತಿನ್ನುವ ಪದಾರ್ಥದ್ದೇ ಆಕೆಯಂಥವರ ರೀತಿ. ಹಸಿವಾಗಲೆಂದು ಒಂದು ತಿಂಡಿ ; ಪುಷ್ಟಿಯೆಂದು ಒಂದು. ರುಚಿಗೇ ಬೇರೊಂದು. ಜೀರ್ಣಕಾರಿಯೆಂದು ಮಗುದೊಂದು. ಆದುದರಿಂದಲೇ ಅವರಿಗೆ ಅಡಿಗೆ ಆಯುರ್ವೇದದ ಒಂದು ಜೀವಾಂಗ. ಹೀಗೆ ಬಡಿಸಿದ ಎಲೆಯ ಮುಂದೆ ಇಂದಿನ ಕಾರ್ಪಣ್ಯ ಬಡಕಲು; ಬಿಕ್ಕನಾಸಿ ; ಪರದೇಸಿ. ಅಂಥಲ್ಲಿಯೊ ಎಲ್ಲ ಅನೇಕಾಂತ. ರಸದ ವೈವಿಧ್ಯ –ನಡುವೆ ಪೀಠಸ್ಥವಾದ ಒಂದು ಪ್ರೀತಿಯ ಸತ್ವ, ಸಂಸಾರವನ್ನು ಸುಖದಲ್ಲಿ ಸಂತುಷ್ಟಿಯಲ್ಲಿ ನಡಸಿಕೊಂಡು ಹೋಗುವ ತಾಯಿಶಕ್ತಿಗಳ ಅನ್ನಪೂರ್ಣಾ ವಿಲಾಸದ ಲೋಕ ಅದು. ಪ್ರಪಂಚಕ್ಕೆ ವಿಸ್ತಾರವನ್ನೂ ಸಂಪನ್ನತೆಯನ್ನೂ ತೋರಿಸುವ ಸಂಗತಿ ಇದೇ ಹೊರತು ವೈರಾಗ್ಯವೆ? ಉಪವಾಸವೆ? ತೆ !

ಅವರ ಕಾಲ ತೀರಿ ಅವರ ಮಗಳು ನಮ್ಮ ತಾಯಿ ತನ್ನ ರೀತಿಯಲ್ಲಿ ಈ ರಸ ವಿಧಾನವನ್ನು ಬೆಳಸಿದ ಜೊತೆಗೆ ನಮ್ಮನ್ನೂ ಬೆಳಸಿದರು. ಆ ರಕ್ಷಣೆ ಪೋಷಣೆ, ಆ ಮಧುರಿಮೆ, ಪರಿಮಳ, ಮನೆಯ ಎಲ್ಲವನ್ನೂ ವಿಚಕ್ಷಣೆಯಿಂದ ನಡಸಬೇಕೆಂಬ ಪ್ರವೃತ್ತಿ ನಮ್ಮ ಅಜ್ಜಿಯಿಂದಲೇ ಬಂದುದು. ಏನಿಂದ್ರ ಜಾಲವೊ ನೋಡಿ. ಬೆಳಗ್ಗೆ ಬಾಯಿ ಏಕೊ ಆರೋಚಿಕವಾಯಿತೆನ್ನಿ. ಮನೆಯಲ್ಲಿ ಸೇವಿಗೆಯೊ ಮೆಣಸುಕೂಟೊ, ಮೇಲೋಗರವೊ, ಕಾಳುಹಾಕಿ ಬಸಿದ ಸಾರೊ ಮಾಡಿದ್ದರಾಗುತ್ತಿತ್ತು ಎನ್ನಿಸಿತೆನ್ನಿ ; ಮಧ್ಯಾಹ್ನ ಮನೆಗೆ ಊಟಕ್ಕೆ ಕುಳಿತರೆ ಯಾವ ದೂರಾಂತರ ಹೃದಯಸಂವಾದದ ಲಹರಿಯೊ (Telepathic Transference) ಅವುಗಳಲ್ಲಿ ಒಂದೊ ಎರಡೊ ಎಲೆಯಲ್ಲಿ ಕಾಣುತ್ತಿದ್ದವು. ಒಂದು ಜೀವದ ಆಸೆಗೆ ಇನ್ನೊಂದು ಭಾವ, ಇನ್ನೊಂದು ನೆರವೇರಿಕೆಯ ಕ್ರಿಯೆ ಕೂಡಿಬರುವಂತೆ ಇಂಗಿತದ ಸಾಧನೆ ಆಗುತ್ತಿದ್ದುದು ತಲೆತಲಾಂತರದಿಂದ ಬಂದುದೇ ಇರಬೇಕು. ಒಂದು ಮನೆಯ ಲಕ್ಷಣ ಹೀಗೆ ರಕ್ತದಲ್ಲಿ ಆಚರಣೆಯಲ್ಲಿ ನಡೆದುಕೊಂಡು ಬಂದೇ ಈ ದೇಶ, –ಯಾವ ದೇಶವೂ ಹಾಗೆಯೇ ಇರಬೇಕು, –ಸಂಸ್ಕಾರ ಸಂಪ್ರದಾಯಗಳನ್ನು ಉಳಿಸಿಕೊಂಡು ಬೆಳಸಿಕೊಂಡು ಬಂದಿರುವುದು. ಆಯಾ ಗಿಡದ ಹೂ ಹಣ್ಣು, ಆಯಾ ಜಾತಿಗೆ ಸಫಲತೆ ತರುವಂತೆ ವಿಶಿಷ್ಟತೆಯಲ್ಲಿ, ವಿಲಾಸದಲ್ಲಿ ಬೆಳೆಯುತ್ತವೆ. ತಾಯಿ ಮಗಳಲ್ಲಿ, ಮೊಮ್ಮಗಳಲ್ಲಿ ಈ ಹಾಲು ಹರಿದು ಬರುತ್ತದೆ. ಈ ಪ್ರವೃತ್ತಿಯಂಥಲ್ಲಿ ರೂಪಗೊಳ್ಳುವುದು ಪ್ರೀತಿಯೊಂದಕ್ಕೇ ಶಕ್ಯ. ಆದರೆ ನಮ್ಮ ತಾಯನ್ನು ಕುರಿತು ನಾನು ಬರೆಯುತ್ತಿರುವುದು, ಆಕೆಯ ಮಾತು ನಾಳೆಗಿರಲಿ.

ನನ್ನ ಅಜ್ಜಿ ಉಪಾಧ್ಯಾಯರ ಹೆಂಡತಿ. ಜಾತಿ ವೃತ್ತಿಗಳಲ್ಲಿ ಪುರೋಹಿತರ ವಂಶಕ್ಕೆ ಸೇರಿದವರು ನಾವು. ಎರಡು ರೂಪಾಯಿ ಸಂಬಳದಿಂದ ಐದು ರೂಪಾಯಿಯೊ ಆರೊ ಗಳಿಸುವವರೆಗೂ ಬಡತಿ ಹೊಂದಿ ನಮ್ಮ ಅಜ್ಜ ನಲವತ್ತು ವರ್ಷ ಕೆಲಸಮಾಡಿ ನಿವೃತ್ತರಾಗಿದ್ದವರು. ಕೇಳಿಕೆಗಳನ್ನು ಬರೆದು ಆಡಿಸುತ್ತಿದ್ದರಂತೆ. ಭಾಗವತದ ಯಾವುದೊ ತೋರ ಹಸ್ತಪ್ರತಿಯಲ್ಲಿ ಅವರ ಅಣಿಮುತ್ತಿನ ಸರದಂಥ ಬರವಣಿಗೆಯನ್ನು ನೋಡಿದ್ದ ನೆನಪು. ಅದೆಲ್ಲ ಮಾಯವಾಗಿಬಿಟ್ಟಿತು. ಯಾರದೊ ಪ್ರಯೋಜನಕ್ಕೆ ದುಡಿದಿದ್ದರಾದೀತು. ಆದರೆ ನಾನು ಅದನ್ನು ಹೇಗೆ ಬಯಸಬಹುದು. ಯಾರ ಕೈ ಸೇರಿತೊ ಏನಾಯಿತೊ! ಮೃದಂಗದಲ್ಲಿ ಅವರು ನಿಷ್ಣಾತರಂತೆ ಕೂಡ. ಈ ಗುರುಪತ್ನಿಯನ್ನು ಕಂಡರೆ ಆ ಗಡ್ಡೆಯವರಿಗೆಲ್ಲಾ ತುಂಬಾ ಪ್ರೀತಿ. ಅವರನ್ನು ೮-೧೦ ಮೈಲಿ ದೂರದ ಊರುಗಳಿಗೆ ಕುದುರೆಯ ಮೇಲೆ ಕೂಡಿಸಿಕೊಂಡು ಕೇಳಿಕೆಗಳಿಗೆ ಒಯ್ಯುತ್ತಿದ್ದರು. ಆಕೆಗೆ ಮೆಚ್ಚಿಕೆಯಾದರೆ ಗುರುದಕ್ಷಿಣೆ ಸಲ್ಲಿಸಿದಂತೆ ಆಡುವವರಿಗೆ. ಒಮ್ಮೆ ಇಮ್ಮೆ ನಾನು ಹುಣಸೂರಿಗೆ ಬಾಗಲೂರಿಗೆ ಹೋಗಿರಬೇಕು. ಆಕೆ ಇಟ್ಟ ಅನ್ನದಿಂದ, ಎರೆದ ಗಂಜಿಯಿಂದ, ಧಾತು ಈಶ್ವರದ ಬರಗಳಲ್ಲಿ ನಾವು ಬದುಕಿದೆವು ಎನ್ನುತ್ತಿದ್ದವರು ಬಹುಮಂದಿ ಇದ್ದರು. ಆದ್ದರಿಂದ ಆಕೆ ಎಲ್ಲಿಗೆ ಹೋಗಲಿ ಕಾಯಿ, ಪಲ್ಲೆಯ, ತೆನೆ, ಬಾಳೆ, ಕಬ್ಬು, ತೆಂಗು, ತುಪ್ಪ, ಬೆಲ್ಲ ಕೊಡುತ್ತಿದ್ದರು. ಉಪಾಧ್ಯಾಯರ ಪತ್ನಿಗೆ ಸಂತೆಯ ದಿನ ಪಸಿಗೆ ದೊರೆಯುತ್ತಿತ್ತು. ಹೊಸ ತೆನೆ ಪೂರ್ತ ಬಲಿತಕಾಲದಲ್ಲಿ ಅದನ್ನು ಸಮ ಬೆಲ್ಲ, ಕೊಬ್ಬರಿ ಹಾಕಿ ಬೆರಸಿ ತಿನ್ನುವುದು, ಮೊಸರನ್ನ ಆಂಬೊಡೆ ಸೇವೆ ಸಲ್ಲಿಸುವುದು ಈ ಅರುವತ್ತು ವರ್ಷದ ಹಣ್ಣು ನೆನಪು. ತನ್ನ ರೈತರು ತಾವು ಬೆಳೆದುದನ್ನು ತಂದುಕೊಡುವುದಂತೂ ಸರಿಯೇ. ಮನೆಯಲ್ಲಿ ಕುಂಬಳ, ಸೌತೆ, ಹೀರೆ, ಸೀಮೆಬದನೆ, ಪಡವಲ, ಚಪ್ಪರದವರೆ ಆಯಾ ಕಾಲಗಳಲ್ಲಿ ಸುಲಭವಾಗಿ ಚಪ್ಪರದ ಮೇಲೆಯೊ ಹರಡಿಯೊ ಬೆಳೆಯುತ್ತಿದ್ದವಲ್ಲವೆ. ಸೌತೆಯ ಕೋಸುಂಬರಿ, ಅದರ ತಿರುಳನ್ನೊ ಬೂದಿಗುಂಬಳದ ತಿರುಳನ್ನೊ ರುಬ್ಬಿ ಮಾಡಿದ ದೋಸೆಗೆ ಬೀಳುತ್ತಿದ್ದ ಹುದುಗು ಈ ನಾಲಗೆಗೆ ಇರಬಲ್ಲ ಅಲ್ಪ ಸ್ವಲ್ಪ ಮಿದುತೆಯನ್ನು ತಂದಿದೆ ಎನ್ನಿಸಿದೆ. ಹೀರೆ, ಸೀಮೆ ಬದನೆಗಳ ಹುಳಿತೊವ್ವೆ, ಹೀರೆಯ ಬೋಂಡ, ಚಪ್ಪರದವರೆಯ ಕೂಟುಗಳ ಪರಿಮಳ ಆರುದಶಕಗಳ ಗಾಳಿಯಲ್ಲಿ ತೇಲಿ, ಬಾಹ್ಯಾಕಾಶದಲ್ಲಿ, ಚಂದ್ರ ಮಂಡಲದಲ್ಲಿ ಮಂಗಳಗ್ರಹದಲ್ಲಿ ಈಚೆಗೆ ರಷ್ಯನ್ನರಿಗೆ ಅಮೇರಿಕದವರಿಗೆ ಕಂಡಿದೆಯಂತೆ. ನಾಳೆ ಅಲ್ಲಿಂದ ಬಾನುಲಿ ಅಲೆಯಲ್ಲಿಂದ ನಾನು ಎಚ್ಚರವಿದ್ದರೆ ಕಿವಿಗೆ ಬಿದ್ದೀತು ಕೂಡ. ಏನು ತರತೀಪು, ಏನು ಸಹಜ ಪ್ರೇಮಲತೆ ! ಬೆಳಗಾಗುವ ಮುಂಚೆ ನನ್ನನ್ನು ಕರೆದುಕೊಂಡು ಜ್ಯೋತಿಪುರ, ಸೋಮನಹಳ್ಳಿ ಹಂದರಹಳ್ಳಿಗಂತೂ ಸರಿಯೇ ಸರಿ-ಕಮ್ಮಸಂದ್ರಕ್ಕೆ ಜನ್ನಹಳ್ಳಿಗೆ ಹೊರಟಳನ್ನಿ. ದಯಮಾಡಿಸೋಣಾಯಿತು ಅಮ್ಮ, ಎಂದವರೇ ಮೂರು ನಾಲ್ಕು ರೈತಾಪಿ ಮಂದಿ ಅವರ ಹಿಂದೆ ತೆಂಗು, ಹಲಸಂದೆಕಾಯಿ ಹಲವಾದಿ ಹೊತ್ತುತರುತ್ತಿದ್ದರು. ಇವರ ಕೈಗೆ ೨-೩ ಸೊಲಿಗೆ ಹಚ್ಚನ್ನ ಹೆಪ್ಪುಕಟ್ಟಿದ ಹಸುವಿನ

ತುಪ್ಪದ ಕುಡಿಕೆ ಬರುತ್ತಿತ್ತು. ನಾನು ಅಲ್ಲಿಗೆ, ಹಿಂದಕ್ಕೆ ಬರುವಾಗ್ಗೆ ಮೊದಲು ಈ ಪರಿಯ ಸೊಬಗಾವ ಎಂಬ, ಶಾರದೆ ನಾಲಗೆಯೊಳಿರಬಾರದೆ ?, ಮೇಲುಕೋವೆ ಕೃಷ್ಣತುಲಸಿ, ಮೇಲುಕೋವೆ ರಾಮತುಲಸಿ ಎಂಬುದೊ, ಎಂತದಯೊ ದಾಸುಲಪ್ಪೆ ಎಂಬುದೊ, ಯಾವ್ಯಾವುದು-ನಮ್ಮ ಕಡೆ ತೆಲುಗಿನ ಭಾಗವತ ಮುಂತಾದವಕ್ಕೆ ಹೆಚ್ಚು ಬಳಕೆಯಿತ್ತಾದ್ದರಿಂದ ಅದಾವ ಭಾಷೆಯೊ ಎಂಬುದು ಕೂಡ ತಿಳಿಯದ ಕಾಲದಲ್ಲಿ ಅವು ಕಿವಿಗೆ ಅಮೃತವಾದ್ದು- ಹೇಳಿಕೊಡುತ್ತಿದ್ದರು. ನಡೆಯುತ್ತ ನಡೆಯುತ್ತ ಮುಂದಿನ ಗಿಡಮರ ನಮಗೆ ಹಿಂದಾಗುತ್ತಿದ್ದವು. ಚಂದ್ರ ಮಾತ್ರ ಹಿಂದೆ ಹಿಂದೆಯೇ ಬರುತ್ತಿದ್ದ - ನಮ್ಮಜ್ಜಿಯ ಹಾಡು ಕೇಳಬೇಕೆಂದೊ ಏನೊ. ಆಕೆಯ ಮಹಿಮೆ ಅಷ್ಟೆಂದು ತಿಳಿದದ್ದು ನನಗೆ ಹಾಗೆ.

ಒಂದು ಸಂಗತಿಯನ್ನು ಮಾತ್ರ ತಿಳಿಸಲೇಬೇಕು. ಅವರೆಯಕಾಯಿ ಕಾಲ ನಮಗೆ ಅತಿಶಯ. ಈ ಕಾಲದವರಿಗೆ ಅದರಷ್ಟು ನಿಕೃಷ್ಟ ಬೇರೆ ಯಾವುದೂ ಇಲ್ಲ. ಆಕೆಗೆ ಅತಿಶಯ ಆದ್ದರಿಂದ ನನಗೆ ಅತಿಶಯವೇ. ಈ ಅಧ್ವಾನ್ನ ಕಾಲದಲ್ಲಿ ಯಾವು ಯಾವುದೊ ಪರದೇಶಿ ಪಕ್ವಾನ್ನ ಬಾಯಿಗೆ ಬೆರಕೆ ಬೆರಸಿ ಹೊಲಸು ಮಾಡಿದೆ. ಶುಚಿಯಿಲ್ಲದವನ ಗಂಡೇಂ ತೊಂಡೇಂ-ಎಂಬಂತೆ ರುಚಿಶುದ್ಧಿ ಇಲ್ಲದವರದು ಒಂದು ನೇರವೆ ? ಗೊತ್ತೆ? ಗೈಮೆಯೆ ? ಇದರ ಖ್ಯಾತಿ ಕಟ್ಟಿಕೊಂಡು ನನಗೇನಾಗಬೇಕಾಗಿದೆ ಬಿಡಿ. ನಮ್ಮ 'ವ್ಹೋಲ್ಡ್' ರುಚಿಗಳಿಂದ ಇಂದು ನಮಗೆ ಅಪಖ್ಯಾತಿ ಬಂದಿದೆ. ಮುಖ್ಯ ರುಚಿಗಿಂತ ಹೆಚ್ಚಾಗಿ ಅಷ್ಟಾದರೂ ಎನ್ನಿ-ಇವರ ಜೀರ್ಣಶಕ್ತಿ ಮಂದವಾಗಿದೆಯಾಗಿ ಇದು ಬೇಕಿಲ್ಲ. ನನಗೆ ಗೊತ್ತು. ಹಿಡಿದು ಸೇರಿಸಿಕೊಂಡು ತಿನ್ನಲಾರದವರು ಹೇಗೆ ಸಂಸಾರ ಮಾಡಬಲ್ಲರೊ ಕಾಣೆ ಎನ್ನುತ್ತಿದ್ದರು ಅಜ್ಜಿ, ನಿಜ. ಆಕೆಗೆ ಅವರೆಯ ಕಾಲದಲ್ಲಿ ಅದೇ ಬೇಕು. ಒಂದೊಂದು ದಿನವೂ ಅದರಿಂದ ಒಂದೊಂದು ಬಗೆಯ ಅಡಿಗೆ, ಒಪ್ಪ, ಎಷ್ಟು ತರ ಹದ, ರುಚಿ! ತಟ್ಟಿತಬರು, ಕಾಳು, ಹಿದಕು, ಹುರಿ, ಬೇಸು, ಕಾರ, ಸಪ್ಪೆ, ಇವರಿಗೇನು ತಿಳಿದೀತು, ಎಂಟಕ್ಕೆ ಹತ್ತಕ್ಕೆ ತನ್ನ ಹೊಲದಿಂದ ಮಡಿಲು, ಮಕ್ಕರಿ, ಚೀಲ ಕಾಯಿ ಬರುತ್ತಿತ್ತು. ಆ ಕಾಲದ ಸಮೃದ್ಧಿ ಕೈ ತೆರೆದು ಕೊಡುತ್ತಿದ್ದ ಧೋರಣೆಯದು. ತಂದವರನ್ನು ಊಟಕ್ಕೆ ಉಳಿಸಿಕೊಂಡು ಅಂದಿನ ಅಡಿಗೆಯನ್ನು ಅವರಿಗೆ ಊಡಿ ಅವರನ್ನು ತಣಿಸುತ್ತಿದ್ದುದು ಮನೆಯ ವಾಡಿಕೆ. ಅಥವಾ ಅವರೇ ಯಾರೊ, ಅಮ್ಮ ಬಾಯಿ ಕೆಟ್ಟಿದೆ, ನಿಮ್ಮ ಕೈ ಬೋಜಣ ಮಾಡಿ ವರ್ಸ ಆರು ತಿಂಗಳಾಯಿತು, ಎಳೆ ಕುಂಬಳ ತಂದಿದ್ದೀನಿ. ಕುಡಿ ತಂದಿದ್ದೀನಿ. ಈ ಕಾಳು ಹಿದಿಕಿ ಅಡಿಗೆ ಮಾಡಿ ಬಡಿಸಿದಥೆ ಸಂತೋಸಾಗಿ ಓಗ್ತೀವಿ-ಎನ್ನುತ್ತಿದ್ದುದುಂಟು.

ನಾನು ಅದನ್ನೂ ಅಲ್ಲ ಈಗ ಹೇಳುತ್ತಿರುವುದು. ಬೆಳಗ್ಗೆ ಸೂರ್ಯ ಮೂಡುವ ಹೊತ್ತಿಗೆ ಆಕೆ ಯಾರ ಹೊಲಕ್ಕಾದರೂ ಹೋಗುವ ರಹದಾರಿ ಪಡೆದವರು. ಯಾವ ಅಡ್ಡಿಯೂ ಇರುತ್ತಿರಲಿಲ್ಲ. ಹೊಲ ಸುತ್ತಿ ಒಂದು ಸಾಲಿಗೆ ಒಂದು, ಎರಡು ಗಿಡದ ತೆನೆಯಲ್ಲಿ ಒಂದೊಂದೊ ಎರಡೆರಡೊ ಕಾಯಿ ಬಿಡಿಸಿಕೊಂಡು-ಅವರು ಎಂದಿಗೂ

ತೆನೆಕಾಯಿ ತರಚಿ ಗಿಡವನ್ನು ಬಡವು ಮಾಡಿದವರಲ್ಲ-ಆ ದಿನ, ತಮಗೆ ಏತಕ್ಕೆ ಎಷ್ಟು ಬೇಕೊ ಅಷ್ಟರಲ್ಲಿ ಸೊಗಡು ಸೊಗಡಾಗಿ, ಎಳಸಾಗಿ, ಹಣ್ಣಾಗಿ ಯಾವುದಿರುತ್ತಿತ್ತೊ ಅವುಗಳನ್ನು ಮಾತ್ರ ಆಯ್ದು ತರುತ್ತಿದ್ದರು. ಅದಕ್ಕೆ ಬೇಕಾದ ಎಲ್ಲ ಸಂಸ್ಕಾರ ವಿಧಾನ ನಡೆದ ಮೇಲೆ ಸಂಭಾರಗಳನ್ನೆಲ್ಲ ವರ್ಷಕ್ಕೊಮ್ಮೆ ಕೊಂಡಿಡುವುದು ಆ ಕಾಲದ ರೂಢಿಯಾದ್ದರಿಂದ ಉಳಿದೆಲ್ಲವೂ ಸುಮಾರು ಮನೆಯಲ್ಲಿರುತ್ತಿತ್ತು-ಬಸಿದ ಸಾರು, ಗೊಡ್ಡು ಹುಳಿ, ಬೇಳೆಯೊಡನೆ ಬೆಂದದ್ದು ; ತಾಳ್ದ, ಕೂಟು, ತೊವ್ವೆ, ಹಿದುಕಿದ್ದು, ಸಪ್ಪೆಯದು ಕಾರ ಇಕ್ಕಿ ಮಾಡುತ್ತಿದ್ದರು. ಸಿಕ್ಕಿ ಸಿಕ್ಕಿದ ಕಾಯಿಪಲ್ಲೆಯ ಕಾಳೊಡನೆ, ಕಾಯೊಡನೆ ಸೇರಿಸುತ್ತಿರಲಿಲ್ಲ, ಕೆಲವಕ್ಕೆ ನೆಲಗಡಲೆ ಸೇರದು ; ಕೆಲವಕ್ಕೆ ಬೇಕು ; ಕೆಲವು ದಿನ ಬದನೆ ಮಾತ್ರ ; ಚಪ್ಪರದವರೆಯ ಸಾಂಗತ್ಯ ನಿತ್ಯಸೂಕ್ತ. ಅವರೆಕಾಳು ಹಾಕಿ ಜೊತೆಗೆ ಆಲೂ, ಸೊಪ್ಪು ಬೇಯಿಸಿ ಅರೆಕಸಬಿ ಅಡಿಗೆ ಎಂದಿಗೂ ಇಲ್ಲ. ಯಾವುದಕ್ಕೂ ಒರೆದೊರೆ ಎಂಬುದಿಲ್ಲವೆ ; ಹೊಂದಬೇಡವೆ ; ಮಿತ್ರಗಣ ವೈರಿಗಣ ಇಲ್ಲವೆ ? ಅವುಗಳಲ್ಲಿ ಯಾವುದರ ವಿಧಾನವನ್ನಾಗಲಿ ಕಂಪನ್ನಾಗಲಿ ತುಟಿರುಚಿಯನ್ನಾಗಲಿ ಹೊಗಳಿ ಈಗ ಅದಿಲ್ಲದ ಫಾಸಿ ಶಿಕ್ಷೆಯನ್ನು ಅನುಭವಿಸುತ್ತಿರುವ ಭವಿ ನಾನು. ಕೆಲವಂತೂ ಹಸಿ ಕೊಬ್ಬರಿ ರುಬ್ಬಿ ಮಾತ್ರ ಬಳಸಬೇಕು. ಕೆಲವಕ್ಕೆ ಕೊಬ್ಬರಿ ಪಚ್ಚಡಿ. ತೆಂಗಿನದು ಕೆಲವಕ್ಕೆ. ಹುರಿದ ಒಣಕೊಬ್ಬರಿಯದು ಕೆಲವಕ್ಕೆ. ಜೀರಿಗೆ ಸಂಭಾರ ಇನ್ನು ಕೆಲವಕ್ಕೆ-ಹುಚ್ಚೆಳ್ಳು ಪುಡಿ ; ರೊಟ್ಟಿ, ದೋಸೆ, ತೊಟ್ಟಿಲು ಕಡುಬು, ಗುಗ್ಗರಿ, ಅಕ್ಕಿತರಿ ಉಪ್ಪಿಟ್ಟು. ಇಂದೆಲ್ಲಿ ತರಲಿ ? ಅದನ್ನು ಯಾರು ಹಾಗೆ ಮಾಡಿಕೊಡುವವರು ? ಒಂದೇ ಎರಡೇ ಹಿಂದೂಪುರದ್ದೊ, ಹೈದರಾಬಾದಿನದೊ ಹತ್ತು ದಿನದ ಒಣ ಗಡಂಗುಕಾಯಿ ತಿನ್ನಬೇಕಾದ ಈಗ ಆ ಹಚ್ಚ ಹೊಸ ಸೊಗಡು ಬಂದೀತು ಹೇಗೆ? ಆಮ್ಲೆಟ್, ಕಟ್ಲೆಟುಗಳ ಕೋಚುವಾಸನೆಗೆ ಮೂಗನ್ನು ತಿದ್ದಿದ ಗಂ ಎಂದು ಕಾಲದ ಆ ದೂರದಿಂದ, ಕರೆನಾಡಲ್ಲಿ ಕುಳಿತ ಇಲ್ಲಿಗೆ ಆಕೆ ಅಡುತ್ತಿದ್ದ ಆ ಜೀರಿಗೆ ಕೊತ್ತುಂಬರಿಗಳ ಹಸವಾಸನೆ ತೇಲಿ ತೇಲಿ ಹಾಯೆನಿಸಿ ಅತ್ತರಿನಂತೆ ಬರುತ್ತಿದೆ. ಈ ಹುಡುಗರ ಆಕಾಂಕ್ಷೆಯ ದಾರಿದ್ರ್ಯ, ಆ ಒಗ್ಗರಣೆಯ ವಿಶೇಷಕ್ಕೆ ಲಗ್ನವಾಗಬೇಕಿರುವ ಸಮಾಧಿಯನ್ನು ಕೆಡಿಸಿ ಮನಸ್ಸನ್ನು ವ್ಯಸ್ತಗೊಳಿಸುತ್ತಿದೆ. ನಮ್ಮ ದೇಶದ ಗತಿಯೇನು ನಾಳೆ ಎಂದು ಚಿಂತೆ ತರಿಸುತ್ತದೆ, ಏತಕ್ಕೆ ಬದುಕಬಲ್ಲರು ಇವರು ಎಂದು. ತಮ್ಮದೆಲ್ಲವನ್ನೂ ಬಿಟ್ಟರೆ ಇವರದೇನು ಉಳಿಯುತ್ತದೆ ಎಂದು.

ಅವರೆ ಎಂದಾಗ ಇನ್ನೊಂದು ನೆನಪಿಗೆ ಬಂದಿತು. ಕಾಳಿನ, ಕಾಯಿನ ಕಾಲವೆಲ್ಲ ಮುಗಿದು ಗಿಡಗಳನ್ನು ಇನ್ನೇನು ಕುಯ್ಯಬೇಕೆನ್ನುವಾಗ ತಳಲುಕಾಯಿ, ತಳಲುಕಾಳು ಸಿಕ್ಕುತ್ತದೆ. ದನದ ಮೇವಿಗೆ, ತಿಪ್ಪೆಗೆ-ಗಿಡ, ಹಣ್ಣೆಲೆ ; ಕಾಳು-ಹುರಿದು ಕಾರವಿಡುವುದು. ಊರಬೇಕಾದ್ದು. ಅದರ ಜೊತೆ ನೆಲಗಡಲೆ, ಕುಸುಬೆ (ಸಾರು), ಒಣಕೊಬ್ಬರಿ ಸೇರಿತೆಂದರೆ ಆ ಗರಗು ಇನ್ನು ಯಾತಕ್ಕೆ ಬಂದೀತು. ಆಕೆ ಮಾಡುತ್ತಿದ್ದ ಹುರಿಗಾಳುಗಳ ವಿವಿಧತೆ ಲೆಕ್ಕವನ್ನು ಮೀರಿದ್ದು. ಸೀಮಂತದ ಹುರಿಗಾಳು ಒಂದನ್ನು ತಿಂದು ಒಬ್ಬ

ವಜೀರರೆಂದರು, ತನಗೇ ಸೀಮಂತ ಮಾಡುತ್ತಿದ್ದಾರೇನೊ ಎನ್ನಿಸಿದೆ ಇದನ್ನು ತಿಂದು ಎಂದು. ಇವರಲ್ಲಿ ಸ್ಮಾರ್ತ, ಮಾಧ್ವ, ಶ್ರೀವೈಷ್ಣವ ಸಂಪ್ರದಾಯಗಳು ಬೇರೆ ; ಅಲ್ಲಿ ಶಾಖೆ ಉಪಶಾಖೆಗಳೂ ಇವೆ. ದಕ್ಷಿಣಕ್ಕೆ ಹತ್ತಿರದ ಕೊಳ್ಳೆಗಾಲ ಯಳಂದೂರು ಕಡೆಯವಿವೆ ; ತೆಲುಗರಾದ ಹತ್ತಿರದ ಗೌರಿಬಿದನೂರು ಶ್ರೀನಿವಾಸಪುರದವಿವೆ ; ಇತ್ತ ಸಿರಸಿ ಸಿದ್ಧಾಪುರ ಕಾರ್ಕಳದವಿವೆ; ಉಡುಪಿಯದಿದೆ ; ಗದಗ್, ಬಿಜಾಪುರ, ಹೊಸಪೇಟೆ, ಮರೆತೆ, ಹರಪನಹಳ್ಳಿ, ಕೊಪ್ಪಳದವು-ನಾನಾ ಖಾದ್ಯ ವಿಜೃಂಭಣೆಗಳು ನಯನಾಜೂಕುಗಳು ಇವೆ. ಒಂದೇ ಸರಿ, ಸಾಕು ಎಂಬುದು ಪ್ರಪಂಚಕ್ಕೆ ಸಲ್ಲದ ದಾರಿದ್ರ್ಯ ; ಎರಡಲ್ಲ ಎಂಬ ಅದ್ವೈತ ಅಡುಗೆಗೆ, ಅಜ್ಜಿಯರಿಗೆ ಅಪಚಾರ ಎನ್ನಿಸುತ್ತದೆ ನನಗೆ. ನಿಮ್ಮ ಅಭಿಪ್ರಾಯ ಬೇರೆ ಇದ್ದದ್ದಾದರೆ ನಿಮ್ಮ ಸ್ವರ್ಗ, ನರಕ ನಿಮಗೆ ; ಅಂಥಲ್ಲಿಗೆ ನಾವು ಪ್ರವೇಶ ಬೇಡುವವರಲ್ಲ. ನಾವು ಎಂದಿಗೂ ಇಲ್ಲಿಯವರು.

ಹಿಂದಿನ ಅಚ್ಚುಕಟ್ಟು ಸಡಿಲವಾಗುತ್ತಿರುವ ಈ ಕಾಲದಲ್ಲಿ ಇದನ್ನು ಸ್ವಲ್ಪವಾದರೂ ನೆನಸಿಕೊಂಡಲ್ಲದೆ ಮಾತೃಋಣ ತೀರದೆಂದು ಕರ್ತವ್ಯ ಬುದ್ಧಿಯಿಂದ ಇದನ್ನು ಹೇಳುತ್ತಿದ್ದೇನೆ; ಎಂಥದಕ್ಕೆ ನಾವು ವಿಮುಖರಾಗುತ್ತಿದ್ದೇವೆ ಎಂಬುದನ್ನು ತಿಳಿಸಲು, ಆ ಕೋಡುಬಳೆ, ಚಕ್ಕುಲಿ, ಮುಚ್ಚೋರೆ, ತೇಂಗೊಳಲು, ಆಂಬೊಡೆ, ಕರಿಗಡಬು ಸವಿಯದೆ ಅಹಮಿಂದ್ರತ್ವವೇ ಸಿದ್ಧಿಸದೆಂದಾಗ ಚರಮ ದೇಹಕ್ಕೆ ಆಗಲಿ, ಸಿದ್ಧಿಗೆ ಆಗಲಿ ಇನ್ನೂ ಒಂದು ಜನ್ಮ ಸವೆಯಬೇಕಿದೆ ಎಂದೇ ಅರ್ಥವಾಗದೆ ? ಕರ್ಮಪರಿಪಾಕ ಮುಗಿಯದೆ ಭವಾವಳಿ ಹೇಗೆ ತೀರಬೇಕು ? ಹುರಿದು ಬೆಂದು ಪಕ್ವವಾದರೆ ತಾನೆ ಅಪುನರ್ಭವಕ್ಕೆ ಪ್ರಾರ್ಥನೆ ?

ಸಿಹಿತಿಂಡಿಗಳು ನಮ್ಮಲ್ಲಿ ಕಡಮೆ. ಪಾಯಸ, ಕಡುಬು, ಹೂರಣ, ಒತ್ತು ಸೇವಗೆ, ಉಂಡೆಗಳು ನಮ್ಮವು. ಲಾಡು, ಕೇಸರಿಭಾತು, ಜಿಲೇಬಿ, ನಮ್ಮವಲ್ಲ ; ಮಂಡಿಗೆ ಗೂಳೂರಿಗೆ ಹೇಗೊ ! ಒಬ್ಬಟ್ಟು–ಒಬ್ಬಿಟ್ಟು–ನಮ್ಮವೇ : ಹೋಳಿಗೆ? ...ಸಜ್ಜಪ್ಪ, ತಂಬಿಟ್ಟು ಮಾಡಿ ಬಾಳೆಹಣ್ಣು ಹಾಕಿಯೊ ಹಾಕದೆಯೊ ಅಪ್ಪಟ ಹಸುವಿನ ತುಪ್ಪದಲ್ಲಿ ಕರಿದ ಅತಿರಸ, ನೂರು ಬಗೆಯ ದೋಸೆ ನಮ್ಮವು. ಉತ್ತರದ ಸಿಹಿಗಳು ಅವರ ವಿಶೇಷ. ಆ ಬಾದಾಮಿ, ಕೇಸರಿ, ಯಾಲಕ್ಕಿ, ಪಿಸ್ತ, ಆ ಮಲಾಯಿ, ಖೋವ, ಆ ರಸಗುಲ್ಲ, ಸಂದೇಶ್, ಘೀವರ್ ಭಾರತದ ಇತರ ಪ್ರಾಂತಗಳ ಭಾಗ್ಯಗಳು, ಭೋಜ್ಯಗಳು. ಅವರ ಸಂತೋಷ ಅವರಿಗೆ; ನಮ್ಮವು ನಮಗೆ. ನಮ್ಮ ಹೆಸರುಂಡೆ, ಪುಳ್ಳಂಗಾಯಿ ಉಂಡೆ ಅವರೆಲ್ಲಿ ತಂದಾರು ? ಒಮ್ಮೆ ಫಿರಂಗಿ ಗುಂಡುಗಳಿಗೆ ಬದಲು ಪ್ರಸ್ತದ ಮನೆಯ ಪುಳ್ಳಂಗಾಯಿಗಳನ್ನು ಎಸೆದು ಬ್ರಿಟಿಷರನ್ನು ನಮ್ಮ ದೇಶದಿಂದ ಹೆಚ್ಚು ಬೇಗ, ಹೆಚ್ಚು ಸವಿಯಾಗಿ ಸುಲಭವಾಗಿ ಓಡಿಸಿಬಿಡಬಹುದು ಎಂದು ನಾವು ವಿಧಾನಕ್ರಿಯೆಯನ್ನು ರಚಿಸಿಕೊಂಡದ್ದುಂಟು. ಗಾಂಧಿ ಎಲ್ಲವನ್ನೂ ಕೆಡಸಿಬಿಟ್ಟರು. ಅವಿಯಲ್, ಉದ್ದಿನ ಕೊಳಕಟ್ಟೆ, ಧಪ್ಪಳ ನಮ್ಮವಲ್ಲ. ತುಣಿತೇಂಗೊಳಲು ಕಂಚಿಯದೊ

ಮಧುರೆಯದೊ ಕರ್ನಾಟಕಕ್ಕೆ ಬಂದಿರಬೇಕು. ನಮ್ಮ ಸಮೆ ನಮ್ಮದು. ನಮ್ಮನ್ನು ಬೆಳಸಿತು. ನಮ್ಮಲ್ಲಿ ಇಳಿಯಿತು. ನಮ್ಮ ಅಜ್ಜಿಯ ಕೈಗೆ ಹದ ತಂದಿತು. ಆಕೆ ಮಾಡಿದ ಪ್ರತಿಯೊಂದಕ್ಕೂ ಸಿದ್ಧಿ ಪರಮಪಕ್ವತೆ ತಂದುಕೊಟ್ಟಂತಾಗಿ ಆ ಮೂಲಕ ನಮಗೆ ಚರಮಸೌಖ್ಯವನ್ನು ದಯಮಾಡಿತೆಂದು ನೆನೆದು ನನ್ನ ಮನಸ್ಸು ತೃಪ್ತವಾಗಿದೆ. ಬಡಿಸುವಾಗಲೂ ಅದೇ ವಿಚಕ್ಷಣೆ ! ಯಾವುದಕ್ಕೆ ಹಾಲು ಎರೆಯಬೇಕೊ, ಯಾವುದಕ್ಕೆ ಹೆತ್ತುಪ್ಪ, ಯಾವುದಕ್ಕೆ ಕಾಯಿಸಿದ ತುಪ್ಪ ಹಾಕಬೇಕೊ ಹಾಗೆಯೇ ಹಾಕಿಯಾಳು; ಯಾವುದಕ್ಕೆ ಬೆಣ್ಣೆಯೊ ಯಾವುದಕ್ಕೆ ಎಣ್ಣೆಯೊ ಅದನ್ನೇ ಬಡಿಸಿಯಾಳು ; ಇದು ಸೂತ್ರನಿಷ್ಠೆ. ಅದರದರ ಇಯತ್ತೆಯಲ್ಲಿ ಅದಕ್ಕೆ ಮುಕ್ತಿ ಸಿದ್ಧಿಸಬೇಕೆಂದಿರುವಾಗ ಬೆರಕೆ, ಬೇರೆ ಅಲ್ಲಿಗೆ ನೆಳಲು ಹಾಯಿಸಬಾರದು ಎಂಬುದು ಆಕೆಯ ಜೀವನದ ಒಂದು ವಿಶೇಷ ಸಾಧನ. Confusion of kinds ದೋಷ ಸಲ್ಲ ಎಂದಲ್ಲವೆ ಅರಿಸ್ಟೋಟಲ್ ಕೂಡ ಹೇಳಿದ್ದುದು.

ಕಾಳುಗಳದು ಬೇರೆ. ಬೇಳೆಗಳದು ಬೇರೆ. ಅಕ್ಕಿ ಪುರಿಯದು, ಬರುಗಲದು ಬೇರೆ; ಅವಲಕ್ಕಿಯದು ಬೇರೆ. ಕುಂಬಳ ಬಿತ್ತಿದೆ. ಎಳ್ಳು ಹುಚ್ಚೆಳ್ಳು ಬೆರಸದೆ, ಒಂದು ಸಲ ಹುರಿದಂತಲ್ಲ ಇನ್ನೊಂದು ಸಲ; ಉಂಡ ಬಾಯ ಒಗ್ಗರಣೆ ಎಂದರೆ ಅದು ನೆನೆದ ಕಾಳು, ಬೇಳೆ ನೆರಳಲ್ಲಿ ಹರವಿ ಒಣಗಿಸಿ ಬಾಣಲೆಯಲ್ಲಿ ಅವನ್ನು ಹುರಿಯುತ್ತಾ ಹುರಿಯುತ್ತಾ ಕೈಗೆ ಕಾವು ತಾಕದಿರಲೆಂದು ಮುಂಗೈಗೆ ಬಟ್ಟೆ ಸುತ್ತಿಕೊಳ್ಳುತ್ತ, ಆಗಾಗ ಕಾಳನ್ನು ಈಚೆಗೆ ಎತ್ತಿ ಹಾಕಿ ನೆಲಕ್ಕೆ ಜಜ್ಜಿ ಹದವಾಗಿ ಹುರಿದಂತೆಯೊ ಇಲ್ಲವೆ ಮರು ಪರೀಕ್ಷೆ ಮಾಡುತ್ತ, ಎದುರಿಗೆ ಹೋದರೆ ಪರೀಕ್ಷೆಗೆಂದು ನನಗೆ, ತಂಗಿಗೆ ಕೊಡುತ್ತ, ಆಗಿದೆಯೆ ಎಂದು ಕೇಳುತ್ತ, ಎಷ್ಟು ಪರೀಕ್ಷೆ, ಎಷ್ಟು ಬಗೆಯ ತೇರ್ಗಡೆ ಆ ಕೃತಿಗೆ! ಅವಕ್ಕೆ ಕಾರವಿಡುವ ಹದ! ನನಗೆ ಹಿಂಗು ಸುತರಾಂ ಸೇರದೆಂಬುದು ಗೊತ್ತಿದ್ದು, ಆ ಪದಾರ್ಥಕ್ಕೆ ಅದರ 'ವಾಸನೆ' ಕಟ್ಟದೆ ಅದರ ಜನ್ಮ ಸಾರ್ಥಕವಾಗದು, ಅದಕ್ಕೆ ಸಲ್ಲುವ ಮರ್ಯಾದೆಗೆ ಊನ ಎಂದುಕೊಂಡವರೇ ನಿಂಬೆ, ಕೊತ್ತಂಬರಿ ಸೊಪ್ಪುಗಳ ಜೊತೆಗೆ ಅದನ್ನು ರವೆಯಷ್ಟು ಸೇರಿಸಿ ಹಾಕಿಯೇ ಬಿಡುತ್ತಿದ್ದ ಅವರ ವಸ್ತುನಿಷ್ಠೆ ಗುಣನಿಷ್ಠೆ ಸರ್ವಥಾ ಆರಾಧ್ಯವೇ. ಕೆಲವಕ್ಕೆ ಉಪ್ಪು ಮಾತ್ರ. ಕೆಲವಕ್ಕೆ ಕಾಳು ಮೆಣಸಿನ, ಮೆಣಸಿನಕಾಯಿಯ ಪುಡಿ ; ಇನ್ನು ಕೆಲವಕ್ಕೆ ಹಣ್ಣು, ಹಸಿರು ಮೆಣಸಿನಕಾಯಿ ಅರೆದು ಮಾಡಿದುದು. ಕೆಲವಕ್ಕೆ ಅರಸಿನ ಹಾಕಿ ; ಕೆಲವಕ್ಕೆ ಉಹುಂ ಕೂಡದು ಎನ್ನುತ್ತಿದ್ದರು. ನಮಗೇನು ಗೊತ್ತು– ಏಕೆ ಎಂದು? ಅವರು ಹಾಕದಿದ್ದುದು ನಮಗೇನಿಲ್ಲ; ಬೇಡ, ಅಷ್ಟೇ. ರುಚಿಯಾದರಾಯಿತು. ಅಲ್ಲವೆ ?

ಇದು ಕನ್ನಡನಾಡಿಗೆ ಒಂದು ಸಂಪ್ರದಾಯ ; ಅದರಲ್ಲಿ ಒಂದು ಕಡೆಯದು, ಮನೆಯದು, ಕೈಮಾಡಿದ್ದು, ಬೇರೆ ಇನ್ನೆಷ್ಟೊ. ಎಲ್ಲಿ ಮನೆಯಲ್ಲಿ ಅಜ್ಜಿಗಳಿದ್ದಾರೊ ಅಷ್ಟು ಬಗೆಯ ವ್ಯಕ್ತಿ ಗುಣ ಈ ರುಚಿ, ಸಂಭಾರ, ಹದಗಳಲ್ಲಿದ್ದುಕೊಂಡು ನುಡಿವ ಸಂಪನ್ನತೆ ಜೀವವನ್ನು ಉಳಿಸಿವೆ.

ಎಷ್ಟು ಹೇಳಿದರೂ ಇನ್ನಷ್ಟೇ ಉಳಿದುಬಿಡುವುದರಿಂದ ಪಾರವೆಲ್ಲಿ : ಇದನ್ನು ಮುಗಿಸುತ್ತೇನೆ. ಆಕೆಯ ಇತಿಹಾಸ ನಮ್ಮ ಮನೆಯ ಪುರಾಣದ ಒಂದು ಸಂತೋಷಾಂಶ. ಆಕೆಯನ್ನು ನೆನೆದಾಗಲೆಲ್ಲ ಆ ೫-೫.೫ ಅಡಿ ಎತ್ತರದ 'ಸಮವಿಭಕ್ತಾಂಗ' ಕಣ್ಣೆದಿರಿಗೆ ನಿಲ್ಲುತ್ತದೆ. ಸುತರಾಂ ಕಪ್ಪಲ್ಲದ, ತುಂಬಾ ಕೆಂಪೂ ತುಂಬಾ ಬಿಳುಪೂ ಅಲ್ಲದ, ಒಂದು ಬಗೆಯ ಹೊಳೆವ, ಬಲಿತ ಜಂತದ ಮೈಗಾಂತಿ ಅವರದು. ಸುಕ್ಕದ ಮೈ. ಒಪ್ಪವಾಗಿ ನಿರಿಹಿಡಿದು ಉಡುವ ಒಂಬತ್ತು ಗಜದ ಉಡೆ ; ತಾನೇ ಆರಿಸಿ ತರಬೇಕೇ ಹೊರತು ಇನ್ನೊಬ್ಬರು ತಂದುಕೊಟ್ಟುದನ್ನು ಅವರು ಎಂದಿಗೂ ಉಡರು ; ಸ್ನಾನಮಾಡಿ ಮಡಿಯನ್ನುಟ್ಟು ಬೆರಳಿಗೆ ತೆಳ್ಳಗೆ ವಿಭೂತಿ ಸವರಿ ಹದಮಾಡಿಕೊಂಡು ಹಣೆಗೆ ಹಚ್ಚಿ ಕೊಂಡು ಆಕೆ ನಡೆದಾಡಿದಾಗ ಬೀಗಲ್ಲದ, ಸಡಿಲವಲ್ಲದ, ಸೆಡೆತವಲ್ಲದ, ಅತಿ ಧಾರಾಳವಲ್ಲದ, ಅಗ್ಗವಲ್ಲದ, ಶ್ರೀಮಂತವಲ್ಲದ ಆ ನಡೆ ನೋಡಲು ಎರಡು ಕಣ್ಣು ಸಾಲದು. ನಮ್ಮ ತಾತನಿಗೆ ಆಕೆ ಎರಡನೆಯ ಹೆಂಡತಿಯಂತೆ. ಆದ್ದರಿಂದ ಆಕೆಗೆ ತುಂಬಾ ಗೌರವ, ಪ್ರೀತಿ. ಇರುವವರೆಗೂ ಇನ್ನೊಬ್ಬರಿಗೆ ಅಧೀನವಾಗಬಾರದು ಕಾಟವಾಗಬಾರದು, ಯಾರ ಹಂಗಿಗೂ ಸಿಕ್ಕಿಕೊಳ್ಳಬಾರದು ಎಂದು ಮನಸ್ಸನ್ನೂ ಮೈ ಆರೋಗ್ಯವನ್ನೂ ಕಾಪಾಡಿಕೊಂಡು ಬಂದವರು ಆಕೆ. ಆ ಸ್ನಾನ, ಕುಂಭ ಶಾಖಗಳು, ಅಳಲೆ, ಅತಿಮಧುರ, ಕಚೋರದ ಪಟ್ಟು, ಪಥ್ಯಗಳು, ಗರಗದ ಸೊಪ್ಪು, ಒಂದೆಲಗ, ಹೇರಳೆಯ ಸಪ್ಪೆ ಚಿಕಿತ್ಸೆ, ಎಷ್ಟು ಎಚ್ಚರ, ಏರ್ಪಾಡು ಆರೋಗ್ಯಕ್ಕೆ ! ಅನುಪಾನಗಳು-ಆಯಾ ಅನಾರೋಗ್ಯಕ್ಕೆ ಏನು ಕಾರಣ, ಏನು ಚಿಕಿತ್ಸೆ, ಏನು ಪಥ್ಯ, ಸಾರು ಗಂಜಿ ಅಡಿಗೆ, ಎಷ್ಟು ಕಾರ, ಹುಳಿ ಎಂಬುದು ಆಕೆಗೆ ತಿಳಿದಿದ್ದಷ್ಟು ಯಾವ ಆಯುರ್ವೇದ ವಿದ್ವಾಂಸನಿಗಾದರೂ ತಿಳಿದಿದೆಯೊ ಇಲ್ಲವೊ ನಾನರಿಯೆ. ಆಕೆ ಕಟ್ಟುಪವಾಸ, ಜಾಗರಣೆಗಳಲ್ಲಿ ಎಂದೂ ಮೈ ಒಣಗಿಸಿಕೊಂಡವರಲ್ಲ. ಒಮ್ಮೆ ಅವೆಲ್ಲ ನಿಮ್ಮಮ್ಮನಿಗೆ ಬಿಟ್ಟಿದ್ದೇನಪ್ಪ ; ನನ್ನ ಭಾಗವನ್ನೂ ಅವಳೇ ಸಾಧಿಸುತ್ತಾಳೆ. ಅವಳ ಹೆಸರಿನಲ್ಲಿ ನನಗೆ ಕ್ಷಾಮ ತರಬೇಡ. ಕಾಶಿಗೆ ಹೋಗಿ ತನ್ನ ಗಂಡ ಬಿಟ್ಟರೆಂದು ಅವಳು ಕಿತ್ತಿಳೆ ತಿನ್ನಳೆಂದು ನನಗೇಕೆ ಬೇಡವೆಂದೀಯೆ ಎನ್ನುತ್ತಿದ್ದರು. ತಮ್ಮ ಉಪಚಾರ, ಎಚ್ಚರಿಕೆ ತಮ್ಮವು. ಆಕೆಯ ನಡತೆಯಿಂದಲೇ ನನಗೆ ಅಣ್ಣನವರ ಮಾತು ಸತ್ಯವೆನಿಸಿತ್ತು ; ಹುತ್ತವನ್ನು ಬಡಿದರೆ ಹಾವು ಸಾಯಬಲ್ಲದೇ ಅಯ್ಯಾ ಎಂದು: ಬಹು ಹಿಂದೆ ೪೦-೫೦ ವರ್ಷಗಳ ಹಿಂದೆಯೇ. ಈ ಉಪಕಾರ, ಅದರ ಉಪದೇಶ ಅಷ್ಟಿಷ್ಟಲ್ಲ. ಆದ್ದರಿಂದಲೇ ನನಗೆ ಬೇಕಾದುದೆಲ್ಲವನ್ನೂ ನಾನು ಸಂಕೋಚವಿಲ್ಲದೆ ಮಾಡಿಕೊಳ್ಳುತ್ತಿರುವುದು. ಈಗ ಅವಕ್ಕೆ ಸೊನ್ನೆ ಹಾಕಿಕೊಂಡು ಆಸೆ ಅಡಗಿಸಿದರೆ ಇನ್ನೊಂದು ಜನ್ಮವೆತ್ತಬೇಕಾದರೆ ನನ್ನ ಗತಿ ? ಆದ್ದರಿಂದಲೇ ನನಗಿನ್ನೂ ಏತರಲ್ಲಿಯೂ ತೃಪ್ತಿ, ವಿರಕ್ತಿ ಬಂದಿಲ್ಲ.

ನಾನು ಮೈಸೂರಲ್ಲಿ ಸಾಹುಕಾರ್ ಬನುಮಯ್ಯನವರ ಮನೆಗೆ ಪಾಠಕ್ಕೆ ಹೋಗುತ್ತಿದ್ದೆ. ಅವರು ದಿನಕ್ಕೆ ಕಾಲುಹಣ-ಹಿಂದಿನಕಾಲದ ೧೪ ಕಾಸು-ಕೂಲಿಗೆ ಮೂಟೆ ಹೊರುತ್ತಿದ್ದವರಂತೆ. ಕಾಲಕ್ರಮದಲ್ಲಿ ಲಕ್ಷ್ಮಿ ಒಲಿದು ಧಾನಧರ್ಮಕ್ಕೆ ಹೆಸರಾಗಿ

ಅರಮನೆಗೆ ಸಜ್ಜು ಸಂಭಾರ ಒದಗಿಸುವ ಶ್ರೀಮಂತರಾಗಿದ್ದರು. ಒಮ್ಮೆ ಅವರ ಮಹಡಿಯ ಒಂದು ದೊಡ್ಡ ಕೋಣೆಯಲ್ಲಿ ಅಕ್ಕಿ ಹರವಿದ್ದರು. ೧೫–೨೦ ಅಡಿ ಉದ್ದಗಲದ ಕೋಣೆಯ ತುಂಬಾ ೪-೫ ಅಂಗುಲ ಆಳವಾಗಿ ಒಂದೇ ಸಮನೆ ಗಾಳಿ ಆಡಲೆಂದು ಹರವಿದ್ದರು. ಒಂದೊಂದು ಕಾಳೂ ಅಮೃತಶಿಲೆಯ ಶಕಲ. ಮುಕ್ಕಿಲ್ಲ, ಹಸಿಯಿಲ್ಲ, ಬಿಳಿ ಹೊಡೆದ ಭಾಗವಿಲ್ಲ ; ನುಚ್ಚಿಲ್ಲ, ಕಲ್ಲಿಲ್ಲ; ಕಸವಿಲ್ಲ, ಮಣ್ಣಿಲ್ಲ, ಬತ್ತದ ಹೊಟ್ಟಿಲ್ಲ, ಅವನ್ನೆಲ್ಲಾ ಈ ಕಾಲದ ಬಳಕೆಗೆ ಉಳಿಸಿದ್ದರಾದೀತು. ಅದನ್ನು ನನಗೆ ತೋರಿಸಿದರು. ಅರಮನೆಯ ಮೋತೀಖಾನೆಗೆ ನಾಳೆ ಕಳಿಸಬೇಕಾಗಿದೆ ಎಂದರು. ಆ ಸಲದ ಪಟ್ಟಸಾಮಾನಹಳ್ಳಿ ಸಣ್ಣದ ಅತ್ಯುತ್ತಮ ಬತ್ತದಿಂದ ಕುಟ್ಟಿಸಿದ್ದು ಎಂದರು. ಹೇಗೆ ಎಂದು ಕೇಳಿದೆ. ನಿಮಗೆ ಬೇಕೇನು ಎಂದರು ; ಹಣದ ಮಾತು ಬೇಡವೆಂದರು. ನಾನು ಬೇಡವೆಂದರೂ ನಾನು ಮನೆಗೆ ಹೋಗುವ ಹೊತ್ತಿಗೆ ೫೦ ಸೇರು ಕಳಿಸಿದ್ದರು. ಕಾಸು ತೆಗೆದುಕೊಂಡು ಅವರ ಮಗನಿಗೆ ಪಾಠ ಹೇಳಿಕೊಡುತ್ತಿದ್ದ ನನಗೆ ಪುಕ್ಕಟೆಯಾಗಿ ಅದನ್ನು ತೆಗೆದುಕೊಳ್ಳಲು ಇಷ್ಟವಿಲ್ಲವಾಗಿ ಬಲಾತ್ಕಾರದಿಂದ ಅದರ ಬೆಲೆ ಪಲ್ಲಾಕ್ಕೆ ಮೂವತ್ತು ಎಂದು ಅರಿತು, ಹದಿನೈದು ರೂಪಾಯಿ ಲೆಕ್ಕಕ್ಕೆ ಇನ್ನೈವತ್ತು ಸೇರು ಅಳಸಿಕೊಂಡು ಅದನ್ನು ಬೆಂಗಳೂರಿಗೆ ಕಳಿಸಿಕೊಟ್ಟೆ. ಆ ರಾತ್ರಿ ನಮ್ಮಜ್ಜಿಗೆ ಆ ಅಕ್ಕಿ ತುಂಬಾ ಹಿಡಿಸಿರಬೇಕು. ನಾಳೆ ಸ್ವಲ್ಪ ಗೋಡಂಬಿ ಕೊಂಡು ತರುತ್ತೀಯ ಕಂಠಿ ಎಂದರು. ಆಗ ೨ ಆಣೆಗೆ ಒಂದು ಬೊಗಸೆ ಗೋಡಂಬಿ, ನಾಲ್ಕಾಣೆಗೆ ಸೇರು ಬಾದಾಮಿ ಬರುತ್ತಿದ್ದ ಕಾಲ. ನಮ್ಮ ಕಡೆ ಕರಿದ ಕಾರದ ಅವಲಕ್ಕಿಯ ಜೊತೆಗೆ ಹೊರತು ಬೇರೆ ತಿಂಡಿಗೆ ಅದನ್ನು ಬಳಸುತ್ತಿರಲಿಲ್ಲ. ಏಕೊ ಎಂದುಕೊಂಡವನೇ ಬೆಳಗ್ಗೆ ಅದನ್ನು ತಂದುಕೊಟ್ಟೆ. ಊಟದ ಹೊತ್ತಿಗೆ ತುಪ್ಪಾನ್ನ ಮಾಡಿ ಬಡಿಸಿದರು. ಅದು ಈಗ ಕಣ್ಣಿಗೆ ಕಾಣುತ್ತಿದೆ. ಒಂದೊಂದು ಕಾಳೂ ಉದುರುದುರಾಗಿ ಅಟ್ಟ ಅನ್ನದಗುಳು. ರಂಗಳಿಸಿದಂತೆ ಒಂದೊಂದು ಅಗುಳಿಗೂ ಸುತ್ತ ಕಾಯಿಸಿದ ತುಪ್ಪ, ಬೇಳೆಗಳ ಒಗ್ಗರಣೆ, ಉದ್ದತುರಿದ ಒಣಕೊಬ್ಬರಿ, ಎಷ್ಟು ಹುರಿತ ಸಾಕಾದರೆ ಹಲ್ಲಿಗೆ ಕಡಿಯಲು ಹಿತವೊ ನಾಲಗೆಗೆ ರುಚಿಯೊ ಅಷ್ಟೇ ಗಾತ್ರದ ಗೋಡಂಬಿ ಚೂರು ಕರಿದು ಹಾಕಿ ಮಾಡಿದ್ದರು. ಬಿಸಿಯಾಗಿ ಬಡಿಸಿದರು. ನಾನು ಹಿಂದೆಂದೂ–ಈಚೆಗೆ ಇನ್ನೂ ಇಲ್ಲ–ಅಂಥ ತುಪ್ಪಾನ್ನ ತಿಂದಿಲ್ಲ; ಕಂಡಿದ್ದಿಲ್ಲ. ಎಷ್ಟೋ ಕಡೆ ತಿಂದಿದ್ದೇನೆ. ಆ ಹದ, ಆ ರುಚಿ, ಆ ನೋಟದ ಅರೆವಾಸಿ, ರುಚಿ ಕಂಡಿಲ್ಲ. ತನ್ನ ಗಂಡನ ನೆನಪು ಬಂದಿತಂತೆ : ನೋಡು, ಮಗು; ನನಗಾಗಿ ನಿಮ್ಮ ತಾತ ಎರಡೆಕರೆ ಗದ್ದೆಯಲ್ಲಿ ಜೀರಿಗೆ ಸಣ್ಣ ಇಡಿಸುತ್ತಿದ್ದರು. ಆ ಅಕ್ಕಿಯ ನೆನಪು ಬಂತು. ಈ ಅಕ್ಕಿ ತುಂಬಾ ಚೆನ್ನಾಗಿದೆಯಪ್ಪ. ನಮ್ಮ ಕಾಲದಲ್ಲಿ ಗೇರುಬಿತ್ತ ಸಿಕ್ಕುತ್ತಿರಲಿಲ್ಲ. ಈಗ ಇದು ಚೆನ್ನಾಗಿರುವುದೆಂದು ಹಾಕಿದೆ. ಬಾಯಿಗೆ ಹೇಗಿದೆಯೊ ಎಂದರು. ಹೇಗಿದೆ ಎಂದಳಲ್ಲವೆ! ಆ ಸನ್ನಿವೇಶ ಸಂತೋಷದ ತುಂಬು ಹೊನಲು. ಹೊಟ್ಟೆ ಹೃದಯ ತುಂಬಿದಾಗ ಆಡಲು ಬಾಯೆಲ್ಲಿರುತ್ತದೆ? ನಾನು ಆಗ ಮೂಕ; ಮಾತು ಆ ಸಂತೃಪ್ತಿಯನ್ನು ಹೇಗೆ ನುಡಿದೀತು. ಆದರೂ ಇವೊತ್ತು ಅಡಿಗೆ ತುಂಬಾ ಚೆನ್ನಾಗಿದೆ ಅಜ್ಜಿ ಎಂದೆ. ನೀನು ಚೆನ್ನಾಗಿದೆ ಎಂದರೆ ಸಂತೋಷ ಎಂದರು.

ಆಕೆ ತೀರಿಕೊಂಡ ದಿನದ ನೆನಪಿದೆ. ಸುಮಾರು ಮಧ್ಯಾಹ್ನ ನಾಲ್ಕರ ಸಮಯ. ಕಾಲು ತೊಳೆದುಕೊಂಡು ಬಂದು ಹಾಸಿಗೆಯಲ್ಲಿ ಮಲಗಿದರು. ಆ ಮುಂಚೆ ಬೇರೆ ಒಗೆದ ವಸ್ತ್ರವನ್ನುಟ್ಟು ಮಕ್ಕಳನ್ನೆಲ್ಲ ಕರೆದರು. ಇಬ್ಬರು ಹೆಣ್ಣು ಮಕ್ಕಳಿಗೂ ಹೇಳಿ ಕಲಶದಲ್ಲಿದ್ದ ಗಂಗೆ ತರಿಸಿದರು. ನಾನು ಆಗ ತಾನೇ ಆಕೆಗೆಂದು ಸ್ವಲ್ಪ ಹಾಲು ಕಾಯಿಸಿಟ್ಟಿದ್ದೆ. ಅದರಲ್ಲಿ ಒಣ ಅಂಜೂರ ಬೇಯಿಸಿ ಅದರ ಸಾರ ಮಾತ್ರ ಇತ್ತು. ನಾಲ್ಕು ಚಮಚ ತೆಗೆದುಕೊಂಡರು ಔಷಧಿಯ ಜೊತೆಗೆ. ಮಕ್ಕಳು ಗಂಗೆ ಕೊಟ್ಟರು. ಇದೇನು, ಏಕೆ ಹೀಗೆ ಎಂದು ಇನ್ನೊಬ್ಬರು ಅಂದರು. ಅಯ್ಯೊ ಈ ಕರಿ ಕಂಬಳಿಯನ್ನೇಕೆ ಹಾಸುವಿರಿ ಎಂದರು ಇನ್ನೊಬ್ಬರು. ಆಕೆ ಅವರಿಗೆ ಸನ್ನೆಮಾಡಿ ಸುಮ್ಮನಿರೆಂದರು. ನನ್ನನ್ನು ಕರೆದು ನನ್ನ ಕೈಯಲ್ಲಿ ನಮಸ್ಕಾರ ಮಾಡಿಸಿಕೊಂಡು ಹರಸಿದರು. ಎಲ್ಲರೂ ಎದುರಿಗಿರಲು ರಾಮ, ನಾರಾಯಣ ಎಂದುಕೊಂಡವರೇ ಕಣ್ಣು ಮುಚ್ಚಿಕೊಂಡರು. ಆ ಮುಖದ ಶಾಂತಿ, ಪ್ರಸನ್ನತೆ ಕಣ್ಣಿಗೆ ಕಟ್ಟಿದೆ. ತುಂಬಿದ ಜೀವ. ಹಣ್ಣು, ಕಾವಿಂದ ಕಳಚಿಕೊಂಡು ನೆಮ್ಮದಿಯಿಂದ ಉದುರಿಬಿತ್ತು. ಏನೇ ಚಿಂತೆ, ಕಷ್ಟ ಇದ್ದರೂ ಲಕ್ಷಿಸದೆ, ತನ್ನ ಮನಸ್ಸನ್ನು ತನ್ನ ವಶದಲ್ಲಿಟ್ಟುಕೊಂಡು ನಾಲ್ವರಿಗೆ ನೆರವಾಗಿದ್ದ ಜೀವ ಅದು; ಕೊಟ್ಟು ಇಟ್ಟು ತಣಿದದ್ದು – ಆ ತಣಿವಿನಲ್ಲಿಯೇ ತೀರಿಕೊಂಡಿತು.

———

## ಅನುಬಂಧ

# ಮುನ್ನುಡಿಗಳು

# ಪಂಪಾಯಾತ್ರೆ

## I

ಈ ಸಣ್ಣ ಪ್ರಬಂಧದಲ್ಲಿ ಒಂದು ದಿನದ ಅನುಭವಗಳ ವಿವರಣೆ ಇದೆ. ಇದನ್ನು ಬರೆಯಬೇಕೆಂಬ ಉದ್ದೇಶ ನನಗೆ ಮೊದಲು ಇರಲಿಲ್ಲ. ಆದರೂ ನಮ್ಮ ಯಾತ್ರೆಯ ನೆನಪಾಗಿ ನನಗೂ ನನ್ನ ಪೂಜ್ಯ ಸ್ನೇಹಿತರಿಗೂ ಏನಾದರೊಂದು ವಸ್ತುವು ಇರಲಿ ಎಂದುಕೊಂಡವನು ಇದನ್ನು ಬರೆದಿರುತ್ತೇನೆ.

ಇದರಲ್ಲಿ ಹೊಸ ವಿಷಯವೇನೂ ಇಲ್ಲ. ಎಷ್ಟೊ ಜನ ದೇಶವಿದೇಶಗಳ ಮಹನೀಯರು ಈ ವಿಧವಾದ ಭಾವಗಳನ್ನು ಮೇಲಾಗಿ ವ್ಯಕ್ತಪಡಿಸಿದ್ದಾರೆ. ವರ್ಣನೆಯೊಂದಿಗೆ ನಮ್ಮ ಭಾವನೆಗಳನ್ನು ಬೆರೆಸಿ, ಮನಸ್ಸನ್ನು ಅದರೊಳಗೆ ಹೊಗಿಸಿ ಸ್ವಚ್ಛಂದವಾಗಿ ಬರೆದಿರುವವರು ಕನ್ನಡದಲ್ಲಿ ಕಮ್ಮಿ ಎಂಬ ವಿಶೇಷ ಸಂಗತಿಯು ಈ ಕೆಲಸದಲ್ಲಿ ನನಗೆ ಪ್ರವೃತ್ತಿಯನ್ನು ಹುಟ್ಟಿಸಿ ಮೇಲೆ ಸೂಚಿಸಿರುವ ಕಾರಣಕ್ಕೆ ಜೊತೆಗೂಡಿತು. ದೇವರು ರಾಜರ ಜೊತೆಗೆ ಚೇಳು ಬೀಡಿ ಭೇಕಗಳನ್ನು ಸೇರಿಸಿ ಒಂದೇ ಬಾಯಲ್ಲಿ ಹೇಳುವ ಸಂಪ್ರದಾಯವನ್ನು ಶಿಷ್ಟರು ಹೇಗೆ ಭೂಷಿಸುವರೊ ತಿಳಿಯದು.

ಇಲ್ಲಿನಂಥ ವರ್ಣನೆಗಳಲ್ಲಿ ಅನೇಕ ದೋಷಗಳು ಇದ್ದೇ ಇರಬೇಕು. ಒಂದು ಸ್ಥಳದಿಂದ ಇನ್ನೊಂದಕ್ಕೆ ಹೋಗುವ ದಾರಿಯಲ್ಲಿ ಕಥನವು ನೀರಸವಾಗಬಹುದು. ಸ್ಥಳಮಹತ್ವದಿಂದಲೊ ಭಾವದ ಅತ್ಯುದ್ರೇಕದಿಂದಲೊ ವರ್ಣನೆಯು ಮಿತಿಮೀರ ಬಹುದು. ಮುಖ್ಯ, ನಾನು ನನ್ನ ಮನಸ್ಸಿನಲ್ಲಿ ಆಗ ಉಂಟಾದ ಪರಾವರ್ತನೆಗಳನ್ನು ಮಾತುಗಳ ಮೂಲಕ ನನಗೆ ಶಕ್ತಿಯಿರುವ ಮಟ್ಟಿಗೆ ವಿಶದಪಡಿಸಿ, ಆಗಿನ ಸ್ಥಿತಿಯನ್ನು ಹೊರತೋರಿಸಲು ಯತ್ನಿಸಿದ್ದೇನೆ. ಅದನ್ನು ಒಪ್ಪುವುದೂ ಬಿಡುವುದೂ ಪಾಠಕರ ಕೆಲಸ. ಅಲ್ಲಲ್ಲಿ ಅಸಂಗತಗಳೂ ಕಂಡುಬರಬಹುದು. ಇಂಥ ಸಂದರ್ಭಗಳಲ್ಲಿ ಹಾಗಾಗುವುದು ಆಶ್ಚರ್ಯವಲ್ಲ. ಅಂತರಂಗವನ್ನು ಕದಡುವ ವಸ್ತು ವಿಷಯಗಳೆದುರಿಗೆ ಮನಸ್ಸು ಕುದಿಯಲು ಪ್ರಾರಂಭವಾದರೆ, ಆ ಕುದಿಯ ತಳಮಳದಲ್ಲಿ ಸಂಗತ ಅಸಂಗತಗಳ ವಿಚಾರ ಮಾಡುವ ಸ್ಥಿತಿ ಇರುವುದಿಲ್ಲ. ಆದುದರಿಂದ ಅಲ್ಲಿ ಆ ನಿಯಮವನ್ನಪೇಕ್ಷಿಸುವುದು ಅನ್ಯಾಯ, –ಅಸ್ವಾಭಾವಿಕ. ಅಲ್ಲದೆ ಉತ್ಸಾಹ ಪ್ರಶಂಸೆ ದುಃಖ ಇವುಗಳ ಕಣ್ಣಿನಿಂದ ವಸ್ತುಗಳನ್ನು ನೋಡುವಾಗ ಅತ್ಯುಕ್ತಿಗಳೂ ಕೆಲವೆಡೆ ತಲೆಹಾಕಬಹುದು.

ಅಚ್ಚಿನ ತಪ್ಪುಗಳಿಲ್ಲದೆಯೂ ವಿರಾಮ ಸೂಚನೆಗಳನ್ನು ಸಮರ್ಪಕವಾಗಿ ವ್ಯವಸ್ಥೆ ಮಾಡಿಯೂ ಇದನ್ನು ಪ್ರಕಟಿಸಬೇಕೆಂದಿದ್ದ ಕೋರಿಕೆ ನೆರವೇರದೆ ಹೋದುದಕ್ಕಾಗಿ ಮನಸ್ಸಿಗೆ ಸ್ವಲ್ಪ ವ್ಯಥೆ ; ಅಷ್ಟೆ.

ಇಲ್ಲಿ ಗುಣಗಳೇನಾದರೂ ಕಂಡು ಬಂದರೆ ಅವು ಕಥಾವಸ್ತುವಿಗೆ ಸೇರಬೇಕಾದವು; ಮಿತ್ರರ ಸತ್ಸಂಗ ವಾತ್ಸಲ್ಯಗಳ ಫಲವಾಗಿ ಬಂದುವು. ದೋಷಗಳೆಲ್ಲ ನನ್ನವು ; ಅವಕ್ಕೆ ನಾನು ಮಾತ್ರ ಬಾಧ್ಯನು.

ಪ್ರಬುದ್ಧ ಕರ್ಣಾಟಕದಲ್ಲಿ ಪ್ರಕಟಿತವಾಗುವುದನ್ನು ಬೇರೆಯಾಗಿ ಅಚ್ಚು ಹಾಕಿಸಿಕೊಟ್ಟುದಕ್ಕಾಗಿ ಅದರ ಚಾಲಕರಿಗೆ ನಾನು ಬಹು ಕೃತಜ್ಞನಾಗಿರುತ್ತೇನೆ.

ವಿ.ಸೀ.

ಪ್ರಭವ ಸಂವತ್ಸರ
ಆಶ್ವಯುಜ ಮಾಸ
ಮೈಸೂರು

## II

**ಪಂಪಾಯಾತ್ರೆ**ಯ ಪ್ರತಿಗಳು ಮುಗಿದು ಒಂದೆರಡು ವರ್ಷಗಳಾಗಿದ್ದರೂ ಅದನ್ನು ಪುನಃ ಅಚ್ಚುಮಾಡಿಸಲು ಅವಕಾಶವಾಗಿರಲಿಲ್ಲ. ಈ ಪುಸ್ತಕದ ಎರಡನೆಯ ಆವೃತ್ತಿ ಅಚ್ಚಿಗೆ ಬಂದುದು ಸಂತೋಷದ ಸಂಗತಿ. ಇದು ನನ್ನ ಮೊದಲ ಪುಸ್ತಕ ; ನನಗೂ ಸ್ನೇಹಿತರಿಗೂ ಸಂಬಂಧಪಟ್ಟುದು ; ಪ್ರೀತಿಯ ಹೊಸ ಮಿತ್ರರನ್ನು ದೊರಕಿಸಿಕೊಟ್ಟು ಉಪಕಾರ ಮಾಡಿತು ; -ಆದುದರಿಂದ. ಅಲ್ಲದೆ ಆ ಯಾತ್ರೆಯನ್ನು ಈಗ ಎರಡನೆಯ ಸಲ ಮಾಡಿದಂತಾಗಿದೆ.

ಇಲ್ಲಿನ ವಿಷಯ ಭಾಗದಲ್ಲಿ ಒಂದಕ್ಷರಕ್ಕೂ ನನಗೆ ಪಶ್ಚಾತ್ತಾಪವಿಲ್ಲ. ವಿಷಾದ ಪಟ್ಟೆನಾದರೆ ಕೃತಘ್ನನಾಗುವೆನು. ಆದರೆ ಆಗ ಬರೆದ ವಾಕ್ಯಗಳೂ ಉಪಯೋಗಿಸಿದ ಶಬ್ದ ರೂಪಗಳೂ ಕೆಲವು ಈಗಿನ ಮನಸ್ಸಿಗೆ ಅಸುಖವನ್ನುಂಟು ಮಾಡಿವೆ. ನಮ್ಮ ಕಡೆ ಆಡುವ ಮಾತಿನಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವ ಬಂದು ಬಿಟ್ಟನು, ಮಾಡಿಕೊಂಡು, ತೀರಿ ಹೋಯಿತು-ಮುಂತಾದ ಪದಖಂಡಗಳು ಈ ಬರವಣಿಗೆಗೆ ಅತಿಯಾಗಿ ಇಳಿದು ತಲೆನೋವು ತರುವಂತಾಗಿದೆ. ಅವುಗಳಲ್ಲಿ ಹಲವನ್ನು ಕತ್ತರಿಸಿರುವ ಈಗಲೂ ಅವು ಬಹಳವಾಗಿ ಇದ್ದೇ ಇವೆ. ಪೂರ್ತಿ ಅವನ್ನು ನಿವಾರಿಸಲು ಶಕ್ಯವಾಗಿಲ್ಲ. 'ಅಸಾಧು' ರೂಪಗಳೂ ಅಲ್ಲಲ್ಲಿ ಕೆಲವಿರುವುವಾದರೂ ಅವನ್ನು ಹಾಗೆಯೇ ಬಿಟ್ಟಿದ್ದೇನೆ. ಇಂಥಾ ದೋಷಗಳನ್ನೂ ಎಣಿಸದೆ ಆದರದಿಂದ ಪುಸ್ತಕವನ್ನು ಓದಿ ಪ್ರೋತ್ಸಾಹಿಸಿರುವ ಎಲ್ಲರಿಗೂ ನಾನು ಋಣಿಯಾಗಿದ್ದೇನೆ.

ಇದನ್ನು ಮೊದಲು ಪ್ರಚಾರಕ್ಕೆ ತಂದ ಪ್ರಬುದ್ಧ ಕರ್ಣಾಟಕದ ಸಂಪಾದಕರಿಗೂ ಈಗ ಪ್ರಕಟಿಸುತ್ತಿರುವ ಸತ್ಯಶೋಧನ ಮಂದಿರದವರಿಗೂ ನನ್ನ ವಂದನೆಗಳು.

ಜೂಲೈ ೧೯೩೨ ವಿ.ಸೀ.

## III

**ಗೀತಗಳು** ನನ್ನ ಮೊದಲ ಭಾವಗೀತೆಗಳ ಪುಸ್ತಕವಾಗಿ ಅಚ್ಚಾಗುವ ಮುಂಚೆಯೇ ಮೊದಲ ಗದ್ಯಪುಸ್ತಕ **ಪಂಪಾಯಾತ್ರೆ** ಪ್ರಕಟವಾಯಿತು. ಮೊದಲು ಪ್ರಬುದ್ಧ ಕರ್ಣಾಟಕದ ನಾಲ್ಕು ಸಂಚಿಕೆಗಳಲ್ಲಿ ಭಾಗಶಃ ಪ್ರಕಾಶಗೊಂಡಿತು. ಒಂದೇ ಸಾಲು ಸಂಚಿಕೆಗಳಲ್ಲಿ ಶ್ರೀ ಮಾಸ್ತಿಯವರ **ಸುಬ್ಬಣ್ಣವೂ** ಇದೂ ಅಚ್ಚಾದುದು ನನ್ನ ಅತಿಶಯ ಹಿಗ್ಗಿಗೆ ಕಾರಣವಾಗಿತ್ತು. **ಸುಬ್ಬಣ್ಣ**ದಂಥ ಪುಸ್ತಕ ಕನ್ನಡ ಕಥಾಪ್ರಪಂಚಕ್ಕೆ ಹಿರಿದು. ಅದರ ಅಡಕ, ಕಲಾವಿಚಕ್ಷಣೆ, ಮಾನವಜೀವನದ ಆಳದಲ್ಲಿ ಕಾರ್ಯ ಮಾಡುವ ಪ್ರವೃತ್ತಿಗಳ ಅಂತರ್ದೃಷ್ಟಿ, ಆಗ್ಗೆ ಅಷ್ಟೇನೂ ಹಿಂದಿನ ಕಾಲದ್ದಲ್ಲದ ಮೈಸೂರಿನ ಗೃಹಜೀವನ, ಅದರ ರಾಗರಂಜನೆ, ಕಲ್ಲಿನ ಹಾಗಿದ್ದ ಒಂದು ಜೀವ ಹೇಗೆ ಮೃದುವಾಗಿ ತನ್ನ ಬಗೆಯ ಸಿದ್ಧಿಯನ್ನೂ ಪರಿಣಾಮ ರಮಣೀಯತೆಯನ್ನೂ ಪಡೆಯಿತು ಎಂಬ ಚಿತ್ರ ಸ್ವಲ್ಪ ಅವಕಾಶದಲ್ಲಿ ತುಂಬಿಕೊಂಡು ಅಲ್ಲಿ ರೂಪಗೊಂಡ ಹಾಗೆ ನಮ್ಮ ಕಡೆಯ ಇತರ ಯಾವ ಕತೆಗಳಲ್ಲಿಯೂ ಆಗಿರಲಿಲ್ಲ. ಅದರ ಜೊತೆಯಲ್ಲಿ ಈ ಯಾತ್ರೆ ಪ್ರಕಟಗೊಂಡುದು ನನಗೆ ತುಂಬಾ ಅಭಿಮಾನದ ಸಂಗತಿ, - ಎಂದಿಗೂ.

ಇದು ಇದರ ನಾಲ್ಕನೆಯ ಆವೃತ್ತಿ. ಹೊಸದಾಗಿ ಯಾವುದನ್ನೂ ಸೇರಿಸಹೋಗಿಲ್ಲ. ಅಲ್ಲಿ ಇಲ್ಲಿ ಒಂದೆರಡು ಮಾತೊ ಶಬ್ದರೂಪವೊ ಮಾರ್ಪಟ್ಟಿರಬಹುದು. ನಲವತ್ತೇಳು ವರ್ಷಗಳ ಹಿಂದೆ ನಾನು ಬರೆಯತೊಡಗಿದ ಮುಂಚುಮುಂಚೆಯ ಕಾಲದಲ್ಲಿ ಇದ್ದ ಶೈಲಿಯದು. ಮನಸ್ಸು ಇನ್ನೂ ಒಂದು ಪಾಕಕ್ಕೆ ಬರಲು ಪ್ರಯತ್ನಿಸುತ್ತಿತ್ತು. ಪಾಕವೊ: ನಿಂತ ಕಲ್ಲಾದ ಸ್ಥಿತಿ ಅಲ್ಲ ; ಆಜೀವಕಾಲ ನಡೆವುದು. ಆದರೂ ಆಗ ಇನ್ನೂ ಸಿದ್ಧತೆಯ ಅಥವಾ ಅಭ್ಯಾಸದ, ಆರಂಭದ ಕಾಲ. ಅದಕ್ಕೆ ನನ್ನ ಸ್ನೇಹಿತರು ಆಧಾರವಾದುದರಿಂದ ಆ ಸನ್ನಿವೇಶ ಅಸಾಧಾರಣವಾಯಿತು. ಅವರ ಸಾಹಚರ್ಯ, ಸ್ಥಳದ ಹಿರಿಮೆ, ಅದರ ಚರಿತ್ರೆಯ ಆಳದಲ್ಲಿ ಹುದುಗಿರುವ ರಾಮಾಯಣ ಕಾಲದ, ವಿಜಯನಗರ ಕಾಲದ ಮತ್ತು ಕಲೆಯ ಇತಿಹಾಸದ ಸಾಂಗತ್ಯ ಅದಕ್ಕೆ ಒಂದು ವಿಶೇಷ ಮೆರುಗನ್ನು ಕೊಟ್ಟಿತು. ಈಗ ಇಂಥುದನ್ನು ಬರೆಯಬಲ್ಲೆನೆಂಬ ಧೈರ್ಯ ನನಗಿಲ್ಲ. ಆದರೂ ಇಲ್ಲಿನ ವಾಕ್ಯರಚನೆಯಲ್ಲಿ ಪದಪ್ರಯೋಗದಲ್ಲಿ ಇನ್ನಷ್ಟು ನುಣುಪನ್ನೊ ಸಾಂಗತ್ಯ ಸಾತತ್ಯಗಳನ್ನೊ ಭಾವಪ್ರಕಾಶನ ಮಾಡುವುದರಲ್ಲಿ ಇನ್ನಷ್ಟು ಸೂಕ್ಷ್ಮವನ್ನೊ ತರಬಹುದಾಗಿತ್ತೆನ್ನಿಸುತ್ತದೆ. ಹೇಗೇ ಆಗಲಿ, ಇದು ಇನ್ನೊಂದು ಸಲ ಅಚ್ಚು ಕಾಣುತ್ತಿದೆ.

ಮೈಸೂರಿನ ಗೀತಾ ಬುಕ್ ಹೌಸಿನ ಶ್ರೀ ಎಂ. ಸತ್ಯನಾರಾಯಣ ರಾಯರು ನನಗೆ ಅವರ ಪರಿಚಯವಾದ ೧೯೬೮ ರಿಂದ ತಾವು ಇದನ್ನು ಪ್ರಕಟಿಸಲು ಒಪ್ಪಿಕೊಳ್ಳಬೇಕೆಂದು ಪಟ್ಟುಹಿಡಿದು ಇದನ್ನು ಹೊರತಂದಿದ್ದಾರೆ. ಕಾಗದದ ಬೆಲೆಯೂ ಉತ್ಪಾದನೆಯ ವೆಚ್ಚಗಳೂ ವಿಷದಂತೆ ಏರುತ್ತಿರುವ ಈ ಕಾಲದಲ್ಲಿ ಇನ್ನಷ್ಟು ಚೆನ್ನಾಗಿ ಇದನ್ನು ಮಾಡಬಹುದಾದ ಪೀಡೆಯನ್ನು ಪ್ರಕಟನಕಾರರು ಹೊರಲಾರದಿದ್ದಾರೆ. ಇನ್ನಷ್ಟು ಚೆನ್ನಾಗಿ ಮಾಡುವುದೆಂಬುದಕ್ಕೆ ಮಿತಿ ತಾನೆ ಎಲ್ಲಿ?

ಯಾತ್ರೆಯಲ್ಲಿ ನನ್ನನ್ನು ನಡಸಿಕೊಂಡ ಹಿರಿಯರಲ್ಲಿ ರಾಯರೊಬ್ಬರನ್ನು ಉಳಿದು ಉಳಿದವರೆಲ್ಲ ತೀರಿಕೊಂಡಿದ್ದಾರೆ. ಸ್ವಲ್ಪ ಅಲ್ಲಿ ಇಲ್ಲಿ ಏರುಪೇರು ಮಾಡಿದರೆ : ಯಜಮಾನರು ಬೆಳ್ಳಾವೆ ವೆಂಕಟನಾರಾಯಣಪ್ಪನವರು; ವೆಂಕಟೇಶಯ್ಯನವರು ಎಂದರೆ ಟಿ. ಎಸ್. ವೆಂಕಣ್ಣಯ್ಯನವರು ; ಮೂರ್ತಿ ಎಂದರೆ ಎಂ. ಆರ್. ಶ್ರೀನಿವಾಸಮೂರ್ತಿ. ಆ ಎಲ್ಲರ ಲಕ್ಷಣಗಳೂ ಇಲ್ಲಿ ಕಾಣುತ್ತವೆಯೆಂದಲ್ಲ; ಇಲ್ಲಿ ಕಾಣುವುದೆಲ್ಲ ಪೂರ್ತಿ ಅವರು ಎಂದೂ ಅಲ್ಲ. ಒಟ್ಟಿನಲ್ಲಿ ಜೊತೆಯ ಯಾತ್ರಿಕರು ಇವರು. ಬೆಳಗಾವಿ ಸಾಹಿತ್ಯ ಸಮ್ಮೇಳನ (೧೯೨೫) ಮುಗಿದ ಕೂಡಲೆ ನಾವು ಕೈಗೊಂಡದ್ದು ಈ ಯಾತ್ರೆ ಎಂದು ಹಿಂದೆ ತಿಳಿಸಿದ್ದೇನೆ. ಯಜಮಾನರು, ರಾಯರು ವಿಜಯನಗರದ ಜೀರ್ಣೋದ್ಧಾರ ಸಂಸ್ಥೆಯ ಸಮಿತಿಗಳಲ್ಲಿ ಕಾರ್ಯಕ್ರಮಗಳನ್ನು ನಡಸಿದವರು. ಆ ಸಾಮ್ರಾಜ್ಯದಲ್ಲಿ ಭಕ್ತಿ ಎಷ್ಟೊ, ಅದರ ಸ್ಥಾಪನೆಗೆ ಸ್ಫೂರ್ತಿಕೊಟ್ಟ ವಿದ್ಯಾರಣ್ಯರಲ್ಲಿ ಅಷ್ಟೇ ಭಕ್ತಿ ಶ್ರದ್ಧೆ ಉಳ್ಳವರು. ವೆಂಕಟೇಶಯ್ಯನವರ ಮನಸ್ಸು ಬಾಯಲ್ಲಿ ಹೆಚ್ಚಾಗಿ ಏನನ್ನೂ ನುಡಿಯದು. ಆದರೂ ಅಂಥ ಭಕ್ತಿಗೌರವಗಳಲ್ಲಿ ನಿರಂತರವಾಗಿ ಲೀನವಾಗಿದ್ದುದು. ಮೂರ್ತಿ ವಯಸ್ಸಿನಲ್ಲಿ ನನಗೆ ಹೆಚ್ಚು ಹತ್ತಿರದವರು. ಆದರೂ ೭-೮ ವರ್ಷ ದೊಡ್ಡವರು. ಸರ್ಕಾರದ ವಿದ್ಯಾ ಇಲಾಖೆಯಲ್ಲಿ ಇನ್ಸ್‌ಪೆಕ್ಟರಾಗಿಯೊ ಅಥವಾ ಒಂದು ಡಿಸ್ಟ್ರಿಕ್ಟ್ ಟ್ರೈನಿಂಗ್ ಸ್ಕೂಲಿನ ಮುಖ್ಯೋಪಾಧ್ಯಾಯರಾಗಿಯೊ ಇದ್ದವರು. ಕನ್ನಡ ಸಾಹಿತ್ಯದ ಹತ್ತಾರು ಮಹಾಕಾವ್ಯಗಳನ್ನು – ನಿಜವಾದ ಮಹಾಕಾವ್ಯಗಳನ್ನು – ವಾಚೋವಿಧೇಯವಾಗಿ ಉಳಿಸಿಕೊಂಡಿದ್ದವರೂ ನಿಃಸ್ಪೃಹರಾದ, ಪ್ರಾಮಾಣಿಕರಾದ ವಿದ್ಯಾಧಿಕಾರಿಗಳೂ ಬೋಧಕರೂ ಆಗಿದ್ದವರು. ಒಬ್ಬೊಬ್ಬರೂ ಜೀವದ ತತ್ತ್ವ ಸಾಧನೆಯಲ್ಲಿ, ಚಾರಿತ್ರದಲ್ಲಿ ತಮ್ಮ ತಮ್ಮ ರೀತಿಯಲ್ಲಿ ಮೇಲ್ಮಟ್ಟವನ್ನು ಸಾಧಿಸಿದ್ದವರು. ನಿಂತಲ್ಲಿ ಷಟ್‌ಸ್ಥಲವ ಕಾಂಬರಯ್ಯ ಎಂಬ ಒಂದು ಮಾತು ವಚನ ಧರ್ಮಸಾಧಕರಲ್ಲಿ ಒಂದು ದೊಡ್ಡ ಸ್ಥಿತಿಯನ್ನು ನಿರ್ದೇಶಿಸುವ ಮಾತು. ನಾನು ಕಂಡಂತೆ ಈ ನಾಲ್ವರೂ ಆ ಥಾತಿಯವರು. ಹಾಗೆ ಅಂದುಕೊಳ್ಳಬಲ್ಲ ಹೆಚ್ಚು ಮಂದಿಯನ್ನು ನಾನು ಕಂಡಿಲ್ಲ. ಈ ನಾಲ್ವರಲ್ಲಿ ನಾನು ಕಪಟ ಕಂಡಿಲ್ಲ. ನನ್ನ ಬದುಕಿನ ದಾರಿಯಲ್ಲಿ ಬೆಳಕು ಹಾಯಿಸಿದ ಹಲವು ಮಹನೀಯರು ಬೇರೆ ಬೇರೆ ಬಗೆಯ ಸಿದ್ಧಿಗಳನ್ನು ಪಡೆದು ನನಗೆ ಮಾರ್ಗದರ್ಶನ ಮಾಡಿದರು. ಈ ನಾಲ್ವರಲ್ಲಿ ಕೆಲವರ ಪರಿಚಯವನ್ನು ಸ್ಥೂಲವಾಗಿ ಮಾಡಿಕೊಡಲು ಬೇರೆ ಕಡೆ ಯತ್ನಿಸಿದ್ದೇನೆ.

ಬೆಳಗಾವಿಯಿಂದ ಹೊರಟು ಪುನಃ ಬೆಂಗಳೂರಿಗೆ ಹಿಂತಿರುಗುವವರೆಗೂ ಇವರ ಸಾನ್ನಿಧ್ಯ, ಸಾಹಚರ್ಯ, ಪ್ರೀತಿ, ಮನೋವಿಲಾಸ, ಇವರ ಮಟ್ಟದಲ್ಲಿನ ಮಾತುಕತೆ, ಅಭಿಪ್ರಾಯ ವಿನಿಮಯ, ಅನುಭವಗಳ ಶೋಧನೆ ಹೇಗೆ ನಡೆಯುತ್ತಿದ್ದಿತೆಂಬುದನ್ನು ನಾನು ಬಲ್ಲೆ. ಅದೊಂದು ಅಮೃತಸಂಚಯ. ಆಗ ನನಗಿನ್ನೂ ೨೭ ರ ವಯಸ್ಸು. ಆ ಎಳವಿನಲ್ಲಿ ಎಷ್ಟು ಸಂಸ್ಕಾರ ದೊರೆಯಬಹುದೊ ಅಷ್ಟನ್ನು ಮಾತ್ರ ಪಡೆಯಬಹುದಾಗಿತ್ತು. ಈಗ ಅಂಥುದು ದೊರೆತರೆ ಭಾಗ್ಯವಾದೀತು. ಆ ದಿಸವಗಳನ್ನು ಪುನಃ ಎಲ್ಲಿ ತರಲಿ?

ಅವನ್ನು ನೆನಸಿಕೊಂಡು ಪುನಃ ಅವಕ್ಕೆ ಕಾಣಿಕೆ ಕೊಡುವ ಇನ್ನೊಂದು ಅವಕಾಶ ದೊರೆತುದಕ್ಕಾಗಿ ನಾನು ನನ್ನ ಭಾಗ್ಯವನ್ನು ನಡಸುತ್ತಿರುವ ಶಕ್ತಿಗಳಿಗೆ ಕೃತಜ್ಞನಾಗಿದ್ದೇನೆ.

ರಾಯರೂ ಎರಡು ಮೂರು ವರ್ಷಗಳಿಂದ ಬಹುಶಃ ಹಾಸಿಗೆ ಹಿಡಿದಿದ್ದಾರೆ. ದೇಹದ ಕಷ್ಟ, ಅಶಕ್ತಿಗಳು ಎಷ್ಟೇ ಅವರನ್ನು ಒತ್ತಿ ನೋವಿಗೀಡು ಮಾಡುತ್ತಿರಲಿ ಅವರ ಮನಸ್ಸು, ಆಲೋಚನಾಶಕ್ತಿ, ಭೌಮವಾದ ಅದರ ನಿಲುಕು, ವಿವೇಚನಾವಿಚಕ್ಷಣತೆ ಅಚ್ಚಳಿಯದೆ ಇವೆ. ಹೃದಯದಲ್ಲಿ ಸವಿಮೃದು ಹಣ್ತನ ಇನ್ನಷ್ಟು ವ್ಯಾಪಕವಾಗಿದೆ. ಎಷ್ಟು ವಿವಿಧವಾಗಿ ಲೋಕದ ವಿಚಾರಗಳನ್ನೂ ಮನಸ್ಸಿನ ಕಲ್ಪನೆಗಳನ್ನೂ ಅಭಿಪ್ರಾಯ ಪ್ರಪಂಚವನ್ನೂ ಹೊಕ್ಕು ತೂಗಿ ಪರಿಶೀಲಿಸಿ ತೀರ್ಮಾನಗಳಿಗೆ ಬರಬಹುದೊ ಅಷ್ಟೂ ಜಾಗೃತವಾಗಿ ಇವೆ. ಇವನ್ನೆಲ್ಲ ಆವರಿಸಿಕೊಂಡು ಅವರ ಮಾನವತೆ ಹೃದಯಜ್ಞತೆ ಒಂದು ಲಘು ಹಾಸ್ಯ ಭಾವ, ಉಲ್ಲಾಸ, ಅವರ ಎಡೆಗೆ ಹೋದವರಿಗೆಲ್ಲಾ ಎಂದಿನಂತೆಯೇ ದೊರೆಯುತ್ತಿವೆ. ಅದನ್ನು ಅರಿತು ಹತ್ತಿರದ ಜನಕ್ಕೆ ಎಷ್ಟು ಶಕ್ತಿ ಸಂತೋಷಗಳನ್ನು ತಂದುಕೊಡುತ್ತದೆಯೊ ಅಷ್ಟು ಮಟ್ಟಿಗೆ ರಾಷ್ಟ್ರಕತನದ ಹೊಣೆಗಾರಿಕೆಯನ್ನು ನಿರ್ವಹಿಸುವ, ಈ ದೇಶದ ಹಿತವನ್ನು ಸಾಧಿಸುವ ಕ್ರಿಯಾಕಲಾಪ ಅವರವು. ಆ ಸಂಬಂಧದ ಆಲೋಚನೆಗಳು ಶುದ್ಧವಾಗುತ್ತವೆ. ಅದು ನಂದಾದೀಪವಾಗಲೆಂದು ಹಾರೈಸಿ ಈಗ ಪುನಃ ಅದಕ್ಕೆ ಕಾಣಿಕೆ ಅರ್ಪಿಸುತ್ತಿದ್ದೇನೆ.

ಸೌಹಾರ್ದದಿಂದ ಇದನ್ನು ಓದುವ ಕನ್ನಡದ ಅಭಿಮಾನಿಗಳಿಗೆ ನನ್ನ ವಂದನೆಗಳು. ಮೊದಲಿಂದ ಅನೇಕ ಮಂದಿ ಸ್ನೇಹಿತರನ್ನು ನನಗೆ ದೊರಕಿಸಿಕೊಟ್ಟ ಪುಸ್ತಕ ಇದು. ಆ ಸ್ನೇಹವನ್ನು ನೆನಸಿಕೊಂಡು ಅದಕ್ಕೆ ಧನ್ಯವಾದಗಳನ್ನರ್ಪಿಸುತ್ತ ಇದನ್ನು ಮತ್ತೊಂದು ಬಾರಿ ಹೊರತರುತ್ತಿದ್ದೇನೆ. ಇದನ್ನು ಅಚ್ಚುಮಾಡಿಕೊಟ್ಟಿರುವ ಜಿ. ಎಚ್. ಕೃಷ್ಣಮೂರ್ತಿ ಅವರಿಗೆ ವಂದನೆಗಳು.

ಬೆಂಗಳೂರು ವಿ.ಸೀ.

ಫೆಬ್ರವರಿ ೧೪, ೧೯೭೪

# ಬೆಳುದಿಂಗಳು

## I

ಇಪ್ಪತ್ತೈದು ಮೂವತ್ತು ವರ್ಷಗಳಿಗೆ ಹಿಂದೆ ಬರೆದ ಮೂರು ಹರಟೆಗಳಿಗೆ ಇನ್ನು ಕೆಲವನ್ನು ಸೇರಿಸಿ ಲಘುನ್ಯಾಸಗಳ ಈ ಸಣ್ಣ ಪುಸ್ತಕವನ್ನು ಈಗ ಪ್ರಕಟಿಸಲಾಗಿದೆ.

ಇಂಗ್ಲಿಷಿನಲ್ಲಿ ಎಸ್ಸೆ ಎಂಬ ಜಾತಿಯ ಬರೆಹದಲ್ಲಿ ಹಲವು ಪ್ರಕಾರಗಳಿವೆ. ಬಹು ಸಣ್ಣ ಚಿತ್ರಗಳಿಂದ, ಸಡಿಲ ಬಂಧಗಳಿಂದ ಹಿಡಿದು ವಿಮರ್ಶಾಪೂರ್ವಕವಾದ ಅಥವಾ ತತ್ವಜ್ಞಾನದ ವಿವೇಚನೆ ವಿಶದತೆಗಳಿಗೆ ಒದಗುವವುಗಳವರೆಗೂ ಎಸ್ಸೆಯ ವ್ಯಾಪ್ತಿ ಇದೆ. ಇಲ್ಲಿನವು, ಸುಮಾರು ಒಂದನ್ನು ಬಿಟ್ಟು- ಅದು ಆಕಾಶವಾಣಿಗಾಗಿ ಬರೆದುದು- ಹಗುರವಾಗಿ ಬರೆದವು. ಹರಟೆ ಎಂಬ ಜಾತಿಯ ಬಂಧ ಇದು. ಬಂಧಕ್ಕಿಂತ ಅನಿರ್ಬಂಧ ಇಲ್ಲಿ ಹೆಚ್ಚಾಗಿ ಕಾಣುವ ಲಕ್ಷಣ. ಮನಸ್ಸು ಯಾವ ರೀತಿಯೊ ಒಂದು ವಿಷಯದಲ್ಲಿ ಆಡಲು ತೊಡಗಿ ಎಲ್ಲೆಲ್ಲಿಗೊ ಇಚ್ಛೆ ಬಂದಂತೆ ನಡೆಯುವುದು ಇಲ್ಲಿನ ರೀತಿ. ಕ್ರಮ ಇದೇ ಎಂಬುದಿಲ್ಲ. ಕ್ರಮವೇ ಬಹುತರ ನಾಸ್ತಿಯಾಗಿರಬಲ್ಲದು. ಹೇಗೋ ಏನೊ ಒಂದು ಸಂಗತಿಯಿಂದ ಇನ್ನೊಂದಕ್ಕೆ ದಾಂಗುಡಿ ಹರಿವ ಪ್ರವೃತ್ತಿ ಈ ಬಗೆಯ ಬರೆಹದಲ್ಲಿ ಹಬ್ಬುವುದು ವಾಡಿಕೆ. ಎದುರಿನ ಪ್ರಪಂಚದಿಂದ ಕಲ್ಪನೆಗೆ, ಇಂದಿನದರಿಂದ ಎಂದಿನದೊ ಘಟನೆಗೆ, ಸಾಮಾನ್ಯದಿಂದ ವಿಶೇಷಕ್ಕೆ, ಚಪಲತೆಯಿಂದ ಗಂಭೀರತೆಗೆ ದಾಟಿ ಹೋಗುವುದೂ ಅಲ್ಲಿ ಇಲ್ಲಿ ಲೋಕಜೀವನಕ್ಕೂ ನಮ್ಮ ಅನುಭವಕ್ಕೂ ಸಂಬಂಧಿಸಿದ ಸಂಗತಿಗಳನ್ನು ಇವುಗಳೊಡನೆ ಬೆರಸುವುದೂ ಭ್ರಮಿಸುವುದೂ ಇಲ್ಲಿ ಕಾಣುವ, ಬಲಿವ ನೋಟ. ಪೂರ್ತಿ ಅಸಂಬದ್ಧವಾಗುವಂತಿರುವಾಗ ಹರಟೆಯ ಎಳೆಯನ್ನು ಹಿಡಿವ, ಕಾಣುವ, ನಡಸುವ ಇಲ್ಲಿನ ರೀತಿ ಕೆಲವರಿಗೆ ರುಚಿಸಬಹುದು. ಎಲ್ಲರಿಗೂ ಎಲ್ಲ ರುಚಿಸೀತೆಂದು ಹೇಳಬಲ್ಲೆ ಹೇಗೆ ? ಎಷ್ಟು ಒಪ್ಪ, ನುಣುಪು, ಸಮತ, ಮನೋವಿಲಾಸದ ಸ್ನಿಗ್ಧತೆ ಇದ್ದರೆ ಅಷ್ಟೂ ಇಂತಹ ಬರೆಹಗಳಲ್ಲಿ ಸೊಗಸಬಲ್ಲವು. ಆ ಸ್ನಿಗ್ಧತೆ ಸಾಕಾದಷ್ಟು ಸದ್ಯದಲ್ಲಿ ಇಲ್ಲದಿರಬಹುದಾದಾಗ್ಯೂ ಒಂದೆರಡರಲ್ಲಿಯಾದರೂ ದೊರಕುವುದಾದರೆ ನಾನು ಧನ್ಯ.

ಮೊದಲು ಬರೆದ ಮೂರು ಬಂಧಗಳಿಗೆ ಗೆಳೆಯರು ತುಂಬಾ ಪ್ರೀತಿ ತೋರಿಸಿ ದ್ದಾರೆ. ಅದರ ನೆನಪಿಗಾಗಿ ಈ ಹೊಸವನ್ನು ಅವರಿಗೆ ಕಾಣಿಕೆಯಾಗಿ ಅರ್ಪಿಸುತ್ತಿದ್ದೇನೆ. ಮುಂದಿನದು ಓದುಗರ ಮಡಿಲಿಗೆ ಬಿದ್ದ ಪುಣ್ಯ, ಭಾರ.

ನನ್ನ ಕೈ ಬರೆಹದ ಮತ್ತು ಕರಡು ತಿದ್ದುವ ಎಲ್ಲ ಕಾಟವನ್ನೂ ಈ ಬರವಣಿಗೆಯ ತಿಕ್ಕಲುತನವನ್ನೂ ವಿರಾಮಚಿಹ್ನೆಗಳ ಅಶಿಸ್ತನ್ನೂ ಸಹಿಸಿಕೊಂಡು ಅತ್ಯಲ್ಪ ಕಾಲಾವಕಾಶ ದಲ್ಲಿ ಇದನ್ನು ಅಚ್ಚುಮಾಡಿಕೊಟ್ಟ ಉಪಕಾರ ಗೆ. ಶ್ರೀ ಎನ್. ಡಿ. ಶಂಕರ್ ಅವರದು. ಅವರಿಗೆ ನಾನು ತುಂಬಾ ಕೃತಜ್ಞನಾಗಿದ್ದೇನೆ.

ಬೆಂಗಳೂರು ವಿ.ಸೀ.

ಜನವರಿ ೧೨, ೧೯೫೫

## II

ಮೈಸೂರು ವಿಶ್ವವಿದ್ಯಾನಿಲಯದವರು ಕೃಪೆಮಾಡಿ ಇದನ್ನು ಪಠ್ಯಪುಸ್ತಕ ಮಾಡಿದ್ದ ರಿಂದ ಇದಕ್ಕೆ ಎರಡನೆಯ ಆವೃತ್ತಿ ಬಂದಿದೆ. ಈ ಅವಕಾಶದಿಂದಾಗಿ ಮೊದಲ ಆವೃತ್ತಿಯನ್ನು ಅಲ್ಲಲ್ಲಿ ತಿದ್ದಿದೆ. ಒಂದು ಹರಟೆಯನ್ನು ಹೆಚ್ಚಾಗಿ ಸೇರಿಸಿದೆ. ಇಲ್ಲಿರುವ ತಿದ್ದುಪಾಡುಗಳೊಡನೆ ಹಿಂದಿನವನ್ನು ಓದುಗರು ದಯಮಾಡಿ ಓದಿಕೊಳ್ಳಬೇಕು.

ಹರಟೆಯಲ್ಲಿ ಜನರಾಡುವ ಮಾತಿನ ಧಾರಾಳವನ್ನು ಬಳಸುವುದರಿಂದ ಶುದ್ಧ, ಅಭಿಜಾತ ಪ್ರಯೋಗಗಳು ಮಾತ್ರವೇ ಎಣಿಕೆಗೆ ಬಾರವು. ಪರದೇಶಿ ಪದಗಳ ಭ್ರಷ್ಟ ರೂಪಗಳೂ-ತದ್ಭವ ಎನ್ನೋಣವೆ?–ಇಲ್ಲಿ ಕಂಡಾವು. ಶಿಥಿಲ ಸಂಧಿ, ಸಮಾಸ, ಲಘು ಗುರ್ವಕ್ಷರ ವಿಪರ್ಯಾಸ ಕಂಡಾವು. ವಾಡಿಕೆಯಲ್ಲಿ ಅವು ಕಾಣುವವಾದ್ದರಿಂದ ಅವನ್ನು ಹಾಗೆಯೇ ಉಳಿಸಿದೆ. ವಿರಾಮ ಚಿಹ್ನೆ ಪಾಶ್ಚಿಮಾತ್ಯರಿಂದ ನಮಗೆ ದತ್ತ ಸಂಪತ್ತು. ಲಂಗುಲಗಾಮುಗಳಿಲ್ಲದಂತೆ ಕಾಣುವ ನನ್ನಂಥವನ ಬರವಣಿಗೆಗೆ ದೊಡ್ಡ ನೆರವು. ಅಲ್ಲಿಗೂ ಕೆಲವು ಅರ್ಥ, ಭಾವ, ಕಾಕುಗಳನ್ನು ಸೂಚಿಸುವ, ವಿರಾಮದ ಅಲ್ಪತೆಯನ್ನೊ ಅನಲ್ಪತೆಯನ್ನೊ ಕಾಣಿಸುವ ಸೌಲಭ್ಯ ಸಾಲದು. ದೀರ್ಘಗಳು ಸ್ವಲ್ಪ ಹೆಚ್ಚೇ ಇವೆ. ಆದರೆ ಅವುಗಳಲ್ಲಿಯೂ ಪ್ರಯೋಗದ ಒಂದು ಕ್ರಮ ಕಂಡೀತು : ಪ್ರಶ್ನೆ, ಸಂದೇಹಗಳಲ್ಲಿ ಹ್ರಸ್ವ ಎ, ಒ ಗಳನ್ನೂ ಆಶ್ಚರ್ಯ, ಅವಧಾರಣೆ, ಸ್ಥಾಪನೆಗಳಲ್ಲಿ ದೀರ್ಘ ಏ, ಓ ಗಳನ್ನೂ ಬಳಸಲು ಯತ್ನಿಸಿದೆ. ಒಂದೇ ಮಾತು ಜೊತೆಯಾಗಿ ಬರುವಾಗ, ಮೊದಲಿನದು ದೀರ್ಘಾಂತ, ಎರಡನೆಯದು ಹ್ರಸ್ವಾಂತವಾಗಿ ಬರೆದಿದೆ. ಬೇಕಾದವರು ಒಪ್ಪಬಹುದು; ಬೇಡದವರು ಕ್ಷಮಿಸಬೇಕು.

ಮೈಸೂರು ರುಮಾಲು ಇಂದು ಸುಮಾರು ಮಾಯವಾಗಿದೆಯಾಗಿ ಆ ವಿಷಯವೇ ಕಾಲಹತ ಆಗುತ್ತಿರುವಂತಿದೆ. –dated. ಕಾಲ, ಸಾಮಾನು ಬಹುತರ ಇಲ್ಲವಾಗಿರುವಾಗ ಆ ಸಂಬಂಧದ ಉಕ್ತಿ ನಿದರ್ಶನಗಳೆಲ್ಲ ಅರ್ಥಶೂನ್ಯ, ಅವಾಸ್ತವ ಆದೀತು. ಆದರೆ ಹೊಸ ಕಾಲದ ಕನ್ನಡಗದ್ಯ ಕೃತಿಗಳ ಮೊದಲಲ್ಲಿ ನಾನು ಬರೆದದ್ದು ಅದು ; ನನ್ನ ಗದ್ಯತೆಯ ಬಹು ಮೊದಲ ಪ್ರಕಾಶನ. ಆದ್ದರಿಂದ ಅದನ್ನು ಉಳಿಸಿದ್ದೇನೆ. ಅದಕ್ಕೆ ಸ್ವಚಾರಿತ್ರಕ ಪ್ರಯೋಜನವಿದೆ. ಹಾಗೆಯೇ ಇನ್ನೊಂದೆರಡು ಕಡೆ- 'ಮಳೆ',

'ಕಾಯಿಲೆಗಳ'ಲ್ಲಿ -ಅವೂ ಹಿಂದಿನವು-ಅಲ್ಲಿ, ಇಲ್ಲಿ ಕಾಲವಳಿಸಿದ ಚಿತ್ರಗಳಿವೆ. ಕಾಲದ ರೇಖೆ ಜೀವಿಗಳ ಅಂಗಾಂಗಗಳಲ್ಲಿ ಎಂದೂ ಒತ್ತಿ ಕಾಣುವಾಗ ಬಾಳಿನ ಪ್ರಕಾರಗಳ ಮೇಲೆ ತನ್ನ ಮುದ್ರೆ ಒತ್ತದೇನು ?

'ಜೀವನ ದರ್ಶನ' ಉಳಿದ ಹರಟೆಗಳಂತಲ್ಲ. ಆದರೂ ಅಲ್ಲಿಯೂ ನನ್ನ ಮನಸ್ಸಿನ ಒಂದು ನಿವೇದನೆಯಿದೆಯಾದ್ದರಿಂದ ಅದನ್ನು ಈ ಸಂಕಲನಕ್ಕೆ ಸೇರಿಸಿತು. ಅದನ್ನು ಸೇರಿಸಿರುವುದರ ಔಚಿತ್ಯವನ್ನು ಕುರಿತು ಪ್ರಶ್ನೆ ಕೇಳಬಹುದು ಪರೀಕ್ಷೆಗಳಲ್ಲಿ. ಏಕಸೂತ್ರತೆ, ಸಾಂಗತ್ಯಗಳಿಗಿಂತ ಒಂದು ಬಗೆಯ ಮನಸ್ಸಿನ ಓಟ, ಪ್ರವೃತ್ತಿ ಹರಟೆಗಳಲ್ಲಿ ಜೀವಲಕ್ಷಣ. ಸೂತ್ರವಲ್ಲ ; ಮನೋಧರ್ಮ. ಅದು ಒಂದು ವಾಣಿ : Voice.

ಗದ್ಯಗತಿಯನ್ನು ಬಗೆಬಗೆಯ ಲೌಕಿಕ, ಭಾವಾರ್ಥಪ್ರಕಾಶನದ ಅಗತ್ಯಗಳಿಗೆ ಹೊಂದಿಸಬೇಕೆಂದಿರುವವರು ಇಲ್ಲಿ ಒಂದೆರಡು ಪ್ರಕಾರಗಳನ್ನು ಕಾಣಬಹುದು ; ಇವೆಲ್ಲ ಪರೀಕ್ಷಾ ಪ್ರಯೋಗಗಳು. ನಮ್ಮ ಕಡೆಯ ಆಡುಮಾತಿನಲ್ಲಿ 'ಕೊಂಡು' 'ಬಿಟ್ಟು' 'ಹೋಗು' ಎಂಬ ತುಕಡಿಗಳು ಹೆಚ್ಚಾಗಿ ಸೇರುತ್ತವೆ. ಅವನ್ನು ಸಾಕಷ್ಟು ಕಡಮೆ ಮಾಡಿದ್ದೇನೆಯಾದರೂ ತುಂಗಭದ್ರೆಯಾಚೆಯ ಮತ್ತು ಕಡಲಕರೆಯ ಗೆಳೆಯರಿಗೆ ಅವನ್ನು ಕಂಡು ತುಂಬಾ ಬೇಸರ ಉಂಟಾದೀತು. ಇವನ್ನು ಓದಿ ಯಾರಿಗಾದರೂ ಸಂತೋಷವಾದರೆ ನಾನು ಕೃತಾರ್ಥ.

ಬೆಂಗಳೂರು ವಿ.ಸೀ.
ಜುಲೈ ೭, ೧೯೬೦

## III

ಸುಮಾರು ೧೯೨೬ರಲ್ಲಿ ಬರೆದ ಒಂದು - 'ಮೈಸೂರು ರುಮಾಲು' ಹಿಡಿದು ೧೯೬೮ರ ವರೆಗೂ ಒಡ್ಡಿದ ಕಾಲದಲ್ಲಿ ಬರೆದ ಹತ್ತು ಬರಹಗಳನ್ನು ಇಲ್ಲಿ ಪ್ರಕಟಿಸಿತ್ತು. ಈಗ ಇದಕ್ಕೆ ಇನ್ನೊಂದು ಜನ್ಮ ಬರಲಿದೆ ; ಪಠ್ಯವಾಗಿ ಮೈಸೂರು ವಿಶ್ವವಿದ್ಯಾನಿಲಯದವರು ಕಾಮರ್ಸ್ II ಡಿಗ್ರಿ ತರಗತಿಗಳಿಗೆ ಇಟ್ಟುದುದರಿಂದ. ಹರಟೆ ಅಥವಾ ಲಘು ಪ್ರಬಂಧಗಳ ಸ್ವರೂಪವನ್ನು ಕುರಿತು ಹಿಂದೆಯೇ ಒಂದೆರಡು ಮಾತು ಹೇಳಿದ್ದೇನೆ. ಅದನ್ನು ವಿಸ್ತರಿಸಿ ಪಾಠ ಹೇಳುವ, ಹೇಳಬೇಕಾಗುವ, ಹೇಳಬೇಕೆಂದು ಇಚ್ಛೆ ಇರುವ, ಉಪಾಧ್ಯಾಯರು ಬೇಕಾದಷ್ಟು ಹೇಳಬಹುದು. ಅಡಿಗೆ ಮಾಡುವುದು ಮಾಡುವವನ, ಆತಿಥೇಯನ ಕೆಲಸ. ಯಾರೂ ಕೆಡಿಸಬೇಕೆಂದು ಮಾಡುವುದಿಲ್ಲ. ಊಟ ಮಾಡುವುದು, ರುಚಿ ಅರಿತು ಅದರಲ್ಲಿ ಸಂತೋಷವಾದರೆ ಸಂತೋಷಪಡುವುದು ಊಟ ಮಾಡುವವನ ಕೆಲಸ; ಸಂತೋಷ. ಪಠ್ಯ ಪುಸ್ತಕಗಳೆಂಬವು ರುಚಿ ನೋಡುವುದಕ್ಕಾಗಿ ನೇಮಿತವಾಗುವುದಿಲ್ಲ. ಷೇಕ್ಸ್‌ಪಿಯರ್, ಕಾಳಿದಾಸ, ವಾಲ್ಮೀಕಿ

ಪಠ್ಯಪುಸ್ತಕಗಳಾದರೂ ಅವನ್ನು ಕುರಿತು ಪರೀಕ್ಷೆಯ ಪ್ರಶ್ನೆಗಳನ್ನು ಕೇಳುವುದು, ಅವಕ್ಕೆ ಉತ್ತರ ಬರೆಯುವುದು ಅಷ್ಟೇನೂ ಹಾರ್ದವಾದ ಸಂಗತಿಗಳಲ್ಲ. ಬಹುಶಃ ಅಂಥ ಎಂಥವನ್ನು ಕುರಿತೂ ಬೇಸರವೇ; ಅಸಹನೆಯೇ. ಹೇಗಿದ್ದರೂ ಇಂಥುದರಲ್ಲಿ ಪಾಠ ಹೇಳುವುದೇನಿದೆ ಎನ್ನಬಹುದು. ಇವನ್ನು 'ಸೀರಿಯಸ್'– ಇದಕ್ಕೆ ಸರಿಯಾದ ಕನ್ನಡ ಮಾತು ನನಗೆ ಗೊತ್ತಿಲ್ಲ–ಆಗಿ ಪಾಠ ಹೇಳುವುದು ಕಷ್ಟ. ಅಗತ್ಯವಿಲ್ಲ ಎಂದು ಇಂಥವನ್ನೂ ಸಣ್ಣ ಕತೆಗಳನ್ನೂ ಓಸರಿಸುವುದು ಸಾಮಾನ್ಯ. ಅದನ್ನು ಕುರಿತು ಮಾತನಾಡುವುದಿಲ್ಲ. ನಾನೇ ಉಪಾಧ್ಯಾಯನಾಗಿ ಆ ಪ್ರಪಂಚ ನಾನು ಬಲ್ಲದ್ದು.

ಒಂದೆರಡು ಬರಹಗಳ ವಿಷಯವನ್ನು ಕುರಿತು ಹಿಂದೆ ಬರೆದಿದ್ದೇನೆ. ಇಷ್ಟು ದಿನಗಳಾದ ಮೇಲೆ ನನ್ನ ಮನಸ್ಸಿನ ರೀತಿಯೇ ಬೇರೆಯಾಗಿದೆ. ಶೈಲಿಯಲ್ಲೂ ಎಷ್ಟೋ. ಕಲ್ಪನೆಗಳೊಂದೇ ಅಲ್ಲದೆ ಔಚಿತ್ಯ, ವಾಡಿಕೆ ಬೇರೆಯಾಗಿದೆ. ಹಲವು ಶಬ್ದರೂಪಗಳೂ ಈಗ ಬೇರೆಯಾಗಿದ್ದರೆ ಚೆನ್ನಾಗಿತ್ತು ಎನ್ನಿಸುತ್ತದೆ. ಅದನ್ನೆಲ್ಲ ಮಾರ್ಪಡಿಸುವುದು ಅವಸರದಲ್ಲಿ ಶಕ್ಯವಿಲ್ಲವಾಗಿ ಇದ್ದುದನ್ನು ಇದ್ದ ಹಾಗೇ ಬಹುಮಟ್ಟಿಗೆ ಬಿಟ್ಟಿದೆ. 'ಮೈಸೂರು ರುಮಾಲಿ'ನ ಕಡೆಯ ಪ್ಯಾರಾ ಬಿಟ್ಟಿದೆ. ಹಿಂದೆ ಹೇಳಿದ ಮಾತುಗಳ ಜೊತೆಗೆ ಇಲ್ಲಿ ಅತಿಯಾಗಿ 'ಗಳು' ಇವೆ. ಒಂದಾದ ಮೇಲೆ ಇನ್ನೊಂದಕ್ಕೆ ಅರ್ಧವಿರಾಮ ಹಾಕಿ ದೀರ್ಘಗಳಿದ್ದಾಗ ಕಡೆಯದನ್ನು ಮಾತ್ರ ದೀರ್ಘವಾಗಿ ಓದಿಕೊಂಡರೆ ಮೇಲಾದೀತು. ಓದುವ ಒಂದು ಸಂದರ್ಭದಲ್ಲಿ ಉದಾ. ಪುಟ ೧೩, ೪–೫ ಸಾಲುಗಳು ಇಂಥಲ್ಲಿ ಕಡೆಯದನ್ನೂ ದೀರ್ಘ ಮಾಡಿಕೊಳ್ಳಬಹುದು. ಹ್ರಸ್ವದಲ್ಲಿ ಮುಗಿಸಿದರಾಯಿತು. ಇನ್ನೊಂದು ಸಂಗತಿ : 'ಉದು' ಎಂಬುದಕ್ಕಿಂತ 'ತ್ತದೆ' ('ಉ' ತ್ತದೆ) ಹೆಚ್ಚು ಜೀವವುಳ್ಳದ್ದಾಗಿ ಕಡಮೆ ಪುಸ್ತಕದ ರೂಢಿಯಾಗಿ ಆದೀತು. ಎಲ್ಲ ಕಡೆಯೂ ಅವನ್ನು ಮಾರ್ಪಡಿಸುವುದು ಅಗತ್ಯವಿಲ್ಲವಾದರೂ ಕೆಲವಲ್ಲಿ ವಾಕ್ಯ ಮುಗಿಯುವಾಗ 'ಉ-ತ್ತದೆ' ಹಾಕಿ ಓದಿದರೆ ಅರ್ಥಕ್ಕೆ ಜೀವಕಳೆ ಬಂದೀತೇನೊ. 'ಜನರುಗಳು', 'ಅವರುಗಳು' ಇತ್ಯಾದಿ ಅನ್ಯಾಯ. 'ಜನ' ಬಹುವಚನ; ಸಾಕು. 'ಜನರುಗಳು' ಏಕೆ? 'ಅ/ಇವರುಗಳು' ಏಕೆ ? ಹಾಗೇ, 'ಬೆಂಗಳೂರಿನಿಂದ' ಬೇಕಾಗಿಲ್ಲ; 'ಬೆಂಗಳೂರಿಂದ' ಸಾಕು. ಇನ್ನೂ ನಾನು 'ಮತ್ತು' ಗೆ ಅಥವಾ ದೀರ್ಘಕ್ಕೆ ಉಳಿದಿದ್ದೇನೆ. ಈಚೆಗೆ ಯಾವಯಾವವೊ ನನಗೆ ಬಳಕೆಯಿಲ್ಲದ ಅರ್ಥವಾಗದ ಮಾತು ಬಂದಿವೆ. ಅವಕ್ಕೆ ಒಂದು ರಂಗಿದೆ; ಆದರೆ ಇಲ್ಲಿ ಬಳಕೆಗೆ ತೆಗೆದುಕೊಂಡಿಲ್ಲ. ನಾನು ಹಿಂದಿನ ಕಾಲದವನಾಗಿ ಕೆಲವು ಪಕ್ಷಪಾತಗಳು ಉಳಿದಿವೆ.

ಇನ್ನೊಂದು ಮಾತನ್ನು ಹೇಳಿ ಮುಗಿಸುತ್ತೇನೆ. ಭಾವಗೀತೆ, ಹರಟೆ ಇವನ್ನಾದರೂ ಸ್ವಲ್ಪ ಗಟ್ಟಿಯಾಗಿ ಹೇಳಿಕೊಂಡೇ, ತುಟಿಯಿಂದ ನುಡಿಯುವಂತೆ, ಕೊರಲು ಕಿವಿಗಳಿಗೆ ಹಿತವೆನಿಸುವಂತೆ ಇಲ್ಲಿನ ಅರ್ಧವಿರಾಮ, ಪೂರ್ಣವಿರಾಮಗಳನ್ನು ಅರ್ಥ ಖಂಡಗಳಾಗಿ ನುಡಿಯುವಂತೆ, ಓದಿದರೆ ಇಲ್ಲಿ ಇರಬಹುದಾದ ಜೀವಪ್ರಕಾಶನ ಇನ್ನು ಸ್ವಲ್ಪ ಮೇಲಾದೀತು. Silent, aloud, loud ಎನ್ನುವ ಮಾತುಗಳುಂಟು. ಎಂದರೆ,

ಕಣ್ಣೋದು, ಕಿವಿಗೆ ಓದು, ನುಡಿರಚನೆಗೆ ತಕ್ಕಂತೆ ಓದು ಎಂಬ ಸಂಗತಿಗಳುಂಟು. ನನ್ನದು ಸಾಮಾನ್ಯವಾಗಿ ಯಾವಾಗಲೂ ಆಡುವ ಮಾತು; ನುಡಿವ ಮಾತು. ಬರೆದದ್ದಲ್ಲ; ಓದಿದ್ದಲ್ಲ . ಸಾಹಿತ್ಯವೆಂದು ಬಯಸಿದ್ದಲ್ಲ ಒಂದು Voice ಎಂದು ಹೇಳಿದ್ದೇನೆ; ಇದು Spoken voice. ಈ ಮಾತುಗಳು spoken word ; written ಅಲ್ಲ; read ಅಲ್ಲ; recited ಅಲ್ಲ. ಈ ವಿವೇಚನೆಗಳನ್ನು ಮಾಡಿಕೊಳ್ಳಬೇಕು. ಈ ಇಂಗ್ಲಿಷ್ ಮಾತುಗಳನ್ನು ಹಾಕಿದ್ದಕ್ಕಾಗಿ ಅಚ್ಚ ಕನ್ನಡಿಗರು ಇಂದು ಕೋಪಿಸಿಯಾರು. ನಾನೂ ಅಂಥವನೇ. ಆದರೂ ಒಂದು ವಿವೇಚನೆಯನ್ನು ತೋರಿಸಲು ಮಾತ್ರ ಇವನ್ನು ಬಳಸಿದ್ದೇನೆ.

ಈ ಸಲ ಇದನ್ನು ತುಂಬ ಅವಸರದಲ್ಲಿ ಅಚ್ಚು ಮಾಡುತ್ತಿದೆ. ಇದಕ್ಕಾಗಿ ಪ್ರೊ. ಶಂಕರನಾರಾಯಣರಾಯರು, ಶ್ರೀ ಎಂ. ಸತ್ಯನಾರಾಯಣರಾಯರು ಮುತುವರ್ಜಿ ವಹಿಸಿ, ಇದನ್ನು ಅಚ್ಚು ಮಾಡಿಸುವ, ಕರಡು ತಿದ್ದುವ ಎಲ್ಲ ಕಾರ್ಯಗಳನ್ನೂ ನಿರ್ವಹಿಸಿದ್ದಾರೆ. ಪ್ರಕಟನೆಗೂ, ಈ ಕರಡು ತಿದ್ದುವುದಕ್ಕೂ ನಾನು ಅವರಿಗೆ ಕೃತಜ್ಞನಾಗಿದ್ದೇನೆ.

ಪುಟ ೩೭ರಲ್ಲಿ ಬಂದಿರುವ ನಾಲ್ಕನೆ ಸಾಲಿನ ಚರಣ ಶ್ರೀ ಬೇಂದ್ರೆಯವರದು.

ಬೆಂಗಳೂರು ಎ. ಸೀತಾರಾಮಯ್ಯ
ಜೂನ್ ೨೫, ೧೯೭೯

## ಸೀಕರಣೆ

ಇಲ್ಲಿನ ಪ್ರಬಂಧಗಳಲ್ಲಿ ಹಲವನ್ನು 'ಪ್ರಜಾಮತ'ದ ದೀಪಾವಳಿ ಸಂಚಿಕೆಗಾಗಿ ಬರೆದೆ. ಅದಕ್ಕೆ ಹ. ವೆಂ. ನಾಗರಾಜರಾಯರು ಕಾರಣ. 'ಕೋಳಿ'ಯನ್ನು ಮನೋಹರ ಗ್ರಂಥಮಾಲೆಯ 'ನಡೆದು ಬಂದ ದಾರಿ'ಗಾಗಿ ಬರೆದೆ; 'ಹೊನ್ನು' 'ಯೋಜನಾ' ಪತ್ರಿಕೆಗಾಗಿ ಗೆಳೆಯ ಶಾರದಾ ಪ್ರಸಾದರು ಬರಸಿದ ಇಂಗ್ಲಿಷ್ ಲೇಖನದ ಕನ್ನಡ ರೂಪಾಂತರ. 'ನಮ್ಮ ಅಜ್ಜಿಯ ಅಡಿಗೆ' ಪ್ರಬುದ್ಧ ಕರ್ನಾಟಕದ ಹೊನ್ನ ಸಂಪುಟಕ್ಕೆ ಬರೆದದ್ದು. ಒಂದೆರಡು ಯಾವುದೊ ಕೆರಳಿಕೆಯಿಂದ ಆತ್ಮತೃಪ್ತಿಗಾಗಿ ಸನ್ನಿವೇಶದ ಕಷಾಯವನ್ನು ಹೊರಗೆ ಹಾಕಲು ಬರೆದವು. ಅಂತೂ ಇಂತೂ ಇವು ಸೀಕರಣೆಯಾಗ ಬಯಸಿವೆ. ಅವು ಸಿಹಿಯೊ, ಕಹಿಯೊ, ಒಗರೊ, ಸಪ್ಪೆಯೊ, ಹುಳಿಯೊ, ಗಾಟೊ, – ಓದುಗರ ಕೈ ಸೇರುತ್ತಿವೆ ; ಯಾವುದಾದರೂ ಯಾರಿಗಾದರೂ ರುಚಿಸಿದರೆ ಸಂತೋಷ.

ನಾನು ಹಳೆಯ ಕಾಲದ ಮನುಷ್ಯ. ಈ ಕಾಲದ ಯಾವ ಹೊಸ ಪ್ರಜ್ಞೆಗಳೂ ವಿವೇಕವೂ ಬೆಳೆಯಲಿಲ್ಲವಾಗಿ ಅವನ್ನು ಮೆರಸುವ ಶಕ್ತಿ ಅವಕಾಶವಿಲ್ಲ. ಮುದಿ ಗಿಳಿ 'ರಾಮ್ ರಾಮ್' ಎಂಬುದನ್ನು ಕಲಿಯಲಾರದೆನ್ನುತ್ತಾರೆ. ಎಂದಿನಂತೆ ನನ್ನ ಮನಸ್ಸು ನಡಸಿದ ಹಾಗೆ, ವಿಷಯವನ್ನು ರೂಪಿಸಿದ್ದೇನೆ. ಭಾವಗೀತೆ, ಸಣ್ಣ ಕಥೆ, ಲಘು ಪ್ರಬಂಧ

ಇವುಗಳದು ಜ್ಞಾತಿಲೋಕ ; ಜಾಯಮಾನದಲ್ಲಿ ಇವಕ್ಕೆ ಸಮಾನತೆ ಇರುತ್ತದೆ. ಇಲ್ಲಿ ಇರಬಹುದಾದ ಏಕತೆ ಆವರಣಕ್ಕೊ ಆಯಾ ಸಮಯದ ಮನಸ್ಸಿನ ಆಟಕ್ಕೊ ಮಾತ್ರ ತುಯ್ಯುತ್ತದೆ. '**ಬೆಳುದಿಂಗಳ**'ಲ್ಲಿ ಅಚ್ಚಾದ ಲೇಖನಗಳಿಗೆ ಕೆಲವರು ಒಲಿದರು; ಇವಕ್ಕೂ ಒಲಿದರೆ ಸಂತೋಷ. ನಾನು ಬಲ್ಲಂತೆ, ನನ್ನ ಮನಸ್ಸು ಲೇಖನಿ ನಡಸಿದಂತೆ ಮಾತ್ರ ನಾನು ಏನಾದರೂ ಕಾಣಿಸಿಯೇನು. ಇಲ್ಲಿನ ಗದ್ಯದಲ್ಲಿ ಓದುಗಾರಿಕೆ ವಿಚಿತ್ರವಾಗುತ್ತದೆ ಎಂಬವರಿದ್ದಾರೆ. ಕೆಲವೇಳೆ ವಿರಾಮ ಚಿಹ್ನೆಗಳೂ ಉಸಿರ ಓಟವೂ ಅರ್ಥದ ರಚನಾ ವಿನ್ಯಾಸವೂ ವಿಲಕ್ಷಣವಾಗಿರಬಲ್ಲದು. ನಾವು ಬರೆಯತೊಡಗಿದ ಕಾಲದಲ್ಲಿ ೬–೮ ಬಗೆಯಲ್ಲಿ ಮಾತ್ರ ವಾಕ್ಯಗಳು ತೊಡಗುತ್ತಿದ್ದವು; ಮುಗಿಯುತ್ತಿದ್ದವು. ಈಗಿನ ವೈಖರಿ ಬೀದಿವರಿಯುತ್ತಿವೆ. ಆದರೆ ಯಾವ ಲೀಲೆಯೂ ಶಿವಲೀಲೆಯೇ ಅಲ್ಲವೆ ?

ಬಹುಮಟ್ಟಿಗೆ ಸಾಹಿತ್ಯವೆಂಬುದರಲ್ಲಿ ಕಾಣುವುದು ಸಾಹಿತಿಯ ಜೀವಗುಣ, ನೋಟ, ನಿಲವು, ಉಸಿರು. ನನಗೆ ಮೆಚ್ಚುವ ಮಾತು –'ವಾಣಿ'; the 'voice'–ದನಿ ಎಂಬುದು, – ಖಚಿತವಾಗಿ ಯಾರೊ ಒಬ್ಬರ ದನಿ–ವಾಣಿ. ಇಲ್ಲಿ ತಕ್ಕ ಮಟ್ಟಿಗಾದರೂ ವಿಶಿಷ್ಟವಾಗಿ ಅಂಥ ಒಂದು ವಾಣಿ ಹೊಮ್ಮಿದರೆ ಅದು ನಾನು. ಉಳಿದುದು ಓದುಗರಿಗೆ ಸೇರಿದ ಸಂಗತಿ.

ಇವುಗಳನ್ನು ಮೊದಲಬಾರಿಗೆ ಅಚ್ಚು ಮಾಡಿದ, ಮಾಡಿಸಿದ ಗೆಳೆಯರಿಗೂ, ಹಸ್ತಪ್ರತಿಯ ಬಹುಭಾಗವನ್ನು ಬರೆದುಕೊಟ್ಟ ಗೆ. ಎಂ. ವಿ. ವೆಂಕಟೇಶಮೂರ್ತಿ ಮತ್ತು ಕೃಷ್ಣಮೂರ್ತಿ ಕಲ್ಲಾಪುರ ಅವರಿಗೂ ನನ್ನ ವಂದನೆಗಳು. ಪ್ರಕಟನೆಯ ಹೊಣೆ ಹೊತ್ತು ನಾನಾ ಬಗೆಯ ಆದರವನ್ನು ತೋರಿಸಿರುವ ಮೈಸೂರು ಗೀತಾ ಬುಕ್ ಹೌಸಿನ ಶ್ರೀ ಎಂ. ಸತ್ಯನಾರಾಯಣರಾವ್ ಸೋದರರಿಗೂ ನನ್ನ ಧನ್ಯವಾದಗಳು.

ಪುಷ್ಯ ೧೩; ಸೌಮ್ಯ
ಫೆಬ್ರುವರಿ ೪, ೧೯೭೦
ಬೆಂಗಳೂರು

ವಿ.ಸೀ.

# ಅನುಬಂಧ–1

## ಎ. ಸೀ. ಬದುಕಿನ ಮೈಲಿಗಲ್ಲುಗಳು

### (ಅ) ವ್ಯಕ್ತಿಜೀವನ

1899 – ಜನನ, ಬೂದಿಗೆರೆ (ಬೆಂಗಳೂರು ಜಿಲ್ಲೆ), ಅಕ್ಟೋಬರ್ 2.
ತಂದೆ : ಹುಲ್ಲೂರು ವೆಂಕಟರಾಮಯ್ಯ;
ತಾಯಿ : ಬೂದಿಗೆರೆ ದೊಡ್ಡ ವೆಂಕಮ್ಮ.

1906–7 – ಬೆಂಗಳೂರಿಗೆ ಬಂದದ್ದು : ವಿದ್ಯಾಭ್ಯಾಸಕ್ಕೆ.

1907–16 – ಪ್ರಾಥಮಿಕ/ಮಾಧ್ಯಮಿಕ ಶಿಕ್ಷಣ : ಬೆಂಗಳೂರು : ಚಾಮರಾಜಪೇಟೆ ಮುನಿಸಿಪಲ್ ಪ್ರಾಥಮಿಕ ಶಾಲೆ; ಎ. ವಿ. ಸ್ಕೂಲ್, ಕೋಟೆ; ಸರ್ಕಾರಿ ಪ್ರೌಢಶಾಲೆ – ಇತ್ಯಾದಿಯಲ್ಲಿ.

1917–20 – ಕಾಲೇಜ್ ಶಿಕ್ಷಣ : ಮೈಸೂರು ಮಹಾರಾಜಾ ಕಾಲೇಜಲ್ಲಿ. ಬಿ.ಎ. ಪದವಿ : ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ದರ್ಶನಗಳಲ್ಲಿ (ಸರ್ ಶೇಷಾದ್ರಿ ಬಂಗಾರ ಪದಕ – ಅರ್ಥಶಾಸ್ತ್ರದಲ್ಲಿ – 1920).

1920–22 – ಸ್ನಾತಕೋತ್ತರ ಶಿಕ್ಷಣ : ಮಹಾರಾಜಾ ಕಾಲೇಜ್, ಮೈಸೂರು. ಎಂ.ಎ. ಪದವಿ : ಅರ್ಥಶಾಸ್ತ್ರ-ರಾಜ್ಯಶಾಸ್ತ್ರಗಳಲ್ಲಿ.

1920–28 – ಉಪಾಧ್ಯಾಯರಾಗಿ ಕೆಲಸ ಮಾಡಿದ್ದು : ಶಾರದಾ ವಿಲಾಸ ಹೈಸ್ಕೂಲು, ಮೈಸೂರು. (1922ರಲ್ಲಿ 6–8 ತಿಂಗಳು ಕಾನೂನು (Law) ಕಲಿಯಲು ಬೊಂಬಾಯಿಗೆ ಹೋಗಿದ್ದು; ಅಲ್ಲಿ ಡೆಪ್ಯುಟಿ ಕಂಟ್ರೋಲರ್ ಆಫ್ ಕರೆನ್ಸಿ ಆಫೀಸಿನಲ್ಲಿ ಕೆಲಸ – ಬಿಟ್ಟು ಉಳಿದೆಲ್ಲ ಕಾಲ).

1925 – ಮದುವೆ : ವಿಜಯಪುರದಲ್ಲಿ; ಪತ್ನಿ ಶ್ರೀಮತಿ ಸರೋಜಮ್ಮ; ಮಕ್ಕಳು : 4 ಗಂಡು; 3 ಹೆಣ್ಣು.

1928–55 – ಕನ್ನಡ ಉಪನ್ಯಾಸಕರಾಗಿ ನೇಮಕ : ಮೈಸೂರು ವಿಶ್ವವಿದ್ಯಾನಿಲಯ; ಬೆಂಗಳೂರು ಮೈಸೂರುಗಳಲ್ಲಿ ಸೇವೆ. ನಿವೃತ್ತರಾದಾಗ ಉಪಪ್ರಾಧ್ಯಾಪಕರು (Asst. Professor) (1948 ರಿಂದ 50ರವರೆಗೆ ಎರಡು ವರ್ಷ ಚಿಕ್ಕಮಗಳೂರಿನ ಸರ್ಕಾರಿ ಕಾಲೇಜಲ್ಲಿ ಸೂಪರಿಂಟೆಂಡೆಂಟರಾಗಿದ್ದುದೂ ಇಲ್ಲಿ ಸೇರಿದೆ).

1956–58 – ಆಲ್ ಇಂಡಿಯ ರೇಡಿಯೊ : ಆಕಾಶವಾಣಿ – ಬೆಂಗಳೂರು ಕೇಂದ್ರದಲ್ಲಿ Producer, Spoken Word.

1964–68 – ಹೊನ್ನಾವರದ ಮಲೆನಾಡು ಪ್ರೋಗ್ರೆಸ್ಸಿವ್ ಎಜುಕೇಶನ್ ಸೊಸೈಟಿಯವರು ಆರಂಭಿಸಿದ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನ ಪ್ರಥಮ ಪ್ರಿನ್ಸಿಪಾಲರಾಗಿ ಕೆಲಸ ಮಾಡಿದ್ದು.

1974 – ಪತ್ನೀವಿಯೋಗ; ಲಂಡನ್ ಯಾತ್ರೆ; ಪಾರ್ಶ್ವವಾಯು ಪೀಡಿತರಾಗಿ ಹಿಂದಿರುಗಿದ್ದು.

1983 – ನಿಧನ, ಸೆಪ್ಟೆಂಬರ್ 4.

## (ಆ) ಸಾಹಿತ್ಯಕ ಜೀವನ

1923 – ಪ್ರಥಮ ಕವನ ಪ್ರಕಟಣೆ : ಪ್ರಬುದ್ಧ ಕರ್ಣಾಟಕ (ಸಂ. 5; ಸಂ.1 'ಒಲವು').

1927 – ಪ್ರಥಮ ಕೃತಿ ಪ್ರಕಟಣೆ : 'ಪಂಪಾಯಾತ್ರೆ' – ಪ್ರವಾಸ ಕಥನ.

1931 – ಅಧ್ಯಕ್ಷರು : ಕವಿ ಸಮ್ಮೇಳನ, ಕಾರವಾರ.

1934–42 – ಕೋಶಾಧಿಕಾರಿ, ಕ. ಸಾ. ಪ.; ಕಾವ್ಯಾವಲೋಕನಕಾರರು, ಮದರಾಸಿನ 'ಹಿಂದೂ' ಪತ್ರಿಕೆಗೆ.

1936 – ಅಧ್ಯಕ್ಷರು, ಕರ್ನಾಟಕ ವ್ಯಾಪಾರಿಗಳ ಸಮ್ಮೇಳನ, ಹಂಪೆ.

1939–42 – ಸಂಪಾದಕತ್ವ, 'ಕ. ಸಾ. ಪ. ಪತ್ರಿಕೆ,' ಬೆಂಗಳೂರು.

1943–48 – ಸಂಪಾದಕತ್ವ, 'ಪ್ರಬುದ್ಧ ಕರ್ಣಾಟಕ,' ಮೈಸೂರು.

1953 – ಅಧ್ಯಕ್ಷರು, ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ, ಕುಮಟಾ.

1954 – ಅಧ್ಯಕ್ಷರು, ಮುಂಬಯಿ ಪ್ರಾಂತ ಭಾಷಾ ಸಮ್ಮೇಳನ, ಗದಗ್.

1954–70 – ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯತ್ವ (ಕನ್ನಡ).

1955–56 – ಸಂಪಾದಕತ್ವ, 'ಸಾಹಿತ್ಯ ಪರಿಷತ್ ಪತ್ರಿಕೆ', 'ಕನ್ನಡ ನುಡಿ,' ಬೆಂಗಳೂರು.

1965–68 – ಭಾರತೀಯ ಜ್ಞಾನಪೀಠ ಪ್ರಶಸ್ತಿ ಸಲಹಾ ಮಂಡಲಿ ಸದಸ್ಯತ್ವ (ಕನ್ನಡ).

1970 – 'ಮಹನೀಯರು' ಗ್ರಂಥ ಬಿಡುಗಡೆ; ಸನ್ಮಾನ : ಪುಟ್ಟಣ್ಣಶೆಟ್ಟಿ ಪುರಭವನದಲ್ಲಿ, ಬೆಂಗಳೂರು.

– ಗಣ್ಯ ಸಾಹಿತಿ ಪ್ರಶಸ್ತಿ–ರಾಜ್ಯ ಸರ್ಕಾರದಿಂದ–(ಒಪ್ಪಿಕೊಳ್ಳಲಿಲ್ಲ.) 'ಮಹನೀಯರು' ಕೃತಿಗೆ ಪ್ರಶಸ್ತಿ.

– ಕೇರಳ ಸಾಹಿತ್ಯ ಪರಿಷತ್ತಿನ ರಜತೋತ್ಸವ ಸಮಾರಂಭದ ಉದ್ಘಾಟನೆ.

1971 – ಸಂಪಾದಕರು : 'ಕವಿ ಕಾವ್ಯ ಪರಂಪರೆ' ಸಾಹಿತ್ಯ ಮಾಲೆ, ಐಬಿಎಚ್ ಪ್ರಕಾಶನ, ಬೆಂಗಳೂರು.

1973 – ರಾಜ್ಯ ಸರ್ಕಾರದಿಂದ ಆಜೀವ ಗೌರವ ವೇತನ. ರಾಜ್ಯ ಸಾಹಿತ್ಯ ಅಕಾಡೆಮಿಯ ಕಾರ್ಯಕಾರಿ ಮಂಡಲಿಗೆ ಸದಸ್ಯರಾಗಿ ಸರ್ಕಾರದಿಂದ ಆಯ್ಕೆ; ಒಪ್ಪಿಕೊಳ್ಳಲಿಲ್ಲ.

– ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ : 'ಅರಲು–ಬರಲು' ಕವನ ಸಂಕಲನಕ್ಕೆ.

– 'ವಿ.ಸೀ.–75' ಸಂಭಾವನಾ ಗ್ರಂಥದ ಪ್ರಕಟಣೆ.

1976 – ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟೊರೇಟ್ ಪದವಿ ಪ್ರದಾನ.

1978 – ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ : 'ಕೃಷ್ಣಚಾರಿತ್ರ' ಕೃತಿಗೆ – ಮಾನವಿಕ ಶಾಸ್ತ್ರ ವಿಭಾಗದಲ್ಲಿ.

# ಅನುಬಂಧ-2

## ವಿ. ಸೀ. ಕೃತಿಗಳು

### (ಅ) ಕವನ ಸಂಗ್ರಹಗಳು

ಗೀತಗಳು (1931); ದೀಪಗಳು (1933); ನೆಳಲು–ಬೆಳಕು (1935); ದ್ರಾಕ್ಷಿ–ದಾಳಿಂಬೆ (1948); ಹೆಜ್ಜೆಪಾಡು (1958); ಕದಂಬ (ಆಯ್ದ ಕವಿತೆ) (1970); ಅರಲು–ಬರಲು (1972); ಹಗಲು–ಇರುಳು (1981).

### (ಆ) ಗದ್ಯ ಕೃತಿಗಳು

ಪಂಪಾಯಾತ್ರೆ (1927); ಸೊಹ್ರಾಬ್–ರುಸ್ತುಂ (1930); ಆಗ್ರಹ (1931); ಹಣಪ್ರಪಂಚ (1937); ಕರ್ನಾಟಕ ಕಾದಂಬರಿ (1940); ಅಭಿಜ್ಞಾನ ಶಾಕುಂತಲ ನಾಟಕ ವಿಮರ್ಶೆ (1943); ಅಶ್ವತ್ಥಾಮನ್ (1946); ಭಾರತದ ರಾಜ್ಯಾಂಗ ರಚನೆ (1947); ವ್ಯವಹಾರ ಧರ್ಮ (1949); ಭಾರತದ ಐವರು ಮಾನ್ಯರು (1951); ಕವಿ ಕಾವ್ಯ ದೃಷ್ಟಿ (1955); ಶಿವರಾಮ ಕಾರಂತರು (1956); ಬೆಳುದಿಂಗಳು (1959); ಶ್ರೀ ಶೈಲಶಿಖರ (1960); ಸಾಹಿತ್ಯ ವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ (1961); ಭಾರತದಲ್ಲಿ ಯೋಜನೆ (1962); ಸಾಹಿತ್ಯ: ಸಂಪ್ರದಾಯ ಮತ್ತು ಹೊಸ ಮಾರ್ಗ (1967); ಸೀಕರಣೆ (1970); ಚ್ಯವನ (1970); ಮಹನೀಯರು (1970); ಕಾಲೆಜ್ ದಿನಗಳು (1971); ಎರಡು ನಾಟಕಗಳು: ಆಗ್ರಹ ಮತ್ತು ಚ್ಯವನ (1971); ಸತ್ಯ ಮತ್ತು ಮೌಲ್ಯ (1972); ವಾಲ್ಮೀಕಿ ರಾಮಾಯಣ (1976); ಕಲಾನುಭವ (1976); ಒಳ್ಳೆಯ ಮನುಷ್ಯ, ಒಳ್ಳೆಯ ಬದುಕು (1976); ಮುಂಬಯಿವಾಸ : ನೆನಪುಗಳು (1976); ಮಹಾಕವಿ ಪಂಪ (1976); ಮಹಾಭಾರತದ ಕೃಷ್ಣಚಾರಿತ್ರ (1978); ಪಟ್ಟಬಂಧ (1979); ಸಾಹಿತ್ಯಾಲೋಕನ (1979); ಸಾರ್ವಜನಿಕ ಜೀವನದಲ್ಲಿ ಅಧಿಕಾರ, ಶಕ್ತಿ, ಪ್ರಭಾವ ಮಂಡಲಗಳು (1979); ಹಿರಿಯರು–ಗೆಳೆಯರು (1980); ಸಂವಿಧಾನ ಮತ್ತು ಕಾನೂನು (1992); ಸಾಹಿತ್ಯಾಲೋಕನ, ಭಾಗ II–III (ಅಪ್ರಕಟಿತ).

### (ಇ) ಇಂಗ್ಲಿಷಲ್ಲಿ

ಮಹಾಕವಿ ಪಂಪ (1967); ಕೆ. ವೆಂಕಟಪ್ಪ (1968); ಪುರಂದರದಾಸ (1971); ಎಂ. ವಿಶ್ವೇಶ್ವರಯ್ಯ (1971); ವಾಲ್ಮೀಕಿ ರಾಮಾಯಣ (1972); ಡಿ. ವಿ. ಗುಂಡಪ್ಪ (1972); ಪಂಜೆ ಮಂಗೇಶರಾವ್ (1978); ಅಭಿಜ್ಞಾನ ಶಾಕುಂತಲ ನಾಟಕ ವಿಮರ್ಶೆ; ಮಹಾಭಾರತದ ಕೃಷ್ಣಚಾರಿತ್ರ; ಭಾರತದ ಐವರು ಮಾನ್ಯರು (ಮೂರೂ ಅಪ್ರಕಟಿತ).

## (ಈ) ಅನುವಾದಿತ

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ: ಕ್ರಿಯಾಸ್ವರೂಪ ಮತ್ತು ಕಾರ್ಯಕಲಾಪಗಳು (1959); ಭಾರತ ಸ್ವಾತಂತ್ರ್ಯ ಗಳಿಸಿತು (1963); ಪಿಗ್‌ಮೇಲಿಯನ್ (1963); ಬಂಗಾಳಿ ಸಾಹಿತ್ಯ ಚರಿತ್ರೆ (1966); ಮೇಜರ್ ಬಾರ್ಬರ (1968); ತ್ಯಾಗರಾಜ (1969); ಪುರಂದರದಾಸ (1979); ಮೋಬಿ ಡಿಕ್ (1982); ಪಂಜೆ ಮಂಗೇಶರಾವ್ (1985); ಮಿಷನ್ ವಿತ್ ಮೌಂಟ್‌ಬ್ಯಾಟನ್ (ಅಪ್ರಕಟಿತ).

## (ಉ) ಇನ್ನಿತರ

ಇತರ ಅನೇಕ ಬಿಡಿ ಲೇಖನ, ಅವಲೋಕನ – ಇಂಗ್ಲಿಷ್, ಕನ್ನಡ ನಿಯತಕಾಲಿಕೆಗಳಲ್ಲಿ; ಪ್ರಸಾರ ಭಾಷಣಗಳು–ಇಂಗ್ಲಿಷಲ್ಲಿ, ಕನ್ನಡದಲ್ಲಿ; 'ಪ್ರಜಾಮತ'ದಲ್ಲಿ 'ಲೋಕಸಮೀಕ್ಷೆ' ಅಂಕಣಲೇಖನಗಳು (1960–61); ಚಿಂತನ, ನೆನಪು, ಲಘುಪ್ರಬಂಧ ಇತ್ಯಾದಿ.

## ವಿ. ಸೀ. ಕುರಿತು ಕೃತಿಗಳು


1. "ರೂಪಾರಾಧಕ" (ವಿ.ಸೀ. ಮತ್ತು ಅವರ ಕೃತಿ ಪರಿಚಯ) ಸಂ. ಡಾ. ಹಾ. ಮಾ. ನಾಯಕ; ಪ್ರ: ಉಷಾ ಸಾಹಿತ್ಯ ಮಾಲೆ, ಮೈಸೂರು, 1953.
2. "ವಿ.ಸೀ." (ಕವಿ ಕಾವ್ಯ ಪರಿಚಯ) ಸಂ. ಎಸ್. ಅನಂತನಾರಾಯಣ, ಪ. ವಿ. ಚಂದ್ರಶೇಖರ; ಪ್ರ: ಗೆಳೆಯರ ಬಳಗ, ದಾವಣಗೆರೆ–ಅರಸೀಕೆರೆ, 1953.
3. "ವಿ.ಸೀ. ಎಪ್ಪತ್ತೊಂದು" ಸಂ. ಜಿ. ಯು. ಭಟ್, ಜಿ. ಎಸ್. ಅವಧಾನಿ, ಪ್ರ: ಸಾಧನ ಪ್ರಕಾಶನ, ಹೊನ್ನಾವರ (ಉ.ಕ.) 1969.
4. "ವಿ.ಸೀ." ಲೇ: ಕೆ. ಎಸ್. ನರಸಿಂಹಸ್ವಾಮಿ; ಪ್ರ: ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜ್, ಉಡುಪಿ, 1970.
5. "ವಿ.ಸೀ. ೭೫" (ಸಂಭಾವನಾ ಗ್ರಂಥ) ಸಂ: ವಿ. ಎಂ. ಇನಾಂದಾರ್; ವಿ.ಸೀ. ಸತ್ಕಾರ ಸಮಿತಿಗಾಗಿ ಪ್ರ: ಐಬಿಎಚ್ ಪ್ರಕಾಶನ, ಗಾಂಧೀನಗರ, ಬೆಂಗಳೂರು, 1974.
6. "ವಿ. ಸೀತಾರಾಮಯ್ಯ" ('ವಿ.ಸೀ.');ಬದುಕು, ಬರಹ, ವ್ಯಕ್ತಿತ್ವ ಲೇ: 'ಸುಮನಾ'; ಪ್ರ: ಐಬಿಎಚ್ ಪ್ರಕಾಶನ, ಗಾಂಧೀನಗರ, ಬೆಂಗಳೂರು, 1985. ಮರುಮುದ್ರಣ, 'ವಿ.ಸೀ. ಸಂಪದ'ದಿಂದ, 2000.
7. "ಸಾರ್ಥಕ ಬದುಕು" (ವಿ.ಸೀ. ಜೀವನ, ಸಾಹಿತ್ಯ ಮತ್ತು ಸಾಧನೆ); ಲೇ : ಡಾ. ಬಿ. ಪಿ. ರಾಧಾಕೃಷ್ಣ ಪ್ರ: ವಿ.ಸೀ. ಸಂಪದ, ಬೆಂಗಳೂರು–85, 1997.
8. "ವಿ.ಸೀ. ನೂರರ ನೆನಪು" ಜನ್ಮಶತಾಬ್ದಿ ಸ್ಮರಣ ಸಂಪುಟ, ಸಂ: ಪ್ರೊ. ಎಲ್. ಎಸ್. ಶೇಷಗಿರಿ ರಾವ್, ಎಂ. ವಿ. ವೆಂಕಟೇಶಮೂರ್ತಿ, ಪ್ರ: ವಿ. ಸೀ. ಸಂಪದ, ಬೆಂಗಳೂರು–85, 1999.

## ವಿ. ಸೀ. ಸಮಗ್ರ ಸಾಹಿತ್ಯ ಸಂಪುಟಗಳು
## ('ಸಂಪದ'ದ ಪ್ರಕಟಣೆಗಳು)

1. "ಸ್ನೇಹ–ವಿಶ್ವಾಸ" (1990) ಸಮಗ್ರ ಕಾವ್ಯ ಸಂಪುಟ (ಅರವತ್ತು ಅಪ್ರಕಟಿತ ಕವನಗಳೂ ಸೇರಿವೆ) ಡೆಮಿ 704 ಪುಟ, ಪ್ರೊ. ಎಲ್. ಎಸ್. ಶೇಷಗಿರಿ ರಾವ್ ಅವರ ಪ್ರಸ್ತಾವನೆಯೊಡನೆ. ಬೆಲೆ : ಸಾಧಾರಣ ಪ್ರತಿ : ರೂ. 85/– ಅರೆಕ್ಯಾಲಿಕೊ (ಮ್ಯಾಪ್‌ಲಿಥೋ ಕಾಗದ) ಪ್ರತಿ : ರೂ. 120/–

2. "ಸಮಗ್ರ ಲಲಿತ ಪ್ರಬಂಧ ಸಂಪುಟ" (1992) ಡೆಮಿ 375 ಪುಟ, ಪ್ರೊ. ಕೀರ್ತಿನಾಥ ಕುರ್ತಕೋಟಿ ಅವರ ವಿಶೇಷ ಪ್ರಸ್ತಾವನೆಯೊಡನೆ. ಬೆಲೆ : ರೂ. 80/–

3. "ಸಮಗ್ರ ನಾಟಕ" (1993) ಡೆಮಿ 576 ಪುಟ, ಡಾ. ಎಚ್. ಕೆ. ರಂಗನಾಥ್ ಅವರ ಪ್ರಸ್ತಾವನೆಯೊಡನೆ. ಬೆಲೆ : ಸಾಧಾರಣ ಪ್ರತಿ : ರೂ. 85/– ಅರೆಕ್ಯಾಲಿಕೊ ಪ್ರತಿ: ರೂ. 120/–

4. "ವ್ಯಕ್ತಿ ಚಿತ್ರ ಸಂಪುಟ" ಭಾಗ I ಮತ್ತು II (1993) ಡೆಮಿ 424 ಮತ್ತು 348 ಪುಟಗಳು (50 ಛಾಯಾ ಚಿತ್ರಗಳೂ ಸೇರಿ) ವಿದ್ಯಾಲಂಕಾರ ಪ್ರೊ. ಎಸ್. ಕೆ. ರಾಮಚಂದ್ರರಾವ್ ಅವರ ಪ್ರಸ್ತಾವನೆಯೊಡನೆ. ಬೆಲೆ : ರೂ. 125/– ಮತ್ತು ರೂ. 110/–

5. "ಸ್ಮೃತಿಚಿತ್ರ ಸಂಪುಟ" (1997) ಡೆಮಿ 437 ಪುಟ, (5 ಛಾಯಾ ಚಿತ್ರಗಳೂ ಸೇರಿ) ಪ್ರೊ. ಜಿ. ವೆಂಕಟಸುಬ್ಬಯ್ಯ ಅವರ ಪ್ರಸ್ತಾವನೆ ಮತ್ತು ಡಾ. ಪಿ. ವಿ. ನಾರಾಯಣ ಅವರ ಮುನ್ನುಡಿಯೊಡನೆ, ಬೆಲೆ : ರೂ. 140/–

6. "ವಿಮರ್ಶೆ ಸಂಪುಟ : ೧, ಇತಿಹಾಸ ಕಾವ್ಯ" (1998) ಡೆಮಿ 480 ಪುಟ, ವಿದ್ವಾನ್ ಎನ್. ರಂಗನಾಥ ಶರ್ಮಾ ಅವರ ಉಪೋದ್ಘಾತದೊಡನೆ ಬೆಲೆ: ರೂ. 160/–

7. "ವಿಮರ್ಶೆ ಸಂಪುಟ : ೨, ಕಾವ್ಯ, ನಾಟಕ" (2000) ಡೆಮಿ 640 ಪುಟ, ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ ಅವರ ಪ್ರಸ್ತಾವನೆ ಮತ್ತು ಡಾ. ಎನ್. ಎಸ್. ತಾರಾನಾಥ ಅವರ ಮುನ್ನುಡಿಯೊಡನೆ; ಬೆಲೆ: ರೂ. 200/–

8. "ವಿಮರ್ಶೆ ಸಂಪುಟ : ೩, ಕವಿ ಕಾವ್ಯ ಪರಂಪರೆ" (2003) ಡೆಮಿ 626 ಪುಟ; ಡಾ. ಜಿ. ಎಸ್. ಶಿವರುದ್ರಪ್ಪ ಅವರ ಮುನ್ನುಡಿಯೊಡನೆ, ಬೆಲೆ: ರೂ. 200/– (ಪ್ರತಿಗಳು ತೀರಿವೆ)

9. "ವಿಮರ್ಶೆ ಸಂಪುಟ : ೪, ಸಾಹಿತ್ಯಾಲೋಕನ" (2003) ಡೆಮಿ 560 ಪುಟ; ಪ್ರೊ. ಎಂ.ಎಚ್. ಕೃಷ್ಣಯ್ಯ ಅವರ ಅವಲೋಕನದೊಂದಿಗೆ, ಬೆಲೆ: ರೂ.200/– (ಪ್ರತಿಗಳು ತೀರಿವೆ)

10. "ವಿಮರ್ಶೆ ಸಂಪುಟ : ೫, ಸಾಹಿತ್ಯತತ್ತ್ವ–ಕಲಾಮೀಮಾಂಸೆ" (2004) ಡೆಮಿ 474 ಪುಟ; ಡಾ. ಜಿ. ಎಸ್. ಆಮೂರ ಅವರ ಪ್ರಸ್ತಾವನೆ, ಬೆಲೆ: ರೂ.180